CC-O. In Public Domain. Digitized by eGangotri

ಗುರುದೇವ ಶ್ರೀ ವಿದ್ಯಾತೀರ್ಥ

ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಲೇಖಕರ ಇತರ ಕೃತಿಗಳು

ಕಾವ್ಯ :

ಪೂರ್ವರಾಗ

ಜೀವನಚರಿತ್ರೆ :

ಮಹಾತಪಸ್ವಿ ಶ್ರೀ ಚಂದ್ರಶೇಖರಭಾರತೀ
ಸಂತ ಶ್ರೀ ರಾಮಾನುಜ
ಸ್ವಾಮಿ ಶ್ರೀ ರಾಮತೀರ್ಥ
ಶ್ರೀ ಸಚ್ಚಿದಾನಂದಭಾರತೀ
ಅಳಸಿಂಗ ಪೆರುಮಾಳ್
ತುಂಗೆಯ ಮ[illegible]ತಪಸ್ವಿ
ಧರ್ಮದ್ರಷ್ಟಾರ ಶ್ರೀ ದಯಾನಂದಸರಸ್ವತಿ
ರಾಜಯೋಗಿ ಶ್ರೀ ನರಸಿಂಹಭಾರತೀ

ಮಕ್ಕಳ ಸಾಹಿತ್ಯ :

ಶ್ರೀ ಚಂದ್ರಶೇಖರ ಭಾರತೀ
ಶ್ರೀ ನರಸಿಂಹ ಭಾರತೀ
ಅಳಸಿಂಗ ಪೆರುಮಾಳ್
ಪುಣ್ಯಕ್ಷೇತ್ರ ಶೃಂಗೇರಿ

ಅನುವಾದ :

ಸಂಭಾಷಣ ತರಂಗಿಣಿ
ಉಪದೇಶ ಮಂಜರಿ
ಕಂಚಿ ಕಾಮಾಕ್ಷಿ

ಸಂಪಾದಿತ :

ಶ್ರೀ ಜಗದ್ಗುರು (ಶ್ರೀ ತ. ರಾ. ಸು. ರವರೊಡನೆ)

ಬರಲಿವೆ :

ಶ್ರೀ ಬ್ರಹ್ಮ ಚೈತನ್ಯ
ಹುತಾತ್ಮ ಶ್ರೀ ಶ್ರದ್ಧಾನಂದ
ಅನುಗ್ರಹ ಪರಂಪರೆ
ಸತ್ಯಂವದ ಧರ್ಮಂಚರ
ಶ್ರೀ ವಿದ್ಯಾಶಂಕರ ತೀರ್ಥ
ಶ್ರೀ ಚಂದ್ರಮೌಳೀಶ್ವರ, ಶೃಂಗೇರೀ
ಬಹುರತ್ನಾ ವಸುಂಧರಾ
ತೀರ್ಥಭಾರತೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುದೇವ ಶ್ರೀ ವಿದ್ಯಾತೀರ್ಥ

ಶೃಂಗೇರೀ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ
ಜೀವನ, ಸಾಧನೆ, ಉಪದೇಶ

ಹುರುಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ

ವಿದ್ಯಾಶಂಕರ ಪ್ರಕಾಶನ
ಮೈಸೂರು - ೪

Sri Vidyabharathi Book Centre, Sringeri

CC-O. In Public Domain. Digitized by eGangotri

GURUDEVA SHRI VIDYATHIRTHA - Kannada
Biography by: Shri L. N. Sastry
Published by: Vidya Shankara Prakashana
No. 30, Devirammanni Agrahar, Mysore - 4

Copy Right: Smt. Lakshmi Narasu
10-11-1977
Price : Rs. 10/-

Printed by :
M/s. Shri Sharada Mudrana Prakashanalaya (P.) Ltd.,
Shankar Mutt, Mysore - 4

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲ ಮಾತು

ನನ್ನ ಆತ್ಮೀಯ ಮಿತ್ರರೂ, ಅದಕ್ಕಿಂತ ಹೆಚ್ಚಾಗಿ ಭ್ರಾತೃಸಮಾನರೂ ಆದ ಶ್ರೀ ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರು, ತಾವು ಶೃಂಗೇರಿ ಶಾರದಾಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಷಷ್ಟ್ಯಬ್ಧಿ ಪೂರ್ತಿ ಮಹಾಸಮಾರಂಭದ ಶುಭ ಸಮಯದಲ್ಲಿ, ತಮ್ಮ ಗುರುಕಾಣಿಕೆಯಾಗಿ ರಚಿಸಿರುವ "ಗುರುದೇವ ಶ್ರೀ ವಿದ್ಯಾತೀರ್ಥ" ಎನ್ನುವ ಜೀವನ ಚರಿತ್ರೆಗೆ ನಾನು ಮುನ್ನುಡಿಯಾಗಿ ಕೆಲವು ಮಾತುಗಳನ್ನು ಬರೆಯಬೇಕು ಎಂದು ಅ[illegible]ಸಿ ಬಹು ಗುರುತರವಾದ ಹೊಣೆಗಾರಿಕೆಯನ್ನು ನನ್ನ ಮೇಲೆ ಹೊರಿಸಿದ್ದಾರೆ. ಇ[illegible] ಗ್ರಂಥಕ್ಕೆ ಮುನ್ನುಡಿ ಬರೆಯುವ ಅಧಿಕಾರ ನನಗಿಲ್ಲವಾದರೂ ಶೃಂಗೇರಿಯ ಶ್ರೀ ಜಗದ್ಗುರುಗಳ ಚರಣಕಮಲಗಳಲ್ಲಿ ನನಗಿರುವ ಅನನ್ಯ ಭಕ್ತಿ ಮತ್ತು ಶ್ರೀ ಶಾಸ್ತ್ರಿಗಳಲ್ಲಿ ನನಗಿರುವ ಭ್ರಾತೃವಾತ್ಸಲ್ಯ ಈ ಸಾಹಸ ಕಾರ್ಯಕ್ಕೆ ನನ್ನನ್ನು ಕಟ್ಟಿ ಹಾಕಿದೆ.

ಸಾಹಿತ್ಯ ರಚನೆ-ಕಥೆ, ಕಾದಂಬರಿ, ಕವಿತೆ, ಪ್ರಬಂಧ, ಜೀವನ ಚರಿತ್ರೆ ಈ ಯಾವುದೇ ಪ್ರಾಕಾರವಾದರೂ ಅತ್ಯಂತ ಕಷ್ಟವಾದ ಕೆಲಸ. ಅದರಲ್ಲಿಯೂ ಸಾಹಿತ್ಯದ ಉಳಿದ ಪ್ರಾಕಾರಗಳಿಗಿಂತ ಜೀವನ ಚರಿತ್ರೆಯನ್ನು ಬರೆಯುವುದು ಅತ್ಯಂತ ಶ್ರಮಸಾಧ್ಯವಾದ ಕೆಲಸ. ಸಾಹಿತ್ಯ ರಚನೆಗೆ ಅದಕ್ಕೇ ವಿಶಿಷ್ಟವಾದ ಹಲವು ನಿಬಂಧನೆಗಳಿದ್ದರೂ, ಕರ್ತೃವಿನ ಪ್ರತಿಭಾಶಕ್ತಿಯೇ ಮೂಲ ಬಂಡವಾಳವಾಗಿರುವುದರಿಂದ ಲೇಖಕನಿಗೆ ತನ್ನ ಕಲ್ಪನಾ ವಿಲಾಸವನ್ನು ಅದು ಓಡುವ ದಾರಿಯಲ್ಲಿ ಹರಿಯಬಿಡಲು ಸಾಕಷ್ಟು ಸ್ವಾತಂತ್ರ್ಯವಿರುತ್ತದೆ. ಆದರೆ ಜೀವನ ಚರಿತ್ರೆಯ ರಚನೆಗೆ ಎಲ್ಲಕ್ಕಿಂತ ಬಿಗಿಯಾದ ಕಟ್ಟು ಪಾಡುಗಳಿವೆ. ಲೇಖಕನ ಪ್ರತಿಭೆ ಎಷ್ಟೇ ಪ್ರಭಾವಶಾಲಿಯಾಗಿದ್ದರೂ ಅದು ವಸ್ತುವಿನ ಚೌಕಟ್ಟಿನ ಪರಿಮಿತಿಯೊಳಗೇ ವಸ್ತುನಿಷ್ಠವಾಗಿ, ಪ್ರಾಮಾಣಿಕವಾಗಿ, ಸತ್ಯಕ್ಕೆ ಅಪೋಹ ಬರದಂತೆ, ಕೇವಲ ಚಾರಿತ್ರಿಕಾಂಶಗಳ ನೀರಸ ಪಟ್ಟಿಯಾಗುವುದನ್ನು ತನ್ನ ಪ್ರತಿಭಾ ವಿಲಾಸದಿಂದ ಸಾಹಿತ್ಯ ಕೃತಿಯನ್ನಾಗಿ ಪರಿವರ್ತಿಸುವುದು ಅತ್ಯಂತ ಪ್ರಯಾಸದ ಕೆಲಸ. ಇದು ಒಂದು ರೀತಿಯಲ್ಲಿ ಕೈಕಾಲುಗಳಿಗೆ ಸರಪಳಿ ಹಾಕಿಕೊಂಡು ಕುಸ್ತಿ ಅಖಾಡಕ್ಕೆ ಇಳಿದ ಹಾಗೆ. ಈ ಕಾರ್ಯದಲ್ಲಿ ಯಶಸ್ಸು ದೊರಕುವುದು ಬಹು ಕಷ್ಟ. ಯಾರೇ ಆಗಲಿ ಬೇರೊಬ್ಬರ ಜೀವನ ಚರಿತ್ರೆಯನ್ನು ಬರೆಯುವಾಗ ತನ್ನ ಕೃತಿಗೆ ಆಧಾರವಾದ ವ್ಯಕ್ತಿಯ ಬಗ್ಗೆ ಆಳವಾದ ಗೌರವ, ಪ್ರೇಮ, ಸಜೀವ ಶ್ರದ್ಧೆ-ಇವೇ ಮೂಲ ಪ್ರೇರೇಪಣಾ ವಸ್ತುಗಳಾಗಿರುತ್ತವೆ. ಆ ಭಾವನೆ ಇಲ್ಲದಿದ್ದಲ್ಲಿ ಯಾರೂ ಬೇರೆಯೊಬ್ಬರ ಜೀವನ ಚರಿತ್ರೆಯನ್ನು ಬರೆಯುವ ಕೆಲಸಕ್ಕೆ ಕೈ ಹಾಕುವುದಿಲ್ಲ. ಮೂಲ ಪ್ರೇರಣೆಯೇ ಒಂದು ಬಗೆಯ ಆರಾಧನಾ ಭಾವವಾಗಿರುವಾಗ, ಶ್ರದ್ಧೆಯೇ ಸ್ಫೂರ್ತಿಯಾದಾಗ, ಆ ವ್ಯಕ್ತಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಗೆಗೆ ಅಷ್ಟೇ ಶ್ರದ್ಧಾ ಭಕ್ತಿಗಳಿಲ್ಲದ ಓದುಗರು, ಈ ಜಾತಿಯ ಗ್ರಂಥಗಳಲ್ಲಿ ದೋಷಗಳನ್ನು ಕಂಡು ಹಿಡಿಯುವುದು, ಲೇಖಕನ ಮೇಲೆ ಆರಾಧನಾಭಾವದ ಆರೋಪವನ್ನು ಹೊರಿಸುವುದು ಬಹು ಸುಲಭವಾಗುತ್ತದೆ. ಲೇಖಕ ಎಷ್ಟೇ ಪ್ರಾಮಾಣಿಕನಾಗಿದ್ದರೂ, ಆತನ ಬರವಣಿಗೆ ಎಷ್ಟೇ ವಸ್ತುನಿಷ್ಠವಾಗಿದ್ದರೂ, ಈ ಬಗೆಯ ಆರೋಪಗಳಿಗೆ ಹೊರತಾಗಿ ನಿಲ್ಲುವುದು ಬಹಳ ಕಷ್ಟ. ಇಂತಹ ಸಾಹಸಕ್ಕೆ ಕೈ ಹಾಕಿದವರು ಶ್ರದ್ಧಾವಂತರಿಂದ ಅತಿ ಮೆಚ್ಚುಗೆಗೋ ಅಥವಾ ಶ್ರದ್ಧೆಯಿಲ್ಲದವರಿಂದ ಕಟುಟೀಕೆಗೋ ಗುರಿಯಾಗುವುದು ತಪ್ಪಿದ್ದೇ ಅಲ್ಲ; ಅದು ಕಟ್ಟಿಟ್ಟ ಬುತ್ತಿ. ಆದ್ದರಿಂದಲೇ ಜೀವನಚರಿತ್ರೆಯನ್ನು ಬರೆಯುವುದು ಕತ್ತಿಯ ಅಲುಗಿನ ಮೇಲೆ ಸಾಮು ಮಾಡುವಷ್ಟು ಶ್ರಮಸಾಧ್ಯವೂ, ಅಪಾಯಕಾರಿಯೂ ಆದ ಕೆಲಸ.

ಇನ್ನು ಪ್ರಕೃತ ಗಂಥದ ಬಗ್ಗೆಯೇ ಹೇಳುವುದಾದರೆ ಸಮಸ್ಯೆ ಮತ್ತಷ್ಟು ಜಟಿಲವಾದದ್ದು. ಶ್ರೀ ಶಾಸ್ತ್ರಿಗಳು ತಮ್ಮ ಕೃತಿಗೆ ವಸ್ತುವನ್ನಾಗಿ ಆಯ್ದು ಕೊಂಡಿರುವುದು, ನಡೆದಾಡುವ, ನುಡಿಯಾಡುವ ಭಗವಂತನೇ ಎಂದು ತಾವು ನಂಬಿರುವ ಶೃಂಗೇರಿಯ ಜಗದ್ಗುರುಗಳವರ ಜೀವನದ ವಿಷಯ. ಇಂತಹ "ಮಹಾಜೀವ"ದ ಬಗ್ಗೆ ಭಕ್ತಿ ಭಾವದಿಂದ ಪ್ರಚೋದಿತರಾದ ಲೇಖಕರು ಟೀಕೆಗೆ ಸವಾಲನ್ನು ಹಾಕಿದಂತೆಯೇ; ಇಂದಿನ ಪರಿಸ್ಥಿತಿಯಲ್ಲಿ ಅದು ಅನಿವಾರ್ಯ. ಈ ಮಾತನ್ನು ನಾನು ಉದ್ದೇಶ ಪೂರ್ವಕವಾಗಿ ಹೇಳುತ್ತಿದ್ದೇನೆ.

ಒಂದು ಕಾಲಕ್ಕೆ ಧರ್ಮ, ಶ್ರದ್ಧೆಗಳೇ ಜೀವನದ ಭದ್ರಬುನಾದಿ ಎಂದು ನಂಬಿ, ಭಗವಂತನ ಇರುವಿಕೆಯಲ್ಲಿ ಅಚಲ ವಿಶ್ವಾಸವನ್ನಿರಿಸಿಕೊಂಡಿದ್ದ ಭಾರತದಲ್ಲಿ ಈಗ ಪರಿಸ್ಥಿತಿ ವಿಚಿತ್ರವಾಗಿ ಬದಲಾಗಿದೆ. ಆಧುನಿಕತೆಗೆ ಶರಣುಹೋದ ನಮ್ಮ ಜನ ಪಾಶ್ಚಾತ್ಯ ವಿಜ್ಞಾನಗಳಿಗೆ ಪ್ರಥಮ ಪ್ರಾಶಸ್ತ್ಯವನ್ನಿತ್ತು, ಭಾರತದ ಆರ್ಷೇಯ ಭಾವನೆಗಳೆಲ್ಲ ಅಂಧ ಶ್ರದ್ಧೆ ಎಂದು, ಅದನ್ನು ನಮ್ಮ ದೇಶದಲ್ಲಿ ಇರಬಾರದ ಕಸ ಎನ್ನುವ ತಾತ್ಸಾರ ದೃಷ್ಟಿಯಿಂದ ನೋಡಲಾರಂಭಿಸಿದ್ದಾರೆ. ವಿಚಾರವಾದಿಗಳು ಎನಿಸಿಕೊಂಡವರೂ ಇಂತಹ ಭಾವನೆಗಳು, ಆಸ್ತಿಕತೆ, ಆದರಿಂದ ಕಾ[illegible]ಸೇಣ ಬೆಳೆದು ಬಂದ ಸಂಪ್ರದಾಯಗಳು ಇವುಗಳ ವಿರುದ್ಧ ಪ್ರಚಂಡ ಧಾಳಿಯನ್ನೇ ಆರಂಭಿಸಿದ್ದಾರೆ. ಇವುಗಳನ್ನು ಮೂಲೋತ್ಪಾಟನ ಮಾಡದೆ ಭಾರತಕ್ಕೆ ಮುಕ್ತಿಯಿಲ್ಲ ಎಂದೇ ಹಟ ತೊಟ್ಟಿದ್ದಾರೆ. ಇಂಗ್ಲೀಷಿನಲ್ಲಿ ಹೇಳಿಕೆ ಒಂದುಂಟು. ಒಂದು ಮತಕ್ಕೆ ಹೊಸದಾಗಿ ಪರಿವರ್ತಿತನಾದವನು ಆ ಮತದಲ್ಲೇ ಹುಟ್ಟಿ ಬೆಳೆದವನಿಗಿಂತಲೂ ಕಟ್ಟಾ ಮತಾಂಧನಾಗುತ್ತಾನೆ, "More Loyal than the King himself". ಈ ಮಾತು ಆಧುನಿಕ ವೈಜ್ಞಾನಿಕ ವಿಚಾರವಾದಿಗಳು ಎನಿಸಿಕೊಂಡ ಭಾರತೀಯರ ಬಗ್ಗೆ ರೂಪಾಯಿಗೆ ನೂರು ಪೈಸೆಯಷ್ಟು ಒಪ್ಪುತ್ತದೆ. ಯಾವುದೇ ವಿಷಯವನ್ನಾಗಲಿ ತರ್ಕದ ನಿಕಷಕ್ಕೆ ಒರೆಯಿಟ್ಟು ನೋಡದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಧರಾಗಿ ನಂಬಬೇಕು ಎನ್ನುವುದರಲ್ಲಿ ನನಗೆ ಖಂಡಿತವಾಗಿಯೂ ನಂಬಿಕೆಯಿಲ್ಲ. ಸತ್ಯವು ಖಂಡಿತವಾಗಿಯೂ ತರ್ಕಾತೀತವಾದುದಲ್ಲ. ಆದರೆ ಯಾವುದೇ ಒಂದು ವಿಷಯದ ಬಗ್ಗೆ ತರ್ಕದ ಪ್ರಮಾಣವನ್ನು ಅಪೇಕ್ಷಿಸುವಾಗ ಆ ವಸ್ತುವಿನ ಬಗ್ಗೆ ಕೂಲಂಕಷವಾದ ಜ್ಞಾನ ಎಷ್ಟು ಅಗತ್ಯವೋ ಅಷ್ಟೇ ಮಟ್ಟಿಗೆ ತರ್ಕದ ಇತಿಮಿತಿಗಳ ಬಗ್ಗೆಯೂ ಎಚ್ಚರಿಕೆಯಿರಬೇಕಾದುದು ಇನ್ನೂ ಹೆಚ್ಚಿನ ಅಗತ್ಯ. ಯಾವುದೋ ಒಂದು ತರ್ಕಾತೀತವಾದ ನಂಬಿಕೆಯಿಂದ ಆರಂಭವಾಗದೆ ಯಾವುದೇ ಸಂಶೋಧನೆಯನ್ನು ಮಾಡುವುದು, ಅದರಲ್ಲಿ ಪ್ರಗತಿಯನ್ನು ಸಾಧಿಸುವುದು ಸಾಧ್ಯವಲ್ಲದ ವಿಷಯ. ಅಣು ಎನ್ನುವ ವಸ್ತು ಇದೆ ಎನ್ನುವ ನಂಬಿಕೆ ನಮಗಿರದಿದ್ದರೆ ಅಣು ವಿಜ್ಞಾನದ ಸಂಶೋಧನೆ ಹೇಗೆ ತಾನೆ ಸಾಧ್ಯ? ಯಾವುದೋ ಒಂದು ರೋಗಕ್ಕೆ ಸ್ಥೂಲ ಚಕ್ಷುಸ್ಸಿಗೆ ಗೋಚರವಾಗದ, ತಕ್ಕಡಿ ತೂಕಕ್ಕೆ ಸಿಕ್ಕದ, ಎಷ್ಟೋ ವೇಳೆ ಸೂಕ್ಷ್ಮದರ್ಶಕ ಯಂತ್ರದ ನೋಟಕ್ಕೂ ಕಾಣದ ರೋಗಾಣು ವೊಂದು ಕಾರಣವಾಗಿರಬೇಕು ಎಂಬ ಭಾವನೆಯಿಲ್ಲದಿದ್ದರೆ ಇಂದಿನ ವೈದ್ಯ ವಿಜ್ಞಾನದ ಮುನ್ನಡೆ ಖಂಡಿತವಾಗಿಯೂ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಇಂದು ನಾವು ವೈಜ್ಞಾನಿಕ ಸತ್ಯ ಎಂದು ನಂಬಿರುವುದು ಮೂಲಭೂತವಾಗಿ ಇಂತಹ ಒಂದು ತರ್ಕಾತೀತವಾದ ನಂಬಿಕೆಯ ಸ್ಫೂರ್ತಿಯಿಂದಲೇ ಮೂಡಿದ್ದು ಎಂದು ಆಧುನಿಕ ವಿಜ್ಞಾನಿಗಳೇ ಒಪ್ಪಿಕೊಂಡಿದ್ದಾರೆ. ಆದರೆ ಭಾರತೀಯರ ಪ್ರಾಚೀನ ಭಾವನೆಗಳನ್ನು ಅಂಧ ಶ್ರದ್ಧೆ ಎಂದು ಹಳಿಯುವ ವಿಚಾರವಾದಿಗಳು ಈ ಮೂಲಭೂತವಾದ ಸತ್ಯವನ್ನು ಮರೆತಿದ್ದಾರೆ ಎಂದೇ ನನಗೆ ತೋರುತ್ತದೆ. ಇಂತಹ ಹಲವು "ವಿಚಾರವಾದಿ" ಗಳೊಂದಿಗೆ ನಾನು ಯಾವ ಪೂರ್ವಗ್ರಹವೂ ಇಲ್ಲದೆ ಚರ್ಚೆಮಾಡಿದ್ದೇನೆ. ಅಂತಹವರು ಬಹುಮಂದಿಯಲ್ಲಿ ನಾನು ಕಂಡಿರುವುದು ಎರಡು ದೋಷ. ಮೊದಲನೆಯದಾಗಿ ಅವರು ಯಾವುದನ್ನು ಹಳಿಯುತ್ತಾರೋ ಆ ವಿಷಯದ ಬಗ್ಗೆ ಕೂಲಂಕಷವಾದ ಅಧ್ಯಯನ ಮಾಡಿಲ್ಲದೆ ಇರುವುದು; ಎರಡನೆಯದು ಯಾವ ವಿಜ್ಞಾನದ ಬಗೆಗೆ ಅವರು ಮಾತನಾಡುತ್ತಾರೋ ಆ ವಿಜ್ಞಾನದ ಬಗ್ಗೆಯೂ ಪೂರ್ಣ ಪರಿಣತಮತಿಗಳಾಗದೆ ಇರುವುದು. ಇಂದು ವಿಜ್ಞಾನದ ಹಲವಾರು ವಿಭಾಗಗಳಲ್ಲಿ ಸಂಶೋಧನೆಯ ಪರಮೋಚ್ಚ ಸ್ಥಿತಿಯನ್ನು ತಲುಪಿದ ಐನ್‌ಸ್ಟೈನ್, ಅಲೆಕ್ಸಿಸ್‌ಕ್ಯಾರೆಲ್, ನೀಲ್‌ಬೋರ್, ಯೂಂಗ್, ಡಾ॥ವಾಲ್ನರ್ ಮೊದಲಾದವರು ತಮ್ಮ ಮುಂದಿನ ಸಂಶೋಧನೆಗೆ ವೇದೋಪನಿಷತ್ತುಗಳಲ್ಲಿ, ತಂತ್ರಗಳಲ್ಲಿ ಜಾಡನ್ನು ಕಂಡುಕೊಳ್ಳಬೇಕು ಎನ್ನುವ ನಿಲುವನ್ನು ತಲುಪಿರುವಾಗ ಆ ಶಾಸ್ತ್ರಗಳ ಮಾತೃಭೂಮಿಯ ಮಕ್ಕಳಾದ ನಮ್ಮವರೇ ಅವೆಲ್ಲವೂ ಕೆಲಸಕ್ಕೆ ಬಾರದ ಕಸ ಎಂದು ಹಳಿಯುತ್ತಿರುವುದು ಎಂತಹ ದುರಂತ ವಿಪರ್ಯಾಸ? ಆದರೆ ವಿಪರ್ಯಾಸವೋ, ನಗೆಗೇಡೋ ಅಂತೂ ಆಧುನಿಕರೆನಿಸಿಕೊಂಡ ಭಾರತೀಯರಂತೂ ತಮ್ಮ ನೆಲವನ್ನೂ ತೊರೆದು ಮುಂದಿನ ಗುರಿಯನ್ನೂ ಸೇರದೆ ತ್ರಿಶಂಕುಗಳಾಗಿದ್ದಾರೆ. ಇಂತಹ ವಿಪರ್ಯಾಸ ಪರಿಸ್ಥಿತಿಯಲ್ಲಿ, ಸಂದಿಗ್ಧ ಸಮಯದಲ್ಲಿ ಶ್ರೀ ಶಾಸ್ತ್ರಿಗಳು ಶೃಂಗೇರಿಯ ಜಗದ್ಗುರುಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಗ್ಗೆ ಜೀವನ ಚರಿತ್ರೆಯನ್ನು ಬರೆದಿರುವುದು ಸಾಹಸದ ವಿಷಯವೇ. ಅವರ ಅಚಲ ಶ್ರದ್ಧೆ ನಿಜಕ್ಕೂ ಅಭಿನಂದನೀಯ.

ಇನ್ನು ಶೃಂಗೇರಿಯ ಜಗದ್ಗುರುಗಳ ಜೀವನವನ್ನು ವಸ್ತುವಾಗಿ ಆಯ್ದುಕೊಂಡಿರುವುದು ಮತ್ತಷ್ಟು ಸಾಹಸದ ಕೆಲಸ. ನನಗೆ ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಪರಿಚಯ ಹಲವಾರು ವರ್ಷಗಳಿಂದ ಆಗಿದೆ. ಅವರನ್ನು ಹತ್ತಿರದಿಂದ ಕಂಡಿದ್ದೇನೆ, ಅವರಿಗೆ ಆತ್ಮೀಯರಾದವರಲ್ಲಿ ನಾನೂ ಒಬ್ಬ ಎಂಬ ಮಾತನ್ನು, ಅದು ಉದ್ಧಟತನವಾದರೂ ಹೇಳಬಹುದು. ಶ್ರೀ ಶ್ರೀಗಳವರಿಗೆ ನನ್ನಲ್ಲಿ ಅತಿಶಯ ವಾತ್ಸಲ್ಯವಿದೆ. ಅವರನ್ನು [illegible]ಲ್ಲ ಪ್ರತಿಯೊಬ್ಬರೂ ಅವರ ಬಗ್ಗೆ ಈ ಮಾತನ್ನು ಹೇಳುತ್ತಾರೆ. ಆ ಮಹಾಚೇತನ[illegible]ಸಾವವೇ ಅಂತಹುದು. ಆ ತೇಜಸ್ಸಿನ ಪ್ರಚಂಡ ಆಕರ್ಷಕ ಶಕ್ತಿ, ಅಂದೇ ಕಂಡ ಅಪರಿಚಿತನನ್ನೂ ಆತ್ಮೀಯನನ್ನಾಗಿ ಮಾಡುತ್ತದೆ.- ಹಾಗೆಯೇ ಅವರ ದಿವ್ಯ ಸಾನ್ನಿಧ್ಯದಲ್ಲಿ ಹಲವಾರು ದಿನಗಳನ್ನು ನಾನು ಕಳೆದಿದ್ದೇನೆ, ಎಷ್ಟೋ ಬಾರಿ ಗಂಟೆಗಟ್ಟಲೆ ಅವರೊಂದಿಗೆ ಮಾತನಾಡಿದ್ದೇನೆ. ಆದರೆ ಆ ಚೇತನ ಸಾಗರದ ಆಳವನ್ನಾಗಲಿ, ವಿಸ್ತಾರವನ್ನಾಗಲಿ ಕಂಡು ಕೊಂಡಿದ್ದೇನೆ ಎಂದು ಹೇಳುವ ಸಾಹಸ ನನ್ನಲ್ಲಿಂದು ಉಳಿದಿಲ್ಲ. ಹತ್ತು ಬಾರಿ ಅವರನ್ನು ಕಂಡಾಗ ಅವರ ಬಗ್ಗೆ ಹತ್ತು ಬಗೆಯ ಹೊಸ ಭಾವನೆಯೇ ನನ್ನಲ್ಲಿ ಸ್ಫುರಿಸಿದೆ. ಒಂದು ರೀತಿಯಲ್ಲಿ ಶ್ರೀ ಶ್ರೀಗಳವರು ಶಿವಗಂಗೆಯ ಬೆಟ್ಟವಿದ್ದಂತೆ. ದೂರದಿಂದ ಸ್ಥೂಲವಾಗಿ ಬೃಹದ್ ಲಿಂಗಾಕಾರವಾಗಿ ಕಾಣುವ ಆ ಬೆಟ್ಟ ಒಂದು ದಿಕ್ಕಿನಿಂದ ನೋಡಿದಾಗ ಸರ್ಪಾಕಾರವಾಗಿ, ಮತ್ತೊಂದು ದಿಕ್ಕಿನಿಂದ ನೋಡಿದಾಗ ನಂದಿಯಂತೆ, ಬೇರೊಂದು ದಿಕ್ಕಿನಿಂದ ನೋಡಿದಾಗ ಗಣೇಶನಂತೆ ಕಾಣುತ್ತದೆ. ಬೆಟ್ಟದ ಆಕಾರ ಹೇಗೆ ಎಂದು ಹೇಳುವುದು ನೋಡುವವರು ಅದನ್ನು ಯಾವ ದಿಕ್ಕಿನಿಂದ ನೋಡಿದ್ದಾರೆ ಎನ್ನುವುದನ್ನೇ ಅವಲಂಬಿಸುತ್ತದೆ. ಆ ನಾಲ್ಕು ಬಗೆಯ ಮಾತುಗಳಲ್ಲಿ ಯಾವುದೂ ಸುಳ್ಳಲ್ಲ; ಯಾವುದೂ ಸತ್ಯವಲ್ಲ, ಪರಮ ಸತ್ಯವು ಎಲ್ಲರ ದೃಷ್ಟಿಗೂ ಅಗೋಚರವಾಗಿ ತಾನಿರುವ ನಿಜಸ್ಥಿತಿಯಲ್ಲಿ ಹೇಗಿದೆಯೋ ಹಾಗೆಯೇ ಇರುತ್ತದೆ. ಹಾಗೆಯೇ ಶೃಂಗೇರಿಯ ಜಗದ್ಗುರುಗಳು. ಕೆಲವರಿಗೆ ಅವರು ಕೇವಲ ಮಠಾಧಿಪತಿಯಂತೆ ಕಂಡಿದ್ದಾರೆ; ಕೆಲವ್ಯಕ್ತಿಗೆ ಪವಾಡ ಪುರುಷರಂತೆ ಕಂಡಿದ್ದಾರೆ; ಕೆಲವರಿಗೆ ಮಾತೃಸ್ವರೂಪವಾಗಿ ಕಂಡಿದ್ದಾರೆ; ಕೆಲವರಿಗೆ ವಿಧಿ ನಿಯಮದಂತೆ ನಿಯಮ ನಿಷ್ಠುರರಾಗಿ ಕಂಡಿದ್ದಾರೆ. ಹಲವರು ಅವರ ಮುಗುಳ್ನಗೆಯಲ್ಲಿ ಮಾತೃವಾತ್ಸಲ್ಯದ ಕ್ಷೀರಾಭಿಷೇಕದ ಆನಂದವನ್ನು ಅನುಭವಿಸಿದ್ದಾರೆ, ಮತ್ತು ಕೆಲವರು ದಂಡಧಾರಿಯಾಗಿ ದಾರಿ ತೋರುವ ಗುರುವಾಗಿ ಕಂಡಿದ್ದಾರೆ. ಶ್ರದ್ಧಾವಂತರಿಗಂತೂ ಅವರು ಸಾಕ್ಷಾತ್ ಜೀವಂತ ಶಂಕರಾಚಾರ್ಯರೇ, ಪ್ರತ್ಯಕ್ಷಪರಮೇಶ್ವರನೇ. ಹೀಗೆ ಅವರ ಬಹುಮುಖ ಚೇತನವನ್ನು ಬಹು ಬಗೆಯಲ್ಲಿ ಕಂಡು ಒಂದೊಂದು ರೀತಿಯಲ್ಲೂ ಪ್ರಭಾವಿತರಾದ ನೂರಾರು ಜನರನ್ನು ನಾನು ವೈಯಕ್ತಿಕವಾಗಿ ಬಲ್ಲೆ. ನನಗೂ ವೈಯಕ್ತಿಕವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಬಹು ಮುಖಗಳ ಅನುಭವ ಹಲವು ಬಾರಿ ಅವರನ್ನು ಕಂಡಾಗ ಆಗಿದೆ. ಹೀಗೆ ಸಹಸ್ರ ಮುಖಿಯಾಗಿ ಕಾಣುವ ದಿವ್ಯ ಚೇತಸ್ಸನ್ನು ಒಂದು ಜೀವನ ಚರಿತ್ರೆಯ ಪರಿಮಿತಿಯೊಳಗೆ ಅಡಕ ಮಾಡಿ ಇದು ಇಷ್ಟೇ ಎಂದು ಹೇಳುವುದು ಸಾಧ್ಯವೇ ? ಇಂತಹ ಮಹಾಚೇತನವನ್ನು ವಾರ, ತಿಥಿ, ನಕ್ಷತ್ರಗಳ ಗಣಿತದಿಂದ ಗುಣಿಸುವುದಾಗಲಿ, ಕೆಲವು ಘಟನೆಗಳ ಆಧಾರದ ಮೇಲೆ ಇದಮಿತ್ಥಂ ಎಂದು ಹೇಳುವುದಾಗಲಿ ಸಾಧ್ಯವೇ ? ಶ್ರೀ ಶ್ರೀಗಳವರ ವ್ಯಕ್ತಿತ್ವ ಎಂತಹುದು ಎನ್ನುವುದಾದರೆ ಉಪನಿಷತ್ತು ಬ್ರಹ್ಮನ ಬಗ್ಗೆ ಹೇಳುತ್ತದೆಯಲ್ಲ " ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ " ಹಾಗೆ ಎಂದಷ್ಟೇ ಹೇಳಬಹುದು.

ಇಂತಹ ತೇಜೋನಿರಾಜಮಾನವಾದ ದಿವ್ಯಚೇತನದ ಜೀವನ ವೃತ್ತಾಂತವನ್ನು ಹಲವಾರು ಚಾರಿತ್ರಿಕ ಅಂಶಗಳು, ಹಲವಾರು ಪವಾಡ ಸದೃಶ ಘಟನೆಗಳು ಇವೆಲ್ಲವನ್ನೂ ಒಂದು ಕಡೆ ಕಲೆಹಾಕಿ ಸೂರ್ಯನನ್ನು ಕನ್ನಡಿಯಲ್ಲಿ ತೋರಿಸುವಂತೆ ಶ್ರೀ ಶಾಸ್ತ್ರಿಗಳು ಜಗದ್ಗುರುಗಳ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಶ್ರೀ ಶಾಸ್ತ್ರಿಗಳು ಜಗದ್ಗುರುಗಳ ಅವಿಚ್ಛಿನ್ನ ಭಕ್ತರು. ಆ ಅನಂತ ಭಕ್ತಿಯ ಭಾವನೆಯಲ್ಲಿ ಕರಗಿ ಮೃದುವಾದ, ಲಲಿತವಾದ, ಹೃದಯಸ್ಪರ್ಶಿಯಾದ ಶೈಲಿಯಲ್ಲಿ ಬರೆದಿದ್ದಾರೆ. ಈ ಬಗೆಯ ಭಕ್ತಿಯ ಕಣ್ಣಿನಿಂದ ನೋಡಿ ಬರೆಯುವಾಗ ಯಾವೊಂದು ಘಟನೆಯೂ, ಯಾವೊಂದು ಅಂಶವೂ ಇದು ಬಿಡಬಹುದಾದದ್ದು ಎಂದು ತೋರುವುದಿಲ್ಲ. ಇದ್ದುದೆಲ್ಲವೂ ಇರಲಿ ಎಂದು ಕಲೆ ಹಾಕುತ್ತದೆ ಆ ಕಣ್ಣು. ಲೇಖಕರ ಗುರುಭಕ್ತಿಯ ಮಟ್ಟವನ್ನೇ ಏರಿ ಈ ಗ್ರಂಥವನ್ನು ಓದುವ ವಾಚಕರಿಗೆ ಇಡೀ ಗ್ರಂಥ ಅಮೃತಪ್ರಾಶನವಾಗುತ್ತದೆ. ಕೇವಲ ಕುತೂಹಲ ದೃಷ್ಟಿಯಿಂದ ಓದುವವರಿಗೆ ಕೆಲವು ಭಾಗ ನೀರಸ ವರದಿಯಂತೆ ಕಂಡರೆ ಆಶ್ಚರ್ಯವೇನೂ ಇಲ್ಲ. ಹಾಗಾಗುವುದು ಒಂದು ರೀತಿಯಲ್ಲಿ ಅನಿವಾರ್ಯವೋ ಏನೋ. ಜೀವನ ಚರಿತ್ರೆಯ ವಿಷಯದಲ್ಲಿ ಇದು ಬಿಡಬೇಕಿತ್ತು ಹೀಗಾಗ ಬಾರದಿತ್ತು ಎಂದು ಹೇಳುವುದು ಸಾಹಸದ ಕೆಲಸ. ಆದ್ದರಿಂದ ನಾನು ಈ ಗ್ರಂಥದ ಬಗ್ಗೆ ಹೇಳ ಬಹುದಾದದ್ದು ಇಷ್ಟೇ. ಗಂಗಾನದಿಯ ನೀರು ಕೇವಲ ಬಾಯಾರಿದವನಿಗೆ ಬಾಯಾರಿಕೆಯನ್ನು ತೀರಿಸುವ ಬರಿ ನೀರು, ಶ್ರದ್ಧಾವಂತರಿಗೆ ಸ್ವರ್ಗಕ್ಕೆ ಕೊಂಡೊಯ್ಯುವ ಮುಕ್ತಿ ತೀರ್ಥ. ಶ್ರೀ ಶಾಸ್ತ್ರಿಗಳಿಂದ ರಚಿತವಾದ ಈ ಗ್ರಂಥವು ಆ ಗಂಗಾ ಜಲದಂತೆ. ಕ್ಷಣಿಕ ಕುತೂಹಲದ ತೃಪ್ತಿಯೋ ಅಥವಾ ಜೀವನಮಾರ್ಗಕ್ಕೆ ದಾರಿ ದೀಪವನ್ನಾಗಿ ಮಾಡಿಕೊಳ್ಳುವುದೋ ಅದು ಓದುಗನಿಗೇ ಬಿಟ್ಟ ವಿಷಯ. ಆದರೆ ಒಂದು ಮಾತಂತೂ ಸತ್ಯ. ಹೇಗೆ ಕುಡಿದರೂ ಒಂದಲ್ಲ ಒಂದು ಬಗೆಯ ತೃಪ್ತಿಯನ್ನು ಕೊಟ್ಟೇ ಕೊಡುತ್ತದೆ – ಶ್ರೀ ಜಗದ್ಗುರುಗಳ ಜೀವನಗಂಗೆ. ಇಷ್ಟನ್ನು ಮಾತ್ರ ನಾನು ಧೈರ್ಯವಾಗಿ ಹೇಳಬಲ್ಲೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊನೆಯದಾಗಿ ನನ್ನ ಆರಾಧ್ಯ ದೈವವೆಂದು ನಾನು ಭಾವಿಸಿರುವ ಶ್ರೀ ಶಾರದಾ ಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಷಷ್ಟ್ಯಬ್ಧಿ ಪೂರ್ತಿಯ ಶುಭ ಸಮಯದಲ್ಲಿ ಹೊರಬರುತ್ತಿರುವ ಅವರ ಜೀವನ ಚರಿತ್ರೆಗೆ ಮುನ್ನುಡಿ ಬರೆಯುವ ನೆಪದಲ್ಲಿ ಜಗದ್ಗುರುಗಳ ಶ್ರೀ ಚರಣಗಳಿಗೆ ಕೆಲವು ನುಡಿ ಕುಸುಮ ಗಳನ್ನರ್ಪಿಸಿ ಧನ್ಯನಾಗುವ ಅವಕಾಶವನ್ನು ಮಾಡಿಕೊಟ್ಟದ್ದಕ್ಕಾಗಿ ನಾನು ಶ್ರೀ ಶಾಸ್ತ್ರಿ ಗಳಿಗೆ ಚಿರಋಣಿಯಾಗಿದ್ದೇನೆ.

ಶ್ರೀ ಶಾಸ್ತ್ರಿಗಳು ಈಗಾಗಲೇ ಹಲವಾರು ದಿವ್ಯ ಚೇತನಗಳ ಜೀವನ ಚರಿತ್ರೆಗಳನ್ನು ಬರೆದು ಕೃತಾರ್ಥರಾಗಿದ್ದಾರೆ. ಕನ್ನಡ ಸಾಹಿತ್ಯದ ಜೀವನ ಚರಿತ್ರೆಯ ಪ್ರಾಕಾರಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆ[illegible] ಸಲ್ಲಿಸಿದ್ದಾರೆ. ಅವರ ಈ ಪ್ರಯತ್ನ ಹೀಗೇ ನಿರಂತರವಾಗಿ ಸಾಗಲಿ; ಅದಕ್ಕೆ ಗುರುಕೃಪೆ, ಜನತಾ ಜನಾರ್ದನನ ಅನುಗ್ರಹ ಎರಡೂ ಒದಗಿಬರಲಿ ಎಂದು ಕೋರುತ್ತೇನೆ.

೯-೧೧-೭೭
'ಗಿರಿಕನ್ಯಕಾ'
ಯಾದವಗಿರಿ. ಮೈಸೂರು-೨.

ತ. ರಾ. ಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿನ್ನಹ

ನಾನು ಇಂಟರ್‌ಮೀಡಿಯಟ್ ತರಗತಿಯಲ್ಲಿ ಓದುತ್ತಿದ್ದೆ. ಅದು ದೇಶ ಪರಕೀಯ ಆಡಳಿತದಿಂದ ಸ್ವತಂತ್ರವಾದ ಸಂದರ್ಭ; ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿ ತೀವ್ರವಾಗಿದ್ದ ಸಮಯ. ಜೀವನದಲ್ಲಿ ಗೊತ್ತುಗುರಿಯಿಲ್ಲದೆ ಕಲ್ಪನೆಯ ಪ್ರಪಂಚದಲ್ಲಿ ಆದರ್ಶಗಳ ಲೋಕದಲ್ಲಿ ಮನಸ್ಸು ಸುತ್ತಾಡುತ್ತಿದ್ದ ಕಾಲವದು. ನನ್ನ ನಡೆ ಹಿರಿಯರ ನಿರೀಕ್ಷೆಗೆ ವ್ಯತಿರೇಕವಾಗಿದ್ದು ನನಗೆ ತಿಳಿಯದಂತೆಯೇ ನಾನು ತಪ್ಪುಹೆಜ್ಜೆಯಿಟ್ಟು ಪ್ರೌಢ ವ್ಯಾಸಂಗಕ್ಕೆ ಅಡ್ಡಿತಂದುಕೊಂಡು ವ್ಯರ್ಥವಾಗಿ ದಿನಗಳನ್ನು ನೂಕುತ್ತ ಹಿರಿಯರಿಗೆ ಹೊರೆಯಾಗಿ ಚಿಂತೆ ಆತಂಕಗಳಿಗೆ ಕಾರಣನಾಗಿ ಬೈಬಲಿನ ಪ್ರಾಡಿಗಲ್ ಮಗನಂತೆ ಸ್ವೇಚ್ಛೆಯಿಂದ ಇದ್ದ ಕಾಲ. ಅವನು ಕೇವಲ ಐಶ್ವರ್ಯವನ್ನಷ್ಟೇ ಕಳೆದುಕೊಂಡಿದ್ದ. ನಾನಾದರೋ ಪ್ರೌಢ ವಿದ್ಯಾಭ್ಯಾಸಕ್ಕಿದ್ದ ಅವಕಾಶವನ್ನು ಕಳೆದುಕೊಂಡು, ಹಿರಿಯರು ನನ್ನಲ್ಲಿಟ್ಟಿದ್ದ ಆಸೆ ಭರವಸೆಗಳನ್ನು ಕಳೆದುಕೊಳ್ಳುವಂತೆ ಮಾಡಿದ್ದೆ.

ಇಂತಹ ಸನ್ನಿವೇಶದಲ್ಲಿ ಶೃಂಗೇರಿಗೆ ಹೋಗಬೇಕಾದ ಅವಕಾಶ ಸಿಕ್ಕಿತು. ಚಳುವಳಿಗಳಲ್ಲಿ ಭಾಗವಹಿಸಿದ್ದುದರಿಂದ ನಾನೊಬ್ಬ ದೇಶಸೇವಕನೆಂಬ ಭ್ರಮೆ ನನ್ನಲ್ಲಿ ತುಂಬಿತ್ತು. ಬಾಲ್ಯದಿಂದಲೂ ಸಾಹಿತ್ಯ ಕಾವ್ಯಗಳಲ್ಲಿ ಅಭಿರುಚಿಯಿದ್ದುದರಿಂದ ಕಾವ್ಯವಾಚನಮಾಡುವ ಖಯಾಲಿ ನನ್ನಲ್ಲಿತ್ತು. ಶೃಂಗೇರಿಯಲ್ಲಿದ್ದ ಕೆಲವು ಜನ ತರುಣ ಮಿತ್ರರು ಒಂದು ಸಾರ್ವಜನಿಕ ಸಮಾರಂಭವೇರ್ಪಡಿಸಿ ಅಲ್ಲಿ ನನ್ನಿಂದ ಪದ್ಯವೋದಿಸಿದ್ದರು. ಅದನ್ನು ಕೇಳಿದ ಹಿರಿಯರು – ಶ್ರೀ ಮುಲ್ಲಂಡ್ರಂ ವೆಂಕಟರಾಮ ಐಯ್ಯರ್- ಮೆಚ್ಚಿಕೊಂಡು ನಾನು ಚಿಕ್ಕಗುರುಗಳವರ ಮುಂದೆ ಪದ್ಯವಾಚನ ಮಾಡಬೇಕೆಂದು ಸೂಚಿಸಿ ಅದಕ್ಕೆ ಅವಕಾಶವನ್ನು ಕಲ್ಪಿಸಿಯೂ ಕೊಟ್ಟರು.

ಒಂದು ಶುಕ್ರವಾರ ಮಧ್ಯಾಹ್ನದ ನಂತರ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರ ಮುಂದೆ ನಾನೇ ಬರೆದ ಕೆಲವು ಪದ್ಯಗಳನ್ನೂ ಆಧುನಿಕ ಕವಿಗಳ ಭಾವಗೀತೆಗಳನ್ನೂ ವಾಚನ ಮಾಡಿದೆ. ಶ್ರೀ ಶ್ರೀಗಳವರು ಮಧ್ಯೆ ಮಧ್ಯೆ ಕವಿ ಕಾವ್ಯಗಳ ಬಗ್ಗೆ ಹಲವು ವಿವರಣೆಗಳನ್ನು ಕೇಳಿದರು. ತಾವು ಕುಮಾರವ್ಯಾಸ ಲಕ್ಷ್ಮೀಶರನ್ನು ಓದಿರುವುದಾಗಿ ಹೇಳಿದರು. ಆಗ ಅಲ್ಲಿಗೊಬ್ಬ ವೃದ್ಧರು ಆಗಮಿಸಿದರು. ಅವರು ಹಳೆಯ ಛಂದಸ್ಸುಗಳಲ್ಲಿ ಶ್ರೀ ಶಂಕರ ವಿಜಯವನ್ನು ಬರೆದಿದ್ದವರು. ಶ್ರೀ ಸ್ವಾಮಿಗಳು ಅವರಿಗೆ ನನ್ನನ್ನು ಪರಿಚಯ ಮಾಡಿಸಿ "ಇವರು ಹೊಸಶೈಲಿಯಲ್ಲಿ ಪದ್ಯಗಳನ್ನು ಬರೆದಿದ್ದಾರೆ." ಎಂದು ನುಡಿದರು. ಆ ವೃದ್ಧರು ನನ್ನನ್ನು ನೋಡಿದ ರೀತಿಯಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

"ಹೊಸಜಾತಿಯ" ಕವಿಗಳಲ್ಲಿ ಅವರಿಗೆ ಆದರವಿಲ್ಲವೆಂದೆನ್ನಿಸಿ ನಾನೂ ಅವರನ್ನು ತಾತ್ಸಾರದಿಂದಲೇ ನೋಡಿದೆ. ಅಹಂಕಾರ ನನ್ನಲ್ಲಿ ತುಂಬಿತ್ತು.

ಮನೆಗೆ ಹಿಂದಿರುಗುವಾಗ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಆಪ್ತ ಸೇವಕರಾಗಿದ್ದ ಶ್ರೀ ರಾಮು ಸೋಮಯಾಜಿಗಳು ದಾರಿಯಲ್ಲಿ ಸಿಕ್ಕಿ ನಾನು ಹೋಗಿದ್ದು ದೆಲ್ಲಿಗೆಂದು ಕೇಳಿದರು, ಹೇಳಿದೆ. "ನೀನು ಚೆನ್ನಾಗಿ ಪದ್ಯ ಬರೆಯುತ್ತೀಯಂತೆ. ನಮ್ಮ ಸ್ವಾಮಿಗಳ ಮೇಲೂ ಏನಾದರೂ ಬರೆದುಕೊಂಡು ಬಾ. ಅವರ ಮುಂದೆ ಓದಬಹುದು" ಎಂದರು. ನನ್ನ ಅಹಂಕಾರ ಹಾವಿನ ಹೆಡೆಯಂತೆ ತಲೆಯೆತ್ತಿತು. ಆಗ ನನ್ನ ದೃಷ್ಟಿಯಲ್ಲಿ ಮಹಾಪುರುಷರೆಂದರೆ ರಾಷ್ಟ್ರೀಯ ಚಳುವಳಿಯಲ್ಲಿದ್ದವರು ಮಾತ್ರ. ಉಳಿದವರ ಬಗ್ಗೆ ನನ್ನ ದೃಷ್ಟಿ ಬೇರೆಯೇ ಆ[illegible] ಸೋಮಯಾಜಿಗಳ ಮಾತು ಕೇಳಿ ಅಸಮಾಧಾನವಾಗಿತ್ತು. ಈತ ಸ್ವಾಮಿಗಳ ಮೇಲೆಲ್ಲಾ ಬರೆ ಎನ್ನುತ್ತಾರಲ್ಲ ಎಂದು ಕೋಪಬಂದಿತ್ತು. ಮಾತನಾಡದೇ ತಲೆತಿರುಗಿಸಿ ಮನೆಗೆ ಹಿಂದಿರುಗಿದೆ. ನಾನೊಬ್ಬ ವಿಚಾರಶೀಲನೆಂಬ ಭ್ರಮೆ ನನ್ನಲ್ಲಿ ತುಂಬಿಕೊಂಡಿತ್ತು.

ಊರಿಗೆ ಹಿಂದಿರುಗುವ ಮುನ್ನ ಹಿರಿಯರೊಡನೆ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ದರ್ಶನ ಮಾಡಬೇಕಾಯಿತು, ಯಜ್ಞೇಶ್ವರನಂತೆ ಪ್ರಜ್ವಲಿಸುತ್ತಿದ್ದ ಆ ತೇಜಃಪುಂಜಿಯ ದರ್ಶನ ಮಹತ್ವಪೂರ್ವವಾದ ಘಟನೆ. ನನ್ನ ಜೀವನದಲ್ಲಿ ನನಗರಿವಿಲ್ಲದಂತೆ ನನ್ನ ಅಹಂಕಾರಕ್ಕೆ ಅವರು ಕೊಡಲಿ ಏಟು ಕೊಟ್ಟಿದ್ದು, ಅದು ಮುರಿದು ಬೀಳಲು ತೊಡಗಿತ್ತು.

ಊರಿಗೆ ಹಿಂದಿರುಗಿದೆ. ಕಷ್ಟಗಳ ಪರಂಪರೆ ಬೆನ್ನುಹತ್ತಿತು ನನ್ನ ಸಾಕು ತಾಯಿ ನಿಧನರಾದರು. (ನನ್ನ ಹೆತ್ತ ತಾಯಿ ತೀರಾ ನನ್ನ ಬಾಲ್ಯದಲ್ಲಿಯೇ ಮೃತರಾಗಿದ್ದರು.) ಜೀವನದ ವಾಸ್ತವತೆಯ ಅರಿವು ನನಸಾದುದು ಆಗಲೇ. ಶ್ರೀ ಗುರುರಕ್ಷೆ ನನ್ನ ಬೆಂಬಳಿಗೆ ಇದ್ದುದು ನನಗೆ ತಿಳಿದಿರಲಿಲ್ಲ. ಹಿರಿಯರ ಅಪೇಕ್ಷೆಯಂತೆ ವ್ಯಾಸಂಗ ಮುಂದುವರೆಸಲು ಮತ್ತೆ ಕಾಲೇಜಿಗೆ ಸೇರಿದೆ. ನೌಕರಿಯೊಂದು ಸಿಕ್ಕಲು ಓದನ್ನು ಬಿಟ್ಟೆ. ನೌಕರರ ಸಂಘದ ಕಾರ್ಮಿಕ ಚಳುವಳಿಯಲ್ಲಿ ಹಲವಾರು ವರ್ಷಗಳು ಮಗ್ನನಾಗಿದ್ದೆ. ಕೇಂದ್ರ ಸರ್ಕಾರದ ನೌಕರರ ಮುಷ್ಕರದಲ್ಲಿ ಪ್ರಮುಖ ಪಾತ್ರ[illegible]ಹಿಸಿದ ಕಾರಣಕ್ಕಾಗಿ ಶೃಂಗೇರಿಯ ಸಮೀಪದ ಕೊಪ್ಪಕ್ಕೆ ವರ್ಗಾಯಿಸಲ್ಪಟ್ಟೆ. ಸರ್ಕಾರ ಕಾರ್ಮಿಕ ಸಂಘಗಳಿಗೆ ಕೊಟ್ಟಿದ್ದ ಮನ್ನಣೆಯನ್ನು ರದ್ದು ಪಡಿಸಿದ್ದುದರಿಂದ ನಮ್ಮ ಕಾರ್ಮಿಕ ಚಳುವಳಿ ಸ್ಥಗಿತಗೊಂಡಿತ್ತು. ಸ್ವಕ್ಷೇತ್ರದಿಂದ ದೂರಕ್ಕೆಸೆಯಲ್ಪಟ್ಟಿದ್ದೆ. ಆಗ ನನ್ನ ಗಮನ ಹಲವಾರು ವರ್ಷಗಳಿಂದ ನಿಂತು ಹೋಗಿದ್ದ ಓದು ಬರಹಗಳತ್ತ ತಿರುಗಿತು.

ನನಗರಿವಿಲ್ಲದಂತೆಯೇ ನನ್ನ ಮೇಲೆ ಪ್ರಭಾವ ಬೀರಿದ ಶ್ರೀ ಶ್ರೀ ಚಂದ್ರಶೇಖರ ಭಾರತೀಯವರ ಮಹಾತ್ಮ್ಯ ಸ್ವಲ್ಪ ಸ್ವಲ್ಪವೇ ಆಗಲಾರಂಭಿಸಿ ನನ್ನಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹತ್ತರವಾದ ಪರಿಣಾಮ ಉಂಟುಮಾಡಿತು. ಯಾವ ಮಹನೀಯರ ಬಗ್ಗೆ ಬರೆಯಲು ಸೂಚನೆ ಬಂದಾಗ ಅಹಂಕಾರದಿಂದ ತಲೆದಿರುಗಿಸಿದ್ದೆನೋ ಆ ಮಹಾತ್ಮರನ್ನು ಕುರಿತೇ ನನ್ನ ಮೊದಲ ಗದ್ಯ ಕೃತಿ "ಮಹಾತಪಸ್ವಿ ಶ್ರೀ ಚಂದ್ರಶೇಖರ ಭಾರತೀ" ರಚಿತವಾಯಿತು. ಅದರ ರಚನೆ, ಮುದ್ರಣ ಪ್ರಕಾಶನ ಎಲ್ಲವೂ ಒಂದು ಪವಾಡದಂತೆ ನಡೆದವು. ನನ್ನ ಜೀವನಕ್ಕೆ ಹೊಸತಿರುವು ಬಂದಿತು, ಗುರಿಯೊಂದು ಕಂಡಿತು.

ಶ್ರೀ ಗುರುಕೃಪೆ ಸದಾ ನನ್ನ ಬೆಂಬಳಿಗಿದ್ದು ನನ್ನಿಂದ ಹಲವಾರು ಕೃತಿಗಳು ಮೂಡುವಂತೆ ಮಾಡಿದೆ. ಶ್ರೀ ಚಂದ್ರಶೇಖರ ಭಾರತೀಯವರ ಜೀವನಚರಿತ್ರೆಯ ನಂತರ ಅವರೆ ಪ್ರೇರಣೆಯಂತೆಯೇ ಅವರ ಶಿ[illegible] ಗುರುಗಳಾಗಿದ್ದ ಶ್ರೀ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳ ಜೀವನ ಚರಿತ್ರೆಯೂ ಮತ್ತು ಅವರ ಪ್ರಿಯಶಿಷ್ಯರಾಗಿರುವ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರ ಜೀವನಚರಿತ್ರೆಯೂ ನನ್ನ ಲೇಖನಿಯಿಂದ ಮೂಡಿ ಬಂದಿವೆ. ಇಂತಹ ಕೃತಿ ರಚನೆಗೆ ನನಗಿರುವ ಸಾಮರ್ಥ್ಯ, ಪ್ರತಿಭೆ, ಅರ್ಹತೆ, ಯೋಗ್ಯತೆ ಇವುಗಳ ಪರಿಮಿತಿ ಎಷ್ಟೆಂದು ನಾನು ಬಲ್ಲೆ. ತಾಯಿಯ ಮುಂದೆ ಮಗು ತನ್ನ ತೊದಲನುಡಿಯಾಡುವಂತೆ ನನ್ನ ಈ ಪ್ರಯತ್ನ.

ಈ ಕೃತಿ ರಚನೆಗೆ ಹಲವಾರು ಗ್ರಂಥಗಳೂ, ಹಲವಾರು ಜನ ಹಿರಿಯ ಸ್ನೇಹಿತರೂ ಸಾಮಗ್ರಿಯನ್ನು ಒದಗಿಸಿದ್ದಾರೆ. ದಿವಂಗತರಾದ ಶ್ರೀ ಪದ್ಮನಾಭ ಉಪಾಧ್ಯಾಯ, ಶ್ರೀ ಸುಂದರ ಘನಪಾಠಿ, ಇವರನ್ನು ಸ್ಮರಿಸುವುದು ನನ್ನ ಕರ್ತವ್ಯ. ಗುರುಗಳ ಆಪ್ತಸೇವೆಯಲ್ಲಿದ್ದ ಈ ಹಿರಿಯರು ನನಗೆ ಅನೇಕ ಮಾಹಿತಿಗಳನ್ನು ತಿಳಿಸಿದ್ದರು. ಶ್ರೀ ಮಠದ ಪುರೋಹಿತರಾದ ಶ್ರೀಗಣಪತಿ ಸುಬ್ರಹ್ಮಣ್ಯ ಅವಧಾನಿಗಳು, ಸಂಚಾರಕಾಲದ ಅನೇಕ ವಿವರಗಳನ್ನೂ, ಘಟನೆಗಳನ್ನೂ ಭಾವುಕತೆಯಿಂದ ನನಗೆ ಹೇಳಿದ್ದಾರೆ. ವಿದ್ವಾನ್ ಬಾಲಗಣಪತಿ ಭಟ್ಟರು ಹಲವಾರು ವಿವರಗಳನ್ನು ತಿಳಿಸಿದ್ದಾರೆ. ಶಿವಮೊಗ್ಗೆಯ ಮಿತ್ರರಾದ ಶ್ರೀ ಟಿ. ವೆಂಕಟರಾಮ ಶಾಸ್ತ್ರಿ ಮತ್ತು ನನ್ನ ಆತ್ಮೀಯರೂ ನಾಡಿನ ಸಾಹಿತ್ಯ ಶಿಲ್ಪಿ ಶ್ರೇಷ್ಠರಾದ ಶ್ರೀ ತ.ರಾ.ಸು ಈ ಪುಸ್ತಕ ಬರೆಯಲು ಪ್ರೋತ್ಸಾಹಿಸಿದ್ದಾರೆ. ತ.ರಾ.ಸುಪವರೇ ವಿಶ್ವಾಸದಿಂದ 'ಮೊದಲ ಮಾತು' ಬರೆದು ಬೆನ್ನು ತಟ್ಟಿದ್ದಾರೆ. ಸೋದರ ಎಸ್. ಎ. ಶಾಮರಾವ್ ನಾ ಕೊಟ್ಟ ಕಷ್ಟಗಳನ್ನೆಲ್ಲಾ ನಗುತ್ತಾ ಸಹಿಸಿ ಹಸ್ತಪ್ರತಿಯನ್ನು ಹಲವಾರು ಸಲ ಸಿದ್ಧಪಡಿಸಿದ್ದಾರೆ. ಸೋದರ ಜಿ. ವಿ. ಸತ್ಯನಾರಾಯಣ ಪುಸ್ತಕದ ಹೊರಹೊದಿಕೆ ಮತ್ತು ಚಿತ್ರವನ್ನು ಸಿದ್ಧಪಡಿಸುವುದರಲ್ಲಿ ಸಹಕರಿಸಿದ್ದಾರೆ. ಸೋದರಿ ಚಿ. ಸೌ. ಜಯಲಕ್ಷ್ಮೀ ಪದ್ಮನಾಭ ರಾವ್ ಪುಸ್ತಕ ಪ್ರಕಟನೆಗೆ ನೆರವಾಗಿದ್ದಾಳೆ. ವಿದ್ವಾನ್ ಎಸ್. ರಂಗನಾಥನ್ ಅಚ್ಚಿನ ಕರಡನ್ನು ತಿದ್ದಿದ್ದಾರೆ. ನನ್ನ ಹಿತೈಷಿಗಳಾದ ಶ್ರೀ ಪಿ. ಆರ್. ಹರಿಹರನ್ ಪುಸ್ತಕದ ಮುದ್ರಣದಲ್ಲಿ ಸಹಕರಿಸಿದ್ದಾರೆ. ಅಚ್ಚಿನ ಮನೆಯ ಕೆಲಸಗಾರರೆಲ್ಲಾ ತಮ್ಮದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲಸವೆಂಬಂತೆ ಶ್ರದ್ಧಾಸಕ್ತಿಯಿಂದ, ಉತ್ಸಾಹದಿಂದ ದುಡಿದು ಪುಸ್ತಕ ಶೀಘ್ರವಾಗಿ ಹೊರಬರಲು ನೆರವಾಗಿದ್ದಾರೆ. ಹಾಗೆಯೇ ಮುಖಪುಟದ ಚಿತ್ರ ಕಲಾವಿದರೂ ನೆರವಾಗಿದ್ದಾರೆ. ಶ್ರೀಗುರುಕೃಪೆ ಇವರೆಲ್ಲರನ್ನೂ ಕಾಯಲೆಂದು ನನ್ನ ನಮ್ರ ಪ್ರಾರ್ಥನೆ.

ನನ್ನ ಕೃತಿಗಳನ್ನು ಪ್ರೋತ್ಸಾಹಿಸುತ್ತಿರುವ ಸಹೃದಯ ವಾಚಕರು ಈ ಪುಸ್ತಕವನ್ನು ಆದರದಿಂದ ಕೈಗೆತ್ತಿಕೊಳ್ಳುವರೆಂದು ನಂಬಿದ್ದೇನೆ.

ಪೈಂಗಳ ನರಕ ಚತುರ್ದಶೀ
೧೦-೧೧-೧೯೭೭
ಮೈಸೂರು ೪

ಹುರುಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸದಾಶಿವನಿಂದ
ಆರಂಭವಾಗಿ
ಶ್ರೀ ಭಾರತೀತೀರ್ಥರವರೆಗೆ
ಪ್ರವಹಿಸುತ್ತಿರುವ ಶ್ರೀ ಗುರುತತ್ತ್ವಕ್ಕೆ
ಈ ಕೃತಿ ಸಮರ್ಪಿತ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮಚ್ಛಂಕರದೇಶಿಕೇಂದ್ರರಚಿತಂ ವ್ಯಾಖ್ಯಾನಸ್ಸಿಂಹಾಸನಂ
ತುಂಗಾತೀರಗತಂ ಚ ಪಾವನತಮಂ ಯೋಽಲಂಕರೋತ್ಯಾತ್ಮನಾಂ ॥
ಚಂದ್ರೋತ್ತಂಸಶಿವಾರ್ಚನೇನ ಜನತಾ ಸೌಖ್ಯಂ ಸದಾಽಭ್ಯರ್ಥಯನ್
ವಿದ್ಯಾತೀರ್ಥಗುರುಂ ಭಜೇ ತಮನಿಶಂ ಹೃಧ್ಯಾತ್ಮಚಿಂತಾತುರಂ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುದೇವ ಶ್ರೀ ವಿದ್ಯಾತೀರ್ಥ

೧. ಧರ್ಮ ರಕ್ಷಕರು

ಅನ್ಯಮತಗಳ ಧಾಳಿಯಿಂದ ಅಥವಾ ವೈದಿಕ ಧರ್ಮದ ವಿವಿಧವಾದ ಒಳ ಪ್ರಭೇದಗಳಲ್ಲಿ ಉಂಟಾದ ಪರಸ್ಪರ ಘರ್ಷಣೆ ಮತ್ತು ವೈಮನಸ್ಯದಿಂದ, ಸನಾತನಧರ್ಮಕ್ಕೆ ಕಂಟಕ ಬಂದೊದಗಿದಾಗ, ಜನಜೀವನವು ಉಲ್ಲೋಲ ಕಲ್ಲೋಲವಾಗಿ ಬಿಕ್ಕಟ್ಟಿನಲ್ಲಿ ಸಿಲುಕಿದಾಗ ಇಂದ್ರಿಯ ಗೋಚರವಾದ ಈ ಜಗತ್ತು ಸ್ವಪ್ನದಂತೆ ಒಂದು ತೋರಿಕೆ - ಮಿಥ್ಯೆ - ಎಂದು ಬೋಧಿಸುವಂತಹ ಅದ್ವೈತ ಸನ್ಯಾಸಿಗಳೇ ಜಗತ್ತಿನ ರಕ್ಷಣೆಗೆ ಧಾವಿಸಿದರು. ಧರ್ಮದ ಸ್ಥಾಪನೆ, ಪೋಷಣೆ ಮತ್ತು ಉತ್ಥಾನಕ್ಕೆ ಮಹತ್ಕಾರ್ಯಗಳನ್ನು ನಡೆಸಿ ಇತರರಿಗೆ ಆದರ್ಶ ಮಾರ್ಗ ತೋರಿದರು. ಇಂತಹ ಅದ್ವೈತಾಚಾರ್ಯರಲ್ಲಿ ಶ್ರೀ ಶಾಂಕರ ಚತುರಾಮ್ನಾಯ ಪರಂಪರೆಗೆ ಸೇರಿದ ಆಚಾರ್ಯರ ಸ್ಥಾನ ವೈಶಿಷ್ಟ್ಯ ಪೂರ್ಣವಾದುದು. ಅದರಲ್ಲಿ ಶೃಂಗೇರಿಯ ಪೀಠಾಧಿಪತಿಗಳ ಸ್ಥಾನವು ಪ್ರಮುಖವಾದುದು.

ಸನಾತನ ಧರ್ಮದಲ್ಲಿ ಬಿಕ್ಕಟ್ಟು ಆಗಾಗ ತಲೆದೋರುತ್ತಿದ್ದರೂ, ಕೆಲವೊಮ್ಮೆ ತೀವ್ರ ಸ್ವರೂಪವನ್ನು ತಾಳಿ ಹಿಂದೂ ಧರ್ಮವು ನಾಶವಾಗಿ ಬಿಡುತ್ತದೆಯೇನೋ ಎಂಬ ಭೀತಿಗೆ ಕಾರಣವಾದುದುಂಟು. ಅಂತಹ ಕೆಲವು ಸಂದರ್ಭಗಳಲ್ಲಿ ಶೃಂಗೇರಿಯ ಪೀಠಾಧಿಪರು ಧರ್ಮದ ರಕ್ಷಣೆಗಾಗಿ ಟೊಂಕ ಕಟ್ಟಿ, ಧಾರ್ಮಿಕ ಸಾಮಾಜಿಕ ಜೀವನದಲ್ಲಿ ಪ್ರಭಾವವನ್ನು ಬೀರಿ, ವೈದಿಕ ಧರ್ಮದ ಘನತೆಯನ್ನು ಎತ್ತಿ ನಿಲ್ಲಿಸಿದರು. ಸನಾತನ ಧರ್ಮದ ಏಕತೆಯನ್ನು ಪುನಃ ಪುನಃ ಸಾರಿ ಜನಜಾಗೃತಿಯನ್ನು ಮೂಡಿಸಿದರು.

ಶೃಂಗೇರಿಯ ಪೀಠವನ್ನು ಸ್ಥಾಪಿಸಿ ಅಲ್ಲಿಂದೇ ಒಂದು ದಶಕಕ್ಕೂ ಹೆಚ್ಚು ಕಾಲ ಧರ್ಮೋಪದೇಶ ಮಾಡಿದ ಶ್ರೀ ಶಂಕರ ಭಗವತ್ಪಾದರು ಅವತರಿಸಿದಾಗ ನಮ್ಮ ದೇಶದಲ್ಲಿ ಧಾರ್ಮಿಕ ವಿಪ್ಲವ ಉಂಟಾಗಿತ್ತು. ವೈದಿಕಮತವೇ ಮೂಲೋತ್ಪಾಟನವಾಗಿ ಸನಾತನ ಧರ್ಮವೇ ಅಳಿಸಿ ಹೋಗುವಂತಹ ಸಂದರ್ಭ ಬಂದಿತ್ತು. ಜೈನ ಬೌದ್ಧ ಮತಗಳು ರಾಜಾಶ್ರಯವನ್ನು ಪಡೆದು ವೈದಿಕ ಮತದ ಮೇಲೆ ಪ್ರಬಲ ಧಾಳಿಯನ್ನು ಮಾಡುತ್ತಿದ್ದುವು. ವೈದಿಕ ಮತಗಳೇ ಆಗಿದ್ದ ಶೈವ, ವೈಷ್ಣವ, ಶಾಕ್ತ ಮತಗಳಲ್ಲಿ ಪರಸ್ಪರ ಪೈಪೋಟಿಯಿದ್ದು ಅವುಗಳಲ್ಲಿ ತಾಂತ್ರಿಕ ಪ್ರಭಾವ ಹೆಚ್ಚಾಗಿತ್ತು. ವೈದಿಕ ದರ್ಶನಗಳೇ ಆಗಿದ್ದ ಸಾಂಖ್ಯ, ನ್ಯಾಯ, ವೈಶೇಷಿಕ, ಯೋಗ ಮೀಮಾಂಸಾದಿ ಮತಗಳಲ್ಲಿ ಒಮ್ಮತವಿಲ್ಲದೆ ಅನೈಕ್ಯತೆ ಮೂಡಿತ್ತು. ವೈದಿಕ ಕರ್ಮಾನುಷ್ಠಾನಗಳಲ್ಲಿ ಮಗ್ನರಾಗಿದ್ದ ಉಚ್ಚವರ್ಗದವರು, ತಮ್ಮ ತಮ್ಮ ಉನ್ನತಿಯನ್ನು ಸಾಧಿಸಿಕೊಳ್ಳುವುದರಲ್ಲಿ ನಿರತರಾಗಿದ್ದರು. ಅವರಿಗೂ ಸಾಮಾನ್ಯ ಜನತೆಗೂ ಸಂಬಂಧ ತಪ್ಪಿಹೋಗಿತ್ತು. ಸಮಾಜದ ಇತರ

Sri Vidyabharathi Book Centre, Sringeri

CC-O. In Public Domain. Digitized by eGangotri

ವರ್ಗದ ಜನ ಒಂದು ಕಡೆ ಜೈನ ಬೌದ್ಧ ಮತಗಳ ಪ್ರಭಾವಕ್ಕೂ ಇನ್ನೊಂದು ಕಡೆ ಶೈವ ವೈಷ್ಣವ, ಶಾಕ್ತ ಮತಗಳ ಪ್ರಭಾವಕ್ಕೂ ಸಿಕ್ಕಿದ್ದರು. ಶೈವ, ಶಾಕ್ತರಲ್ಲಿ ತಾಂತ್ರಿಕ ವಾಮ ಮಾರ್ಗದ ಪ್ರಭಾವವಿದ್ದು ಜನಜೀವನದಲ್ಲಿ ಅನಾಚಾರ ತುಂಬಿತ್ತು. ಅವೈದಿಕ ಕ್ರಿಯಾಕಲಾಪಗಳು ಹೆಚ್ಚಿ ಧರ್ಮದ ನೈಜ ಸ್ವರೂಪವೇ ಮುಚ್ಚಿಹೋಗಿತ್ತು. ಈ ಗೋಜು ಗೊಂದಲಗಳು ಸಾಲದೆಂಬಂತೆ, ಚಾರ್ವಾಕರು ಧರ್ಮ ದೇವರು ಎಂಬುದೆಲ್ಲವೂ ಸುಳ್ಳೆಂದೂ, ಇಂದ್ರಿಯ ಭೋಗವೊಂದೇ ಸುಖವೆಂದೂ ಸಾರುತ್ತಿದ್ದರು. ಅಂದಿನ ಭಾರತೀಯ ಜನಜೀವನ ಪೂರ್ತಿಯಾಗಿ ಹದಗೆಟ್ಟು ಹೋಗಿತ್ತು. ಸಾಮಾಜಿಕ ಅವ್ಯವಸ್ಥೆ ತಾಂಡವವಾಡುತ್ತಿತ್ತು.

ಅಂತಹ ಬಿಕ್ಕಟ್ಟಿನ ಸಮಯದಲ್ಲಿ ಶ್ರೀ ಶಂಕರ ಭಗವತ್ಪಾದರು ಅವತಾರ ಮಾಡಿದರು. ಆಸೇತು ಹಿಮಾಚಲ ಪರ್ಯಂತ ಸಂಚರಿಸಿ, ವೈದಿಕ ಧರ್ಮಕ್ಕೆ ಆಂತರಿಕವಾಗಿ ಬಂದಿದ್ದ ಕರ್ಮಜಡತ್ವ, ಅಂಧಾನುಕರಣೆ ಇವುಗಳನ್ನು ನಾಶಗೊಳಿಸಿದರು. ಅವೈದಿಕ ಮತಗಳಿಂದ ಬಂದಿದ್ದ ಅಪಾಯವನ್ನು ಸಾಮರ್ಥ್ಯದಿಂದ ಎದುರಿಸಿದರು. ವೈದಿಕಧರ್ಮದ ಒಳಪ್ರಭೇದಗಳಾಗಿದ್ದ ಶೈವ, ವೈಷ್ಣವ, ಶಾಕ್ತ, ಸೌರ, ಗಾಣಪತ್ಯ ಮತ್ತು ಕಾಪಾಲಿಕ ಮತಗಳಲ್ಲಿ ಹೊಕ್ಕಿದ್ದ ಅವೈದಿಕವಾದ ಆಚರಣೆಗಳನ್ನು ಮತ್ತು ತಾಂತ್ರಿಕ ವಾಮಾಚಾರಗಳನ್ನೂ ನಿವಾರಿಸಿ ಶ್ರುತಿಸ್ಮೃತಿ ಸಮ್ಮತವಾದ ಷಣ್ಮತ ಸ್ಥಾಪನೆ ಮಾಡಿದರು. ಜನಸಾಮಾನ್ಯರ ಉಪಾಸನೆಗೆ ನೆರವಾಗುವಂತೆ, ಈ ಮತಗಳು ಆಯಾ ಉಪಾಸಕರ ದೃಷ್ಟಿಯಿಂದ ಪ್ರಧಾನವಾಗಿದ್ದರೂ, ಆಧ್ಯಾತ್ಮಿಕ ಸಾಧನೆಯ ಕೊನೆಯ ಮಜಲಾದ ನಿರ್ಗುಣೋಪಾಸನೆಗೆ ಈ ಮತಗಳು ಸಹಕಾರಿ ಎಂಬುದನ್ನು ತೋರಿಸಿಕೊಟ್ಟರು. ಆಧ್ಯಾತ್ಮಿಕ ಸಾಧನೆಗೆ ನೆರವಾಗುವ ಅತ್ಯಂತ ಶ್ರೇಷ್ಠವೂ, ಗಹನ ಗಂಭೀರವೂ ಆದಂತಹ ಪ್ರಸ್ಥಾನತ್ರಯ ಭಾಷ್ಯಗಳನ್ನು ರಚಿಸಿ ಮೇಧಾವಿಗಳಿಗೂ ಪ್ರಜ್ಞಾವಂತರಿಗೂ ಮಾರ್ಗ ತೋರಿದಂತೆಯೇ ಆಧ್ಯಾತ್ಮಿಕ ಸಾಧನೆಯಲ್ಲಿ ಸಾಮಾನ್ಯರಿಗೂ ಎಲ್ಲರಿಗೂ ನೆರವಾಗುವಂತಹ ಅನೇಕ ಪ್ರಕರಣಗ್ರಂಥಗಳನ್ನು ರಚಿಸಿದರು. ಭಕ್ತಿಭಾವದಲ್ಲಿ ಮೈಮರೆಯುವ ಭಾವುಕರಿಗಂತೂ ಶ್ರೀಮದಾಚಾರ್ಯರು ಸ್ತೋತ್ರಗಳ ಜಗತ್ತನ್ನೇ ನಿರ್ಮಿಸಿ ಶಿವ, ವಿಷ್ಣು, ದೇವಿ, ಗಣಪತಿ, ಸೂರ್ಯ, ಕುಮಾರ ಮೊದಲಾದ ದೇವತೆಗಳ ಸಾನ್ನಿಧ್ಯವನ್ನೇ ಕಲ್ಪಿಸಿದರು. ಪೂಜೆಯಲ್ಲಿಯೂ ಸುಧಾರಣೆಗೊಳಿಸಿ ಪಂಚಾಯತನ ಪೂಜೆಯನ್ನು ವ್ಯವಸ್ಥೆಗೆ ತಂದರು. ಧರ್ಮ ಪ್ರಸಾರಕ್ಕಾಗಿ ನಿಸ್ವಾರ್ಥಪರರಾದ ತ್ಯಾಗಪೂರ್ಣರಾದ ದಶನಾಮೀ ಸನ್ಯಾಸಿಗಳ ತಂಡವನ್ನೇ ನಿರ್ಮಾಣ ಮಾಡಿದರು. ಭರತ ಖಂಡದ ನಾಲ್ಕುದಿಕ್ಕುಗಳಲ್ಲಿ ನಾಲ್ಕು ವೇದಗಳಿಗೆ ಅನುಸಾರವಾಗಿ, ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿ ಧರ್ಮಪ್ರಸಾರವು ಚಿರಸ್ಥಾಯಿಯಾಗುವಂತೆ, ವ್ಯವಸ್ಥೆಮಾಡಿದರು. ವೈದಿಕ ಧರ್ಮಕ್ಕೆ ಬಂದಿದ್ದ ಒಳಹೊರಗಿನ ಅಪಾಯಗಳನ್ನು ನಿವಾರಿಸಿ ಅದನ್ನು ಎಲ್ಲ ಕಲ್ಮಷಗಳಿಂದಲೂ ಮುಕ್ತಮಾಡಿ ಭದ್ರವಾದ ಬುನಾದಿಯಮೇಲೆ ಸ್ಥಿರವಾಗಿ ನಿಲ್ಲಿಸಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯರು ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿ, ಭರತ ಖಂಡದ ಧಾರ್ಮಿಕ ಐಕ್ಯತೆಯನ್ನು ಸಾರಿದಂತೆಯೇ, ಪ್ರತಿಪೀಠಕ್ಕೂ ಬೇರೆಬೇರೆ ಪ್ರದೇಶದವರನ್ನೇ ಆಚಾರ್ಯರಾಗಿ ನೇಮಿಸಿ ಭಾವೈಕ್ಯತೆಯನ್ನು ಉಂಟುಮಾಡಿದರು. ರಾಷ್ಟ್ರೀಯ ಭಾವನೆಯನ್ನು ಮೊತ್ತಮೊದಲಿಗೆ ಮೂಡಿಸಿದ ಮಹಾನುಭಾವರೂ ಅವರೇ. ರಾಷ್ಟ್ರಕ್ಕೆಲ್ಲಾ ಒಂದು ಧರ್ಮ - ಸನಾತನ ವೈದಿಕ ಧರ್ಮ; ರಾಷ್ಟ್ರಕ್ಕೆಲ್ಲಾ ಒಂದು ಭಾಷೆ - ಸಂಸ್ಕೃತ ಭಾಷೆ, ಇವನ್ನು ಶ್ರೀ ಶಂಕರರು ಉದ್ಧರಿಸಿ, ಭರತ ಖಂಡದ ಐಕ್ಯತೆಯನ್ನು ರಾಜಕೀಯವಾಗಿ ಎಷ್ಟೇ ಭಿನ್ನತೆಯಿರಲಿ - ಧಾರ್ಮಿಕವಾಗಿ ಒಂದೇ ಎಂಬುದನ್ನು ಘೋಷಿಸಿದ್ದರು.

ಶ್ರೀ ಶಂಕರ ಭಗವತ್ಪಾದರ ನಂತರ ಸನಾತನ ಧರ್ಮವು ಹೆಚ್ಚು ಆಪತ್ತುಗಳಿಲ್ಲದೇ ವರ್ಧಿಸಿತು. ಎರಡು ಮೂರು ಶತಮಾನಗಳ ನಂತರ ಸನಾತನ ಧರ್ಮದ ಒಳ ಪ್ರಭೇದಗಳಾಗಿದ್ದ ವಿವಿಧ ಮತಗಳಲ್ಲಿ ಪೈಪೋಟಿ ಆರಂಭವಾಯಿತು. ಹನ್ನೊಂದು ಹನ್ನೆರಡನೆ ಶತಮಾನದಲ್ಲಿ ದ್ವೈತಮತಗಳಾದ ಶೈವ, ವೈಷ್ಣವ ಮತಗಳಲ್ಲಿ ಪರಸ್ಪರ ಒಳಜಗಳಗಳು ಪ್ರಾರಂಭವಾದವು. ಶಿವನೇ ಪರಾತ್ಪರ ವಸ್ತು, ಆತನನ್ನು ನಂಬಿ ಪೂಜಿಸದವರು ಭವಿಗಳು ಎಂದು ಶೈವರು ಸಾರಿದರು. ಹರಿಯೇ (ನಾರಾಯಣನೇ) ಸರ್ವೋತ್ತಮ, ಆತನನ್ನು ನಂಬಿ ಶರಣಾಗತರಾಗದವರಿಗೆ ನರಕ ಎಂದು ವೈಷ್ಣವರು ಸಾರಿದರು. ಶೈವರಲ್ಲದವರಿಗೆ ಮುಕ್ತಿ ಇಲ್ಲವೆಂದು ಶೈವರೂ, ವೈಷ್ಣವರಲ್ಲದವರಿಗೆ ಮುಕ್ತಿ ಇಲ್ಲವೆಂದು ವೈಷ್ಣವರೂ ಪ್ರಚಾರಮಾಡಲಾರಂಭಿಸಿದ್ದರು. ಮತಮತಗಳ ಪೈಪೋಟಿಯಿಂದ ಜನಗಳ ಮತ್ತು ದೇಶದ ಐಕಮತ್ಯಕ್ಕೆ ಕುಂದು ಬಂದಿತ್ತು. ಶ್ರೀ ಶಂಕರರು ಬೋಧಿಸಿದ್ದ ಸಾಧಿಸಿದ್ದ ಧರ್ಮಸಮನ್ವಯವನ್ನು ಮರೆತು, ಸಾಮಾಜಿಕ ಏಕತೆಯನ್ನು ಒಡೆದು ಈ ಮತೀಯ ಕಲಹಗಳು ಪ್ರತ್ಯೇಕತೆಗೆ ದಾರಿಮಾಡಿಕೊಟ್ಟವು. ಈ ಸಮಯದಲ್ಲಿ ಪರಕೀಯರು - ಮುಸಲ್ಮಾನರು - ಆಗಲೇ ಭಾರತದ ಭೂಭಾಗಕ್ಕೆ ಕಾಲಿಟ್ಟಿದ್ದರು. ಆಗ ದೇಶದಲ್ಲಿದ್ದ ರಾಜಕೀಯ ಅಸ್ಥಿರತೆ, ಧಾರ್ಮಿಕ ಗೊಂದಲ, ಸಾಮಾಜಿಕ ಅನೈಕಮತ್ಯಗಳ ಉಪಯೋಗ ಪಡೆದು ಮುಸಲ್ಮಾನರು ಭಾರತದ ಉತ್ತರ ಭಾಗವೆಲ್ಲವನ್ನೂ, ತಮ್ಮ ಹಿಡಿತಕ್ಕೆ ತಂದುಕೊಂಡು, ದಕ್ಷಿಣ ಭಾರತದ ಮೇಲೂ ಧಾಳಿಯಾರಂಭಿಸಿದ್ದರು. ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕನಾಗಿದ್ದ ಮಲ್ಲಿಕಾಫರನು ದೇವಗಿರಿಯ ಯಾದವರನ್ನೂ, ಓರಂಗಲ್ಲಿನ ಕಾಕತೀಯರನ್ನೂ, ದ್ವಾರಸಮುದ್ರದ ಹೊಯ್ಸಳರನ್ನೂ, ಮಧುರೆಯ ಪಾಂಡ್ಯರನ್ನೂ ಸೋಲಿಸಿದ್ದನು. ರಾಮೇಶ್ವರದವರೆಗೂ ದಂಡಯಾತ್ರೆ ನಡೆಸಿ ಅನೇಕ ಶೈವ ವೈಷ್ಣವ ದೇವಾಲಯಗಳನ್ನು ನಾಶಗೊಳಿಸಿದ್ದನು. ಅತ್ಯಾಚಾರ ಅನಾಚಾರಗಳನ್ನು ನಡೆಸಿದ್ದನು.

ಇಂತಹ ಘೋರ ವಿಪತ್ತಿನ ಸಮಯದಲ್ಲಿ ಧರ್ಮ ಮತ್ತು ದೇಶದ ರಕ್ಷಣೆಗೆ ಧಾವಿಸಿದ್ದವರು ಶೃಂಗೇರಿಯ ಜಗದ್ಗುರುಗಳಾಗಿದ್ದ ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳು.

Sri Vidyabharathi Book Centre, Sringeri

ಅದಕ್ಕೆ ತಮ್ಮ ತಪಸ್ಸಿನ ಫಲವನ್ನೆಲ್ಲಾ ಧಾರೆಯೆರೆದ ಮಹಾತ್ಮರು, ಅವರ ಪರಮ ಗುರುಗಳಾಗಿದ್ದ ಶ್ರೀ ವಿದ್ಯಾತೀರ್ಥರು ಮತ್ತು ಸೋದರ ಯತಿಗಳಾಗಿದ್ದ ಶ್ರೀ ಭಾರತೀ ಕೃಷ್ಣತೀರ್ಥರು. ಆಗ ದೇಶಕ್ಕೆ ಬಂದಿದ್ದ ಮಹದ್ಭಯವನ್ನೂ ಧರ್ಮಕ್ಕೆ ಬಂದಿದ್ದ ಘೋರ ವಿಪತ್ತನ್ನೂ ಗುರುತಿಸಿದವರು ಶ್ರೀ ವಿದ್ಯಾರಣ್ಯರು. ಅವರು ಶ್ರೀ ವಿದ್ಯಾತೀರ್ಥರಿಂದ ಸನ್ಯಾಸ ಸ್ವೀಕರಿಸಿ ರಾಷ್ಟ್ರದ ಸರ್ವಾಂಗೀಣ ಉನ್ನತಿಗಾಗಿ ತಪಸ್ಸುಮಾಡಿ ನೂತನ ಹಿಂದೂ ಸಾಮ್ರಾಜ್ಯವನ್ನೇ ನಿರ್ಮಿಸಿದರು. ಹೊಸ ರಾಜ್ಯದಲ್ಲಿ ಶೈವ, ವೈಷ್ಣವ, ಶಾಕ್ತ ಮೊದಲಾದ ಭೇದಭಾವಗಳಿರದಂತೆ ನೂತನ ಸಾಮ್ರಾಜ್ಯದ ಲಾಂಛನ ವೈಷ್ಣವರ ವರಾಹವೂ, ರಾಷ್ಟ್ರದ ಮುದ್ರೆಯಲ್ಲಿ ಶೈವರ ವಿರೂಪಾಕ್ಷ ಅಂಕಿತವೂ, ರಾಷ್ಟ್ರದ ದೇವತೆ ಶಾಕ್ತರ ಶ್ರೀ ಭುವನೇಶ್ವರಿಯೂ ಆಗಿರುವಂತೆ ವ್ಯವಸ್ಥೆಮಾಡಿ ಸನಾತನ ಧರ್ಮದ ರಕ್ಷಣೆಗೆ ವಿವಿಧ ಮತಗಳ ಐಕ್ಯತೆಯು ಅಗ[illegible]ಬುದನ್ನು ತೋರಿಸಿಕೊಟ್ಟರು. ಶೈವ, ವೈಷ್ಣವ, ಶಾಕ್ತ ಎಂಬ ಭೇದಭಾವವನ್ನು ಸಂಕುಚಿತ ಮನೋಭಾವವನ್ನು ನಿರಾಕರಿಸಿ ಎಲ್ಲ ಮತಗಳಿಗೂ ಪ್ರೋತ್ಸಾಹ ಕೊಟ್ಟರು. ಕಂಚಿ, ಶ್ರೀರಂಗ, ಮಧುರೆ, ರಾಮೇಶ್ವರ ಮುಂತಾದ ದೇವಾಲಯಗಳಲ್ಲಿ ಪುನಃ ಪೂಜಾದಿಗಳಿಗೆ ವ್ಯವಸ್ಥೆಮಾಡಿದರು. ಶ್ರೀ ವಿದ್ಯಾರಣ್ಯರ ತಪಃಪ್ರಭಾವದಿಂದ ಧರ್ಮಕ್ಕೂ ದೇಶಕ್ಕೂ ಬಂದಿದ್ದ ಮಹತ್ತರವಾದ ಅಪಾಯ ದೂರವಾಯಿತು.

ಐದು ಶತಮಾನಗಳ ನಂತರ ಪ್ರಾಪ್ತವಾದುದು ಇನ್ನೂ ಭೀಕರವಾದ ವಿಪತ್ತು. ಪಾಶ್ಚಾತ್ಯ ವೈಜ್ಞಾನಿಕ ಕೈಗಾರಿಕಾ ನಾಗರೀಕತೆಯ ಪ್ರಭಾವದಿಂದ ಸನಾತನ ಧರ್ಮ ಮತ್ತು ಭರತಖಂಡದ ಮೇಲೆ ಬಂದಿರಗಿದ ವಿಪತ್ತು ಅತ್ಯಂತ ಘೋರತಮವಾದುದು. ಭಾರತೀಯ ಮೌಲ್ಯಗಳಿಗೆ ಪಾಶ್ಚಾತ್ಯ ನಾಗರಿಕತೆಯು ಒಡ್ಡಿದ್ದ ಸವಾಲು ನಾನಾ ವಿಧವಾಗಿತ್ತು. ಭಾರತೀಯರ ಸಹಜ ಗುಣಗಳಾಗಿದ್ದ ಶಾಂತಿ ಸಹನೆ ಸತ್ಯಪ್ರಿಯತೆ ಧರ್ಮ ಶ್ರದ್ಧೆ ಸೌಜನ್ಯ ಮುಂತಾದುವೆಲ್ಲವೂ ಪರೀಕ್ಷೆಗೆ ಈಡಾದವು. ಧರ್ಮವು ಕೇವಲ ಕೆಲವರ ಸ್ವತ್ತಾಗಿ ಅವರು ಜನಸಾಮಾನ್ಯರ ಮನಸ್ಸಿನ ಮಟ್ಟಕ್ಕೆ ಹೊಂದಿಕೊಳ್ಳಲೇ ಇಲ್ಲ. ಹೀಗಾಗಿ ತಿಳಿವು ಉಳ್ಳವರಲ್ಲಿ ಇಲ್ಲದವರಲ್ಲಿ ಇದ್ದ ವ್ಯತ್ಯಾಸವು ದೊಡ್ಡದಾಗುತ್ತಾ ಬಂದಿತು. ಪಾಶ್ಚಾತ್ಯ ನಾಗ[illegible]ಯು ಒಡ್ಡುತ್ತಿದ್ದ ಆಮಿಷ ಪ್ರಲೋಭನೆಗಳು ಸುಖ ಸೌಲಭ್ಯಗಳು ಭಾರತೀಯರನ್ನು ಆಕರ್ಷಿಸಿದುವು. [illegible]ಗೂ ಭಾರತದ ಮೇಲ್ವರ್ಗವೆನ್ನಿಸಿಕೊಳ್ಳುವ ಜನತೆ ಮೊದಲು ಮರುಳಾದರು. ಅತ್ತ ಪಾಶ್ಚಾತ್ಯರ ಸಾಹಸಮಯವಾದ ವೈಚಾರಿಕ ಜೀವನವನ್ನು ಕಂಡು ಮುಗ್ಧರಾದರೂ ಅದನ್ನು ಪೂರ್ಣವಾಗಿ ಅಂಗೀಕರಿಸಲಾರದೆ ಹೋದರು. ಇತ್ತ ಭಾರತೀಯ ಸಹಜ ಸ್ವಭಾವಯುಕ್ತವಾದ ತೃಪ್ತಿ, ಶಾಂತಿ, ಆಂತರಿಕ ಅನ್ವೇಷಣೆಯ ಜೀವನ ಕ್ರಮವನ್ನೂ ಸ್ಥೈರ್ಯವಾಗಿ ಅನುಸರಿಸಲಾರದೆ ಹೋದರು.

ಹೀಗೆ ಭಾರತೀಯ ಜನಜೀವನವು ಅಡ್ಡಗೋಡೆಯ ಮೇಲೆ ಇದ್ದಾಗ, ಕತ್ತರಿಯ ಇಕ್ಕಟ್ಟಿನಲ್ಲಿ ಸಿಲುಕಿದ್ದಾಗ ಅದರ ರಕ್ಷಣೆಗೆ ಧಾವಿಸಿದವರು, ಶೈವ ವೈಷ್ಣವ ಶಾಕ್ತ ಎಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಥಗಳನ್ನು ಮೀರಿನಿಂತ, ಸನಾತನ ಧರ್ಮದ ಪೂರ್ಣ ಸ್ವರೂಪ ದರ್ಶನ ಮಾಡಿದ್ದ ಮಹಾನುಭಾವರುಗಳು. ಶ್ರೀ ರಾಜಾರಾಮ ಮೋಹನರಾಯ್, ಸ್ವಾಮಿ ಶ್ರೀ ದಯಾನಂದ ಸರಸ್ವತೀ, ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ವೃದ್ಧನರಸಿಂಹ ಭಾರತೀ, ಶ್ರೀ ಸದ್ಗುರು ಬ್ರಹ್ಮಚೈತನ್ಯ, ಶ್ರೀ ಸ್ವಾಮಿ ವಿವೇಕಾನಂದ, ಶ್ರೀ ಸ್ವಾಮಿ ರಾಮತೀರ್ಥ, ಶ್ರೀ ಶಿವಾಭಿನವ ನರಸಿಂಹ ಭಾರತೀ, ಶ್ರೀ ವಾಸುದೇವಾನಂದ ಸರಸ್ವತೀ, ಶ್ರೀ ಅರವಿಂದ ಮಹರ್ಷಿ, ಶ್ರೀ ರಮಣ ಮಹರ್ಷಿ, ಶ್ರೀ ಭಾರತೀ ಕೃಷ್ಣ ತೀರ್ಥ, ಶ್ರೀ ಚಂದ್ರಶೇಖರ ಭಾರತೀ ಇವರೇ ಮೊದಲಾದ ಅನೇಕ ಜನ ಮಹಾ ತಪಸ್ವಿಗಳು, ಜನತೆಯಲ್ಲಿ ಧಾರ್ಮಿಕ, ನೈತಿಕ ಜಾಗ್ರತಿಯನ್ನು ಮೂಡಿಸಿದ ಮಹಾತ್ಮರು.

ಇವರಲ್ಲಿ ಶ್ರೀ ವೃದ್ಧ ನರಸಿಂಹ ಭಾರತೀ, ಶ್ರೀ ಶಿವಾಭಿನವ ನರಸಿಂಹ ಭಾರತೀ ಮತ್ತು ಶ್ರೀ ಚಂದ್ರಶೇಖರ ಭಾರತೀ ಇವರುಗಳು, ಶ್ರೀ ಶಂಕರ ದಕ್ಷಿಣಾಮ್ನಾಯಪೀಠದ ಶೃಂಗೇರಿಯ ಗುರುಪರಂಪರೆಗೆ ಸೇರಿದ ಮಹಾನುಭಾವರು. ಇವರೆಲ್ಲರೂ ಮಹಾ ಪರಿವ್ರಾಜಕರಾಗಿದ್ದು ಭರತ ಖಂಡದ ಬಹುಭಾಗವನ್ನು ಸಂಚರಿಸಿ ಭಾರತೀಯರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪುನರುತ್ಥಾನಕ್ಕೆ ಅಮೂಲ್ಯವಾದ ಕಾರ್ಯವೆಸಗಿದ್ದಾರೆ. ಈ ಪರಂಪರೆಯಲ್ಲಿ ಶ್ರೀ ಶಂಕರಭಗವತ್ಪಾದರ ಧರ್ಮರಕ್ಷಣೆ ಮತ್ತು ಪ್ರಸಾರ ಕಾರ್ಯವನ್ನು ಈಗ ಮುಂದುವರೆಸುತ್ತಿರುವವರೇ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು, ಶ್ರೀ ಚಂದ್ರಶೇಖರ ಭಾರತಿಯವರ ಶಿಷ್ಯಶ್ರೇಷ್ಠರು. ಈ ಕೃತಿಗೆ ನಾಯಕರು. ಶ್ರೀ ಶೃಂಗೇರಿ ಜಗದ್ಗುರು ಪೀಠದ ೩೫ ನೆಯ ಆಚಾರ್ಯರು.

೨. ಗುರು ಶ್ರೀ ಚಂದ್ರಶೇಖರ ಭಾರತೀ

ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರ ಜೀವನ ಚರಿತ್ರೆಯನ್ನು ಆರಂಭಿಸುವ ಮುನ್ನ ಅವರ ಗುರುಗಳಾಗಿದ್ದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಜೀವನೇತಿಹಾಸದ ಸೂಕ್ಷ್ಮಾವಲೋಕನವು ಆವಶ್ಯಕ. ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಅದ್ವೈತ ತತ್ವವೇ ಮೂರ್ತಿಮತ್ತಾಗಿದ್ದ ಮಹಾನುಭಾವರು. ಅವರ ಗುರುಗಳಾಗಿದ್ದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀಯವರು ಅಭಿನವ ಶಂಕರರೆಂದು ಪ್ರಖ್ಯಾತರಾಗಿದ್ದರೆ ಶ್ರೀ ಚಂದ್ರಶೇಖರ ಭಾರತೀಯವರು ದಕ್ಷಿಣಾಮೂರ್ತಿಯ ಅವತಾರವೆಂದೇ ಪ್ರಸಿದ್ಧರಾಗಿದ್ದರು.

ಶ್ರೀ ಗುರುದೇವರ ಪೂರ್ವಾಶ್ರಮದ ಹೆಸರು ನರಸಿಂಹ ಶಾಸ್ತ್ರಿ ಎಂದು. ಅವರು ತಮ್ಮ ಮಾತಾಪಿತರಿಗೆ ಏಕಮಾತ್ರ ಪುತ್ರರು. ಹದಿನಾಲ್ಕು ಮಕ್ಕಳನ್ನು ಪಡೆದ ಆ ತಾಯಿ ತಂದೆಗೆ ಎಲ್ಲ ಮಕ್ಕಳೂ ಮೃತರಾಗಿ ಉಳಿದುದು ಕೇವಲ ಒಂದು ಮಗು. ಆ ಮಗು ಗುರುದೇವತಾ ಅನುಗ್ರಹದಿಂದ ಲಭ್ಯವಾಗಿದ್ದುದರಿಂದ ಮಾತಾಪಿತರು ಆ ಮಗುವನ್ನು ಕಡೆಗೆ ಗುರುಗಳಿಗೇ ಅರ್ಪಿಸಬೇಕಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾಲ್ಯದಲ್ಲಿಯೇ ತುಂಬಾ ಪ್ರತಿಭೆಯನ್ನೂ ಪ್ರೌಢಿಮೆಯನ್ನೂ ಪಡೆದಿದ್ದ ಇವರು ಶ್ರೀ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರ ಕಟಾಕ್ಷಕ್ಕೆ ಬಲು ಬೇಗ ಪಾತ್ರರಾದರು. ಗುರುಗಳಿಂದ ಪೂರ್ಣವಾಗಿ ಆಕರ್ಷಿಸಲ್ಪಟ್ಟರು. ವಯಸ್ಸಿಗೆ ಮೀರಿದ ಬುದ್ಧಿವಂತರೆಂದು ಪ್ರಶಂಸೆಗೆ ಪಾತ್ರರಾದರೂ, ನಯ, ವಿನಯ, ಸೌಜನ್ಯ ಗುರುಹಿರಿಯರಲ್ಲಿ ನಮ್ರಭಾವನೆ ಪರೋಪಕಾರ ಬುದ್ಧಿ ಇವೆಲ್ಲ ನರಸಿಂಹಶಾಸ್ತ್ರಿಗಳ ಹುಟ್ಟು ಗುಣಗಳಾಗಿದ್ದುವು. ಶೃಂಗೇರಿಯಲ್ಲಿಯೇ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ನಡೆಯಿತು. ಸಂಸ್ಕೃತದ ವಿದ್ಯಾಭ್ಯಾಸ ಬಂಡಿಗಡಿ ಶ್ರೀ ವೆಂಕಟರಾಮಭಟ್ಟರಿಂದ ಆರಂಭಿಸಲ್ಪಟ್ಟು ಸದ್ವಿದ್ಯಾ ಸಂಜೀವಿನೀ ಪಾಠಶಾಲೆಯಲ್ಲಿ ಮುಂದುವರೆಯಿತು. ಅಲ್ಲಿ ತರ್ಕಶಾಸ್ತ್ರ ಪೂರ್ಣವಾದ ನಂತರ ಬೆಂಗಳೂರು ಶಂಕರ ಮಠದ ಪಾಠಶಾಲೆಯಲ್ಲಿ ಪ್ರೌಢ ವಿದ್ಯಾಭ್ಯಾಸವು ಶ್ರೀ ವೆಳ್ಳೂರು ಸುಬ್ರಹ್ಮಣ್ಯ ಶಾಸ್ತ್ರಿಗಳವರಲ್ಲಿ ಮುಂದುವರೆಯಿತು. ಆ ವೇಳೆಗೆ ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳು ನಿರ್ಯಾಣ ಹೊಂದಲು ಶ್ರೀ ನರಸಿಂಹ ಶಾಸ್ತ್ರಿಗಳು ಆ ಗುರುಗಳ ಅಪೇಕ್ಷೆಯಂತೆ ಶೃಂಗೇರಿಗೆ ದಯಮಾಡಿಸಿ ಸನ್ಯಾಸಾಶ್ರಮ ಸ್ವೀಕರಿಸಿ ಶ್ರೀ ಚಂದ್ರಶೇಖರ ಭಾರತೀ ಎಂಬ ಅಭಿದಾನವನ್ನು ಪಡೆದರು.

ಶ್ರೀ ಶಿವಾಭಿನವ ನರಸಿಂಹಭಾರತೀಯವರಿಗೆ ಇದ್ದಂತೆಯೇ ಶ್ರೀ ಚಂದ್ರಶೇಖರ ಭಾರತೀಯವರಿಗೂ ಕೇವಲ ಬಾಲ್ಯದಿಂದಲೇ ವೈರಾಗ್ಯ ಉಂಟಾಗಿತ್ತು. ಅವರನ್ನು ಪೀಠಕ್ಕೆ ನಿಯೋಜಿಸಿ ಅವರು ಶೃಂಗೇರಿಗೆ ಒರುವ ಮುನ್ನವೇ ಅವರ ಗುರುಗಳು ಮುಕ್ತರಾಗಿದ್ದರಷ್ಟೆ. ಆ ಸಮಯದಲ್ಲಿ ಮೈಸೂರು ದೊರೆಯಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಕಾಣಲು ನರಸಿಂಹ ಶಾಸ್ತ್ರಿಗಳು ಬೆಂಗಳೂರು ಅರಮನೆಗೆ ಹೋಗಿದ್ದರು. ಮುಂದೆ ಗುರುಗಳಾಗಲಿದ್ದ ಶಾಸ್ತ್ರಿಗಳನ್ನು ಕುರಿತು ಮಹಾರಾಜರು “ ತಮ್ಮ ಅಪೇಕ್ಷೆಗಳು ಯಾವುವೆಂಬುದನ್ನು ತಿಳಿಸಿದಲ್ಲಿ ಅವುಗಳನ್ನು ನನ್ನ ಕರ್ತವ್ಯವೆಂದು ಭಾವಿಸಿ ಪೂರೈಸುತ್ತೇನೆ ” ಎಂದು ಬಿನ್ನವಿಸಲು ಆಗ ಗುರುಗಳಾಗಲಿದ್ದ ಶಾಸ್ತ್ರಿಗಳು “ ಈ ದೊಡ್ಡ ಧಾರ್ಮಿಕ ಪೀಠದ ಆಡಳಿತ ಮತ್ತು ವ್ಯವಹಾರಗಳ ಹೊರೆ ನನ್ನ ಮೇಲೆ ಬೀಳದಂತೆ ವ್ಯವಸ್ಥೆ ಮಾಡಿದರೆ ಸಾಕು. ನನ್ನಷ್ಟಕ್ಕೆ ನಾನು ಅಧ್ಯಯನ ಅನುಷ್ಠಾನಗಳಲ್ಲಿ ಚಿಂತನ ಮನನ ನಿಧಿಧ್ಯಾಸನಗಳಲ್ಲಿ ತೊಡಗಲು ಅವಕಾಶವಿರುವಂತೆ ಮಾಡಿಕೊಟ್ಟರೆ ಸಾಕು ” ಎಂದು ನುಡಿದಿದ್ದರು. ಈ ನುಡಿಗಳನ್ನು ಕೇಳಿ ಮಹಾರಾಜರಿಗೂ ಅವರ ಬಳಿ ಇದ್ದ ಇತರರಿಗೂ ಅತ್ಯಾಶ್ಚರ್ಯವಾಯಿತು. ತಮ್ಮ ತಾಯಿಯವರು ಸನ್ಯಾಸ ಸ್ವೀಕಾರಕ್ಕೆ ಅನುಮತಿ ಕೊಡದಿದ್ದಾಗ ಶಾಸ್ತ್ರಿಗಳು ಆಕೆಯನ್ನು ಪರಿಪರಿಯಾಗಿ ಬೇಡಿದ್ದರು. ಆಕೆ ಒಪ್ಪಲು ಸಿದ್ಧವಿರಲಿಲ್ಲ, ದೃಢವಾಗಿದ್ದರು. ಆಗ ನರಸಿಂಹ ಶಾಸ್ತ್ರಿಗಳು “ ಅಮ್ಮಾ ಹದಿಮೂರು ಜನ ಮಕ್ಕಳನ್ನು ಯಮರಾಜನಿಗೆ ಒಪ್ಪಿಸಿದೆ. ಆದರೆ ಒಂದು ಮಗುವನ್ನಾದರೂ ಗುರುರಾಜರಿಗೆ ಒಪ್ಪಿಸಬಾರದೇ ” ಎಂದು ಕೇಳಿದ್ದರು. ಅವರು ಹುಟ್ಟುತ್ತಲೇ ವೈರಾಗ್ಯ ಪ್ರಭುವಾಗಿದ್ದರೆಂಬುದಕ್ಕೆ ಇನ್ನು ಬೇರೆ ನಿದರ್ಶನಬೇಕೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸನ್ಯಾಸ ಸ್ವೀಕರಿಸಿ ಪೀಠಕ್ಕೆ ಬಂದೊಡನೆಯೇ ಶ್ರೀ ಚಂದ್ರಶೇಖರ ಭಾರತೀಯವರು ಅಕ್ಷರಶಃ ತಪೋನುಷ್ಠಾನಗಳಲ್ಲಿಯೇ ಮಗ್ನರಾಗಿದ್ದು ಬಿಟ್ಟರು. ಶಿಷ್ಯರನ್ನು ಅನುಗ್ರಹಿಸುವುದಕ್ಕಾಗಿ ಒಂದೆರಡು ಸಲ ಸಂಚಾರನಿರತರಾಗಿದ್ದು ಶೃಂಗೇರಿಗೆ ಮರಳಿದ ನಂತರ ಪೂರ್ಣ ವಿರಕ್ತರಾಗಿ ಎಲ್ಲ ಬಂಧನಗಳಿಂದಲೂ ವಿಮುಕ್ತರಾಗಿದ್ದರು.

ಗುರುದೇವರು ತಮ್ಮ ಸುತ್ತಮುತ್ತಲಿನ ಪರಿಸ್ಥಿತಿಯನ್ನು ಮರೆತು ಉಗ್ರ ತಪಸ್ಸಿನಲ್ಲಿ ಮಗ್ನರಾಗಿರುತ್ತಿದ್ದರು. ಹೆಚ್ಚು ಕಾಲ ಏಕಾಂತವಾಸದಲ್ಲಿಯೇ ಇದ್ದುಬಿಡುತ್ತಿದ್ದರು. ಮಠದ ಆಡಂಬರ ವೈಭವ ಗೌರವಸೂಚಕವಾದ ಲಾಂಛನಗಳು ಬಿರುದು ಬಾವಲಿಗಳು ಮುಂತಾದುವೆಲ್ಲವನ್ನೂ ತ್ಯಜಿಸಿಬಿಟ್ಟಿದ್ದ ಗುರುದೇವರು ತೀರಾ ಸರಳ ಜೀವನವನ್ನು ಅಂಗೀಕರಿಸಿದ್ದರು. ಆಹಾರ ತೀರಾ ಅತ್ಯಲ್ಪವಾಗಿತ್ತು. ನಿದ್ರೆಯನ್ನು ವರ್ಜಿಸಿದ್ದರು. ಅವರಿಗೆ ವೈಯುಕ್ತಿಕ ಅಗತ್ಯವೆಂಬುದೇ ಇಲ್ಲವಾಯಿತು. ಉಡುವ ಬಟ್ಟೆ ತೀರಾ ಸಾಮಾನ್ಯ. ಎಷ್ಟೋ ವೇಳೆ ಪಾದುಕೆಗಳನ್ನೂ ಧರಿಸುತ್ತಿರಲಿಲ್ಲ.

ಗುರುದೇವರ ತಪಸ್ಸು ಅಧಿಕವಾಗುತ್ತಾ ಬಂದಂತೆಲ್ಲಾ ಅವರ ಚರ್ಯೆಗಳು ಅಸ್ವಾಭಾವಿಕವಾದುವು. ಹತ್ತಿರವಿದ್ದವರಿಗೆ ಗುರುದೇವರು ಮೇಲೆ ಮೇಲೆ ಏರುತ್ತಿದ್ದ ಆಧ್ಯಾತ್ಮಿಕ ಸ್ತರದ ಪರಿಚಯು ಇರಲಿಲ್ಲ. ಅವರು ಗುರುದೇವರ ನಡೆನುಡಿಯನ್ನು ಅರ್ಥಮಾಡಿಕೊಳ್ಳಲಾರದೆ ತಪ್ಪಾಗಿ ಗ್ರಹಿಸಿದ್ದರು. ಗುರುಗಳಿಗೆಲ್ಲೋ ಬುದ್ಧಿಭ್ರಮೆಯುಂಟಾಗಿದೆಯೆಂದು ಭಾವಿಸಿದರು. ಅದು ಅನೇಕರಿಗೆ ಚಿಂತೆಗೆ ಕಾರಣವಾಯಿತು. ಬಹುಜನರು ಗುರುಗಳಿಗೆ ಅಸ್ವಸ್ಥತೆಯೆಂದೇ ನಂಬಿದ್ದರು. ಗುರುದೇವರ ಆಹಾರ ಪಾನೀಯಗಳ ಬಗೆಗೆ ಆಪ್ತ ನೌಕರರು ಮುನ್ನೆಚ್ಚರಿಕೆ ವಹಿಸಿದ್ದರು. ಆಹಾರವನ್ನು ಸರಿಯಾಗಿ ಸ್ವೀಕರಿಸುತ್ತಿಲ್ಲವೆಂದು ತಿಳಿದು ಆಹಾರ ತೆಗೆದುಕೊಳ್ಳುವವರೆಗೆ ಕಾದು ಕುಳಿತರು. ಬಲವಂತವಾಗಿ ಹೆಚ್ಚು ಆಹಾರ ಬಡಿಸಿದರು. ಆ ಆಹಾರದಲ್ಲಿ ಔಷಧವನ್ನು ಬೆರಸಿ ಹೆಚ್ಚು ಹಸಿವು ಉಂಟಾಗುವಂತೆ ಮಾಡಿದರು. ಗುರುದೇವರು ಸರಿಯಾಗಿ ನಿದ್ರೆಮಾಡುತ್ತಿಲ್ಲವೆಂದು ತಿಳಿದು ಹೆಚ್ಚು ನಿದ್ರೆಬರುವಂತೆ ಕುಡಿಯುವ ಹಾಲಿನಲ್ಲಿ ಔಷಧ ಬೆರೆಸಿ ಕೊಟ್ಟರು. ಈ ಎಲ್ಲ ಪ್ರಯತ್ನಗಳು ತಮ್ಮ ಆಧ್ಯಾತ್ಮಿಕ ಸಾಧನೆಗೆ ಅಡ್ಡಿ ಆತಂಕಗಳನ್ನು ಒಡ್ಡುತ್ತಿದ್ದುದರಿಂದ ತಮ್ಮ ಮಾರ್ಗದಲ್ಲಿ ವಿಘ್ನ ಉಂಟುಮಾಡಬಾರದೆಂದು ಅನುಚರರಿಗೆ ಗುರುದೇವರು ಸ್ಪಷ್ಟ ನಿರ್ದೇಶನವನ್ನು ನೀಡಬೇಕಾಯಿತು.

ಗುರುದೇವರಿಗೆ ಆಧ್ಯಾತ್ಮಿಕ ಸಿದ್ಧಿಯೇ ಧ್ಯೇಯವಾಗಿದ್ದರೆ ಶಿಷ್ಯಜನ ಮತ್ತು ಪರಿಜನಕ್ಕೆ ಅದರ ಪರಿವೆ ಇರಲಿಲ್ಲ. ಆ ಶಿಷ್ಯರಿಗೆ ಇದ್ದುದು ಗುರುದೇವರ ಶಾರೀರಕ ಮತ್ತು ಮಾನಸಿಕ ಆರೋಗ್ಯದ ಚಿಂತೆ. ಅನೇಕ ಜನ ವೈದ್ಯರೂ ಬಂದು ನಾನಾವಿಧವಾಗಿ ಪರೀಕ್ಷೆ ಮಾಡಿ ಇದು ತಮಗೆ ಅರ್ಥವಾಗದ ಸ್ಥಿತಿ ಎಂದರ್ಥ ಮಾಡಿಕೊಂಡು ತೆಪ್ಪಗಾದರು. ಕೆಲಜನ ವೈದ್ಯರು ಗುರುಗಳಿಂದಲೇ ತಮ್ಮ ಸೆಂಟೀಷ್ಟರ ಕ್ಷೇಮಕ್ಕಾಗಿ ಅನುಗ್ರಹವನ್ನು ಪಡೆದಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಲ್ಪದಿನಕ್ಕೆಲ್ಲಾ ಗುರುದೇವರ ತಪಸ್ಸು ಪರಾಕಾಷ್ಠೆಯನ್ನು ಮುಟ್ಟಿ ಒಂದು ದಿನ ಗುರುದೇವರು ಅಂತರ್ಮುಖಿಗಳಾಗಿ ಬಿಟ್ಟರು. ಈ ಅಂತರ್ಮುಖ ಸ್ಥಿತಿ ಕೆಲವು ದಿನಗಳ ನಂತರ ಗುರುದೇವರನ್ನು ಅವಧೂತ ಸ್ಥಿತಿಗೆ ಮುಟ್ಟಿಸಿತು. ಅಂದಿನಿಂದ ಅವರು ಎಲ್ಲ ಕಡೆಯಲ್ಲಿಯೂ, ಎಲ್ಲರಲ್ಲಿಯೂ, ಎಲ್ಲ ಕಾಲಗಳಲ್ಲಿಯೂ ಪರಮಾತ್ಮ ದರ್ಶನ ಪಡೆಯುತ್ತಿದ್ದರು. ತಮ್ಮನ್ನು ತಾವೇ ಕಂಡುಕೊಳ್ಳುತ್ತಿದ್ದರು, ಶುಕದೇವನಂತೆ, ಸದಾಶಿವ ಬ್ರಹ್ಮೇಂದ್ರರಂತೆ, ಆ ಸ್ಥಿತಿಯಲ್ಲಿ ಅವರಿದ್ದಾಗ ಅವರ ಮಾತು ಆಚರಣೆ ಎಲ್ಲವೂ ಪರಿಜನಕ್ಕೆ ಪವಾಡಗಳಂತೆ ಗೋಚರಿಸುತ್ತಿದ್ದವು.

ವಿಶ್ವವಿಖ್ಯಾತವಾದ ಒಂದು ದೊಡ್ಡ ಮಠದ ಅಧಿಪತಿಯಾದವರು ಮಠದ ಆಗುಹೋಗುಗಳ ಬಗೆಗೆ ಅನಾಸಕ್ತರಾಗಿದ್ದರೆ, ದೈನಂದಿನ ಆಡಳಿತ, ಲೆಕ್ಕಪತ್ರಗಳ ವಿಚಾರವಲ್ಲದೆ ಉಳಿದ ಮುಖ್ಯ ವಿಷಯಗಳ ಬಗೆಗೂ ನಿರ್ಲಿಪ್ತರಾಗಿದ್ದರೆ ಪ್ರತಿದಿನವೂ ಬರುವ ನೂರಾರು ಜನ ಭಕ್ತರ ಯೋಗಕ್ಷೇಮವನ್ನು ವಿಚಾರಿಸದಿದ್ದರೆ, ಅವರ ಕಷ್ಟ ದುಃಖಗಳಲ್ಲಿ ಸಾಂತ್ವನವನ್ನು ನೀಡದಿದ್ದರೆ, ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಬಂದವರಿಗೆ ಸೂಕ್ತವಾದ ಮಾರ್ಗ ತೋರದಿದ್ದರೆ ಹೇಗೆ ನಡೆಯುತ್ತದೆ ? ಗುರುದೇವರು ತಮ್ಮ ಅಂತರ್ಮುಖ ಸ್ಥಿತಿಯಿಂದ ಬಾಹ್ಯ ಪ್ರಪಂಚಕ್ಕೆ ಮರಳಿದಾಗ ಕೆಲವರು ಈ ಸಮಸ್ಯೆಯನ್ನು ಅವರ ಮುಂದೆ ಬಿನ್ನವಿಸಿದರು.

ಪೀಠಕ್ಕೆ ದಯಮಾಡಿಸುವ ಮುನ್ನವೇ ಗುರುದೇವರು ಹೇಳಿರಲಿಲ್ಲವೇ ತಾವು ಸದಾ ಆತ್ಮಧ್ಯಾನಪರರಾಗಿರಲು ಅವಕಾಶ ಮಾಡಿಕೊಡಬೇಕೆಂದು ? ಅದನ್ನು ಯಾರೂ ಅರ್ಥ ಮಾಡಿಕೊಂಡಿರಲಿಲ್ಲ. ಅವರು ಗುರುದೇವರಲ್ಲಿ ಆಗಾಗ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಲೇ ಇದ್ದರು. ಗುರುದೇವರಾದರೋ ಈ ವಿಚಾರದಲ್ಲಿ ತಮ್ಮ ಗುರುಗಳಾಗಿದ್ದ ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳವರಿಂದ ಅನುಜ್ಞೆ ಪಡೆದುದಾಗಿತ್ತು. ಶಿಷ್ಯಸ್ವೀಕಾರದ ಇಚ್ಛೆಯನ್ನು ಅವರು ತಮ್ಮ ಗುರುಗಳಲ್ಲಿ ಮನಸಾ ಬಿನ್ನವಿಸಿಕೊಂಡಿರಲು ಅವರು ಶ್ರೀ ಚಂದ್ರಶೇಖರ ಭಾರತೀಯವರಿಗೆ ಅಂತಃಪ್ರೇರಣೆಯ ಮೂಲಕ ಒಪ್ಪಿಗೆಯನ್ನು ಇತ್ತಿದ್ದರು.

ಗುರುದೇವರು ಈ ವಿಚಾರವನ್ನು ತಮ್ಮ ಆಪ್ತ ಭಕ್ತವರ್ಗದಲ್ಲಿ ಕೆಲವರಿಗೆ ತಿಳಿಸಿ ತಾವು ಶಿಷ್ಯ ಸ್ವೀಕಾರಮಾಡುವ ಇಚ್ಛೆಯನ್ನು ಹೊಂದಿರುವುದಾಗಿ ಸ್ಪಷ್ಟಪಡಿಸಿದರು. ಗುರುದೇವರ ನಿರ್ಧಾರ ಶಿಷ್ಯರಿಗೆ ಆಶ್ಚರ್ಯವುಂಟುಮಾಡಿದರೂ ಸಮಾಧಾನವನ್ನು ತಂದಿತ್ತು.

೩. ಶ್ರೀಗುರುಕಟಾಕ್ಷ

ಶ್ರೀ ಚಂದ್ರಶೇಖರ ಭಾರತಿಯವರು ಪ್ರಥಮ ಸಂಚಾರದಲ್ಲಿ ಇದ್ದಾಗಲೇ (೧೯೩೩–೩೭) ಈ ನಿರ್ಧಾರಕ್ಕೆ ಬಂದಿದ್ದರು. ತಮ್ಮ ಸಮೀಪವರ್ತಿಗಳಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ನಿರ್ಧಾರವನ್ನು ತಿಳಿಸಿ ಸೂಕ್ತವಟುವನ್ನು ಆರಿಸಲು ಹೇಳಿಯೂ ಇದ್ದರು. ಆದರೆ ಆ ನಿಕಟವರ್ತಿಗಳಾಗಿದ್ದವರು ಈ ಮಾತನ್ನು ಅಷ್ಟಾಗಿ ಗಮನಿಸಿರಲಿಲ್ಲ. ಇನ್ನೂ ಚಿಕ್ಕವರಾಗಿದ್ದ ಗುರುದೇವರು ಇಷ್ಟು ಬೇಗ ಶಿಷ್ಯಸ್ವೀಕಾರವನ್ನು ಮಾಡುವುದುಂಟೇ ಎಂದುಕೊಂಡು ಸುಮ್ಮನಾಗಿದ್ದರು.

ಯಾವಾಗ ಗುರುದೇವರ ಅಂತರ್ಮುಖತೆ ಹೆಚ್ಚಾಗುತ್ತಾ ಬಂದಿತೋ, ಆದೇ ಸ್ಥಿತಿಯಲ್ಲಿ ಅವರು ದಿನಗಟ್ಟಲೆ, ಮಾಸಗಟ್ಟಲೆ ಇರಲು ಆರಂಭಿಸಿದರೋ, ಆಗ ಅವರ ಸಮೀಪವರ್ತಿಗಳಿಗೆ ಗುರುದೇವರು ಶಿಷ್ಯ ಸ್ವೀಕಾರದ ಇಚ್ಛೆ ವ್ಯಕ್ತಪಡಿಸಿದ್ದುದು ಕೇವಲ ಬಾಯಿ ಮಾತಿಗಲ್ಲ. ಅವರು ನಿಜವಾಗಿ ಶಿಷ್ಯಸ್ವೀಕಾರದ ಅಚಲ ನಿರ್ಧಾರ ಹೊಂದಿದ್ದುದರಿಂದಲೇ ಎಂಬುದು ವೇದ್ಯವಾಯಿತು.

ಸೂಕ್ತವಟುಗಳಿಗಾಗಿ ಅನ್ವೇಷಣೆ ಪ್ರಾರಂಭವಾಯಿತು. ಸತ್ಕುಲಪ್ರಸೂತರಾದ ಹಲವರ ಜಾತಕಗಳನ್ನು ತರಿಸಿ ನೋಡಿದ್ದಾಯಿತು. ಅನೇಕ ಜನ ವಟುಗಳನ್ನು ಕರೆಸಿಕೊಂಡು ಪರೀಕ್ಷಿಸಿದುದೂ ಆಯಿತು. ಯಾವುದೂ ತೃಪ್ತಿಕರವಾಗಿ ಕಂಡು ಬರಲಿಲ್ಲ. ಕೊನೆಗೊಮ್ಮೆ ಒಬ್ಬ ಬಾಲಕನ ಜಾತಕ ತರಿಸಿ ಪರೀಕ್ಷಿಸಿದಾಗ, ಅದರಲ್ಲಿ ಗುರುದೇವರು ನಿರೀಕ್ಷಿಸಿದ್ದ ಗುಣಗಳೆಲ್ಲಾ ಕಂಡುಬಂದವು. ಮಠದ ಆಡಳಿತಾಧಿಕಾರಿಯು ಈ ವಿಷಯವನ್ನು ಗುರುದೇವರಿಗೆ ಅರಿಕೆಮಾಡಿದರು. ಆ ವಟುವನ್ನು ಶೃಂಗೇರಿಗೆ ಕರೆಸಲಾಯಿತು. ಶೃಂಗೇರಿಯಲ್ಲಿನ ಬಹುಜನ ಹಿರಿಯರು ಆ ವಟುವೇ ಮುಂದೆ ಗುರುವಾಗುತ್ತಾರೆಂದು ಭಾವಿಸಿ, ಆ ವಟುವನ್ನು ತಮ್ಮ ತಮ್ಮ ಮನೆಗಳಿಗೆ ಆಹ್ವಾನಿಸಿ ಸತ್ಕರಿಸಿಯೂ ಇದ್ದರು. ಗುರುದೇವರು ಮಾತ್ರ ತಮ್ಮ ನಿರ್ಧಾರವನ್ನು ಇನ್ನೂ ಹೊರಗೆಡಹಿರಲಿಲ್ಲ.

ಶ್ರೀ ಗುರುದೇವರು ಪ್ರತಿ ಶುಕ್ರವಾರವೂ ತಮ್ಮ ಪ್ರಾತರಾಹ್ನಿಕ ಮತ್ತು ಅನುಷ್ಠಾನಗಳನ್ನು ನೆರವೇರಿಸಿಕೊಂಡು, ಶ್ರೀ ಶಾರದಾಂಬಾ ಆಲಯಕ್ಕೆ ಅಮ್ಮನವರ ದರ್ಶನಕ್ಕೆ ದಯಮಾಡಿಸುವ ಪರಿಪಾಠವಿತ್ತು. ಅವರು ಅಮ್ಮನವರ ದರ್ಶನಕ್ಕೆ ಆಗಮಿಸುವ ಸಮಯದಲ್ಲಿ, ಮಠದ ಆವರಣದಲ್ಲಿ ಇರುತ್ತಿದ್ದ ಬಾಲಕರೆಲ್ಲರೂ ಸಾಲಾಗಿ ನಿಂತು, ಗುರುದೇವರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದರು. ದೇವಿಯ ದರ್ಶನ ಮಾಡಿಕೊಂಡು ಹೊರಬಂದ ನಂತರ, ಗುರುದೇವರು ಬಾಲಕರನ್ನೆಲ್ಲಾ ಮಂದಹಾಸದಿಂದ ಆಶೀರ್ವದಿಸಿ, ಕಲ್ಲುಸಕ್ಕರೆ, ದ್ರಾಕ್ಷಿ, ಗೋಡಂಬಿ ಮುಂತಾದ ಪ್ರಸಾದವನ್ನು ಅವರಿಗೆಲ್ಲ ಹಂಚಿ, ತಮ್ಮ ಬಿಡಾರಕ್ಕೆ ಮರಳುತ್ತಿದ್ದರು.

ಒಂದು ಶುಕ್ರವಾರ ಶ್ರೀ ಗುರುದೇವರು ಶ್ರೀ ಶಾರದಾ ದರ್ಶನ ಮಾಡಿಕೊಂಡು ಹೊರಕ್ಕೆ ದಯಮಾಡಿಸಿದರು. ಬಾಲಕರೆಲ್ಲರೂ ಸಾಲಾಗಿ ನಿಂತಿದ್ದವರು ದಂಡವತ್ ಪ್ರಣಾಮಮಾಡಿ ಕೈಮುಗಿದು ನಿಂತುಕೊಂಡರು. ಆ ದಿನ ಗುರುದೇವರು ಒಬ್ಬೊಬ್ಬ

Sri Vidyabharathi Book Centre, Sringeri

ರನ್ನಾಗಿ ಮಾತನಾಡಿಸುತ್ತಾ, ಪ್ರತಿಯೊಬ್ಬ ಬಾಲಕನ ಹೆಸರನ್ನೂ ಕೇಳಿದರು. ಪ್ರತಿ ಬಾಲಕನೂ ತನ್ನ ಹೆಸರನ್ನು ಹೇಳಿದನು. ಹೀಗೆ ಗಣಪತಿ, ನರಸಿಂಹ, ರಾಮಸ್ವಾಮಿ, ಕೃಷ್ಣ, ನಂಜುಂಡ ಎಂಬ ಎಷ್ಟೋ ಹೆಸರುಗಳಾದವು. ಒಬ್ಬೊಬ್ಬ ಬಾಲಕನೂ ತನ್ನ ಹೆಸರನ್ನು ಹೇಳಿದಾಗ, "ನಿನ್ನ ತಾಯಿ ತಂದೆ ನಿನಗೆ ಈ ಹೆಸರನ್ನೇಕೆ ಇಟ್ಟರು ಗೊತ್ತೇ?" ಎಂದು ಗುರುದೇವರು ಮರುಪ್ರಶ್ನೆ ಮಾಡಿದರು. ಪ್ರತಿಯೊಬ್ಬ ಬಾಲಕನಿಂದಲೂ 'ಇಲ್ಲಾ, ತಿಳಿಯದು' ಎಂಬ ಪ್ರತ್ಯುತ್ತರವೇ ದೊರಕಿತು.

ಬೆಂಗಳೂರು ನಗರದಿಂದ ಬಂದಿದ್ದ ಒಬ್ಬ ಬಾಲಕ ಆ ಗುಂಪಿನಲ್ಲಿದ್ದು ಆ ಬಾಲಕನನ್ನು ಗುರುದೇವರು ಮಾತನಾಡಿಸಿ,

"ಅಪ್ಪಾ ಮಗು ನಿನ್ನ ಹೆಸರೇನು?" ಎಂದು ಕೇಳಿದರು.

"ಶ್ರೀನಿವಾಸ"

"ನಿನಗೆ ಈ ಹೆಸರನ್ನು ನಿನ್ನ ಮಾತಾಪಿತರು ಏಕೆ ಇಟ್ಟರು? ಹೇಳಬಲ್ಲೆಯಾ?"

"ಹೀಗಾದರೂ ದೇವರ ಸ್ಮರಣೆ ಆಗಾಗ ಆಗುತ್ತಿರಲಿ ಎಂದು ಆಶಿಸಿ ನಮ್ಮ ತಾಯಿ ತಂದೆ ನನಗೆ ಶ್ರೀನಿವಾಸ ಎಂಬ ಹೆಸರನ್ನು ಇಟ್ಟರು" ಎಂದು ಬೆಂಗಳೂರು ನಗರದ ಆ ಬಾಲಕನು ನಮ್ರನಾಗಿ ನಿವೇದಿಸಿದನು.

ಈ ಉತ್ತರ ಗುರುದೇವರಿಗೆ ಆಶ್ಚರ್ಯವನ್ನೂ ಅತ್ಯಂತ ಸಂತೋಷವನ್ನೂ ಉಂಟುಮಾಡಿತು. ಹಸನ್ಮುಖದಿಂದ ಆ ಬಾಲಕನನ್ನು ಆಶೀರ್ವದಿಸಿದ ಗುರುದೇವರು, ಬಾಲಕರಿಗೆಲ್ಲಾ ಪ್ರಸಾದವನ್ನು ಕೊಟ್ಟು ಕಳುಹಿಸಿದರು. ಕೃಶನೂ ದುರ್ಬಲನೂ ಆಗಿದ್ದ ಆ ಬಾಲಕನತ್ತ ತಮ್ಮ ಪೂರ್ಣ ಕಟಾಕ್ಷವನ್ನು ಬೀರಿದ ಗುರುದೇವರು ಬಿಡಾರದತ್ತ ಹೊರಟರು.

ಹೀಗೆ ಗುರುದೇವರ ಕಟಾಕ್ಷಕ್ಕೆ ಪಾತ್ರನಾದ ಬಾಲಕ, ಬೆಂಗಳೂರಿನಿಂದ ಶೃಂಗೇರಿಗೆ ಬಂದಿದ್ದ ಶ್ರೀ ಕೈಪು ರಾಮಶಾಸ್ತ್ರಿ ಮತ್ತು ಸೌ|| ವೆಂಕಟಲಕ್ಷ್ಮಮ್ಮನವರ ಪುತ್ರ. ಅವನು ಶೃಂಗೇರಿಗೆ ಬಂದುದೂ ಒಂದು ದೈವ ಸಂಘಟನೆಯೇ ಎಂದು ಹೇಳಬಹುದು.

ಶ್ರೀ ಗುರುದೇವರು ಶಿಷ್ಯಸ್ವೀಕಾರಮಾಡುವ ನಿರ್ಧಾರವನ್ನು ಪ್ರಕಟಿಸಿದ ನಂತರ, ಆಗ ಮಠದ ಮುಖ್ಯಕಾರ್ಯಕರ್ತರಾಗಿದ್ದ ಶ್ರೀ ಶ್ರೀಕಂಠಶಾಸ್ತ್ರಿಗಳವರು ಹಲವಾರು ಜನ ಸತ್ಕುಲ ಪ್ರಸೂತರಾದಂತಹ ಬಾಲಕರ ಜಾತಕಗಳನ್ನು ತರಿಸಿ ಜ್ಯೋತಿಷ್ಕರಿಂದ ಪರಿಶೀಲನೆ ಮಾಡಿಸುತ್ತಿದ್ದರು. ತಮಗೆ ತೃಪ್ತಿಕರವೆಂದು ಕಂಡು ಬಂದಂಥವನ್ನು ಮಾತ್ರ ಗುರುದೇವರಿಗೆ ವರದಿ ಮಾಡುತ್ತಿದ್ದರು. ಶಾಸ್ತ್ರಿಗಳು ಮಠದ ಕಾರ್ಯಾರ್ಥವಾಗಿ ಬೆಂಗಳೂರಿಗೆ ಬಂದು ಶಂಕರಮಠದಲ್ಲಿಯೇ ಉಳಿದುಕೊಂಡಿದ್ದರು. ಅದೇ ಸಮಯದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಠದಲ್ಲಿದ್ದ ಪಂಡಿತರೊಬ್ಬರು ತಮ್ಮ ಮಿತ್ರ ಕೈಪು ರಾಮಶಾಸ್ತ್ರಿಗಳಿಗೆ ಪುತ್ರನೋರ್ವನಿರುವುದಾಗಿಯೂ, ಆತನ ಜಾತಕವನ್ನು ತಾವು ನೋಡಿದ್ದು, ಅದು ತುರಿಯಾಶ್ರಮ ಯೋಗವುಳ್ಳದ್ದೆಂದೂ ತಿಳಿಸಿದರು. ಶ್ರೀಕಂಠಶಾಸ್ತ್ರಿಗಳು ಬಾಲಕನನ್ನೂ ಆತನ ತಂದೆಯನ್ನೂ ನೋಡಲು ಅಪೇಕ್ಷಿಸಲು, ಪಂಡಿತರು ಇಬ್ಬರನ್ನೂ ಕರೆಕಳುಹಿದರು.

ರಾಮಶಾಸ್ತ್ರಿಗಳು ತಮ್ಮ ಮಗನನ್ನು ಕರೆದುಕೊಂಡು ಮಠಕ್ಕೆ ಶ್ರೀಕಂಠಶಾಸ್ತ್ರಿಗಳ ಭೇಟಿಗೆ ಬಂದರು. ಬಾಲಕನನ್ನು ನೋಡಿ ಮನಸ್ಸಿನಲ್ಲಿಯೇ, ತೃಪ್ತಿ ಸೂಚಿಸಿದ ಶಾಸ್ತ್ರಿಗಳು, ಶಿಷ್ಯ ಸ್ವೀಕಾರದ ವಿಚಾರವಾಗಿ ಮಾತನಾಡದೆ, ರಾಮಶಾಸ್ತ್ರಿಗಳ ವಂಶ, ಗೋತ್ರಗಳ ವಿಚಾರವಾಗಿ ಮಾತನಾಡುತ್ತಾ, ಬಾಲಕನಿಗೆ ಬ್ರಹ್ಮೋಪದೇಶವಾಗಿದೆಯೇ ಎಂದು ಪ್ರಶ್ನಿಸಿದರು. ರಾಮಶಾಸ್ತ್ರಿಗಳು "ಇಲ್ಲ, ಉಪನಯನ ನಡೆಸುವುದರಲ್ಲಿದ್ದೇನೆ" ಎನ್ನಲು, ಶ್ರೀಕಂಠಶಾಸ್ತ್ರಿಗಳು "ಶೃಂಗೇರಿಗೆ ಬನ್ನಿ, ಅಲ್ಲಿಯೇ ಉಪನಯನವನ್ನು ನೆರವೇರಿಸಬಹುದು" ಎಂದರು. ರಾಮಶಾಸ್ತ್ರಿಗಳು ತಮ್ಮ ಒಪ್ಪಿಗೆಯನ್ನು ಸೂಚಿಸಿ, ಶೃಂಗೇರಿಗೆ ಹೊರಡಲು ಸಿದ್ಧತೆ ನಡೆಸಿಕೊಂಡು, ಪತ್ನೀ ಪುತ್ರ ಸಮೇತರಾಗಿ ಶ್ರೀ ಶಾರದಾ ಗುರು ಸನ್ನಿಧಿಗೆ ಆಗಮಿಸಿದ್ದರು.

ಅಂದು ಪ್ರಾತಃಕಾಲ ಶ್ರೀ ಶಾರದಾಲಯದಲ್ಲಿ ತಾವು ಕಂಡು ಸಂತೋಷಿಸಿದ ಬಾಲಕನ ವಿಚಾರವಾಗಿ ಗುರುದೇವರಿಗೆ ಆಸಕ್ತಿ ಹುಟ್ಟಿತು. ಶ್ರೀಕಂಠಶಾಸ್ತ್ರಿಗಳನ್ನು ಕರೆಸಿಕೊಂಡು ಬೆಂಗಳೂರಿನ ಬಾಲಕನ ವಿಚಾರವಾಗಿ ಮಾಹಿತಿಯನ್ನು ಕೇಳಿ ಪಡೆದುಕೊಂಡರು. ಸಣ್ಣವಯಸ್ಸಿನಿಂದಲೂ ಪ್ರಾಪಂಚಿಕ ವಿಷಯಗಳಲ್ಲಿ ವಿಮನಸ್ಕನೂ, ಶಾರೀರಕವಾಗಿ ದುರ್ಬಲನೂ, ಆಗಾಗ ವ್ಯಾಧಿಪೀಡಿತನೂ ಆಗುತ್ತಿದ್ದ ಆ ಬಾಲಕನನ್ನು ಶ್ರೀ ಗುರುದೇವರ ದರ್ಶನಕ್ಕಾಗಿ ಮತ್ತು ಉಪನಯನವನ್ನು ನೆರವೇರಿಸುವ ಉದ್ದೇಶದಿಂದ ಆತನ ಮಾತಾಪಿತರು ಕರೆದು ತಂದಿದ್ದಾರೆಂದು ಶಾಸ್ತ್ರಿಗಳು ಶ್ರುತಪಡಿಸಿದರು. ಆ ಬಾಲಕನ ವಿಚಾರದಲ್ಲಿ ಗುರುದೇವರಿಗೆ ಅಭಿಮಾನ ಹುಟ್ಟಿತು. ಜಾತಕವನ್ನು ತರಿಸಿ ಪರಿಶೀಲಿಸುವಂತೆ ಅಪ್ಪಣೆ ಮಾಡಿದರು.

೪. ಜನನ, ಬಾಲ್ಯ

ಪೂರ್ವಾಶ್ರಮದಲ್ಲಿ ಶ್ರೀ ಶ್ರೀನಿವಾಸರೆಂದು ಹೆಸರು ಪಡೆದಿದ್ದ ಶ್ರೀ ಅಭಿನವ ವಿದ್ಯಾತೀರ್ಥರು ಶ್ರೀ ಚಂದ್ರಶೇಖರಭಾರತೀಯವರ ಪೂರ್ಣ ಕಟಾಕ್ಷಕ್ಕೆ ಪಾತ್ರರಾದುದು ದೈವಲೀಲೆಯೆಂದೇ ಹೇಳಬಹುದು. ಪೀಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿಕೊಳ್ಳುವುದರಲ್ಲಿ ಇನ್ನೇನು ಅಂತ್ಯ ನಿರ್ಧಾರಕ್ಕೆ ತಲುಪಿದಾಗ ಆ ನಿರ್ಧಾರ ಇದ್ದಕ್ಕಿದ್ದಂತೆಯೇ ಬದಲಾವಣೆಯಾಗಿ ಉತ್ತರಾಧಿಕಾರಿಯಾಗುವ ಪುಣ್ಯ ಶ್ರೀನಿವಾಸರಿಗೆ ಪ್ರಾಪ್ತವಾದುದು ಭಗವತ್ಸಂಕಲ್ಪವೆನ್ನುವುದರಲ್ಲಿ ಸಂದೇಹವಿರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೈಸೂರು ದೇಶವನ್ನು ಮುಮ್ಮಡಿ ಕೃಷ್ಣರಾಜಒಡೆಯರು ಆಳುತ್ತಿದ್ದಾಗ ನ್ಯಾಯ ವಿತರಣೆಯ ಕಾರ್ಯವನ್ನು ಅದಾಲತ್ ಕೋರ್ಟ್ ಎಂಬ ಹೆಸರಿನ ನ್ಯಾಯಾಲಯಗಳು ನಡೆಸುತ್ತಿದ್ದವು. ಅಂತಹ ಒಂದು ಶ್ರೇಷ್ಠ ನ್ಯಾಯಾಲಯದಲ್ಲಿ ಶ್ರೀ ಕೈಪು ಸೀತಾರಾಮ ಶಾಸ್ತ್ರಿಗಳೆಂಬ ಪಂಡಿತರಿದ್ದರು. ಸ್ಮೃತಿ ಮತ್ತು ಧರ್ಮಶಾಸ್ತ್ರಗಳೇ ಆ ಕಾಲದಲ್ಲಿ ಪ್ರಮಾಣ ಗ್ರಂಥಗಳಾಗಿದ್ದುವು. ಈ ಶಾಸ್ತ್ರಗಳಲ್ಲಿ ಪೂರ್ಣ ಪಾಂಡಿತ್ಯ ಹೊಂದಿದ್ದ ಸೀತಾರಾಮಶಾಸ್ತ್ರಿಗಳವರು ಬಹಳ ಗೌರವಾದರಗಳನ್ನು ಹೊಂದಿದ್ದು ಖ್ಯಾತರಾಗಿದ್ದರು. ಅವರ ಪುತ್ರರು ಶ್ರೀ ಶ್ರೀನಿವಾಸಶಾಸ್ತ್ರಿಗಳು. ತಂದೆಯಂತೆಯೇ ವಿದ್ವಾಂಸರು. ಅವರ ಪೌತ್ರರೇ ಶ್ರೀ ಶ್ರೀನಿವಾಸರು. ಶ್ರೀನಿವಾಸರ ತಂದೆಯವರು ಶ್ರೀ ಕೈಪುರಾಮಶಾಸ್ತ್ರಿಗಳವರು. ತಾಯಿ ಸೌಭಾಗ್ಯವತಿ ವೆಂಕಟಲಕ್ಷ್ಮಮ್ಮನವರು. ಈಕೆ ಕನಕಪುರದ ಶ್ರೀಧರಂ ರಾಮಯ್ಯನವರ ಪುತ್ರಿ.

ಈ ದಂಪತಿಗಳಿಗೆ ಜನಿಸಿದವರಲ್ಲಿ ಮೊದಲ ಎರಡೂ ಹೆಣ್ಣು ಮಕ್ಕಳು. ತಾಯಿ ವೆಂಕಟಲಕ್ಷ್ಮಮ್ಮ ತಮ್ಮ ಮುಂದಿನ ಶಿಶು ಪುತ್ರನೇ ಆಗಬೇಕೆಂದು ಆಶಿಸಿ ಅದಕ್ಕಾಗಿ ವ್ರತ ನೇಮಗಳನ್ನು ಕೈಗೊಂಡಿದ್ದರು. ಬೆಂಗಳೂರಿನ ಬಳಿ ಇರುವ ಹೊಸಕೋಟೆಯಲ್ಲಿ ತಮ್ಮ ನೆಂಟರ ಮನೆಯಲ್ಲಿ ಉಳಿದುಕೊಂಡು ಆ ಸಾಧ್ವಿ ಪ್ರತಿನಿತ್ಯವೂ ಪೆನ್ನಾರ್‌ನದಿಯಲ್ಲಿ ಸ್ನಾನಮಾಡಿ, ಆರ್ದ್ರವಸ್ತ್ರಗಳಲ್ಲಿ ಅಶ್ವತ್ಥ ಪ್ರದಕ್ಷಿಣೆ ಮಾಡುತ್ತಿದ್ದರು. ಪರಮ ಸಾಧ್ವಿಯಾಗಿದ್ದ ಆಕೆ ಅತ್ಯಂತ ಮೃದುಸ್ವಭಾವದವರಾಗಿದ್ದು, ನೆಂಟರಿಷ್ಟರೆಲ್ಲರ ವಿಶ್ವಾಸ ಆದರಗಳಿಗೆ ಪಾತ್ರರಾಗಿದ್ದರು.

ಆಕೆಯ ವ್ರತ, ನೇಮಗಳು ಆಶಿಸಿದ ವರವನ್ನಿತ್ತವು. ಪಿಂಗಳನಾಮಸಂವತ್ಸರದ ಆಶ್ವಯುಜ ಬಹುಳ ಚತುರ್ದಶಿಯಂದು (೧೩-೧೧-೧೯೧೭) ನರಕ ಚತುರ್ದಶಿ ಮಂಗಳವಾರದ ದಿನ ಸ್ವಾತಿನಕ್ಷತ್ರದಲ್ಲಿ ಬೆಂಗಳೂರು ಬಸವನಗುಡಿಯಲ್ಲಿದ್ದ ವೆಂಕಟಲಕ್ಷ್ಮಮ್ಮನವರ ತೌರುಮನೆಯಲ್ಲಿ ಆಕೆಗೆ ಪುತ್ರಜನನವಾಯಿತು. ಮಗುವಿನ ಜನ್ಮ ಕುಂಡಲಿಯನ್ನು ಪರಿಶೀಲಿಸಿದ ಹಿರಿಯರು, ಶಿಶು ಯೋಗಪುರುಷನಾಗುವನೆಂದು ಭವಿಷ್ಯನುಡಿದರು. ಹಲವಾರು ವೈಶಿಷ್ಟ್ಯದಿಂದ ಕೂಡಿದ್ದ ಆ ಜಾತಕವನ್ನು ನೋಡಿದ ದೈವಜ್ಞರು, ಜಾತಕನು ಶಾಸ್ತ್ರಜ್ಞಾನಸಂಪನ್ನನೂ, ಲೋಕಸಂಗ್ರಹಕ್ಕಾಗಿ ಧರ್ಮ ಪ್ರವರ್ತಕನೂ ದಯಾಕಾರುಣ್ಯಪೂರ್ಣನೂ ಆಗಿ ಸಹಸ್ರ ಸಹಸ್ರ ಜನಕ್ಕೆ ದಾರಿದೀಪವಾಗುವನೆಂದೂ ನುಡಿದರು.

ಮಗು ಹುಟ್ಟಿದಾಗ ತಂದೆ ತೀವ್ರ ಅನಾರೋಗ್ಯದಿಂದ - ಉದರ ಶೂಲೆಯಿಂದ ನರಳುತ್ತಿದ್ದರು. ಆಸ್ಪತ್ರೆಯಲ್ಲಿದ್ದ ಅವರ ಸ್ಥಿತಿ ತುಂಬಾ ಆತಂಕಕರವಾಗಿಯೇ ಇತ್ತು. ತಾಯಿಗೆ ಚಿಂತೆ, ಯೋಚನೆ, ಭಯಭೀತಿ. ತೌರುಮನೆಯವರು ಧೈರ್ಯಸ್ಥೈರ್ಯಗಳನ್ನು ತುಂಬುತ್ತ ಆಕೆಯನ್ನು ನೋಡಿಕೊಂಡರು. ಆಸ್ಪತ್ರೆಯಲ್ಲಿದ್ದ ರಾಮಶಾಸ್ತ್ರಿಗಳನ್ನೂ ನೋಡಿಕೊಂಡರು. ಸ್ವಲ್ಪ ದಿನಕ್ಕೆಲ್ಲಾ ಶಾಸ್ತ್ರಿಗಳು ಗುಣಮುಖರಾಗಿ ಮನೆಗೆ ಹಿಂದಿರುಗಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಯಿಯ ಮೃದು ಸ್ವಭಾವ, ದೈವಭಕ್ತಿ, ಇವು ಬಾಲ ಶ್ರೀನಿವಾಸನಲ್ಲಿಯೂ ಮನೆಮಾಡಿದ್ದವು. ದೇವರು, ಪೂಜೆ, ಭಜನೆ ಇವುಗಳಲ್ಲಿ ಆತನ ಮನಸ್ಸು ಸಹಜವಾಗಿ ಹರಿಯಿತು. ಇವರ ಪೂರ್ವಿಕರಿಗೆ ಬೆಂಗಳೂರಿನ ಧರ್ಮಾಂಬುಧಿ ಕೆರೆಯ ಏರಿಯ ಮೇಲೆ ಒಂದು ಗಣಪತಿಯ ವಿಗ್ರಹ ಸಿಕ್ಕಿತ್ತು. ಪೂಜೆಯಿಲ್ಲದೆ ಅಲ್ಲಿ ಬಿದ್ದಿದ್ದ ವಿಗ್ರಹವನ್ನು ಅವರು ಮನೆಗೆ ತಂದು ಭಕ್ತಿಶ್ರದ್ಧೆಗಳಿಂದ ಪೂಜೆಮಾಡಲಾರಂಭಿಸಿದ್ದರು. ಬಾಲ ಶ್ರೀನಿವಾಸನಿಗೆ ಆ ವಿನಾಯಕನಲ್ಲಿ ತುಂಬಾ ಭಕ್ತಿಯಿತ್ತು. ಅದರ ಪೂಜೆಯಲ್ಲಿ ತುಂಬಾ ಆಸಕ್ತಿ. ಹಾಗೆಯೇ ತಾಯಿಯು ಹೇಳುತ್ತಿದ್ದ ಪುರಾಣದ ಕತೆಗಳಲ್ಲಿಯೂ ಆಸ್ಥೆ ಅಕ್ಕರೆ. ಯಾವಾಗಲೂ ದೇವರ ಸಾಧುಸಂತರ ಬಗೆಗೆ ತಿಳಿಯುವುದರಲ್ಲಿ ಕೌತುಕ.

ಅಕ್ಷರಾಭ್ಯಾಸದ ನಂತರ ಮುನಿಸಿಪಲ್ ಪ್ರೈಮರಿ ಶಾಲೆಯಲ್ಲಿ, ಅನಂತರ ಆರ್ಯ ವಿದ್ಯಾಶಾಲೆಯಲ್ಲಿಯೂ ವಿದ್ಯಾಭ್ಯಾಸ ನಡೆಯಿತು. ಬಾಲಕ ಏಕಸಂಧಿಗ್ರಾಹಿ. ಆದರೆ ಶಾಲೆಯ ಓದಿಗಿಂತ ತನ್ನ ಪೂಜೆ ಪುನಸ್ಕಾರಗಳಲ್ಲಿ ಹೆಚ್ಚು ಮಗ್ನ. ಹೀಗೆ ಒಂದು ದಿನ ಓದದೆ ಇದ್ದ ಸಮಯದಲ್ಲಿ ತಂದೆ ಕುಪಿತರಾಗಿ ಮಗನನ್ನು ದಂಡಿಸಿದರು. ತಂದೆ ಹೊಡೆಯಲೆಂದು ಕೋಲನ್ನೆತ್ತಿದಾಗ - ಅವರು ಶಾಲಾ ಉಪಾಧ್ಯಾಯರು ತಾನೇ- ಬಾಲಕ ಶ್ರೀನಿವಾಸ ಸ್ವಲ್ಪವೂ ಅಳುಕದೆ, ತನ್ನ ಎರಡೂ ಕೈಗಳನ್ನು ಚಾಚಿದನು. ಆಗ ಅವರ ಮನೆಗೆ ಬಂದಿದ್ದ ಕೇರಳ ಜ್ಯೋತಿಷಿಯೊಬ್ಬರು, ಬಾಲಕನ ಕೈಗಳನ್ನು ಸರ್ರನೆ ತಮ್ಮೆಡೆಗೆ ಎಳೆದುಕೊಂಡರು. ಕುಪಿತರಾಗಿದ್ದ ತಂದೆಯನ್ನು ಸಮಾಧಾನಪಡಿಸಿ, ಬಾಲಕನ ಕೈಯನ್ನು ಸಾವಧಾನವಾಗಿ ಪರಿಶೀಲಿಸಿದರು. ಹಸ್ತಸಾಮುದ್ರಿಕಾ ಶಾಸ್ತ್ರ ಪರಿಣತರಾಗಿದ್ದ ಅವರು " ಈ ಬಾಲಕ ಸಾಮಾನ್ಯನಲ್ಲ, ಯೋಗಶಾಲಿ, ತುರೀಯಾಶ್ರಮ ಯೋಗವಿದೆ, ಮಹಾಪರಿವ್ರಾಜಕನಾಗುತ್ತಾನೆ. ನಮಗೂ ನಿಮಗೂ ಗುರುವಾಗುತ್ತಾನೆ. ಇನ್ನು ಮೇಲೆ ಹೀಗೆಲ್ಲಾ ದಂಡಿಸಬೇಡಿ " ಎಂದು ರಾಮಶಾಸ್ತ್ರಿಗಳಿಗೆ ಹೇಳಿದರು. ಈ ಮಾತು ಕೇಳಿ ಶಾಸ್ತ್ರಿಗಳು ವಿಸ್ಮಿತರಾದರು. ತಮ್ಮ ಮತ್ತೊಬ್ಬ ಸ್ನೇಹಿತರಿಗೆ ತಮ್ಮ ಮಗನ ಜಾತಕವನ್ನು ತೋರಿಸಿದರು. ಅವರೂ ಸಹ " ಇದು ಯೋಗಿಯ ಲಕ್ಷಣಗಳಿಂದ ಕೂಡಿದ ಜಾತಕ. ಈತ ಮಹಾ ಪರಿವ್ರಾಜಕನಾಗಿ ಪರಮ ಪೂಜ್ಯಸ್ಥಾನವನ್ನು ಪಡೆಯುತ್ತಾನೆ " ಎಂದು ನುಡಿದರು.

ಶ್ರೀನಿವಾಸ ಅರಳೇಪೇಟೆಯ ಸುತ್ತಮುತ್ತ ಇದ್ದ ಅನೇಕ ಬಾಲಕರಿಗೆ ಹಿರೇಮಣಿಯಾಗಿದ್ದನು. ಆ ಬಾಲಕರೆಲ್ಲರೂ ಆಟಕ್ಕೆ ಸೇರುತ್ತಿದ್ದುದು ಈಗ ಜಿಕ್ಕಲಾಲ್‌ಬಾಗ್ ಎಂದು ಕರೆಯಲ್ಪಡುವ ತುಳಸೀತೋಟದಲ್ಲಿ. ಬುಗುರಿ, ಗೋಲಿ, ಗುಡುಗುಡು, ಕುಂಟೆಬಿಲ್ಲೆ ಇವೇ ಅವರ ಪ್ರಿಯವಾದ ಆಟಗಳು. ಆ ಗುಂಪಿನಲ್ಲಿ ಆತನ ಸಮವಯಸ್ಕರೂ, ದೊಡ್ಡವರೂ, ಚಿಕ್ಕವರೂ ಇದ್ದರು. ಅವರೆಲ್ಲರೂ ಶ್ರೀನಿವಾಸನ ಮಾತಿಗೆ ಗೌರವ ಕೊಡುತ್ತಿದ್ದರು. ಆಟದಲ್ಲಿ ಮೋಸಮಾಡುವುದು, ಸುಳ್ಳುಹೇಳುವುದು ಇತರರಿಗೆ ತೊಂದರೆ ಕೊಡುವುದು ಮುಂತಾದುವನ್ನು ಶ್ರೀನಿವಾಸ ಸ್ವಲ್ಪವೂ ಸಹಿಸು

Sri Vidyabharathi Book Centre, Sringeri

 CC-O. In Public Domain. Digitized by eGangotri

ತ್ತಿರಲಿಲ್ಲ. ತನ್ನ ಮಿತ್ರರಲ್ಲಿ ಅಂಥದೇನನ್ನಾದರೂ ಕಂಡರೆ ನ್ಯಾಯ ನಿಷ್ಠುರನಾಗಿದ್ದ ಆತ ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದನು. ತನಗಿಂತ ದೊಡ್ಡವರಿದ್ದರೂ ಸರಿಯೇ ಬಿಡುತ್ತಿರಲಿಲ್ಲ. ಅವರ ಬಗ್ಗೆ ಹೆದರುತ್ತಿರಲಿಲ್ಲ.

ಒಮ್ಮೆ ಒಬ್ಬ ದೊಡ್ಡ ಹುಡುಗ ಆಟದಲ್ಲಿ ಮೋಸಮಾಡಲು, ಶ್ರೀನಿವಾಸ ಅವನನ್ನು ಎದುರಿಸಿ, "ತಪ್ಪಾಯಿತೆಂದು" ಅವನಿಂದ ಹೇಳಿಸಿ, "ಮತ್ತೆ ಹಾಗೆ ಮಾಡುವುದಿಲ್ಲ ವೆಂದು" ಅವನಿಂದ ಪ್ರತಿಜ್ಞೆ ಮಾಡಿಸಿಕೊಂಡಿದ್ದನು. ಇನ್ನೊಮ್ಮೆ ಒಬ್ಬ ಧಾಂಡಿಗ ಚಿಕ್ಕಹುಡುಗರ ಆಟದ ಮಧ್ಯೆ ನುಗ್ಗಿ, ಅವರನ್ನೆಲ್ಲಾ ಹೆದರಿಸುತ್ತ ಕಿರುಕುಳ ಕೊಡು ತ್ತಿದ್ದುದನ್ನು ಗಮನಿಸಿದ ಶ್ರೀನಿವಾಸ, ಅವನಿಗೆ ತಿಳಿಯದಂತೆ ಮರದಮೇಲೆ ಕುಳಿತಿದ್ದು, ಅವನು ಆಟದ ಸ್ಥಳಕ್ಕೆ ಮಕ್ಕಳನ್ನು ಪೀಡಿಸಲು ಬಂದಾಗ, ಅವನ ಮೇಲೆ ಧುಮುಕಿ, ಅವನನ್ನು ಕೆಳಕ್ಕೆ ಕೆಡವಿದನು. ಅವನು ಮಿಸುಕಾಡದಂತೆ ಅದುಮಿ, ಬಲವಾಗಿ ಗುದ್ದಿದನು. ಕೆಳಗೆ ಬಿದ್ದಿದ್ದ ಅವನು ಮೇಲೇಳಲು ಪ್ರಯತ್ನಿಸಿದರೂ, ಅದು ಶ್ರೀನಿ ವಾಸನ ಬಲದ ಮುಂದೆ ಆಗಲಿಲ್ಲ. ಆ ಧಾಂಡಿಗನು ದೈನ್ಯನಾಗಲು, ಕಾಗದ ತರಿಸಿ ಅವನಿಂದ ತಪ್ಪೊಪ್ಪಿಗೆ ಬರೆಸಿಕೊಂಡು ರುಜುಮಾಡಿಸಿಕೊಂಡ ನಂತರವೇ ಅವನನ್ನು ಬಿಟ್ಟನು. ಹೀಗೆ ರಕ್ಷಕನಾಗಿದ್ದ ಶ್ರೀನಿವಾಸನನ್ನು ತಮ್ಮ ನೇತಾರನನ್ನಾಗಿ ಬಾಲಕ ರೆಲ್ಲರೂ ಮಾಡಿಕೊಂಡಿದ್ದುದು ಸಾರ್ಥಕವೇ ಆಗಿತ್ತು.

ಆಟದ ನಂತರ ಹುಡುಗರೆಲ್ಲರೂ ಒಂದೆಡೆ ಕುಳಿತು ವಿನೋದವಾಗಿ ಮಾತನಾಡಿ ಕೊಳ್ಳುತ್ತಿದ್ದರು. ಒಮ್ಮೆ ಸಹನೆಯ ಬಗ್ಗೆ ಮಾತು ಬಂತು. ಶ್ರೀನಿವಾಸ ತಾನು ಎಷ್ಟು ಖಾರವನ್ನಾದರೂ ತಡೆದುಕೊಳ್ಳಬಲ್ಲನೆಂದು ಹೇಳಿದ. ಕೂಡಲೇ ಪರೀಕ್ಷೆ ನಡೆಯಿತು. ಯಾರೋ ಹೋಗಿ ಮುಷ್ಟಿ ತುಂಬಾ ಹಸಿಯ ಮೆಣಸಿನಕಾಯನ್ನು ತಂದರು. ಶ್ರೀನಿವಾಸನು ಕಚಕಚನೆ ಅದನ್ನೆಲ್ಲ ಅಗಿದು ತಿಂದು ಬಿಟ್ಟನು ! ಸ್ನೇಹಿತರೆಲ್ಲಾ ಭಯ ದಿಂದ ವಿಹ್ವಲರಾದರು. ಆಶ್ಚರ್ಯದಿಂದ ಮೌನರಾದರು. ಶ್ರೀನಿವಾಸ ಮಾತ್ರ ಏನೂ ಆಗದವನಂತೆಯೇ ಇದ್ದ ! ಮತ್ತೊಮ್ಮೆ ಬೀಸಣಿಗೆಯ ಏಟು ತಿನ್ನುವ ಸ್ಪರ್ಧೆಯಲ್ಲಿ ಎಷ್ಟು ಏಟುಗಳು ಬಿದ್ದರೂ ಬಾಲಕ ಮಿಸುಕಾಡಲಿಲ್ಲ, ಮೈಮೇಲೆ ಬಾಸುಂಡೆಗಳು ಎದ್ದರೂ, ಆತ ಕಲ್ಲುಬಂಡೆಯಂತೆ ಸ್ಥಿರವಾಗಿದ್ದ ; ತಿತಿಕ್ಷೆಗೆ ಪ್ರತ್ಯಕ್ಷ ಉದಾ ಹರಣೆಯಾಗಿ ! ಇನ್ನೊಂದು ದಿನ ಸ್ನೇಹಿತರಲ್ಲಿ ಧೈರ್ಯದ ವಿಚಾರವಾಗಿ ಚರ್ಚೆ ಯಾಗುತ್ತಿತ್ತು. ಕತ್ತಲು, ಅಮಾವಾಸ್ಯೆ, ಭಯ ಇವೆಲ್ಲವೂ ಮಾತಿನಲ್ಲಿ ತೇಲಿ ಬಂದುವು. ಅಮಾವಾಸ್ಯೆಯ ಕತ್ತಲಲ್ಲಿ, ತೋಟದಪ್ಪನವರ ಛತ್ರದ ಹತ್ತಿರವಿದ್ದ ಕೊಳಕ್ಕೆ ಹೋಗಿ ಬರುವ ಧೈರ್ಯ, ಸಾಹಸ ಯಾರಿಗಿದೆ ? ಎಂಬ ಸವಾಲು ಬಂದಿತು. ಶ್ರೀನಿವಾಸ ತಾನು ಹೋಗಿ ಬರುವುದಾಗಿ ಹೇಳಿದ. ಆ ಅಮಾವಾಸ್ಯೆಯ ದಿನವೇ ಪರೀಕ್ಷೆ ನಡೆಯಿತು. ಬಾಲಕರು ಸವಾಲನ್ನೇನೋ ಎಸೆದಿದ್ದರು. ಆದರೆ ಅವರಿಗೇ ಭಯ. ಶ್ರೀನಿವಾಸನಿಗೆ ಏನಾಗಿ ಬಿಡುವುದೋ ಎಂದು ! ಶ್ರೀನಿವಾಸ ಸಹಜವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಧೈರ್ಯದಿಂದ, ಕಗ್ಗತ್ತಲಲ್ಲಿ ಆ ಕೊಳಕ್ಕೆ ಹೋಗಿ - ಹೋಗಿ ಬಂದುದಕ್ಕೆ ಕುರುಹನ್ನು ತಂದು ಭಯ ಕುತೂಹಲಗಳಿಂದ ಕಾದಿದ್ದ ಮಿತ್ರರಿಗೆ ತೋರಿಸಿದನು !

ಬಾಲಕರ ಹಿರೇಮಣಿಯಾಗಿದ್ದ ಶ್ರೀನಿವಾಸ ಅವರಲ್ಲಿದ್ದ ತಪ್ಪು ನೆಪ್ಪುಗಳನ್ನು ತಿದ್ದಲು ಪ್ರಯತ್ನಿಸುತ್ತಿದ್ದ, ಹೇಗೆ ಆಟಪಾಟಗಳಲ್ಲಿ ಮೋಸ ಅನ್ಯಾಯಗಳನ್ನು ಸಹಿಸುತ್ತಿರಲಿಲ್ಲವೋ ಹಾಗೆಯೇ ಬಾಲಕರು ತಮ್ಮ ನಿತ್ಯ ವ್ಯವಹಾರದಲ್ಲಿ ಸುಳ್ಳು, ವಂಚನೆ, ಪರಹಿಂಸೆ ಮುಂತಾದುವನ್ನು ಮಾಡಬಾರದೆಂದು ಹೇಳುತ್ತಿದ್ದ.

ಪ್ರಾಣಿದಯೆ ಶ್ರೀನಿವಾಸನ ಸಹಜಗುಣವಾಗಿತ್ತು. ಮಾತನಾಡುವ ಶಕ್ತಿಯಿಲ್ಲದ ಮೂಕಪ್ರಾಣಿಗಳ ಬಗ್ಗೆ ತುಂಬಾ ಕರುಣೆ ತೋರಬೇಕೆಂದು ಆಗಾಗ ತನ್ನ ಸ್ನೇಹಿತರಿಗೆ ಹೇಳುತ್ತಿದ್ದ. ಬಾಲ್ಯ ಸಹಜವಾದ ಕೀಟಲೆ, ದುಶ್ಚೇಷ್ಟೆಗಳಿಂದ ನಾಯಿಗೆ ಕಲ್ಲು ಹೊಡೆಯುವುದು, ಕೋತಿಯನ್ನು ಹೊಡೆಯುವುದು, ಇವನ್ನೆಲ್ಲಾ ಆತ ಸಹಿಸುತ್ತಿರಲಿಲ್ಲ, ಖಂಡಿಸುತ್ತಿದ್ದನು.

ಒಮ್ಮೆ ಹುಡುಗರೆಲ್ಲಾ ಚೇಷ್ಟೆಗಾಗಿ ಚಿಟ್ಟೆಗಳ (ಪತಂಗ) ರೆಕ್ಕೆ ಮುರಿದು ನಾಯ ಮುಂದೆ ಹಾಕುತ್ತಿದ್ದರು. ಇದನ್ನು ನೋಡಿದ ಶ್ರೀನಿವಾಸನ ಮನಸ್ಸು ವ್ಯಗ್ರವಾಯಿತು. ಆತ ಅವರಿಗೆ ಇಂತಹ ಕ್ರೂರ ಚೇಷ್ಟೆಯನ್ನು ಮಾಡಬಾರದೆಂದು ಹೇಳಿದ, ಅವರು ಕೇಳಲಿಲ್ಲ. ಎಷ್ಟು ಎಚ್ಚರಿಕೆ ನೀಡಿದರೂ ಅವರು ಲಕ್ಷಿಸದೆ ತಮ್ಮ ತುಂಟತನವನ್ನು ಮಾಡುತ್ತಲೇ ಇದ್ದರು. ಒಡನೆಯೇ ಶ್ರೀನಿವಾಸ ಒಬ್ಬ ಹುಡುಗನ ಕೈಯನ್ನೆಳೆದು ತಿರುಚಿದನು ! ಅವನು ನೋವಿನಿಂದ ಒರಲಿ ಅಯ್ಯೋ ಎಂದು ಕಿರುಚಿದನು ! ಶ್ರೀನಿವಾಸ ಅವನ ಕೈಬಿಟ್ಟು, " ನೀನು ಚಿಟ್ಟೆಯ ರೆಕ್ಕೆಯನ್ನು ಕಿತ್ತಾಗ ಅವುಗಳಿಗೆ ಇದಕ್ಕಿಂತ ಹೆಚ್ಚಾಗಿ ನೋವಾಗುತ್ತದೆ ! ನಿನಗೆ ಕೈಕಾಲುಗಳಿದ್ದಂತೆ, ಅವಕ್ಕೆ ರೆಕ್ಕೆಗಳು " ಎಂದು ಬುದ್ಧಿವಾದ ಹೇಳಿದನು. ತಕ್ಷಣವೇ ಅವನ ಚೇಷ್ಟೆ ನಿಂತಿತು. ಇತರರೂ ಜಾಗ್ರತರಾದರು.

೫. ಗುರು, ದೇವರನ್ನು ಕಾಣುವುದು

ದೊಡ್ಡವರಾದ ಮೇಲೆ ಏನಾಗಬೇಕು, ಎಂದು ಒಮ್ಮೆ ಮಕ್ಕಳಲ್ಲಿಯೇ ಚರ್ಚೆಯಾಯಿತು. ಒಬ್ಬೊಬ್ಬ ಬಾಲಕನೂ ಒಂದೊಂದು ವಿಧವಾಗಿ ತನ್ನ ಆಸೆಯನ್ನು ಹೇಳುತ್ತಿದ್ದನು. ಉಪಾಧ್ಯಾಯ, ಅಧಿಕಾರಿ, ಲಾಯರು, ವ್ಯಾಪಾರಿ ಇತ್ಯಾದಿಯಾಗಿ ಇತರ ಬಾಲಕರೆಲ್ಲರೂ ಹೇಳುತ್ತಿದ್ದರು. ಶ್ರೀನಿವಾಸನ ಸರದಿ ಬಂದಿತು. ಆತ ತಾನು ಸನ್ಯಾಸಿಯೋ ಸಾಧುವೋ ಆಗುವುದಾಗಿ ನುಡಿದ. ಗೆಳೆಯನೊಬ್ಬ ' ನೀನು ರಾಜನೋ ಮಂತ್ರಿಯೋ ಆಗಲು ಆಶಿಸದೆ ಸಾಧುವಾಗುತ್ತೇನೆಂದು ಏಕೆ ಅಪೇಕ್ಷಿಸುತ್ತೀಯೆ ? ' ಎಂದು ಕೇಳಿದ. ತಕ್ಷಣವೇ ಉತ್ತರ ಬಂದಿತು, " ಅಧಿಕಾರ, ಪದವಿ ಇವು ತುಂಬಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಷ್ಟದಿಂದ ಕೂಡಿರುತ್ತದೆ. ಅವು ಶಾಶ್ವತವಲ್ಲ. ಯಾವಾಗಲೂ ಅಧಿಕಾರ ಹೋಗುವ ಭಯವಿದ್ದೇ ಇರುತ್ತದೆ. ಬೇರೆಯವರು ಆ ಅಧಿಕಾರಕ್ಕಾಗಿ ಪ್ರಯತ್ನಪಡುತ್ತಲೇ ಇರುತ್ತಾರೆ. ಆದರೆ ಸಾಧುವಿಗೆ ಸನ್ಯಾಸಿಗೆ ಇದಾವ ಭಯವೂ ಇಲ್ಲ. ಅವರು ಸದಾ ದೇವರ ಧ್ಯಾನ ಮಾಡುತ್ತಾ, ಸಂತೋಷ...ವಿಹುದು," ಎಂದ ಶ್ರೀನಿವಾಸನ ಉತ್ತರದಿಂದ ಬಾಲಕರೆಲ್ಲರೂ ಆಚ್ಚರಿಪಟ್ಟರು, ಈತ ಎಂತಹ ವಿಚಿತ್ರ ವ್ಯಕ್ತಿಯೆಂದು.

ಇಂತಹ ಮನಃ ಪರಿಪಾಕಕ್ಕೆ ಮನೆಯ ವಾತಾವರಣವೂ ಬಹುಮಟ್ಟಿಗೆ ಕಾರಣ ವಾಗಿತ್ತು. ದೈವಭಕ್ತೆಯಾಗಿದ್ದ ತಾಯಿ, ರಾಮಾಯಣ ಮಹಾಭಾರತಗಳು ಬಾಲಕನ ಎಳೆಯ ಮನಸ್ಸಿನಮೇಲೆ ಒತ್ತಿದ್ದ ಪ್ರಭಾವ ಮತ್ತು ಬಾಲಕರೆಲ್ಲರಿಗೂ ಪ್ರಿಯನಾದ ಗಜ ಮುಖನಾದ ಗಣಪತಿಯ ಪೂಜೆ ಇವೆಲ್ಲಾ ಸೇರಿ ಬಾಲಕನ ಜೀವನವನ್ನು ಭವ್ಯ ಭವಿಷ್ಯ ದತ್ತ ರೂಪುಗೊಳಿಸುತ್ತಿದ್ದುವು. ಇತರ ಮಕ್ಕಳಿಗಿದ್ದಂತೆ ಶ್ರೀನಿವಾಸನಿಗೆ ಹೊಸಬಟ್ಟೆ ಗಳನ್ನು ತೊಡುವುದರಲ್ಲಿ ಆಸೆಯಿರಲಿಲ್ಲ. ತಿಂಡಿ ತೀರ್ಥಗಳನ್ನು ತಿನ್ನುವುದರಲ್ಲಿ ಚಪಲತೆ ಯಿರಲಿಲ್ಲ. ಮನೆಯಲ್ಲಿ ತಾಯಿಯ ನೆರಳಿನಂತೆ ಇದ್ದು ಆಕೆಗೆ ಮಕ್ಕಳನ್ನು ನೋಡಿ ಕೊಳ್ಳುವುದರಲ್ಲಿ ಮನೆಗೆಲಸಗಳಲ್ಲಿ, ಅಂಗಡಿ ಮುಂಗಟ್ಟಿಗೆ ಹೋಗುವುದರಲ್ಲಿ ನೆರವಾಗು ತ್ತಿದ್ದ ಶ್ರೀನಿವಾಸ ವಾಸ್ತವವಾಗಿ ಅತ್ಯಂತ ಸಹಜನಾಗಿ ಅಧ್ಯಾತ್ಮ ಜೀವನದತ್ತ ತನಗರಿವಿಲ್ಲದಂತೆಯೇ ಸಾಗುತ್ತಿದ್ದನು.

ಆಟದ ಬಯಲಿನಲ್ಲಿ ಹುಡುಗರೆಲ್ಲಾ ಸೇರಿ ಶ್ರೀನಿವಾಸನಿಂದ ಕತೆಗಳನ್ನು ಹೇಳಿಸಿ ಕೇಳುತ್ತಿದ್ದುದು ವಾಡಿಕೆಯಾಗಿತ್ತು. ಶ್ರೀನಿವಾಸ ಹೇಳುತ್ತಿದ್ದ ಕತೆಗಳೆಲ್ಲಾ ಪುರಾಣಗಳ ಕತೆಗಳೇ ಆಗಿದ್ದು ನೀತಿ ಪ್ರಧಾನವಾಗಿರುತ್ತಿದ್ದವು. ಬಾಲಕರ ಮನಸ್ಸಿನಮೇಲೆ ಒಳ್ಳೆಯ ಪರಿಣಾಮ ಬೀರಿ ಅವರ ಜೀವನವನ್ನು ಸನ್ಮಾರ್ಗದಲ್ಲಿ ರೂಪಿಸುವಂತಹ ಕತೆ ಗಳನ್ನು, ಶ್ರೀನಿವಾಸ ತನ್ನ ಹಿರಿಯರಿಂದ ಕೇಳಿ, ತಾನೇ ಓದಿ ತಿಳಿದು, ತನ್ನ ಸಹಪಾಠಿ ಗಳಿಗೂ ಹೇಳುತ್ತಿದ್ದನು. ಮಕ್ಕಳು ಶಾಲೆಯ ಪಾಠದಿಂದಷ್ಟೆ ಏನನ್ನು ಕಲಿತಾರು? ಅವರ ಜೀವನ ಸರಿಯಾಗಿ ರೂಪಿತವಾಗಬೇಕಾದರೆ ನೀತಿಕತೆಗಳು, ಮಹಾಪುರುಷರ ಜೀವನಗಾಥೆಗಳು ಇವೆಲ್ಲಾ ಅವರಿಗೆ ತಿಳಿಯಬೇಕಾಗಿದ್ದು ಅವಶ್ಯಕವಲ್ಲವೆ?

ಒಮ್ಮೆ ಆಟದ ನಂತರ ... ಮಕ್ಕಳಲ್ಲಿಯೇ ವಿಶಿಷ್ಟವಾದ ಚರ್ಚೆಯೊಂದು ನಡೆಯಿತು. ನಾವು ದೊಡ್ಡವರಾದ ಮೇಲೆ ಏನು ಮಾಡಬೇಕು? ಒಬ್ಬೊಬ್ಬ ಬಾಲಕನೂ ಒಂದೊಂದು ವಿಧವಾಗಿ ಚರ್ಚೆಮಾಡುತ್ತಿದ್ದನು. ಶ್ರೀನಿವಾಸ ಗಂಭೀರ ನಾಗಿ ನುಡಿದ 'ದೇವರನ್ನು ಕಾಣುವುದು! ಅದೇ ನನ್ನ ಗುರಿ - ಅದೇ ನನ್ನ ಇಷ್ಟ!' ಈ ಮಾತಿನಿಂದ ಹುಡುಗರಿಗೆಲ್ಲಾ ಆಶ್ಚರ್ಯವಾಯಿತು, ಶ್ರೀನಿವಾಸ ಅಸಾಧ್ಯವಾದು ದೇನೋ ಹೇಳುತ್ತಿರುವನಲ್ಲಾ! ಎಂಬುದಾಗಿ. ತಕ್ಷಣ ಒಬ್ಬ ಬಾಲಕ ಕೇಳಿದ "ದೇವರಿದ್ದಾನೆಂದು ಹೇಗೆ ಹೇಳುತ್ತೀಯೆ?"

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀನಿವಾಸ ಪ್ರತ್ಯುತ್ತರವಿತ್ತ "ಇಲ್ಲವೆಂದು ಹೇಗೆ ಹೇಳುತ್ತೀಯೆ ?"

ಬಾಲಕ ಪ್ರತ್ಯುತ್ತರವಿತ್ತ "ನಾನು ದೇವರನ್ನು ನೋಡಿಲ್ಲ. ಆದ್ದರಿಂದ ದೇವರಿಲ್ಲವೆಂದು ನನ್ನ ನಂಬಿಕೆ"

ಶ್ರೀನಿವಾಸ ಕೇಳಿದ "ನೋಡಿಲ್ಲವೋ ಸರಿ. ನೀನು ಬೊಂಬಾಯಿ ನಗರವನ್ನು ನೋಡಿದ್ದೀಯೋ ?"

"ಇಲ್ಲ"

"ಆದರೆ ಬೊಂಬಾಯಿ ನಗರ ಇದೆಯೋ ?"

"ಇದೆ. ಇದ್ದೇ ಇದೆ".

"ನೀನು ನೋಡಿಲ್ಲವಾದ್ದರಿಂದ ಬೊಂಬಾಯಿ ನಗರ ಇಲ್ಲವೆಂದು ನಾನು ಹೇಳುತ್ತೇನೆ"

"ಹಾಗಲ್ಲ. ನಮ್ಮವರು ಅನೇಕ ಜನ ನೋಡಿದ್ದಾರೆ. ಅವರು ಅಲ್ಲಿ ಇದ್ದು ನೋಡಿ ಬಂದಿದ್ದಾರೆ. ಅವರ ಮಾತನ್ನು ಸುಳ್ಳೆಂದು ಹೇಗೆ ಹೇಳಲಿ ? ಬೊಂಬಾಯಿಯನ್ನು ನೋಡಿದವರು, ಬೊಂಬಾಯಿ ಇದೆಯೆಂದು ಹೇಳುವಾಗ ನಾನೂ ಅದು ಇದೆಯೆಂದು ಒಪ್ಪುತ್ತೇನೆ" ಎಂದು ನುಡಿದ ಆ ಬಾಲಕ.

ಶ್ರೀನಿವಾಸನ ಪ್ರತ್ಯುತ್ತರ ಸಿದ್ಧವಾಗಿತ್ತು. "ಹಾಗೆಯೇ, ನಾನು ದೇವರನ್ನು ಕಂಡಿಲ್ಲ ನಿಜ. ಆದರೆ ದೇವರನ್ನು ಕಂಡವರು ನಮಗೆ ತಮ್ಮ ಅನುಭವವನ್ನು ಹೇಳಿದ್ದಾರೆ. ಅನೇಕ ಜನ ಯೋಗಿಗಳು, ಸನ್ಯಾಸಿಗಳು, ಸಾಧು-ಸಂತರು ಆತನನ್ನು ಕಂಡಿದ್ದಾರೆ. ಆದ್ದರಿಂದ ನಾನೂ ಆತನಿದ್ದಾನೆಂದು ನಂಬಿದ್ದೇನೆ. ಆತನ ದರ್ಶನ ಮಾಡಲು ಆಸೆಪಡುತ್ತೇನೆ." ಎಂದು ಶ್ರೀನಿವಾಸ ನುಡಿದಾಗ ಬಾಲಕರೆಲ್ಲರೂ ಮುಗ್ಧರಾಗಿ, ಆತನ ನುಡಿಗೆ ಹೌದೆಂದು ತಲೆದೂಗಿದರು.

ಸ್ವಲ್ಪ ದಿನಕ್ಕೆಲ್ಲಾ ಶ್ರೀನಿವಾಸನನ್ನು ಆತನ ಗುರಿಯತ್ತ ಕರೆದೊಯ್ಯುವ ಅವಕಾಶ ಬಂದೇ ಬಿಟ್ಟಿತು.

ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳವರು ಶಿಷ್ಯಸ್ವೀಕಾರ ಮಾಡುವ ವಿಚಾರ ಆಗಲೇ ಸಾಕಷ್ಟು ಪ್ರಚಾರವಾಗಿತ್ತಷ್ಟೆ. ಅದೇ ಕಾಲಕ್ಕೆ ಮಠದ ಕಾರ್ಯಭಾರಿ ಶ್ರೀಕಂಠಶಾಸ್ತ್ರಿಗಳು ಬೆಂಗಳೂರಿಗೆ ಬಂದಿದ್ದು, ರಾಮಶಾಸ್ತ್ರಿಗಳಿಗೂ ಅವರಿಗೂ ಭೇಟಿಯಾಗಿತ್ತು. ಅವರು ಶ್ರೀನಿವಾಸನನ್ನು ನೋಡಿ ಮನಸ್ಸಿನಲ್ಲಿಯೇ ಮೆಚ್ಚಿಕೊಂಡಿದ್ದರು. ಬಾಲಕನ ಉಪನಯನದ ವ್ಯಾಜದಿಂದ ರಾಮಾಶಾಸ್ತ್ರಿಗಳನ್ನೂ ಶ್ರೀನಿವಾಸನನ್ನೂ ಶೃಂಗೇರಿಗೆ ಬರುವಂತೆ ಆಹ್ವಾನಿಸಿದ್ದರು. ರಾಮಾಶಾಸ್ತ್ರಿಗಳೂ ಒಪ್ಪಿದ್ದರು. ತಾಯಿ ವೆಂಕಟಲಕ್ಷ್ಮಮ್ಮನವರಿಗೆ ಅಷ್ಟೇನು ದೃಢಕಾಯನಲ್ಲದ, ಆಗಾಗ ವ್ಯಾಧಿಪೀಡಿತನಾಗುವ ತಮ್ಮ ಈ ಮಗನಿಗೆ ಶ್ರೀ ಶಾರದಾ ಗುರು ಕಟಾಕ್ಷದಿಂದ ಅನುಕೂಲವಾದೀತೆಂಬ ಹಂಬಲ. ಆಕೆಯೂ ಉತ್ಸಾಹದಿಂದ, ಪತಿ ಮಕ್ಕಳೊಡನೆ ಶೃಂಗೇರಿ ಯಾತ್ರೆಗಾಗಿ ಹೊರಟರು.

Sri Vidyabharathi Book Centre, Sringeri

ಶ್ರೀನಿವಾಸನಿಗಂತೂ ಬಾಲಕರಿಗೆ ಸಹಜವಾದ ಕುತೂಹಲ. ಶ್ರೀ ಶಾರದಾಂಬಾ ಮತ್ತು ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳವರ ದರ್ಶನ ಮಾಡುವ ತವಕ, ಉತ್ಸಾಹ, ತುಂಬಿ ತುಳುಕುತ್ತಿತ್ತು. ಸಂಭ್ರಮದಿಂದ ಎಲ್ಲರೂ ಪ್ರಯಾಣ ಹೊರಟರು.

೬. ಶೃಂಗೇರಿ, ಉಪನಯನ

ಶೃಂಗೇರಿಗೆ ಇವರು ಆಗಮಿಸಿದಾಗ ಶ್ರೀಶಂಕರಜಯಂತೀ ಸಮಾರಂಭದ ಸಮಯ. ಪ್ರಾತಃಕಾಲ ಆಚಾರ್ಯರ ಉತ್ಸವವು ಹೊರಟಿತ್ತು. ಶ್ರೀ ಶ್ರೀಗಳವರು ಮುಂದೆ ಕೈ ಮುಗಿದು ದೇವರಿಗೆ ಎದುರಾಗಿ ನಿಧಾನವಾಗಿ ನಡೆದು ಬರುತ್ತಿದ್ದರು. ಶ್ರೀನಿವಾಸನಿಗೆ ಈ ಅಪೂರ್ವವಾದ ದೃಶ್ಯ ತುಂಬಾ ಸಂತೋಷವನ್ನು ಉಂಟುಮಾಡಿತು. ಉತ್ಸವ, ಇವರು ಇಳಿದುಕೊಂಡಿದ್ದ ಛತ್ರದ ಬಳಿ ಬಂದು ಅಲ್ಲಿ ಶ್ರೀಮದಾಚಾರ್ಯರಿಗೆ ಪೂಜೆ, ಮಂಗಳಾರತಿಗಳು ಬೆಳೆದುವು. ಅನಂತರ ಉತ್ಸವ ಶ್ರೀ ಶ್ರೀಗಳವರ ನೇತೃತ್ವದಲ್ಲಿ ಮುಂದಕ್ಕೆ ಸಾಗಿತು. ತಾಯಿ-ತಂದೆ ನಮಗೆ ಇದು 'ಶುಭ ಶಕುನ' ಎಂದುಕೊಂಡು ಹರ್ಷಿಸಿದರು.

ಒಂದು ದಿನ ಶ್ರೀ ಶ್ರೀಗಳವರ ದರ್ಶನಕ್ಕೆ ಬಾಲಕನು ತಂದೆಯೊಡನೆ ಬಂದನು. ಕೃಶಕಾಯ, ಸ್ವಲ್ಪ ಸೊರಗಿದಂತೆ ಕಂಡರೂ ವರ್ಚಸ್ವಿಯಾಗಿದ್ದ ಬಾಲಕನನ್ನು ಕಂಡು ಶ್ರೀ ಶ್ರೀಗಳವರು ಹರ್ಷಿಸಿದರು. ಆತನನ್ನು ಮಾತನಾಡಿಸುತ್ತಾ 'ಎಲ್ಲಿ ಓದುತ್ತಿದ್ದೀಯೆ?' ಎಂದು ಕೇಳಿದರು. 'ಆರ್ಯವಿದ್ಯಾಶಾಲೆಯಲ್ಲಿ ಓದುತ್ತಿದ್ದೇನೆ' ಎಂದು ಬಾಲಕ ಉತ್ತರಿಸಿದ. ಪಾಠಪ್ರವಚನದ ವಿವರಗಳನ್ನೆಲ್ಲಾ ಕೇಳಿದರು. ಪ್ರತಿಯೊಂದು ಪ್ರಶ್ನೆಗೂ ಹುಡುಗ ಧೈರ್ಯವಾಗಿ ಸರಿಯಾದ ಉತ್ತರವನ್ನು ಹೇಳಿದನು. ಕನ್ನಡಪದ್ಯಗಳಲ್ಲಿ ನಳಚರಿತ್ರೆ ತನಗೆ ಪಾಠವಾಗಿದೆಯೆಂದು ಬಾಲಕ ಹೇಳಲು, ಗುರುದೇವರು 'ಪದ್ಯಗಳನ್ನು ಕಂಠಪಾಠ ಮಾಡಿದ್ದೀಯ? ಎಂದು ಕೇಳಿದರು. ಬಾಲಕ "ಹೌದು, ಎಲ್ಲವೂ ಬರುತ್ತದೆ" ಎನ್ನಲು, "ಹಾಗಾದರೆ ಹೇಳು ಕೇಳೋಣ" ಎಂದು ಗುರುದೇವರು ನುಡಿದರು.

ಕನಕದಾಸರ ನಳಚರಿತ್ರೆಯನ್ನು ಬಾಲಕ ಸರಾಗವಾಗಿ, ಧೈರ್ಯವಾಗಿ ಒಪ್ಪಿಸಿದ. ಗುರುಗಳಿಗೆ ಸಂತೋಷವಾಯಿತು. "ಇದಕ್ಕೆಲ್ಲಾ ಅರ್ಥ ಹೇಳಬಲ್ಲೆಯಾ?" ಎಂದರು. ಹೇಳುತ್ತೇನೆಂದು ಬಾಲಕ ಬಿನ್ನವಿಸಲು ಹತ್ತಿರವೇ ಕುಳಿತಿದ್ದ ತಂದೆಗೆ ಸ್ವಲ್ಪ ಭಯ ವಾಯಿತು, ಇದೇನು ಹುಡುಗನ ದಾರ್ಷ್ಟ್ಯ? ನಳಚರಿತ್ರೆಯ ಅಧ್ಯಾಯಗಳ ಅರ್ಥವೆಲ್ಲಾ ಬರುತ್ತದೆ ಎಂದು ಹೇಳುತ್ತಿದ್ದಾನಲ್ಲಾ? ಅರ್ಥ-ತಾತ್ಪರ್ಯಗಳನ್ನು ಇವನೆಲ್ಲಿ ಕಲಿತಿದ್ದಾನೆ? ಎಂದು ಅವರು ಸ್ವಲ್ಪ ಚಿಂತಿತರಾದರು! ಆದರೆ ಶ್ರೀನಿವಾಸ ಇದಾವುದರ ಪರಿವೆಯೂ ಇಲ್ಲದೆ, ತಾನು ಹೇಳಿದ್ದ ಪದ್ಯಗಳ ತಾತ್ಪರ್ಯವನ್ನು ಸ್ವಾರಸ್ಯವಾಗಿ ವಿವರಿಸಿದನು. ರಾಮಾಶಾಸ್ತ್ರಿಗಳಿಗಂತೂ ಪರಮಾಶ್ಚರ್ಯವಾಯಿತು. ಶ್ರೀ ಶ್ರೀಗಳವರು ಬಾಲಕನ ಧೈರ್ಯಕ್ಕೂ, ಬುದ್ಧಿಶಕ್ತಿಗೂ ಮೆಚ್ಚಿ ಆಶೀರ್ವದಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಕಂಠಶಾಸ್ತ್ರಿಗಳು ನುಡಿದಿದ್ದಂತೆ, ಮುಂದೆ ಶ್ರೀನಿವಾಸನಿಗೆ ಶೃಂಗೇರಿಯಲ್ಲಿಯೇ ಉಪನಯನ ನಡೆಸಲು ಏರ್ಪಾಡಾಯಿತು. ಶ್ರೀ ಶಾರದಾ ದೇವಾಲಯದಲ್ಲಿ ಘಂಟಾ ನಾದ ಮಾಡುವ ಸಮಯಕ್ಕೆ ಸರಿಯಗಿ ಬ್ರಹ್ಮೋಪದೇಶವಾಗಬೇಕೆಂದು ನಿರ್ಧರಿಸಲ್ಪಟ್ಟಿತ್ತು. ಎಲ್ಲಾ ವಿಧಿಗಳೂ [illegible]ವಾಗಿ ಕ್ರಮವಾಗಿ ನಡೆದುವು. ಶ್ರೀ ಶಾರದಾಲಯದ ಘಂಟಾನಾದ ಮೊಳಗುತ್ತಿದ್ದಂತೆ ರಾಮಾಶಾಸ್ತ್ರಿಗಳು ತಮ್ಮ ಪುತ್ರನಿಗೆ ಬ್ರಹ್ಮೋಪದೇಶವನ್ನು ಇತ್ತರು. ಅದು ಕರ್ಕಾಟಕ ಲಗ್ನವಾಗಿದ್ದು, ಹಿಂದೆ ಶ್ರೀ ಶಂಕರ ಭಗವತ್ಪಾದಾಚಾರ್ಯರಿಗೂ ಬ್ರಹ್ಮೋಪದೇಶವಾಗಿದ್ದ ಲಗ್ನವಾಗಿತ್ತು. ರಾಮಾಶಾಸ್ತ್ರಿಗಳು ಅನಂತರ ಸ್ವಲ್ಪ ಖಿನ್ನರಾದರು. ತಮ್ಮ ಮಗ ಶಂಕರಾಚಾರ್ಯರಂತೆ ಎಲ್ಲಿ ಸನ್ಯಾಸಿಯಾಗಿಬಿಡುತ್ತಾನೋ ಎಂದು ! ಆದರೆ ಭಗವತ್ಸಂಕಲ್ಪಕ್ಕೆ ಅಡ್ಡಿಯುಂಟೆ ?

ಅಂದು ಪ್ರಾತಃಸಂಧ್ಯಾವಂದನೆಯನ್ನು [illegible] ಪುರೋಹಿತರಾದ ಶ್ರೀ ವೆಂಕಟಸುಬ್ಬಾಶಾಸ್ತ್ರಿಗಳವರೇ ಮಾಡಿಸಿದರು. ಸಾಯಂಸಂಧ್ಯೆ ಮತ್ತು ಅಗ್ನಿಕಾರ್ಯ ಮಾಡಿಸಲು ಅವರು ಬರಲಿಲ್ಲ. ತಮ್ಮ ಮಗ ಗಣಪತಿಸುಬ್ರಹ್ಮಣ್ಯ ಅವಧಾನಿಯನ್ನು ಕಳುಹಿಸಿದರು. ಆತನಿಗೆ ಉಪನಯನವಾಗಿ ಇನ್ನೂ ಒಂದು ತಿಂಗಳಾಗಿತ್ತು. ಆತ ಶ್ರೀನಿವಾಸರಿಗಿಂತ ಸ್ವಲ್ಪ ದೊಡ್ಡವನು. ಶ್ರೀನಿವಾಸರ ಮನೆತನದವರು ಆರ್ಥಿಕವಾಗಿ ಅನುಕೂಲಸ್ಥರಾಗಿರಲಿಲ್ಲ. ಆದ್ದರಿಂದ ಬಾಲಕನಿಗೆ ಸಾಯಂಸಂಧ್ಯೆಯನ್ನು ಮಾಡಿಸಲು ತಾವು ಹೋಗಬೇಕಾದ ಅವಶ್ಯಕತೆಯಿಲ್ಲ. ತಮ್ಮ ಮಗನನ್ನು ಕಳುಹಿಸಿದರೂ ಆಗುತ್ತದೆ, ಯಾರೂ ಆಕ್ಷೇಪಿಸುವುದಿಲ್ಲ, ಎಂದುಕೊಂಡು ಹಿರಿಯ ಅವಧಾನಿಗಳು ತಮ್ಮ ಮಗನನ್ನು ಕಳುಹಿಸಿದರು.

ಪುರೋಹಿತರ ಮಗ ಗಣಪತಿ * ಬಂದರು. ಶ್ರೀ ಶ್ರೀನಿವಾಸರಿಗೆ ಸಂಧ್ಯಾವಂದನೆಯನ್ನೆಲ್ಲಾ ಕ್ರಮವಾಗಿ ಹೇಳಿಕೊಟ್ಟರು. ಉಪಸ್ಥಾನ ಮಂತ್ರವಾದನಂತರ ದಿಗ್ದೇವತೆಗಳಿಗೆ ವಂದನೆಯೂ ಆಯಿತು. ಆ ಬಳಿಕ ಸರ್ವದೇವತಾ ಪ್ರಾರ್ಥನೆಯೂ ಆಯಿತು. ನಮಸ್ಕಾರ ಮಾಡುವುದಕ್ಕೆ ಪ್ರವರವನ್ನು ಹೇಳಿಕೊಡುವಾಗ ಬಾಲಕ ಗಣಪತಿ ತಮ್ಮ ಪ್ರವರವನ್ನೇ ಹೇಳಿಬಿಟ್ಟರು. ತತ್‌ಕ್ಷಣವೇ ಶ್ರೀನಿವಾಸರು "ಮಧ್ಯಾಹ್ನ ಸಂಧ್ಯಾವಂದನೆಯ ಕಾಲದಲ್ಲಿ ನಿಮ್ಮ ತಂದೆಯವರು ಹೇಳಿಕೊಟ್ಟದ್ದು ಹೀಗೆ ಇರಲಿಲ್ಲ. ಏನೋ ವ್ಯತ್ಯಾಸವಿದೆ. ನೀವು ಹೇಳಿಕೊಡುತ್ತಿರುವುದು ಸರಿಯಲ್ಲ" ಎಂದು ಬಿಟ್ಟರು.

ಗಣಪತಿ "ಇಲ್ಲ ನಾನು ಸರಿಯಾಗಿ ಹೇಳಿಕೊಡುತ್ತಿದ್ದೇನೆ" ಎಂದು ವಾದಿಸಿದರು. ಅವರಿಗೆ ಉಪನಯನವಾಗಿ ಕೇವಲ ಒಂದುತಿಂಗಳಾಗಿತ್ತಷ್ಟೆ.

---

* ಈಗ ಶ್ರೀ ಮಠದ ಪುರೋಹಿತರು,

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀನಿವಾಸರು ಅದನ್ನೊಪ್ಪಲಿಲ್ಲ. " ಇಲ್ಲ ನೀವು ಹೇಳಿಕೊಡುತ್ತಿರುವುದು ಸರಿಯಾಗಿಲ್ಲ, ನನ್ನ ಸಂಧ್ಯಾವಂದನೆಯೆಲ್ಲಾ ವ್ಯರ್ಥವಾಯಿತು " ಎಂದು ಹಠ ಹಿಡಿದರು.

ಗಣಪತಿ " ಸರಿಯಾಗಿಯೇ ಇದೆ. ನಾನು ಸಂಧ್ಯಾವಂದನೆ ಮಾಡುವಾಗಲೆಲ್ಲಾ ಹೀಗೆಯೇ ಹೇಳುತ್ತೇನೆ. ಹಿರಿಯರಿಗೆ ನಮಸ್ಕಾರ ಮಾಡುವಾಗಲೂ ಅಷ್ಟೇ, ಇದೇ ಪ್ರವರವನ್ನು ನಾನು ಯಾವಾಗಲೂ ಹೇಳುವುದು, " ಎಂದು ವಾದ ಮಾಡಿದರು.

ಶ್ರೀನಿವಾಸರು ಒಪ್ಪಲಿಲ್ಲ. " ಇಲ್ಲ ತಪ್ಪು " ಎಂದು ಕುಳಿತು ಬಿಟ್ಟರು. ಮಧ್ಯಾಹ್ನ ವೆಂಕಟಸುಬ್ಬಾವಧಾನಿಗಳು ಹೇಳಿಕೊಟ್ಟ ಪ್ರವರ ಅವರ ನೆನಪಿಗೆ ಬರಲಿಲ್ಲ, ಕೇವಲ ಎರಡು ಸಲ ಮಾತ್ರ ತಾನೇ ಅವರು ಅದನ್ನು ಕೇಳಿದ್ದುದು. ಗಣಪತಿ " ನನಗೆ ಹೇಳಿಕೊಟ್ಟಿರುವುದೇ ಹೀಗೆ, ನಮ್ಮ ತ[illegible]ಯವರು ಇದೇ ಪ್ರವರವನ್ನು ಹೇಳುತ್ತಾರೆ " ಎಂದು ನುಡಿದರು.

ಆ ವೇಳೆಗೆ ಹಿರಿಯರೊಬ್ಬರು ಅಲ್ಲಿಗೆ ಬಂದರು. ಅವರು ಈ ಬಾಲಕರ ಚರ್ಚೆಯನ್ನು ಕೇಳಿ ಹಸನ್ಮುಖದಿಂದ " ಅಪ್ಪಾ ಗಣಪತಿ, ನೀನು ಹೇಳುತ್ತಿರುವುದು ಸರಿ. ಆದರೆ ಅದು ನಿನ್ನ ಪ್ರವರವಾಯಿತು, ಪ್ರತಿಯೊಬ್ಬರಿಗೂ ಪ್ರತ್ಯೇಕ ಪ್ರತ್ಯೇಕವಾದ ಋಷಿ ಪ್ರವರವಿರುತ್ತದೆ. ನಾವು ಯಾವ ಮಹರ್ಷಿಯ ವಂಶಕ್ಕೆ ಸೇರಿದ್ದೇವೆಯೋ ಆ ಪ್ರವರ ನಮ್ಮದಾಗುತ್ತದೆ, ಶ್ರೀನಿವಾಸನು ಕೌಂಡಿನ್ಯಸ ಗೋತ್ರಕ್ಕೆ ಸೇರಿದವನಾದ್ದರಿಂದ ಆತನ ಗೋತ್ರಪ್ರವರ ಬೇರೆಯಾಗುತ್ತದೆ " ಎಂದು ನುಡಿದು ಶ್ರೀನಿವಾಸರ ಪ್ರವರವನ್ನು ಹೇಳಿಕೊಟ್ಟರು.

ಉಪನಯನಾಂಗವಾದ ಸಮಾರಂಭಗಳೆಲ್ಲವೂ ಶಾಸ್ತ್ರೋಕ್ತವಾಗಿ ಮುಕ್ತಾಯಗೊಂಡವು. ರಾಮಾಶಾಸ್ತ್ರಿಗಳು ಮಗನನ್ನು ಕರೆದುಕೊಂಡು ಬೆಂಗಳೂರಿಗೆ ಹಿಂದಿರುಗಲು ಸಿದ್ಧತೆಮಾಡಿಕೊಂಡರು. ಶ್ರೀ ಶ್ರೀಗಳವರ ದರ್ಶನ ಮಾಡಿಕೊಂಡು ಅವರ ಅಪ್ಪಣೆಯನ್ನು ಪಡೆಯುವುದಕ್ಕಾಗಿ ನರಸಿಂಹವನಕ್ಕೆ ಬಂದರು.

ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರು ಇರ್ವರನ್ನೂ ನಗು ಮುಖದಿಂದ ಬರಮಾಡಿಕೊಂಡರು. ನಮಸ್ಕರಿಸಿ ಕೈಜೋಡಿಸಿನಿಂತ ಶ್ರೀನಿವಾಸರನ್ನು ಕುರಿತು " ನಿನಗೆ ಉಪನಯನವಾಯಿ[illegible]ಗೆ ಬಂದ ಕೆಲಸವಾಯಿತು. ನೀನಿನ್ನು ಬೆಂಗಳೂರಿಗೆ ಹಿಂದಿರುಗಿ, ತಪ್ಪದೇ ತ್ರಿಕಾಲ ಸಂಧ್ಯಾವಂದನೆ, ಅಗ್ನಿಕಾರ್ಯಗಳನ್ನು ಮಾಡಿಕೊಂಡಿರು " ಎಂದರು.

ವಟು ಶ್ರೀನಿವಾಸರು " ನಾನು ಬೆಂಗಳೂರಿಗೆ ಹೋಗುವುದಿಲ್ಲ. ಇಲ್ಲೇ ಇರುತ್ತೇನೆ " ಎಂದರು.

" ಬೆಂಗಳೂರಿಗೆ ಹೋಗಿ ಅಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ನಡೆಸಬಹುದಲ್ಲನೇ ? "

" ಇಲ್ಲ, ಇಲ್ಲಿಯೇ ಇದ್ದು ಸಂಸ್ಕೃತವನ್ನು ಕಲಿಯುತ್ತೇನೆ "

Sri Vidyabharathi Book Centre, Sringeri

CC-O. In Public Domain. Digitized by eGangotri

"ಏಕೆ, ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿದರೆ ಒಳ್ಳೆಯ ನೌಕರಿ ಸಿಗುತ್ತದೆ. ಕೈತುಂಬಾ ಸಂಬಳ ಬರುತ್ತದೆ ನೌಕರಿಯಲ್ಲಿ ಬಡ್ತಿಗಳೂ ದೊರಕುತ್ತವೆ. ದೊಡ್ಡ ಅಧಿಕಾರವೂ ಪ್ರಾಪ್ತವಾಗಬಹುದು, ಅಲ್ಲವೆ ?"

"ನನಗೆ ಅವು ಯಾವುದರಲ್ಲಿಯೂ ಆಸಕ್ತಿಯಿಲ್ಲ. ಇಲ್ಲಿಯೇ ಇದ್ದು ಸಂಸ್ಕೃತವನ್ನೂ ಶಾಸ್ತ್ರಗಳನ್ನೂ ಓದುವ ಇಚ್ಛೆಯಿಂದಿದ್ದೇನೆ" ಎಂದು ಶ್ರೀನಿವಾಸರು ನಮ್ರರಾಗಿ ನುಡಿದರು.

ಬ್ರಹ್ಮಚಾರಿ ಶ್ರೀನಿವಾಸರ ಮನಸ್ಸಿನಲ್ಲಿ ಇದ್ದ ಆಶಯವನ್ನು ತಿಳಿದು ಶ್ರೀ ಚಂದ್ರಶೇಖರಭಾರತೀಯವರು ತುಂಬಾ ಸಂತೋಷಿಸಿದರು. ಅವರು ಆತನನ್ನು ಶೃಂಗೇರಿಯಲ್ಲಿಯೇ ಬಿಟ್ಟಿರುವಂತೆ ರಾಮಾಶಾಸ್ತ್ರಿಗಳಿಗೆ ತಿಳಿಸಿದರು. ತಾಯಿಯೂ ಅದಕ್ಕೆ ಒಪ್ಪಿಗೆಯಿತ್ತರು.

ಉಪನಯನವಾದನಂತರ ಶ್ರೀನಿವಾಸರಿಗೆ ಶೃಂಗೇರಿಯಲ್ಲಿಯೇ ವಿದ್ಯಾಭ್ಯಾಸ ಪ್ರಾರಂಭವಾಯಿತು. ಶ್ರೀ ಬಂಡಿಗಡಿ ವೆಂಕಟರಾಮಭಟ್ಟರ ನೇತೃತ್ವದಲ್ಲಿ ಆರ್ಷವಿದ್ಯೆಯ ಅಭ್ಯಾಸ ನಡೆಯಿತು. ಸದ್ವಿದ್ಯಾಸಂಜೀವಿನೀ ಪಾಠಶಾಲೆಯಲ್ಲಿ ಪ್ರವೇಶವೂ ಆಯಿತು. ಬಾಲ್ಯ ಪಾಠವನ್ನು ಆರಂಭದಲ್ಲಿ ಶ್ರೀ ಮಲ್ಲೀಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳವರೂ, ಶ್ರೀ ಕೊಡೂರು ಶ್ಯಾಮಭಟ್ಟರವರೂ ಸ್ವಲ್ಪಕಾಲ ಹೇಳಿದ್ದರು.

೭. ಸಂನ್ಯಾಸ ದೀಕ್ಷೆ

ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳವರಿಗೆ ಬಾಲ ಶ್ರೀನಿವಾಸರನ್ನು ಕಂಡಾಗನಿಂದಲೂ ಆತನಲ್ಲಿ ವಿಶೇಷವಾದ ವಿಶ್ವಾಸ ಮೂಡಿತ್ತು. ಉಪನಯನವಾದನಂತರ ಆತ ಶೃಂಗೇರಿಯಲ್ಲಿಯೇ ಇದ್ದು ಸಂಸ್ಕೃತ ವಿದ್ಯಾಭ್ಯಾಸಮಾಡಲು ಅಪೇಕ್ಷಿಸಿದ್ದು ತುಂಬಾ ಸಂತೋಷವನ್ನುಂಟುಮಾಡಿತ್ತು. ಆತನ ಅಭ್ಯುದಯಕ್ಕೆ ಅಗತ್ಯವಾದ ಎಲ್ಲ ಏರ್ಪಾಡುಗಳನ್ನು ಮಾಡುವಂತೆ ಶ್ರೀಕಂಠಶಾಸ್ತ್ರಿಗಳಿಗೆ ಸೂಚನೆಯಿತ್ತಿದ್ದರು. ಆತನಲ್ಲಿ ಸ್ವಭಾವಸಿದ್ಧವಾಗಿ ಮೂಡಿದ್ದ ವೈರಾಗ್ಯ, ದೈವಭಕ್ತಿ, ಗುರುಹಿರಿಯರಲ್ಲಿ ಶ್ರದ್ಧಾ ಗೌರವ ಇವು ಶ್ರೀ ಗುರುದೇವರನ್ನು ತುಂಬಾ ಆಕರ್ಷಿಸಿದ್ದುವು. ಅವರು ಆತನ ವಿಚಾರವಾಗಿ ಯೋಚಿಸುತ್ತಿದ್ದಾಗಲೇ, ಒಂದು ಶುಕ್ರವಾರ ಬಾಲಕರೊಡನೆ ಆಡುತ್ತಿದ್ದ ಆತ, ಶಾರದಾಂಬಾ ಆಲಯಕ್ಕೆ ಬಂದಾಗ, ಭಕ್ತಿ ನಮ್ರತೆಯಿಂದ ತಮ್ಮ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನಿತ್ತು ತಮ್ಮನ್ನು ಸಂತೋಷಪಡಿಸಿದ್ದರು. ಅಂದಿನಿಂದ ಅವರಿಗೆ ಆತನಲ್ಲಿ ಅಭಿಮಾನ ಹೆಚ್ಚಿತು. ಆತನ ಜಾತಕ ತರಿಸಿ ಪರಿಶೀಲಿಸಲು ಸೂಕ್ತ ಸೂಚನೆಯಿತ್ತರು.

ಆ ಜಾತಕದಲ್ಲಿ ಒಂದು ವೈಶಿಷ್ಟ್ಯ ಕಂಡಿತ್ತು. ಗುರುದೇವರ ಗುರುಗಳಾಗಿದ್ದ ಶ್ರೀ ಶಿವಾಭಿನವ ನರಸಿಂಹಭಾರತಿಗಳವರು ಜನಿಸಿದ್ದುದೂ ಪಿಂಗಳನಾಮಸಂವತ್ಸರದಲ್ಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಮಗುರುಗಳಾಗಿದ್ದ ಶ್ರೀ ವೃದ್ಧನರಸಿಂಹಭಾರತೀಯವರು ಜನ್ಮ ತಳೆದಿದ್ದುದೂ ಪೈಂಗಳನಾಮ ಸಂವತ್ಸರದಲ್ಲಿ. ಈ ಬಾಲಕ ಶ್ರೀನಿವಾಸರ ಜನ್ಮವೂ ಪೈಂಗಳನಾಮ ಸಂವತ್ಸರದಲ್ಲಿ ! ಇದರಲ್ಲೇನೋ ಭಗವತ್ಸಂಕಲ್ಪವೂ ಪೂರ್ವಯೋಜನೆಯೂ ಇರಬೇಕು ಎನಿಸಿತು ಗುರುದೇವರಿಗೆ. ಬಾಲಕನ ಜಾತಕವನ್ನು ಪರಿಶೀಲಿಸಿದ ಜ್ಯೋತಿಷ್ಕರು ಜಾತಕನಿಗೆ ಸಂನ್ಯಾಸಾಶ್ರಮ ಯೋಗವಿರುವುದನ್ನು ಸ್ಪಷ್ಟಪಡಿಸಿದರು. ಗುರುದೇವರು ಜಾತಕದ ನಾನಾಭಾವಗಳನ್ನು ವಿಚಾರಿಸಿ ತಿಳಿದುಕೊಂಡು ತೃಪ್ತಿ ಸೂಚಿಸಿದರು. ಈ ಬಾಲಕನನ್ನೇ ಶಿಷ್ಯನನ್ನಾಗಿ ಏಕೆ ಅಂಗೀಕರಿಸಬಾರದೆಂದು ಯೋಚಿಸಿದರು. ಈ ಆಲೋಚನೆಯಲ್ಲಿದ್ದಾಗಲೇ ಅವರ ಗುರುವರ್ಯರಾಗಿದ್ದ ಶ್ರೀ ಶಿವಾಭಿನವ ನೃಸಿಂಹಭಾರತಿ ಸ್ವಾಮಿಗಳು ಅವರಿಗೆ ಸ್ವಪ್ನ ದರ್ಶನವಿತ್ತು, ತಮ್ಮ ಸಮ್ಮತಿಯನ್ನು ಸೂಚಿಸಿದರು. ತಮ್ಮ ಗುರುವರ್ಯರ ಅನುಮತಿಯಿಂದ ಶ್ರೀ ಚಂದ್ರಶೇಖರಭಾರತಿಯವರಿಗೆ ತುಂಬಾ ಸಂತೋಷವಾಯಿತು.

ಮಾರನೆಯ ದಿನ ಶ್ರೀಕಂಠಶಾಸ್ತ್ರಿಗಳು ಎಂದಿನಂತೆ ದರ್ಶನಕ್ಕೆ ಬಂದಾಗ, ಗುರುದೇವರು ತಮ್ಮ ಆಂತರ್ಯವನ್ನೂ, ತಮಗೆ ಶ್ರೀ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳವರಿಂದ ಬಂದ ಸ್ವಪ್ನದ ಆದೇಶವನ್ನೂ ವಿವರಿಸಿ, ಶ್ರೀ ಶ್ರೀನಿವಾಸರನ್ನು ಶಿಷ್ಯರನ್ನಾಗಿ ಸ್ವೀಕರಿಸಲು ನಿರ್ಧರಿಸಿರುವುದಾಗಿಯೂ ಈ ವಿಷಯವನ್ನು ವಟುವಿನ ಮಾತಾಪಿತರಿಗೆ ತಿಳಿಸಿ ಅವರ ಸಮ್ಮತಿಯನ್ನು ಪಡೆಯಬೇಕೆಂದೂ ಅಪ್ಪಣೆಯಿತ್ತರು. ಶಾಸ್ತ್ರಿಗಳಿಗೆ ಅಚ್ಚರಿಯಾಯಿತು.

ಈ ವೇಳೆಗಾಗಲೇ ಹಲವಾರು ಜನ ವಟುಗಳನ್ನು ಪರೀಕ್ಷಿಸಿ, ಒಬ್ಬಾತನನ್ನು ಆರಿಸಬಹುದೇನೋ ಎಂಬ ಊಹೆಯಿಂದ ಶೃಂಗೇರಿಯಲ್ಲಿಯೇ ಉಳಿಸಿಕೊಳ್ಳಲಾಗಿತ್ತು. ಆದರೆ ಆ ಊಹೆ ತಪ್ಪಾಗಿತ್ತು. ಶಾಸ್ತ್ರಿಗಳು ಅದನ್ನು ಬಿನ್ನವಿಸಿದಾಗ, 'ಈ ಬಾಲಕನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ನಮ್ಮ ಗುರುಗಳ ಅಪ್ಪಣೆ' ಎಂದರು ಗುರುದೇವರು.

"ಈ ಬಾಲಕ ಅಷ್ಟೇನು ಆರೋಗ್ಯವಂತನಲ್ಲ, ದೃಢಕಾಯನಲ್ಲ. ನೇತ್ರ ದೋಷವಿದೆ, ಕಿವಿಯಲ್ಲಿ ದೋಷವಿದೆ, ಉದರವ್ಯಾಧಿಯಿದೆ" ಎಂದು ಮುಂತಾಗಿ ಜಾತಕದಲ್ಲಿದ್ದ ಹಲವಾರು ಸಣ್ಣಪುಟ್ಟ ದೋಷಗಳನ್ನೆಲ್ಲಾ ಶಾಸ್ತ್ರಿಗಳು ವಿವರಿಸಿದರೂ ಗುರುದೇವರು, ಶಾಸ್ತ್ರಿಗಳವರ ಮಾತಗಳನ್ನು ಸಾವಧಾನವಾಗಿ ಕೇಳಿ "ಎಲ್ಲವನ್ನೂ ಶ್ರೀ ಶಾರದಾಮ್ಮನವರು ನೋಡಿಕೊಳ್ಳುತ್ತಾರೆ. ಅವರ ಆಯುರಾರೋಗ್ಯದ ವಿಷಯ ನಮಗಿರಲಿ" ಎಂಬುದಾಗಿ ಸ್ಪಷ್ಟವಾದ ಮಾತುಗಳಲ್ಲಿ ಅಪ್ಪಣೆ ಮಾಡಿದರು.

ಶಾಸ್ತ್ರಿಗಳು ಅಪ್ಪಣೆಯೆಂದು ನುಡಿದು, ಮುಂದಿನ ಕೆಲಸಕ್ಕಾಗಿ ಹೊರಟರು.

ಬೆಂಗಳೂರಿನಲ್ಲಿರುವ ಮಾತಾ-ಪಿತರಿಗೆ ಪತ್ರುಬರೆಸಲಾಯಿತು. ತಂದೆಗೆ ಸ್ವಲ್ಪ ಕಸಿವಿಸಿಯಾಯಿತು. ಆದರೆ ಮಹಾಮಾತೆಯಾಗಿದ್ದ ಸಾ॥ ವೆಂಕಟಲಕ್ಷ್ಮಮ್ಮನವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೃತ್ಪೂರ್ವಕವಾಗಿ ತಮ್ಮ ಪುತ್ರ ಶ್ರೀ ಶ್ರೀನಿವಾಸರನ್ನು ಶ್ರೀ ಶಾರದಾ ಗುರುಗಳಿಗೆ ಒಪ್ಪಿಸಿದರು ! ಆಕೆಯು ಪಡೆದಿದ್ದ ಅಪೂರ್ವ ಸಂಸ್ಕಾರವೇ ಅಂಥದು !

ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳವರು ತಮ್ಮ ನಿರ್ಧಾರದಂತೆ ಒಂದು ಶುಭದಿನ (ಮೇ ೨೨-೧೯೩೧) ಶ್ರೀ ಶ್ರೀನಿವಾಸರಿಗೆ ಸಂನ್ಯಾಸದೀಕ್ಷೆಯನ್ನು ಅನುಗ್ರಹಿಸಿ " ಶ್ರೀ ಅಭಿನವ ವಿದ್ಯಾತೀರ್ಥ " ಎಂಬ ಯೋಗಪಟ್ಟವನ್ನು ದಯಪಾಲಿಸಿದರು. ಶೃಂಗೇರಿಯ ಭವ್ಯಪರಂಪರೆಯಲ್ಲಿ ಹತ್ತನೆಯ ಜಗದ್ಗುರುಗಳವರು ಇದೇ ಅಭಿದಾನವನ್ನು ಹೊಂದಿದ್ದ ಮಹಾತ್ಮರಾಗಿದ್ದರು.

ಆಶ್ರಮ ಸ್ವೀಕಾರದ ದಿನ ಶಾಸ್ತ್ರದಂತೆ ಎಲ್ಲಾ ವಿಧಿಗಳೂ ಸಾಂಗವಾಗಿ ನಡೆದವು. ಸಂನ್ಯಾಸಾಂಗವಾದ ಅಷ್ಟಶ್ರಾದ್ಧಗಳೂ, ಪುರುಷಸೂಕ್ತ ಹೋಮ, ವಿರಜಾಹೋಮವಾದಿ ಕರ್ಮಗಳೂ ವಿಧಿಯುಕ್ತವಾಗಿ ನಡೆದವು. ಶ್ರೀ ಶ್ರೀನಿವಾಸರನ್ನ ಪ್ರೈಷಮಂತ್ರೋಚ್ಚಾರಣೆಗಾಗಿ ತುಂಗಾನದಿಗೆ ಕರೆದುಕೊಂಡು ಬರಲಾಯಿತು. ನರಸಿಂಹವನದ ಸಂಧ್ಯಾಮಂಟಪದಲ್ಲಿ ಶ್ರೀ ಚಂದ್ರಶೇಖರಭಾರತೀಯವರು ಉಪಸ್ಥಿತರಾಗಿದ್ದರು. ಶ್ರೀ ಶ್ರೀನಿವಾಸರು ತುಂಗಾನದಿಯಲ್ಲಿ ಇಳಿದು ಸ್ನಾನಗೈದು ಪ್ರೈಷಮಂತ್ರವನ್ನು ಘೋಷಿಸಿ, ಮೇಲೆ ಬರುತ್ತಿದ್ದಂತೆಯೇ ಶ್ರೀ ಗುರುದೇವರು ಅವರಿಗೆ ಕೌಪೀನ, ಕಟಿಸೂತ್ರ, ದಂಡ, ಕಮಂಡಲು, ಪಾದುಕೆ, ಕಾಷಾಯ ವಸ್ತ್ರಾದಿಗಳನ್ನು ಅನುಗ್ರಹಿಸಿದರು. ಶ್ರೀ ಗುರುದೇವರು ಬಾಲಯತಿವರ್ಯರ ಶ್ರೀಮಸ್ತಕದ ಮೇಲೆ ತಮ್ಮ ದಕ್ಷಿಣ ಹಸ್ತವನ್ನಿಟ್ಟು, ಶ್ರೀ ಶಾರದಾಂಬಾ ಮತ್ತು ಶ್ರೀ ಶಿವಾಭಿನವ ನರಸಿಂಹಭಾರತೀ ಗುರುಗಳ ಸ್ಮರಣೆಮಾಡುತ್ತಾ, " ಭೋ ಆಯುಷ್ಮಾನ್ ಇತೇಹಿ " ಎಂದು ಉಚ್ಚರಿಸಿದರು. ನೂತನ ಯತಿಗಳ ಆರೋಗ್ಯ ಮತ್ತು ದೀರ್ಘಾಯುರ್ಯೋಗದ ಬಗೆಗೆ ಯೋಚಿಸಿದ್ದವರಿಗೆಲ್ಲಾ ಶ್ರೀ ಗುರುದೇವರು ಮಾಡಿದ ಆಶೀರ್ವಾದ ಅರ್ಥಪೂರ್ಣವಾಗಿತ್ತು. ಪರಮೇಶ್ವರಾಂಶವೆಂದು ಭಾವಿಸಲ್ಪಟ್ಟಿದ್ದ ಶ್ರೀ ಚಂದ್ರಶೇಖರಭಾರತೀಯವರು ತಮ್ಮ ಶಿಷ್ಯರನ್ನು ಪೂರ್ಣವಾಗಿ ಅನುಗ್ರಹಿಸಿದ್ದರು. ಶ್ರೀ ಚಂದ್ರಶೇಖರರನ್ನಾಶ್ರಯಿಸಿದವರಿಗೆ ಯಾವ ಭಯ, ಎಲ್ಲಿಯ ಭಯ ? ಶ್ರೀ ಚಂದ್ರಶೇಖರಮಾಶ್ರಯೇ ಕಿಂ ಕರಿಷ್ಯತಿ ವೈ ಯಮಃ ?

ಶ್ರೀ ಗುರುದೇವರು ಆ ಬಳಿಕ ಬಾಲಯತಿವರ್ಯರನ್ನು ತಮ್ಮೊಡನೆಯೇ ಕರೆದುಕೊಂಡು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳವರ ಅಧಿಷ್ಠಾನಕ್ಕೆ ದಯಮಾಡಿಸಿ ಅಲ್ಲಿಯ ದಿವ್ಯಸನ್ನಿಧಿಯಲ್ಲಿ ಮಹಾವಾಕ್ಯೋಪದೇಶವನ್ನು ಅನುಗ್ರಹಿಸಿದರು.

ಅನಂತರ ಅವರನ್ನು ಕರೆದುಕೊಂಡು ಶ್ರೀ ಶಾರದಾಂಬಾ ಆಲಯಕ್ಕೆ ದಯಮಾಡಿಸಿದರು. ಪ್ರಾಚೀನವಾದ ಶ್ರೀ ವ್ಯಾಖ್ಯಾನಸಿಂಹಾಸನದಲ್ಲಿ ಬಾಲಯತಿವರ್ಯರನ್ನು ಕುಳ್ಳಿರಿಸಿ, ಸಾಂಪ್ರದಾಯಿಕವಾದ ಪೂಜಾದಿಗಳನ್ನು ನೆರವೇರಿಸಿ, ಗುರುಶಿಷ್ಯರಲ್ಲಿ ಅಭೇದ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಸಾರಿ, ಅಲ್ಲಿಯೇ ಯೋಗಪಟ್ಟವನ್ನ ಅನುಗ್ರಹಿಸಿದರು. ಆ ಬಳಿಕ ತಾವು ವ್ಯಾಖ್ಯಾನ ಪೀಠವನ್ನು ಆರೋಹಿಸಿ, ಶಿಷ್ಯ-ಯತಿವರ್ಯರು ನಡೆಸಿದ ಪೂಜಾದಿಗಳನ್ನು ಸ್ವೀಕರಿಸಿದರು.

ನೂತನ ಸ್ವಾಮಿಗಳವರಿಗೆ ಶ್ರೀ ಅಭಿನವವಿದ್ಯಾತೀರ್ಥ ಎಂಬ ಯೋಗಪಟ್ಟವನ್ನು ಅನುಗ್ರಹಿಸಿದರೆಂದು ಹೇಳಿದೆವಲ್ಲವೆ? ಈ ಯೋಗಪಟ್ಟವನ್ನು ಕೊಟ್ಟಿದರಲ್ಲಿ ಔಚಿತ್ಯವೂ ಇತ್ತು. ಜಗದಂಬೆ ಶ್ರೀ ಶಾರದೆಯ ಅಪೇಕ್ಷೆಯೂ ಹಾಗೆಯೇ ಇತ್ತೆಂದು ಕಾಣುತ್ತದೆ.

ಹಿಂದೆ ಭರತಖಂಡವು ಅತ್ಯಂತ ವಿಪತ್ತಿನಲ್ಲಿ ಸಿಲುಕಿದ್ದಾಗ, ಶೃಂಗೇರಿಯ ಜಗದ್ಗುರು ಪರಂಪರೆಯಲ್ಲಿ ಹತ್ತನೆಯವರಾಗಿ ಶ್ರೀವಿದ್ಯಾತೀರ್ಥರೊಬ್ಬರು ಇದ್ದರಷ್ಟೆ.* ಅವರು ವಿದ್ಯಾಶಂಕರರೆಂದೂ ಪ್ರಸಿದ್ಧರಾಗಿದ್ದರು. ಅವರು ಮಹಾತಪಸ್ವಿಗಳೂ, ಮಹಾ ಯೋಗಿಗಳೂ, ಲೋಕಾನುಗ್ರಹಕರ್ತರೂ ಆಗಿದ್ದ ಮಹಾತ್ಮರು. ಇಡೀ ಭರತಖಂಡ ವನ್ನು ಸಂಚರಿಸಿ ಅಂದಿನ ಧಾರ್ಮಿಕ, ಸಾಮಾಜಿಕ, ರಾಜಕೀಯ ವಾತಾವರಣವನ್ನು ಅರಿತಿದ್ದ ಆ ಮಹಾತ್ಮರು ಜನತೆಯ ನೈತಿಕ ಪತನವನ್ನು ಕಂಡು ಮರುಗಿ ಅವರ ಉದ್ಧಾರ ಕ್ಕಾಗಿ ಉಗ್ರತಪಸ್ಸು ಮಾಡಿದ್ದರು. ತಾವು ಗಳಿಸಿದ ಮಹತ್ತಾದ ತಪಃಶಕ್ತಿಯನ್ನು ರಾಷ್ಟ್ರದ ಸರ್ವಾಂಗೀಣ ಉನ್ನತಿಗಾಗಿ ತ್ಯಾಗಮಾಡಿದ ವೈರಾಗ್ಯ ಪ್ರಭು ಅವರಾಗಿದ್ದರು. "ಯತಿಚಕ್ರವರ್ತಿಯಾದ ಶ್ರೀ ವಿದ್ಯಾತೀರ್ಥರು ನಿಶ್ಚಯವಾಗಿಯೂ ಸೂರ್ಯನಿಗಿಂತಲೂ ಅತಿಶಯವಾದವರು. ಏಕೆಂದರೆ ಸೂರ್ಯನು ನಮ್ಮ ಸುತ್ತಲೂ ಇರುವ ಕತ್ತಲನ್ನು ಹಗಲಿನಲ್ಲಿ ಮಾತ್ರ ಹೋಗಲಾಡಿಸುತ್ತಾನೆ. ಶ್ರೀ ವಿದ್ಯಾತೀರ್ಥರೋ ನಮ್ಮ ಎಲ್ಲಾ ಒಳ ಹೊರಗಿನ ಅಂಧಕಾರವನ್ನು ರಾತ್ರಿ-ಹಗಲೂ ಹೋಗಲಾಡಿಸುತ್ತಾರೆ" ಎಂದು ವಿಜಯನಗರದ ಚಕ್ರವರ್ತಿ ಇಮ್ಮಡಿ ಹರಿಹರನು ಈ ಗುರುವರ್ಯರ ವೈಶಿಷ್ಟ್ಯವನ್ನು ಪ್ರಶಂಸಿಸಿದ್ದಾನೆ. ಈ ಮಹಾಯೋಗಿಗಳು ತಮ್ಮಲ್ಲಿ ಸಂನ್ಯಾಸ ದೀಕ್ಷೆಗಾಗಿ ಬಂದ ಮಾಧವ ವಿದ್ಯಾರಣ್ಯರನ್ನು ದೇಶ, ಧರ್ಮಗಳ ರಕ್ಷಣೆಗಾಗಿ ಪ್ರಚೋದಿಸಿ ತಮ್ಮ ತಪಃ ಫಲವನ್ನೆಲ್ಲಾ ಅವರಿಗೆ ಧಾರೆಯೆರೆದು ತಾವು ಸಶರೀರರಾಗಿ ಗುಹಾಪ್ರವೇಶ ಮಾಡಿ ಲಂಬಿಕಾಯೋಗ ನಿರತರಾದರು. ಶೃಂಗೇರಿಯಲ್ಲಿರುವ ಶ್ರೀ ವಿದ್ಯಾಶಂಕರ ದೇವಾಲಯವು ಆ ಗುಹೆಯ ಮೇಲೆಯೇ ನಿರ್ಮಿತವಾದ ಅಪೂರ್ವವಾದ ಸ್ಮಾರಕ ಮಂದಿರ. ಅವರ ಮಹದಾಜ್ಞೆಗನುಸಾರವಾಗಿಯೇ ಶ್ರೀ ವಿದ್ಯಾರಣ್ಯ ಸ್ವಾಮಿಗಳು ಕರ್ಣಾಟಕ ಸಾಮ್ರಾಜ್ಯ ವನ್ನು ಸ್ಥಾಪಿಸಿ ದೇಶಧರ್ಮಗಳ ರಕ್ಷಣೆಗೆ ಕಾರ್ಯಶೀಲರಾದುದು.

ಅಂದಿನ ಪರಿಸ್ಥಿತಿಗಿಂತಲೂ ಉತ್ಕಟವಾದ ಪರಿಸ್ಥಿತಿ ಇಂದು ಭರತಖಂಡದ ಧಾರ್ಮಿಕ ಕ್ಷೇತ್ರದಲ್ಲಿ ಮೂಡಿದ್ದುದನ್ನು ಗಮನಿಸಿದ್ದ ಶ್ರೀ ಚಂದ್ರಶೇಖರಭಾರತೀಯವರು ತಮ್ಮ ಶಿಷ್ಯರೂ ಸಹ ಶ್ರೀ ವಿದ್ಯಾತೀರ್ಥರಂತೆಯೇ ರಾಷ್ಟ್ರದ ಧರ್ಮೋತ್ಥಾನಕ್ಕಾಗಿ ಧ್ಯಾನ

---

* ಅವರ ಕಾಲ ೧೨೨೮ – ೧೩೩೩

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂಜಾ ಅನುಷ್ಠಾನಾದಿಗಳನ್ನು ನಡೆಸಲಿ, ತಮ್ಮ ತಪಸ್ಸಿನ ಫಲವನ್ನೆಲ್ಲಾ ಧರ್ಮಪ್ರಸಾರಕ್ಕಾಗಿ ತ್ಯಾಗಮಾಡಲಿ ಎಂಬ ಅಪೇಕ್ಷೆಯಿಂದ ತಮ್ಮ ಶಿಷ್ಯರಿಗೆ ಶ್ರೀ ಅಭಿನವ ವಿದ್ಯಾತೀರ್ಥ ಎಂದು ನಾಮಕರಣ ಮಾಡಿದರು.

೮. ಇವರೇ ಇಂದಿನಿಂದ ಗುರುಗಳು

ತಾವು ಒಪ್ಪಿ ಆರಿಸಿದ ವಟುವಿನಲ್ಲಿ ಶ್ರೀ ಗುರುದೇವರಿಗೆ ಸಂಪೂರ್ಣ ವಿಶ್ವಾಸವಿತ್ತು, ಭರವಸೆಯಿತ್ತು, ತೃಪ್ತಿ ಸಂತೋಷ ಸಮಾಧಾನಗಳೂ ಇದ್ದವು. ನೂತನ ಗುರುಗಳಿಗೆ ಆಶ್ರಮವಾದ ದಿನ ಸಂಜೆ ಹಿರಿಯ ಮತ್ತು ಕಿರಿಯ ಗುರುಗಳಿಬ್ಬರೂ ಶೃಂಗೇರಿ ಕ್ಷೇತ್ರದಲ್ಲಿ ಉತ್ಸವದಲ್ಲಿ ಹೊರಟು ಭಕ್ತರಿಗೆ ದರ್ಶನ ಕೊಡುವುದಕ್ಕೆ ಸಿದ್ಧತೆ ನಡೆದಿತ್ತು. ಅದಕ್ಕಾಗಿ ಎರಡು ಪಾಲಕಿಗಳು ಅಣಿಗೊಳಿಸಲ್ಪಟ್ಟಿದ್ದವು. ಮುಂಭಾಗದಲ್ಲಿ ಹಿರಿಯ ಗುರುಗಳಿಗಾಗಿ ಸ್ವರ್ಣಪಾಲಕಿಯೂ, ಅದರ ಹಿಂಬದಿಯಲ್ಲಿ ನೂತನ ಗುರುಗಳಿಗಾಗಿ ರಜತ ಪಾಲಕಿಯೂ ಸಿದ್ಧಪಡಿಸಲ್ಪಟ್ಟಿದ್ದವು.

ಶ್ರೀ ಶಾರದಾಂಬಾರವರ ದರ್ಶನಾನಂತರ ಶ್ರೀ ಚಂದ್ರಶೇಖರ ಭಾರತೀಯವರು ಶ್ರೀ ವಿದ್ಯಾತೀರ್ಥರನ್ನು ಕೈಹಿಡಿದು ಕರೆದುಕೊಂಡು ಸಿಂಹರಾಜನಂತೆ ನಿಧಾನವಾಗಿ ಹೆಜ್ಜೆ ಹಾಕುತ್ತಾ ಉತ್ಸವದ ಮಂಟಪದ ಬಳಿಗೆ ದಯಮಾಡಿಸಿದರು. ಬೆಳ್ಳಿಯ ಪಲ್ಲಕ್ಕಿಯವರೆಗೆ ಬಂದಕೂಡಲೇ ಶ್ರೀಚಂದ್ರಶೇಖರ ಭಾರತೀಯವರು ಶಿಷ್ಯರ ಕೈಯನ್ನು ಬಿಟ್ಟು ತಾವು ಬೆಳ್ಳಿಯ ಪಾಲಕಿಯಲ್ಲಿ ಕುಳಿತುಬಿಟ್ಟರು. ಶಿಷ್ಯರನ್ನು ಚಿನ್ನದ ಪಾಲಕಿಯಲ್ಲಿ ಕುಳಿತುಕೊಳ್ಳಬೇಕೆಂದು ಸೂಚಿಸಿದರು. ಇನ್ನೂ ಚಿಕ್ಕವರಾಗಿದ್ದ ಕಿರಿಯ ಗುರುಗಳಿಗೆ ಆಶ್ಚರ್ಯವಾಗಿ ಏನು ಮಾಡಬೇಕೆಂದು ತೋಚದೆ ನಿಂತಲ್ಲಿಯೇ ನಿಂತುಬಿಟ್ಟರು. ಉತ್ಸವವನ್ನು ವೀಕ್ಷಿಸಲು ಬಂದಿದ್ದ ಜನಸ್ತೋಮಕ್ಕಂತೂ ತುಂಬಾ ಆಶ್ಚರ್ಯ ಕುತೂಹಲಗಳುಂಟಾದವು. ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆಂದು ತೋಚದೆ ಮಠದ ಅಧಿಕಾರಿ ವರ್ಗದವರೂ ಕ್ಷೇತ್ರದ ಹಿರಿಯರೂ ತಬ್ಬಿಬ್ಬಾದರು. ಕಡೆಗೆ ಒಬ್ಬಿಬ್ಬರು ಹಿರಿಯರು ಧೈರ್ಯಮಾಡಿ ಹಿರಿಯ ಗುರುಗಳ ಸಮೀಪಕ್ಕೆ ಬಂದು ನಮಸ್ಕರಿಸಿ "ಸನ್ನಿಧಾನವು ಚಿನ್ನದ ಪಾಲಕಿಯಲ್ಲಿ ಮಂಡಿಸಬೇಕು. ನೂತನ ಗುರುಗಳು ಬೆಳ್ಳಿಯ ಪಾಲಕಿಯಲ್ಲಿ ಮಂಡಿಸಬೇಕು. ಇದು ಹಿಂದಿನಿಂದಲೂ ನಡೆದು ಬಂದ ರೂಢಿ" ಎಂದು ವಿನೀತರಾಗಿ ಮನವಿ ಮಾಡಿಕೊಂಡರು. ಶ್ರೀ ಚಂದ್ರಶೇಖರ ಭಾರತೀಯವರು ಒಪ್ಪಲಿಲ್ಲ. ಇನ್ನೂ ಹಲವರು ಹಿರಿಯರು ಬಂದು ಪ್ರಾರ್ಥಿಸಿಕೊಂಡರು. ಗುರುದೇವರ ಬಳಿ ಅವರಾರ ಮಾತೂ ನಡೆಯಲಿಲ್ಲ. ಕಡೆಗೆ ಮಠದ ಕಾರ್ಯಭಾರಿಯಾಗಿದ್ದ ಶ್ರೀಕಂಠ ಶಾಸ್ತ್ರಿಗಳೇ ಸಮೀಪಕ್ಕೆ ಬಂದು "ಎಂದಿನಂತೆ ಹಿರಿಯ ಗುರುಗಳು ಚಿನ್ನದ ಪಾಲಕಿಯಲ್ಲಿ ಮಂಡಿಸಿ ನೂತನ ಯತಿವರ್ಯರು ಬೆಳ್ಳಿಯ ಪಾಲಕಿಯಲ್ಲಿ ಮಂಡಿಸಿ ಉತ್ಸವದಲ್ಲಿ ಬಿಜಯ ಮಾಡುವುದು ಸಂಪ್ರದಾಯ. ಸನ್ನಿಧಾನವು ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕು" ಎಂದು ಕೇಳಿಕೊಂಡರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ಗುರುದೇವರು "ಶಾಸ್ತ್ರಿಗಳೇ, ಇಂದಿನ ಉತ್ಸವಾದಿಗಳು ಯಾರ ನಿಮಿತ್ತವಾಗಿ ನಡೆಯುತ್ತಿವೆ ಎಂಬುದು ತಮಗೆ ತಿಳಿಯದೇನು? ಇಂದಿನಿಂದ ಶ್ರೀಅಭಿನವ ವಿದ್ಯಾತೀರ್ಥರು ನಮ್ಮ ಜಗದ್ಗುರುಗಳು. ಈ ಪೀಠಕ್ಕೆ ಸಲ್ಲಬೇಕಾದ ಮರ್ಯಾದೆ ಗೌರವ ವೈಭವ ಎಲ್ಲವೂ ಅವರಿಗೇ ಸಲ್ಲಬೇಕು, ನನಗಲ್ಲ. ಸಾಂಪ್ರದಾಯಿಕವಾದ ಉತ್ಸವ ಬಿರುದು ಬಾವಲಿ ಮುಂತಾದ ಸಕಲವೂ ಅವರಿಗೆ, ನನಗಲ್ಲ. ಇನ್ನುಮೇಲೆ ನೀವು ನನ್ನನ್ನು ನನ್ನಷ್ಟಕ್ಕೆ ಬಿಡಬೇಕು. ಸ್ವಚ್ಛಂದ ಸ್ವಾತಂತ್ರ್ಯಗಳಲ್ಲಿರಲು ನನಗೆ ಪೂರ್ಣ ಅವಕಾಶವಿರಬೇಕು. ಇಂದಿನಿಂದಲೇ ನನ್ನ ಅಭೀಷ್ಟವು ನೆರವೇರಲಿ. ಶ್ರೀ ವಿದ್ಯಾತೀರ್ಥರನ್ನು ಸ್ವರ್ಣ ಪಾಲಕಿಯಲ್ಲಿ ಬಿಜಯಮಾಡಿಸಿರಿ" ಎಂದು ಅಪ್ಪಣೆ ಮಾಡಿಸಿದರು. ಶ್ರೀ ಗುರುದೇವರ ಅಪೇಕ್ಷೆಯಂತೆಯೇ ಉತ್ಸವವು ನಡೆಯಿತು.

ಅದೇ ರಾತ್ರಿ ಸ್ನಾನಾಹ್ನಿಕಗಳಾದ ನಂತರ ಶ್ರೀ ಗುರುದೇವರು ಬಾಲಯತಿವರ್ಯರನ್ನು ಕರೆದುಕೊಂಡು ಶ್ರೀ ಶಾರದಾಂಬಾ ಆಲಯಕ್ಕೆ ದೀಪಾರಾಧನೆಗೆ ದಯಮಾಡಿಸಿದರು. ಶ್ರೀ ದೇವಿಯ ಆಲಯಕ್ಕೆ ಬರುತ್ತಿದ್ದಂತೆಯೇ ಬೇಗ ಬೇಗ ಮುಂಪಡಿಯಿಡುತ್ತಿದ್ದ ಶ್ರೀ ವಿದ್ಯಾತೀರ್ಥರನ್ನು ಹಿರಿಯ ಗುರುಗಳು ಕೈಹಿಡಿದು, ನಿಧಾನವಾಗಿ ದೇವಿಯ ದಿವ್ಯ ಸನ್ನಿಧಿಗೆ ಬರುತ್ತಾ ಕೇಳಿದರು.

"ಈಗ ನಾವು ಹೋಗುತ್ತಿರುವುದು ಎಲ್ಲಿಗೆ ತಮಗೆ ಗೊತ್ತೇ?"

"ಶ್ರೀ ಶಾರದಾಂಬಾವರ ಸನ್ನಿಧಿಗೆ"

"ಅಷ್ಟೇ ಅಲ್ಲ. ನಾವು ನಮ್ಮ ಮಾತೆಯ ಪ್ರತ್ಯಕ್ಷ ಸನ್ನಿಧಿಗೆ ಹೋಗುತ್ತಿದ್ದೇವೆ. ನಮ್ಮ ಈ ಮಾತೆ ಜಗತ್ತಿನಲ್ಲಿರುವ ಇತರ ಮಾತೆಯರಂತಲ್ಲ. ಈಕೆ ವಿಶ್ವಮಾತೆ, ಅಲೌಕಿಕ ಶಕ್ತಿಯುಳ್ಳವಳು, ಉಪಮಾತೀತಳು. ನಮ್ಮ ಅಭೀಷ್ಟಗಳನ್ನೆಲ್ಲಾ ಈಡೇರಿಸುವ ಕಲ್ಪತರು. ಈ ಮಹಾಮಾತೆಯ ಸನ್ನಿಧಿಗೆ ನಾವು ನಮ್ರವಾಗಿ ಪೂರ್ಣವಿಶ್ವಾಸ ಮತ್ತು ಶ್ರದ್ಧೆಯಿಂದ ಹೋಗಬೇಕು" ಎಂದು ನುಡಿದರು.

ಇಬ್ಬರೂ ಶ್ರೀ ಶಾರದಾಂಬಾವರನ್ನು ವಿಶೇಷವಾಗಿ ಪೂಜಿಸಿ ಲೋಕಾನುಗ್ರಹ ಮಾಡುವಂತೆ ಪ್ರಾರ್ಥಿಸಿದರು.

ಶ್ರೀ ವಿದ್ಯಾತೀರ್ಥರನ್ನು ಶ್ರೀ ಗುರುದೇವರು ತಮ್ಮ ಗುರುಗಳಾಗಿದ್ದ ಶ್ರೀಶಿವಾಭಿನವ ನರಸಿಂಹ ಭಾರತೀಯವರ ಅಂಶವೇ ಎಂದು ಭಾವಿಸಿದ್ದರು. ಇದನ್ನು ಆಗಾಗ ಇತರರಿಗೂ ಸ್ಪಷ್ಟವಾಗುವಂತೆ ಮನದಟ್ಟು ಮಾಡಿಕೊಡುತ್ತಿದ್ದರು. ಶ್ರೀಕಂಠಶಾಸ್ತ್ರಿಗಳವರ ನಂತರ ಮಠದ ಕಾರ್ಯಭಾರಿಯಾಗಿದ್ದ 'ಗುರುಭಕ್ತತಿಲಕ' ಹೆಚ್. ನಂಜುಂಡಯ್ಯನವರೊಡನೆ ಶ್ರೀಗುರುದೇವರು ಅನೇಕ ಸಲ ಈ ವಿಷಯವನ್ನು ತಿಳಿಸಿ "ಶ್ರೀಅಭಿನವ ವಿದ್ಯಾತೀರ್ಥರು ನಮ್ಮ ಗುರುಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀಗಳವರಂತೆಯೇ ರಾಜ ಯೋಗಿಗಳಾಗಿ ಪ್ರಸಿದ್ಧರೂ ಪ್ರಖ್ಯಾತರೂ ಆಗುತ್ತಾರೆ. ಮಹಾ ಪರಿವ್ರಾಜಕ

Sri Vidyabharathi Book Centre, Sringeri

 CC-O. In Public Domain. Digitized by eGangotri

ರಾಗಿ ಧರ್ಮಪ್ರಸಾರ ಮಾಡುತ್ತಾರೆ" ಎಂದು ನುಡಿದಿದ್ದರು. ಆ ನುಡಿಗಳು ಮುಂದೆ ಅಕ್ಷರಶಃ ದಿಟವಾದವು. ಹಾಗೆಯೇ ಮಠದ ಪಂಡಿತರಾಗಿದ್ದ ಶ್ರೀಯುತ ವಿ. ಎಸ್. ರಾಮಚಂದ್ರಶಾಸ್ತ್ರಿಗಳೊಡನೆಯೂ ಹಲವುಜನ ಇತರ ಆಪ್ತರೊಡನೆಯೂ ನುಡಿದಿದ್ದರು.

ತಮ್ಮ ದರ್ಶನಕ್ಕೆ ದೂರ ದೂರದ ಊರುಗಳಿಂದ ಬಂದ ಭಕ್ತರ ಯೋಗಕ್ಷೇಮವನ್ನು ವಿಚಾರಿಸಿದ ನಂತರ ಗುರುದೇವರು "ಸನ್ನಿಧಾನದ ದರ್ಶನವಾಯಿತೆ ?" ಎಂದು ಕೇಳುತ್ತಿದ್ದರು. ಹಾಗೆ ಪ್ರಶ್ನಿತರಾದ ಬಹುಮಂದಿ ಪ್ರಶ್ನೆ ಏನೆಂದು ಅರ್ಥವಾಗದೆ ನಿಂತಿದ್ದರೆ, "ಚಿಕ್ಕ ಗುರುಗಳ ದರ್ಶನವಾಯಿತೆ ?" ಎಂದು ಕೇಳಿ ಸನ್ನಿಧಾನವೆಂದರೆ ಚಿಕ್ಕಗುರುಗಳೇ ಎಂಬುದನ್ನು ಸ್ಪಷ್ಟಪಡಿಸುತ್ತಿದ್ದರು. ತಮಗೂ ತಮ್ಮ ಶಿಷ್ಯರಿಗೂ ಯಾವ ವ್ಯತ್ಯಾಸವೂ ಇರದೆ ತಾವಿಬ್ಬರೂ ಒಂದೇ ಎಂಬುದನ್ನು ಪದೇ ಪದೇ ಸ್ಪಷ್ಟಪಡಿಸುತ್ತಿದ್ದರು.

ಒಮ್ಮೆ ಶ್ರೀಗುರುದೇವರಲ್ಲಿ ಮಾತನಾಡುತ್ತಿದ್ದ ಭಕ್ತರೊಬ್ಬರು ಶ್ರೀವಿದ್ಯಾತೀರ್ಥರು ಆಗಮಿಸುತ್ತಿದ್ದುದನ್ನು ಕಂಡು "ಚಿಕ್ಕವರು ಬರುತ್ತಿದ್ದಾರೆ" ಎಂದು ನುಡಿದರು. ತತ್ಕ್ಷಣವೇ ಗುರುಗಳು ಬದ್ಧಭ್ರುಕುಟಿಯಲ್ಲಿ "ನೀವು ಹೇಳುತ್ತಿರುವುದೇನು ? ಯಾರನ್ನು ಕುರಿತು ಮಾತನಾಡುತ್ತಿರುವಿರಿ ? ಶ್ರೀ ಅಭಿನವ ವಿದ್ಯಾತೀರ್ಥರನ್ನು ಕುರಿತು ನುಡಿಯುವಾಗ ಸನ್ನಿಧಾನ ಎಂದು ನುಡಿಯಬೇಕು ಅವರು ನಮ್ಮ ಗುರುಗಳಾದ ಶ್ರೀ ಶಿವಾಭಿನವ ನರಸಿಂಹ ಭಾರತಿಗಳವರಿದ್ದಂತೆ" ಎಂದು ನುಡಿದು ಆ ಭಕ್ತರನ್ನು ತಿದ್ದಿದರು. ಹಲವರು ತೀರ್ಥಪ್ರಸಾದಕ್ಕಾಗಿ ಫಲಮಂತ್ರಾಕ್ಷತೆಗಾಗಿ ಶ್ರೀ ಗುರುದೇವರಲ್ಲಿ ಬಂದರೆ ಅವರು ಆ ಭಕ್ತರನ್ನೆಲ್ಲಾ ಶ್ರೀ ವಿದ್ಯಾತೀರ್ಥರಿದ್ದಲ್ಲಿಗೆ ಕಳಹುತ್ತಿದ್ದರು. "ನಿಮಗೆ ಫಲಮಂತ್ರಾಕ್ಷತೆ ದೊರಕುವುದು ಇಲ್ಲಲ್ಲ, ಅಲ್ಲಿ" ಎಂದು ಹಸನ್ಮುಖದಿಂದ ನುಡಿಯುತ್ತಿದ್ದರು.

೯. ಶ್ರೀ ಗುರುತತ್ವ

ಶ್ರೀ ಶಂಕರಭಗವತ್ಪಾದರಿಂದ ಮುಂದುವರೆದ ಗುರುತತ್ವವು ಶೃಂಗೇರಿಯ ಆಚಾರ್ಯರಲ್ಲಿ ಏಕಪ್ರಕಾರವಾಗಿ ಪ್ರವಹಿಸುತ್ತಿದೆ. ಶೃಂಗೇರಿಯ ಆಚಾರ್ಯರಲ್ಲಿ ನಾಮರೂಪ ಮತ್ತು ಕಾಲಗಳಲ್ಲಿ ವ್ಯತ್ಯಾಸವೇ ವಿನಾ ಗುರುತತ್ವವು ಒಂದೇ ಆಗಿದ್ದು ಅಖಂಡವಾಗಿ ಪ್ರಕಾಶಿಸುತ್ತಿರುತ್ತದೆ. ಆಯಾ ಆಚಾರ್ಯರ ಅನುಷ್ಠಾನ ಉಪಾಸನೆಗಳು ಮುಂದುವರೆದಂತೆಲ್ಲಾ ಅನೇಕ ವೇಳೆ ಹಿಂದಿನ ಆಚಾರ್ಯರಂತೆಯೇ ಮುಂದಿನವರೂ ಗೋಚರಿಸುವುದುಂಟು. ಶ್ರೀ ಚಂದ್ರಶೇಖರ ಭಾರತೀಯವರಲ್ಲಿ ಮತ್ತು ಶ್ರೀ ವಿದ್ಯಾತೀರ್ಥರಲ್ಲಿ ಭೇದ ವ್ಯತ್ಯಾಸಗಳನ್ನು ಹುಡುಕುತ್ತಿದ್ದ ಮತ್ತು ಕಾಣುತ್ತಿದ್ದ ಭಕ್ತರಿಗೆ ಶ್ರೀ ಚಂದ್ರಶೇಖರ ಭಾರತೀಯವರು ಅನೇಕ ಸಂದರ್ಭಗಳಲ್ಲಿ ತಮಗೂ ತಮ್ಮ ಶಿಷ್ಯರಿಗೂ ಯಾವ ವ್ಯತ್ಯಾಸ ಭೇದವೂ ಇಲ್ಲವೆಂಬುದನ್ನು ಮನಗಾಣಿಸುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಆರ್. ಕೃಷ್ಣಸ್ವಾಮಿ ಅಯ್ಯರ್‌ರವರು ಶೃಂಗೇರಿ ಆಚಾರ್ಯರ ಪರಮ ಭಕ್ತರಲ್ಲಿ ಶ್ರೇಷ್ಠರೂ, ಮಹಾಸಾಧಕರೂ ಆದವರು ಮತ್ತು ಒಳ್ಳೆಯ ಲೇಖಕರು. ಹಲವಾರು ಉದ್ಗ್ರಂಥಗಳನ್ನು ಇಂಗ್ಲೀಷ್ ಮತ್ತು ತಮಿಳು ಭಾಷೆಯಲ್ಲಿ ಬರೆದಿದ್ದಾರೆ. ಅವರ ಪಿತೃವರ್ಯರಾಗಿದ್ದ ಶ್ರೀ ರಾಮಚಂದ್ರಯ್ಯರವರು ಶ್ರೀ ಶಿವಾಭಿನವ ನರಸಿಂಹ ಭಾರತೀಯವರಿಂದಲೂ ಶ್ರೀ ಚಂದ್ರಶೇಖರಭಾರತೀಯವರಿಂದಲೂ ಅನುಗ್ರಹ ಪಡೆದಿದ್ದ ಪುಣ್ಯವಂತರು. ಅವರು ವೈರಾಗ್ಯದಿಂದ ವಾನಪ್ರಸ್ಥರಾಗಿ ಶೃಂಗೇರಿಯಲ್ಲಿಯೇ ಬಹು ಕಾಲವಿದ್ದು ಆಧ್ಯಾತ್ಮಿಕ ಸಾಧನೆ ಮಾಡಿದ್ದರು. ಅನಂತರ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಅಪ್ಪಣೆಯಂತೆ ತುರೀಯಾಶ್ರಮ ಸ್ವೀಕರಿಸಿ ತಾಮ್ರಪರ್ಣೀ ತೀರದಲ್ಲಿ ತಪೋಮಗ್ನರಾಗಿದ್ದು ಅವಧೂತಸ್ಥಿತಿಯನ್ನು ತಲುಪಿದ್ದ ಮಹಾತ್ಮರು. ಕೃಷ್ಣಸ್ವಾಮಿ ಅಯ್ಯರ್ ಅವರೂ ತಂದೆಯವರಂತೆಯೇ ಶಾಸ್ತ್ರಜ್ಞರೂ, ಶ್ರೇಷ್ಠಸಾಧಕರೂ ಆಗಿದ್ದು ಶೃಂಗೇರಿಯ ಗುರುಗಳನ್ನು ತಮ್ಮ ಮನೆದೇವರೆಂದೇ ನಂಬಿದ್ದರು.*

ಒಂದು ರಾತ್ರಿ ಕೃಷ್ಣಸ್ವಾಮಿ ಅಯ್ಯರ್‌ರವರಿಗೆ ಒಂದು ವಿಶಿಷ್ಟವಾದ ಸ್ವಪ್ನವಾಯಿತು.

ಶ್ರೀ ಚಂದ್ರಶೇಖರ ಭಾರತೀಯವರು ತಮ್ಮ ನಗರಕ್ಕೆ ದಯಮಾಡಿಸಿದ್ದಂತೆ ಸ್ವಪ್ನ. ರಾತ್ರಿಯ ಶ್ರೀ ಚಂದ್ರಮೌಳೀಶ್ವರ ಪೂಜೆಗೆ ಅಯ್ಯರ್ ಹೋಗಿದ್ದಾರೆ. ವಿಪರೀತ ಜನವು ಸೇರಿ ಪೂಜೆಯನ್ನು ಏಕಮನಸ್ಕರಾಗಿ ನೋಡುತ್ತಿದ್ದಾರೆ. ಒಂದು ಕಡೆ ಅಭಿಷೇಕ ಮಂತ್ರ ಘೋಷ ಕೇಳಿಬರುತ್ತಿದೆ. ಇನ್ನೊಂದು ಕಡೆ ಮೃದುಮಧುರವಾದ ವಾದ್ಯ ಸಂಗೀತ ನಿನಾದ ಹರಡುತ್ತಿದೆ. ಶ್ರೀ ಗುರುದೇವರು ತಲ್ಲೀನರಾಗಿ ಶ್ರೀ ಚಂದ್ರಮೌಳೀಶ್ವರನಿಗೆ ಅಭಿಷೇಕ ಮಾಡುತ್ತಿದ್ದಾರೆ. ಅಯ್ಯರ್ ಸಂತೋಷಚಿತ್ತರಾಗಿ ಪೂಜೆಯನ್ನು ವೀಕ್ಷಿಸುತ್ತಿದ್ದಾರೆ. ಸಮೀಪದಲ್ಲಿಯೇ ಕುಳಿತು ಗುರುದೇವರ ಪೂಜಾಸಂಭ್ರಮವನ್ನು ವೀಕ್ಷಿಸಬೇಕೆಂದು ಅವರಿಗಾಸೆ, ಆದರೆ ಪೂಜಾದೃಶ್ಯದಲ್ಲಿ ಮೈಮರೆತು ಕುಳಿತ, ಸಭಿಕರ ಮಧ್ಯದಲ್ಲಿ ನುಗ್ಗಿ ಅವರ ದೃಷ್ಟಿಗೂ ಭಾವಕ್ಕೂ ಅಡ್ಡಿಯುಂಟು ಮಾಡಬಾರದೆಂಬ ಪ್ರಜ್ಞೆ ಜಾಗೃತವಾಗಿದೆ. ಅಯ್ಯರ್ ದೂರದಲ್ಲಿಯೇ ನಿಂತು ನೋಡುತ್ತಿದ್ದಾರೆ. ಪೂಜೆಯೆಲ್ಲಾ ಆಗಿ ದೀಪಾರಾಧನೆ ಮುಗಿದು ಮಹಾಮಂಗಳಾರತಿ ಆಯಿತು. ಮಂತ್ರಪುಷ್ಪ ಸಮರ್ಪಣೆಯೂ ನೆರವೇರಿತು. ಶ್ರೀ ಗುರುದೇವರು ವಂದನೆ ಮಾಡಲು ಅನುಕೂಲವಾಗುವಂತೆ ಪೂಜಾಮಂದಿರದಿಂದ ತೆರೆಯನ್ನು ಎಳೆಯಲಾಯಿತು.

---

* ಶ್ರೀಯುತರು ತುರೀಯಾಶ್ರಮವನ್ನು ಶ್ರೀ ಶ್ರೀ ಗಳವರು ಉತ್ತರದ ಬೃಂದಾವನ ಕ್ಷೇತ್ರದಲ್ಲಿ ಇದ್ದಾಗ, ಸ್ವೀಕರಿಸಿ, 'ಶ್ರೀ ಜ್ಞಾನಾನಂದ ಭಾರತೀ' ಎಂಬ ಅಭಿಧಾನವನ್ನು ಪಡೆದು, ಅನುಷ್ಠಾನ ನಿರತರಾಗಿದ್ದು ಇತ್ತೀಚೆಗೆ (೧೯೭೫ ರಲ್ಲಿ) ವಿದೇಹ ಕೈವಲ್ಯವನ್ನು ಪಡೆದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಶ್ಚಲರಾಗಿ ತದೇಕಮಗ್ನರಾಗಿ ಕುಳಿತಿದ್ದ ಜನ ಈಗ ಸ್ವಲ್ಪ ಆರಾಮವಾಗಿ ಕುಳಿತರು. ಅಯ್ಯರ್ ಜನರ ಮಧ್ಯೆ ದಾರಿಮಾಡಿಕೊಂಡು ಪೂಜಾಮಂದಿರದ ಸನಿಹಕ್ಕೆ ಬಂದು ಮಠದ ಅಧಿಕಾರವರ್ಗದೊಡನೆ ನಿಂತರು. ಹಲವು ನಿಮಿಷಗಳ ನಂತರ ತೆರೆ ಸರಿಯಲು ಅಯ್ಯರ್‌ರವರ ದೃಷ್ಟಿ ಪೂಜಾಗೃಹದತ್ತ ಓಡಿತು. ಅವರಿಗೆ ಅತ್ಯಾಶ್ಚರ್ಯವಾಯಿತು. ಅಲ್ಲಿ ಪುನಃ ಪೂಜೆ ಮಾಡುತ್ತಾ ಕುಳಿತಿದ್ದವರು ಶ್ರೀ ಚಂದ್ರಶೇಖರ ಭಾರತೀಯವರಲ್ಲ. ಶ್ರೀ ಶಿವಾಭಿನವ ನರಸಿಂಹ ಭಾರತೀಗಳವರು. ಶ್ರೀ ಗುರುವರ್ಯರ ಬಹುಕಾಲದಿಂದ ತೆಗೆಸದ ದೀಕ್ಷೆ ಬೆಳೆದು ರೇಸಿಮೆಯಂತಹ ಬಿಳಿಯಗಡ್ಡ ಇಳಿಬಿದ್ದಿದೆ. ಅಚ್ಚರಿಯಿಂದ ಅಯ್ಯರ್‌ರವರು ತಮ್ಮ ಪಕ್ಕದಲ್ಲಿ ನಿಂತಿದ್ದ ಮಠದ ವಿದ್ವಾಂಸರಾಗಿದ್ದ ಕೃಷ್ಣಶಾಸ್ತ್ರಿಗಳನ್ನು ಕುರಿತು "ಇದೇನಿದು ಗುರುವರ್ಯರ ಕೇಶರಾಶಿ ಇಷ್ಟು ಉದ್ದವಾಗಿ ಬೆಳೆದುಬಿಟ್ಟಿದೆ" ಎಂದು ಕೇಳಿದರು. ಶಾಸ್ತ್ರಿಗಳು "ನೀವು ಗುರುವರ್ಯರನ್ನು ದರ್ಶನಮಾಡಿ ಎಷ್ಟು ವರ್ಷವಾಯಿತು" ಎಂದು ಪ್ರಶ್ನಿಸಿದರು. ಅಯ್ಯರ್ "ಹನ್ನೆರಡು ವರ್ಷಕ್ಕೂ ಮಿಕ್ಕಿರಬೇಕು" ಎಂದು ಉತ್ತರಿಸಲು ಶಾಸ್ತ್ರಿಗಳು "ಹನ್ನೆರಡು ವರ್ಷಗಳಲ್ಲಿ ಇಷ್ಟು ಕೇಶರಾಶಿ ಬೆಳೆಯುವುದರಲ್ಲಿ ಆಶ್ಚರ್ಯವೇನಿದೆ" ಎಂದು ನುಡಿದರು. ಪುನಃ ಪೂಜೆ ಮುಗಿದು ಒಳಕ್ಕೆ ದಯಮಾಡಿಸುವ ಮುನ್ನ ಶ್ರೀ ಗುರುವರ್ಯರು ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳು ಅಯ್ಯರ್‌ರವರತ್ತ ಹಸನ್ಮುಖದಿಂದ ದೃಷ್ಟಿಬೀರಿದರು. ಅಯ್ಯರ್‌ರವರಿಗೆ ಕನಸಿನಿಂದ ಎಚ್ಚರವಾಯಿತು.

ಕನಸೊಡೆದು ಎಚ್ಚರವಾದನಂತರ ಅಯ್ಯರ್‌ರವರಿಗೆ ತಮ್ಮ ಸ್ವಪ್ನದ ಪೂರ್ಣ ಚಿತ್ರ ಮನಸ್ಸಿನಲ್ಲಿ ಚಿತ್ರಪಟದ ದೃಶ್ಯದಂತೆ ಮೂಡಿತು. ಅದರೊಡನೆಯೇ ಒಂದು ಸಮಸ್ಯೆಯೂ ಮೂಡಿ ಕಾಡಲಾರಂಭಿಸಿತು. ತಾವು ಪೂಜಾರಂಭದಲ್ಲಿ ಕಂಡುದು ಸ್ಪಷ್ಟವಾಗಿ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರನ್ನು. ಅನಂತರ ಪುನಃಪೂಜಾಕಾಲದಲ್ಲಿ ಕಂಡುದು ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳನ್ನು. ಶ್ರೀ ನರಸಿಂಹ ಭಾರತೀ ಸ್ವಾಮಿಗಳು ವಿದೇಹಮುಕ್ತರಾಗಿ ಹನ್ನೆರಡು ವರ್ಷಗಳಿಗೂ ಹೆಚ್ಚಾಗಿತ್ತು. ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಸ್ಥಾನದಲ್ಲಿ ನಿರ್ಯಾಣ ಹೊಂದಿದ್ದ ಆ ಗುರುಗಳು ಕಾಣಿಸಿಕೊಂಡುದು ಹೇಗೆ?

ಈ ಸಮಸ್ಯೆ ಅಯ್ಯರನ್ನು ಬಹುವಾಗಿ ಬಾಧಿಸಿತು. ಇದನ್ನು ಬಗೆಹರಿಸಿಕೊಳ್ಳಲು ಅಯ್ಯರ್ ಶೃಂಗೇರಿಗೆ ಬಂದರು. ಶ್ರೀ ಚಂದ್ರಶೇಖರ ಭಾರತೀಯವರ ದರ್ಶನ ಮಾಡಿ ತಮ್ಮ ಸಮಸ್ಯೆಯನ್ನು ಅವರಲ್ಲಿ ಬಿನ್ನವಿಸಿದರು. ಅದರ ಪರಿಹಾರ ಕಂಡುಕೊಳ್ಳುವುದಕ್ಕಾಗಿ ತಾವು ಶೃಂಗೇರಿಗೆ ಬಂದುದಾಗಿ ನುಡಿದರು. ಶ್ರೀ ಗುರುದೇವರು ಹಸನ್ಮುಖದಿಂದ ಸಮ್ಮತಿ ಸೂಚಿಸಿದರು.

ಅಯ್ಯರ್ ಪ್ರತಿದಿನ ತಮ್ಮ ಪ್ರಾತರಾಹ್ನಿಕ ಜಪಾನುಷ್ಠಾನಗಳನ್ನು ಮುಗಿಸಿ ಶ್ರೀ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರ ಸಮಾಧ್ಯಧಿಷ್ಠಾನಕ್ಕೆ ಬಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ಅಮೃತಶಿಲಾ ಮೂರ್ತಿಯ ಮುಂದೆ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಕಣ್ಮುಚ್ಚಿ ಕುಳಿತರೆ ಶ್ರೀ ನರಸಿಂಹ ಭಾರತೀಯವರ ದಿವ್ಯ ಮೂರ್ತಿ ಮನಸ್ಸಿನಲ್ಲಿ ಮೂಡುತ್ತಲೇ ಇರಲಿಲ್ಲ. ಕಣ್ತೆರದಾಗ ಎದುರಲ್ಲಿ ದರ್ಶನ ಕೊಡುತ್ತಿರುವ ದಿವ್ಯಮೂರ್ತಿ ಕಣ್ಮುಚ್ಚಿದಾಗ ಮನಸ್ಸಿಗೆ ಏಕೆ ಗೋಚರವಾಗದು ? ಅಯ್ಯರ್ ಚಿಂತೆಗೀಡಾದರು. ಪ್ರತಿದಿನವೂ ಹಲವಾರು ಗಂಟೆಗಳ ಕಾಲ ಪ್ರಯತ್ನಿಸಿ ಗೊಂದಲದಲ್ಲಿ ಸಿಕ್ಕಿ ವಿಫಲ ಮನೋರಥರಾಗಿ ತಮ್ಮ ಬಿಡಾರಕ್ಕೆ ಹಿಂದಿರುಗುತ್ತಿದ್ದರು.

ಒಂದು ದಿನ ಧ್ಯಾನಕ್ಕೆ ಕುಳಿತಾಗ ಅಯ್ಯರ್‌ರವರ ಮನಸ್ಸಿನಲ್ಲಿ, ಶ್ರೀ ಶಂಕರ ಭಗವತ್ಪಾದರಿಂದ ಆರಂಭಿಸಿ ಇಲ್ಲಿಯವರೆಗೆ ಶೃಂಗೇರಿಯ ಪೀಠದಲ್ಲಿ ವಿರಾಜಮಾನರಾಗಿ ರುವ ಗುರುಗಳೆಲ್ಲರಲ್ಲಿಯೂ ಗುರುತತ್ತ್ವವು ಏಕಪ್ರಕಾರವಾಗಿ ಪ್ರಕಾಶಿಸುತ್ತಿದೆ. ಶ್ರೀ ಶಂಕರಭಗವತ್ಪಾದರೇ ಪ್ರತಿಗುರುವಿನಲ್ಲಿಯೂ ಸನ್ನಿಹಿತರಾಗಿದ್ದಾರೆ. ರೂಪನಾಮಗಳು ಮಾತ್ರ ಬೇರೆಯಾಗಿವೆ. ಸಚ್ಚಿದಾನಂದ ಸ್ವರೂಪವಾದ ಗುರುತತ್ವವೊಂದೇ. ಅದು ಭಿನ್ನ ಭಿನ್ನವಲ್ಲ ಪ್ರತ್ಯೇಕವಲ್ಲ. ಎಂಬ ಭಾವ ಸ್ಫುರಿಸಿತು. ಆ ಕೂಡಲೇ ಅವರ ಮನೋ ನೇತ್ರ ಗಳ ಎದುರಿನಲ್ಲಿ ಶ್ರೀ ಶಿವಾಭಿನವ ನರಸಿಂಹ ಭಾರತೀಸ್ವಾಮಿಗಳವರ ದಿವ್ಯ ಮೂರ್ತಿಯ ಸಾಕ್ಷಾತ್ಕಾರವಾಯಿತು. ಅಯ್ಯರ್ ಹರ್ಷಾನಂದದಿಂದ ಬಾಷ್ಪಲೋಚನರಾಗಿ ಬಹು ಕಾಲ ಧ್ಯಾನಮಗ್ನರಾಗಿ ಮೈಮರೆತಿದ್ದರು.

ಅನಂತರ ಶ್ರೀ ಚಂದ್ರಶೇಖರ ಭಾರತೀಯವರ ಸನ್ನಿಧಿಗೆ ಬಂದು ತಮ್ಮ ಸಮಸ್ಯೆಗೆ ಪರಿಹಾರವು ಹೇಗೆ ಗುರು ಕೃಪೆಯಿಂದ ದೊರಕಿತೆಂಬುದನ್ನು ವಿವರಿಸಿ " ಆ ಗುರುತತ್ವವೇ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರೂಪದಲ್ಲಿ ಬೇರೆ ಬೇರೆ ಹೆಸರಿನಲ್ಲಿ ಅವಿಚ್ಛಿನ್ನವಾಗಿ ಈ ಪೀಠದಲ್ಲಿ ಬೆಳಗುತ್ತಿದೆಯೆಂದು ದೃಢವಾಯಿತು " ಎಂದು ನಿವೇದಿಸಿದರು.

ಶ್ರೀ ಗುರುದೇವರು ಎಲ್ಲವನ್ನೂ ಹಸನ್ಮುಖದಿಂದ ಕೇಳಿದರು. ತೃಪ್ತಚಿತ್ತರಾದ ಅಯ್ಯರ್‌ರವರು " ನಾನು ಬಂದ ಕೆಲಸವಾಯಿತು. ಅಪ್ಪಣೆಯಿತ್ತರೆ ನಾಳೆ ಪ್ರಾತಃಕಾಲ ಹೊರಡುತ್ತೇನೆ " ಎಂದು ಬಿನ್ನವಿಸಿದರು. " ಹಾಗಾದರೆ ಈಗಲೇ ಫಲಮಂತ್ರಾಕ್ಷತೆ ಯನ್ನು ತೆಗೆದುಕೊಳ್ಳುತ್ತೀರೇನು ? " ಗುರುದೇವರು ಕೇಳಿದರು. " ಬೆಳಿಗ್ಗೆ ಮತ್ತೊಮ್ಮೆ ದರ್ಶನ ಮಾಡುವ ಅವಕಾಶವಿರುತ್ತದೆ. ಆಗಲೇ ಫಲಮಂತ್ರಾಕ್ಷತೆಯನ್ನು ತೆಗೆದು ಕೊಳ್ಳುತ್ತೇನೆ " ಎಂದು ನುಡಿದರು ಅಯ್ಯರ್. ಶ್ರೀ ಗುರುದೇವರು " ನಾಳೆ ಬೆಳಿಗ್ಗೆ ನರಹರಿಭಟ್ಟರು ಬರುವುದಿಲ್ಲ. ನಾನೇ ಚಂದ್ರಮೌಳೀಶ್ವರ ಪೂಜೆಯನ್ನು ಮಾಡ ಬೇಕು. ಆದ್ದರಿಂದ ಸನ್ನಿಧಾನವೇ ಫಲ-ಮಂತ್ರಾಕ್ಷತೆಯನ್ನು ಕೊಡುತ್ತಾರೆ " ಎಂದು ನುಡಿದರು. ಸನ್ನಿಧಾನವೆಂದರೆ ಶ್ರೀ ಅಭಿನವ ವಿದ್ಯಾತೀರ್ಥರೆಂದು ಅರ್ಥವಷ್ಟೆ.

ತತ್‌ಕ್ಷಣವೇ ಅಯ್ಯರ್‌ರವರು " ಹಾಗಾದಲ್ಲಿ ಈಗಲೇ ತಾವೇ ಫಲಮಂತ್ರಾಕ್ಷತೆ ಯನ್ನು ಕೊಟ್ಟುಬಿಡೋಣವಾಗಲಿ " ಎಂದು ನುಡಿದು ಬಿಟ್ಟರು. ಆ ಕೂಡಲೇ ಗುರು ದೇವರು ಗಟ್ಟಿಯಾಗಿ ನಕ್ಕುಬಿಟ್ಟರು ! ಅದು ಅರ್ಥಪೂರ್ಣ ನಗೆಯಾಗಿದ್ದು, ಅಯ್ಯರ್

Sri Vidyabharathi Book Centre, Sringeri

CC-O. In Public Domain. Digitized by eGangotri

ರವರಿಗೆ ಪೆಚ್ಚಾಯಿತು. ತಮ್ಮ ತಪ್ಪಿನ ಅರಿವೂ ಆಯಿತು. ತಾನೆಂತಹ ಹೆಡ್ಡ ! ಶ್ರೀ ಶಂಕರಭಗವತ್ಪಾದರಿಂದ ಹರಿದು ಬಂದ ಗುರುತತ್ವವು ಪ್ರತಿಯೊಬ್ಬ ಗುರುವಿನಲ್ಲಿಯೂ ಬೆಳಗಿ ಬಂದಂತೆ, ಶ್ರೀ ವಿದ್ಯಾತೀರ್ಥರಲ್ಲಿಯೂ ಪ್ರಕಾಶಿಸುತ್ತಿರುವಾಗ ತಾನು ಅವರನ್ನು ಪ್ರತ್ಯೇಕವಾಗಿ ಭಾವಿಸಿದೆನಲ್ಲಾ ಎಂದು ಅಯ್ಯರ್ ನಾಚಿ ತಲೆಬಾಗಿದರು. ಶ್ರೀ ಗುರು ದೇವರು ಬೇರೆ ಮಾತೇನನ್ನೂ ಆಡದೆ ಹಸನ್ಮುಖದಿಂದ "ಆಯಿತು ನಾಳೆ ಪ್ರಾತಃಕಾಲವೇ ಬನ್ನಿ, ನಿಮಗೆ ಫಲಮಂತ್ರಾಕ್ಷತೆಯನ್ನು ಕೊಡೋಣ" ಎಂದು ಅಪ್ಪಣೆ ಮಾಡಿದರು. ಅಯ್ಯರ್ ತಮ್ಮ ತಪ್ಪಿಗೆ ಪಶ್ಚಾತ್ತಾಪ ಪಡುತ್ತಾ, ಶ್ರೀ ಗುರುಚರಣಕ್ಕೆ ವಂದಿಸಿ ಹೊರಬಂದರು.

ಮಾರನೆಯ ಬೆಳಿಗ್ಗೆ ಅಯ್ಯರ್ ಬಂದಾಗ ಶ್ರೀ ಗುರುದ್ವಯರು ಅಕ್ಕಪಕ್ಕದಲ್ಲಿಯೇ ಕುಳಿತಿದ್ದು ಶ್ರೀ ಚಂದ್ರಶೇಖರ ಭಾರತೀಯವರು ಅಯ್ಯರ್‌ರವರಿಗೆ ಮಂತ್ರಾಕ್ಷತೆಯನ್ನೂ ಶ್ರೀ ವಿದ್ಯಾತೀರ್ಥರು ಫಲವನ್ನೂ ಅನುಗ್ರಹಿಸಿದರು. ಅಯ್ಯರ್ ಪ್ರಸಾದವೆಂದು ಸ್ವೀಕರಿಸಿ ಇಬ್ಬರಿಗೂ ಉದ್ದಂಡ ಪ್ರಣಾಮ ಮಾಡಿ ಗುರುಮಹಿಮೆಯನ್ನು ಸ್ಮರಿಸುತ್ತಾ ಹೊರಟು ಬಂದರು.

ಇಂತಹ ಸಂದರ್ಭಗಳು ಹಲವಾರು ಇವೆ. ಶ್ರೀ ಚಂದ್ರಶೇಖರಭಾರತೀ ಮಹಾ ಸ್ವಾಮಿಗಳು ಶ್ರೀ ವಿದ್ಯಾತೀರ್ಥರನ್ನು ತಮ್ಮಿಂದ ಬೇರೆಯೆಂದು ಭಾವಿಸಿರಲಿಲ್ಲವೆಂಬುದಕ್ಕೆ ಇದು ನಿದರ್ಶನವಾಗಿದೆ.

೧೦. ಮಾರ್ಗದರ್ಶನ

ಶ್ರೀ ಅಭಿನವ ವಿದ್ಯಾತೀರ್ಥರ ಸರ್ವತೋಮುಖವಾದ ಅಭ್ಯುದಯದಲ್ಲಿ ಶ್ರೀ ಗುರು ದೇವರು ತುಂಬಾ ಆಸಕ್ತಿ ವಹಿಸಿದ್ದರು. ಅವರ ದೈನಂದಿನ ಆಹ್ನೀಕ ಅನುಷ್ಠಾನಗಳು, ಸಾಧನೆಗಳು ಕ್ಲುಪ್ತಕಾಲಕ್ಕೆ ಆಗುವಂತೆ ವ್ಯವಸ್ಥೆ ಮಾಡಿದರು. ವಿದ್ಯಾಭ್ಯಾಸಕ್ಕೆ ಉಪಾಧ್ಯಾಯರನ್ನು ನೇಮಿಸುವಾಗಲೂ, ಸಹಪಾಠಿಗಳನ್ನು ಆರಿಸುವಾಗಲೂ ಗುರು ದೇವರು ಎಚ್ಚರವಹಿಸಿದ್ದರು. ಚಿಕ್ಕ ಗುರುಗಳ ಸೇವೆಗೆ ಪರಿಚಾರಕರನ್ನು ನೇಮಿಸು ವಾಗಲೂ ಅಷ್ಟೇ ಜಾಗ್ರತೆಯನ್ನು ವಹಿಸಿದ್ದರು. ಗುರುಗಳಿಂದ ಗೌರವ, ಪ್ರಾಚೀನ ಪದ್ಧತಿ ಗಳು, ಸಂಪ್ರದಾಯಗಳ ಬಗೆಗೆ ಆಗಾಗ ತಿಳುವಳಿಕೆಯನ್ನು ಕೊಡುತ್ತಿದ್ದರು. ಶೃಂಗೇರಿಯ ಆಚಾರ್ಯರಿಗೆ ಪರಂಪರೆಯಿಂದ ಉಪದಿಷ್ಟವಾಗಿರುವ ಮಂತ್ರಗಳನ್ನೆಲ್ಲಾ ಸ್ವತಃ ಉಪ ದೇಶಮಾಡಿ ಅವುಗಳ ಸಾಧನಾ ಮಾರ್ಗವನ್ನು ತೋರಿಸಿಕೊಟ್ಟರು. ತಮ್ಮ ಶಿಷ್ಯರು ಎಲ್ಲ ವಿಧದಲ್ಲಿಯೂ ತಮ್ಮ ಗುರುಗಳಾಗಿದ್ದ ಶ್ರೀಶಿವಾಭಿನವ ನರಸಿಂಹ ಭಾರತೀಯವರಂತೆ ಆಗಲು ಯಾವ ರೀತಿಯ ಮಾರ್ಗದರ್ಶನ ಬೇಕೋ ಅದನ್ನೆಲ್ಲಾ ಒದಗಿಸಿ ಅಭಿನವ ವಿದ್ಯಾ ತೀರ್ಥರನ್ನು ಅಭ್ಯುದಯದತ್ತ ಮುನ್ನಡೆಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನೂತನ ಗುರುವರ್ಯರಿಗೆ ಕಾವ್ಯ, ನಾಟಕ ಅಲಂಕಾರ ಶಾಸ್ತ್ರಗಳ ಪಾಠವಾದ ನಂತರ ತರ್ಕ, ನ್ಯಾಯ, ವೇದಾಂತ ಶಾಸ್ತ್ರಗಳ ಪಾಠ ಆರಂಭವಾಯಿತು. ಶ್ರೀ ಸುಂದರಶಾಸ್ತ್ರಿಗಳೂ, ಶ್ರೀ ವಿ. ಎಸ್, ರಾಮಚಂದ್ರಶಾಸ್ತ್ರಿಗಳೂ ಉಪಾಧ್ಯಾಯರಾಗಿ ನೇಮಿತರಾಗಿದ್ದರು. ಸಹಪಾಠಿಗಳಾಗಿ ಶ್ರೀ ಹರಿಹರ ಮಹಾದೇವ ಸ್ವಾಮಿಗಳು, ಶ್ರೀ ಕಾಶೀ ಸ್ವಾಮಿಗಳು ಶ್ರೀ ಶಿವಾನಂದ ಸ್ವಾಮಿಗಳೂ ಆರಿಸಲ್ಪಟ್ಟಿದ್ದರು. ಶ್ರೀ ಗುರುದೇವರೇ ವೇದಾಂತ ಪಾಠವನ್ನು ಇವರೆಲ್ಲರಿಗೂ ಬೋಧಿಸುತ್ತಿದ್ದರು. ಶ್ರೀ ವಿದ್ಯಾತೀರ್ಥರು ಆಧ್ಯಾತ್ಮಿಕ ಉಪಾಸನೆಯನ್ನು ಯೋಗಾಭ್ಯಾಸವನ್ನು ತಮ್ಮ ಗುರುದೇವರಿಂದಲೇ ಕಲಿತುಕೊಂಡಿದ್ದರು. ಹಠಯೋಗ ಮತ್ತು ಯೋಗಾಭ್ಯಾಸವನ್ನು ಶ್ರೀ ಶ್ರೀಗಳವರು ಗುರುದೇವರ ಮಾರ್ಗದರ್ಶನದಲ್ಲಿ ನಡೆಸುತ್ತಿದ್ದರು. ಶ್ರೀ ಗಣಪತಿ, ಶ್ರೀ ನಾರಸಿಂಹ, ಶ್ರೀವಿದ್ಯಾದಿ ಅನೇಕ ಮಂತ್ರಗಳನ್ನು ದೀರ್ಘಕಾಲ ಪುರಶ್ಚರಣ ಮಾಡುತ್ತಿದ್ದರು. ಶ್ರೀವಿದ್ಯೋಪಾಸನೆಯಲ್ಲಿಯೂ, ಪ್ರಾಯೋಗಿಕವಾಗಿ ನಿರತರಾದರು. ಪ್ರತಿ ಹೆಜ್ಜೆಯಲ್ಲಿಯೂ ಶ್ರೀ ಗುರುದೇವರ ಮಾರ್ಗದರ್ಶನವು ದೊರೆತಿದ್ದ ಬಾಲ ಯತಿಗಳು ಅಭ್ಯುದಯ ಹೊಂದುತ್ತಾ ಬಂದರು.

ಹಿರಿಯ ಗುರುಗಳು ಅಪೇಕ್ಷಿಸಿದಂತೆ ಮಠದ ಆಡಳಿತ ವ್ಯವಹಾರಗಳ ವಿಚಾರದಲ್ಲಿಯೂ ಶಿಷ್ಯ ಭಕ್ತಾವಳಿಯ ಯೋಗಕ್ಷೇಮದ ವಿಚಾರದಲ್ಲಿಯೂ ಚಿಕ್ಕಗುರುಗಳು ಆಸಕ್ತಿವಹಿಸಿದ್ದರು. ಮಠದ ಲೌಕಿಕ ವ್ಯವಹಾರಗಳಲ್ಲಿ ಗುರುಗಳ ನೆರವಿಗಾಗಿ ಅವರ ಅಪೇಕ್ಷೆಯಂತೆ ರೆವಿನ್ಯೂ ಆಡಳಿತವನ್ನು ಬಲ್ಲವರಾಗಿದ್ದ ಸರ್ಕಾರದ ಅಧಿಕಾರಿಯೊಬ್ಬರ ಎರವಲು ಸೇವೆಯೂ ಮಠಕ್ಕೆ ಈ ಸಮಯದಲ್ಲಿಯೇ ದೊರಕಿತು.

ಬಾಲಯತಿವರ್ಯರ ಸರ್ವತೋಮುಖವಾದ ಉನ್ನತಿಯಲ್ಲಿ ಶ್ರೀ ಗುರುದೇವರು ಆಸಕ್ತಿವಹಿಸಿದ್ದರಲ್ಲವೆ? ತಾವು ಸನ್ಯಾಸಾಶ್ರಮ ಪ್ರವೇಶಮಾಡಿದಾಗ ತಮ್ಮ ಗುರುಗಳಾಗಿದ್ದ ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳವರಿಂದ ಪ್ರತ್ಯಕ್ಷ ಮಾರ್ಗದರ್ಶನವನ್ನು ಪಡೆಯಲು ಗುರುದೇವರಿಗೆ ಸಾಧ್ಯವಾಗಿರಲಿಲ್ಲ, ಶ್ರೀ ನರಸಿಂಹ ಭಾರತೀ ಗುರುಗಳು ಆ ನೊಡಲೇ ವಿದೇಹ ಕೈವಲ್ಯವನ್ನು ಪಡೆದಿದ್ದುದರಿಂದ. ಆದರೆ ಆ ಭಾಗ್ಯ ತಮ್ಮ ಗುರುಗಳಿಂದಲೇ ಮಾರ್ಗದರ್ಶನ ಪಡೆಯುವ ಅಪೂರ್ವ ಭಾಗ್ಯ ಶ್ರೀ ವಿದ್ಯಾತೀರ್ಥರಿಗೆ ದೊರೆತಿತ್ತು. ಶ್ರೀ ಚಂದ್ರಶೇಖರ ಭಾರತೀಯವರ ದಿವ್ಯ ಸನ್ನಿಧಿಯಲ್ಲಿ ಶ್ರೀ ವಿದ್ಯಾತೀರ್ಥರು ಪ್ರಗತಿ ಹೊಂದುತ್ತಾ ಬಂದು ಶ್ರೀ ಗುರುದೇವರ ನಿರೀಕ್ಷೆಯಂತೆ ಅಸಾಧಾರಣ ಪಾಂಡಿತ್ಯವನ್ನು ಗಳಿಸಿ 'ವಿದ್ಯಾತೀರ್ಥ' ಎಂಬ ಅಭಿಧಾನಕ್ಕೆ ಅನ್ವರ್ಥವಾಗಿ ವಿದ್ಯಾತೀರ್ಥವೇ ಆದರು.

ಶ್ರೀ ವಿದ್ಯಾತೀರ್ಥರಿಗೆ ಸಂನ್ಯಾಸಾಶ್ರಮ ಪ್ರವೇಶವಾದ ಎರಡು ಮೂರು ವರ್ಷಗಳು ಕಳೆದಿರಬೇಕು. ಅವರಿಗೆ ಇನ್ನೂ ಶಾಸ್ತ್ರಗಳ ಪಾಠನಡೆಯುತ್ತಿದ್ದ ಸಮಯ. ಆಗ ಅವರು ಶ್ರೀ ಚಂದ್ರಮೌಳೀಶ್ವರನ ತೊಟ್ಟಿಯಲ್ಲಿ ಇರುತ್ತಿದ್ದರು. ಶ್ರೀ ಗುರುದೇವರ ಮತ್ತು ಕಿರಿಯ ಶ್ರೀ ಶ್ರೀಗಳ ಸಂದರ್ಶನವನ್ನು ಪಡೆದು ಅವರಲ್ಲಿ ಶಾಸ್ತ್ರ ವಿಷಯಗಳನ್ನು ಚರ್ಚೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿ ತಮ್ಮ ಪ್ರತಿಭೆಯನ್ನು ತೋರ್ಪಡಿಸಲು ತಮ್ಮ ಅಗ್ಗಳಿಕೆಯನ್ನು ಪ್ರದರ್ಶಿಸಲು ಅನ್ಯಮತದ ಪಂಡಿತರು ಹಲವರು ಶೃಂಗೇರಿಗೆ ಬಂದರು. ಮಠವನ್ನೆಲ್ಲಾ ಸುತ್ತಿಬಂದ ಅವರು ಒಬ್ಬೊಬ್ಬರೊಡನೆ ಪ್ರತಿಷ್ಠೆಯ ಮಾತನ್ನಾಡಿ ಅವರನ್ನು-ಅವರ ಮಠದ ನಿಷ್ಠಾವಂತ ನೌಕರರು-ಅಸಮಾಧಾನಕ್ಕೆ ಈಡುಮಾಡಿದ್ದರು. ಅನಂತರ ಚಂದ್ರಮೌಳೀಶ್ವರನ ತೊಟ್ಟಿಗೆ ಬಂದು ಅಲ್ಲಿದ್ದ ಬ್ರಹ್ಮಚಾರಿಯೊಡನೆ "ನಿಮ್ಮ ಗುರುಗಳೆಲ್ಲಿಯಯ್ಯಾ? ಅವರಲ್ಲಿ ಮಾತನಾಡಬೇಕು" ಎಂದು ಹೆಮ್ಮೆ ಬೆರೆತ ಧ್ವನಿಯಲ್ಲಿ ಹೇಳಿದರು.

ಬ್ರಹ್ಮಚಾರಿಗೆ ಆ ಜನದ ಜಂಭ ನೋಡಿ ಕೋಪಬಂದಿತು. "ನಮ್ಮ ಗುರುಗಳ ದರ್ಶನ ಮಾಡಲು ಇದು ಸಮಯವಲ್ಲ. ಈಗ ಭೇಟಿಮಾಡಲು ಅವಕಾಶವಿಲ್ಲ" ಎಂದು ಒರಟಾಗಿಯೇ ನುಡಿದುಬಿಟ್ಟನು.

ಆ ಪಂಡಿತರು ಏನನ್ನೋ ಹೇಳಲು ಪ್ರಾರಂಭಿಸಲು "ಈಗ ಗುರುಗಳ ದರ್ಶನವಾಗದು. ನೀವು ಹೊರಡಬಹುದು" ಎಂದು ಹೇಳಿ ಅವರ ಮಾತನ್ನು ತಡೆದುಬಿಟ್ಟನು.

ಹಿಂದಿನ ಕೊಠಡಿಯಲ್ಲಿಯೇ ವ್ಯಾಸಂಗ ನಿರತರಾಗಿದ್ದ ಶ್ರೀ ವಿದ್ಯಾತೀರ್ಥರು ಬ್ರಹ್ಮಚಾರಿಯು ಯಾರಲ್ಲಿಯೋ ರಭಸವಾಗಿ ಮಾತನಾಡುತ್ತಿದ್ದುದನ್ನು ಕೇಳಿ ಹೊರಕ್ಕೆ ಬಂದರು ಬ್ರಹ್ಮಚಾರಿಯು ಅವರನ್ನು ನೋಡಿ ಸಾಷ್ಟಾಂಗ ಪ್ರಣಾಮ ಮಾಡಿ ಮೌನವಾಗಿ ನಿಂತನು. ಬ್ರಹ್ಮಚಾರಿಯನ್ನು ಸುಮ್ಮನಾಗಿಸಿದ್ದ ಶ್ರೀ ಶ್ರೀಗಳವರು ಆಗಂತುಕರನ್ನು ಕುರಿತು "ಯಾರಪ್ಪಾ ನೀವು? ನಿಮಗೇನು ಬೇಕು?" ಎಂದು ಪ್ರಶ್ನಿಸಿದರು.

ಆ ಪಂಡಿತರು ಈ ಬಾಲಗುರುವನ್ನು ನೋಡಿ ವಿಸ್ಮಿತರಾಗಿ ಸಾಷ್ಟಾಂಗ ಪ್ರಣಾಮ ಮಾಡಿ ಸಂಸ್ಕೃತದಲ್ಲಿಯೇ ಸಂಭಾಷಣೆಯನ್ನು ಆರಂಭಿಸಿದರು. ಅನೇಕ ಶಾಸ್ತ್ರ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಶ್ರೀ ಶ್ರೀಗಳವರು ನಗೆಮೊಗದಿಂದ ಪ್ರತಿಯೊಂದು ಅಂಶದಲ್ಲೂ ಶಾಸ್ತ್ರವಿಹಿತವಾದ ಉತ್ತರವನ್ನು ಕೊಡುತ್ತಾ ಅವರನ್ನು ಮೂಕರಾಗಿಸಿದರು. ಆ ಗುಂಪಿನಲ್ಲಿದ್ದ ಪಂಡಿತರೊಬ್ಬರು "ಇದು ಸಾಕ್ಷಾತ್ ಶ್ರೀ ಶಾರದಾಪೀಠ. ತಾವು ಈ ಪೀಠದ ಆಚಾರ್ಯರು. ತಮ್ಮನ್ನು ಮಾತನಾಡಿಸುವುದುಂಟೇ" ಎಂದು ನುಡಿದು ಶ್ರೀ ಶ್ರೀಗಳವರ ಸಂಭಾಷಣೆಯ ಬಹ್ವಂಶಗಳನ್ನು ಬರೆದುಕೊಂಡರು. ಅನಂತರ ಅವರೆಲ್ಲರೂ ಮತ್ತೊಮ್ಮೆ ವಂದನೆ ಸಲ್ಲಿಸಿ ಹೊರಟುಹೋದರು.

ಶ್ರೀ ಚಂದ್ರಶೇಖರ ಭಾರತೀಯವರು ತಾವು ಇಚ್ಛಿಸಿದಂತೆ ಶಿಷ್ಯಸ್ವೀಕಾರದ ದಿನವೇ ಮಠದ ಎಲ್ಲಾ ಲೌಕಿಕ ಧಾರ್ಮಿಕ ವ್ಯವಹಾರಗಳನ್ನು ಗೌರವ ಮರ್ಯಾದೆಯನ್ನು ಬಿರುದು ಬಾವಲಿಗಳನ್ನು ಕಿರಿಯ ಸ್ವಾಮಿಗಳಿಗೆ ವಹಿಸಿಬಿಟ್ಟು ಸ್ವಚ್ಛಂದರಾಗಿದ್ದರಷ್ಟೆ. ಇನ್ನು ತಮ್ಮ ಮಾರ್ಗದರ್ಶನದ ಅಗತ್ಯವಿರದೆ, ಕಿರಿಯ ಗುರುಗಳು ಮುಂದುವರೆಯುತ್ತಾರೆಂದು ಮನದಟ್ಟಾದಾಗ ಹಿರಿಯ ಗುರುಗಳು ಮತ್ತೆ ಪೂರ್ವಸ್ಥಿತಿಗೆ, ಅವಧೂತಾವಸ್ಥೆಗೆ ಹಿಂದಿರುಗಿದ್ದರು. ಕಿರಿಯ ಗುರುಗಳು ಹಿರಿಯ ಗುರುಗಳ ಏಕಾಂತಕ್ಕೆ ಭಂಗಬರದಂತೆ ವ್ಯವಸ್ಥೆ ಮಾಡಿ ಎಲ್ಲಾ ಕಾರ್ಯಗಳನ್ನು ತಾವೇ ಸಮರ್ಪಕವಾಗಿ ನಿರ್ವಹಿಸುತ್ತಿದ್ದರು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಶ್ರೀ ಚಂದ್ರಶೇಖರ ಭಾರತೀಯವರ ಏಕಾಂತ ಪ್ರಿಯತೆ ಎಷ್ಟು ಹೆಚ್ಚುತ್ತಾ ಬಂದಿತೆಂದರೆ, ಅವರು ಶ್ರೀ ಚಂದ್ರಮೌಳೀಶ್ವರನ ಪೂಜೆಯನ್ನು ಕಿರಿಯ ಗುರುಗಳಿಗೇ ವಹಿಸಿದ್ದರು. ಅಂತರ್ಮುಖರಾಗಿದ್ದಾಗ ತಮ್ಮ ಸ್ವಂತ ಪೂಜೆಯನ್ನು ಮಾತ್ರ ಮಾಡಿಕೊಳ್ಳುತ್ತಿದ್ದರು. ಮಠಕ್ಕೆ ಬರುತ್ತಿದ್ದ ಸಹಸ್ರಾರು ಜನ ಭಕ್ತರ ಯೋಗಕ್ಷೇಮ, ಕಷ್ಟಗಳು, ದುಃಖ, ವ್ಯಸನ, ಚಿಂತೆ, ರೋಗ ರುಜಿನ ಇವುಗಳ ಸಮಸ್ಯೆಯನ್ನು ಎಷ್ಟೋ ಸಲ ಕಿರಿಯ ಗುರುಗಳೇ ಪರಿಹರಿಸಬೇಕಾಗುತ್ತಿತ್ತು. ಹಿರಿಯ ಗುರುಗಳು ಬರಬರುತ್ತಾ ಹೊರಗೆ ಬರುವುದನ್ನು ಕಾಣಿಸಿಕೊಳ್ಳುವುದನ್ನು ನಿಲ್ಲಿಸಿ ಬಿಟ್ಟರು. ಸಹಸ್ರಾರು ಜನ ಭಕ್ತರು ಬಂದಾಗಲೂ ಶ್ರೀ ಗುರುದೇವರು ಹೊರಗೆ ಕಾಣಿಸಿಕೊಳ್ಳುತ್ತಲೇ ಇರಲಿಲ್ಲ. ರಥೋತ್ಸವಗಳು, ನವರಾತ್ರಿ ಉತ್ಸವ, ಚಾತುರ್ಮಾಸ್ಯ, ವರ್ಧಂತಿ, ಈ ವಿಶೇಷ ಸಮಾರಂಭಗಳಲ್ಲಿ ಬರುತ್ತಿದ್ದ ಜನರ ಸಂಖ್ಯೆ ಅಧಿಕವಾಗಿದ್ದು ಅವರೆಲ್ಲರ ಯೋಗಕ್ಷೇಮ, ಶ್ರೀ ವಿದ್ಯಾತೀರ್ಥರಿಗೇ ಸೇರಿತ್ತು. ಹಿರಿಯ ಶ್ರೀ ಪಾದರು ಯಾವಾಗಲಾದರೂ ಒಮ್ಮೆ ಬಹಿರ್ಮುಖರಾಗಿ ಒಬ್ಬಿಬ್ಬರು ಭಕ್ತರಿಗೆ ಅನುಗ್ರಹ ತೋರಿಸುತ್ತಾ ಆತ್ಮಾರಾಮರಾಗುತ್ತಿದ್ದರು.

ಹೀಗೆ ಒಮ್ಮೆ ಬಹಿರ್ಮುಖರಾಗಿದ್ದ ಶ್ರೀ ಗುರುದೇವರದ್ದು ದರ್ಶನ ಮಾಡಿದ ಹಲವಾರು ಜನ ಭಕ್ತರು, ಮತ್ತೊಮ್ಮೆ ಶಿಷ್ಯಾನುಗ್ರಹಕ್ಕಾಗಿ ತೀರ್ಥಯಾತ್ರಾ ಪರ್ಯಟನವನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸಿದರು. ಶೃಂಗೇರಿಯನ್ನು ಬಿಟ್ಟು ಹೊರಹೊರಡಲು ಶ್ರೀ ಶ್ರೀಗಳು ಒಪ್ಪಲಿಲ್ಲ. ಕೊನೆಗೆ ಶಿಷ್ಯರ ಪ್ರಾರ್ಥನೆ ಹೆಚ್ಚಾಗಲು ಮಿತ ಪರಿವಾರದೊಡನೆ ಸಂಚಾರ ಕೈಗೊಳ್ಳಲು ಒಪ್ಪಿದರು.

೧೯೩೮ ರಲ್ಲಿ ಶ್ರೀ ಗುರುದೇವರು ಸಂಚಾರವನ್ನು ಆರಂಭಿಸಿ, ಬೆಂಗಳೂರಿಗೆ ದಯಮಾಡಿಸಿದರು. ಅಲ್ಲಿ ಸ್ವಲ್ಪಕಾಲವಿದ್ದು ಹಲವು ಜನ ಅರ್ಹರಾಗಿದ್ದವರಿಗೆ ಸೂತ್ರಭಾಷ್ಯ ಮತ್ತು ಉಪನಿಷದ್ಭಾಷ್ಯವನ್ನು ಪ್ರವಚನ ಮಾಡಿಸಿದರು. ಶಂಕರಮಠದ ಆವರಣದಲ್ಲಿ ಶ್ರೀ ಶಂಕರಭಗವತ್ಪಾದರ ಎದುರಿನಲ್ಲಿ ಶ್ರೀ ಶಾರದಾ ದೇವಾಲಯವು ನಿರ್ಮಿತವಾಗಿದ್ದು ಶ್ರೀ ಗುರುದೇವರು ಶ್ರೀವಿದ್ಯಾಸ್ವರೂಪಿಣಿಯಾದ ಶ್ರೀ ಶಾರದಾಂಬಾರವರ ಪಂಚಲೋಹದ ಪ್ರಾಚೀನ ಮೂರ್ತಿಯನ್ನು ಅಲ್ಲಿ ಪ್ರತಿಷ್ಠೆಮಾಡಿ* ದೇವಾಲಯದ ಕುಂಭಾಭಿಷೇಕವನ್ನು ನೆರವೇರಿಸಿದರು. ಬೆಂಗಳೂರಿನಿಂದ, ಮೈಸೂರು, ಚಾಮರಾಜನಗರ, ಸತ್ಯಮಂಗಲ, ಕೊಯಮುತ್ತೂ[illegible]ಂತರವಾಗಿ ಕಾಲಟೀ ಕ್ಷೇತ್ರಕ್ಕೆ ದಯಮಾಡಿಸಿದ ಶ್ರೀ ಶ್ರೀಗಳವರು ಅಲ್ಲಿಯೇ ಹತ್ತು ತಿಂಗಳಕಾಲ ಆತ್ಮಾರಾಮರಾಗಿದ್ದರು. ಆ ಸಮಯದಲ್ಲಿ ಶ್ರೀ ಗುರುದೇವರನ್ನು ಸಂದರ್ಶಿಸಲು ಬಹುಜನರು ಬಂದಿದ್ದು ಅನುಗ್ರಹ ಪಡೆದಿದ್ದರು. ಶ್ರೀ ಶ್ರೀಗಳವರನ್ನು ಸಂದರ್ಶಿಸಲು ಮಹಾಸಿದ್ಧರೆಂದು ಪ್ರಸಿದ್ಧರಾಗಿದ್ದ ಶ್ರೀ ಯೋಗಿ ರಾಮಯ್ಯನವರೂ ಕಾಲಟೀ ಕ್ಷೇತ್ರಕ್ಕೆ ಆಗಮಿಸಿದ್ದರು. ಹಲವಾರು ಜನ

* ಈ ದೇವೀಮೂರ್ತಿಯು ಶ್ರೀ ವಿದ್ಯಾರಣ್ಯಸ್ವಾಮಿಗಳವರಿಂದ ಅರ್ಚಿಸಲ್ಪಡುತ್ತಿದ್ದ ದಿವ್ಯ ಮೂರ್ತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಡಿತರೂ, ಲೌಕಿಕ ಪ್ರಮುಖರೂ, ಗುರುದೇವರ ದರ್ಶನಮಾಡಿ ಮಂತ್ರೋಪದೇಶವನ್ನು ಪಡೆದಿದ್ದರು.

ಮೊದಲಿನಿಂದಲೂ ಮೌನ ಮತ್ತು ಏಕಾಂತ ಪ್ರಿಯತೆಗಳಲ್ಲಿ ಹೆಚ್ಚು ಒಲವಿದ್ದ ಶ್ರೀ ಗುರುದೇವರಿಗೆ ಈ ಸಂಚಾರದಿಂದ ಅವೆರಡೂ ಲಭ್ಯವಾಗಲಿಲ್ಲ. ಹೋದ ಹೋದ ಸ್ಥಳಗಳಲ್ಲೆಲ್ಲಾ ಜನ ಅವರನ್ನು ಮುತ್ತುತ್ತಿದ್ದರು. ಶ್ರೀ ಗುರುದೇವರು ೧೯೪೦ ರಲ್ಲಿ ತಮ್ಮ ಸಂಚಾರವನ್ನು ಮುಕ್ತಾಯಗೊಳಿಸಿ ಶೃಂಗೇರಿಗೆ ಹಿಂತಿರುಗಿದರು.

ಶ್ರೀ ಗುರುದೇವರು ಸಂಚಾರದಲ್ಲಿದ್ದಾಗ ಶ್ರೀ ವಿದ್ಯಾತೀರ್ಥರೇ ಮಠದ ಎಲ್ಲಾ ವ್ಯವಹಾರಗಳಲ್ಲಿಯೂ ಸೂಕ್ತಮಾರ್ಗದರ್ಶನ ನೀಡುತ್ತಾ ಯಾವ ಕಾರ್ಯವೂ ಲೋಪವಾಗದಂತೆ ಎಚ್ಚರವನ್ನು ವಹಿಸಿದ್ದರು. ತಮ್ಮ ಗುರುಗಳು ಬಹುದೂರದಲ್ಲಿದ್ದಾಗ ಅವರು ಶೃಂಗೇರಿಯಲ್ಲಿಯೇ ಇದ್ದಂತೆ ಪ್ರತಿಯೊಂದು ಕಾರ್ಯವೂ ಹೇಗೆ ನಡೆಯುತ್ತಿತ್ತೋ ಅವರು ಸಂಚಾರದಲ್ಲಿದ್ದಾಗಲೂ ಹಾಗೆಯೇ ಚಾಚೂ ತಪ್ಪದೆ ನಡೆಯುವಂತೆ ವ್ಯವಸ್ಥೆ ಮಾಡಿ ಸರ್ವವಿಧದಲ್ಲಿಯೂ ಶ್ರೀ ಚಂದ್ರಶೇಖರಭಾರತೀಯವರ ಪೂರ್ಣ ಪ್ರತಿನಿಧಿಯಾಗಿ ಬೆಳಗಿದರು.

೧೧. ಲೋಕಹಿತಕ್ಕಾಗಿ ಯಾಗಗಳು

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಅರವತ್ತನೆಯ ವರ್ಧಂತಿ ಉತ್ಸವ ಸಮೀಪಿಸುತ್ತಿದ್ದಾಗ (೧೯೫೨) ಅವರ ಷಷ್ಟ್ಯಬ್ಧಿ ಸಮಾರಂಭವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸುವ ಅಪೇಕ್ಷೆ ಅವರ ಶಿಷ್ಯರಲ್ಲಿ ಮೂಡಿತು. ಈ ಅಪೇಕ್ಷೆಯನ್ನು ಅವರ ಶಿಷ್ಯರು ಶ್ರೀ ವಿದ್ಯಾತೀರ್ಥ ಸ್ವಾಮಿಗಳವರಲ್ಲಿ ಬಿನ್ನವಿಸಿದರು. ಶ್ರೀ ಗುರುದೇವರು ಬಹಿರ್ಮುಖರಾಗಿದ್ದಾಗ ಸಮಯ ಕಾದು ಈ ಅಪೇಕ್ಷೆಯನ್ನು ಬಹು ಜನ ಶಿಷ್ಯರು ಶ್ರೀ ಗುರುದ್ವಯರ ಸಮ್ಮುಖದಲ್ಲಿಯೇ ಪ್ರಸ್ತಾಪಮಾಡಿದರು. ಶ್ರೀ ಚಂದ್ರಶೇಖರ ಭಾರತೀ ಶ್ರೀ ಚರಣರು ಶಿಷ್ಯ ಸ್ವೀಕಾರದ ದಿನವೇ ರಾಜಲಾಂಛನಗಳಾದ ಕಿರೀಟಧಾರಣೆ ಸಿಂಹಾಸನಾರೋಹಣ, ಪಾಲಕೀ ಉತ್ಸವ - ನವರಾತ್ರಿಯ ದರ್ಬಾರು ಇದನ್ನೆಲ್ಲಾ ಶ್ರೀ ವಿದ್ಯಾತೀರ್ಥರಿಗೇ ವಹಿಸಿ ಬಿಟ್ಟಿದ್ದರಷ್ಟೆ. ಈಗ ಭಕ್ತರೆಲ್ಲಾ ತಮ್ಮ ಷಷ್ಟ್ಯಬ್ಧಿ ಸಮಾರಂಭವನ್ನು ಮಹಾ ವೈಭವದಿಂದ ನಡೆಸಲು ಒಪ್ಪಿಗೆ ಕೊಡುವುದಾದರೆ ?

ಭಕ್ತರು ಬಿಡಲಿಲ್ಲ. ಶ್ರೀ ವಿದ್ಯಾತೀರ್ಥ ಶ್ರೀ ಪಾದರಲ್ಲಿ ತಮ್ಮ ಬೇಡಿಕೆಯನ್ನಿಟ್ಟು ಒಪ್ಪಿಗೆಯನ್ನು ದೊರಕಿಸಿ ಕೊಡುವಂತೆ ಕೇಳಿಕೊಂಡರು. ಶ್ರೀ ವಿದ್ಯಾತೀರ್ಥರಿಗೂ ತಮ್ಮ ಗುರುದೇವರ ವರ್ಧಂತಿಯನ್ನು ಸೂಕ್ತವಾಗಿ ಆಚರಿಸಬೇಕೆಂದು ಅಭಿಲಾಷೆ ಇತ್ತು. ಈಗ ಮಠದ ಸಹಸ್ರಾರು ಜನ ಶಿಷ್ಯರ ಒತ್ತಾಯದ ಬಿನ್ನಹವೂ ಬರುತ್ತಿದ್ದು ಅವರ ಅಪೇಕ್ಷೆಗೆ ಪೂರ್ಣ ಸ್ವರೂಪವನ್ನು ಕೊಟ್ಟಂತೆ ಆಗಿತ್ತು. ಶಿಷ್ಯರೆಲ್ಲರ ಪ್ರಾರ್ಥನೆಯನ್ನು ಶ್ರೀ ವಿದ್ಯಾತೀರ್ಥ ಮಹಾಸ್ವಾಮಿಗಳೇ ಶ್ರೀ ಚಂದ್ರಶೇಖರಭಾರತೀ ಶ್ರೀ ಚರಣರ ಮುಂದೆ ಇಟ್ಟರು.

Sri Vidyabharathi Book Centre, Sringeri

ಶ್ರೀ ಗುರುದೇವರ ವರ್ಧಂತ್ಯುತ್ಸವವನ್ನು ಕೇವಲ ಲೌಕಿಕ ಸಮಾರಂಭವನ್ನಾಗಿ ಆಚರಿಸದೆ ಲೋಕ ಕಲ್ಯಾಣಕರವಾದ ಅತಿರುದ್ರಮಹಾಯಾಗ, ಸಹಸ್ರಚಂಡೀ ಹೋಮ* ಪವಿತ್ರ ಗ್ರಂಥಗಳ ಪಾರಾಯಣ ಪೂಜಾದಿಗಳನ್ನು ನೆರವೇರಿಸುವುದರ ಮೂಲಕ ಆಚರಿಸುವುದಾಗಿ ವಿಜ್ಞಾಪನೆ ಮಾಡಿದರು. ಅದಕ್ಕೆ ಒಪ್ಪಿಗೆಯನ್ನಿತ್ತ ಗುರುದೇವರು ಹೋಮ ಹವನಾದಿಗಳು ತಮ್ಮ ಷಷ್ಠ್ಯಬ್ಧಿ ಪೂರ್ತಿಯ ಅಂಗವಾಗಿರದೆ ಲೋಕ ಕಲ್ಯಾಣದ ಉದ್ದೇಶಕ್ಕಾಗಿಯೇ ನಡೆಯಬೇಕೆಂದು ಪುನಃಪುನಃ ಸ್ಪಷ್ಟಪಡಿಸಿದರು.

ಶ್ರೀ ವಿದ್ಯಾತೀರ್ಥರ ನೇತೃತ್ವದಲ್ಲಿ ಉತ್ಸಾಹದ ಚಟುವಟಿಕೆಗಳು ಆರಂಭವಾದವು. ಉತ್ಸವದ ವಾರ್ತೆ ಭಾರತಾದ್ಯಂತವಿದ್ದ ಶಿಷ್ಯರಿಗೂ ಭಕ್ತರಿಗೂ ತಲುಪಿತು. ವಿಶೇಷವಾದ ಉತ್ಸವ ಸಮಿತಿಯು ಹಗಲಿರುಳೂ ದುಡಿಯಿತು. ಭಕ್ತರಿಗೆ ವಸತಿ ಸೌಕರ್ಯ ಊಟದ ಏರ್ಪಾಟುಗಳ ವ್ಯವಸ್ಥೆಯಾಯಿತು. ವಾಹನಗಳ ಪ್ರವಾಹ ಶೃಂಗೇರಿಗೆ ಬರಲು ಆರಂಭವಾಯಿತು. ಜನಗಳ ಪ್ರವಾಹವಂತೂ ಇರುವೆಗಳ ಸಾಲಿನಂತೆ ಹರಿಯುತ್ತಾ ಬರುತ್ತಲಿತ್ತು.

ಶ್ರೀ ವಿದ್ಯಾತೀರ್ಥರು ಕೆಲಸಗಾರರಿಗೂ ಸಮಿತಿಯ ಸದಸ್ಯರಿಗೂ ಆಗಾಗ ಸೂಕ್ತವಾದ ಸಲಹೆಗಳನ್ನೂ ಕೊಡುತ್ತ ಪ್ರತಿಯೊಂದು ಕೆಲಸದ ಮೇಲ್ವಿಚಾರಣೆಯನ್ನೂ ತಾವೇ ನೋಡಿಕೊಳ್ಳುತ್ತಿದ್ದರು. ಲೋಕಕಲ್ಯಾಣಕ್ಕಾಗಿ ನಡೆಯುತ್ತಿದ್ದ ಈ ಎಲ್ಲಾ ಕಾರ್ಯಕ್ರಮಗಳ ಸಿದ್ಧತೆಯನ್ನೂ ಶ್ರೀ ಶ್ರೀಗಳವರು ತಮ್ಮ ಗುರುದೇವರಿಗೆ ವಿವರವಾಗಿ ವರದಿ ಮಾಡುತ್ತಿದ್ದರು. ಸದಾಕಾಲದಲ್ಲಿಯೂ ಅಂತರ್ಮುಖಿಗಳಾಗಿದ್ದು ಯಾವ ಕಾರ್ಯದಲ್ಲಿಯೂ ಆಸಕ್ತಿ ತೋರದೆ ನಿರ್ಲಿಪ್ತರಾಗಿ ತಮ್ಮಷ್ಟಕ್ಕೆ ತಾವಿರುತ್ತಿದ್ದ ಗುರುದೇವರು ಈಗ ಎಲ್ಲವನ್ನೂ ವಿಚಾರಿಸುತ್ತಿದ್ದುದು ಶ್ರೀ ವಿದ್ಯಾತೀರ್ಥರಿಗೂ ಶಿಷ್ಯರಿಗೂ ಹರ್ಷ ಉಂಟುಮಾಡುತ್ತಿತ್ತು.

ಹೋಮಾದಿ ಕಾರ್ಯಗಳು ತಮ್ಮ ಷಷ್ಠ್ಯಬ್ದಿಪೂರ್ತಿಯ ಕಾಲಕ್ಕೆ, ಆ ಸಮಾರಂಭವನ್ನು ಆಚರಿಸುವ ಸಲುವಾಗಿಯೇ ನಡೆಯಕೂಡದೆಂದು ಶ್ರೀ ಗುರುದೇವರು ಅಪೇಕ್ಷೆಪಟ್ಟಿದ್ದರಷ್ಟೆ. ಅವರ ಆಜ್ಞೆಯಂತೆಯೇ ಕೆಲವು ದಿನಗಳ ನಂತರವೇ ಈ ಉತ್ಸವದ ಕಾರ್ಯಗಳು ಆರಂಭವಾದವು, (ಏಪ್ರಿಲ್, ೧೯೫೩). ಆ ವೇಳೆಗೆ ಸರಿಯಾಗಿ ಗುರುದೇವರು ಮತ್ತೆ ಏಕಾಂತವಾಸಕ್ಕೆ ದಯಮಾಡಿಸಿಬಿಟ್ಟರು. ಹಾಗೆ ಹೊರಡುವ ಮುನ್ನ ಈ ಪುಣ್ಯಕಾರ್ಯವು ಖಂಡಿತವಾಗಿಯೂ ಭಗವತ್ಪ್ರೀತಿಯ ಕಾರ್ಯವೆಂದೂ, ಪೂರ್ಣಾಹುತಿಯ

---

* ಯಜ್ಞಯಾಗಾದಿಗಳನ್ನು ವಿಧಿವತ್ತಾಗಿ ನಡೆಸುವುದರಿಂದ ವಾತಾವರಣವೂ, ಓಷಧಿ ವನಸ್ಪತಿಗಳೂ ಶುದ್ಧವಾಗುತ್ತವೆ, ವಾತಾವರಣದಲ್ಲಿರುವ ನಾನಾವಿಧವಾದ ವಿಷಾಣುಗಳ ಪರಿಣಾಮವನ್ನು ಯಜ್ಞಯಾಗಾದಿಗಳ ಧೂಮವು ನಾಶಗೊಳಿಸಿ ವಾತಾವರಣವನ್ನು ಸ್ವಚ್ಛಗೊಳಿಸುತ್ತದೆ. ಯಜ್ಞಯಾಗಾದಿಗಳ ಧೂಮವು ರೇಡಿಯೇಷನ್ ಪರಿಣಾಮವನ್ನು ತಡೆಗಟ್ಟಲು ಸಮರ್ಥವೆಂದು ರಷ್ಯಾ ವಿಜ್ಞಾನಿಗಳು ಸಂಶೋಧನೆ ಮಾಡಿದ್ದಾರೆ.

CC-O. In Public Domain. Digitized by eGangotri

ದಿನ ಭಗವಂತನ ತೃಪ್ತಿಯ ದ್ಯೋತಕವಾಗಿ ಮಳೆಗರೆಯುವುದೆಂದೂ ನುಡಿದಿದ್ದರು. ಎಲ್ಲ ಕಾರ್ಯಕರ್ತರನ್ನು ಆಶೀರ್ವದಿಸಿ ಕಾರ್ಯದಲ್ಲಿ ಯಶಸ್ಸನ್ನು ಕೋರಿ ಭಗವತ್ಪ್ರಾರ್ಥನೆ ಸಲ್ಲಿಸಿ ತಾವು ಅಂತರ್ಮುಖರಾಗಿಬಿಟ್ಟರು.

ಶ್ರೀ ಗುರುದೇವರು ಇದ್ದಕ್ಕಿದ್ದಂತೆಯೇ ಅಂತರ್ಮುಖರಾದುದು ಭಕ್ತರಿಗೆ ಸ್ವಲ್ಪ ನಿರಾಸೆಯನ್ನುಂಟು ಮಾಡಿದರೂ ಅವರೆಲ್ಲರನ್ನೂ ಶ್ರೀ ವಿದ್ಯಾತೀರ್ಥರು ಉತ್ಸಾಹಗೊಳಿಸಿ ಕಾರ್ಯಪ್ರವರ್ತರನ್ನಾಗಿ ಮಾಡಿದರು. ಶ್ರೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ವೇದಶಾಸ್ತ್ರ ವಿದ್ಯಾ ವಿಶಾರದರು ಯಾಗಕಾರ್ಯಾರಂಭ ಮಾಡಿದರು. ಶ್ರೀ ಗುರುಗಳವರು ಈ ಕಾರ್ಯದಿಂದ ಭಗವಂತನು ತೃಪ್ತಿಯಾಗಬೇಕಾದರೆ ಮತ್ತು ಲೋಕಕಲ್ಯಾಣವಾಗಬೇಕಾದರೆ ಹೋಮಾದಿ ಕಾರ್ಯಗಳಲ್ಲಿ ಭಾಗವಹಿಸುವ ಋತ್ವಿಜರೂ ಮತ್ತು ಇತರರೂ ತ್ರಿಕರಣ ಶುದ್ಧಿಯಿಂದ ಏಕಾಗ್ರಚಿತ್ತರಾಗಿ ಪ್ರತ್ಯಕ್ಷವಾಗಿ ಭಗವಂತನ ಸಾನ್ನಿಧ್ಯದಲ್ಲಿಯೇ ಈ ಕಾರ್ಯವು ನಡೆಯುತ್ತಿದೆಯೆಂದು ಭಾವಿಸಿ ಶ್ರದ್ಧಾಭಕ್ತಿಗಳಿಂದ ಕಾರ್ಯಪ್ರವೃತ್ತರಾಗಬೇಕೆಂದು ಬೋಧಿಸಿದರು. ಎಲ್ಲ ಕಾರ್ಯಗಳೂ ಶಾಸ್ತ್ರೋಕ್ತವಾಗಿ ಕಟ್ಟುನಿಟ್ಟಾಗಿ ಆಚರಿಸಲ್ಪಟ್ಟವು. ಶ್ರೀ ಅತಿರುದ್ರ ಸ್ವಾಹಾಕಾರ ಮಹಾ ಯಾಗವೂ, ಶ್ರೀ ಸಹಸ್ರ ಚಂಡಿಹೋಮವೂ ಪೂರ್ಣಾಹುತಿಯ ಸಮರ್ಪಣೆಯಿಂದ ಮುಕ್ತಾಯಗೊಂಡವು. ಅದೇ ಕಾಲಕ್ಕೆ ಸರಿಯಾಗಿ ಶ್ರೀ ಪರ್ಜನ್ಯ ದೇವನು ಶ್ರೀ ಗುರುದೇವರು ಅಪ್ಪಣೆ ಕೊಡಿಸಿದ್ದಂತೆಯೇ ವರ್ಷವೃಷ್ಟಿಯನ್ನು ಸುರಿಸಿ ಹರ್ಷವನ್ನುಂಟುಮಾಡಿ ದೇವರಿಗೂ ಇದು ಮೆಚ್ಚುಗೆಯೆಂಬುದನ್ನು ಶ್ರುತಪಡಿಸಿದನು.

ಈ ಅಪೂರ್ವ ಯಜ್ಞವೀಕ್ಷಣೆಗಾಗಿಯೂ ಶ್ರೀ ಗುರುದ್ವಯರನ್ನು ಸಂದರ್ಶಿಸಿ ತಮ್ಮ ಗೌರವಭಕ್ತಿಗಳನ್ನು ಸಲ್ಲಿಸುವುದಕ್ಕಾಗಿಯೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿದ್ದರು. ಮೊದಮೊದಲು ಶ್ರೀ ಗುರುದೇವರು ಪ್ರತಿಯೊಂದು ಕಾರ್ಯದ ವ್ಯವಸ್ಥೆಯನ್ನೂ ಕೂಲಂಕಷವಾಗಿ ವಿಚಾರಿಸಿಕೊಳ್ಳುತ್ತಿದ್ದರೂ, ತಾವು ಮಾತ್ರ ಹೊರಗೆ ಬರಲೇ ಇಲ್ಲ. ಎಲ್ಲ ವ್ಯವಸ್ಥೆಯನ್ನು ತಮ್ಮ ಶಿಷ್ಯ ಶ್ರೀ ವಿದ್ಯಾತೀರ್ಥರಿಗೇ ವಹಿಸಿಬಿಟ್ಟಿದ್ದರು. ಶ್ರೀ ಗುರುದೇವರಿಗೆ ವಿದ್ಯಾತೀರ್ಥರ ಕಾರ್ಯನಿರ್ವಹಣಾ ಸಾಮರ್ಥ್ಯದಲ್ಲಿ ಸಂಪೂರ್ಣ ವಿಶ್ವಾಸವಿತ್ತು. ಅವರು ಎಲ್ಲ ಕಾರ್ಯವನ್ನೂ ದಕ್ಷರಾಗಿ ಅತ್ಯಂತ ಸಮರ್ಪಕವಾಗಿ ನಡೆಸುತ್ತಾರೆಂಬ ನಂಬಿಕೆಯಿತ್ತು. ಗುರುದೇವರ ನಂಬಿಕೆಯಂತೆಯೇ ಎಲ್ಲ ಕಾರ್ಯಕ್ರಮಗಳನ್ನೂ, ಅವರ ಆಶೀರ್ವಾದಾನುಗ್ರಹಗಳಿಂದ ಶ್ರೀ ವಿದ್ಯಾತೀರ್ಥರು ಜಯಪ್ರದವಾಗಿ ನೆರವೇರಿಸಿದ್ದರು.

ಭರತಖಂಡದ ನಾನಾ ಸ್ಥಳಗಳಿಂದ ಬಹು ಜನ ಸನ್ಯಾಸಿಗಳೂ ಸಾಧುಗಳೂ ಸಂತರೂ ಮಠಾಧಿಪತಿಗಳೂ ಈ ಪುಣ್ಯಕಾರ್ಯಕ್ಕೆ ಆಗಮಿಸಿದ್ದರು. ಅವರಲ್ಲಿ ಸಜ್ಜನಗಢದ ಶ್ರೀಧರ ಸ್ವಾಮಿಗಳೂ, ಹರಿಹರಪುರ ಮಠದ ಶ್ರೀ ಸ್ವಯಂಪ್ರಕಾಶ ಅಭಿನವ ರಾಮಾನಂದ ಸರಸ್ವತಿಯವರೂ, ಬಂಡಿಗಡಿಮಠದ ಶ್ರೀ ರಾಮಚಂದ್ರಾನಂದ ಭಾರತೀಯವರೂ ಪ್ರಮುಖರಾಗಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲರಿಗೂ ಪೂಜೆ ಅರ್ಚನೆ ತೀರ್ಥಪ್ರಸಾದ ವಿನಿಯೋಗಕ್ಕೆ ಸಮರ್ಪಕವಾದ ವ್ಯವಸ್ಥೆಯಾಗಿದ್ದು, ಬಂದವರೆಲ್ಲರೂ ಶ್ರೀ ಶಾರದಾಂಬಾ, ಶ್ರೀ ವಿದ್ಯಾಶಂಕರ, ಶ್ರೀ ಶಂಕರಾಚಾರ್ಯ ಶ್ರೀ ಮಲಹಾನಿಕೇಶ್ವರ ದೇವಾಲಯ ಮತ್ತು ಹಿಂದಿನ ಗುರುವರ್ಯರುಗಳ ಬೃಂದಾವನಗಳ ದರ್ಶನಮಾಡಿ ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳ ಸಂದರ್ಶನ ಪಡೆದು, ಅವರಿಂದ ಫಲಮಂತ್ರಾಕ್ಷತೆ ಸ್ವೀಕರಿಸಿ ಅಂತರ್ಮುಖರಾಗಿದ್ದ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರನ್ನು ಶ್ರೀ ವಿದ್ಯಾತೀರ್ಥರಲ್ಲಿಯೇ ದರ್ಶನ ಮಾಡಿದರು. ಉತ್ಸವದ ಸವಿನೆನಪುಗಳನ್ನು ಗುರುದೇವತಾ ಅನುಗ್ರಹವನ್ನೂ ಹೊತ್ತು ಆನಂದದಿಂದ ಹಿಂದಿರುಗಿದರು. ಶ್ರೀ ವಿದ್ಯಾತೀರ್ಥರ ಕಾರ್ಯಕ್ಷಮತೆ, ದಕ್ಷತೆ ಶಿಷ್ಯರಲ್ಲಿ ಅವರಿಗಿರುವ ಅನುಕಂಪ ಕರುಣೆ ವಾತ್ಸಲ್ಯಗಳನ್ನು ಶಿಷ್ಯರೆಲ್ಲರೂ ಬಹುವಾಗಿ ಕೊಂಡಾಡಿದರು.

೧೨. ಧರ್ಮಾಧ್ಯಕ್ಷರ ದರ್ಶನಕ್ಕೆ ರಾಷ್ಟ್ರಾಧ್ಯಕ್ಷರು

ಅತಿರುದ್ರ ಮತ್ತು ಚಂಡೀಯಾಗಗಳ ಮುಕ್ತಾಯದ ನಂತರ ಶೃಂಗೇರಿ ಎಂದಿನ ಸ್ಥಿತಿಗೆ ಹಿಂದಿರುಗಿತು. ಶ್ರೀ ಗುರುದೇವರು ಪುನಃ ತಮ್ಮ ತಪಸ್ಸಿನಿಂದ ಬಹಿರ್ಮುಖರಾಗಿ ದೈನಂದಿನ ಕಾರ್ಯಕ್ರಮಗಳಲ್ಲಿ ಮತ್ತೆ ನಿರತರಾಗುತ್ತಿದ್ದರು. ಅವರ ದರ್ಶನಕ್ಕಾಗಿ ಅನೇಕ ಜನ ಭಕ್ತರು ಶೃಂಗೇರಿಗೆ ಬರಲಾರಂಭಿಸಿದರು. ಶ್ರೀಗುರುದೇವರು ಬಹಿರ್ಮುಖರಾದ ಸುದ್ದಿ ಅತ್ಯಂತ ವೇಗವಾಗಿ ವ್ಯಾಪಿಸಿ ಬಿಡುತ್ತಿತ್ತು. ಜನ ಒಡನೆಯೇ ಅವರ ದರ್ಶನಕ್ಕೆ ಧಾವಿಸುತ್ತಿದ್ದರು. ಆ ಸಮಯದಲ್ಲಿ ಭರತ ಖಂಡದ ಉಪ ರಾಷ್ಟ್ರಪತಿಯಾಗಿದ್ದ ಶ್ರೀ ಎಸ್. ರಾಧಾಕೃಷ್ಣನ್‌ರವರು ಶೃಂಗೇರಿಗೆ ಬಂದು ಶ್ರೀ ಗುರುದ್ವಯರ ಮತ್ತು ಶ್ರೀ ಶಾರದಾಂಬಾ ದರ್ಶನ ಮಾಡಿದರು.

ಸ್ವಲ್ಪ ದಿನಗಳ ನಂತರ ಭಾರತದ ರಾಷ್ಟ್ರಾಧ್ಯಕ್ಷ ಡಾ|| ಬಾಬು ರಾಜೇಂದ್ರಪ್ರಸಾದರವರು ಶ್ರೀ ಗುರುದೇವರ ದರ್ಶನಕ್ಕಾಗಿ ಬರುತ್ತಾರೆಂಬ ಪತ್ರ ಶೃಂಗೇರಿಗೆ ಬಂದಿತು. ಶ್ರೀ ಅಭಿನವ ವಿದ್ಯಾತೀರ್ಥರು ಗುರುದೇವರ ಅಪ್ಪಣೆಯಂತೆ ರಾಷ್ಟ್ರಪತಿಯ ಸ್ವಾಗತಕ್ಕೆ ಸೂಕ್ತವಾದ ಏರ್ಪಾಟುಮಾಡುವಂತೆ ಮಠದ ಕಾರ್ಯಕರ್ತರಿಗೆ ಸೂಚನೆಯಿತ್ತರು. ರಾಜ್ಯ ಸರ್ಕಾರವು ಕೂಡ ತನ್ನ ನೌಕರರಿಗೆ ಸೂಚನೆಯನ್ನಿತ್ತು, ರಾಷ್ಟ್ರಪತಿಯ ಸ್ವಾಗತಕ್ಕೆ ಸಮರ್ಪಕವಾದ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸಿತು.

ಶ್ರೀ ರಾಜೇಂದ್ರಪ್ರಸಾದರಿಗೆ ಶೃಂಗೇರಿಯ ಗುರುಪರಂಪರೆಯಲ್ಲಿ ತುಂಬ ಅಭಿಮಾನವೂ ಗೌರವಾದರಗಳೂ ಮೂಡಿದ್ದವು. ಪಾಟ್ನನಗರದ “ಸರ್ಚ್‌ಲೈಟ್” ಪತ್ರಿಕೆಯಲ್ಲಿ ಅದರ ಸಂಪಾದಕರಾಗಿದ್ದ ಶ್ರೀ ಮಂತ್ರೇಶ್ವರ ಶರ್ಮರು ಹಲವಾರು ಲೇಖನಗಳನ್ನು ಬರೆದು ಶೃಂಗೇರಿಯ ವೈಶಿಷ್ಟ್ಯವನ್ನು ವಿವರಿಸಿ ಧಾರ್ಮಿಕ ಕ್ಷೇತ್ರದಲ್ಲಿ ಅದರ ಮಹತ್ವವನ್ನು ವರ್ಣಿಸಿದ್ದರು. ಶೃಂಗೇರಿಯ ಆಚಾರ್ಯರ ತಪಸ್ಸು, ಭರತಖಂಡದ ಧಾರ್ಮಿಕ ಸಾಂಸ್ಕೃತಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಏಕತೆಗೆ ಅವರ ಕೊಡುಗೆ, ಆಧ್ಯಾತ್ಮಿಕ ಪ್ರಭಾವ ಇವುಗಳನ್ನೆಲ್ಲಾ ವಿವರಿಸಿ ಬರೆದ ಆ ಲೇಖನಗಳು ಪ್ರಸಾದರ ಮನ ಸೆಳೆದಿದ್ದವು. ಶರ್ಮರು ಪ್ರಸಾದರ ಆಪ್ತ ಸ್ನೇಹಿತರೂ ಆಗಿದ್ದರಲ್ಲದೆ ಶ್ರೀ ಚಂದ್ರಶೇಖರ ಭಾರತೀಯರ ಅಂತರಂಗದ ಶಿಷ್ಯರೂ ಆಗಿದ್ದರು. ಶ್ರೀ ಗುರುದೇವರ ವಿಶೇಷ ಕೃಪೆಗೆ ಪಾತ್ರರೂ ಆಗಿದ್ದರು. ಅದ್ವೈತ ಸಾಕ್ಷಾತ್ಕಾರವನ್ನು ಪಡೆದು ಸದಾ ಬ್ರಹ್ಮಾನುಭವದಲ್ಲಿಯೇ ಇರುವ ಈ ಮಹಾತ್ಮರ ಸಂದರ್ಶನವನ್ನು ಪಡೆಯಬೇಕೆಂದು ಪ್ರಸಾದರು ಸಂಕಲ್ಪಿಸಿ, ಅದಕ್ಕೆ ತಕ್ಕಂತೆ ದಕ್ಷಿಣ ಭಾರತ ಪ್ರವಾಸವನ್ನು ಕೈಗೊಂಡು ಮೈಸೂರು ನಗರದಲ್ಲಿಯೇ ಒಂದುತಿಂಗಳ ಕಾಲ ವಿಶ್ರಾಂತಿಯಲ್ಲಿದ್ದರು.

ಶ್ರೀ ಪ್ರಸಾದರಿಗೆ ಶೃಂಗೇರಿ ಮತ್ತು ಶೃಂಗೇರಿಯ ಆಚಾರ್ಯರ ವಿಚಾರ ಪುರಿ ಗೋವರ್ಧನ ಪೀಠದ ಜಗದ್ಗುರುಗಳಾಗಿದ್ದ ಸ್ವಾಮಿ ಶ್ರೀ ಭಾರತೀಕೃಷ್ಣ ತೀರ್ಥರಿಂದಲೂ ಚೆನ್ನಾಗಿ ತಿಳಿದಿತ್ತು. ಶ್ರೀ ಸ್ವಾಮಿಗಳು ಪೂರ್ವಾಶ್ರಮದಲ್ಲಿ ಶ್ರೀ ಶಿವಾಭಿನವ ನೃಸಿಂಹ ಭಾರತೀ ಮತ್ತು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಸನ್ನಿಧಿಯಲ್ಲಿ ಶೃಂಗೇರಿಯಲ್ಲಿ ವೇದಾಂತ ಶಾಸ್ತ್ರಾಭ್ಯಾಸ ನಡೆಸಿ ಅವರಿಬ್ಬರಿಂದಲೂ ಆಧ್ಯಾತ್ಮಿಕ ದೀಕ್ಷೆ ಪಡೆದಿದ್ದ ಮಹಾಭಾಗ್ಯಶಾಲಿಗಳು. ಮೊದಲಿನಿಂದಲೂ ರಾಷ್ಟ್ರೀಯ ಮನೋಭಾವವುಳ್ಳವರಾಗಿದ್ದ ಸ್ವಾಮಿಗಳು, ಯತ್ಯಾಶ್ರಮ ಸ್ವೀಕಾರದ ನಂತರವೂ ಭರತ ಖಂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ, ತ್ಯಾಗ ವೈರಾಗ್ಯಶೀಲರಾದ ಯತಿಗಳು ದೇಶಕ್ಕೆ ಅಪಾಯ ಬಂದಾಗ ಹೇಗೆ ಪ್ರತ್ಯಕ್ಷ ಮಾರ್ಗದರ್ಶನ ನೀಡಬಹುದೆಂಬುದನ್ನು ತೋರಿಸಿದ್ದ ಮಹಾನುಭಾವರು. ಕರಾಚಿ ನಗರದಲ್ಲಿ ಶ್ರೀ ಸ್ವಾಮಿಗಳವರು ರಾಷ್ಟ್ರಧರ್ಮವನ್ನು ಕುರಿತು ಮಾಡಿದಂತಹ ಒಂದು ಉಪನ್ಯಾಸದಿಂದ, ಬ್ರಿಟಿಷ್ ಸರ್ಕಾರ ಕೆರಳಿ ಶ್ರೀ ಸ್ವಾಮಿಗಳವರನ್ನು ಬಂಧನಕ್ಕೆ ಒಳಪಡಿಸಿ ವಿಚಾರಣೆ ನಡೆಸಿದಾಗ, ಶ್ರೀ ಸ್ವಾಮಿಗಳವರ ಪರವಾಗಿ ವಕಾಲತ್ತು ವಹಿಸಿದ್ದವರು ರಾಜೇಂದ್ರಪ್ರಸಾದರು. ಹೀಗೆ ಅವರಿಬ್ಬರಿಗೂ ಚೆನ್ನಾಗಿ ಪರಿಚಯವಿದ್ದು ಶ್ರೀ ಸ್ವಾಮಿಗಳವರ ಆಧ್ಯಾತ್ಮಿಕ ಜೀವನಕ್ಕೆ ಸ್ಫೂರ್ತಿಯನ್ನಿತ್ತಿದ್ದ ಶೃಂಗೇರಿಯ ಮತ್ತು ಶೃಂಗೇರಿಯ ಗುರುಗಳ ಬಗೆಗೆ ಪ್ರಸಾದರಿಗೆ ಆಸಕ್ತಿ ಮೂಡಿತ್ತು. ಆ ಕ್ಷೇತ್ರವನ್ನೂ ಅಲ್ಲಿರುವ ಮಹಾತ್ಮರನ್ನೂ ದರ್ಶನ ಮಾಡಬೇಕೆಂದು ಅವರು ಅಪೇಕ್ಷಿಸಿದ್ದುದು ಸಹಜವಾಗಿಯೇ ಇತ್ತು.

ಶ್ರೀ ಪ್ರಸಾದರು ಶೃಂಗೇರಿಗೆ ಹೋಗುವುದನ್ನು ತಪ್ಪಿಸಲು ಬಹುಜನ ರಾಜಕೀಯ ಧುರೀಣರು ಅನೇಕ ರೀತಿಯಲ್ಲಿ ಪ್ರಯತ್ನಿಸಿದ್ದರು. ಶೃಂಗೇರಿಯಲ್ಲಿ ಸದಾ ಮಳೆ, ಥಂಡಿ ಹವ, ಮಲೆನಾಡು ಪ್ರದೇಶವಾದ್ದರಿಂದ ರಸ್ತೆಗಳು ಚೆನ್ನಾಗಿರುವುದಿಲ್ಲ. ಅಸ್ತಮಾದಿಂದ ಬಳಲುತ್ತಿರುವ ರಾಷ್ಟ್ರಪತಿಯವರು ಪ್ರತಿಕೂಲ ಹವಾಮಾನವಿರುವ ಈ ಪ್ರದೇಶಕ್ಕೆ ಹೋದರೆ ಆರೋಗ್ಯ ಸ್ಥಿತಿ ತುಂಬಾ ಬಿಗಡಾಯಿಸಬಹುದು, ಎಂದೆಲ್ಲಾ ಅಡ್ಡಿ ಆತಂಕಗಳನ್ನು ಈ ಪ್ರಭಾವಶಾಲಿಗಳು ಒಡ್ಡಿದರು. ಈ ವಿಘ್ನಪಟುಗಳಿಗೆ ಇದ್ದ ನಿಜವಾದ ಭಯ ರಾಷ್ಟ್ರಾಧ್ಯಕ್ಷರ ಯೋಗಕ್ಷೇಮವಾಗಿರಲಿಲ್ಲ. ಬೇರೆಯೇ ಆಗಿತ್ತು. ಆಗ ರಾಜ್ಯದ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಧಾನಸಭೆಯಲ್ಲಿ ಪ್ರಚಲಿತವಾಗಿದ್ದ ಇನಾಮು ರದ್ದಿಯಾತಿ ಮಸೂದೆಯಿಂದ ಶೃಂಗೇರಿ ಜಹಗೀರನ್ನು ವಿನಾಯಿತಿ ಮಾಡಬೇಕೆಂದು ಸ್ವಾಮಿಗಳಿಬ್ಬರೂ ರಾಷ್ಟ್ರಾಧ್ಯಕ್ಷರನ್ನು ಕೇಳಿಬಿಡುತ್ತಾರೆ. ರಾಜೇಂದ್ರಪ್ರಸಾದರು ತುಂಬಾ ದಾಕ್ಷಿಣ್ಯ ಸ್ವಭಾವದವರಾದ್ದರಿಂದ ಮತ್ತು ಧಾರ್ಮಿಕ ಮನಃಪ್ರವೃತ್ತಿವುಳ್ಳವರಾದ್ದರಿಂದ, ಸ್ವಾಮಿಗಳ ಮಾತಿಗೆ ಇಲ್ಲ ಎನ್ನಲಾರರು; ಇನಾಂ ರದ್ದು ಮಸೂದೆಗೆ ಸೂಕ್ತ ತಿದ್ದುಪಡಿಯನ್ನು ತಂದು ಶೃಂಗೇರಿಯ ಜಹಗೀರನ್ನು ಮಸೂದೆಯ ವ್ಯಾಪ್ತಿಯಿಂದ ಹೊರಕ್ಕೆ ಉಳಿಸಬೇಕಾಗುತ್ತದೆ, ಎಂಬ ಈ ಕಾಲ್ಪನಿಕ ಭೀತಿ ಆ ಧುರೀಣರನ್ನು ಕಾಡುತ್ತಿತ್ತು. ಇದರಿಂದ ಪೀಡಿಸಲ್ಪಟ್ಟ ಹಲವು ಜನ ಮುಂದಾಳುಗಳು ಅಧ್ಯಕ್ಷರನ್ನು ಶೃಂಗೇರಿಗೆ ಹೋಗದಂತೆ ತಡೆಯಲು ಬಹುವಾಗಿ ಪ್ರಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ರಾಜೇಂದ್ರ ಪ್ರಸಾದರ ಶೃಂಗೇರಿ ಯಾತ್ರೆಯ ನಿರ್ಧಾರ ಅಚಲವಾಗಿತ್ತು. ಅದಕ್ಕೆ ತಕ್ಕ ವ್ಯವಸ್ಥೆಯನ್ನು ಸರ್ಕಾರವು ಮಾಡಲೇ ಬೇಕಾಗಿತ್ತು. ರಾಜ್ಯ ಸರ್ಕಾರವು ರಾಷ್ಟ್ರಾಧ್ಯಕ್ಷರ ಪ್ರಯಾಣಕ್ಕೆ ಸೂಕ್ತ ವ್ಯವಸ್ಥೆಯನ್ನು ಕೈಗೊಂಡುದೂ ಆಗಿತ್ತು.

ಶೃಂಗೇರಿಯ ಮಠದಲ್ಲಿಯೂ ರಾಷ್ಟ್ರಾಧ್ಯಕ್ಷರ ಸುಸ್ವಾಗತಕ್ಕೆ ಪೂರ್ಣ ಸಿದ್ಧತೆ ನಡೆದಿತ್ತು. ಅಧ್ಯಕ್ಷರು ಶೃಂಗೇರಿಗೆ ಆಗಮಿಸಿದಾಗ ಅವರನ್ನು ಉತ್ಸವದಲ್ಲಿ ಕರೆತರಲು ಏರ್ಪಾಡಾಯಿತು. ಶೃಂಗೇರಿಗೆ ವಿಜಯನಗರದ ಮೊದಲು ಮೂವರು ಚಕ್ರವರ್ತಿಗಳೂ ಹಿಂದೆ ಬಂದು ಹೋಗಿದ್ದರಷ್ಟೆ. ಅವರ ನಂತರ ರಾಷ್ಟ್ರದ ಪ್ರಥಮ ಪ್ರಜೆಯಾದ ಅಧ್ಯಕ್ಷರು ಬರುವುದು ಇದೇ ಮೊದಲಾಗಿತ್ತು. ಅವರನ್ನು ಕ್ಷೇತ್ರದ ಮುಖ್ಯರಸ್ತೆಯಲ್ಲಿ ಕರೆತರಲು ರಜತಪಾಲಕಿಯನ್ನು ಸಿದ್ಧಗೊಳಿಸಲಾಗುತ್ತಿತ್ತು. ಅದೇ ಸಮಯಕ್ಕೆ ಮಧ್ಯಾಹ್ನದ ಭಿಕ್ಷಾನಂತರ ಶ್ರೀ ಗುರುದೇವರು ಅತ್ತಕಡೆ ದಯಮಾಡಿಸಿದರು. ಪ್ರಸಾದರ ನಿಷ್ಕಲ್ಮಷ ವ್ಯಕ್ತಿತ್ವ, ತ್ಯಾಗಮಯ ಜೀವನ, ಧರ್ಮಶ್ರದ್ಧೆ, ಪ್ರಾಮಾಣಿಕ ರಾಷ್ಟ್ರಸೇವೆ ಇವುಗಳನ್ನು ಕುರಿತು ತಮ್ಮ ಕಾರ್ಯದರ್ಶಿಯಾಗಿದ್ದ ಶ್ರೀ ಎಸ್. ಜಿ. ನರಸಿಂಹಯ್ಯನವರೊಂದಿಗೆ ವಿಚಾರಿಸಿದರು. ಅಧ್ಯಕ್ಷರು ರಾಜಕೀಯದ ಮಧ್ಯದಲ್ಲಿದ್ದರೂ ಅಪೂರ್ವವಾದ ಧಾರ್ಮಿಕ ಮನೋಭಾವವುಳ್ಳ ಸಚ್ಚಾರಿತ್ರರೆಂಬುದನ್ನು ತಿಳಿದ ಗುರುದೇವರು "ಇಂತಹ ಮಹನೀಯರನ್ನು ರಾಜಯೋಗ್ಯವಾದ ರೀತಿಯಲ್ಲಿ ಕರೆತರಬೇಕು. ಅವರನ್ನು ಸ್ವರ್ಣ ಪಾಲಕಿಯಲ್ಲಿಯೇ ಬಿಜಯ ಮಾಡಿಸಿರಿ" ಎಂದು ಅಪ್ಪಣೆ ಮಾಡಿದರು. ಗುರುದೇವರ ಅಪ್ಪಣೆಯಂತೆ ಚಿನ್ನದ ಪಲ್ಲಕಿಯನ್ನೇ ಅಣಿಗೊಳಿಸಲಾಯಿತು.

ಮಾರನೆಯ ದಿನ ರಾಷ್ಟ್ರಪತಿಯವರು ಆಗಮಿಸಿದಾಗ, ಅವರಿಗೆ ಊರಿನ ಅಗಸೆಯಲ್ಲಿ ಭವ್ಯ ಸ್ವಾಗತ ನೀಡಿ, ಮಠದ ಅಧಿಕಾರಿಗಳೂ ಪುರಜನರೂ ಸರ್ಕಾರದ ಅಧಿಕಾರಿಗಳೂ ಆದರದಿಂದ ಬರಮಾಡಿಕೊಂಡರು. ಪೂರ್ಣಕುಂಭದ ಮರ್ಯಾದೆಗಳೆಲ್ಲವೂ ಆದ ನಂತರ ಪ್ರಸಾದರನ್ನು ಸ್ವರ್ಣಪಾಲಕಿಯಲ್ಲಿ ಮಂಡಿಸಬೇಕೆಂದು ಕೇಳಿಕೊಳ್ಳಲಾಯಿತು. ಆಗ ರಾಷ್ಟ್ರಾಧ್ಯಕ್ಷರು ಈ 'ಪಾಲಕಿಯನ್ನು ಯಾರು ಉಪಯೋಗಿಸುತ್ತಾರೆ'? ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇಳಿದರು. " ಇದರಲ್ಲಿ ಶ್ರೀ ಜಗದ್ಗುರುಗಳವರು ಮಂಡಿಸುತ್ತಾರೆ " ಎಂದು ತಿಳಿಸಲು, " ಶ್ರೀ ಜಗದ್ಗುರು ಶಂಕರಾಚಾರ್ಯರು ಕುಳಿತುಕೊಳ್ಳುವಂತಹ ಈ ಪವಿತ್ರ ಸ್ಥಾನದಲ್ಲಿ ನಾನು ಕುಳಿತುಕೊಳ್ಳುವುದೇ ? ಇಲ್ಲ, ಕೂಡದು " ಎಂದು ಹೇಳಿ ಪಾಲಕಿಯ ಮೇಲೆ ತಮ್ಮ ಹಸ್ತವನ್ನಾಡಿಸಿ ಕಣ್ಣಿಗೊತ್ತಿಕೊಂಡರು. ಅನಂತರ ಮಠದವರೆಗೂ ತಮ್ಮ ಕಾರಿನಲ್ಲಿಯೇ ಬಂದರು.

ಅಧ್ಯಕ್ಷರನ್ನು ಇಳಿಸಲು ಶ್ರೀ ಚಂದ್ರಮೌಳೀಶ್ವರ ತೊಟ್ಟಿಯನ್ನು ಅನುವುಗೊಳಿಸ ಲಾಗಿತ್ತಷ್ಟೆ. ಪ್ರಸಾದರು ಅಲ್ಲಿಗೆ ಬಂದನಂತರ ಅದರಲ್ಲಿ ಶ್ರೀ ಜಗದ್ಗುರುಗಳು ಆಗಾಗ ವಾಸಮಾಡುತ್ತಾರೆಂದು ತಿಳಿದು, " ಇಲ್ಲಿ ಶ್ರೀಗುರುಗಳವರು ಪೂಜಾನುಷ್ಠಾನ ಮಾಡು ವಂತಹ ಸ್ಥಳದಲ್ಲಿ ನಾನು ವಾಸಮಾಡಬಹುದೇ ? ಮನೆಯಂತೆ ಊಟ ನಿದ್ದೆಗಳಿಗೆ ಈ ಮಂದಿರವನ್ನು ಉಪಯೋಗಿಸಬಹುದೇ ? " ಎಂದು ಕೇಳಿದರು. ಶ್ರೀ ಗುರುಗಳವರೇ ಹಾಗೆ ಅಪ್ಪಣೆ ಮಾಡಿರುವರೆಂದು ತಿಳಿದ ಬಳಿಕ, ಅತ್ಯಂತ ವಿನಯದಿಂದ ಚಂದ್ರ ಮೌಳೀಶ್ವರ ತೊಟ್ಟಿಯಲ್ಲಿ ಉಳಿದುಕೊಂಡರು.

ಶ್ರೀ ಶಾರದಾಂಬಾ ಸನ್ನಿಧಿಯಲ್ಲಿ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳೂ, ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳೂ ರಾಜೇಂದ್ರ ಪ್ರಸಾದರಿಗೆ ದರ್ಶನ ಕೊಟ್ಟರು. ಈ ಸನ್ನಿವೇಶ ಅತ್ಯಂತ ಆಕರ್ಷಕವಾಗಿತ್ತು. ರಾಷ್ಟ್ರಾಧ್ಯಕ್ಷರು ಶ್ರೀ ಜಗದ್ಗುರುದ್ವಯರನ್ನು ಪ್ರತ್ಯೇಕವಾಗಿ ದರ್ಶನಮಾಡಿ ಬಹಳಕಾಲ ಆಧ್ಯಾತ್ಮಿಕ ವಿಚಾರಗಳನ್ನು, ಧಾರ್ಮಿಕ ವಿಚಾರಗಳನ್ನು ಪ್ರಸ್ತಾಪಿಸಿ ತಮ್ಮ ಅನುಮಾನಗಳನ್ನು ಪರಿಹರಿಸಿಕೊಂಡರು. ಶ್ರೀ ಚಂದ್ರಶೇಖರ ಭಾರತೀಯವರ ಮತ್ತು ರಾಷ್ಟ್ರಾಧ್ಯಕ್ಷರ ಸಂಭಾಷಣೆಯನ್ನು ಶ್ರೀ ವಿದ್ಯಾ ತೀರ್ಥರು ದುಭಾಷಿಯಾಗಿ ನಡೆಸಿಕೊಟ್ಟರು. ಶ್ರೀ ಜಗದ್ಗುರುದ್ವಯರನ್ನು ಅಧ್ಯಕ್ಷರು ಸಾಷ್ಟಾಂಗ ಪ್ರಣಾಮ ಪೂರ್ವಕವಾಗಿ ವಂದಿಸಿ ಅವರ ಉಪದೇಶಗಳಿಗೆ ಕೃತಜ್ಞತೆಯನ್ನು ಅರ್ಪಿಸಿದರು.

ಶೃಂಗೇರಿಯ ದರ್ಶನವು ಶ್ರೀ ಪ್ರಸಾದರ ಜೀವನದಲ್ಲಿ ಚಿರಸ್ಮರಣೀಯವಾದ ಘಟನೆ ಯಾಗಿತ್ತು. ಇಂತಹ ಪವಿತ್ರವಾದ ಸ್ಥಳಕ್ಕೆ ಮಹಾತ್ಮರ ಸಂದರ್ಶನಕ್ಕೆ ಮೊದಲೇ ಬರಲಿಲ್ಲವಲ್ಲಾ ಎಂದು ಅವರು ಪಶ್ಚಾತ್ತಾಪ ಪಟ್ಟರಂತೆ. ಶೃಂಗೇರಿಯ ಭೇಟಿ ನಂತರ ಗುರುದ್ವಯರ ಆಶೀರ್ವಾದಾನುಗ್ರಹಗಳಿಂದ ಅಧ್ಯಕ್ಷರ ಆರೋಗ್ಯವು ಸುಧಾರಿಸಿತು. ಬಹು ಜನ ರಾಜಕೀಯ ಧುರೀಣರು ಭಾವಿಸಿದ್ದಂತೆ, ಗುರುದ್ವಯರು ಅಧ್ಯಕ್ಷರಲ್ಲಿ ಪ್ರಸ್ತಾಪಿಸಿ ದ್ದುದು, ತಮ್ಮ ಮಠದ ಆಸ್ತಿ ಪಾಸ್ತಿಯ ರಕ್ಷಣೆಯ ವಿಚಾರವನ್ನಲ್ಲ. ಕ್ಷೀಣಿಸುತ್ತಿರುವ ಧರ್ಮವನ್ನು ರಕ್ಷಿಸುವುದು ಹೇಗೆ, ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯುವುದು ಹೇಗೆ, ಅದಕ್ಕೆ ಯಾವ ರೀತಿಯ ಪ್ರಯತ್ನಗಳು ಅಗತ್ಯ ಎಂಬೀ ವಿಚಾರಗಳನ್ನು ಗುರುಗಳೂ ಅಧ್ಯಕ್ಷರೂ ಚರ್ಚಿಸಿದ್ದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿದ್ಯಾತೀರ್ಥ ಸ್ವಾಮಿಗಳವರು ಒಮ್ಮೆ ಈ ವಿಚಾರದ ಪ್ರಸ್ತಾಪ ಬಂದಾಗ-ಇನಾಂರದ್ದು ಮಸೂದೆಯ ಪ್ರಸ್ತಾಪ ಬಂದಾಗ-“ ಶ್ರೀ ಶಂಕರಾಚಾರ್ಯರು ಮುಂದೆಂದೋ ಬರಬಹುದಾದ ಜಹಗೀರಿಯನ್ನು ನಂಬಿಕೊಂಡು ಶೃಂಗೇರಿಯಲ್ಲಿ ಮಠವನ್ನು ಸ್ಥಾಪನೆ ಮಾಡಿದರೇನು ? ಖಂಡಿತವಾಗಿಯೂ ಇಲ್ಲ. [redacted] ಬರಬಹುದಾದ ಆಸ್ತಿಪಾಸ್ತಿಯ ಆಲೋಚನೆ ಅವರಿಗೆ ಇರಲೇ ಇಲ್ಲ. ಧರ್ಮದ ರಕ್ಷಣೆ, ಆಧ್ಯಾತ್ಮಿಕ ಮಾರ್ಗದರ್ಶನ ಇವು ಅವರ ಗುರಿಯಾಗಿದ್ದವು. ಜಹಗೀರಿಯನ್ನು ಹಿಂದಿನವರು ಧಾರ್ಮಿಕ ಪ್ರಯೋಜನಕ್ಕಾಗಿ ಕೊಟ್ಟರು. ಈಗಿನವರು ಅದನ್ನು ಜನತೆಯ ಕಲ್ಯಾಣಕ್ಕೋಸ್ಕರವಾಗಿಯೇ ತೆಗೆದುಕೊಳ್ಳುತ್ತೇವೆ ಎನ್ನುತ್ತಿದ್ದಾರೆ. ತೆಗೆದುಕೊಳ್ಳಲಿ. ಹೇಗಾದರೂ ಇದು ಬಹುಜನರ ಉಪಯೋಗಕ್ಕೆ ತಾನೇ ವಿನಿಯೋಗವಾಗುತ್ತದೆ ?

“ ಈ ಊರ ಮಧ್ಯದಲ್ಲಿ ಇರುವ ಮಲ್ಲಪ್ಪನ ಬೆಟ್ಟ ಮತ್ತು ಈ ಪಕ್ಕದಲ್ಲಿರುವ ಕಾಲಭೈರವನ ಬೆಟ್ಟ ಇವುಗಳ ಮಧ್ಯೆ ಅಣೆಕಟ್ಟು ಕಟ್ಟಿದರೆ ಅದರಿಂದ ಲಕ್ಷಾಂತರ ಜನಕ್ಕೆ ಪ್ರಯೋಜನವಾಗುತ್ತದೆ ಎನ್ನುವುದಾದರೆ, ನಾವು ಶ್ರೀ ಶಾರದಾಂಬಾರವರನ್ನೂ, ಶ್ರೀ ಚಂದ್ರಮೌಳೀಶ್ವರನನ್ನೂ ಕರೆದುಕೊಂಡು ಹೊರಟು ಇನ್ನಾವುದಾದರೂ ಬೆಟ್ಟದ ನೆತ್ತಿಯ ಮೇಲೆ ಇರುತ್ತೇವೆ ” ಎಂದು ಅಪ್ಪಣೆ ಕೊಡಿಸಿದರು. ಇದು ವಿರಾಗಿಗಳಾದ ಶೃಂಗೇರಿಯ ಆಚಾರ್ಯರ ಮನೋಧರ್ಮ.

೧೩. ಶ್ರೀ ಚಂದ್ರಶೇಖರಭಾರತೀಯವರ ನಿರ್ಯಾಣ

ರಾಷ್ಟ್ರಪತಿಯವರು ಶೃಂಗೇರಿಗೆ ಬಂದು ಹಿಂದಕ್ಕೆ ತೆರಳಿದ ನಂತರ ಶ್ರೀ ಚಂದ್ರಶೇಖರ ಭಾರತೀಯವರು ಮತ್ತೆ ಅಂತರ್ಮುಖರಾಗಲಿಲ್ಲ. ಶೃಂಗೇರಿಗೆ ಜನಪ್ರವಾಹ ಒಂದೇ ಸಮನಾಗಿ ಬರುತ್ತಲೇ ಇದ್ದು ಗುರುದ್ವಯರ ದರ್ಶನ ಬೋಧನಗಳಿಂದ ತೃಪ್ತರಾಗಿ ಹರ್ಷ ಸಂತೋಷದಿಂದ ಹಿಂದಿರುಗುತ್ತಿದ್ದರು. ಶ್ರೀ ವಿದ್ಯಾತೀರ್ಥರವರೇ ಬರುತ್ತಿದ್ದವರೆಲ್ಲರಿಗೂ ಅವರವರ ಕಷ್ಟ ತೊಂದರೆ ದುಃಖಗಳ ವಿಚಾರದಲ್ಲಿ ಸಾಂತ್ವನ ನೀಡುತ್ತಿದ್ದರು. ಸಾಧ್ಯವಾದಷ್ಟು ಮಟ್ಟಿಗೂ ಹಿರಿಯ ಗುರುಗಳ ಏಕಾಂತವಾಸಕ್ಕೆ ಧ್ಯಾನಾನುಷ್ಠಾನಗಳಿಗೆ ಭಂಗ ಬರದಂತೆ ನೋಡಿಕೊಳ್ಳುತ್ತಿದ್ದರು.

ಶ್ರೀ ಜಯ ಸಂವತ್ಸರದ ([redacted]) ಆಷಾಢಮಾಸದ ವ್ಯಾಸಪೂರ್ಣಿಮೆಯ ದಿನ ಶ್ರೀ ಚಂದ್ರಶೇಖರ ಭಾರತೀಯವರೇ ವ್ಯಾಸ ಪೂಜೆಯನ್ನು ನೆರವೇರಿಸಿದರು. ಚಾತುರ್ಮಾಸ್ಯ ವ್ರತ ಸಂಕಲ್ಪವನ್ನು ಕೈಗೊಂಡು ಭಕ್ತರ ಹೃನ್ಮನಗಳಿಗೆ ಸಂತೋಷವನ್ನು ಉಂಟುಮಾಡಿದರು. ಶ್ರೀ ಗುರುದೇವರ ಪೂಜಾನುಷ್ಠಾನಗಳಿಗೆ ಶ್ರೀ ವಿದ್ಯಾತೀರ್ಥರೇ ಪೂಜಾಸಾಮಗ್ರಿಗಳನ್ನು ಒಂದೊಂದನ್ನಾಗಿ ಒಪ್ಪಿಸುತ್ತಿದ್ದ ದೃಶ್ಯ ದಿವ್ಯವಾಗಿತ್ತು. ಹಿರಿಯ ಗುರುಗಳು ನಡೆಸುತ್ತಿದ್ದ ಪೂಜೆಗೆ ಕಿರಿಯ ಗುರುಗಳು ನೆರವಾಗುತ್ತಿದ್ದ ಆ ಸುಂದರ ಚಿತ್ರವನ್ನು ಕಂಡು ಹೃದಯ ಮನಸ್ಸುಗಳು ತುಂಬಿ ಭಕ್ತವೃಂದ ಆನಂದಪಟ್ಟಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ನವರಾತ್ರಿಯ ಕಾಲದಲ್ಲಿ ಶ್ರೀ ಗುರುದೇವರು ಬಹಿರ್ಮುಖರಾಗಿದ್ದರೆ ಭಕ್ತರನೇಕರಿಗೆ ದರ್ಶನ ಲಾಭ ದೊರಕಬಹುದೆಂದೂ ವ್ಯಾಸಪೂರ್ಣಿಮೆಯಲ್ಲಿ ಕಂಡಂತೆ ನವರಾತ್ರಿಯಲ್ಲಿಯೂ ಇಬ್ಬರನ್ನೂ ಒಟ್ಟಿಗೆ ದರ್ಶನ ಮಾಡಬಹುದೆಂದೂ ಅನೇಕರು ಆಸೆ ಪಟ್ಟಿದ್ದರು.

ಈ ಮಧ್ಯೆ ಒಂದು ಸುದ್ದಿ ಜನಿತವಾಗಿತ್ತು. ೧೯೪೦ ರಿಂದ ಈಚೆಗೆ ಶ್ರೀ ಚಂದ್ರಶೇಖರ ಭಾರತೀಯವರು ಸಂಚಾರ ಹೊರಟಿರಲಿಲ್ಲ. ಶ್ರೀ ಅಭಿನವ ವಿದ್ಯಾತೀರ್ಥರಂತೂ ಒಮ್ಮೆಯೂ ಸಂಚಾರ ಹೊರಟಿರಲಿಲ್ಲ. ತಮಿಳುನಾಡು, ಆಂಧ್ರ, ಕರ್ಣಾಟಕ ಮುಂತಾದ ಪ್ರದೇಶಗಳಲ್ಲಿದ್ದ ಶಿಷ್ಯವೃಂದದಿಂದ ಪದೇ ಪದೇ ಒತ್ತಾಯದ ಪ್ರಾರ್ಥನೆಗಳು ಬರುತ್ತಲೇ ಇದ್ದವು. ಹೆಚ್ಚಿನ ಪ್ರಾರ್ಥನೆಗಳಿಗೆ ಈಶ್ವರ ಸಂಕಲ್ಪದಂತೆ ಕಾರ್ಯಗಳು ನಡೆಯುತ್ತವೆಯೆಂದೂ, ಶ್ರೀ ಶಾರದಾ ಚಂದ್ರಮೌಳೀಶ್ವರರ ಪ್ರೇರಣೆಯಾದಾಗ ತೀರ್ಥ ಕ್ಷೇತ್ರ ಪರ್ಯಟನ ಕಾರ್ಯ ಕೈಗೊಳ್ಳುವುದಾಗಿ ತಿಳಿಸಿ ಶ್ರೀ ವಿದ್ಯಾತೀರ್ಥರೇ ಪ್ರಸಾದವನ್ನು ಕಳುಹಿಸುತ್ತಿದ್ದರು. ಈ ವರ್ಷದ ಚಾತುರ್ಮಾಸ್ಯ ವ್ರತದ ಮುಕ್ತಾಯದ ನಂತರ ಗುರುದ್ವಯರು ಸಂಚಾರ ಹೊರಡಬಹುದೆಂಬ ನಿರೀಕ್ಷೆ ಜನಮನದಲ್ಲಿ ಇತ್ತು.

ನವರಾತ್ರಿ ಉತ್ಸವವನ್ನು ಶೃಂಗೇರಿಯಲ್ಲಿಯೇ ಮುಗಿಸಿಕೊಂಡು ಗುರುದ್ವಯರು ಸಂಚಾರವಾರಂಭಿಸಿ ಶ್ರೀ ಚಂದ್ರಶೇಖರಭಾರತೀಯವರು ಶ್ರೀಶಂಕರಭಗವತ್ಪಾದರ ಜನ್ಮಸ್ಥಳವಾದ ಕಾಲಟಿಯಲ್ಲಿ ತಪೋಮಗ್ನರಾಗುವರೆಂದೂ ಶ್ರೀವಿದ್ಯಾತೀರ್ಥರು ಸಂಚಾರವನ್ನು ಮುಂದುವರೆಸಿ ದಕ್ಷಿಣಾಮ್ನಾಯ ಪೀಠದ ವ್ಯಾಪ್ತಿಗೆ ಒಳಪಟ್ಟ ದಕ್ಷಿಣಭಾರತದ ಪ್ರವಾಸ ಕೈಗೊಳ್ಳುವರೆಂದೂ ಸುದ್ದಿ ಪ್ರಚಲಿತವಾಗಿತ್ತು. ಅದಕ್ಕೆ ಪೂರಕವಾಗಿ ಶ್ರೀಗುರುದೇವರು ಬಹಿರ್ಮುಖರಾಗಿದ್ದುದೂ, ರಾಷ್ಟ್ರಾಧ್ಯಕ್ಷರಾದಿ ಪ್ರಮುಖರಿಗೆ ಸಂದರ್ಶನವನ್ನಿತ್ತುದೂ, ಚಾತುರ್ಮಾಸ್ಯ ವ್ರತ ಸಂಕಲ್ಪ ಕೈಗೊಂಡುದುದೂ ಸುದ್ದಿಗೆ ಪುಷ್ಟಿಯನ್ನು ಕೊಟ್ಟಿತ್ತು.

ಆಷಾಢಮಾಸ ಕಳೆಯಿತು. ಶ್ರಾವಣ ಬಂದು ಆರ್ಭಟಮಾಡಿ ಹೊರಟು ಹೋಯಿತು. ಭಾದ್ರಪದಮಾಸ ಕಾಲಿಟ್ಟಿತು. ಭಾದ್ರಪದ ಶುದ್ಧ ಚೌತಿಯಿಂದ ಶ್ರೀ ಗಣಪತಿ ಉತ್ಸವ ಆರಂಭವಾಯಿತು. ಅದೇ ದಿನ ಸಂಜೆ ಗಣಪತಿ ವಿದ್ವತ್‌ಸದಸ್ಸು ಪ್ರಾರಂಭವಾಗಿ ಹತ್ತು ದಿನಗಳ ಕಾಲ ನಡೆದ ವಿದ್ವತ್ಸಭೆಯಲ್ಲಿ ಅನೇಕ ಜನ ವಿದ್ವಾಂಸರು ಪಾಲ್ಗೊಂಡು ಉಭಯ ಶ್ರೀಗಳವರನ್ನೂ ಸಂದರ್ಶಿಸಿದರು. ಹಿಂದೆ ಇಂತಹ ಸಭೆಗಳು ನಡೆದ ಹಲವಾರು ಸಂದರ್ಭಗಳಲ್ಲಿ ಶ್ರೀ ಗುರುದೇವರು ಅಂತರ್ಮುಖರಾಗಿರುತ್ತಿದ್ದುದರಿಂದ ಶ್ರೀ ವಿದ್ಯಾತೀರ್ಥರವರೇ ಸಭಾಧ್ಯಕ್ಷತೆಯನ್ನು ವಹಿಸಿ ಕಾರ್ಯಕ್ರಮವನ್ನು ನಿರ್ದೇಶಿಸುತ್ತಿದ್ದರು. ಈ ವರ್ಷದ ಸಭೆಯಲ್ಲಿ ಹಿರಿಯ ಗುರುಗಳೂ ಉಪಸ್ಥಿತರಾಗಿದ್ದುದು ಪಂಡಿತ ಮಂಡಲಿಗೆಲ್ಲಾ ವಿಶೇಷ ಹರ್ಷವನ್ನುಂಟುಮಾಡಿತ್ತು. ಎಲ್ಲ ವಿದ್ವಾಂಸರೂ ಸೂಕ್ತ ಸಂಭಾವನೆ ಮತ್ತು ಮನ್ನಣೆಗಳನ್ನು ಪಡೆದು ಹಿಂದಿರುಗಿದರು.

ಭಾದ್ರಪದ ಪೂರ್ಣಿಮೆಯಂದು ಚಾತುರ್ಮಾಸ್ಯ ವ್ರತ ಸಮಾರೋಪವಾಯಿತು. ಉಭಯ ಶ್ರೀಗಳವರೂ ದೀಕ್ಷಾವಿಸರ್ಜನೆ ಮಾಡಿದರು. ಸ್ನಾನಾಹ್ನಿಕಗಳ ನಂತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂಜಾದಿಗಳನ್ನು ನೆರವೇರಿಸಿ ಭಕ್ತರಿಗೆ ತೀರ್ಥಪ್ರಸಾದಗಳನ್ನು ಅನುಗ್ರಹಿಸಿದರು. ಸೀಮೋಲ್ಲಂಘನಮಾಡಿ ಕ್ಷೇತ್ರದ ದೇವಾಲಯಗಳನ್ನು ದರ್ಶನ ಮಾಡಿದರು. ಮಠದಲ್ಲಿ ಮುಂಬರುವ ನವರಾತ್ರಿ ಉತ್ಸವದ ಚಟುವಟಿಕೆ ಪ್ರಾರಂಭವಾಯಿತು.

ಶೃಂಗೇರಿಯ ನವರಾತ್ರಿ ಉತ್ಸವ ಅತ್ಯಂತ ವೈಭವದ ಸಮಾರಂಭ. ಮಹಾಲಯ ಅಮಾವಾಸ್ಯೆಯಂದೇ ಶ್ರೀ ಶಾರದಾಂಬಾರವರಿಗೆ ಮಹಾಭಿಷೇಕವು ನಡೆದು ನವರಾತ್ರಿಯ ಉತ್ಸವಗಳಿಗೆ ಅದೇ ನಾಂದಿಯಾಗುತ್ತದೆ. ಆಶ್ವಯುಜ ಶುದ್ಧ ಪಾಡ್ಯದಿಂದ ದಶಮಿಯ ವರೆಗೆ ವಿಶೇಷ ಪೂಜಾ ಪಾರಾಯಣಗಳೂ, ಅರ್ಚನೆ ಅನುಷ್ಠಾನಗಳೂ ನಡೆಯುತ್ತವೆ. ಶ್ರೀ ಜಗದ್ಗುರುಗಳು ಪ್ರತಿದಿನವೂ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ಶ್ರೀ ದೇವಿ ನವಾವರಣ ಪೂಜೆಯನ್ನು ನಡೆಸುತ್ತಾರೆ. ಕುಮಾರಿ ಪೂಜೆ, ಸುಮಂಗಲೀ ಪೂಜೆಗಳು ಜರಗುತ್ತವೆ. ಭಕ್ತರೆಲ್ಲರಿಗೂ ತೀರ್ಥಪ್ರಸಾದ ವಿನಿಯೋಗವೂ ನಡೆಯುತ್ತದೆ. ರಾತ್ರಿಯ ಕಾಲದಲ್ಲಿ ಪ್ರತಿದಿನವೂ ಶ್ರೀ ಶಾರದಾಂಬಾರವರಿಗೆ ಒಂದೊಂದು ವಿಧದ ಅಲಂಕಾರ ನಡೆದು ದೇವಿಯ ವಿವಿಧ ಅವತಾರಗಳ ನಾಮರೂಪಗಳ ದರ್ಶನವಾಗುತ್ತದೆ. ಶ್ರೀ ಶಾರದಾ ಸನ್ನಿಧಿಯಲ್ಲಿ ಪ್ರಾಚೀನವಾದ ವ್ಯಾಖ್ಯಾನ ಪೀಠದಲ್ಲಿ ಶ್ರೀ ಜಗದ್ಗುರುಗಳವರು ಕಿರೀಟಾದಿಗಳನ್ನು ಧರಿಸಿ ಸಾಂಪ್ರದಾಯಿಕವಾಗಿ ಮಂಡಿಸುತ್ತಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಶ್ರೀ ದೇವಿಗೆ ಆ ರಾತ್ರಿವೇಳೆಯಲ್ಲಿ ನಡೆಯುವ ದೀಪಾರಾಧನೆಯೂ ತುಂಬಾ ಚೇತೋಹಾರಿಯಾಗಿರುತ್ತದೆ. ಚಂಡೀಪಾರಾಯಣದ ಅಂಗವಾಗಿ ಶತಚಂಡೀಹೋಮವು ನಡೆಯುತ್ತದೆ. ವಿಜಯದಶಮಿಯಂದು ಶ್ರೀ ಶಾರದಾಂಬಾರವರ ರಥೋತ್ಸವವು ಶ್ರೀ ಶ್ರೀಗಳವರ ಪಾಲಕೀ ಉತ್ಸವವೂ ಜರುಗಿ, ಈವಿಜೃಂಭಣೆಯ ಉತ್ಸವದಲ್ಲಿ ಪಾಲ್ಗೊಳ್ಳಲು ಈ ವೈಭವವನ್ನು ನೋಡಲು ಸಹಸ್ರಸಹಸ್ರ ಸಂಖ್ಯೆಯಲ್ಲಿಜನ ಬರುತ್ತಾರೆ. ನವರಾತ್ರಿಯ ಹತ್ತು ದಿನಗಳೂ ಶ್ರೀ ಮಠದಲ್ಲಿ ಭಕ್ತವೃಂದಕ್ಕೆ ಅನ್ನದಾನವು ನಡೆಯುತ್ತದೆ.

ಶ್ರೀ ಚಂದ್ರಶೇಖರ ಭಾರತೀಯವರು ಶ್ರೀ ವಿದ್ಯಾತೀರ್ಥರನ್ನು ಶಿಷ್ಯರನ್ನಾಗಿ ಪರಿಗ್ರಹಣ ಮಾಡಿದಾಗಿನಿಂದಲೂ ನವರಾತ್ರಿಯ ಉತ್ಸವದ ಕಾರ್ಯಕಲಾಪವನ್ನು ಹೆಚ್ಚಾಗಿ ಶ್ರೀ ವಿದ್ಯಾತೀರ್ಥರಿಗೇ ವಹಿಸಿಬಿಟ್ಟಿದ್ದರು. ತಾವು ಬಹಿರ್ಮುಖರಾಗಿದ್ದಾಗಲೂ ಸಹ ಪೂಜಾನುಷ್ಠಾನಗಳಲ್ಲಿ ಮಾತ್ರ ಪಾಲ್ಗೊಂಡು ಉತ್ಸವದ ಎಲ್ಲ ಗೌರವ ಮರ್ಯಾದೆಗಳು ಶ್ರೀ ವಿದ್ಯಾತೀರ್ಥರಿಗೇ ಸಲ್ಲ[illegible]ಗುರುದೇವರು ಅಪ್ಪಣೆಮಾಡಿದ್ದರಷ್ಟೆ. ಅದು ಹಾಗೇ ನಡೆಯುತ್ತಲೂ ಇತ್ತು.

ಈ ವರ್ಷ ಶ್ರೀ ಗುರುದೇವರು ಬಹಿರ್ಮುಖರಾಗಿದ್ದುದರಿಂದ ಶ್ರೀ ವಿದ್ಯಾತೀರ್ಥರಿಗೆ ತುಂಬಾ ಸಂತೋಷವಾಗಿತ್ತು. ಮಠದ ಕಾರ್ಯಕರ್ತರೂ ಅತ್ಯಂತ ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು. ಉತ್ಸವಕ್ಕಾಗಿ ಶೃಂಗೇರಿಗೆ ಆಗಮಿಸುವ ಜನರ ಸಂಖ್ಯೆ ಆ ವರ್ಷ ಹೆಚ್ಚಾಗುವ ನಿರೀಕ್ಷೆ ಇದ್ದು ಅದಕ್ಕೆ ತಕ್ಕ ಏರ್ಪಾಟುಗಳನ್ನು ಮಠದ ಅಧಿಕಾರಿಗಳು ನಡೆಸುತ್ತಲೇ ಇದ್ದರು. ನವರಾತ್ರಿ ಉತ್ಸವದ ಪತ್ರಿಕೆಗಳು ಎಲ್ಲ ಕಡೆಗಳಿಗೂ ಕಳುಹಿಸಲ್ಪಟ್ಟವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಜಯಸಂವತ್ಸರದ ಭಾದ್ರಪದ ಬಹುಳ ಅಮಾವಾಸ್ಯೆಯ ಪರ್ವದಿನ ಮಹಾಲಯ ಅಮಾವಾಸ್ಯೆ. ಅಂದು ಬ್ರಾಹ್ಮೀ ಮುಹೂರ್ತಕ್ಕೂ ಮುಂಚೆಯೇ ಶ್ರೀ ಗುರುದೇವರು ಸ್ನಾನಕ್ಕಾಗಿ ತುಂಗಾನದಿಯತ್ತ ಹೊರಟರು. ಅದು ಮಳೆಗಾಲ. ವಿಪರೀತ ಗಾಳಿ ಮತ್ತು ಛಳಿಯ ಕೊರೆತವಿದ್ದುದರಿಂದ ಸ್ನಾನಕ್ಕೆ ಬಿಸಿನೀರು ಸಿದ್ಧಗೊಳಿಸಲ್ಪಟ್ಟಿತ್ತು. ಹೊಳೆಯತ್ತ ಹೊರಟ ಗುರುದೇವರಿಗೆ ಅವರ ಆಪ್ತ ನೌಕರರಾಗಿದ್ದ ಮಹಾಬಲಭಟ್ಟರು, "ಸ್ನಾನಕ್ಕೆ ಬಿಸಿನೀರು ಸಿದ್ಧವಾಗಿದೆ" ಎಂದು ಬಿನ್ನವಿಸಿದರು. "ಬೇಡ ಇಂದು ನದಿಯಲ್ಲಿಯೇ ಸ್ನಾನ ಮಾಡುತ್ತೇವೆ" ಎಂದು ಹೇಳಿದ ಗುರುದೇವರು ದಡದಡನೆ ಹೆಜ್ಜೆ ಹಾಕುತ್ತಾ ಹೊಳೆಯತ್ತ ಹೊರಟೇಬಿಟ್ಟರು. ಮಹಾಬಲಭಟ್ಟರು ವಸ್ತ್ರಗಳೊಡನೆ ಗುರುದೇವರನ್ನು ಹಿಂಬಾಲಿಸುತ್ತಾ ಸರಸರನೆ ಹೊರಟರು. ಪ್ರಳಯ ಭೈರವಿಯಂತೆ ಉಗ್ರವಾಗಿದ್ದಳು ನದಿ ತುಂಗೆ. ಎರಡು ದಡಗಳನ್ನು ಮೀರಿ ರುದ್ರಗಾಂಭೀರ್ಯದಿಂದ ಭೀಮ ಸೌಂದರ್ಯದಿಂದ ಕಂಡವರೆದೆಯಲ್ಲಿ ಭಯ ಭಕ್ತಿಗಳೆರಡನ್ನೂ ಮೂಡಿಸುತ್ತಾ ಪ್ರವಹಿಸುತ್ತಿದ್ದಳು ಅತ್ಯಂತ ವೇಗೋತ್ಕರ್ಷದಿಂದ. ಶ್ರೀ ಗುರುದೇವರು ಈ ತುಂಗೆಯ ಎಲ್ಲ ರೀತಿಯ ಆಟಾಟೋಪವನ್ನು ವೈಭವವನ್ನೂ ಸೌಮ್ಯರೂಪವನ್ನೂ ಬಹಳ ಕಾಲದಿಂದ ಬಲ್ಲವರಲ್ಲವೆ? ಈಗ ಕಾಳಿಯಂತೆ ಭಯಂಕರಳಾಗಿರುವ ಈ ತುಂಗೆ ಸರಸ್ವತಿಯಂತೆ ಸೌಮ್ಯಳಾಗಿ, ಲಕ್ಷ್ಮಿಯಂತೆ ಅನುಗ್ರಹ ಪೂರ್ಣೆಯಾಗಿ, ಮಹಾಮಾತೆ ಶ್ರೀ ಲಲಿತಾ ದೇವಿಯಂತೆ ಸರ್ವರಕ್ಷಕಿಯಾಗಿ ಗೋಚರಿಸುತ್ತಿರಲಿಲ್ಲವೆ? ಗುರುದೇವರಿಗೆ ಯಾವ ಭಯ ಈ ತಾಯಿಯ ಹತ್ತಿರ?

ಸ್ನಾನಕ್ಕೆಂದು ಸಂಧ್ಯಾ ಮಂಟಪದಲ್ಲಿ ನಿಂತ ಗುರುದೇವರು ಶ್ರೀಚಕ್ರಪೀಠಸ್ಥಿತೆಯಾದ ಶ್ರೀ ಶಾರದಾದೇವಿಯನ್ನು ಸ್ತುತಿಸಿದರು, ವಂದಿಸಿದರು. ಅಂದೇ ಆಕೆಗೆ ಮಹಾಮಜ್ಜನ. ಬಳಿಕ ಜಲರಾಶಿಯಲ್ಲಿ ಪ್ರವೇಶಿಸಿ ನಿಂತರು. ಸ್ನಾನಕ್ಕಾಗಿ ಸಂಕಲ್ಪಗೈದರು, ಪೂರ್ವಾಭಿಮುಖರಾಗಿ ನಿಂತು ಪ್ರಾಣಾಯಾಮ ಮಾಡಿದರು. ಪೂರಕ ಕ್ರಮದಲ್ಲಿ ಶ್ವಾಸವನ್ನೆಳೆದು ಕುಂಭಕದಲ್ಲಿ ನಿಲ್ಲಿಸಿದರು. ಅಚಲರಾಗಿ ಜಲರಾಶಿಯ ಮಧ್ಯದಲ್ಲಿ ಸ್ಥಾಣುವಿನಂತೆ ನಿಂತ ಗುರುದೇವರು ಪಂಚಪ್ರಾಣಗಳನ್ನೂ ನಿಶ್ಚಲವಾಡಿ ಬ್ರಹ್ಮರಂಧ್ರದ ಮೂಲಕ ಹೊರಹೊರಡಿಸಿಬಿಟ್ಟರು. ಜೀವನ್ಮುಕ್ತರಾಗಿದ್ದ ಮಹಾಸ್ವಾಮಿಗಳು ತಮ್ಮ ಶರೀರ ಬಂಧನವನ್ನೂ ಕೊಡವಿಕೊಂಡು ವಿದೇಹ ಮುಕ್ತರೂ ಆದರು. ಪೂತಶರೀರ ತುಂಗೆಯಲ್ಲಿ ಉರುಳಿ ತೇಲಿಕೊಂಡು ಮುಂದಕ್ಕೆ ಹೋಯಿತು. ಶ್ರೀ ಗುರುದೇವರ ಸ್ನಾನಕ್ರಮವನ್ನು ಬಲ್ಲವರಾಗಿದ್ದ ಮಹಾಬಲಭಟ್ಟರು, ಗುರುದೇವರ ಶರೀರ ನೀರಿನಲ್ಲುರುಳಿದಾಗ ತಲ್ಲಣಗೊಂಡು, ತಾವೂ ನೀರಿಗೆ ಧುಮುಕಿದರು. ಶ್ರೀ ಗುರುದೇವರ ಪವಿತ್ರ ಶರೀರವನ್ನು ಹಿಡಿದುಕೊಂಡು ದಡಕ್ಕೆ ಬರಲು ಮಹತ್ಪ್ರಯತ್ನ ಮಾಡುತ್ತಿದ್ದರು. ಈ ದೃಶ್ಯವನ್ನು ಕಂಡ ಕೂಡಲೇ ಕೇಶವಾಚಾರ್ಯರೆಂಬ ಪುಣ್ಯಾತ್ಮರು ತಾವೂ ನೀರಿಗೆ ಧುಮುಕಿ ಬೇಗ ಈಜಿಕೊಂಡು ಹೋಗಿ ಮಹಾಬಲಭಟ್ಟರಿಗೆ ನೆರವಾದರು. ಶ್ರೀ ಗುರುದೇವರ ಪವಿತ್ರ ಶರೀರ

Sri Vidyabharathi Book Centre, Sringeri

 CC-O. In Public Domain. Digitized by eGangotri

ವನ್ನು ದಡಕ್ಕೆ ತರಲಾಯಿತು. ಒಡನೆಯೇ ಈ ವಿಚಾರವನ್ನು ಸ್ನಾನಕ್ಕಾಗಿ ತೆರಳುತ್ತಿದ್ದ ಶ್ರೀ ವಿದ್ಯಾತೀರ್ಥರಿಗೆ ಮುಟ್ಟಿಸಲಾಯಿತು.

ಈ ಸುದ್ದಿ ಕೇಳಿ ಭಯಚಕಿತರಾದ ವಿದ್ಯಾತೀರ್ಥರು ಹೊಳೆಯತ್ತ ಓಡಿಬಂದರು. ಆ ವೇಳೆಗೆ ಶ್ರೀ ಗುರುದೇವರ ಪವಿತ್ರ ಕಳೇವರವನ್ನು ಸಂಧ್ಯಾಮಂಟಪಕ್ಕೆ ತರಲಾಗಿತ್ತು. ಯಾವ ಪವಿತ್ರ ಸ್ಥಳದಲ್ಲಿ ತಮಗೆ ಯತ್ಯಾಶ್ರಮ ದೀಕ್ಷೆಯನ್ನು ಅನುಗ್ರಹಿಸಿ ಆಶೀರ್ವದಿಸಿದ್ದರೋ ಆ ಪವಿತ್ರಸ್ಥಳದಲ್ಲಿ ಶ್ರೀ ಗುರುದೇವರು ವಿಶ್ವವಿರಾಟನಲ್ಲಿ ಐಕ್ಯರಾಗಿದ್ದರು. ವಿದ್ಯಾತೀರ್ಥರಿಗೆ ದಿಕ್ಕೇ ತೋಚಲಿಲ್ಲ. ತುಂಗೆಯ ತುಂಬು ಪ್ರವಾಹದಂತೆಯೇ ಅವರಿಗೂ ದುಃಖ ಪ್ರವಾಹ ಉಕ್ಕಿ ಕಣ್ಣೀರ್ದುಂಬಿ ನಿಂತರು. ಇಪ್ಪತ್ತುಮೂರು ವರ್ಷಗಳಕಾಲ ತಮಗೆ ಆಧ್ಯಾತ್ಮ ಮಾರ್ಗದರ್ಶನ ನೀಡಿ ಆಶ್ರಮೋಚಿತ ಧರ್ಮದಲ್ಲಿ ಉಪದೇಶವಿತ್ತು ಮಠದ ಕಾರ್ಯನಿರ್ವಹಣೆಯಲ್ಲಿ ವ್ಯವಹಾರಗಳಲ್ಲಿ ಸೂಕ್ತ ತಿಳಿವಳಿಕೆಯನ್ನಿತ್ತು ತಮ್ಮ ಯೋಗ ಕ್ಷೇಮ ಮತ್ತು ಆಧ್ಯಾತ್ಮಿಕ ಅಭ್ಯುದಯದಲ್ಲಿ ಆಸಕ್ತರಾಗಿದ್ದು ಸದಾ ತಮ್ಮನ್ನು ಜೋಪಾನ ಮಾಡಿದ ಆತ್ಮೀಯರೂ, ಪೂಜ್ಯರೂ, ಮಹಾತ್ಮರೂ ಆದ ಗುರುದೇವರು ಇನ್ನಿಲ್ಲ. ವಿದ್ಯಾತೀರ್ಥರಿಗೆ ತುಂಬಲಾರದ ನಷ್ಟವಾಯಿತು. ಭರಿಸಲಾಗದ ದುಃಖವಾಯಿತು.

ಶ್ರೀ ಗುರುದೇವರ ಪವಿತ್ರವಾದ ಕಳೇವರವನ್ನು ರತ್ನಗಂಬಳಿಯ ಮೇಲೆ ಮಲಗಿಸಿದರು. ವೈದ್ಯರನ್ನು ಕರೆಸಿದರು. ಸ್ವಲ್ಪವಾದರೂ ಶ್ವಾಸೋಚ್ಛ್ವಾಸವಿದೆಯೇನೋ ಎಂಬ ಚಪಲದಿಂದ ಗುರುದೇವರನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂಬ ಅಪೇಕ್ಷೆಯಿಂದ ಪರೀಕ್ಷೆಮಾಡಿಸಿದರು. ಯಾವ ಪ್ರಯತ್ನವೂ ಫಲಿಸಲಿಲ್ಲ. ಜಲಪ್ರವಾಹದಲ್ಲಿ ಸಿಲುಕಿದ್ದ ಶರೀರವು ಪದ್ಮಾಸನ ಸ್ಥಿತಿಯಲ್ಲಿಯೇ ಇದ್ದು ಹಸ್ತಗಳೆರಡೂ ಧ್ಯಾನಮುದ್ರೆಯಲ್ಲಿದ್ದವು. ಮುಖಮಂಡಲವು ಪಶ್ಚಿಮಾಂಬುಧಿಯಲ್ಲಿ ಇಳಿದ ವೃದ್ಧ ಸೂರ್ಯನ ತೇಜಸ್ಸಿನಂತೆ ಪ್ರಕಾಶಿಸುತ್ತಿತ್ತು. ಶರೀರದಲ್ಲಿ ಒಂದೇ ಒಂದು ಹನಿ ನೀರೂ ಪ್ರವೇಶಿಸಿರಲಿಲ್ಲ. ಶ್ರೀ ಗುರುದೇವರು ಶರೀರ ಧಾರಣೆ ಮಾಡಿದ್ದಾಗ ಹೇಗೆ ಎಲ್ಲರನ್ನೂ ಆಶ್ಚರ್ಯಗೊಳಿಸಿದ್ದರೋ, ಹಾಗೆಯೇ ದೇಹತ್ಯಾಗ ಮಾಡಿದಾಗಲೂ ಎಲ್ಲರನ್ನೂ ಚಕಿತಗೊಳಿಸಿದ್ದರು.

೧೪. ಶ್ರೀ ಗುರುದೇವರ ಆರಾಧನೆ

ಶ್ರೀ ಗುರುದೇವರು ಅನಿರೀಕ್ಷಿತವಾಗಿ ಶರೀರತ್ಯಾಗ ಮಾಡಿದರಷ್ಟೆ. ಸಾಮಾನ್ಯರ ಸಾಧಾರಣ ನೋಟಕ್ಕೆ ಇದು ಅನಿರೀಕ್ಷಿತವೆಂದು ಭಾಸವಾದರೂ, ಅವರ ನಿರ್ಯಾಣವು ಅನಿರೀಕ್ಷಿತವಾದುದೇನೂ ಆಗಿರಲಿಲ್ಲ. ಅವರೇ ತಮ್ಮ ನಿರ್ಯಾಣದ ವಿಚಾರವಾಗಿ ಹಲವು ಜನ ಶಿಷ್ಯರಿಗೆ ಸ್ಪಷ್ಟ ಸೂಚನೆಯನ್ನು ಕೊಟ್ಟಿದ್ದರು. ಭಕ್ತರು ಅದನ್ನು ಅಷ್ಟಾಗಿ ನಂಬಿರಲಿಲ್ಲ. ಅರ್ಥಮಾಡಿಕೊಂಡಿರಲಿಲ್ಲ. ದರ್ಶನಕ್ಕೆ ಅವಕಾಶವನ್ನು ಕೋರಿ ದೂರ ಸ್ಥಳಗಳಲ್ಲಿದ್ದ ಹಲ ಜನ ಶಿಷ್ಯರು ಬಿನ್ನಹ ಮಾಡಿಕೊಂಡು ಪತ್ರವನ್ನು ಬರೆದಿದ್ದಾಗ, ಅವರಿಗೆ ಎಷ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ದಿನಗಳ ಒಳಗೆ ಬಂದರೆ ದರ್ಶನವು ಸಿಕ್ಕುತ್ತದೆ ಎಂಬುದನ್ನು ತಿಳಿಸಿ ಪ್ರತ್ಯುತ್ತರ ಬರೆದಿದ್ದರು. ಆ ಪ್ರತ್ಯುತ್ತರವನ್ನು ಕಂಡವರು ಶೀಘ್ರದಲ್ಲಿಯೇ ಗುರುದೇವರು ಪುನಃ ಅಂತರ್ಮುಖರಾಗಬಹುದು ಎಂದು ಭಾವಿಸಿದ್ದರೇ ವಿನಾ ಅವರು ನಿರ್ಯಾಣ ಹೊಂದುತ್ತಾರೆಂದು ಊಹಿಸಿರಲಿಲ್ಲ. ಗುರುದೇವರ ನಿರ್ಯಾಣಾನಂತರವೇ ಅವರ ಪತ್ರದ ಅಂತರಾರ್ಥವೇನೆಂದು ಆ ಶಿಷ್ಯರಿಗೆ ಅರಿವಾದುದು.

ಹಾಗೆಯೇ ತಮ್ಮ ನಿರ್ಯಾಣವು ಯಾವ ರೀತಿಯಾಗುತ್ತದೆ ಎಂಬುದನ್ನೂ ಶ್ರೀ ಗುರುದೇವರು ಸೂಚಿಸಿದ್ದರು. ತಮ್ಮ ಶರೀರವನ್ನು ಅರಣ್ಯದಲ್ಲಿಯೋ ಜಲದಲ್ಲಿಯೋ ವಿಸರ್ಜಿಸಬೇಕೆಂದೂ, ಸಮಾಧಿ ಮಾಡಬೇಕಾಗಿಲ್ಲವೆಂದೂ ಆಪ್ತ ಶಿಷ್ಯರೊಬ್ಬರೊಡನೆ ಮಾತನಾಡುವ ಸಂದರ್ಭದಲ್ಲಿ ಸೂಚಿಸಿದ್ದರು. ಶರೀರತ್ಯಾಗ ಮಾಡುವುದಕ್ಕೆ ಕಾಲದ ಗಡುವನ್ನು ಇಟ್ಟುಕೊಂಡಿದ್ದಂತೆಯೇ ಶರೀರತ್ಯಾಗದ ವಿಧಾನವನ್ನೂ ಅವರು ಸೂಚಿಸಿಯಾಗಿತ್ತು. ಆದರೆ ಅವುಗಳನ್ನು ಯಾರೂ ನಂಬಿರಲಿಲ್ಲ. ನಂಬಿದ್ದವರೂ ನಿರ್ಯಾಣವು ಇಷ್ಟು ಶೀಘ್ರವಾಗಿ ಹೀಗೆಯೇ ನಡೆಯುತ್ತದೆಂದೂ ಊಹಿಸಿರಲಿಲ್ಲ.

ಜಲಪ್ರವಾಹದಿಂದ ಪವಿತ್ರ ಶರೀರವನ್ನು ಹೊರಕ್ಕೆ ತೆಗೆದಾಗ, ನೀರಿನಲ್ಲಿ ಮುಳುಗಿ, ನೀರು ಕುಡಿದು ಉಸಿರುಕಟ್ಟಿ, ಪ್ರಾಣ ಪ್ರಯಾಣ ಮಾಡಿದಂತೆ ಕಂಡುಬರಲಿಲ್ಲ. ಶರೀರದಲ್ಲಿ ಒಂದು ತೊಟ್ಟು ನೀರೂ ಸೇರಿರಲಿಲ್ಲ. ಅಷ್ಟೇ ಅಲ್ಲ ಮುಖದಲ್ಲಿ ನೋವಿನ ಅಥವಾ ಆಯಾಸದ ಚಿಹ್ನೆಯೂ ಇರಲಿಲ್ಲ. ಸ್ವಾಭಾವಿಕವಾದ ಸಮಾಧಿ ಸ್ಥಿತಿಯಲ್ಲಿ ಇದ್ದರು, ಶಾಂತನಾದ ಯಜ್ಞೇಶ್ವರನಂತೆ ಶ್ರೀ ಗುರುದೇವರು ಕಾಣುತ್ತಿದ್ದರು.

ಶ್ರೀ ಅಭಿನವ ವಿದ್ಯಾತೀರ್ಥರಿಗೆ ತಮ್ಮ ಗುರುದೇವರ ನಿರ್ಯಾಣವನ್ನು ಊಹಿಸಿಕೊಳ್ಳುವುದೂ ದುಸ್ತರವಾಯಿತು. ಎತ್ತ ನೋಡಿದರೂ ಅವರಿಗೆ ಆ ವಾತ್ಸಲ್ಯಮಯರಾದ ದಿವ್ಯ ಮೂರ್ತಿಯೇ ದೃಗ್ಗೋಚರವಾಗುತ್ತಿದ್ದರು. ಅವರ ಕೃಪೆ, ಕರುಣೆ, ಅನುಗ್ರಹಗಳನ್ನು ಸ್ಮರಿಸಿಕೊಂಡಂತೆಲ್ಲಾ ವಿದ್ಯಾತೀರ್ಥರ ದುಃಖ ಹೆಚ್ಚಾಯಿತು. ಅವರ ದುಃಖಕ್ಕೆ ಪಾರವೇ ಇರಲಿಲ್ಲ. ಅದು ಇತರರಿಂದ ಸಮಾಧಾನ ಹೊಂದುವಂತಹದೂ ಆಗಿರಲಿಲ್ಲ. ಗುರುಗಳು ದುಃಖದಿಂದ ಕುಂದಿದ್ದರೂ ಮುಂದಿನ ಕಾರ್ಯಗಳತ್ತ ಗಮನವನ್ನು ಕೊಡಬೇಕಾಗಿತ್ತು.

ಶ್ರೀ ಗುರುದೇವರ ನಿರ್ಯಾಣದ ವಾರ್ತೆಯನ್ನು ಎಲ್ಲ ಕಡೆಗಳಿಗೂ ತಂತಿ ಮೂಲಕ ತಿಳಿಸಲು ಶ್ರೀ ಶ್ರೀಗಳವರು ಆಜ್ಞೆ ಮಾಡಿದರು. ಸುದ್ದಿ ತಲುಪಿದ ತಕ್ಷಣವೇ ಹರಿಹರಪುರ ಮಠದ ಸ್ವಯಂಪ್ರಕಾಶ ರಾಮಾನಂದ ಸರಸ್ವತೀ ಸ್ವಾಮಿಗಳು ಶೃಂಗೇರಿಗೆ ಧಾವಿಸಿದರು. ಹಲವಾರು ಜನ ಯತಿಗಳೂ, ಸಾಧು ಸಂತರೂ ಆಗಮಿಸಿದರು. ಶೃಂಗೇರಿಯ ಪ್ರಜೆಗಳೆಲ್ಲಾ ಮನೆಮಾರನ್ನು ಬಿಟ್ಟು ನರಸಿಂಹ ವನಕ್ಕೆ ಓಡಿ ಬಂದರು. ಸುತ್ತಮುತ್ತಲಿನ ಗ್ರಾಮಗಳಿಂದ ಊರುಗಳಿಂದ ಜನ ಪ್ರವಾಹದಂತೆ ಧಾವಿಸಿದರು ಮಹಾಪುರುಷನ ಪಾರ್ಥಿವ ಶರೀರವನ್ನು ದರ್ಶನ ಮಾಡಲು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಠದ ಸಂಪ್ರದಾಯದಂತೆ ಶ್ರೀ ಗುರುದೇವರ ಪವಿತ್ರ ಶರೀರಕ್ಕೆ ನಡೆಯಬೇಕಾದ ವೇದೋಕ್ತ ಸಂಸ್ಕಾರಗಳೆಲ್ಲವೂ ಯಥಾವಿಧಿಯಾಗಿ ನಡೆದವು. ಪೀಠಾಧಿಪತ್ಯವನ್ನು ಶ್ರೀ ವಿದ್ಯಾತೀರ್ಥರಿಗೆ ಒಪ್ಪಿಸಿದ ಅನಂತರ ಶ್ರೀ ಚಂದ್ರಶೇಖರ ಭಾರತೀಯವರು ಸರ್ವ ಗೌರವಗಳು, ಮರ್ಯಾದೆಗಳು, ಲಾಂಛನಗಳನ್ನು ವರ್ಜಿಸಿದ್ದರಷ್ಟೆ. ಇಂದು ಆ ಎಲ್ಲವನ್ನೂ ಶ್ರೀ ಗುರುದೇವರಿಗೆ ಒಪ್ಪಿಸಬೇಕೆಂದು ಶ್ರೀ ವಿದ್ಯಾತೀರ್ಥರು ಅಪೇಕ್ಷಿಸಿದ್ದರು. ಅವರ ಅಪ್ಪಣೆಯಂತೆ ಶ್ರೀ ಚಂದ್ರಶೇಖರಭಾರತೀ ಶ್ರೀ ಚರಣರ ಪವಿತ್ರ ಶರೀರಕ್ಕೆ ಕಿರೀಟಧಾರಣೆ ಮಾಡಿಸಿ ಎಲ್ಲ ಮರ್ಯಾದೆಗಳೊಡನೆ ಸ್ವರ್ಣಪಾಲಕಿಯಲ್ಲಿ ಅದನ್ನು ಮಂಡಿಸಿ ವೇದಘೋಷ, ಮಂಗಳ ವಾದ್ಯ, ಭಜನೆ, ಜಯಘೋಷಗಳೊಡನೆ ಶೃಂಗೇರಿ ಅಗ್ರಹಾರದಲ್ಲಿ ಉತ್ಸವದಲ್ಲಿ ಬಿಜಯ ಮಾಡಿಸಿದರು. ಸಹಸ್ರ ಸಹಸ್ರ ಜನ ಭಕ್ತರಿಗೆ ಶ್ರೀ ಗುರುದೇವರ ದರ್ಶನವನ್ನು ಮಾಡಿಸಿದರು.

ಅನಂತರ ಶ್ರೀ ಗುರುದೇವರ ಪವಿತ್ರ ಶರೀರವನ್ನು ಅವರಿಗೆ ಅತ್ಯಂತ ಪ್ರಿಯರಾಗಿದ್ದ ಶ್ರೀ ಶ್ರೀ ಶಿವಾಭಿನವ ಸಚ್ಚಿದಾನಂದ ನರಸಿಂಹಭಾರತೀ ಪೂಜ್ಯಪಾದರ ಅಧಿಷ್ಠಾನದ ವಾಮಪಾರ್ಶ್ವದಲ್ಲಿಯೇ ವೇದಘೋಷ, ಮಂಗಳ ವಾದ್ಯಗಳ ನಿನಾದದೊಡನೆ, ಭಕ್ತಿ ಶ್ರದ್ಧೆಯಿಂದ ಸಮಾಧಿಮಾಡಲಾಯಿತು.

ಆ ದಿನ ಎಲ್ಲ ಕಾರ್ಯಗಳೂ ಮುಗಿದಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಶ್ರೀ ವಿದ್ಯಾತೀರ್ಥರು ಭಾರವಾದ ಮನಸ್ಸಿನಿಂದ ತಮ್ಮ ಬಿಡಾರಕ್ಕೆ ತೆರಳಿದರು. ಎಲ್ಲೆಲ್ಲಿ ಹೋದರೂ ಅವರಿಗೆ ತಮ್ಮ ಗುರುದೇವರ ಸಾನ್ನಿಧ್ಯಕಾಣದೆ, ದುಃಖ ಉಕ್ಕುತ್ತಿತ್ತು. ಉಪನಿಷತ್ತಿನ ಅನೇಕ ಮಂತ್ರಗಳನ್ನು ಪಠಿಸಿಕೊಳ್ಳುತ್ತ, ಭಗವದ್ಗೀತೆಯ ಅನೇಕ ಶ್ಲೋಕಗಳನ್ನು ನೆನೆಯುತ್ತ, ತಮ್ಮ ಗುರುದೇವರ ಪಾಂಚಭೌತಿಕ ಶರೀರವು ಕಣ್ಮರೆಯಾದರೂ, ಅವರ ಆತ್ಮ ವಿಶ್ವವ್ಯಾಪಿಯಾಗಿರುವುದೆಂಬುದನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತ, ಅವರ ವೈಶಾಲ್ಯ, ವಾತ್ಸಲ್ಯ, ಅನುಗ್ರಹ ಶಕ್ತಿ ಇವುಗಳನ್ನು ನೆನೆಯುತ್ತ ಗುರುವರ್ಯರ ಧ್ಯಾನದಲ್ಲಿಯೇ ಮಗ್ನರಾದರು.

ಮಾರನೆಯ ಉಷಃಕಾಲದಲ್ಲಿಯೇ ಆರಾಧನಾಂಗವಾದ ಮುಂದಿನ ಕಾರ್ಯಗಳು ಆರಂಭವಾಗಬೇಕಾಗಿದ್ದವು. ಮಠದ ಪುರೋಹಿತರಾಗಿದ್ದ ಬ್ರಹ್ಮ ಶ್ರೀ ವೆಂಕಟಸುಬ್ಬಾವಧಾನಿಯವರು ಹಿಂದಿನ ದಿನ ಪ್ರಾತಃಕಾಲ ಐದುಗಂಟೆಯಿಂದ ರಾತ್ರಿ ಹತ್ತರವರೆಗೂ ಮಠದಲ್ಲಿಯೇ ಇದ್ದು, ಯತಿ ಸಂಸ್ಕರಣ ಕಾರ್ಯಗಳಲ್ಲಿ ಪಾಲ್ಗೊಂಡಿದ್ದರು. ವೃದ್ಧರಾಗಿದ್ದ ಅವಧಾನಿಗಳಿಗೆ ಗುರುದೇವರಲ್ಲಿ ಅಪಾರವಾದ ಭಕ್ತಿ, ವಾತ್ಸಲ್ಯಮಯವಾದ ಗೌರವ. ರಾತ್ರಿ ಮನೆಗೆ ಬಂದ ಅವಧಾನಿಗಳಿಗೆ ಮನಸ್ಸು ಶೂನ್ಯವಾಗಿತ್ತು. ಮನೆಗೆ ಬಂದವರೇ ಗುರುದೇವರ ನಿರ್ಯಾಣವನ್ನು ನೆನೆನೆನೆದು ದುಃಖಿಸಿದರು. ಮೊದಲೇ ರಕ್ತದ ಒತ್ತಡದಿಂದ ನರಳುತ್ತಿದ್ದ ಅವಧಾನಿಗಳು, ಗುರುಗಳ ನಿರ್ಯಾಣದಿಂದ ಸಿಡಿಲು ಬಡಿದಂತಾಗಿ ದುಃಖದ ಕಟ್ಟೆಯೊಡೆದು ಭಾವೋದ್ರೇಕಗೊಂಡರು. ರಕ್ತದ ಒತ್ತಡ ಹೆಚ್ಚಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಿತು. ಅವರ ಸ್ಥಿತಿ ಇದ್ದಕ್ಕಿದ್ದಂತೆಯೇ ಬದಲಾಯಿತು. ರಾತ್ರಿಯೆಲ್ಲಾ ನಿದ್ರೆಯಿಲ್ಲ. ಮಾರನೆಯ ಬೆಳಿಗ್ಗೆ ಹಾಸಿಗೆಯಿಂದ ಏಳಲು ಆಗಲೇ ಇಲ್ಲ. ತೀವ್ರವಾದ ಸಂಕಟ, ಸುಸ್ತು, ತಲೆ ತಿರುಗು !

ಪುರೋಹಿತರನ್ನು ನಿರೀಕ್ಷಿಸುತ್ತ ಮುಂದಿನ ಕಾರ್ಯಗಳ ವ್ಯವಸ್ಥೆಗೆ ಸೂಚನೆ ಕೊಡುತ್ತಿದ್ದ ಶ್ರೀ ಶ್ರೀಗಳವರ ದರ್ಶನಕ್ಕೆ ಪುರೋಹಿತರ ಪುತ್ರ ಗಣಪತಿ ಸುಬ್ರಹ್ಮಣ್ಯ ಅವಧಾನಿ ಬಂದರು. ಆರಾಧನೆಯ ಎರಡನೆಯ ದಿನದ ಕಾರ್ಯವು ಆರಂಭವಾಗ ಬೇಕಾಗಿದ್ದು, ಪುರೋಹಿತರು ಬರದೆ ಅವರ ಮಗನು ಬಂದುದನ್ನು ಕಂಡ ಶ್ರೀ ಗುರುಗಳು, "ಏನಪ್ಪಾ, ಗಣಪತಿ ನಿಮ್ಮ ತಂದೆಯವರೇಕೆ ಇನ್ನೂ ಬರಲಿಲ್ಲ ?" ಎಂದು ಪ್ರಶ್ನಿಸಿದರು. ಖಿನ್ನರಾಗಿದ್ದ ಮಗ ಪೆಚ್ಚು ಮುಖದಲ್ಲಿ "ನೆನ್ನೆ ರಾತ್ರಿಯಿಂದ ತಂದೆಯವರ ಆರೋಗ್ಯ ತೀರಾ ಕೆಟ್ಟಿದೆ. ಸ್ಥಿತಿ ತೀರಾ ಚಿಂತಾಜನಕವಾಗಿದ್ದು, ಕಳವಳವನ್ನು ಉಂಟುಮಾಡು ತ್ತಿದೆ. ಅವರು ಮೇಲಕ್ಕೇಳಲಾರರೇನೋ, ನಮ್ಮ ಕೈಬಿಟ್ಟು ಹೋಗುತ್ತಾರೇನೋ ಎಂದು ಭಯವಾಗಿದೆ" ಎಂದು ಕಣ್ಣೀರ್ದುಂಬಿ ಹೇಳಿದರು.

ಈ ಮಾತನ್ನು ಕೇಳಿದ ಗುರುಗಳಿಗೆ ಆಶ್ಚರಿಯಾಯಿತು. ಹಿಂದಣ ದಿನ ಅಷ್ಟೆಲ್ಲಾ ಕೆಲಸಬೊಗಸೆಗಳನ್ನು ನಿರ್ವಹಿಸಿದ್ದ ಅವಧಾನಿಗಳ ಸ್ಥಿತಿ, ಈಗ ಇಷ್ಟೊಂದು ಅಪಾಯ ಕರವಾಗಿದೆ ಎಂದರೆ, ಎಂತಹ ವಿಧಿ ವಿಪರ್ಯಾಸ ಎನ್ನಿಸಿತು. ಒಂದು ಕ್ಷಣ ಮೌನ ವಾಗಿದ್ದ ಗುರುಗಳು, ಅನಂತರ ತಮ್ಮ ಗುರುದೇವರ ಸಮಾಧಿಯ ಪವಿತ್ರಸ್ಥಳಕ್ಕೆ ಬಂದರು. ಒಂದು ಚಿಟಿಕೆಯಷ್ಟು ಸಮಾಧಿಯ ಮೃತ್ತಿಕೆಯನ್ನು ತೆಗೆದು "ಇದೋ ಮೃತ್ತಿಕೆಯನ್ನು ತೀರ್ಥದಲ್ಲಿ ಬೆರಸಿ, ನಿಮ್ಮ ತಂದೆಯವರಿಗೆ ಪಾನಮಾಡಿಸು. ಅವರು ಆರೋಗ್ಯ ಹೊಂದು ತ್ತಾರೆ. ಅನಂತರ ಅವರನ್ನು ಕೇಳಿ, ಅವರು ಹೇಳಿದಂತೆ ಮುಂದಿನ ಕಾರ್ಯಗಳನ್ನು ನಡೆಸೋಣ" ಎಂದು ನುಡಿದು ಮೃತ್ತಿಕೆಯನ್ನು ಗಣಪತಿಯವರಿಗೆ ಅನುಗ್ರಹಿಸಿದರು. ಗಣಪತಿ ಶ್ರೀ ಗುರುಗಳ ಅಪ್ಪಣೆಯಂತೆಯೇ ಶ್ರೀ ಚಂದ್ರಶೇಖರಭಾರತೀಯವರ ಸಮಾಧಿಯ ಮೃತ್ತಿಕೆಯನ್ನು ತೀರ್ಥದಲ್ಲಿ ಬೆರಸಿ ತಂದೆಯವರಿಗೆ ತೀರ್ಥಪ್ರಾಶನ ಮಾಡಿ ಸಿದರು. ಸ್ವಲ್ಪಹೊತ್ತಿಗೆಲ್ಲಾ ಅವಧಾನಿಗಳ ಆರೋಗ್ಯ ಸುಧಾರಿಸಿತು. ಅವರ ನಿರ್ದೇಶನ ದಂತೆಯೇ ಆರಾಧನೆಯ ಮುಂದಿನ ಕಾರ್ಯಗಳೆಲ್ಲವೂ ಯಥಾವಿಧಿಯಾಗಿ ನಡೆದು ಸಾಂಗವಾದವು.

೧೫. ಧರ್ಮಯಾತ್ರೆಗಾಗಿ ಶಿಷ್ಯರ ಕೋರಿಕೆ

ಆಶ್ವಯುಜಮಾಸದ ವಿಜೃಂಭಣೆಯ ನವರಾತ್ರಿ ಉತ್ಸವವನ್ನು ಕಾಣಲು ಆಶಿಸಿದ್ದ ಭಕ್ತವೃಂದಕ್ಕೆ ಶೃಂಗೇರಿಯಲ್ಲಿ ಅನಿರೀಕ್ಷಿತವಾಗಿ ಭಿನ್ನ ದೃಶ್ಯದ ದರ್ಶನವಾಯಿತು. ಶ್ರೀ ಶಾರದಾದೇವಿಯ ಸನ್ನಿಧಿಯಲ್ಲಿ ಎಂದಿನಂತೆ ನಿತ್ಯ ಪೂಜೆಗಳು ನಡೆದರೂ, ಜಗದ್ಗುರು ಗಳವರ ನಿರ್ಯಾಣದಿಂದ ಒಂದು ವಿಧವಾದ ಖಿನ್ನತೆ, ನೈರಾಶ್ಯ, ಅನಿರ್ವಚನೀಯವಾದ ದುಃಖ ಇವುಗಳ ವಾತಾವರಣ ಸುತ್ತೆಲ್ಲವೂ ಪಸರಿಸಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಚಂದ್ರಶೇಖರಭಾರತೀ ಶ್ರೀ ಚರಣರ ಆರಾಧನಾದಿ ಕಾರ್ಯಗಳೆಲ್ಲವೂ ಶಾಸ್ತ್ರೋಕ್ತ ರೀತಿಯಲ್ಲಿ ಶ್ರೀ ವಿದ್ಯಾತೀರ್ಥರವರಿಂದ ನಡೆಸಲ್ಪಟ್ಟವು. ಪ್ರತಿನಿತ್ಯವೂ ಶ್ರೀ ಗುರುದೇವರ ಪವಿತ್ರ ಪಾದುಕೆಗಳಿಗೆ ಅಭಿಷೇಕ, ಪೂಜೆಗಳನ್ನು ಶ್ರೀ ವಿದ್ಯಾತೀರ್ಥ ಸ್ವಾಮಿಗಳವರು ನೆರವೇರಿಸುತ್ತಿದ್ದರು. ಶ್ರೀ [redacted]ದೇವರ ಸಮಾಧ್ಯಧಿಷ್ಠಾನದಲ್ಲಿಯೂ ಪೂಜಾಭಿಷೇಕಗಳು ನಡೆಯುತ್ತಿದ್ದವು. ಅಸಂಖ್ಯಾತ ಭಕ್ತವೃಂದಕ್ಕೆ ಶ್ರೀ ಶ್ರೀಗಳವರು ತೀರ್ಥ ಪ್ರಸಾದಗಳನ್ನು ವಿನಿಯೋಗಿಸುತ್ತಿದ್ದರು. ಮಠದಲ್ಲಿ ಬಂದಿದ್ದ ಭಕ್ತರೆಲ್ಲರಿಗೂ ನಿತ್ಯವೂ ಪ್ರಸಾದ ವಿನಿಯೋಗದ ಸುವ್ಯವಸ್ಥೆಯೂ ಇದ್ದಿತು. ಭಕ್ತಜನವು ಶ್ರೀ ಶಾರದಾ ದೇವಿಯ ದರ್ಶನವನ್ನೂ ನಿರ್ಯಾಣ ಹೊಂದಿದ್ದ ಶ್ರೀ ಚಂದ್ರಶೇಖರಭಾರತೀಯವರನ್ನು ಅವರ ಪ್ರತಿನಿಧಿಯಾಗಿದ್ದ ಶ್ರೀ ಶ್ರೀ ಅಭಿನವವಿದ್ಯಾತೀರ್ಥರಲ್ಲಿಯೇ ದರ್ಶನಮಾಡಿದರು.

ಶ್ರೀ ಚಂದ್ರಶೇಖರಭಾರತೀಯವರ ಆರಾಧನಾದಿ ಕಾರ್ಯಗಳೂ, ನವರಾತ್ರಿ ಉತ್ಸವವೂ ಸಮಾಪ್ತಿಗೊಂಡ ನಂತರ ಹಿಂದಿನ ಪದ್ಧತಿಯಂತೆ ಶ್ರೀ ಅಭಿನವವಿದ್ಯಾತೀರ್ಥರ ಪಟ್ಟಾಭಿಷೇಕ ಮಹೋತ್ಸವವು ನೆರವೇರಿತು. ಶ್ರೀ ಶಂಕರಭಗವತ್ಪಾದರಿಂದ ಸ್ಥಾಪಿತ ವಾದ ಶೃಂಗಗಿರಿ ದಕ್ಷಿಣಾಮ್ನಾಯ ಪೀಠದ ವ್ಯಾಖ್ಯಾನ ಸಿಂಹಾಸನದಲ್ಲಿ, ಜಗದ್ಗುರು ಶ್ರೀ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರ ಕರಕಮಲ ಸಂಜಾತರಾದ, ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರು, ಜಯ ಸಂವತ್ಸರದ ಆಶ್ವಯುಜ ಬಹುಳ ದಶಮಿಯಂದು ಪಟ್ಟಾಭಿಷಿಕ್ತರಾಗಿ ಮಠದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸೂತ್ರಗಳನ್ನು ವಹಿಸಿಕೊಂಡರು.

ಅಂದಿನಿಂದ ತಮ್ಮ ಗುರುದೇವರು ನಡೆಸುತ್ತಿದ್ದಂತೆಯೇ ಪ್ರತಿಯೊಂದು ಕೆಲಸ ವನ್ನೂ ಅದೇ ಕ್ರಮದಲ್ಲಿ ನಿರ್ವಹಿಸಲಾರಂಭಿದರು. ಪ್ರಾತಃಸ್ನಾನಾಹ್ನಿಕ ಜಪಾನು-ಷ್ಠಾನಗಳ ನಂತರ ಶ್ರೀ ಗುರುಪಾದುಕೆಗಳಿಗೆ ವಂದನೆ ಸಲ್ಲಿಸುವುದು, ಶ್ರೀ ಚಂದ್ರಮೌಳೀ ಶ್ವರ ಪೂಜೆಯನ್ನು ನೆರವೇರಿಸುವುದು, ಶ್ರೀ ಗುರುಸಮಾಧಿಯಲ್ಲಿ ಅರ್ಚನಮಾಡುವುದು, ಪ್ರವಾಹದೋಪಾದಿಯಲ್ಲಿ ಬರುವ ಭಕ್ತವೃಂದಕ್ಕೆ ತೀರ್ಥಪ್ರಸಾದ ವಿನಿಯೋಗ ಮಾಡು ವುದೇ ಮುಂತಾದ ಕಾರ್ಯಗಳು ಎಂದಿನಂತೆ ಸಾಗುತ್ತಿದ್ದವು. ದರ್ಶನಕ್ಕೆ ಬರುತ್ತಿದ್ದ ಭಕ್ತರೊಡನೆ ಸಂಭಾಷಣೆ, ಅವರ ಕಷ್ಟದುಃಖಗಳಲ್ಲಿ ಸಾಂತ್ವನ, ಸಮಾಧಾನ, ಆಧ್ಯಾತ್ಮಿಕ ಸಾಧನೆ ಮಾಡುವವರಿಗೆ ಸೂಕ್ತ[redacted]ನ ಇವೂ ಎಂದಿನಂತೆ ನಡೆಯುತ್ತಿದ್ದವು.

ಮುಕ್ತರಾಗಿದ್ದ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರಲ್ಲಿ ಶ್ರೀ ವಿದ್ಯಾತೀರ್ಥ ರಿಗೆ ಅತ್ಯಂತ ಗಾಢವಾದ ಭಕ್ತಿ. ಶ್ರೀ ಗುರುದೇವರ ಸಮಾಧಿ ಮಂದಿರವನ್ನು ಶ್ರೀ ಸಚ್ಚಿದಾನಂದಶಿವಾಭಿನವನರಸಿಂಹಭಾರತೀ ಸ್ವಾಮಿಗಳವರ ಸಮಾಧಿ ಮಂದಿರದಂತೆಯೇ ನಿರ್ಮಿಸಬೇಕೆಂದು ಶ್ರೀ ಶ್ರೀಗಳವರ ಅಪೇಕ್ಷೆಯಾಗಿತ್ತು. ದಕ್ಷಿಣಭಾರತದಿಂದ ಯೋಗ್ಯ ರಾದ ಶಿಲ್ಪಿಗಳನ್ನು ಕರೆಸಿ, ಆಲಯದ ನಿರ್ಮಾಣವನ್ನು ಚೆನ್ನಾಗಿ ಅಚ್ಚುಕಟ್ಟಾಗಿ ಭಕ್ತಿ ಶ್ರದ್ಧೆಯಿಂದ ನಿರ್ವಹಿಸುವಂತೆ ಅವರಿಗೆ ಅಪ್ಪಣೆಯಿತ್ತರು. ಶೃಂಗೇರಿಗೆ ಬರುತ್ತಿದ್ದ

Sri Vidyabharathi Book Centre, Sringeri

 CC-O. In Public Domain. Digitized by eGangotri

ಯಾತ್ರಾರ್ಥಿಗಳ ಸಂಖ್ಯೆ ಅಧಿಕವಾಗಿದ್ದು, ಅವರಿಗೆ ಉಳಿದುಕೊಳ್ಳಲು ಸ್ಥಳಸೌಕರ್ಯ ಅತ್ಯಲ್ಪವಾಗಿತ್ತು. ಇದನ್ನು ಯೋಚಿಸಿದ ಶ್ರೀ ಶ್ರೀಗಳವರು ಯಾತ್ರಾರ್ಥಿಗಳಿಗಾಗಿ ಮಠದ ಆವರಣದಲ್ಲಿಯೇ ಒಂದು ವಿಶಾಲವಾದ ಅತಿಥಿಮಂದಿರವನ್ನು ನಿರ್ಮಿಸಲು ಸಂಕಲ್ಪಿಸಿದರು. ಶ್ರೀ ಶಾರದಾ ದೇವಾಲಯದ ಮೇಲ್ಛಾವಣಿಯು ಶಿಥಿಲವಾಗಿದ್ದುದನ್ನು ಗಮನಿಸಿದ್ದ ಶ್ರೀ ಶ್ರೀಗಳವರು ಅದನ್ನು ದುರಸ್ತಿಗೊಳಿಸಿ, ಅದರಮೇಲೆ ಮಾಳಿಗೆಯೊಂದನ್ನು ನಿರ್ಮಿಸುವ ಸಂಕಲ್ಪವನ್ನೂ ಕೈಗೊಂಡರು. ಈ ಕೆಲಸ ಕಾರ್ಯಗಳನ್ನು ಅರ್ಹರಾದ ಜನರಿಗೆ ವಹಿಸಿದ ಗುರುಗಳು, ತಮ್ಮ ಗುರುದೇವರಂತೆಯೇ ಭಕ್ತರ ಯೋಗಕ್ಷೇಮದ ಕಡೆಗೂ ಗಮನವಿತ್ತರು.

ಶ್ರೀ ಶ್ರೀಗಳವರ ದರ್ಶನಕ್ಕಾಗಿ ಬರುವ ಭಕ್ತರು ನಾನಾವಿಧ ಕಷ್ಟನಷ್ಟಗಳನ್ನು ಹೇಳಿ ಅವುಗಳಿಗೆ ಪರಿಹಾರವನ್ನು ಅಪೇಕ್ಷಿಸುವವರು, ರೋಗರುಜಿನಗಳಿಂದ ತೊಂದರೆಗೀಡಾಗಿ ಪರಿತಾಪ ಪಡುತ್ತಿರುವವರು, ಭೂತ, ಪಿಶಾಚಿ ಬಾಧೆಗಳಿಂದ ನರಳುತ್ತಿರುವವರು, ದಾರಿದ್ರ್ಯ ದುಃಖಗಳಿಂದ ಬವಣೆಪಡುತ್ತಿರುವವರು, ಒಂದೇ ಎರಡೇ ನಾನಾವಿಧವಾದ ಪರಿಸ್ಥಿತಿಯಲ್ಲಿ ಸಿಲುಕಿದ್ದ ಜನ ಗುರುಗಳವರ ದರ್ಶನಕ್ಕೆ, ಅವರಿಂದ ಸಾಂತ್ವನ ಪಡೆಯುವುದಕ್ಕೆ ಬರುತ್ತಿದ್ದರು. ಸಮಾಜದ ವಿವಿಧ ವರ್ಗಗಳ ಜನದ ನಾನಾರೀತಿಯ ತೊಂದರೆಗಳಿಂದ ತೊಳಲಾಡುತ್ತಿದ್ದವರಲ್ಲಿ ಗುರುಗಳಿಗೆ ಅಪಾರ ಅನುಕಂಪ ಮತ್ತು ಕರುಣೆಗಳು ಇದ್ದವು.

ಶೃಂಗೇರಿಯ ಮಠದ ಸ್ಥಾಪನೆಯ ಮೂಲ ಉದ್ದೇಶ ಧರ್ಮರಕ್ಷಣೆ ಮತ್ತು ಆಧ್ಯಾತ್ಮಿಕ ಜ್ಞಾನಪ್ರಸಾರವಾದರೂ, ಜನಸಾಮಾನ್ಯರು ಗುರುವೆಂದರೆ ತಮ್ಮ ಎಲ್ಲ ರೀತಿಯ ಸಮಸ್ಯೆಗಳಿಗೂ ಪರಿಹಾರ ನೀಡುವ ತಾಯಿಯಿದ್ದಂತೆ ಎಂದು ನಂಬಿ ಗುರು ಮತ್ತು ಸಾಧು ಸತ್ಪುರುಷರ ಬಳಿಗೆ ಬರುತ್ತಾರಲ್ಲವೆ? ಅವರವರ ವೈಯುಕ್ತಿಕ ಕಷ್ಟದುಃಖಗಳು ಪರಿಹಾರವಾದಾಗ ಜನ ಧರ್ಮದತ್ತ, ದೇವರತ್ತ ಗಮನ ಕೊಡಬಲ್ಲರು; ಆಧ್ಯಾತ್ಮಿಕ ವಿಚಾರಗಳತ್ತ ಗಮನ ಕೊಡಬಲ್ಲರು. ಇದನ್ನರಿತಿದ್ದ ಶೃಂಗೇರಿಯ ಆಚಾರ್ಯರೆಲ್ಲರೂ ಜನಗಳ ಕಷ್ಟದುಃಖ ಪರಿಹಾರಕ್ಕೆ ಗಮನ ಕೊಡುತ್ತಿದ್ದರು. ಶ್ರೀ ವಿದ್ಯಾತೀರ್ಥರೂ ಸಹ ಪ್ರತಿಯೊಬ್ಬರಿಗೂ ಅವರವರ ಅಧಿಕಾರ ಭೇದಕ್ಕೆ ತಕ್ಕಂತೆ ಪರಿಹಾರ ಸೂಚಿಸಿ ಸಹಾನುಭೂತಿಯ ಮಾತುಗಳನ್ನು ಹೇಳಿ ಸಮಾಧಾನಗೊಳಿಸುತ್ತಿದ್ದರು. ಬಹು ಜನಕ್ಕೆ ಪ್ರಸಾದ, ರಕ್ಷೆ, ಯಂತ್ರಗಳನ್ನು ಅನುಗ್ರಹಿಸುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಅವುಗಳನ್ನು ತಮ್ಮ ಗುರುದೇವರ ಸಮಾಧಿಯಲ್ಲಿ ಅರ್ಪಿಸಿ, ಅನಂತರ ನೊಂದವರಿಗೆ ಕೊಡುತ್ತಿದ್ದರು.

ಶೃಂಗೇರಿಯ ಪೀಠಾಧಿಪರಿಗೆ ಜಗದ್ಗುರು ಎಂಬ ಬಿರುದಿದೆಯಲ್ಲವೆ? ಇದು ಶ್ರೀ ಶಂಕರಾಚಾರ್ಯರ ಕಾಲದಿಂದ ಬಂದ ಬಿರುದು; ಕೇವಲ ಗೌರವ ಸೂಚಿಸುವುದಕ್ಕಾಗಿ ಇತರರು ಕೊಟ್ಟ ಬಿರುದಲ್ಲ. ಅಥವಾ ಅವರೇ ತಮಗೆ ತಾವೇ ಇಟ್ಟುಕೊಂಡ ಬಿರುದಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನ್ಯಮತಗಳ ಧಾಳಿ, ಅಥವಾ ವೈದಿಕ ಧರ್ಮದ ಒಳಪ್ರಭೇದಗಳಲ್ಲಿ ಉಂಟಾದ ಘರ್ಷಣೆ, ಜಾತಿ ಮತ ಕಲಹ, ಪರಸ್ಪರ ದ್ವೇಷಾಸೂಯೆ ಇವುಗಳಿಂದ ಧರ್ಮಕ್ಕೆ ಕಂಟಕ ಬಂದಾಗ ಜನಜೀವನವು ಬಿಕ್ಕಟ್ಟಿನಲ್ಲಿ ಸಿಕ್ಕಿಬಿದ್ದಾಗ, ಇಂದ್ರಿಯಗೋಚರವಾದ ಈ ಪ್ರಪಂಚವು ಒಂದು ತೋರಿಕೆ ಎಂದು ನಂಬಿರುವ ಈ ಅದ್ವೈತ ಪೀಠಾಧಿಪರು ಧರ್ಮದ ಉತ್ಥಾನಕ್ಕೂ, ರಕ್ಷಣೆಗೂ ನಡೆಸಿದಂತಹ ಮಹತ್ಕಾರ್ಯಗಳು ಇವರಿಗೆ ಜಗದ್ಗುರು ಎಂಬ ಅನ್ವರ್ಥವಾದ ಹೆಸರನ್ನು ತಂದಿದ್ದುವು. ತಮ್ಮಲ್ಲಿ ಬಂದವರ ಮನಃಪರಿಪಾಕ, ಸಂಸ್ಕಾರ ಗ್ರಹಣಶಕ್ತಿ, ಧಾರ್ಮಿಕ ಸಾಧನೆಯನ್ನು ನಡೆಸಲು ಅವರಿಗಿರುವ ಶಕ್ತಿ ಸಾಮರ್ಥ್ಯ ಮತ್ತು ಅವಕಾಶ ಸನ್ನಿವೇಶ, ಇವುಗಳನ್ನು ಗಮನಿಸಿ, ಅವರವರಿಗೆ ತಕ್ಕಂತಹ ಶ್ರೇಯೋಮಾರ್ಗವನ್ನು ಈ ಗುರುಗಳು ತೋರಿಸಿದ್ದುದರಿಂದಲೂ ಇವರಿಗೆ ಜಗದ್ಗುರು ಎಂಬ ಹೆಸರು ಬಂದಿತು. ಪ್ರಪಂಚದಲ್ಲಿರುವ ಯಾವ ಮತದ ವ್ಯಕ್ತಿಯೇ ಆಗಲಿ ತಮ್ಮಲ್ಲಿಗೆ ಬಂದಾಗ ಅವನಿಗೆ ತಕ್ಕಂತಹ ಸಾಧನ ಮಾರ್ಗವನ್ನು ತೋರುವುದು ಈ ಗುರುಗಳ ವೈಶಿಷ್ಟ್ಯ. ಈ ವೈಶಿಷ್ಟ್ಯವೇ ಇವರಿಗೆ ಭರತಖಂಡದಾದ್ಯಂತವೂ ಭರತಖಂಡದ ಹೊರಗೂ ಗೌರವ ಪೂಜ್ಯತೆಗಳನ್ನು ತಂದು ಕೊಟ್ಟಿರುವುದು. ಈ ಕಾರಣದಿಂದಲೇ ಶೃಂಗೇರಿಯ ಗುರುಗಳನ್ನು ದರ್ಶಿಸಲು ಜನ ಪ್ರವಾಹದೋಪಾದಿಯಲ್ಲಿ ಬರುವುದು.

ಹದಿನೆಂಟು-ಹತ್ತೊಂಭತ್ತನೆಯ ಶತಮಾನ ನಮ್ಮ ದೇಶದ ಇತಿಹಾಸದಲ್ಲಿ ಸಂಧಿಕಾಲ. ಸನಾತನ ವೈದಿಕ ಧರ್ಮಕ್ಕೆ ಆಗ ತೀವ್ರವಾದ ಆಘಾತ ಬಂದಿತ್ತು. ಕ್ರೈಸ್ತ ಮತ ಮತ್ತು ಪಾಶ್ಚಾತ್ಯ ನಾಗರೀಕತೆಯ ಧಾಳಿಯೊಂದು ಕಡೆ, ಇನ್ನೊಂದು ಕಡೆ ವಿಶಾಲವಾದ ವೈದಿಕ ಧರ್ಮವನ್ನು ಮೌಢ್ಯಾಚಾರಗಳಿಗೆ ಸೀಮಿತಗೊಳಿಸಿ, ಅಜ್ಞಾನವಶರಾಗಿ ಮೇಲು ಕೀಳು ಎಂಬ ಕೃತಕ ಭೇದಗಳಿಂದ ಅಂತಃಕಲಹಗಳಲ್ಲಿ ಮಗ್ನರಾಗಿ, ನೈತಿಕ ಪತನಕ್ಕೆ ಭಾರತೀಯರೇ ಕಾರಣರಾಗುತ್ತಿದ್ದ ಅಪಾಯ ಒಂದು ಕಡೆ ; ಹೀಗೆ ಭಾರತಕ್ಕೆ ಸನಾತನ ಧರ್ಮಕ್ಕೆ ಇಬ್ಬಗೆಯ ಕಾಟವಿತ್ತು, ಹಾನಿಯೊದಗಿತ್ತು. ಶೃಂಗೇರಿಯ ಆಚಾರ್ಯರು ತಮ್ಮ ಮೂಲಪುರುಷರಂತೆಯೇ ಧರ್ಮದ ರಕ್ಷಣೆಗಾಗಿ, ಸತ್ಯಧರ್ಮದ ಪ್ರಚಾರಕ್ಕಾಗಿ ಆಗಾಗ ಸಂಚಾರ ಕೈಗೊಳ್ಳುತ್ತಾ, ಜನಸಾಮಾನ್ಯರನ್ನು ತಮ್ಮ ಪೂಜೆ, ಅನುಷ್ಠಾನ, ಬೋಧನೆ, ಉಪದೇಶಗಳಿಂದ ಆಕರ್ಷಿಸುತ್ತಿದ್ದರು. ತತ್ವಜ್ಞಾನವನ್ನು ಉಪದೇಶಿಸುತ್ತಲೂ, ಆ ಉಪದಿಷ್ಟವಾದ ಜ್ಞಾನವನ್ನು ಅನುಷ್ಠಾನಕ್ಕೆ ತರಲು ಸಾಧಕವಾದ ಧಾರ್ಮಿಕ ಆಚಾರಗಳನ್ನು ತೋರಿಸಿಕೊಡುತ್ತಲೂ ಇದ್ದರು. ಮತವೈಷಮ್ಯಗಳನ್ನು ನಾಶಮಾಡಲು, ದ್ವೇಷಾಸೂಯೆಗಳನ್ನು ನಿವಾರಿಸಲು ಸಹಾಯವೆಸಗುತ್ತಿದ್ದರು. ವಿವಿಧ ಭಾಷೆಗಳನ್ನು ಆಡುವ, ವಿವಿಧ ಉದ್ಯೋಗಗಳಲ್ಲಿ ನಿರತರಾದ, ದೇಶದ ವಿವಿಧ ಭಾಗಗಳಲ್ಲಿ ವಾಸಮಾಡುತ್ತಿರುವ ಭಾರತೀಯರಲ್ಲಿ ತಮ್ಮ ಬೋಧನೆ, ಉಪದೇಶಗಳಿಂದ ಏಕತೆಯ ಭಾವನೆಯನ್ನು ಮೂಡಿಸುತ್ತಿದ್ದರು. ಆಸೇತು ಹಿಮಾಚಲ ಪರ್ಯಂತ ವ್ಯಾಪಿಸಿರುವ ಭರತಖಂಡದ ಸಾಂಸ್ಕೃತಿಕ, ಧಾರ್ಮಿಕ ಏಕತೆಯನ್ನು ಪದೇ ಪದೇ ಬೋಧಿಸುತ್ತಿದ್ದರು. ಈ ಉದ್ದೇಶಕ್ಕಾಗಿಯೇ ದೀರ್ಘವಾದ ಸಂಚಾರಗಳನ್ನೂ ಕೈಗೊಳ್ಳುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಚಂದ್ರಶೇಖರಭಾರತೀಯವರಿದ್ದಾಗಲೇ ಅವರು ಪ್ರವಾಸ ಕೈಗೊಳ್ಳಬೇಕೆಂದು ನಾನಾಕಡೆಗಳಿಂದ ಪದೇಪದೇ ಅನೇಕ ಕೋರಿಕೆಗಳು ಬರುತ್ತಲೇ ಇದ್ದವಷ್ಟೆ ? ಶ್ರೀವಿದ್ಯಾತೀರ್ಥರು ಪಟ್ಟಾಭಿಷಿಕ್ತರಾದ ನಂತರ ಇನ್ನೂ ಹೆಚ್ಚಿನ ಕೋರಿಕೆಗಳು ಬರಲಾರಂಭವಾದವು. ತಮ್ಮ ಗುರುದೇವರ ನಿರ್ಯಾಣಾನಂತರ ಒಂದು ಸಂವತ್ಸರ ಕಳೆಯುವವರೆಗೆ ತಪೋನುಷ್ಠಾನ ನಿರತರಾಗಿದ್ದ ಶ್ರೀ ವಿದ್ಯಾತೀರ್ಥರು, ಅನಂತರ ತಮ್ಮ ಗುರುದೇವರ ಅನುಜ್ಞೆಯನ್ನು ಪಡೆದು ತೀರ್ಥಯಾತ್ರೆಯನ್ನು ಕೈಗೊಳ್ಳುವ ಸಂಕಲ್ಪಮಾಡಿದರು. ಭರತಖಂಡದ ಧಾರ್ಮಿಕ ಸಾಂಸ್ಕೃತಿಕ ಏಕತೆಯನ್ನು ಪ್ರಸಾರಮಾಡುವುದು ಮತ್ತು ತೀರ್ಥಕ್ಷೇತ್ರಗಳಲ್ಲಿನ ಭಗವಂತನ ಲೀಲಾವಿಭವಗಳ ದರ್ಶನ ಮಾಡುವುದಕ್ಕೂ ಸಂಕಲ್ಪಗೈದರು.

೧೬. ಲೋಕಸಂಗ್ರಹಕ್ಕಾಗಿ ಪರಿವ್ರಾಜ್ಯ

ಶ್ರೀ ವಿದ್ಯಾತೀರ್ಥರವರ ತೀರ್ಥಯಾತ್ರಾ ಪರ್ಯಟನದ ಲಘು ಪರಿಚಯವನ್ನು ಮಾಡಿಕೊಳ್ಳುವ ಮುನ್ನ, ಅವರ ಹಿಂದಿನ ಆಚಾರ್ಯರುಗಳ ತೀರ್ಥಯಾತ್ರೆಗಳ ಸೂಕ್ಷ್ಮಾವಲೋಕನ ಮಾಡಿಕೊಳ್ಳುವುದು ಅಗತ್ಯ.

ನಾಸ್ತಿಕ ಭಾವನೆಗಳು ಬಲಿಯುತ್ತ ಬಂದು ನೈತಿಕ ಆಧ್ಯಾತ್ಮಿಕ ಮೌಲ್ಯಗಳ ವಿಷಯಗಳಲ್ಲಿ ಅನಾದರಣೆ, ಔದಾಸಿನ್ಯ, ತಿರಸ್ಕಾರ ಇವುಗಳು ಪ್ರಬಲಿಸಿದಾಗ ಲೋಕತಾರಕವಾದ ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸುವ ಅವಶ್ಯಕತೆಯನ್ನು ಶೃಂಗೇರಿ ಆಚಾರ್ಯರು ಕಂಡುಹಿಡಿದಿದ್ದರು. ಅದು ಶ್ರೀ ಶಂಕರಭಗವತ್ಪಾದರ ಅದ್ವೈತತತ್ವದಿಂದ ಮಾತ್ರ ಸಾಧ್ಯವೆಂಬುದನ್ನು ಮನಗಂಡಿದ್ದರು. ಈ ಆಚಾರ್ಯರೆಲ್ಲರೂ ಮಹಾ ಪರಿವ್ರಾಜಕರಾಗಿದ್ದು, ಇಡೀ ಭರತಖಂಡವನ್ನು ಸಂಚರಿಸಿ, ತಮ್ಮ ಶಿಷ್ಯವರ್ಗದವರೊಡನೆ ಭಕ್ತರೊಡನೆ ಶ್ರೇಷ್ಠ ಸಂಪರ್ಕ ಹೊಂದಿದ್ದರು. ಇವರಿಗೆ ದೇಶ ಭಾಷೆ ಮತ ಇವುಗಳ ಪರಿಮಿತ ದೃಷ್ಟಿಯಿರದೆ ವಿಶಾಲದೃಷ್ಟಿಯಿದ್ದು ವಿಶ್ವದ ಯಾವ ಭಾಗದಲ್ಲಿಯೇ ಇರಲಿ ಯಾವ ಭಾಷೆಯನ್ನೇ ಆಡಲಿ, ಯಾವ ಮತದವರೇ ಆಗಿರಲಿ, ಪ್ರತಿಯೊಬ್ಬ ವ್ಯಕ್ತಿಯೂ ಸನಾತನ ವೈದಿಕ ಧರ್ಮದ ಒಂದು ಅವಿಭಾಜ್ಯ ಅಂಗ ಎಂಬುದು ಇವರ ನಂಬಿಕೆ. ಕರ್ನಾಟಕ, ತಮಿಳುದೇಶ, ಆಂಧ್ರ, ಕೇರಳ, ಮಹಾರಾಷ್ಟ್ರ ಮುಂತಾದ ಪ್ರಾಂತಗಳಲ್ಲೆಲ್ಲಾ ಸಂಚರಿಸಿ ರಾಜಕೀಯ ಭಿನ್ನತೆಯಿದ್ದರೂ, ಅದನ್ನು ಅಡ್ಡಿಯೆಂದು ಪರಿಗಣಿಸದೆ, ಈ ಅನೈಕತೆಯಲ್ಲಿಯೂ, ಪ್ರತ್ಯೇಕತೆಯಲ್ಲಿಯೂ ಏಕತೆಯನ್ನು ಪ್ರಸಾರ ಮಾಡುತ್ತಿದ್ದರು ಮತ್ತು ಜನತೆಯ ನೈತಿಕ, ಧಾರ್ಮಿಕ ಜೀವನವು ಪರಿಶುದ್ಧವಾಗಲು ಕಾರಣರಾಗಿದ್ದರು. ವೈದಿಕ ಸಂಸ್ಕೃತಿಯನ್ನೂ, ಆ ಸಂಸ್ಕೃತಿಯ ಅಖಂಡತೆಯನ್ನೂ ಸಾರಿ, ವಿವಿಧಜನಗಳಲ್ಲಿ ಪರಸ್ಪರ ಸ್ನೇಹ ಸೌಹಾರ್ದ ಮೈತ್ರಿ ಐಕ್ಯಭಾವ ಇವು ಮೂಡಲು ಕಾರಣರಾದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಪರಿವರ್ತನ ಕಾಲದಲ್ಲಿ ಶೃಂಗೇರಿಯಲ್ಲಿ ಮೂವರು ಪರಿವ್ರಾಜಕರು ಧರ್ಮದ ಪ್ರಸಾರ ಮಾಡಿದ್ದರು. ಶ್ರೀ ವಿದ್ಯಾತೀರ್ಥಸ್ವಾಮಿಗಳವರ ಪರಿವ್ರಾಜ್ಯದ ಸಿಂಹಾವಲೋಕನ ಮಾಡುವ ಮುನ್ನ ಆ ಮೂವರು ಮಹಾತ್ಮರ ದೇಶಪರ್ಯಟನದ ಸೂಕ್ಷ್ಮ ಪರಿಚಯ ಆವಶ್ಯಕ.

ಸಂನ್ಯಾಸಕ್ಕೆ ಪೂರ್ವದಲ್ಲಯೇ ಕಾಶಿಯ ಯಾತ್ರೆಯನ್ನು ಮಾಡಿದ್ದ ಮಹಾ ಪರಿವ್ರಾಜಕರಾಗಿದ್ದ ಶ್ರೀ ವೃದ್ಧನರಸಿಂಹಭಾರತೀ ಸ್ವಾಮಿಗಳವರು (೧೮೧೮-೧೮೭೯) ನೃಸಿಂಹೋಪಾಸಕರಾಗಿದ್ದು, ಮಹಾ ಯೋಗಿಗಳೆಂದು ಪ್ರಸಿದ್ಧರಾಗಿದ್ದರು. ಕರ್ಣಾಟಕ, ಆಂಧ್ರ, ದ್ರಾವಿಡ, ಕೇರಳ ಮತ್ತು ಮಹರಾಷ್ಟ್ರ ಮತ್ತು ಮಧ್ಯಪ್ರದೇಶಗಳಲ್ಲಿ ವಿಶೇಷ ವಾಗಿ ಸಂಚರಿಸಿದ್ದ ಈ ಮಹಾತ್ಮರು ಸಂಸ್ಕೃತ, ಕನ್ನಡ, ತೆಲಗು, ತಮಿಳು, ಮರಾಠಿ, ಹಿಂದೂಸ್ಥಾನಿ ಭಾಷೆಗಳಲ್ಲಿ ಪರಿಣತರಾಗಿದ್ದು, ಜನಕ್ಕೆ ಧಾರ್ಮಿಕ ಬೋಧನೆ ಉಪದೇಶ ಗಳನ್ನು ಆಯಾ ಪ್ರಾಂತ್ಯಭಾಷೆಯಲ್ಲಿಯೇ ಕೊಡುತ್ತಿದ್ದರು. ಜನದ ನಿತ್ಯಜೀವನದಲ್ಲಿ ಬರುತ್ತಿದ್ದ ಕಷ್ಟ ನಷ್ಟ, ರೋಗ ರುಜಿನ, ಭಯದುಃಖಗಳನ್ನು ನಿವಾರಿಸಿ, ದೈವಭಕ್ತಿ ಯನ್ನೂ ಧರ್ಮಶ್ರದ್ಧೆಯನ್ನೂ ಮೂಡಿಸುತ್ತಿದ್ದರು. ಹಸಿವು ಮತ್ತು ನಿದ್ರೆ ಇವೆರಡನ್ನೂ ಗೆದ್ದಿದ್ದ ಈ ಮಹಾತ್ಮರು ಸದಾಕಾಲವೂ ಪೂಜೆ, ಧ್ಯಾನ, ಜಪತಪಗಳಲ್ಲಿಯೇ ನಿರತ ರಾಗಿರುತ್ತಿದ್ದು ೧೮೭೯ ರಲ್ಲಿ ವಿದೇಹ ಕೈವಲ್ಯ ಹೊಂದಿದ್ದರು. ಶಾಪಾನುಗ್ರಹಶಕ್ತ ರಾದ ಈ ಮಹಾತ್ಮರು ಜನದ ನೈತಿಕ ಜೀವನದ ಉನ್ನತಿಗೆ ತುಂಬಾ ಪ್ರಭಾವ ಬೀರಿದರು.

ಇವರ ನಂತರ ಶೃಂಗೇರಿಯ ಆಚಾರ್ಯ ಪೀಠಕ್ಕೆ ಬಂದವರು ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರು. (೧೮೭೯-೧೯೧೨) ಕೇವಲ ಬಾಲ್ಯ ದಲ್ಲಿಯೇ ವೈರಾಗ್ಯ ಪ್ರಭುವಾಗಿದ್ದ ಈ ಮಹಾನುಭಾವರು ತಮ್ಮ ಇಪ್ಪತ್ತನೇ ವಯಸ್ಸಿ ನಲ್ಲಿಯೇ ಪೂರ್ಣ ವಿರಕ್ತಿ ಹೊಂದಿ, ಅರಣ್ಯವಾಸಿಯಾಗುವ ಪ್ರಬಲೇಚ್ಛೆಯನ್ನು ಹೊಂದಿದ್ದರು. ರಾಜಯೋಗದಲ್ಲಿಯೂ ಹಠಯೋಗದಲ್ಲಿಯೂ ವಿಶೇಷ ಸಾಧನೆಯನ್ನು ನಡೆಸಿ ಸಿದ್ಧಿ ಪಡೆದಿದ್ದ ಈ ಗುರುಗಳು, ಜ್ಞಾನಮಾರ್ಗದ ಉಪಾಸಕರೂ ಆಗಿದ್ದು ಆಗಾಗ ಅಂತರ್ಮುಖರಾಗಿ ಸಮಾಧಿಸ್ಥರಾಗುತ್ತಿದ್ದರು.

ಭರತಖಂಡದ ಬಹುಭಾಗವನ್ನು, ವಿಶೇಷವಾಗಿ ದಕ್ಷಿಣಭಾರತವನ್ನು ಹಲವಾರು ಸಲ ಸಂಚರಿಸಿದ್ದ ಈ ಸ್ವಾಮಿಗಳವರು ಭಿನ್ನ ಭಿನ್ನ ಭಾಷೆಗಳನ್ನಾಡುವ ಜನರನ್ನು ಬೇರೆ ಬೇರೆ ಪ್ರಾಂತ್ಯದ ಜನರನ್ನು ಧರ್ಮದ ಸೂತ್ರದಿಂದಲೂ, ಸ್ನೇಹ ಸೌಹಾರ್ದ ಗಳಿಂದಲೂ ಒಂದುಗೂಡಿಸಿದ್ದರು. ಭಾರತೀಯರಲ್ಲಿದ್ದ ಜಡಸ್ವಭಾವ, ಅಪನಂಬಿಕೆ, ಪರಸ್ಪರ ಅಸೂಯೆ ಮುಂತಾದ ದುರ್ಗುಣಗಳಿಂದಾಗಿ ದೇಶದ ಸ್ಥಿತಿ ಅವನತಿಗೆ ಇಳಿದಿತ್ತಷ್ಟೆ. ದೇಶವು ಎಚ್ಚರಗೊಳ್ಳಬೇಕಾದರೆ ಧಾರ್ಮಿಕ ಜಾಗೃತಿ ಮೂಡಬೇಕು. ಧಾರ್ಮಿಕ ಜಾಗೃತಿ ಮೂಡಲು ಸನಾತನ ವೈದಿಕ ಧರ್ಮವು ಪುನರುತ್ಥಾನವಾಗಬೇಕು. ಅದಕ್ಕೆ ನೈತಿಕ ಮೌಲ್ಯಗಳ ಪ್ರಸಾರವಾಗಬೇಕು ಎಂದು ನಂಬಿದ್ದ ಈ ಗುರುವರ್ಯರು

Sri Vidyabharathi Book Centre, Sringeri

CC-O. In Public Domain. Digitized by eGangotri

ಭರತಖಂಡದ ಪುನರೈಕ್ಯತೆಗೆ ಶ್ರೀ ಶಂಕರಭಗವತ್ಪಾದರ ಅದ್ವೈತ ತತ್ವ ಪ್ರಸಾರವು ತುಂಬಾ ಅಗತ್ಯವೆಂಬುದನ್ನು ಮನಗಂಡು ವೇದಾಂತ ತತ್ವನನ್ನು ಪ್ರಸಾರ ಮಾಡಿದ್ದರು. ಶ್ರೀ ಶಂಕರರ ಜನ್ಮಕ್ಷೇತ್ರವಾದ ಕಾಲಟಿಯನ್ನು ಕಂಡುಹಿಡಿದರು. ಅಲ್ಲಿ ಶ್ರೀ ಶಾರದಾ ಶ್ರೀ ಶಂಕರರ ದೇವಾಲಯಗಳನ್ನು ನಿರ್ಮಿಸಿದರು. ವೇದ ಪಾಠಶಾಲೆಯನ್ನು ಆರಂಭಿಸಿದರು. ಶೃಂಗೇರಿ ಮತ್ತು ಬೆಂಗಳೂರು ನಗರಗಳಲ್ಲಿ ವೇದವೇದಾಂತಪಾಠಶಾಲೆಗಳನ್ನು ಸ್ಥಾಪಿಸಿದರು. ಶ್ರೀ ಶಂಕರರ ಗ್ರಂಥಗಳೆಲ್ಲವನ್ನೂ ಸಂಪಾದನೆ ಮಾಡಿಸಿ, ಅಚ್ಚು ಹಾಕಿಸಿದರು. ಈಗ ಭರತಖಂಡದಲ್ಲೆಲ್ಲಾ ಆಚರಿಸಲ್ಪಡುತ್ತಿರುವ ಶ್ರೀ ಶಂಕರರ ಜಯಂತೀ ಉತ್ಸವವನ್ನು ಪ್ರಪ್ರಥಮವಾಗಿ ಆರಂಭಿಸಿದವರು ಈ ಗುರುವರ್ಯರೇ.

ಅನೇಕ ದೇವಾಲಯಗಳಲ್ಲಿದ್ದ ಪೂಜಾ ವಿಧಾನವನ್ನು ಪರಿಷ್ಕರಿಸಿ, ವೈದಿಕಪೂಜಾ ವಿಧಾನವನ್ನು ಆಚರಣೆಗೆ ತಂದರು. ದೇಶದ ರಾಜಕೀಯ ಸಾಮಾಜಿಕ ಸ್ಥಿತಿಯು ಕ್ಷೋಭೆಯಲ್ಲಿ ಇದ್ದಾಗ, ಹೊಸವಿಚಾರ ಪ್ರಣಾಲಿಯಲ್ಲಿ ಸಿಕ್ಕಿದ ಜನ ದೇವರು ಮತ್ತು ಧರ್ಮದ ಬಗೆಗೆ ಗೊಂದಲದಲ್ಲಿ ಇದ್ದಾಗ, ಈ ಆಚಾರ್ಯರು ದೇಶವನ್ನು ಹಲವು ಸಲ ಸಂಚರಿಸಿ, ಜನರ ಅನೇಕ ಸಂದೇಹ, ಸಂಶಯ ಅನುಮಾನ ಅಸ್ಥಿರತೆಗಳನ್ನು ಹೋಗಲಾಡಿಸಿದರು. ಭರತಖಂಡದ ವಿವಿಧ ಭಾಷೆ ಮತ್ತು ವಿವಿಧ ಪ್ರಾಂತ್ಯಗಳವರನ್ನು ಪರಸ್ಪರ ಪರಿಚಯ ಮಾಡಿಸಿ, ನಾವೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು ಎಂಬ ಭಾವನೆಯನ್ನು ಬಿತ್ತಿ, ಧರ್ಮದಲ್ಲಿ ಶ್ರದ್ಧೆ ನಂಬಿಕೆಗಳನ್ನು ಮೂಡಿಸಿದರು. ವೈದಿಕ ಧರ್ಮದ ರಕ್ಷಣೆಗಾಗಿ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಕಾರ್ಯಮಾಡಿದ್ದರು. ವೈಭವ ಗೌರವಗಳ ಮಧ್ಯದಲ್ಲಿಯೇ ಇದ್ದರೂ ಅತ್ಯಂತ ವಿರಕ್ತರಾಗಿದ್ದ ಈ ಆಚಾರ್ಯರು, ರಾಜಯೋಗಿಯೆಂದೂ ಅಭಿನವ ಶಂಕರರೆಂದೂ ಪ್ರಸಿದ್ಧರಾಗಿದ್ದು, ೧೯೧೨ರಲ್ಲಿ ನಿರ್ಯಾಣ ಹೊಂದಿದರು. *

ಶ್ರೀ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರ ನಂತರ ಪೀಠಕ್ಕೆ ದಯಮಾಡಿಸಿದ ಶ್ರೀ ಚಂದ್ರಶೇಖರಭಾರತೀಯವರು ಮೊದಲಿನಿಂದಲೂ ಏಕಾಂತವಾಸ, ಮೌನ ಅನುಷ್ಠಾನಗಳಲ್ಲಿ ಅಪೇಕ್ಷೆ ಹೊಂದಿದ್ದರಷ್ಟೆ. ಸಂನ್ಯಾಸ ಸ್ವೀಕಾರದ ನಂತರ ಅವರ ಮೌನ ಏಕಾಂತಪ್ರಿಯತೆ ಇನ್ನೂ ಹೆಚ್ಚಾಯಿತು. ಹಿಂದಿನ ಇಬ್ಬರು ಗುರುಗಳು ದೇಶಪರ್ಯಟನ ಮಾಡಿದಷ್ಟು ಈ ಗುರುಗಳು ಪ್ರವಾಸಪ್ರಿಯರಾಗಿದ್ದರೂ ಭಕ್ತಾನುಗ್ರಹಕ್ಕಾಗಿ ಕೇವಲ ದಕ್ಷಿಣ ಭಾರತದ ಸಂಚಾರವನ್ನು ಕೈಗೊಂಡಿದ್ದರು. ಶ್ರೀ ಶಿವಾಭಿನವ ನರಸಿಂಹ ಭಾರತೀಯವರು ೧೯೧೦ರಲ್ಲಿ ಕಾಲಟಿಯಿಂದ ಹಿಂದಿರುಗಿದ ನಂತರ ಪುನಃ ಪ್ರವಾಸ ಹೊರಟಿರಲಿಲ್ಲ.

---

* ಶ್ರೀ ಸ್ವಾಮಿಗಳವರ ಜೀವನ ಚರಿತ್ರೆಯು ಈ ಲೇಖಕರಿಂದಲೇ ರಚಿಸಲ್ಪಟ್ಟು 'ರಾಜಯೋಗಿ ಶ್ರೀ ನರಸಿಂಹ ಭಾರತೀ' ಎಂಬ ಹೆಸರಿನಲ್ಲಿ ಈ ಗ್ರಂಥದ ಪ್ರಕಾಶಕರಿಂದಲೇ ಪ್ರಕಟಿಸಲ್ಪಟ್ಟಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಚಂದ್ರಶೇಖರ ಭಾರತೀಯವರು ೧೯೧೨ರಲ್ಲಿ ಪಟ್ಟಕ್ಕೆ ಬಂದನಂತರ ಸಾಧನೆ, ಜಪ, ಧ್ಯಾನ ತಪಸ್ಸುಗಳಲ್ಲಿಯೇ ಮಗ್ನರಾಗಿ ಸಂಚಾರದ ಬಗೆಗೆ ಮನಸ್ಸು ಕೊಟ್ಟಿರಲಿಲ್ಲ.

ಶೃಂಗೇರಿಗೆ ಬರಲಾಗದ ಲಕ್ಷಾಂತರ ಜನ ಶಿಷ್ಯರಿಗೆ ಅವರವರ ಊರಿಗೇ ಹೋಗಿ ಆಶೀರ್ವಾದ ಮಾಡಿ ಬರುವುದು ಶೃಂಗೇರಿಯ ಆಚಾರ್ಯರ ವೈಶಿಷ್ಟ್ಯವಷ್ಟೆ. ಈ ಸಮಯ ದಲ್ಲಿ ಶಿಷ್ಯರ ಧಾರ್ಮಿಕ ಸಮಸ್ಯೆಗಳನ್ನು ಪರಿಹರಿಸಿ, ಅವರ ಆಧ್ಯಾತ್ಮಿಕ ಸಾಧನೆಗಳಲ್ಲಿ ಬರಬಹುದಾದ ತೊಡರುಗಳನ್ನು ನಿವಾರಿಸಿ ಅನುಗ್ರಹಿಸುವುದು, ಸನಾತನ ಧರ್ಮದ ರೂಪ ರೇಷೆಗಳನ್ನು ಸರಳವಾದ ನುಡಿಗಳಲ್ಲಿ ಬೋಧಿಸುವುದು, ಹಿಂದೂ ಧರ್ಮದ ಭಿನ್ನ ಭಿನ್ನ ಮತ ಗಳಲ್ಲಿರುವ ಭೇದ ಭಾವನೆಗಳನ್ನು ತೊಡೆದುಹಾಕುವುದು, ದೇವಸ್ಥಾನ ಧರ್ಮ ಮಂದಿರ ಗಳ ಉದ್ಧಾರ, ಧರ್ಮ ಪ್ರಸಾರಕ್ಕಾಗಿ ನೂತನ ಸಂಘ ಸಂಸ್ಥೆಗಳ ಸ್ಥಾಪನೆ ಮುಂತಾದ ಅನೇಕ ಕಾರ್ಯಗಳನ್ನು ಶೃಂಗೇರಿಯ ಆಚಾರ್ಯರು ತಮ್ಮ ಸಂಚಾರ ಕಾಲದಲ್ಲಿ ನೆರ ವೇರಿಸುತ್ತಾರೆ.

ಹಿಂದಿನ ಆಚಾರ್ಯರೆಲ್ಲರೂ ಆಗಾಗ ಸಂಚಾರ ಕೈಗೊಂಡು ತಮ್ಮ ಶಿಷ್ಯರ ಸಂಪರ್ಕ ವಿಟ್ಟುಕೊಂಡಿದ್ದರಷ್ಟೆ. ಶ್ರೀ ಚಂದ್ರಶೇಖರ ಭಾರತೀಗಳವರು ಸಂಚಾರದ ಕಡೆಗೆ ಮನಸ್ಸು ಕೊಟ್ಟಿರಲಿಲ್ಲ. ಶಿಷ್ಯರ ಒತ್ತಾಯದ ಪ್ರಾರ್ಥನೆಯಮೇರೆಗೆ ೧೯೨೪ ರಲ್ಲಿ ಒಮ್ಮೆ ೧೯೩೮ರಲ್ಲಿ ಒಮ್ಮೆ ಎರಡು ಸಲ ಮಾತ್ರ ದೇಶ ಸಂಚಾರಮಾಡಿದ್ದರು. ಹಿಂದಿನ ಗುರುಗಳಂತೆ ಹೆಚ್ಚಾಗಿ ಪ್ರವಾಸಮಾಡದಿದ್ದರೂ ಶ್ರೀ ಚಂದ್ರಶೇಖರಭಾರತೀಗಳವರು ದರ್ಶನ, ಉಪದೇಶ, ಸಂಭಾ ಷಣೆಗಳಿಂದ ಬಹು ಜನರ ಆರಾಧ್ಯ ಮೂರ್ತಿಯಾದರು. ಅವರ ದಿವ್ಯಪ್ರಭಾವದಿಂದ ಬಹು ಜನ ನಾಸ್ತಿಕರೆನಿಸಿಕೊಂಡಿದ್ದವರೂ ಧರ್ಮ ಮತ್ತು ಆಧ್ಯಾತ್ಮಿಕ ವಿಚಾರದಲ್ಲಿ ಶ್ರದ್ಧಾಸಕ್ತಿ ಗಳನ್ನು ಪಡೆದುಕೊಂಡಿದ್ದರು.

ಶ್ರೀ ಚಂದ್ರಶೇಖರ ಭಾರತೀಯವರ ನಿರ್ಯಾಣದ ನಂತರ ಶ್ರೀ ವಿದ್ಯಾತೀರ್ಥರನ್ನು ಸಂಚಾರ ಕೈಗೊಳ್ಳುವಂತೆ ಕೋರಿ ಅನೇಕ ಪ್ರಾರ್ಥನಾ ಪತ್ರಗಳು ಬರಲಾರಂಭಿಸಿದುವು. ಶ್ರೀ ಗುರುಗಳು ಶಿಷ್ಯರ ಕೋರಿಕೆಯನ್ನು ಈಡೇರಿಸುವುದು ಅಗತ್ಯವೆಂದು ಭಾವಿಸಿ, ಶ್ರೀ ಶಾರದಾಂಬಾರವರ ಸನ್ನಿಧಿಯಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಿದರು. ಶ್ರೀ ಗುರುದೇವರ ಅಧಿಷ್ಠಾನದಲ್ಲಿಯೂ ಪೂಜೆಪ್ರಾರ್ಥನೆಗಳನ್ನು ನೆರವೇರಿಸಿದರು. ಮೊತ್ತಮೊದಲು ತುಂಗಾ ಮೂಲಕ್ಕೆ ಯಾತ್ರೆ ನಡೆಸಿದರು. ಆ ಬಳಿಕ ಶೃಂಗೇರಿಯಲ್ಲಿಯೇ ಚಾತುರ್ಮಾಸ್ಯ ವ್ರತ ವನ್ನು ಕೈ ಕೊಂಡರು. ಅನಂತರ ತಮ್ಮ ಗುರುದೇವರ ಪ್ರಥಮ ವಾರ್ಷಿಕ ಆರಾಧನೆ ಯನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಿದರು. ಆ ಬಳಿಕ ನವರಾತ್ರಿ ಉತ್ಸವವನ್ನೂ ಜರುಗಿಸಿದರು.

ಪುನಃ ಪುನಃ ಶಿಷ್ಯರಿಂದ ಪ್ರಾರ್ಥನೆಗಳು ಬರಲು ಶ್ರೀ ಶ್ರೀವಿದ್ಯಾತೀರ್ಥ ಸ್ವಾಮಿ ಗಳವರು ತಮ್ಮ ಶ್ರೀ ಗುರುದೇವರಿಂದ ಪ್ರೇರಿತರಾಗಿ ಸಂಚಾರ ಕೈಗೊಳ್ಳಲು ನಿರ್ಧರಿಸಿದರು. ಈ ತೀರ್ಥಯಾತ್ರಾ ಪ್ರವಾಸವು ೧೯೫೬ರಲ್ಲಿ ಆರಂಭವಾಯಿತು. ಇದು ದಕ್ಷಿಣಾಮ್ನಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೀಠದ ವ್ಯಾಪ್ತಿಗೆ ಒಳಪಟ್ಟಂತಹ ಪ್ರದೇಶಗಳಾದ ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು. ಅನಂತರ ಪುನಃ ಕೈಗೊಂಡ ಸಂಚಾರವು ದಕ್ಷಿಣ ಭಾರತದಷ್ಟೆ ಅಲ್ಲದೆ, ಉತ್ತರಭಾರತವನ್ನು ವ್ಯಾಪಿಸಿ ಹಿಮಾಚಲ ದಾಟಿ ನೇಪಾಲ ದವರೆಗೂ ನಡೆಯಿತು.

೧೭. ಜೈತ್ರಯಾತ್ರೆಯ ಆರಂಭ

ಶ್ರೀ ಜಗದ್ಗುರುಗಳವರು ೧೯೫೭ನೆಯ ಮಾರ್ಚ್ ೧೪ರಂದು ತಮ್ಮ ಪ್ರಪ್ರಥಮ ತೀರ್ಥಪರ್ಯಟನವನ್ನು ಆರಂಭಿಸಿದರು. ಶೃಂಗೇರಿಯ ಎಲ್ಲ ದೇವಾಲಯಗಳಲ್ಲಿಯೂ ಪೂಜಾಭಿಷೇಕಗಳನ್ನು ನೆರವೇರಿಸಿ ಉತ್ಸವದೊಡನೆ ನಗರ ಪ್ರದಕ್ಷಿಣೆಮಾಡಿ ಪ್ರಾಚೀನ ಸಂಪ್ರದಾಯದಂತೆ ಪರಿವಾರ ಬಿರುದು ಬಾವಲಿಗಳೊಡನೆ ಶ್ರೀಜಗದ್ಗುರುಗಳವರು ಶೃಂಗೇರಿಯಿಂದ ದಿಗ್ವಿಜಯವನ್ನು ಆರಂಭಿಸಿದರು.

ಶ್ರೀ ಋಷ್ಯಶೃಂಗರ ಮುಕ್ತಿ ಕ್ಷೇತ್ರವಾದ ಕಿಗ್ಗಕ್ಕೆ ದಯಮಾಡಿಸಿ ಶ್ರೀ ಶಾಂತಾ ಋಷ್ಯಶೃಂಗೇಶ್ವರರನ್ನು ಪೂಜಿಸಿ, ಹರಿಹರಪುರ, ಜಯಪುರಗಳ ಮುಖಾಂತರ ಕಳಸ ಕ್ಷೇತ್ರಕ್ಕೆ ಆಗಮಿಸಿದರು. ಶ್ರೀ ಕಳಸೇಶ್ವರರನ್ನು ಪೂಜಾಭಿಷೇಕಗಳಿಂದ ಸೇವಿಸಿ ಅಲ್ಲಿಂದ ಘಟ್ಟವಿಳಿದು ಕೊಲ್ಲೂರಿನ ಶ್ರೀ ಮೂಕಾಂಬಿಕೆಯ ಸನ್ನಿಧಿಗೆ ಆಗಮಿಸಿದರು. ವಿಶ್ವಮಾತೆಯಾದ ಶ್ರೀ ಮೂಕಾಂಬಿಕೆಯನ್ನು ಸ್ವರ್ಣಬಿಲ್ವದಳಗಳಿಂದ ವಿಶೇಷವಾಗಿ ಪೂಜಿಸಿ ಲೋಕ ಕ್ಷೇಮಕ್ಕಾಗಿ ಪ್ರಾರ್ಥಿಸಿದರು. ಅಲ್ಲಿಂದ ಧರ್ಮಸ್ಥಳಕ್ಕೆ ಆಗಮಿಸಿದರು. ಶ್ರೀ ರತ್ನವರ್ಮ ಹೆಗ್ಗಡೆಯವರರಿಂದ ಸ್ವಾಗತಿಸಲ್ಪಟ್ಟ ಶ್ರೀ ಶ್ರೀಗಳವರು ಶ್ರೀ ಮಂಜುನಾಥೇಶ್ವರ ಸ್ವಾಮಿಯವರನ್ನು ಅರ್ಚಿಸಿ ಅಲ್ಲಿಂದ ಮಂಗಳೂರು, ಕಣ್ಣನೂರು, ಕಲ್ಲಿಕೋಟೆ, ಪಾಲ್ಘಾಟ್, ಚಿತ್ತೂರು, ಮುಂತಾದ ಅನೇಕ ಸ್ಥಳಗಳಲ್ಲಿ ಸಂಚಾರಮಾಡಿ ಭಕ್ತರನ್ನು ಆಶೀರ್ವದಿಸಿದರು. ಅನಂತರ ಶ್ರೀ ಗುರುವಾಯೂರು ಕ್ಷೇತ್ರಕ್ಕೆ ದಯಮಾಡಿಸಿ ಶ್ರೀ ಕೃಷ್ಣನನ್ನು ಪೂಜಿಸಿ ತ್ರಿಚೂರು ನಗರಕ್ಕೆ ದಯಮಾಡಿಸಿದರು. ತ್ರಿಚೂರಿನಲ್ಲಿ ತೆಕ್ಕೇ ಮಠದ ನಂಬೂದಿರಿ ಸಂಪ್ರದಾಯದ ಶ್ರೀ ಸ್ವಾಮಿಗಳಿಂದ ಸ್ವಾಗತಿಸಲ್ಪಟ್ಟ ಗುರುವರ್ಯರು ಶ್ರೀ ವೃಷಭಾಚಲೇಶ್ವರರನ್ನು ಪೂಜಿಸಿದರು. ಈ ಸ್ವಾಮಿಯ ಸೇವೆ ಪೂಜೆಗಳ ಫಲದಿಂದಲೇ ಶ್ರೀ ಶಿವಗುರು ಶ್ರೀ ಆರ್ಯಾಂಬಾರವರು ಶ್ರೀ ಶಂಕರಭಗವತ್ಪಾದರನ್ನು ಪುತ್ರರನ್ನಾಗಿ ಪಡೆದಿದ್ದು ಅಲ್ಲಿಂದ ಮುಂದೆ ಅನೇಕಗ್ರಾಮ ನಗರಗಳಲ್ಲಿ ಸಂಚರಿಸಿ ಕಾಲಟಿ ಕ್ಷೇತ್ರಕ್ಕೆ ದಯಮಾಡಿಸಿದರು. ಶ್ರೀ ಶ್ರೀಗಳವರು ಚಾತುರ್ಮಾಸ್ಯ ಸಂಕಲ್ಪವನ್ನು ಕಾಲಟೀಕ್ಷೇತ್ರದಲ್ಲಿಯೇ ಕೈಗೊಂಡು ಅನುಷ್ಠಾನ ನಿರತರಾಗಿದ್ದರು.

ಆ ವರ್ಷದ(೧೯೫೭) ಶ್ರೀ ಗಣಪತಿ ವಿದ್ವತ್ಸಭೆಯು ಕಾಲಟಿಯಲ್ಲಿಯೇ ನೆರವೇರಿತು. ಅನೇಕ ಜನ ವಿದ್ವಾಂಸರು ತರ್ಕ, ವೇದಾಂತ, ನ್ಯಾಯ, ವ್ಯಾಕರಣ' ಮೀಮಾಂಸಾದಿ ಶಾಸ್ತ್ರಗಳಲ್ಲಿ ನುರಿತವರು ವಿದ್ವತ್ಸಭೆಯಲ್ಲಿ ಪಾಲ್ಗೊಂಡಿದ್ದರು. ಶ್ರೀ ಶ್ರೀಗಳವರ ದರ್ಶನವನ್ನು ಪಡೆಯಲು ದೂರದೂರದ ಪ್ರದೇಶದಿಂದ ಸಹಸ್ರಾರು ಜನರು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲಟಿಗೆ ಆಗಮಿಸುತ್ತಿದ್ದರು. ತಿರುವಾಂಕೂರಿನ ಮಹಾರಾಜರಾಗಿದ್ದ ಶ್ರೀ ಚಿತ್ತಿರೈ ತಿರುನಾಳ್ ಬಲರಾಮವರ್ಮರೂ, ಕೊಚಿನ್ನಿನ ಮಹಾರಾಜರಾಗಿದ್ದ ರಾಮವರ್ಮ ಪರೀಕ್ಷಿತ್‌ರವರೂ ಕಾಲಟಿಗೆ ಆಗಮಿಸಿ ಗುರುಗಳವರಿಗೆ ಕಾಣಿಕೆಗಳನ್ನು ಅರ್ಪಿಸಿದರು. ನವರಾತ್ರಿಯ ಉತ್ಸವವು ಕಾಲಟಿಯಲ್ಲಿಯೇ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಶ್ರೀ ರಾಮಕೃಷ್ಣಾಶ್ರಮದ ಯತಿಗಳು ಶ್ರೀ ಶ್ರೀಗಳವರನ್ನು ತಾವು ನಡೆಸುತ್ತಿದ್ದ ಶ್ರೀ ಶಂಕರ ಕಾಲೇಜ್ ವಿದ್ಯಾನಿಲಯಕ್ಕೆ ಸ್ವಾಗತಿಸಿ ಕಾಲೇಜಿನ ಎಲ್ಲ ಭಾಗಗಳನ್ನು ತೋರಿಸಿದರು.

ಕಾಲಟಿಯಿಂದ ಪ್ರಯಾಣ ಬೆಳೆಸಿ ಹಲವಾರು ಸ್ಥಳಗಳ ಮೂಲಕ ಕೊಚ್ಚಿನ್ ನಗರಕ್ಕೆ ದಯಮಾಡಿಸಿದ ಶ್ರೀ ಶ್ರೀಗಳವರನ್ನು ಕೊಚ್ಚಿನ್ನಿನ ಮಹಾರಾಜ ಶ್ರೀರಾಮವರ್ಮ ಪರೀಕ್ಷಿತ್‌ರವರು ತಮ್ಮ ಅರಮನೆಗೆ ಸ್ವಾಗತಿಸಿ ಭಕ್ತಿಶ್ರದ್ಧೆಯಿಂದ ಸತ್ಕರಿಸಿದರು. ಆಗ ಜಗದ್ಗುರುಗಳವರ ಸಮ್ಮುಖದಲ್ಲಿ ನಡೆದ ವಿಶೇಷ ವಿದ್ವತ್ಸಭೆಯಲ್ಲಿ ಪಾಲ್ಗೊಂಡಿದ್ದ ಕೊಚ್ಚಿನ್ನಿನ ಮಹಾರಾಜರು ತಮ್ಮ ಪಾಂಡಿತ್ಯ ಪ್ರತಿಭೆಗಳಿಂದ ಗುರುಗಳವರನ್ನು ಮೆಚ್ಚಿಸಿ ಸಂತೋಷಪಡಿಸಿದರು. ಶ್ರೀ ಶ್ರೀಗಳವರು ರಾಜರಿಗೆ " ಅಭಿನವ ತರ್ಕವಾಗೀಶ " ಎಂಬ ಬಿರುದನ್ನು ಆಶೀರ್ವಾದ ಪೂರ್ವಕವಾಗಿ ಅನುಗ್ರಹಿಸಿದರು. ಕೊಚ್ಚಿನ್ನಿನಿಂದ ಪ್ರಯಾಣ ಹೊರಟ ಶ್ರೀ ಶ್ರೀಗಳವರು ಅಲ್ಲಲ್ಲಿ ತಂಗುತ್ತ, ಭಕ್ತರನ್ನು ಆಶೀರ್ವದಿಸುತ್ತ, ಶ್ರೀ ಪದ್ಮನಾಭಸ್ವಾಮಿಯ ದರ್ಶನಕ್ಕಾಗಿ ಅನಂತಶಯನಕ್ಕೆ ದಯಮಾಡಿಸಿದರು. ಅಲ್ಲಿ ಮಹಾರಾಜರವರಾದ ಶ್ರೀ ಬಲರಾಮ ವರ್ಮರಿಂದಲೂ ರಾಜ್ಯಪಾಲ ಶ್ರೀ ಬಿ. ರಾಮಕೃಷ್ಣರಾಯರಿಂದಲೂ ಭಕ್ತಿಪೂರ್ವಕವಾಗಿ ಸ್ವಾಗತಿಸಲ್ಪಟ್ಟ ಶ್ರೀ ಶ್ರೀಗಳವರು, ಶ್ರೀ ಅನಂತಪದ್ಮನಾಭಸ್ವಾಮಿಯವರನ್ನು ಅರ್ಚಿಸಿದರು. ಅಲ್ಲಿಂದ ಕನ್ಯಾಕುಮಾರಿಗೆ ದಯಮಾಡಿಸಿ ಶ್ರೀ ದೇವಿಯನ್ನು ನಾನಾ ವಿಧವಾಗಿ ಸ್ತೋತ್ರಗೈದು ಪೂಜಿಸಿ ಅನೇಕ ದಾನ ಧರ್ಮಗಳನ್ನು ನಡೆಸಿದರು.

ಆ ಬಳಿಕ ತಿರುನೆಲ್ವೇಲಿ ಜಿಲ್ಲೆಗೆ ದಯಮಾಡಿಸಿ ವಲ್ಲಿಯೂರು, ಕಲಕ್ಕಾಡ್, ಶರ್ಮಾದೇವಿ, ಕಲ್ಲಿಡೈಕುರುಚಿ, ಕಡೆಯಂ, ತೂತ್ತುಕುಡಿ ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಶಿಷ್ಯರ ಕೋರಿಕೆಯಂತೆ ಶ್ರೀ ಶಂಕರ ಜಯಂತ್ಯುತ್ಸವವನ್ನು ಮತ್ತು ಶ್ರೀಶಂಕರ ಜಯಂತಿ ವಿದ್ವತ್ಸಭೆಯನ್ನು ತಿರುನೆಲ್ವೇಲಿ ನಲ್ಲಿ ನಡೆಸಿದರು. ಅಲ್ಲಿಂದ ತಿರುಚೆಂದೂರಿಗೆ ಆಗಮಿಸಿ ಶ್ರೀ ಸುಬ್ರಹ್ಮಣ್ಯಸ್ವಾಮಿಯನ್ನು ವಿಶೇಷವಾಗಿ ಸ್ವರ್ಣ ಬಿಲ್ವದಳಗಳಿಂದ ಪೂಜಿಸಿದರು. ಕುರ್ತಾಲಂ ಕ್ಷೇತ್ರದ ಶಿಷ್ಯರ ಪ್ರಾರ್ಥನೆಯಂತೆ ಶ್ರೀ ಶ್ರೀಗಳವರು ಚಾತುರ್ಮಾಸ್ಯ ವ್ರತಕ್ಕಾಗಿ ಆರೋಗ್ಯಧಾಮವಾದ ಕುರ್ತಾಲಂ ಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿ ಸಿದ್ಧೇಶ್ವರೀ ಪೀಠದ ಶ್ರೀ ಶ್ರೀ ತ್ರಿವಿಕ್ರಮ ರಾಮಾನಂದ ಭಾರತೀಸ್ವಾಮಿಗಳವರಿಂದಲೂ ಅನೇಕ ಜನರಿಂದಲೂ ಸ್ವಾಗತಿಸಲ್ಪಟ್ಟ ಗುರುವರ್ಯರು ಚಾತುರ್ಮಾಸ್ಯವ್ರತ ಸಂಕಲ್ಪವನ್ನು ಕೈಗೊಂಡು ಗಣಪತಿ ವಿದ್ವತ್ಸಭೆಯನ್ನೂ ಅಲ್ಲಿಯೇ ನೆರವೇರಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೆಂಕೋಟೆಯಲ್ಲಿ ಶರನ್ನವರಾತ್ರೀ ಉತ್ಸವವನ್ನು ಆಚರಿಸಿದ ಶ್ರೀ ಶ್ರೀಗಳವರು ಶ್ರೀ ವಿಲ್ಲಿಪುತ್ತೂರು, ರಾಜಪಾಳಯಂ, ರಾಮನಾಥಪುರಂ, ನವಪಾಶಾಣಂ, ದೇವಿ ಪಟ್ಟಣಗಳಲ್ಲಿ ಸಂಚರಿಸಿ ಅಸಂಖ್ಯಾತ ಭಕ್ತಸ್ತೋಮವನ್ನು ಆಶೀರ್ವದಿಸಿ ಪಾಂಬನ್ ಜಲ ಸಂಧಿಯನ್ನು ದಾಟಿ ರಾಮೇಶ್ವರ ಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿ ಪ್ರಾಚೀನ ಸಂಪ್ರದಾಯದಂತೆ ಶ್ರೀ ರಾಮನಾಥಸ್ವಾಮಿಯವರ ದೇವಾಲಯದಲ್ಲಿಯೇ ಬಿಡಾರ ಮಾಡಿ ಶ್ರೀ ರಾಮನಾಥಸ್ವಾಮಿಯವರನ್ನೂ, ಶ್ರೀ ಪರ್ವತವರ್ಧಿನಿ ಅಮ್ಮನವರನ್ನೂ ಅತ್ಯಂತ ವೈಭವದಿಂದ ವಿಶೇಷವಾಗಿ ಪೂಜಿಸಿದರು. ಧನುಷ್ಕೋಟಿಯಲ್ಲಿ ಸಮುದ್ರ ಸ್ನಾನಮಾಡಿ ಅನೇಕ ದಾನಧರ್ಮಗಳನ್ನು ಯಥೇಚ್ಛವಾಗಿ ನಡೆಸಿದರು.

ಧನುಷ್ಕೋಟಿಯಿಂದ ಶಿವಗಂಗೆ, ದೇವಕೋಟೆ, ಕಾರೈಕುಡಿ, ಕೋವಿಲೂರು. ಪಲ್ಲತ್ತೂರು, ಕಂಡನೂರು, ಕೋಟ್ಟೈಯೂರು, ಕುನ್ನಕ್ಕುಡಿ, ತಿರುಪತ್ತೂರು ಮತ್ತು ಇನ್ನೂ ಅನೇಕ ಸ್ಥಳಗಳನ್ನು ಸಂದರ್ಶಿಸಿ ಶಿಷ್ಯಸಮೂಹಕ್ಕೆ ತೀರ್ಥಪ್ರಸಾದಗಳನ್ನು ಆಶೀರ್ವಾದವನ್ನೂ ಅನುಗ್ರಹಿಸಿದರು.

ಚೆಟ್ಟಿನಾಡಿನ ಹಲವಾರು ಸ್ಥಳಗಳನ್ನು ಸಂದರ್ಶಿಸಿದ ಶ್ರೀಶ್ರೀಗಳವರು ಅರಂತಂಗಿಯ ಮೂಲಕ ಆವಡಯಾರ್ ಕೋವಿಲ್‌ಗೆ ದಯಮಾಡಿಸಿದರು. ಅಲ್ಲಿ ಶ್ರೀ ತಂಬೀರಿನ್ ಸ್ವಾಮಿಗಳಿಂದ ಸ್ವಾಗತಿಸಲ್ಪಟ್ಟ ಗುರುಗಳು ಶ್ರೀ ಆತ್ಮನಾಥಸ್ವಾಮಿಯನ್ನು ಪೂಜಿಸಿ ತಂಜಾವೂರು ಜಿಲ್ಲೆಯಲ್ಲಿ ಸಂಚರಿಸಿದರು.

ಪುದುಕೋಟ್ಟೈ ನಗರದಲ್ಲಿ ರಾಜರಿಂದ ಸ್ವಾಗತಿಸಲ್ಪಟ್ಟ ಶ್ರೀ ಶ್ರೀಗಳು ರಾಜರ ಅರಮನೆಯಲ್ಲಿಯೇ ಸಂಪ್ರದಾಯದಂತೆ ಬಿಡಾರಮಾಡಿ ಪೂಜಾದಿಗಳನ್ನು ನೆರವೇರಿಸಿದರು ಪುದುಕೋಟ್ಟೈ ಸುತ್ತಮುತ್ತಣ ಹಲವಾರು ಸ್ಥಳಗಳನ್ನು, ಕುಳಿತ್ತಲೈ ನಗರವನ್ನೂ, ತಿರುಚಿರಾಪಳ್ಳಿಯ ಅನೇಕ ಗ್ರಾಮಗಳನ್ನು ಸಂಚರಿಸಿ ಜನಗಳಲ್ಲಿ ಧಾರ್ಮಿಕ ಜಾಗೃತಿ ಮೂಡಿಸುತ್ತಾ ಮೇಲೂರಿನ ಮೂಲಕ ಸುಪ್ರಸಿದ್ಧ ಕ್ಷೇತ್ರವಾದ ಮಧುರೆಗೆ ದಯಮಾಡಿ ಸಿದರು.

ಪ್ರಾಚೀನಕಾಲದಿಂದಲೂ ಶೃಂಗೇರಿಯ ಜಗದ್ಗುರು ಪೀಠಕ್ಕೂ, ಮಧುರೈ ರಾಮೇ ಶ್ವರ ಮುಂತಾದ ದೇವಾಲಯಗಳಿಗೂ ವಿಶೇಷ ಸಂಬಂಧ ಉಂಟು. ಶೃಂಗೇರಿಯ ಆಚಾರ್ಯರು ಈ ಕ್ಷೇತ್ರಗಳಿಗೆ ಆಗಮಿಸಿದಾಗ ಆಯಾ ದೇವಾಲಯಗಳಲ್ಲಿಯೇ ಬಿಡಾರ ಏರ್ಪಡಿಸುವುದು ಸಂಪ್ರದಾಯ. ಅದರಂತೆ ಶ್ರೀ ಶ್ರೀಗಳವರು ಮಧುರೆಯ ಶ್ರೀ ಮೀನಾಕ್ಷಿ ಅಮ್ಮನವರ ದೇವಾಲಯದ ಕಲ್ಯಾಣಮಂಟಪದಲ್ಲಿಯೇ ಬಿಡಾರ ಮಾಡಿ ಶ್ರೀ ಮೀನಾಕ್ಷಿ ಸುಂದರೇಶ್ವರರನ್ನು ಸ್ವತಃ ವಿಶೇಷವಾಗಿ ಅರ್ಚನೆಮಾಡಿದರು. ಶ್ರೀ ಶಂಕರಜಯಂತೀ ಉತ್ಸವವನ್ನೂ ವಿದ್ವತ್ಸಭೆಯನ್ನೂ ನಡೆಸಿ ಬಹು ಜನ ವಿದ್ವಾಂಸರನ್ನು ಸನ್ಮಾನಿಸಿದರು. ಮಧುರೈ ನಗರದಲ್ಲಿಯೂ, ಸುತ್ತಮುತ್ತಣ ಅನೇಕ ಸ್ಥಳಗಳಲ್ಲಿಯೂ ಶ್ರೀ ಜಗದ್ಗುರು ಗಳವರಿಗೆ ಭವ್ಯ ಸ್ವಾಗತವು ನೀಡಲ್ಪಟ್ಟಿತು. ಶ್ರೀ ಶ್ರೀಗಳವರ ದರ್ಶನಕ್ಕೂ, ಉಪ

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯಾಸಕ್ಕೂ ಅವರು ನಡೆಸುತ್ತಿದ್ದ ಶ್ರೀ ಚಂದ್ರಮೌಳೀಶ್ವರ ಪೂಜೆಗೂ ಜನ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಆಗಮಿಸುತ್ತಿದ್ದರು.

ಮಧುರೈಯಿಂದ ಪ್ರಯಾಣ ಹೊರಟು, ಶೋಲವಂದನ್, ದಿಂಡಿಗಲ್, ಮುಖಾಂತರ ಪಳನಿ ಕ್ಷೇತ್ರಕ್ಕೆ ದಯಮಾಡಿಸಿ ಶ್ರೀ ದಂಡಾಯುಧಪಾಣಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಯನ್ನು ವಿಶೇಷವಾಗಿ ಪೂಜಿಸಿ ಲೋಕಕಲ್ಯಾಣಕ್ಕಾಗಿ ಪ್ರಾರ್ಥಿಸಿದರು. ಪಳನಿಯಿಂದ ಹೊರಟು ಹಲವಾರು ಸ್ಥಳಗಳನ್ನು ಸಂದರ್ಶಿಸಿ ಚಾತುರ್ಮಾಸ್ಯಕ್ಕಾಗಿ ಕಾಲಟಿ ಕ್ಷೇತ್ರಕ್ಕೆ ದಯಮಾಡಿಸಿದರು. ಆ ವರ್ಷದ ಗಣಪತಿ ವಿದ್ವತ್ಸದಸ್ಸೂ ಕಾಲಟಿಯಲ್ಲಿಯೇ ನಡೆಯಿತು. ಆ ಸದಸ್ಸಿನಲ್ಲಿ ಅನೇಕ ಜನ ವಿದ್ವಾಂಸರೂ ಕೊಚ್ಚಿನ್ನಿನ ಮಹಾರಾಜ ಶ್ರೀ ರಾಮವರ್ಮ ಪರೀಕ್ಷಿತರೂ ಭಾಗವಹಿಸಿದ್ದು ಶ್ರೀ ಶ್ರೀಗಳವರಿಂದ ಪುರಸ್ಕರಿಸಲ್ಪಟ್ಟರು. ಶ್ರೀ ಶ್ರೀಗಳವರು ಕಾಲಟಿಯಲ್ಲಿದ್ದಾಗಲೇ ಕೇರಳದ ರಾಜ್ಯಪಾಲರಾದ ಶ್ರೀ ಬಿ. ರಾಮ ಕೃಷ್ಣರಾಯರು, ಗಾಂಧಿಸ್ಮಾರಕ ನಿಧಿಯ ಅಧ್ಯಕ್ಷ ಶ್ರೀ ಆರ್. ಆರ್. ದಿವಾಕರ್‌ರವರು, ಗುರುಗಳವರ ಸಂದರ್ಶನ ಪಡೆದು ಆಶೀರ್ವದಿಸಲ್ಪಟ್ಟರು.

ಕಾಲಟಿಯಿಂದ ಹೊರಟು ನಲ್ಲಪಿಳ್ಳಿ, ಕೊಲ್ಲೆಂಗೋಡು ಮುಖಾಂತರ ಪಾಲ್ಘಾಟ್ ನಗರಕ್ಕೆ ಆಗಮಿಸಿ ನವರಾತ್ರಿ ಉತ್ಸವಕ್ಕಾಗಿ ಕೊಯಮುತ್ತೂರು ನಗರವನ್ನು ಪ್ರವೇಶಿಸಿದರು. ಶ್ರೀ ಜಗದ್ಗುರುಗಳವರನ್ನು ಕೊಲ್ಲೆಂಗೋಡಿನಲ್ಲಿ ಸ್ವತಃ ಅಲ್ಲಿಯ ರಾಜರೇ ಸ್ವಾಗತಿಸಿ ಸತ್ಕರಿಸಿದ್ದರು. ಕೊಯಮುತ್ತೂರಿನಲ್ಲಿ ನಡೆದ ನವರಾತ್ರಿ ಮಹೋತ್ಸವವೂ ಚಂಡಿ ಜಪಾದಿಹೋಮಗಳು, ಸಾವಿರಾರು ಭಕ್ತರನ್ನು ಆಕರ್ಷಿಸಿದವು. ಶ್ರೀ ಶ್ರೀಗಳವರ ಸಾಂಪ್ರದಾಯಿಕವಾದ ನವರಾತ್ರಿ ದರ್ಬಾರಿಗೂ, ಶ್ರೀ ಚಂದ್ರಮೌಳೀಶ್ವರ ಪೂಜೆಗೂ ಭಾವುಕರಾದ ಜನ ಅತ್ಯಧಿಕ ಸಂಖ್ಯೆಯಲ್ಲಿ ಸೇರುತ್ತಿದ್ದರು. ಅನಂತರ ಶ್ರೀ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ಪ್ರಾರ್ಥನೆಯಂತೆ ಶ್ರೀ ಶ್ರೀಗಳವರು ಉದಕಮಂಡಲಕ್ಕೆ ಆಗಮಿಸಿದರು. ಅಲ್ಲಿ ಮೊದಲಬಾರಿಗೆ ಮೈಸೂರಿನ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರು ಶ್ರೀ ಗುರುಗಳವರನ್ನು ದರ್ಶನಮಾಡಿ ತಮ್ಮ ಭಕ್ತಿ ಶ್ರದ್ಧೆಯನ್ನು ತೋರಿದರು. ಹಲವಾರು ಗ್ರಾಮಗಳ ಮೂಲಕ ಮತ್ತೆ ಶ್ರೀ ಶ್ರೀಗಳವರು ಕೊಯಮುತ್ತೂರು ನಗರಕ್ಕೆ ಆಗಮಿಸಿದಾಗ ಅಲ್ಲಿಯ ನಾಗರಿಕರು ಶ್ರೀ ಶಂಕರಮಠವನ್ನು ಸ್ಥಾಪಿಸಬೇಕೆಂದು ಗುರುಗಳನ್ನು ಕೋರಿ ಅದಕ್ಕೆ ಅಗತ್ಯವಾದ ಯೋಜನೆಯನ್ನು ಸಿದ್ಧಪಡಿಸಿದರು. ವೇದಪಾಠಶಾಲೆ, ಶಾರದಾಮಂದಿರ, ಉಪನ್ಯಾಸಗೃಹ ಮತ್ತು ಅತಿಥಿಗಳಿಗೆ ವಸತಿಸೌಕರ್ಯ ಇವುಗಳನ್ನೊಳಗೊಂಡ ವಿಸ್ತಾರವಾದ ಶಂಕರಮಠ ನಿರ್ಮಾಣಕ್ಕೆ ಶ್ರೀ ಶ್ರೀಗಳವರ ದಿವ್ಯ ಸಮ್ಮುಖದಲ್ಲಿ ಶ್ರೀ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಶಂಕುಸ್ಥಾಪನೆ ಮಾಡಿದರು. ಶ್ರೀ ಶ್ರೀಗಳವರು ಅಲ್ಲಿಂದ ಧಾರಾಪುರಂ ಮತ್ತು ಈರೋಡು, ಭವಾನಿ, ಮುಂತಾದ ಸ್ಥಳಗಳನ್ನು ಸಂದರ್ಶಿಸಿದರು. ಧಾರಾಪುರಂ ಮತ್ತು ಈರೋಡು ಪುರಸಭೆಗಳು ಗುರುಗಳಿಗೆ ಬಿನ್ನವತ್ತಳೆಗಳನ್ನರ್ಪಿಸಿದುವು. ಈರೋಡಿನಲ್ಲಿ ನಡೆದ ಮಹಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವರಾತ್ರಿಯ ಪೂಜೆ ಚಿರಸ್ಮರಣೀಯವಾಗಿತ್ತು. ಭವಾನಿ ನಗರದಿಂದ ಮೆಟ್ಟೂರು ಜಲಾಶಯಕ್ಕೆ ಭೇಟಿಯಿತ್ತ ಶ್ರೀ ಶ್ರೀಗಳವರನ್ನು ಅಲ್ಲಿಯ ಅಧಿಕಾರಿ ವರ್ಗದವರೂ, ನಗರ ವಾಸಿಗಳೂ ಅತ್ಯಂತ ಹರ್ಷ ಸಂತೋಷದಿಂದ ಸ್ವಾಗತಿಸಿ ಭಕ್ತಿ ಗೌರವವನ್ನರ್ಪಿಸಿದರು.

ಕರೂರಿನ ಮುಖಾಂತರ ಶ್ರೀ ಜಗದ್ಗುರುಗಳವರು ನೆರೂರು ಕ್ಷೇತ್ರಕ್ಕೆ ದಯಮಾಡಿಸಿದಾಗ ಅಲ್ಲಿಯ ನಿವಾಸಿಗಳು ಶ್ರೀ ಶ್ರೀಗಳವರನ್ನು ಅತ್ಯಂತ ಗೌರವದಿಂದ ಬರಮಾಡಿಕೊಂಡರು. ಮಹಾಯೋಗಿಗಳೂ, ಶ್ರೇಷ್ಠ ವಿರಾಗಿಗಳೂ, ಅವಧೂತರೂ ಆಗಿದ್ದ ಸದಾಶಿವ ಬ್ರಹ್ಮೇಂದ್ರ ಸರಸ್ವತಿಯವರ ಸಮಾಧಿಯಲ್ಲಿ ಹಿಂದಿನ ಸಂಪ್ರದಾಯದಂತೆ ಗುರುಗಳು ಸ್ವತಃ ಪೂಜಾದಿಗಳನ್ನು ನೆರವೇರಿಸಿದರು.

ಶ್ರೀ ಸದಾಶಿವೇಂದ್ರ ಸರಸ್ವತಿಯವರಿಗೂ ಶೃಂಗೇರಿಯ ಆಚಾರ್ಯರಿಗೂ ವಿಶೇಷವಾದ ಬಾಂಧವ್ಯವಿದ್ದು, ಶ್ರೀ ಶಿವಾಭಿನವನೃಸಿಂಹಭಾರತೀ ಸ್ವಾಮಿಗಳವರು ತಮ್ಮ ಯೋಗಾಭ್ಯಾಸ ಮತ್ತು ಅದ್ವೈತೋಪಾಸನೆಗಳಲ್ಲಿ ಶ್ರೀ ಸದಾಶಿವೇಂದ್ರರನ್ನೇ ತಮ್ಮ ಆದರ್ಶವನ್ನಾಗಿ ಮಾಡಿಕೊಂಡಿದ್ದರು. ಶ್ರೀ ಚಂದ್ರಶೇಖರಭಾರತಿಯವರಾದರೋ ಆ ಆದರ್ಶವನ್ನೇ ತಾವೂ ಹೊಂದಿದ್ದು, ಅವರಂತೆಯೇ ಅವಧೂತ ಸ್ಥಿತಿಯನ್ನು ಮುಟ್ಟಿದ್ದರು.

ನೆರೂರಿನಿಂದ ತಿರುಚಿರಪಳ್ಳಿಗೆ ದಯಮಾಡಿಸಿ ಅಲ್ಲಿಯೇ ಶ್ರೀ ಶಂಕರಜಯಂತೀ ಉತ್ಸವವನ್ನೂ ವಿದ್ವತ್ಸದಸ್ಸನ್ನೂ ನಡೆಸಿ ಬಹುಜನ ವಿದ್ವಾಂಸರನ್ನು ಸನ್ಮಾನಿಸಿದರು. ಅನಂತರ ಶ್ರೀರಂಗಂ ಕ್ಷೇತ್ರಕ್ಕೆ ದಯಮಾಡಿಸಿದ ಗುರುಗಳನ್ನು ದೇವಸ್ಥಾನದ ಧರ್ಮದರ್ಶಿ ಮಂಡಲಿಯು ಸಕಲ ಮರ್ಯಾದೆಗಳಿಂದ ಸ್ವಾಗತಿಸಿತು. ಶ್ರೀ ರಂಗನಾಥಸ್ವಾಮಿಯವರನ್ನು ದರ್ಶಿಸಿ ಅಲ್ಲಿಂದ ಹೊರಟ ಶ್ರೀ ಶ್ರೀಗಳವರು ಭಿಕ್ಷಾಂಡರ್ ಕೋವಿಲ್, ತಿರುವೈಯ್ಯಾರು, ಮನ್ನಾರ್‌ಗುಡಿ, ತಿರುವಾಯೂರು, ಮಾಯಾವರಂಗಳ ಮೂಲಕ ಧರ್ಮಪುರಿಗೆ ದಯಮಾಡಿ ಧರ್ಮಪುರಿಯಲ್ಲಿ ಶ್ರೀ ಧರ್ಮಪುರಿ ಅಧೀನಂ ಸ್ವಾಮಿಗಳಿಂದ ಸ್ವಾಗತಿಸಿ ಸತ್ಕರಿಸಲ್ಪಟ್ಟು ಶ್ರೀ ಶ್ರೀಗಳವರು ಶಿರ್ಕಾಳಿ, ಕಾಟೂರು, ವೈದ್ಯೇಶ್ವರನ್ ಕೋವಿಲ್ ಮುಖಾಂತರ ಪ್ರಸಿದ್ಧ ಶೈವಕ್ಷೇತ್ರವಾದ ಚಿದಂಬರಕ್ಕೆ ದಯಮಾಡಿಸಿದರು. ರತ್ನಸಭಾಪತಿಯಾದ ಶ್ರೀ ನಟರಾಜನನ್ನು ಅರ್ಚಿಸಿ, ಕಾವೇರೀಪಟ್ಟಣದ ನದೀ ಸಮುದ್ರ ಸಂಗಮದಲ್ಲಿ ಸ್ನಾನ ಮಾಡಿ ತಂಜಾವೂರು [illegible] ಅಯ್ಯಂಪಾಳ್ಯಂ, ಮುಸಿರಿ, ಶ್ರೀನಿವಾಸ ನಲ್ಲೂರು, ಮುಂತಾದೆಡೆಗಳಲ್ಲಿ ಸಂಚರಿಸಿದರು. ಕುಂಭಕೋಣದಲ್ಲಿ ಶ್ರೀ ಕುಂಭೇಶ್ವರನನ್ನು ಗುರುಗಳವರು ಅರ್ಚಿಸಿದರು. ಈ ಪ್ರದೇಶಗಳಲ್ಲೆಲ್ಲಾ ಶ್ರೀ ಶ್ರೀಗಳವರು ಜನಗಳು ತೋರುತ್ತಿದ್ದ ಧರ್ಮಶ್ರದ್ಧೆಯನ್ನು, ಗುರುಭಕ್ತಿಯನ್ನೂ ತುಂಬಾ ಮೆಚ್ಚಿಕೊಂಡರು.

ಆ ವರ್ಷದ (೧೯೫೫) ಚಾತುರ್ಮಾಸ್ಯ ವ್ರತಾಂಗವಾದ ವ್ಯಾಸಪೂಜೆಯು ಶ್ರೀ ರಾಮಸಮುದ್ರದಲ್ಲಿಯೇ ನಡೆಯಿತು. ಶ್ರೀ ಶಂಕರ ಭಗವತ್ಪಾದರ ಅದ್ವೈತ ಸಂದೇಶ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಪ್ರಸಾರಮಾಡುವುದಕ್ಕೂ, ಸನಾತನ ವೈದಿಕ ಧರ್ಮದ ಅಭ್ಯುದಯಕ್ಕಾಗಿಯೂ, ಸಂಘಟಿತ ಕಾರ್ಯಕ್ರಮವನ್ನು ಹಾಕಿಕೊಂಡು ಆ ಧ್ಯೇಯದತ್ತ ಮುಂದುವರೆಯಲು ಅನುಕೂಲವಾಗುವಂತೆ “ ಅಖಿಲಭಾರತ ಶ್ರೀ ಶಂಕರ ಸೇವಾಸಮಿತಿ ” ಯನ್ನು ಶ್ರೀ ಗುರುದೇವರು ಆ ವರ್ಷದ ಚಾತುರ್ಮಾಸ್ಯದ ಅನುಷ್ಠಾನದಲ್ಲಿ ಸ್ಥಾಪಿಸಿದರು. ಆ ಸಮಿತಿಯು ಧರ್ಮಪ್ರಸಾರಕ್ಕಾಗಿಯೇ ಒಂದು ಮಾಸಪತ್ರಿಕೆಯನ್ನು ಪ್ರಕಟಿಸುವಂತೆ ಶ್ರೀ ಶ್ರೀಗಳವರು ಅಪ್ಪಣೆ ಮಾಡಲು, ಶ್ರೀ ಶಂಕರಕೃಪಾ ಮಾಸಪತ್ರಿಕೆಯು ಆರಂಭಗೊಳಿಸಲ್ಪಟ್ಟಿತು. ಶ್ರೀ ಶ್ರೀಗಳವರ ದಿವ್ಯ ಆಶೀರ್ವಾದದಿಂದ ಅಖಿಲಭಾರತ ಸಂಕರ ಸೇವಾ ಸಮಿತಿಯು ವ್ಯಾಪಕವಾದ ಕಾರ್ಯಕ್ರಮವನ್ನು ಆರಂಭಿಸಿತು.*

ಶ್ರೀ ರಾಮುಸಮುದ್ರದಿಂದ ಸೇಲಂ ನಗರಕ್ಕೆ ದಯಮಾಡಿಸಿದ ಜಗದ್ಗುರುಗಳು ಅಲ್ಲಿ ಶರನ್ನವರಾತ್ರೀ ಉತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿ ಅಲ್ಲಿಂದ ತುರೈಯೂರ್, ಮುಸಿರಿ, ತಿರುಕ್ಕೋವಿಲೂರು,ಕಡಲೂರು, ವಿಲ್ಲುಪುರಂ, ರಾಶಿಪುರಂ, ಭವಾನಿ ಮುಂತಾದ ಸ್ಥಳಗಳಲ್ಲಿ ಸಂಚರಿಸಿದರು. ಆ ವೇಳೆಗೆ ಕೊಯಮುತ್ತೂರಿನ ಶಂಕರ ಮಠದ ನಿರ್ಮಾಣವು ಮುಗಿದಿದ್ದು, ಅದರ ಆರಂಭೋತ್ಸವವನ್ನು ನೆರವೇರಿಸಿ, ಅಲ್ಲಿಂದ ಕರೂರು ಪಟ್ಟಣಕ್ಕೆ ಹಿಂದಿರುಗಿ ಶ್ರೀಶಂಕರ ಮಠದ ಶ್ರೀರಾಜರಾಜೇಶ್ವರಿ ಅಮ್ಮನವರ ದೇವಾಲಯದ ಕುಂಭಾಭಿಷೇಕವನ್ನು ನೆರವೇರಿಸಿಕೊಟ್ಟರು. ಅನಂತರ ನಾಮಕ್ಕಲ್, ತಿರಚಂದೂರುಗಳ ಮೂಲಕ ಸೇಲಂ ನಗರಕ್ಕೆ ದಯಮಾಡಿಸಿ ಅಲ್ಲಿಯ ಭಕ್ತರ ಕೋರಿಕೆಯಂತೆ ಶ್ರೀಶಂಕರ ಮಠವನ್ನು ಉದ್ಘಾಟಿಸಿದರು. ಆ ಬಳಿಕ ಧರ್ಮಪುರಿ, ಹೊಸೂರು, ಕೃಷ್ಣಗಿರಿ, ತಿರುಪತ್ತೂರು, ವೆಲ್ಲೂರು, ತಿಂಡಿವನಂ, ಪಾಂಡಿಚೇರಿ, ತಿರುವಣ್ಣಾಮಲೈ, ರಾಣಿಪೇಟೆ, ಚಿತ್ತೂರು ಮುಂತಾದ ಸ್ಥಳಗಳನ್ನು ಸಂದರ್ಶಿಸಿ, ಧಾರ್ಮಿಕ ಜಾಗೃತಿಯನ್ನು ಮೂಡಿಸುತ್ತಾ ಜನಮನವನ್ನು ಸೂರೆಗೊಂಡರು. ಚಿತ್ತೂರು ನಗರದಿಂದ ಹೊರಟು ಗುಡಿಬಂಡೆ ಬಾಗೇಪಲ್ಲಿ, ಪೆನುಗೊಂಡ, ಅನಂತಪುರ ಮುಂತಾದ ನಗರಗಳಲ್ಲಿ ಭಕ್ತರನ್ನು ಅನುಗ್ರಹಿಸಿ ಸುಪ್ರಸಿದ್ಧ ಐತಿಹಾಸಿಕ ಜಾಗೃತ ಸ್ಥಳವಾಗಿದ್ದ ಹಂಪೆಗೆ ದಯಮಾಡಿಸಿದರು.

ಹಂಪೆಗೂ ಶೃಂಗೇರಿ ಆಚಾರ್ಯರಿಗೂ ವಿಶೇಷವಾದ ಸಂಬಂಧವುಂಟು. ಸನಾತನ ವೈದಿಕಧರ್ಮದ ಪುನರುತ್ಥಾನಕ್ಕೂ, ರಾಷ್ಟ್ರಕ್ಕೆ ಬಂದು ಒದಗಿದ್ದ ಶತ್ರುಕಾಟದ ನಿವಾರಣೆಗೂ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯಕ್ಕೆ ಪ್ರೇರಕಶಕ್ತಿ ಬಂದುದೇ ಶೃಂಗೇರಿಯಿಂದ. ಆಗ ಶೃಂಗೇರಿಯ ಆಚಾರ್ಯರಾಗಿದ್ದ ಶ್ರೀ ವಿದ್ಯಾತೀರ್ಥರು ತಮ್ಮ ಇಬ್ಬರು ಶಿಷ್ಯರಾಗಿದ್ದ ಶ್ರೀ ಭಾರತೀತೀರ್ಥ ಮತ್ತು ಶ್ರೀ ವಿದ್ಯಾರಣ್ಯರನ್ನು ಧರ್ಮ ಮತ್ತು ರಾಷ್ಟ್ರ ಸೇವೆಗಾಗಿ ನಿಯೋಜಿಸಿ, ತಮ್ಮ ತಪಶ್ಶಕ್ತಿಯನ್ನು ಮಠದ ಐಶ್ವರ್ಯವನ್ನು ರಾಷ್ಟ್ರೋತ್ಥಾನಕ್ಕಾಗಿ ಧಾರೆಯೆರೆದರು. ಈ ಮಹಾ ತಪಸ್ವಿಗಳ ಬಲದಿಂದಲೇ ಹಕ್ಕ

* ಶ್ರೀ ಶಂಕರಕೃಪಾ ಪತ್ರಿಕೆಯು ತಮಿಳು, ತೆಲಗು ಮತ್ತು ಕನ್ನಡದಲ್ಲಿ ಪ್ರಕಟವಾಗುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬುಕ್ಕರು ವಿಜಯನಗರ ಸಾಮ್ರಾಜ್ಯ ನಿರ್ಮಾಣಕ್ಕೆ ಸ್ಫೂರ್ತಿಯನ್ನು ಪಡೆದು ಕಾರ್ಯೋನ್ಮುಖರಾದುದಲ್ಲವೇ ? ಶ್ರೀ ವಿದ್ಯಾರಣ್ಯರು ತಮ್ಮ ಪೂರ್ಣಾಯುಷ್ಯದ ಕಡೇದಿನಗಳನ್ನು ಕಳೆದುದೂ ಈ ಪವಿತ್ರ ಸ್ಥಳದಲ್ಲಿಯೇ.

ಹಂಪೆಯಲ್ಲಿ ಶ್ರೀ ವಿರೂಪಾಕ್ಷೀ ಮಠದ ಸ್ವಾಮಿಗಳವರಿಂದ ಸ್ವಾಗತಿಸಲ್ಪಟ್ಟ ಶ್ರೀಗಳವರು ಶ್ರೀ ವಿರೂಪಾಕ್ಷನನ್ನು ಸಂದರ್ಶಿಸಿ ಪೂಜಿಸಿದರು, ಶ್ರೀ ವಿದ್ಯಾರಣ್ಯರ ಸ್ಮಾರಕವನ್ನೂ ಹಂಪೆಯ ಪ್ರಾಚೀನ ವೈಭವನ್ನು ಸೂಚಿಸುವ ಸ್ಮಾರಕಗಳನ್ನೂ ಸಂದರ್ಶಿಸಿದ ಶ್ರೀ ಶ್ರೀಗಳವರು ಆ ವರ್ಷದ ಮಹಾಶಿವರಾತ್ರಿ ಪೂಜೆಯನ್ನು ಹಂಪೆಯಲ್ಲಿಯೇ ನೆರವೇರಿಸಿದರು. ಹೊಸಪೇಟೆ, ಸಂಡೂರು, ಕರ್ನೂಲು ನಗರಗಳಲ್ಲಿ ಸಂಚರಿಸಿ ಸುಪ್ರಸಿದ್ಧ ದ್ವಾದಶ ಲಿಂಗಗಳಲ್ಲೊಂದಾದ ಶ್ರೀ ಮಲ್ಲಿಕಾರ್ಜುನ ಲಿಂಗದ ಆವಾಸ ಸ್ಥಾನವಾದ ಶ್ರೀ ಶೈಲಕ್ಕೆ ದಯಮಾಡಿಸಿ ಶ್ರೀ ಭ್ರಮರಾಂಬಿಕೆಯನ್ನೂ, ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರನ್ನೂ ಸ್ವತಃ ಪೂಜಿಸಿ ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಿದರು. ಆ ಬಳಿಕ ಅನಂತಪುರ, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಭಕ್ತರಿತ್ತ ಸ್ವಾಗತವನ್ನು ಸ್ವೀಕರಿಸಿ ಎಲ್ಲರನ್ನೂ ಆಶೀರ್ವದಿಸುತ್ತಾ, ನಾರಾಯಣಪೇಟೆ ಮೆಹೆಬೂಬ್ ನಗರಗಳ ಮುಖಾಂತರ ಆಂಧ್ರಪ್ರದೇಶದ ರಾಜಧಾನಿ ಭಾಗ್ಯನಗರಕ್ಕೆ (ಹೈದರಾಬಾದ್) ದಯಮಾಡಿಸಿದರು.

೧೮. ಅವಿರತವಾದ ಸಂಚಾರ

ವಿವಿಧ ನಾಗರಿಕತೆಗಳ ಸಂಗಮವಾದ ಹೈದರಾಬಾದು ನಗರವು ಶ್ರೀಜಗದ್ಗುರುಗಳವರಿಗೆ ಅಭೂತಪೂರ್ವವಾದ ಸ್ವಾಗತವನ್ನು ನೀಡಿತು. ಸಹಸ್ರಸಂಖ್ಯೆಯಲ್ಲಿ ಸೇರಿದ್ದ ಭಕ್ತ ಸಮೂಹವು ಕಿಷನ್‌ಬಾಗಿನಲ್ಲಿಯೇ ಶ್ರೀ ಶ್ರೀಗಳವರನ್ನು ಮಂಗಳವಾದ್ಯ ಜಯಘೋಷಗಳೊಡನೆ ಸ್ವಾಗತಿಸಿ ಪೆರುಮಾಳ್ ದೇವಸ್ಥಾನಕ್ಕೆ ಕರೆದೊಯ್ದರು. ಅಲ್ಲಿ ರಾಜಾ ತ್ರಿಯಂಬಕ ಲಾಲರು ಧೂಳೀಪಾದಪೂಜೆಯನ್ನು ನೆರವೇರಿಸಿದರು. ಆ ದಿನ ರಾತ್ರಿ ಶ್ರೀ ಶಾರದಾ ಚಂದ್ರಮೌಳೀಶ್ವರ ಪೂಜೆಯನ್ನು ಜಗದ್ಗುರುಗಳವರು ಪೆರುಮಾಳ್‌ದೇವಾಲಯದಲ್ಲಿಯೇ ನೆರವೇರಿಸಿ ಜನವೃಂದಕ್ಕೆ ಆಶೀರ್ವಾದ ಮಾಡಿದರು. ಮಾರನೆಯಸಂಜೆ ಕಿಷನ್ ಬಾಗಿನಿಂದ ಹೊರಟು ಹೈದರಾಬಾದು ನಗರಕ್ಕೆ ಆಗಮಿಸಿದ ಪೂಜ್ಯ ಗುರುಗಳನ್ನು ಅಮಿತವಾದ ಜನಸ್ತೋಮವು ಜಯಘೋಷ ಮಾಡುತ್ತಿರಲು, ಮಂಗಳವಾದ್ಯಗಳು ನಿನಾದವಾಗುತ್ತಿರಲು ಸರ್ಕಾರದ ಅಧಿಕಾರಿಗಳೂ, ಹಿರಿಯ ಪೌರರೂ, ಸನಾತನ ಸಭಾಮಂದಿರದ ಬಳಿ ಭಕ್ತಿ ಗೌರವಗಳಿಂದ ಪೂರ್ಣಕುಂಭದೊಡನೆ ಸ್ವಾಗತಿಸಿ ಬಿಡಾರಕ್ಕೆ ಕರೆದೊಯ್ದರು. ಹೈದರಾಬಾದಿನಲ್ಲಿ ರಾಜಾವೆಂಕಟರಾವ್ ಲಿಂಬೇಕರ್‌ರವರು ಶ್ರೀ ಶಾರದಾ ಶ್ರೀ ಶಂಕರ ದೇವಾಲಯಗಳನ್ನು ನೂತನವಾಗಿ ನಿರ್ಮಿಸಿದ್ದರು. ಶ್ರೀ ಗುರುವರ್ಯರು ಆ ಆಲಯಗಳಲ್ಲಿ ಶ್ರೀ ಶಾರದಾಂಬಾ ಮತ್ತು ಶ್ರೀ ಶಂಕರರ ಪವಿತ್ರ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿ, ಆ ವರ್ಷದ ಶಂಕರ ಜಯಂತಿ ಉತ್ಸವವನ್ನೂ, ವಿದ್ವತ್ಸಭೆಯನ್ನೂ ಜರುಗಿಸಿ ನೂರಾರು ಜನ ವಟುಗಳಿಗೆ ಬ್ರಹ್ಮೋಪದೇಶ ಮಾಡಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಿಂದ ಮುಂದೆ ಸಂಚಾರ ಹೊರಟು ಯಾದಗಿರಿಯ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯವರಿಗೆ ತಮ್ಮ ಪವಿತ್ರ ಕರಕಮಲಗಳಿಂದ ಪೂಜಾಭಿಷೇಕಗಳನ್ನು ನೆರವೇರಿಸಿದರು. ಅನಂತರ ಓರಂಗಲ್, ಖಮ್ಮಮ್ಮೆಟ್ ಮುಖಾಂತರ ಸುಪ್ರಸಿದ್ಧವಾದ ಭದ್ರಾಚಲ ಕ್ಷೇತ್ರಕ್ಕೆ ದಯಮಾಡಿಸಿ, ಭಕ್ತಶ್ರೇಷ್ಠರಾದ ಸಂತ ಶ್ರೀ ರಾಮದಾಸರ ಆರಾಧ್ಯಮೂರ್ತಿಯಾಗಿದ್ದ ಶ್ರೀ ರಾಮಚಂದ್ರ ಸ್ವಾಮಿಯನ್ನು ವಿಶೇಷವಾಗಿ ಪೂಜಿಸಿದರು. ಅನಂತರ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ಸಂಚರಿಸಿ ಏಲೂರು, ತಾಡೇಪಲ್ಲಿ, ರಾಜಮಹೇಂದ್ರಿಗಳಿಗೆ ದರ್ಶನವಿತ್ತು, ಗೋದಾವರೀ ನದೀತೀರದ ಅನೇಕ ಕ್ಷೇತ್ರಗಳನ್ನೂ ಗ್ರಾಮಗಳನ್ನೂ ಸಂದರ್ಶಿಸಿ ಜನಗಳಲ್ಲಿ ಧರ್ಮಶ್ರದ್ಧೆಯನ್ನೂ ಗುರುದೈವಭಕ್ತಿಯನ್ನೂ ಮೂಡಿಸುತ್ತ ಕಾಕಿನಾಡಕ್ಕೆ ದಯಮಾಡಿಸಿದರು. ಅಲ್ಲಿ ಶ್ರೀ ಶ್ರೀಗಳವರ ದಿವ್ಯ ಅಧ್ಯಕ್ಷತೆಯಲ್ಲಿ ಮಹಾ ವಿದ್ವತ್ಸಭೆಯು ನಡೆದು ಆಂಧ್ರಪ್ರದೇಶದ ಶ್ರೇಷ್ಠವಿದ್ವಾಂಸರು ಬಹುಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಗುರುಗಳವರಿಂದ ಸನ್ಮಾನಿಸಲ್ಪಟ್ಟರು. ಕಾಕಿನಾಡದಿಂದ ಹೊರಟ ಶ್ರೀ ಶ್ರೀಗಳವರು ಪೀಠಾಪುರಂ, ವಿಜಯವಾಡ, ರಾಜಮಹೇಂದ್ರಿ, ಅನಂತಾವರಂ, ಕೊಲ್ಲೂರು ಓಂಗೋಲ್, ನೆಲ್ಲೂರುಗಳ ಮಾರ್ಗವಾಗಿ ಮದ್ರಾಸ್ ನಗರಕ್ಕೆ ದಯಮಾಡಿಸಿದರು.

ಶ್ರೀ ಶ್ರೀಗಳವರು ವಿಜಯವಾಡ ನಗರದಲ್ಲಿ ಬಿಡಾರಮಾಡಿದ್ದಾಗಲೇ ಮದ್ರಾಸ ನಗರದ ಪೌರರೂ ಮತ್ತು ಗುರುಭಕ್ತರೂ ಮದ್ರಾಸಿಗೆ ದಯಮಾಡಿಸಲು ಒಕ್ಕೊರಲಿನಿಂದ ಬೇಡಿಕೊಂಡಿದ್ದರು. ಭರತಖಂಡದ ದಕ್ಷಿಣ ಭೂಭಾಗವು ಶ್ರೀ ಶಂಕರರ ದಕ್ಷಿಣಾಮ್ನಾಯಪೀಠದ ಧಾರ್ಮಿಕ ವ್ಯಾಪ್ತಿಗೆ ಸೇರಿದೆಯಷ್ಟೆ? ಶೃಂಗೇರಿಯ ಶ್ರೀ ಜಗದ್ಗುರುಗಳವರು ತಮ್ಮ ಸಂಚಾರಕಾಲದಲ್ಲಿ ತಮ್ಮ ಶಿಷ್ಯರಿರುವ ಎಲ್ಲ ಸ್ಥಳಗಳಿಗೂ ಭೇಟಿ ಕೊಡುವುದಕ್ಕೆ ಕಾಲಾವಕಾಶವಿರುವುದಿಲ್ಲ. ಒಂದೊಂದು ಸಲ ಕೈಕೊಂಡ ಸಂಚಾರವು ಮೂರು ನಾಲ್ಕು ವರ್ಷಗಳ ಪರ್ಯಂತ ವ್ಯಾಪಿಸಿದ್ದರೂ ಅಷ್ಟು ಪರಿಮಿತಿಯಲ್ಲಿ ಎಲ್ಲ ಶಿಷ್ಯರನ್ನು ಅನುಗ್ರಹಿಸಲು ಅವರವರ ಸ್ಥಳಗಳಿಗೆಲ್ಲ ಭೇಟಿಕೊಡಲು ಅಸಾಧ್ಯವಾಗುತ್ತದೆ. ಹೀಗಾಗಿ ಸುಮಾರು ತೊಂಬತ್ತು ವರ್ಷಗಳಿಂದ ಶೃಂಗೇರಿಯ ಆಚಾರ್ಯರಾರೂ ಮದ್ರಾಸಿಗೆ ಭೇಟಿಕೊಟ್ಟಿರಲಿಲ್ಲ.

ಮದ್ರಾಸಿನ ತಿರುವೊಟ್ಟಿಯೂರಿಗೆ ಶ್ರೀ ಶಂಕರಭಗವತ್ಪಾದರು ಆಗಮಿಸಿ ಶ್ರೀ ತ್ರಿಪುರಸುಂದರೀ ದೇವಾಲಯದಲ್ಲಿ ಶ್ರೀಚಕ್ರವನ್ನು ಸ್ಥಾಪಿಸಿದ್ದರೆಂಬ ಪ್ರತೀತಿ ಜನಶ್ರುತಿಯಲ್ಲಿದೆ. ಶ್ರೀ ದ್ವಿತೀಯ ಸಚ್ಚಿದಾನಂದ[redacted]ಸ್ವಾಮಿಗಳವರು (೧೭೦೫–೪೧) ತಿರುಪತಿ ಮತ್ತು ಕಾಳಹಸ್ತಿ ಕ್ಷೇತ್ರಗಳಲ್ಲಿ ಶ್ರೀ ವೆಂಕಟೇಶ್ವರ ಮತ್ತು ಕಾಳಹಸ್ತ್ಯೇಶ್ವರನನ್ನು ಪೂಜಿಸಿ ಅಲ್ಲಿಂದ ಚೆಂಗಲ್ಪಟ್ಟು ಜಿಲ್ಲೆಯಲ್ಲಿ ಸ್ವಲ್ಪಕಾಲ ಸಂಚಾರಮಾಡಿದ್ದರು. ಅನಂತರ ಅವರ ಶಿಷ್ಯರಾಗಿದ್ದ ಶ್ರೀ ಅಭಿನವ ಸಚ್ಚಿದಾನಂದಭಾರತೀಯವರು (೧೭೪೧–೬೭) ತಮ್ಮ ದಿಗ್ವಿಜಯಕಾಲದಲ್ಲಿ ಮದ್ರಾಸು ನಗರದಲ್ಲಿ ಸ್ವಲ್ಪಕಾಲ ಬಿಡಾರಮಾಡಿದ್ದರು. ಅವರ ಬಳಿಕ ಶ್ರೀ ತೃತೀಯ ಸಚ್ಚಿದಾನಂದಭಾರತೀಯವರು (೧೭೭೦–೧೮೧೪) ಸಂಚಾರಮಾಡುತ್ತಾ ಅನೇಕ ಕ್ಷೇತ್ರಗಳನ್ನು ಸಂದರ್ಶಿಸಿಕೊಂಡು ೧೭೯೨ ರಲ್ಲಿ ಮದರಾಸ

Sri Vidyabharathi Book Centre, Sringeri

CC-O. In Public Domain. Digitized by eGangotri

ನಗರಕ್ಕೆ ದಯಮಾಡಿಸಿದ್ದರು. ಪುನಃ ೧೮೦೩ ರಲ್ಲಿ ಮದ್ರಾಸ್ ಗವರ್ನರ್ ಸರ್ ವಿಲಿಯಂ ಬೆಂಟಿಂಕನ ಕೋರಿಕೆಯಂತೆ ಮದರಾಸ್ ನಗರಕ್ಕೆ ಆಗಮಿಸಿದ್ದರು. ಅವರ ನಂತರ ಲಾರ್ಡ್‌ನೇಪಿಯರ್ ಮತ್ತು ಕಮಿಷನರ್ ಕಬ್ಬನ್‌ರವರ ಅಪೇಕ್ಷೆಯಂತೆ ವೃದ್ಧ ಶ್ರೀ ನರಸಿಂಹಭಾರತೀ ಸ್ವಾಮಿಗಳವರು (೧೮೧೭-೧೮೭೯) ಮದರಾಸ್ ನಗರಕ್ಕೆ ೧೮೩೭ ರಲ್ಲಿ ಆಗಮಿಸಿದ್ದರು. ಮತ್ತೊಮ್ಮೆ ೧೮೭೦ ರಲ್ಲಿ ವೃದ್ಧ ಶ್ರೀ ನರಸಿಂಹಭಾರತೀಯವರು ತಮ್ಮ ಶಿಷ್ಯ ಶ್ರೀ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರೊಡನೆ ಮದರಾಸಿಗೆ ಆಗಮಿಸಿ, ಎಂಟು ತಿಂಗಳಕಾಲ ಅಲ್ಲಿದ್ದು ತಮ್ಮ ಪೂಜಾನುಷ್ಠಾನಗಳಿಂದಲೂ, ಬೋಧನೆ ಉಪದೇಶಗಳಿಂದಲೂ, ಭಕ್ತರ ಹೃದಯವನ್ನು ಸೂರೆಗೊಂಡಿದ್ದರು. ಅನಂತರ ಶೃಂಗೇರಿಯ ಗುರುಗಳಾರೂ ಮದರಾಸಿಗೆ ಭೇಟಿಯಿತ್ತಿರಲಿಲ್ಲ.

ಮದ್ರಾಸಿನ ಅಸಂಖ್ಯಾತ ಭಕ್ತರ ಅಪೇಕ್ಷೆಯಂತೆ ಶ್ರೀ ಜಗದ್ಗುರುಗಳವರು ಮದ್ರಾಸ್ ನಗರಕ್ಕೆ ಆಗಮಿಸಿದರು. ಮಂಡಪಂ ಎಂಬಲ್ಲಿ ಸಾವಿರಾರು ಜನ ಕಾದಿದ್ದು ಶ್ರೀ ಶ್ರೀಗಳವರನ್ನು ವೇದಘೋಷ, ನಾದಸ್ವರ, ಮಂಗಳವಾದ್ಯಗಳು, ಜಯಘೋಷ ಗಳೊಡನೆ ಸ್ವಾಗತಿಸಿದರು. ಸಂಸ್ಕೃತ, ತೆಲಗು, ತಮಿಳು ಭಾಷೆಗಳಲ್ಲಿ ಬಿನ್ನವತ್ತಳೆ ಗಳನ್ನು ಅರ್ಪಿಸಿದರು. ಶ್ರೀ ಶ್ರೀಗಳವರು ಜಾರ್ಜ್‌ಟೌನಿನಲ್ಲಿರುವ ಪ್ರಾಚೀನ ಶೃಂಗೇರಿ ಮಠಕ್ಕೆ ಆಗಮಿಸಿ ಅನಂತರ ತ್ಯಾಗರಾಜನಗರದ ಶಿವ ವಿಷ್ಣು ದೇವಾಲಯದಲ್ಲಿ ಅರ್ಚನೆ ಯನ್ನು ನಡೆಸಿ ಉತ್ಸವದಲ್ಲಿ ಕಾಮಾಕ್ಷಿ ಕಲ್ಯಾಣಮಂಟಪಕ್ಕೆ ದಯಮಾಡಿಸಿದರು. ಶ್ರೀ ಶ್ರೀಗಳವರ ದರ್ಶನಕ್ಕಾಗಿ ಚಾತಕಪಕ್ಷಿಗಳಂತೆ ಕಾದಿದ್ದ ಭಕ್ತಕೋಟಿಯು ಶ್ರೀ ಶ್ರೀಗಳವರ ದರ್ಶನದಿಂದ ಅತ್ಯಂತ ಹರ್ಷಿತರಾದರು. "ಜೈ ಜಗದ್ಗುರು ಜೈ ಶಂಕರಾಚಾರ್ಯ" ಎಂದು ಘೋಷಿಸುತ್ತಾ ಭಕ್ತಿ ಶ್ರದ್ಧೆಯ ಸ್ವಾಗತವನ್ನು ನೀಡಿದರು.

ಶ್ರೀ ಜಗದ್ಗುರುಗಳವರು ಆ ವರ್ಷದ ಚಾತುರ್ಮಾಸ್ಯ ವ್ರತದ (೧೯೬೦) ಶ್ರೀ ವ್ಯಾಸಪೂಜೆಯನ್ನು ಮದ್ರಾಸಿನಲ್ಲಿಯೇ ನೆರವೇರಿಸಿದರು. ಅದೇ ಸಮಯದಲ್ಲಿ ಅಲ್ಲಿಗೆ ಆಗಮಿಸಿದ್ದ ರಾಷ್ಟ್ರಾಧ್ಯಕ್ಷ ಶ್ರೀ ರಾಜೇಂದ್ರ ಪ್ರಸಾದ್‌ರವರು ಶ್ರೀ ಜಗದ್ಗುರುಗಳವರ ದರ್ಶನಕ್ಕಾಗಿ ಬಂದು ಧಾರ್ಮಿಕ ವಿಚಾರಗಳನ್ನು ಕುರಿತು ಸಂಭಾಷಿಸಿದರು. ಅತ್ಯಂತ ಭಕ್ತಿಶ್ರದ್ಧೆಯಿಂದ ಪಾದಪೂಜೆ ನಡೆಸಿ ಭಿಕ್ಷಾವಂದನೆಯನ್ನೂ ಸಮರ್ಪಿಸಿದರು. ಪ್ರಾಚೀನ ಕಾಲದ ಚಕ್ರವರ್ತಿ ಜನಕನಂತೆ ಯುಧಿಷ್ಠಿರನಂತೆ ಸಾತ್ವಿಕರೂ ಸೌಜನ್ಯಶೀಲರೂ ಧರ್ಮಶ್ರದ್ಧೆಯುಳ್ಳವರೂ ಆಗಿದ್ದ ಶ್ರೀ ರಾಜೇಂದ್ರ ಪ್ರಸಾದ್‌ರವರನ್ನು "ರಾಷ್ಟ್ರರತ್ನ" ಎಂದು ಅಭಿನಂದಿಸಿ ಪದಕವನ್ನಿತ್ತು, ಶ್ರೀ ಜಗದ್ಗುರುಗಳು ಆಶೀರ್ವದಿಸಿದರು. ಶ್ರೀ ಶ್ರೀಗಳವರನ್ನು ಮದ್ರಾಸಿನ ರಾಜ್ಯಪಾಲರಾದ ಶ್ರೀ ವಿಷ್ಣುರಾಂ ಮೇಧಿ, ಕೇರಳದ ರಾಜ್ಯ ಪಾಲ ಶ್ರೀ ಬಿ. ರಾಮಕೃಷ್ಣರಾವ್ ಮತ್ತು ಅನೇಕ ಜನ ಪ್ರಮುಖರು ದರ್ಶನ ಮಾಡಿ ಆಶೀರ್ವಾದ ಪಡೆದರು. ಶ್ರೀ ಶ್ರೀಗಳವರನ್ನು ಅಮೇರಿಕದ ರಾಯಭಾರಿ ಎಲ್ಸ್‌ವರ್ತ್. ಬಂಕರ್‌ರವರು ಭೇಟಿಮಾಡಿ ಧಾರ್ಮಿಕ ವಿಚಾರಗಳಲ್ಲಿ ಗುರುದೇವರೊಡನೆ ಸಂಭಾಷಣೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನಡೆಸಿದರು. ಪ್ರಪಂಚದಲ್ಲಿ ಶಾಂತಿಯನ್ನು ಮೂಡಿಸಲು ಯುದ್ಧಗಳು ಸೂಕ್ತವಾರ್ಗವಲ್ಲ ಎಂಬುದನ್ನು ಸ್ಪಷ್ಟಪಡಿಸಿದ ಗುರುವರ್ಯರು "ಯುದ್ಧಗಳು ನಿಜವಾದ ಶಾಂತಿಯನ್ನು ತರಲಾರವು. ಕ್ರೌರ್ಯ ಮತ್ತು ದೌಷ್ಟ್ಯದ ಪ್ರತಿಯೊಂದು ಕೆಲಸವೂ ಕ್ರೂರ ಮತ್ತು ದುಷ್ಟ ಫಲವನ್ನೇ ಕೊಡುತ್ತವೆ. ಈ ಜನನ ಮರಣಗಳೇ ಜೀವನದ ಆದಿ ಅಂತ್ಯಗಳಲ್ಲ. ಹಿಂದಿ ಫಲವನ್ನು ಅನುಭವಿಸಲು ಪದೇ ಪದೇ ಹುಟ್ಟುತ್ತಲೆ ಇರುತ್ತೇವೆ. ಜನನ-ಜೀವನ-ಮರಣ ಮತ್ತೆ ಜನನ ಹೀಗೆ ಇದು ಸಾಗುತ್ತಲೇ ಇರುತ್ತದೆ. ವಿಶ್ವದ ನಾಯಕರೆಂದೆನಿಸಿಕೊಂಡವರು ಇದನ್ನು ಅರ್ಥಮಾಡಿಕೊಂಡಲ್ಲಿ ದುಷ್ಟ ಫಲವನ್ನು ಕೊಡುವ ಕ್ರೋಧ ವೈಮನಸ್ಯಗಳನ್ನು ಬೆಳೆಸುವ ಯುದ್ಧವೇ ಮುಂತಾದ ಕೃತ್ಯಗಳಲ್ಲಿ ತೊಡಗಲು ಅವರು ಹಿಂಜರಿಯುತ್ತಾರೆ ಆಗ ಸ್ವಾಭಾವಿಕವಾಗಿ ಅವರ ಗಮನ ಒಳ್ಳೆಯ ಕೆಲಸಗಳ ಕಡೆಗೆ ಹರಿಯುತ್ತದೆ. ಅದ ವಿಶ್ವಶಾಂತಿಗೆ ನಾಂದಿಯಾಗುತ್ತದೆ" ಎಂದು ಅಪ್ಪಣೆ ಕೊಡಿಸಿದರು.

ಶ್ರೀಗುರುಗಳವರು ಮದ್ರಾಸಿನಲ್ಲಿ ಆಗ ಜರುಗಿಸಿದ ಗಣಪತಿ ವಿದ್ವತ್‌ಸದಸ್ಸು ಅತ್ಯಂತ ಶ್ರೇಷ್ಠ ಪಂಡಿತರ ಸಮ್ಮೇಳನವಾಗಿತ್ತು. ಆಂಧ್ರ, ಕರ್ನಾಟಕ, ತಮಿಳುನಾಡು, ಕೇರಳ, ಬಂಗಾಳ, ಮಹಾರಾಷ್ಟ್ರ ಮುಂತಾದ ಸ್ಥಳಗಳಿಂದ ಬಂದಿದ್ದ ಪಂಡಿತರನ್ನು ವಿಶೇಷವಾಗಿ ಸನ್ಮಾನಿಸಿದರು. ಶ್ರೀ ಶ್ರೀಗಳವರು ಮದ್ರಾಸ್ ನಗರದ ವಿಸ್ತೀರ್ಣವಾದ ರಾಜಾಅಣ್ಣಾ ಮಲೈಪುರದಲ್ಲಿ ನವಸುಜ ಎಂಬ ವಿಸ್ತಾರವಾದ ಭವನದಲ್ಲಿ ಬಿಡಾರ ಮಾಡಿದ್ದಾಗ ಶ್ರೀ ಶಿವ ಗಂಗಾ ಶೃಂಗೇರಿ ಪೀಠಾಧಿಪತಿಗಳಾದ ಶ್ರೀ ಸುಬ್ರಹ್ಮಣ್ಯಭಾರತೀ ಸ್ವಾಮಿಗಳವರು ಮತ್ತು ಬಂಡಿಗಡಿ ಪೀಠಾಧಿಪತಿಗಳಾದ ಶ್ರೀ ರಾಮಚಂದ್ರಾನಂದಭಾರತೀ ಸ್ವಾಮಿಗಳವರು ಶ್ರೀ ಶ್ರೀಗಳವರ ಸಂದರ್ಶನಕ್ಕಾಗಿ ಬಂದಿದ್ದರು. ನವರಾತ್ರಿ ಪೂಜಾದಿಗಳೂ ಚಂಡಿಹೋಮವೂ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟು ಸಹಸ್ರಾರು ಜನ ಆ ಉತ್ಸವಗಳಲ್ಲಿ ಪಾಲ್ಗೊಂಡಿದ್ದರು.

ಶ್ರೀ ಶ್ರೀಗಳವರು ಮದರಾಸ್ ನಗರದಲ್ಲಿದ್ದಾಗ ಆಂಧ್ರಪ್ರದೇಶದ ಮಂತ್ರಿ ಶ್ರೀ ಚಂದ್ರ ಮೌಳಿಯವರು ಜಗದ್ಗುರುಗಳ ದರ್ಶನ ಪಡೆದು ತಿರುಪತಿ ಶ್ರೀ ವೆಂಕಟೇಶ್ವರ ದೇವಾಲಯ ದಲ್ಲಿ ವ್ಯವಸ್ಥೆಗೊಳಿಸಲಾಗಿದ್ದ ಅಖಿಲ ಭಾರತ ವಿದ್ವತ್ ಸಭೆಯ ಅಧ್ಯಕ್ಷತೆಯನ್ನು ವಹಿಸ ಬೇಕೆಂದು ಪ್ರಾರ್ಥಿಸಿದರು. ಅವರ ಕೋರಿಕೆಯಂತೆ ಶ್ರೀ ಶ್ರೀಗಳವರು ತಿರುಪತಿಗೆ ದಯ ಮಾಡಿಸಿದರು. ಶ್ರೀ ಶ್ರೀಗಳವರನ್ನು ದೇವಾಲಯದ ಧರ್ಮದರ್ಶಿಗಳು ಸಮಸ್ತ ಮರ್ಯಾದೆ ಗಳನ್ನು ನೀಡಿ ಜಗದ್ಗುರುಗಳವರನ್ನು ಭಕ್ತಿ ಶ್ರದ್ಧೆಯಿಂದ ಸ್ವಾಗತಿಸಿದರು. ಶ್ರೀ ಶ್ರೀಗಳವರು ದೇವಾಲಯದಲ್ಲಿ ಅರ್ಚನಾದಿಗಳನ್ನು ನೆರವೇರಿಸಿ. ಒಂದನೂರಎಂಟು ದಳಗಳಿಂದ ಮತ್ತು ರತ್ನ ಪದಕದಿಂದ ಶೋಭಿತವಾದ ಸುವರ್ಣ ಮಾಲಿಕೆಯನ್ನು ಶ್ರೀ ವೆಂಕಟೇಶ್ವರಸ್ವಾಮಿಗೆ ಅರ್ಪಿಸಿದರು. ವಿದ್ವಾಂಸರ ಸಭೆಯ ಅಧ್ಯಕ್ಷತೆ ವಹಿಸಿ ಅವರೆಲ್ಲರನ್ನೂ ಆಶೀರ್ವದಿಸಿ ಅನು ಗ್ರಹಿಸಿದರು. ಅಲ್ಲಿ ನೆರೆದಿದ್ದ ಸಂಸ್ಕೃತ ವಿದ್ವಾಂಸರ ಸಮೂಹವನ್ನು ಉದ್ದೇಶಿಸಿ ಭಾಷಣ ಮಾಡುತ್ತಾ "ಸಂಸ್ಕೃತ ಭಾಷೆಯು ಸರ್ವರಿಗೂ ಸ್ಫೂರ್ತಿದಾಯಿನಿಯಾದ ವಿಶ್ವಭಾಷೆ ಅದಕ್ಕೆ ಪ್ರೋತ್ಸಾಹ ಇಲ್ಲದಿರುವುದರಿಂದ ಜನಸಾಮಾನ್ಯರಲ್ಲಿ ಅದರ ಬಳಕೆ ಕಡಿಮೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಗಿದೆ. ನಮ್ಮ ಪೂರ್ವಜರು ತಾವು ಮಾಡುತ್ತಿದ್ದ ಪ್ರತಿಯೊಂದು ಕೆಲಸಕ್ಕೂ ಸೂಕ್ತವಾದ ಕಾರಣವನ್ನು ಹೊಂದಿದ್ದರು. ಯಾವ ಕೆಲಸವನ್ನೇ ಆಗಲಿ ಅಂಧ ಶ್ರದ್ಧೆಯಿಂದ ಮಾಡುತ್ತಿರಲಿಲ್ಲ. ಪ್ರತಿಯೊಂದು ಕಾರ್ಯದ ಹಿಂದೆಯೂ ವೈಚಾರಿಕ ನಿರ್ಣಯವಿದ್ದೇ ಇರುತ್ತಿತ್ತು. ಆ ದಿನಗಳಲ್ಲಿಯೂ ತಮಗೆ ಪೂರ್ಣವಾಗಿ ಒಪ್ಪಿಗೆಯಾಗದೆ, ಜನ ಯಾವ ಕೆಲಸದಲ್ಲೂ ಕೈಹಾಕುತ್ತಿರಲಿಲ್ಲ. ಆಗ ಜನಗಳನ್ನು ಅಡ್ಡದಾರಿಗಳೆಯುವವರೂ ದೇವಸ್ಥಾನಗಳಿಗೆ ಹೋಗುವವರನ್ನ ಕುಚೋದ್ಯ ಮಾಡುವ ನಾಸ್ತಿಕರೂ ಇದ್ದರು. ಇಂತಹ ಜನಗಳ ಮಧ್ಯೆ ನಮ್ಮ ಪೂರ್ವಜರು ವೈಚಾರಿಕ ಶ್ರದ್ಧೆಯನ್ನು ಬೆಳಸಿ, ಉಳಿಸಿಕೊಂಡು ಧರ್ಮ ಜೀವನ ನಡೆಸುತ್ತಿದ್ದರು.

"ಎಷ್ಟೋ ದೇವಸ್ಥಾನಗಳು ಇರುವಾಗ ತಿರುಪತಿಯಂತಹ ದೇವಸ್ಥಾನಗಳಿಗೆ ಏಕೆ ಹೋಗಬೇಕೆಂದು ಜನ ಕೇಳಬಹುದು. ಅದಕ್ಕೆ ಕಾರಣ ಆ ದೇವಾಲಯಗಳ ಪ್ರಾಚೀನತೆ ಮತ್ತು ಅನೇಕ ಜನ ಮಹಾತ್ಮರು ಆ ದೇವಮೂರ್ತಿಗಳನ್ನ ಅರ್ಚಿಸಿರುವುದರಿಂದ ಅವುಗಳಲ್ಲಿ ಮೂಡಿಸುವ ಸಹಜವಾದ ಮಾಹಾತ್ಮ್ಯ. ಹಿಂದೆ ಮತಧರ್ಮವು ರಾಷ್ಟ್ರದ ಐಕ್ಯತೆಯನ್ನು ರಕ್ಷಿಸುವುದರಲ್ಲಿ ಪ್ರಮುಖ ಪಾತ್ರವಹಿಸಿತು, ಹಲವಾರು ಜನ ರಾಜರು ಹಲವಾರು ರಾಜ್ಯಗಳಲ್ಲಿ ಆಳುತ್ತಿದ್ದರೂ, ಜನತೆಯು ಅನುಸರಿಸುತ್ತಿದ್ದ ಮತ ಧರ್ಮ ಒಂದೇ ಆಗಿತ್ತು. ಇತರ ರಾಜರ ಸೀಮೆಯಲ್ಲಿದ್ದ ತೀರ್ಥಕ್ಷೇತ್ರಗಳ ದರ್ಶನಕ್ಕೆ ಹೋಗಲು ತನ್ನ ಪ್ರಜೆಗಳನ್ನು ಯಾವರಾಜನೂ ಅಡ್ಡಿಪಡಿಸುತ್ತಿರಲಿಲ್ಲ. ಪಂಜಾಬ್ ಅಥವಾ ಉತ್ತರಪ್ರದೇಶದಲ್ಲಿದ್ದ ಜನಗಳು ಕಾಶೀಕ್ಷೇತ್ರವು ತಮಗೆ ಸಮೀಪವಾಗಿಯೇ ಇದ್ದರೂ, ರಾಮೇಶ್ವರ ಕ್ಷೇತ್ರಕ್ಕೆ ಯಾತ್ರೆ ಮಾಡದ ಹೊರತು ತೃಪ್ತರಾಗುತ್ತಿರಲಿಲ್ಲ. ದಕ್ಷಿಣದೇಶಗಳಲ್ಲಿದ್ದ ಜನ ಕಾಶಿಗೆ ಹೋದ ಹೊರತು ತಮಗೆ ಮೋಕ್ಷ ದೊರಕದು, ಎಂದು ನಂಬಿದ್ದರು. ಹೀಗೆ ನಮ್ಮ ಹಿಂದಿನವರನ್ನು ಒಟ್ಟುಗೂಡಿಸಿದ್ದ ಪ್ರಾಚೀನ ಧರ್ಮ, ಸಂಸ್ಕೃತಿ ಮತ್ತು ಸಂಸ್ಕೃತ ಭಾಷೆಗಳು ಇಂದೂ ಮತ್ತು ಮುಂದೆಯೂ ನಮ್ಮೆಲ್ಲರನ್ನು ಒಟ್ಟುಗೂಡಿಸುವ ಶಕ್ತಿಯನ್ನು ಹೊಂದಿವೆ. ಹೀಗೆ ನಮ್ಮ ಹಿಂದಿನವರನ್ನ ಮಹತ್ತಿಗೇರಿಸಿದ ಈ ಧರ್ಮ, ಸಂಸ್ಕೃತಿ ಮತ್ತು ಸಂಸ್ಕೃತಗಳನ್ನ, ಭವಿತವ್ಯದ ದೃಷ್ಟಿಯಿಂದ ನಾವು ಪೋಷಿಸಬೇಕಾದುದು ನಮ್ಮೆಲ್ಲರ ಕರ್ತವ್ಯ, ಎಂಬುದನ್ನು ಮರೆಯದಿರೋಣ" ಎಂದು ಅಪ್ಪಣೆ ಕೊಡಿಸಿದರು. ಅದೇ ಸಮಯದಲ್ಲಿ ತಿರುಪತಿಯಲ್ಲಿದ್ದ ಪ್ರಾಚೀನ ಶಂಕರಮಠವನ್ನು ಆ ಮಠಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಶ್ರೀ ಜಗದ್ಗುರುಗಳವರಿಗೆ ಕಾಣಿಕೆಯಾಗಿ ಸಮರ್ಪಿಸಿದರು. ಆ ಕಟ್ಟಡದ ಮೇಲ್ವಿಚಾರಣೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಿ ಶ್ರೀ ಶ್ರೀಗಳವರು ತಿರುತ್ತಣಿ, ಕಾಳಹಸ್ತಿಗಳ ಮೂಲಕ ಮದ್ರಾಸಿಗೆ ಹಿಂದಿರುಗಿದರು.

ಮದ್ರಾಸ್‌ನಗರದ ಜಾರ್ಜ್‌ಟೌನಿನಲ್ಲಿದ್ದ ಪ್ರಾಚೀನ ಶಂಕರಮಠವನ್ನು ಪುನರುದ್ಧಾರಗೊಳಿಸಿದ ಶ್ರೀ ಶ್ರೀಗಳವರು ತ್ಯಾಗರಾಜನಗರದ ಭಕ್ತರ ಪ್ರಾರ್ಥನೆಯಂತೆ ಅಲ್ಲಿ ನೂತನ ಶಂಕರ ಮಠದ ನಿರ್ಮಾಣಕ್ಕೆ ಅಸ್ತಿಭಾರವನ್ನು ಹಾಕಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀಗಳವರು ಅನೇಕ ಜನ ಭಕ್ತರ ಕೋರಿಕೆಯಂತೆ ಸುಪ್ರಸಿದ್ಧ ಕ್ಷೇತ್ರವಾದ ಕಾಂಚೀಪುರಕ್ಕೆ ದಯಮಾಡಿಸಿದರು. ಕಾಂಚೀಪುರದಲ್ಲಿ ಇರುವ ಪ್ರಾಚೀನ ಶೃಂಗೇರಿ ಶಂಕರ ಮಠದಲ್ಲಿಯೇ ಬಿಡಾರವಮಾಡಿ ಮೂರು ದಿನಗಳಕಾಲ ಪೂಜಾನುಷ್ಠಾನಗಳನ್ನು ನೆರವೇರಿಸಿದರು. ಪ್ರಾಚೀನ ಮತ್ತು ನೂತನ ಕಾಮಾಕ್ಷಿ ದೇವಾಲಯವನ್ನು ಶ್ರೀ ವರದರಾಜ ಶ್ರೀ ಏಕಾಂಬರ ದೇವಾಲಯಗಳನ್ನೂ ಶ್ರೀ ಶ್ರೀಗಳವರು ಸಂದರ್ಶಿಸಿದಾಗ ಆಯಾ ದೇವಾಲಯಗಳಲ್ಲಿ ಪೂರ್ಣಕುಂಭದೊಂದಿಗೆ ಸಮಸ್ತ ಮರ್ಯಾದೆಗಳಿಂದ ಜಗದ್ಗುರುಗಳನ್ನು ಸ್ವಾಗತಿಸಿದರು. ಕಾಂಚೀಪುರದಿಂದ ಹೊರಟು ಪಕ್ಷಿತೀರ್ಥ ಮಹಾಬಲಿಪುರಗಳನ್ನು ಸಂದರ್ಶಿಸಿ ಮದ್ರಾಸಿನ ತಿರುವಲ್ಲಿಕ್ಕೇಣಿಯಲ್ಲಿ ಶಿವರಾತ್ರಿಯ ಪೂಜೆಯನ್ನು ನೆರವೇರಿಸಿದರು. ಶ್ರೀ ಶ್ರೀಗಳವರು ಮದ್ರಾಸಿನಲ್ಲಿದ್ದಾಗಲೇ ಆಂಧ್ರಪ್ರದೇಶದ ನೂರಾರು ಸ್ಥಳಗಳಿಂದ ಅವರನ್ನು ಆಹ್ವಾನಿಸಿ ಪ್ರಾರ್ಥನಾಪತ್ರಗಳು ಬರುತ್ತಿದ್ದವು. ಶಿಷ್ಯರ ಕೋರಿಕೆಯನ್ನು ಮನ್ನಿಸಿ ಶ್ರೀ ಶ್ರೀಗಳವರು ಆಂಧ್ರಪ್ರದೇಶದ ಸಂಚಾರವನ್ನು ಆರಂಭಿಸಿದರು.

ಮದ್ರಾಸಿನಿಂದ ಹೊರಟು ಅಂಬತ್ತೂರು ನಾಯ್ಡುಪೇಟೆ, ನೆಲ್ಲೂರುಗಳ ಮುಖಾಂತರ ಓಂಗೋಲಿಗೆ ಭೇಟಿನೀಡಿ ಗುಂಟೂರಿಗೆ ದಯಮಾಡಿಸಿದರು. ಅಲ್ಲಿ ಶ್ರೀ ಶಂಕರಮಠದ ಕಟ್ಟಡಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಿ ಅಲ್ಲಿಂದ ವಿಜಯವಾಡಕ್ಕೆ ದಯಮಾಡಿಸಿದರು. ಶ್ರೀ ಶಂಕರಜಯಂತೀ ಮಹೋತ್ಸವವೂ, ವಿದ್ವತ್ಸಭೆಯೂ ವಿಜಯವಾಡದಲ್ಲಿಯೇ ನಡೆದವು. ಅದೇ ಸಮಯದಲ್ಲಿ ನೂರಾರು ಜನ ವಟುಗಳಿಗೆ ಧರ್ಮೋಪನಯನಗಳನ್ನೂ ನಡೆಸಿದರು. ವಿಜಯವಾಡದಿಂದ ಕೊಲ್ಲೂರಿಗೆ ದಯಮಾಡಿಸಿ ಅಲ್ಲಿಯ ಪಂಡಿತ ಸಭೆಯು ಏರ್ಪಡಿಸಿದ್ದ ವಿದ್ವತ್ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಆಂಧ್ರಪ್ರದೇಶದ ಬಹುಜನ ವಿದ್ವಾಂಸರನ್ನು ಸೂಕ್ತ ಸಂಭಾವನೆಗಳಿಂದ ಪುರಸ್ಕರಿಸಿ ವಿಜಯವಾಡಕ್ಕೆ ಹಿಂದಿರುಗಿದರು.

ವಿಜಯವಾಡ ನಗರದಲ್ಲಿ ಆರ್ಯವೈಶ್ಯ ಜನಾಂಗದವರು ಶ್ರೀ ಜಗದ್ಗುರುಗಳವರನ್ನು ಸಂದರ್ಶಿಸಿದರು. ತಮ್ಮ ಜನಾಂಗಕ್ಕೂ ಶ್ರೀ ಮಠಕ್ಕೂ ಇದ್ದ ಹಲವು ಭಿನ್ನಾಭಿಪ್ರಾಯಗಳನ್ನು ವಿವರಿಸಿ ಶ್ರೀ ಶ್ರೀಗಳವರಿಂದ ಅವುಗಳಿಗೆ ಸೂಕ್ಷ್ಮಪರಿಹಾರವನ್ನು ಕೋರಿಕೊಂಡರು. ಶ್ರೀ ಶ್ರೀಗಳವರ ಉತ್ತರಗಳಿಂದ ತೃಪ್ತರಾದ ವೈಶ್ಯಮಂಡಲಿಯು ಶ್ರೀ ಶ್ರೀಗಳವರನ್ನು ತಮ್ಮ ಜನಾಂಗದ ಪರವಾಗಿ ಭಕ್ತಿ ಶ್ರದ್ಧೆಯಿಂದ ಸ್ವಾಗತಿಸಿ ಬಿನ್ನವತ್ತಳೆಯನ್ನೂ ಪಾದಪೂಜೆಗಳನ್ನೂ ನೆರವೇರಿಸಿದರು. ಶ್ರೀ ಗುರುಗಳವರಿಂದ ತೀರ್ಥಪ್ರಸಾದವನ್ನೂ ಆಶೀರ್ವಾದ ಅನುಗ್ರಹಗಳನ್ನೂ ಪಡೆದರು, ವಿಜಯವಾಡ ನಗರದ ಪುರಪ್ರಮುಖರು ಈ ಸಂದರ್ಭದಲ್ಲಿ ಪುರಾತನವಾದ ಶಂಕರ ಮಠವನ್ನು ಜಗದ್ಗುರುಗಳವರಿಗೆ ಸಮರ್ಪಿಸಿದರು. ಅನಂತರ ಮಚಲೀಪಟ್ಟಣ, ಶ್ರೀಕಾಕುಲಂ, ಗುಡಿವಾಡ ಪುಂಜಾವಾರಂ ಮುಖಾಂತರ ತೆನಾಲಿ ಪಟ್ಟಣಕ್ಕೆ ಆಗಮಿಸಿದರು. ಅಲ್ಲಿದ್ದ ಪಿನಪಾಡು ಶ್ರೀ ವಿದ್ಯಾಶಂಕರ ಭಾರತೀ ಸ್ವಾಮಿಗಳವರು ಶ್ರೀ ಜಗದ್ಗುರುಗಳವರ ದರ್ಶನಮಾಡಿ ತಾವು ನಡೆಸುತ್ತಿದ್ದ ಶಂಕರಮಠದ ವಿಶಿಷ್ಟ ಅಧಿಕಾರವನ್ನೂ ಶ್ರೀ ಗುರುಗಳವರಿಗೆ ಅರ್ಪಿಸಿದರು. ಅನಂತರ ರೇಪಲ್ಲಿ, ಶ್ರೀಕಾಳ, ನಾಗಾ

Sri Vidyabharathi Book Centre, Sringeri

CC-O. In Public Domain. Digitized by eGangotri

ರ್ಜುನಸಾಗರದ ಮುಖಾಂತರ ಹೈದರಾಬಾದಿಗೆ ಆಗಮಿಸಿ ಅಲ್ಲಿಯ ಆರ್ಯವೈಶ್ಯ ಜನಾಂಗದವರೊಡನೆಯೂ ಸಂಭಾಷಿಸಿ ಅವರ ಅನುಮಾನಗಳನ್ನು ಪರಿಹರಿಸಿದರು. ಆ ಜನಾಂಗದವರ ಅರಿಕೆಯಂತೆಯೇ ಶ್ರೀ ಗುರುಗಳವರು ಹೈದರಾಬಾದಿಗೆ ಮತ್ತೆ ಆಗಮಿಸಿದ್ದುದು. ಅವರ ಭಕ್ತಿ ಕಾಣಿಕೆಗಳನ್ನೂ, ಪಾದಪೂಜೆಗಳನ್ನೂ ಒಪ್ಪಿಸಿಕೊಂಡು ಅವರನ್ನೆಲ್ಲಾ ಆಶೀರ್ವದಿಸಿದರು.

ಹೈದರಾಬಾದಿನಿಂದ ಜಗ್ಗಯ್ಯ ಪೇಟೆಯ ಮುಖಾಂತರ ಗುಂಟೂರಿಗೆ ಆಗಮಿಸಿ ಶ್ರೀ ಶ್ರೀಗಳವರು ಶ್ರೀಶಂಕರ ಮಠದಲ್ಲಿ ಶ್ರೀಶಂಕರಾಚಾರ್ಯರ ಮೂರ್ತಿಯನ್ನು ಪ್ರತಿಷ್ಠೆ ಮಾಡಿದರು. ಆಂಧ್ರಸರ್ಕಾರದ ಪರವಾಗಿ ಮಂತ್ರಿ ಶ್ರೀ ಚಂದ್ರಮೌಳಿಯವರು ಶ್ರೀ ಶ್ರೀಗುರುಗಳವರ ಧರ್ಮ ಪ್ರಸಾರ ಕಾರ್ಯವನ್ನು ಬಹುವಾಗಿ ಪ್ರಶಂಸಿಸಿ ಶ್ರೀ ಶಾರದಾದೇವಿಯ ಸ್ವರ್ಣ ವಿಗ್ರಹವನ್ನೂ ಶ್ರೀ ಗಂಧದ ಕರಂಡವನ್ನೂ ಜಗದ್ಗುರುಗಳವರಿಗೆ ಸಮರ್ಪಿಸಿದರು. ಇದೇ ಸಮಯದಲ್ಲಿ ಅಖಿಲಭಾರತ ಶಂಕರ ಸೇವಾ ಸಮಿತಿಯ ಆಂಧ್ರಶಾಖೆಯು ಉದ್ಘಾಟಿಸಲ್ಪಟ್ಟು ಶ್ರೀ ಶಂಕರಕೃಪಾ ತೆಲಗು ಮಾಸ ಪತ್ರಿಕೆಯು ಜಗದ್ಗುರುಗಳವರಿಂದ ಪ್ರಕಟಣಗೊಳಿಸಲ್ಪಟ್ಟಿತು.

ಗುಂಟೂರಿನಿಂದ ವಿಜಯಯಾತ್ರೆ ಹೊರಟು ನರಸರಾಜಪೇಟೆ, ಮಾರ್ಕಾಪುರಗಳ ಮೂಲಕ ಗುರುಗಳವರು ಶ್ರೀಶೈಲಕ್ಕೆ ದಯಮಾಡಿಸಿದರು. ಶ್ರೀಶೈಲದಲ್ಲಿ ಶ್ರೀ ಭ್ರಮರಾಂಬ ಮಲ್ಲಿಕಾರ್ಜುನರನ್ನು ಸ್ವತಃ ಪೂಜೆಮಾಡಿ ಸಹಸ್ರ ರೂಪಾಯಿಗಳ ನಿಧಿಯನ್ನು ಸ್ವಾಮಿಯ ಸೇವೆಗಾಗಿ ಅರ್ಪಿಸಿದರು. ಅಲ್ಲಿಂದ ಕಡಪನಗರಕ್ಕೆ ಆಗಮಿಸಿದ ಶ್ರೀ ಶ್ರೀಗಳವರನ್ನು ಶೃಂಗೇರಿಯ ಶಾಖಾಮಠವಾದ ಪುಷ್ಪಗಿರಿ ಮಠದ ಸ್ವಾಮಿಗಳು ಸ್ವಾಗತಿಸಿ ಸತ್ಕರಿಸಿದರು. ಕಡಪದಿಂದ ಹೊರಟು ಧರ್ಮಾವರಂ, ಯಲಹಂಕಗಳ ಮೂಲಕ ಕಲ್ಯಾಣ ನಗರವಾದ ಬೆಂಗಳೂರಿಗೆ ಆಗಮಿಸಿದರು.

ಕರ್ಣಾಟಕದ ರಾಜಧಾನಿಯಲ್ಲಿ ಶ್ರೀ ಜಗದ್ಗುರುಗಳವರನ್ನು ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರೂ, ನಗರದ ಮೇಯರ್‌ರವರೂ, ಸರ್ಕಾರದ ಉನ್ನತ ಅಧಿಕಾರಿಗಳೂ, ಪುರಪ್ರಮುಖರೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತಜನರೂ ಸ್ವಾಗತಿಸಿದರು. ಶ್ರೀ ಶ್ರೀಗಳವರಿಗೆ ನಾಗರಿಕರ ಪರವಾಗಿ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರ್‌ರವರು ಭಕ್ತಿಪೂರ್ವಕವಾದ ಬಿನ್ನವತ್ತಳೆಯನ್ನರ್ಪಿಸಿದರು. ಆ ವರ್ಷದ ಚಾತುರ್ಮಾಸ್ಯದ (೧೯೬೧) ಅನುಷ್ಠಾನವು ಬೆಂಗಳೂರಿನಲ್ಲಿಯೇ ವೈಭವಯುತವಾಗಿ ನಡೆಯಿತು. ಅದೇ ಸಮಯದಲ್ಲಿ ಪುಷ್ಪಗಿರಿಯ ಸ್ವಾಮಿಗಳೂ ಆಗಮಿಸಿ ಜಗದ್ಗುರುಗಳವರ ಸನ್ನಿಧಿಯಲ್ಲಿಯೇ ತಾವೂ ಸಹ ಚಾತುರ್ಮಾಸ್ಯ ವ್ರತವನ್ನು ಕೈಗೊಂಡರು.

ಶ್ರೀ ಗಣಪತಿ ವಿದ್ವತ್ಸಭೆಯು ಬೆಂಗಳೂರು ಶಂಕರ ಮಠದಲ್ಲಿಯೇ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಆ ವಿದ್ವತ್ಸದಸ್ಸಿಗೆ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶ್ವರತೀರ್ಥ ಶ್ರೀ ಪಾದಂಗಳವರೂ ಆಗಮಿಸಿದ್ದರು, ನಾನಾ ದೇಶಗಳಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದಿದ್ದ ಪಂಡಿತ ಗೋಷ್ಠಿಯನ್ನು ನೋಡಲು ಪ್ರತಿದಿನವೂ ಸಾವಿರಾರು ಜನ ಕಿಕ್ಕಿರಿದು ಸೇರುತ್ತಿದ್ದರು. ನವರಾತ್ರಿ ಉತ್ಸವವೂ ಬೆಂಗಳೂರಿನಲ್ಲಿಯೇ ನಡೆದು ಸಹಸ್ರಾರು ಜನರಿಗೆ ಅನ್ನದಾನವು ಮಠದ ವೆಚ್ಚದಿಂದ ನಡೆಯಿತು. ಶ್ರೀ ಶ್ರೀಗಳವರ ವರ್ಧಂತಿ ಸುಸಂದರ್ಭದಲ್ಲಿ ಅಖಿಲಭಾರತ ಶಂಕರಸೇವಾ ಸಮಿತಿಯ ಕರ್ಣಾಟಕದ ಶಾಖೆಯು ಉದ್ಘಾಟಿಸಲ್ಪಟ್ಟು ಶ್ರೀ ಶಂಕರಕೃಪಾ ಕನ್ನಡ ಪತ್ರಿಕೆಯು ಪ್ರಾರಂಭಿಸಲ್ಪಟ್ಟಿತು. ಜಗದ್ಗುರುಗಳ ದರ್ಶನಕ್ಕಾಗಿ ಉಪರಾಷ್ಟ್ರಪತಿ ರಾಧಾಕೃಷ್ಣನ್, ರಾಜ್ಯಪಾಲ ಜಯಚಾಮರಾಜ ಒಡೆಯರ್ ಮೊದಲಾದವರು ಆಗಮಿಸಿದ್ದರು.

೧೯. ವಿಜಯಯಾತ್ರೆ

ಕಲ್ಯಾಣ ನಗರಿಯಿಂದ ದಿಗ್ವಿಜಯವನ್ನು ಮುಂದುವರೆಸಿದ ಶ್ರೀ ಶ್ರೀಗಳವರು ರಾಮನಗರ, ಚನ್ನಪಟ್ಟಣ, ಮದ್ದೂರು, ಕೃಷ್ಣರಾಜಪೇಟೆಗಳ ಮೂಲಕ ಅರಕಲಗೂಡಿನ ರುದ್ರಪಟ್ಟಣಕ್ಕೆ ದಯಮಾಡಿಸಿದರು.

ರುದ್ರಪಟ್ಟಣದಲ್ಲಿ ರಾಷ್ಟ್ರದ ಕಲ್ಯಾಣಕ್ಕಾಗಿಯೂ, ಜನತೆಯ ಕ್ಷೇಮಾಭ್ಯುದಯಕ್ಕಾಗಿಯೂ, ಅತಿರುದ್ರಸ್ವಾಹಾಕಾರ ಮಹಾಯಾಗವನ್ನು ಶಿಷ್ಯರ ಕೋರಿಕೆಯಂತೆ ಆರಂಭಿಸಿದರು. ಹತ್ತು ದಿನಗಳ ಪರ್ಯಂತ ನಡೆದ ಆ ಮಹಾಕ್ರತುವಿನ ದರ್ಶನಕ್ಕಾಗಿ ಆಗಮಿಸಿದ್ದ ಲಕ್ಷಾಂತರ ಜನರಿಗೆ ತೀರ್ಥಪ್ರಸಾದಗಳನ್ನು ಅನುಗ್ರಹಿಸಿದ ಗುರುಗಳವರು ಸಾತ್ವಿಕ ಜೀವನ, ಧರ್ಮಾನುಷ್ಠಾನಗಳನ್ನು ಕುರಿತು ಉಪದೇಶವನ್ನು ಅನುಗ್ರಹಿಸಿದರು.

ಶ್ರೀ ಶ್ರೀಗಳವರು ರುದ್ರಪಟ್ಟಣದಲ್ಲಿ ಇದ್ದಾಗ ಶ್ರೀ ಚಿನ್ಮಯಾನಂದರು ಅವರ ದರ್ಶನ ಮಾಡಿ, ತಾವು ಬೊಂಬಾಯಿನಲ್ಲಿ ಪ್ರಾರಂಭಿಸಲು, ಉದ್ದೇಶಿಸಿರುವ ಸಾಂದೀಪನೀ ವಿದ್ಯಾಲಯದ ವಿವರಗಳನ್ನು ಕುರಿತು ಮಾತನಾಡಿದರು. ಶ್ರೀ ಶ್ರೀಗಳವರು ಶ್ರೀ ಚಿನ್ಮಯಾನಂದರ ಮಹತ್ಕಾರ್ಯಕ್ಕೆ ಯಶಸ್ಸು ಕೋರಿ ಫಲಮಂತ್ರಾಕ್ಷತೆಯಿತ್ತು ಆಶೀರ್ವದಿಸಿದರು. ಅನಂತರ ಶ್ರೀ ಶ್ರೀಗಳವರು ಅಲ್ಲಿಂದ ಹೊರಟು ಕೊಣನೂರು, ಸಾಲಿಗ್ರಾಮ, ಬೆಟ್ಟದಪುರ, ಹುಣಸೂರುಗಳ ಮುಖಾಂತರ ಪ್ರಸಿದ್ಧ ಶೈವಕ್ಷೇತ್ರವಾದ ನಂಜನಗೂಡಿಗೆ ದಯಮಾಡಿಸಿದರು. ಅಲ್ಲಿಯ ಶಂಕರಮಠದಲ್ಲಿಯೇ ಬಿಡಾರಮಾಡಿ ಶ್ರೀ ಶ್ರೀಕಂಠೇಶ್ವರ ಸ್ವಾಮಿಯನ್ನು ಪ್ರಾಚೀನ ಸಂಪ್ರದಾಯದಂತೆ ವಿಶೇಷವಾಗಿ ಪೂಜಾಭಿಷೇಕಗಳಿಂದ ತಣಿಸಿದರು. ಅಲ್ಲಿಂದ ಹೊರಟು ಮೈಸೂರು ನಗರಕ್ಕೆ ದಯಮಾಡಿಸಿದರು.

ಜಗದ್ಗುರು ಮಹಾಸ್ವಾಮಿಗಳವರನ್ನು ಮೈಸೂರಿನ ಪುರಜನ ಅತ್ಯಂತ ಉತ್ಸಾಹಗಳಿಂದ ಸ್ವಾಗತಿಸಿದರು. ಮಹಾರಾಜರು ಸಮಸ್ತ ರಾಜಗೌರವಗಳನ್ನು ಕಳಿಸಿ ಪುರದ್ವಾರದಲ್ಲಿ ಶ್ರೀ ಶ್ರೀಗಳವರನ್ನು ಸ್ವಾಗತಿಸಿದರು. ಶ್ರೀಜಗದ್ಗುರುಗಳವರನ್ನು ಬಂಗಾರದ ಪಲ್ಲಕ್ಕಿಯಲ್ಲಿ ಅರಮನೆಗೆ ಕರೆದುಕೊಂಡು ಬಂದಾಗ, ಶ್ರೀ ಮಹಾರಾಜರವರು ಉತ್ಸವ ಅರಮನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾಗಿಲಿಗೆ ಆಗಮಿಸಿದಾಗ ರಸ್ತೆಯಲ್ಲಿಯೇ ಸಾಷ್ಟಾಂಗ ಪ್ರಣಾಮಮಾಡಿ, ಮಹಾಸ್ವಾಮಿಗಳವರನ್ನು ಸ್ವಾಗತಿಸಿದರು. ಪಾಲಕಿಗೆ ಭುಜವನ್ನು ಕೊಟ್ಟು ಅರಮನೆಯವರೆಗೂ ಬಿಜಯಮಾಡಿಸಿದರು. ಶ್ರೀ ಶ್ರೀಗಳವರು ಅಂದು ಮಧ್ಯಾಹ್ನ ಅರಮನೆಯಲ್ಲಿಯೇ ಸ್ನಾನಾನುಷ್ಠಾನಗಳನ್ನು ನಡೆಸಿ, ಚಂದ್ರಮೌಳೀಶ್ವರರ ಪೂಜೆಯನ್ನು ನೆರವೇರಿಸಿದರು. ಮಹಾರಾಜರವರೂ, ರಾಜಮನೆತನದವರೂ ನಡೆಸಿದ ಪಾದಪೂಜೆ, ಸತ್ಕಾರಗಳನ್ನು ಸ್ವೀಕರಿಸಿದರು. ಮಹಾರಾಜರವರು ಶ್ರೀ ಜಗದ್ಗುರುಗಳವರನ್ನು ಕರೆದುಕೊಂಡು ಅರಮನೆ ಪೂಜಾ ಗೃಹಗಳು ಮತ್ತು ಇತರ ಮುಖ್ಯ ಭಾಗಗಳನ್ನೆಲ್ಲಾ ತೋರಿಸಿದರು. ಮಹಾರಾಜರವರನ್ನೂ ಕುಟುಂಬದವರನ್ನೂ ಆಶೀರ್ವದಿಸಿ, ಶ್ರೀ ಶ್ರೀಗಳವರು ಸಂಜೆ ಉತ್ಸವದಲ್ಲಿ ಅಭಿನವ ಶಂಕರಾಲಯಕ್ಕೆ ದಯಮಾಡಿಸಿದರು.

ಅಲ್ಲಿಯೇ ಒಂದು ಮಾಸ ಪರ್ಯಂತ ಬಿಡಾರ ಮಾಡಿದ ಶ್ರೀ ಶ್ರೀಪಾದರು ಅಷ್ಟ ಗ್ರಹಯೋಗದ ದುಷ್ಟಪರಿಣಾಮದ ನಿವಾರಣೆಗಾಗಿ ಶಂಕರಮಠದ ಆವರಣದಲ್ಲಿಯೇ ವಿಶೇಷ ಹವನ ಹೋಮಾದಿಗಳನ್ನು ನಡೆಸಿದರು. ಪ್ರತಿರಾತ್ರಿಯೂ ಶ್ರೀ ಶ್ರೀಗಳವರು ನಡೆಸುತ್ತಿದ್ದ ಶ್ರೀ ಚಂದ್ರಮೌಳೀಶ್ವರ ಪೂಜೆ ಬಹುಜನರ ಕಣ್ಮನಗಳಿಗೆ ಅಪೂರ್ವವಾದ ಹಬ್ಬವಾಗಿತ್ತು. ಪೂಜೆಗಾಗಿ ಫಲಪುಷ್ಪಗಳನ್ನು ಅಭಿಷೇಕಕ್ಕಾಗಿ ಕ್ಷೀರವನ್ನೂ ಭಕ್ತರು ಯಥೇಚ್ಛವಾಗಿ ತಂದೊಪ್ಪಿಸುತ್ತಿದ್ದರು. ಶ್ರೀ ಶ್ರೀಗಳವರನ್ನು ದರ್ಶನಮಾಡಲು ಅವರ ಉಪದೇಶವನ್ನು ಆಲ್ಯೈಸಲು ಜನರು ಕಿಕ್ಕಿರಿದು ಸೇರುತ್ತಿದ್ದರು. ಚಾಮುಂಡಿಬೆಟ್ಟಕ್ಕೆ ದಯಮಾಡಿಸಿ ಶ್ರೀ ಚಾಮುಂಡೇಶ್ವರಿಯನ್ನು ಸ್ವತಃ ಅರ್ಚನೆಮಾಡಿ ಶ್ರೀಮನ್ಮಹಾರಾಜರವರಿಗೆ ಮಂತ್ರೋಪದೇಶವನ್ನು ಅನುಗ್ರಹಿಸಿದ ಶ್ರೀ ಶ್ರೀಗಳವರು ತಿರುಮಕೂಡಲು, ನರಸೀಪುರ, ಚಾಮರಾಜನಗರ, ಗುಂಡ್ಲುಪೇಟೆ, ಶ್ರೀರಂಗಪಟ್ಟಣ, ತಲಕಾಡು, ಕೊಳ್ಳೇಗಾಲ ಮುಂತಾದ ಪಟ್ಟಣಗಳ ಮೂಲಕ ಮಂಡ್ಯಕ್ಕೆ ದಯಮಾಡಿಸಿದರು.

ಮಂಡ್ಯದಲ್ಲಿ ನೂತನವಾಗಿ ನಿರ್ಮಿತವಾಗಿದ್ದ ದೇವಾಲಯದಲ್ಲಿ ಭಕ್ತರ ಕೋರಿಕೆಯಂತೆ ಶ್ರೀ ಶಂಕರಾಚಾರ್ಯರ ಮೂರ್ತಿಯನ್ನು ಪ್ರತಿಷ್ಠೆಮಾಡಿ ತಾವೇ ಪೂಜಾದಿಗಳನ್ನು ನೆರವೇರಿಸಿದರು. ಮಂಡ್ಯದಿಂದ ಪ್ರಯಾಣ ಹೊರಟು ಶ್ರೀ ಶ್ರೀಗಳವರು ಬೆಂಗಳೂರು ನಗರಕ್ಕೆ ಆಗಮಿಸಿದರು, ಅಲ್ಲಿ ನಗರದ ಪ್ರಮುಖರಿಂದ ಸ್ವಾಗತಿಸಲ್ಪಟ್ಟು ಶ್ರೀ ಶಂಕರ ಮಠದಲ್ಲಿಯೇ ಬಿಡಾರ ಮಾಡಿದರು. ಆ ವರ್ಷದ ಮಹಾಶಿವರಾತ್ರಿ ಪೂಜೆಯು ಶಂಕರ ಮಠದಲ್ಲಿಯೇ ನಡೆದು ಶ್ರೀ ಶ್ರೀಗಳವರು ನಾಲ್ಕುಯಾಮಗಳಲ್ಲಿಯೂ ಶ್ರೀ ಚಂದ್ರಮೌಳೀಶ್ವರನಿಗೆ ಅಭಿಷೇಕ ಪೂಜಾದಿಗಳನ್ನು ನೆರವೇರಿಸಿದರು. ಅಪರೂಪವಾದ ಆ ದೃಶ್ಯವನ್ನು ವೀಕ್ಷಿಸಲು ಪರಸ್ಥಳಗಳಿಂದಲೂ ಬಂದಿದ್ದ ಬಹುಜನ ಭಕ್ತರು ನೆರೆದಿದ್ದು, ಶ್ರೀ ರುದ್ರ ಮಂತ್ರ ಮತ್ತು ಇತರ ಅಭಿಷೇಕ ಸೂಕ್ತಗಳ ಪಠಣದ ಆ ಸನ್ನಿವೇಶದಲ್ಲಿ ಶ್ರೀ ಚಂದ್ರಮೌಳೀಶ್ವರನನ್ನು ತಲ್ಲೀನರಾಗಿ ಅರ್ಚನೆಮಾಡುತ್ತಿದ್ದ ಶ್ರೀ ಗುರುಮಹಾರಾಜರನ್ನು ದರ್ಶಿಸಿ ಧನ್ಯತೆಯ ಭಾವವನ್ನು ಅನುಭವಿಸುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮದರಾಸು ನಗರದಲ್ಲಿನ ಭಕ್ತರನೇಕರು ಬೆಂಗಳೂರಿಗೆ ಬಂದು ಶ್ರೀ ಶ್ರೀಗಳವರನ್ನು ಸಂದರ್ಶಿಸಿ, ಮದರಾಸಿನಲ್ಲಿ ತಾವು ನಿರ್ಮಿಸುತ್ತಿದ್ದ ಆಲಯದಲ್ಲಿ ಶ್ರೀ ಪದ್ಮನಾಭಸ್ವಾಮಿ ಪ್ರತಿಷ್ಠೆಯನ್ನು ನೆರವೇರಿಸಿಕೊಡಬೇಕೆಂದು ವಿಜ್ಞಾಪನೆ ಮಾಡಿದ್ದರು, ಶಿಷ್ಯರ ಕೋರಿಕೆಯಂತೆ ಶ್ರೀ ಗುರುವರ್ಯರು ಚಿಂತಾಮಣಿ. ರಾಣಿಪೇಟೆಗಳ ಮೂಲಕ ಮದರಾಸು ನಗರಕ್ಕೆ ಚಿತ್ತೈಸಿ ಅತ್ಯಧಿಕ ಸಂಖ್ಯೆಯಲ್ಲಿ ಸೇರಿದ್ದ ಭಕ್ತರಿಂದ ಶ್ರದ್ಧಾಪೂರ್ವಕವಾಗಿ ಸ್ವಾಗತಿಸಲ್ಪಟ್ಟರು. ನಗರದ ಅಡ್ಯಾರ್ ವಿಸ್ತರಣದಲ್ಲಿ ನೂತನವಾಗಿ ನಿರ್ಮಿತವಾಗಿದ್ದ ಶ್ರೀ ಪದ್ಮನಾಭಸ್ವಾಮಿಯ ದೇವಾಲಯದಲ್ಲಿ ಶ್ರೀ ಪದ್ಮನಾಭಸ್ವಾಮಿಯನ್ನು ಪ್ರತಿಷ್ಠೆಮಾಡಿ, ದೇವಾಲಯದ ಶಿಖರಕ್ಕೆ ಕುಂಭಾಭಿಷೇಕವನ್ನು ಸಹಸ್ರಸಹಸ್ರ ಜನ ಭಕ್ತರ ಸಂಭ್ರಮದ ಜಯಘೋಷಗಳ ನಡುವೆ ನೆರವೇರಿಸಿದರು. ಅನಂತರ ಜಾರ್ಜ್‌ಟೌನ್ ವಿಸ್ತರಣದಲ್ಲಿ ಪುನರ್ನವೀಕರಿಸಲ್ಪಟ್ಟಿದ್ದ ಶ್ರೀ ಶಂಕರಮಠವನ್ನು ಉದ್ಘಾಟಿಸಿದರು. ಮದರಾಸಿನ ಕಾರ್ಯಕ್ರಮಗಳನ್ನು ಪೂರೈಸಿಕೊಂಡು ಉಳಂದೂರುಪೇಟೆ, ಶ್ರೀರಂಗಂ, ಕರೂರು ನಗರಗಳ ಮುಖಾಂತರ ಕೊಯಮತ್ತೂರು ನಗರಕ್ಕೆ ದಯಮಾಡಿಸಿದ ಶ್ರೀ ಶ್ರೀಗಳವರು ಅಲ್ಲಿಯ, ಶ್ರೀ ಶಂಕರಮಠದಲ್ಲಿಯೇ ಬಿಡಾರ ಮಾಡಿದರು.

ಕೊಯಮತ್ತೂರಿನ ವಿಸ್ತರಣವಾದ ಪೆರೂರಿನಲ್ಲಿ ಮೈಸೂರಿನ ಶ್ರೀ ಕೃಷ್ಣ ಅಯ್ಯರ್ ಎಂಬುವರು ನೂತನವಾಗಿ ನಿರ್ಮಿಸಿದ್ದ ದೇವಾಲದಲ್ಲಿ ಶ್ರೀ ಗುರುಗಳವರು ಪಂಚಮುಖೀ ಗಣಪತಿಯನ್ನು ಪ್ರತಿಷ್ಠೆ ಮಾಡಿ ಕುಂಭಾಭಿಷೇಕವನ್ನು ನಡೆಸಿದರು. ಅಯ್ಯರ್‌ರವರು ಆ ದೇವಾಲಯವನ್ನೂ ಅದಕ್ಕೆ ಸೇರಿದಂತಹ ಎಲ್ಲ ಆಸ್ತಿಪಾಸ್ತಿಯನ್ನೂ ಶ್ರೀ ಶ್ರೀಗಳವರಿಗೆ ಒಪ್ಪಿಸಲು, ಅದನ್ನು ಸ್ವೀಕರಿಸಿ ದೇವಾಲಯದ ಆಡಳಿತ, ಪೂಜಾದಿಗಳಿಗೆ ಸಮರ್ಪಕವಾದ ವ್ಯವಸ್ಥೆಯನ್ನು ಮಾಡಿದರು. ಕೃಷ್ಣ ಅಯ್ಯರ್‌ರವರನ್ನೂ ಸಹಸ್ರಾರು ಜನ ಭಕ್ತರನ್ನೂ ಆಶೀರ್ವದಿಸಿ ಶ್ರೀ ಶ್ರೀಗಳವರು ಕಾಲಟೀ ಕ್ಷೇತ್ರಕ್ಕೆ ದಯಮಾಡಿಸಿದರು.

ಶ್ರೀ ರಾಮಕೃಷ್ಣ ಮಿಷನ್ನಿನ ಯತಿವರ್ಗದವರು ಕಾಲಟೀ ಕ್ಷೇತ್ರದಲ್ಲಿ ಶ್ರೀ ಶಂಕರ ಕಾಲೇಜ್ ಎಂಬ ಪ್ರಥಮ ದರ್ಜೆಯ ಪ್ರೌಢ ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದರು. ಹಲವು ವರ್ಷಗಳ ನಂತರ ಆ ಸಂಸ್ಥೆಯು ನಾನಾಕಷ್ಟಗಳನ್ನು ಎದುರಿಸಿ, ಕಾಲೇಜು ಮುಚ್ಚುವ ಸ್ಥಿತಿಯೊದಗಿತ್ತು. ಈ ವಿಚಾರವನ್ನು ತಿಳಿದ ಗುರುವರ್ಯರು, ಆ ಕಾಲೇಜನ್ನು ಪುನರ್‌ವ್ಯವಸ್ಥೆಗೊಳಿಸುವ ಸಲುವಾಗಿಯೇ ಕಾಲಟಿಗೆ ದಯಮಾಡಿಸಿದರು. ತಮ್ಮ ಶಿಷ್ಯರ ಸಭೆಯನ್ನು ಏರ್ಪಡಿಸಿ ಕಾಲೇಜನ್ನು ತಾವು ವಹಿಸಿಕೊಳ್ಳುವ ನಿರ್ಧಾರ ಮಾಡಿದರು. ಕಾಲೇಜಿನ ಪೋಷಣೆ ಮತ್ತು ಅಭಿವೃದ್ಧಿಗೆ ಸೂಕ್ತವಾದ ಸಲಹೆಗಳನ್ನಿತ್ತು ಒಂದು ಶಾಶ್ವತವಾದ ನಿಧಿಯನ್ನು ಏರ್ಪಡಿಸಿದರು. ಆ ನಿಧಿಗೆ ತಿರುವಾಂಕೂರಿನ ಮಹಾರಾಜರವರು ಕಾಣಿಕೆಯಾಗಿ ಇಪ್ಪತ್ತೈದು ಸಹಸ್ರ ರೂಪಾಯಿಗಳ ವಂತಿಗೆಯನ್ನಿತ್ತರು. ಕಾಲೇಜಿನ ಆಡಳಿತ ನಿರ್ವಹಣೆಗಾಗಿ ಒಂದು ಧರ್ಮದರ್ಶಿ ಮಂಡಳಿಯನ್ನು ನೇಮಿಸಿದ ಶ್ರೀ ಶ್ರೀಗಳವರು, ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವಂತೆ ಅವರಿಗೆ ಸೂಚನೆಯಿತ್ತರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲಟಿಯಿಂದ ವಿಜಯಯಾತ್ರೆ ಹೊರಟು ಕೊಯಮುತ್ತೂರಿನ ಮೂಲಕ ಸೇಲಂ ನಗರಕ್ಕೆ ಬಂದು ಅಲ್ಲಿ ಶೃಂಗೇರೀ ಮಠದ ಕಲ್ಯಾಣಮಂಟಪವನ್ನು ಉದ್ಘಾಟಿಸಿ, ಬೆಂಗಳೂರು ನಗರಕ್ಕೆ ಆಗಮಿಸಿದರು. ಅಲ್ಲಿ ಶ್ರೀ ಶಿವಾಭಿನವ ನರಸಿಂಹ ಭಾರತೀ ಮಹಾಸನ್ನಿಧಾನದ ಆರಾಧನೆಯನ್ನು ನೆರವೇರಿಸಿ, ಕುಮಾರಾಪಾರ್ಕ್ ವಿಸ್ತರಣದಲ್ಲಿ ನೂತನವಾಗಿ ನಿರ್ಮಿತವಾಗಿದ್ದ ದೇವಾಲಯದಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯನ್ನು ಪ್ರತಿಷ್ಠಿಸಿ ಕುಂಭಾಭಿಷೇಕವನ್ನು ನಡೆಸಿದರು. ಬೆಂಗಳೂರಿನಿಂದ ಹೊರಟು ಮಾಗಡಿ, ಕುಣಿಗಲ್, ಚನ್ನರಾಯಪಟ್ಟಣಗಳ ಮುಖಾಂತರ ಶ್ರವಣಬೆಳಗೊಳಕ್ಕೆ ದಯಮಾಡಿಸಿದರು.

ಆ ಜೈನ ಕ್ಷೇತ್ರದಲ್ಲಿ ಸ್ಥಳೀಯ ಜೈನ ಮಠದಿಂದ ಸ್ವಾಗತಿಸಲ್ಪಟ್ಟು, ಶ್ರೀ ಶ್ರೀಗಳವರು ಪ್ರಾಚೀನ ಸ್ಮಾರಕಗಳನ್ನು ವೀಕ್ಷಿಸಿ, ಹಾಸನಕ್ಕೆ ಆಗಮಿಸಿದರು. ಅಲ್ಲಿಯ ನಿವಾಸಿಗಳು ಭವ್ಯವಾದ ಸ್ವಾಗತವನ್ನಿತ್ತು ಶ್ರೀ ಜಗದ್ಗುರುಗಳವರನ್ನು ಬರಮಾಡಿಕೊಂಡರು. ಹಾಸನದಲ್ಲಿ ಶ್ರೀ ಮಠದ ಭಕ್ತರಾದ ರಾವ್‌ಬಹದ್ದೂರ್ ಗುರುಭಕ್ತತಿಲಕ ನಂಜುಂಡಯ್ಯನವರೂ ಅವರ ಮಕ್ಕಳೂ ಅತ್ಯಂತ ಸಂತೋಷದಿಂದ ಭಕ್ತಿಯಿಂದ ತಮ್ಮ ಸ್ವಗೃಹವನ್ನೂ ಅದಕ್ಕೆ ಹೊಂದಿಕೊಂಡಂತೆ ಇದ್ದ ವಿಶಾಲವಾದ ಸ್ಥಳವನ್ನೂ ಸ್ವಾಮಿಗಳವರಿಗೆ ಅರ್ಪಿಸಿದರು. ಗುರುಜ್ಯೋತಿ ಎಂಬ ಆ ಕಟ್ಟಡದಲ್ಲಿ ಶ್ರೀ ಶಂಕರಮಠವನ್ನು ಉದ್ಘಾಟಿಸಿದ ಶ್ರೀ ಶ್ರೀಗಳವರು, ಹಾಸನದಿಂದ ಹೊರಟು ಅರಕಲಗೂಡು, ಸಕಲೇಶಪುರದ ಮಾರ್ಗವಾಗಿ ಬೇಲೂರಿಗೆ ಆಗಮಿಸಿದರು.

ಬೇಲೂರಿನಲ್ಲಿ ಸುಪ್ರಸಿದ್ಧವಾದ ಶ್ರೀ ಚನ್ನಕೇಶವ ಸ್ವಾಮಿಯವರ ಆಲಯದಲ್ಲಿ ದರ್ಶನಾದಿಗಳನ್ನು ನಡೆಸಿ, ಆಲಯದ ಕಲ್ಯಾಣಮಂಟಪದಲ್ಲಿಯೇ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ನೆರವೇರಿಸಿ, ಹರಿಹರರಲ್ಲಿ ಅಭೇದವನ್ನು ಸಾರಿದರು. ಹಳೆಯಬೀಡಿನಲ್ಲಿಯೂ ಭಕ್ತರಿಂದ ಸ್ವಾಗತಿಸಲ್ಪಟ್ಟು ಶ್ರೀಪಾದರು ಅಲ್ಲಿನ ಪ್ರಾಚೀನ ಆಲಯಕ್ಕೂ ಸಂದರ್ಶನವಿತ್ತು, ಚಿಕ್ಕಮಗಳೂರು, ಸಖರಾಯಪಟ್ಟಣದ ಮೂಲಕ ಕಡೂರಿಗೆ ಆಗಮಿಸಿದರು. ಅಲ್ಲಿ ಗಮಕಿ ಶ್ರೀ ರಾಮಕೃಷ್ಣಶಾಸ್ತ್ರಿಗಳವರಿಂದ ರಚಿಸಲ್ಪಟ್ಟಿದ್ದ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ಪುಣ್ಯಚರಿತ್ರೆ ಎಂಬ ಗ್ರಂಥವನ್ನು ಪ್ರಕಟಿಸಿ, ಅಜ್ಜಂಪುರ, ಹೊಸದುರ್ಗಗಳ ಮೂಲಕ ಚಿತ್ರದುರ್ಗಕ್ಕೆ ದಯಮಾಡಿಸಿದರು. ಅಲ್ಲಿನ ಶಿಷ್ಯರನ್ನು ಅನುಗ್ರಹಿಸಿ ಚಳ್ಳಕೆರೆ, ಹಿರಿಯೂರು, ಮಧುಗಿರಿಯ ಮುಖಾಂತರ ತುಮಕೂರು ನಗರಕ್ಕೆ ದಯಮಾಡಿಸಿ, ಅಲ್ಲಿನ ಜನತೆಯ ಪ್ರಾರ್ಥನೆಯಂತೆ ಶ್ರೀ ಶಂಕರಮಠವನ್ನು ಸ್ಥಾಪಿಸಿದರು. ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳವರಿಂದ ಆಹ್ವಾನಿಸಲ್ಪಟ್ಟ ಶ್ರೀ ಮಹಾಸನ್ನಿಧಾನವು ಸಿದ್ಧಗಂಗೆಗೆ ದಯಮಾಡಿಸಿ, ನೆರೆದಿದ್ದ ಸಹಸ್ರಾರು ಜನ ಭಕ್ತರಿಗೆ ಹಿತೋಪದೇಶವಿತ್ತು, ತುಮಕೂರು ತಿಪಟೂರುಗಳ ಮುಖಾಂತರ ಪುನಃ ಬೇಲೂರಿಗೆ ದಯಮಾಡಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗುರುಗಳವರು ಬೇಲೂರಿಗೆ ಮೊದಲ ಸಲ ಭೇಟಿ ಇತ್ತ ಸಂದರ್ಭದಲ್ಲಿ ಅ ಭಕ್ತರೇ ತರಿಸಿ ಇಟ್ಟಿದ್ದ ಶ್ರೀ ಶಂಕರಾಚಾರ್ಯರ ವಿಗ್ರಹವನ್ನು ಕಂಡು, ಅದನ್ನು ಪ್ರತಿ ಮಾಡದೆ ಹಾಗೆಯೇ ಇಟ್ಟುಕೊಳ್ಳುವುದು ಶ್ರೇಯಸ್ಕರವಲ್ಲವೆಂದು ಸ್ಪಷ್ಟಪಡಿಸಿ, ತಾ ಮತ್ತೊಮ್ಮೆ ಬೇಲೂರಿಗೆ ಬರುವುದರೊಳಗಾಗಿ ಮೂರ್ತಿ ಪ್ರತಿಷ್ಠೆಗೆ ವ್ಯವಸ್ಥೆ ಮಾ ಬೇಕೆಂದು ಶಿಷ್ಯವರ್ಗಕ್ಕೆ ಅಪ್ಪಣೆಮಾಡಿದ್ದರು. ಅಲ್ಲಿನ ಪೋಲೀಸು ಇಲಾಖೆಯವರು ಒಂದು ದಿವ್ಯವಾದ ಶ್ರೀ ಗಣಪತಿಮೂರ್ತಿಯನ್ನು ತಮ್ಮ ಕಛೇರಿಯ ಆವರಣದ ಪ್ರತಿಷ್ಠೆಮಾಡಬೇಕೆಂದು ಪ್ರಾರ್ಥಿಸಿದ್ದರು. ಶ್ರೀ ಶ್ರೀಗಳವರು ಪೋಲೀಸು ಠಾಣೆ ಆವರಣದಲ್ಲಿ ಶ್ರೀ ಗಣಪತಿಯನ್ನೂ ಶ್ರೀ ಶಿವದೇವಸ್ಥಾನದಲ್ಲಿ ಶ್ರೀ ಶಂಕರಾಚಾರ್ಯ ಪ್ರತಿಷ್ಠೆಯನ್ನೂ ಅತ್ಯಂತ ವೈಭವದಿಂದ ನೆರವೇರಿಸಿದರು. ಬೇಲೂರಿನ ಶಿಷ್ಯರ ಶ್ರದ್ಧಾ ಭಕ್ತಿಗಳನ್ನು ಮೆಚ್ಚಿಕೊಂಡು ಅವರೆಲ್ಲರಿಗೂ ತೀರ್ಥಪ್ರಸಾದಗಳನ್ನು ಅನುಗ್ರಹಿಸಿ ಅಲ್ಲಿಂದ ಯಾತ್ರೆಯನ್ನು ಆರಂಭಿಸಿ ತಿಪಟೂರು, ಅರಸೀಕೆರೆ, ತರೀಕೆರೆ, ನರಸಿಂಹರಾಜ ಪುರಗಳ ಮೂಲಕ ಹುಲ್ಲುಗಾರು ಗ್ರಾಮಕ್ಕೆ ಆಗಮಿಸಿ ಶ್ರೀ ಋಷ್ಯಶೃಂಗಪುರ ಕ್ಷೇತ್ರದಲ್ಲಿ ಶ್ರೀ ಋಷ್ಯಶೃಂಗೇಶ್ವರರನ್ನೂ ಶ್ರೀ ಶಾಂತಾದೇವಿಯವರನ್ನೂ ಆನಂದದಿಂದ ಅರ್ಚಿಸಿದರು. ದಾರಿಯುದ್ದಕ್ಕೂ ಹರ್ಷ ಸಂಭ್ರಮದಿಂದ ಸ್ವಾಗತಿಸುತ್ತಾ, ಜಯಘೋಷ ಮಾಡುತ್ತಿದ್ದ ಭಕ್ತವರ್ಗವನ್ನು ಹರಸುತ್ತಾ ತಮ್ಮ ಸ್ವಕ್ಷೇತ್ರವಾದ ಶ್ರೀ ಶೃಂಗೇರಿ ಪುಣ್ಯಕ್ಷೇತ್ರಕ್ಕೆ ದಯಮಾಡಿಸಿದರು.

ಸಮಾರು ಆರೂವರೆ ವರ್ಷಗಳ ಕಾಲ ಶೃಂಗೇರಿಯ ದಕ್ಷಿಣಾಮ್ನಾಯ ಪೀಠದ ವ್ಯಾಪ್ತಿಗೆ ಒಳಪಟ್ಟಂತಹ ಸೀಮೆಯಲ್ಲಿ ದಿಗ್ವಿಜಯ ಮಾಡಿ ಹಿಂದಿರುಗಿದ್ದ ಶ್ರೀ ಜಗದ್ಗುರು ಮಹಾಸ್ವಾಮಿಗಳವರನ್ನು ಸ್ವಾಗತಿಸಲು ಶೃಂಗೇರಿಯ ಸುತ್ತಮುತ್ತಣ ಪ್ರದೇಶಗಳಿಂದ ಸಹಸ್ರ ಸಹಸ್ರ ಜನ ಆಗಮಿಸಿದ್ದರು. ಸಮಸ್ತ ದಕ್ಷಿಣಭಾರತದಲ್ಲಿ ವೈಭವದ ವಿಜಯ ಯಾತ್ರೆಯನ್ನು ನಡೆಸಿ, ಅಧರ್ಮದ ಕಳೆಯನ್ನು ಕಿತ್ತುಬಿಸುಟು, ಜನರ ಹೃದಯದಲ್ಲಿ ಆಸ್ತಿಕ್ಯವನ್ನು ಧರ್ಮಾಭಿಮಾನವನ್ನು ಬಿತ್ತಿದ್ದ, ಶ್ರೀ ಶ್ರೀಗಳವರನ್ನು ಎದುರ್ಗೊಂಡು ಜನ ಜಯ ಜಯಘೋಷ ಮಾಡುತ್ತಾ ಸ್ವಾಗತಿಸಿದರು. ಭಕ್ತ ಜನತೆಯ ಸಂಭ್ರಮದಲ್ಲಿ ಪ್ರಕೃತಿಯೂ ಪಾಲ್ಗೊಂಡು, ತುಂತುರು ಮಳೆಗರೆದು ಹರ್ಷಾನಂದವನ್ನುಂಟುಮಾಡಿತು.

ಶ್ರೀ ಶ್ರೀಗಳವರು ಆ ವರ್ಷದ ಚಾತುರ್ಮಾಸ್ಯ ವ್ರತವನ್ನು (೧೯೬೨) ಶೃಂಗೇರಿಯಲ್ಲಿಯೇ ನೆರವೇರಿಸಿದರು. ಶ್ರೀ ಗಣಪತಿ ವಿದ್ವತ್ ಸಭೆಯೂ ಶೃಂಗೇರಿಯಲ್ಲಿಯೇ ಶ್ರೀ ಶಿವಾಭಿನವ ನರಸಿಂಹ ಭಾರತೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳರ ಅಧಿಷ್ಠಾನಗಳ ಸನ್ನಿಧಿಯಲ್ಲಿಯೇ ನಡೆದು, ಎಂದಿಗಿಂತ ಅಧಿಕ ಸಂಖ್ಯೆಯಲ್ಲಿ ಪಂಡಿತರು ಭಾಗವಹಿಸಿದ್ದರು. ನವರಾತ್ರಿ ಉತ್ಸವವೂ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಶ್ರೀ ಜಗದ್ಗುರುಗಳವರ ಸಂಚಾರ ಕಾಲದಲ್ಲಿ ಅವರನ್ನು ರಾಷ್ಟ್ರಾಧ್ಯಕ್ಷರು, ಉಪ ರಾಷ್ಟ್ರಪತಿ, ಅನೇಕ ಜನ ರಾಜ ಮಹಾರಾಜರು, ರಾಜ್ಯಪಾಲರು ಸಂದರ್ಶಿಸಿ ಸತ್ಕರಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ದರು. ಅವರಿಂದ ಅಸಂಖ್ಯಾತ ಜನ ಮಂತ್ರೋಪದೇಶವನ್ನು ಪಡೆದಿದ್ದರು. ಶ್ರೀ ಶ್ರೀಗಳವರ ಉಪದೇಶ ಬೋಧನೆಗಳಲ್ಲಿಯೂ ಅವರೊಡನೆ ನಡೆಸುತ್ತಿದ್ದ ಸಂಭಾಷಣೆಗಳಲ್ಲಿಯೂ ಅನೇಕರು ಧರ್ಮಶ್ರದ್ಧೆಯನ್ನೂ ಆಸ್ತಿಕ್ಯ ಮನೋಭಾವನೆಯನ್ನೂ ಗಳಿಸಿದ್ದರು. ಶ್ರೀ ಶ್ರೀಗಳವರು ನಡೆಸುತ್ತಿದ್ದ ಶ್ರೀ ಚಂದ್ರಮೌಳೀಶ್ವರನ ಪೂಜೆಯಂತೂ ಸಾವಿರಾರು ಜನರ ಹೃನ್ಮನಗಳಿಗೂ, ಕಣ್ ಕಿವಿಗಳಿಗೂ ವೈಭವದ ಹಬ್ಬವಾಗಿ ಇರುತ್ತಿತ್ತು.

ಶ್ರೀ ಜಗದ್ಗುರುಗಳವರ ಸ್ವರ್ಣಪಾಲಕೀ ಉತ್ಸವವಾಗಲೀ ಪಾದಚಾರಿಗಳಾಗಿ ಪುರ ಪ್ರವೇಶ ಮಾಡಿ ನಡೆಸುತ್ತಿದ್ದ ಪಾದಯಾತ್ರೆಯಾಗಲೀ ಅವರನ್ನು ಜನ ಎಡೆಬಿಡದೆ ಸಾವಿರಾರು ಸಂಖ್ಯೆಯಲ್ಲಿ ಅನುಸರಿಸುತ್ತಿದ್ದರು. ಭಾವುಕತೆಯಿಂದ ಜಯಘೋಷ ಮಾಡುತ್ತಿದ್ದರು. ಒಮ್ಮೆ ನೋಡಿದ ಉತ್ಸವವನ್ನು ಮತ್ತೊಮ್ಮೆ ನೋಡಬೇಕೆಂದು ಬಯಸಿ ಮತ್ತೆ ಮತ್ತೆ ಬರುತ್ತಿದ್ದರು. ಒಂದೊಂದು ಸ್ಥಳದಲ್ಲಿ ಒಮ್ಮೊಮ್ಮೆ ಮಾತ್ರ ಭಕ್ತರ ಕೋರಿಕೆಯಂತೆ ಶ್ರೀ ಶ್ರೀಗಳವರು ಪಲ್ಲಕ್ಕಿಯಲ್ಲಿ ಬಿಜಯಮಾಡಿಸುತ್ತಿದ್ದರಷ್ಟೆ. ಒಮ್ಮೊಮ್ಮೆ ಒಂದೇ ಪಟ್ಟಣದಲ್ಲಿ ಶಿಷ್ಯರು ಬೇಡಿ, ಕಾಡಿ, ಒತ್ತಾಯ ಮಾಡಿ ಶ್ರೀ ಶ್ರೀಗಳವರನ್ನು ಪುನಃ ಪುನಃ ಪಲ್ಲಕ್ಕಿಯಲ್ಲಿ ನಗರ ಪ್ರದಕ್ಷಿಣೆ ಮಾಡಿಸುತ್ತಿದ್ದರು.

ಶ್ರೀ ಗುರುವರ್ಯರು ದಕ್ಷಿಣ ಕನ್ನಡ ಜಿಲ್ಲೆಯ ಅಶ್ವತ್ಥಪುರ ಮತ್ತು ಉಲ್ಲಾಳಗಳಲ್ಲಿ ಶ್ರೀ ಶಂಕರಚಾರ್ಯರ ಮೂರ್ತಿಯನ್ನು, ತಮಿಳುನಾಡಿನ ಶಿವಗಂಗಾ ಕ್ಷೇತ್ರದಲ್ಲಿ ಶ್ರೀ ಶ್ರೀ ರತ್ನಗರ್ಭ ಗಣಪತಿಯನ್ನು ವೀರವನಲ್ಲೂರಿನಲ್ಲಿ ನೂತನವಾಗಿ ನಿರ್ಮಿತವಾಗಿದ್ದ ಶಂಕರ ಮಠದಲ್ಲಿ ಶ್ರೀ ಶಾರದಾಂಬಾರವರನ್ನು ಪ್ರತಿಷ್ಠಿಸಿದರು. ತಿರುಚರಪಳ್ಳಿಯ ಶ್ರೀ ವರದ ವೆಂಕಟೇಶ ದೇವಾಲಯಕ್ಕೆ ಶ್ರೀ ಶ್ರೀಗಳವರು ಕಳಹಿಸಿದ್ದ ಶ್ರೀ ಸುದರ್ಶನ ಯಂತ್ರವನ್ನು ವೈಖಾನಸಾಚಾರ್ಯರು ಆ ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಿಸಿದ್ದರು. ಹೀಗೆ ಶ್ರೀ ಶ್ರೀಗಳವರ ಸಲಹೆ ಮಾರ್ಗದರ್ಶನಗಳಿಂದ ಎಷ್ಟೋ ಕಡೆಗಳಲ್ಲಿ ಜನತೆಯ ಭಾವುಕತೆಗೆ, ಭಕ್ತಿಗೆ ಅನುಸಾರವಾಗಿ ಅನೇಕ ದೇವತಾ ಮೂರ್ತಿಗಳು ಪ್ರತಿಷ್ಠಿಸಲ್ಪಟ್ಟು, ಜನತೆಯಲ್ಲಿ ಧರ್ಮಶ್ರದ್ಧೆ ಮೂಡಲು ಸಹಾಯವಾಯಿತು.

ಶ್ರೀ ಮಹಾ ಸನ್ನಿಧಾನದ ದರ್ಶನಕ್ಕಾಗಿ ಬಂದವರಿಗೆ ಅವರ ಮೊದಲ ದರ್ಶನದಲ್ಲಿಯೇ ಭಕ್ತಿಯೂ ಗೌರವವೂಮೂಡಿ ಆತ್ಮೀಯತೆಯುಂಟಾಗಿ ಬಿಡುತ್ತಿತ್ತು. ಅವರ ಮಂದಹಾಸ, ಮೃದುವಾಣಿ, ಶಾಂತಸ್ವಭಾವ, ದಯಾಪ್ರೀತಿಗಳು ಶಿಷ್ಯರ ಹೃದಯವನ್ನು ಸೂರೆಗೊಂಡು ಬಿಡುತ್ತವೆ. ತೊಂದರೆ ಕಷ್ಟದಲ್ಲಿದ್ದು ಅವರನ್ನು ಸಂದರ್ಶಿಸಿದ ಪ್ರತಿಯೊಬ್ಬನೂ ತನ್ನ ಕಷ್ಟ ವಿಮೋಚನೆಯ ಭರವಸೆಯನ್ನು ಪಡೆದು, ಕೃತಾರ್ಥವಾಗಿ ಧನ್ಯತೆಯ ಭಾವನೆಯಿಂದ ಹಿಂದಿರುಗುತ್ತಾನೆ. ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಬಂದವರಿಗಂತೂ ಶ್ರೀ ಶ್ರೀಗಳವರು ಕಲ್ಪವೃಕ್ಷವಾಗಿದ್ದಾರೆ.

ಸಮಾಜದ ಎಲ್ಲಾ ತರಗತಿಯ ಜನರೂ, ಸಮಸ್ತ ಜಾತಿಮತಗಳವರೂ, ಎಲ್ಲಾ ಧರ್ಮಗಳವರೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಶ್ರೀ ಶ್ರೀಗಳವರ ದರ್ಶನ ಪಡೆದು, ತಮ

Sri Vidyabharathi Book Centre, Sringeri

CC-O. In Public Domain. Digitized by eGangotri

ತಮಗೆ ಬೇಕಾದ ಉಪದೇಶ ಬೋಧನೆಗಳನ್ನು ಪಡೆದು, ತಮ್ಮ ಮಾತೃ ಸನ್ನಿಧಿಯಲ್ಲಿದ್ದರೆ ಹೇಗೋ ಹಾಗೆ ಆನಂದ ಶಾಂತಿಗಳನ್ನು ಪಡೆಯುತ್ತಾರೆ. ಶ್ರೀ ಗುರುವರ್ಯರ ಸನ್ನಿಧಿಯಲ್ಲಿ ಯಾರಿಗೂ ತಾನು ಪರಕೀಯ, ಅನ್ಯ ಎಂಬ ಭಾವನೆಗಳಿರದು. ಶ್ರೀ ಶ್ರೀಗಳವರಲ್ಲಿ ಮತಧರ್ಮಗಳ ಬಗೆಗೆ ತಾರತಮ್ಯವಾಗಲೀ ಭೇದಭಾವನೆಯಾಗಲೀ ಇಲ್ಲ.

೨೦. ಮರಳಿ ಶ್ರೀ ಶಾರದಾಸನ್ನಿಧಿಗೆ

ಶ್ರೀ ವೃದ್ಧನರಸಿಂಹ ಭಾರತೀಗಳವರೂ, ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳವರೂ, ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರೂ ದೇಶಪರ್ಯಟನ ಮಾಡಿದ ಕಾಲದಲ್ಲಿ ದೇಶದಲ್ಲಿ ಪಾಶ್ಚಾತ್ಯ ನಾಗರೀಕತೆಯು ಪ್ರವೇಶಿಸಿ, ತನ್ನ ಪ್ರಭಾವವನ್ನು ಬೀರಲು ಪ್ರಾರಂಭಿಸಿತ್ತು. ಆದರೂ ಜನರಲ್ಲಿ ಗುರುಹಿರಿಯರೆಂದರೆ ಗೌರವ ಪೂಜ್ಯತೆಗಳಿದ್ದವು. ಅಂತಹವರ ಬಗೆಗೆ ಜನ ತಮ್ಮ ಭಕ್ತಿ ಶ್ರದ್ಧೆಯನ್ನು ತೋರುತ್ತಿದ್ದರು. ಶ್ರೀ ಜಗದ್ಗುರುಗಳವರು ಸಂಚರಿಸಿದ ಕಡೆಗಳಲ್ಲೆಲ್ಲಾ ಸುಸ್ವಾಗತವು ದೊರಕುತ್ತಿತ್ತು. ಜನ ಗಂಟೆಗಳ ಕಾಲ ಕಾದು ಅವರ ದರ್ಶನ ಪಡೆಯುತ್ತಿದ್ದರು. ಅವರ ಉಪದೇಶ ಬೋಧನೆಗಳ ಶ್ರವಣಕ್ಕಾಗಿ ದೂರದೂರದ ಗ್ರಾಮಗಳಿಂದ ಜನರು ಆಗಮಿಸುತ್ತಿದ್ದರು. ಜನರಲ್ಲಿ ಆಸ್ತಿಕ್ಯ ಭಾವನೆ ಧರ್ಮಭೀರುತ್ವ ಇದ್ದ ಕಾಲ ಅದು.

ಆದರೆ ಶ್ರೀ ವಿದ್ಯಾತೀರ್ಥ ಮಹಾಸ್ವಾಮಿಗಳವರು ಸಂಚಾರವಾರಂಭಿಸಿದ್ದ ಸಮಯದಲ್ಲಿ ದೇಶದಲ್ಲಿ ಪಾಶ್ಚಾತ್ಯ ರೀತಿ ನೀತಿಗಳ ಪ್ರಭಾವ ಅತಿ ಹೆಚ್ಚಾಗಿ ಸನಾತನ ಧರ್ಮದಲ್ಲಿ ಶ್ರದ್ಧೆ ಇಳಿಮುಖವಾಗುತ್ತಿತ್ತು. ನೈತಿಕ ಮೌಲ್ಯಗಳಲ್ಲಿ ನಂಬಿಕೆ ತಗ್ಗುತ್ತಿತ್ತು. ಸ್ವಸುಖ, ಐಶ್ವರ್ಯ ಸಂಪಾದನೆ, ಇವು ಜೀವನದ ಪರಮಧ್ಯೇಯವಾಗಿದ್ದು ಬಹು ಜನಕ್ಕೆ ಧರ್ಮ, ದೇವರು ಎಂದರೆ ಅನಾದರ, ಅಸಡ್ಡೆ, ಔದಾಸೀನ್ಯ ಭಾವಮೂಡುತ್ತಿತ್ತು. ಜನ ನಾನು, ನನ್ನದು ಎಂಬ ಈ ವರ್ತುಲದಲ್ಲಿಯೇ ಸಂಚರಿಸುತ್ತಿದ್ದರು. ಇಂತಹ ಕಾಲದಲ್ಲಿ ಸಂಚಾರಹೊರಟ ಗುರುವರ್ಯರನ್ನು ಕುರಿತು, ಅವರ ಸಂಚಾರದ ಪರಿಣಾಮವನ್ನು ಕುರಿತು ಶೃಂಗೇರಿಯ ಬಹುಜನ ಹಿರಿಯರು ಅನುಮಾನ ಸಂಶಯಗಳನ್ನು ವ್ಯಕ್ತಪಡಿಸಿದ್ದರು. ಗುರುಗಳವರ ತೀರ್ಥಯಾತ್ರೆಯ ಯಶಸ್ಸನ್ನು ಕುರಿತು ಸಂದೇಹವನ್ನು ವ್ಯಕ್ತಪಡಿಸಿದ್ದರು. ತಮ್ಮ ಮನಸ್ಸಿನ ಅನಿಸಿಕೆಯನ್ನು ಅವರು ಪ್ರತ್ಯಕ್ಷವಾಗಿ ಪ್ರಕಟಗೊಳಿಸದಿದ್ದರೂ, ಅವರ ನಡೆನುಡಿಗಳಲ್ಲಿ, ಅವರು ತಮ್ಮ ತಮ್ಮ ಆಪ್ತಗೋಷ್ಠಿಗಳಲ್ಲಿ ಸಂಭಾಷಿಸುತ್ತಿದ್ದಾಗ ಶ್ರೀ ಗುರುಗಳ ತೀರ್ಥಯಾತ್ರೆಯ ವಿಚಾರವೂ ಬಂದು ಅವರ ವಿಜಯದ ಬಗೆಗೆ ಶ್ರೀ ಶ್ರೀಗಳವರ ಪ್ರಭಾವದ ಬಗೆಗೆ ಈ ಜನ ನೈರಾಶ್ಯವನ್ನು ಪ್ರಕಟಿಸುತ್ತಿದ್ದರು. ಇನ್ನೂ ಕೆಲವರು ಹಿರಿಯರು ಹಿಂದಿನ ಗುರುಗಳಿಬ್ಬರ ಸಂಚಾರವನ್ನು ಸ್ವತಃ ಕಂಡು ಅದರ ಅನುಭವವನ್ನು ಹೊಂದಿದ್ದವರು ಈಗಿನ ಗುರುಗಳ ಸಂಚಾರದ ಬಗೆಗೆ ತೀರ ಹತಾಶೆಯನ್ನು ವ್ಯಕ್ತಪಡಿಸುತ್ತಿದ್ದರು. ಮತ್ತೆ ಕೆಲವರಂತೂ ಈ ಸಂಚಾರಕ್ಕೆ ಹೊರಟ ಗುರುಗಳು ತುಂಬಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಷ್ಟ ನಷ್ಟಗಳಿಗೆ ಸಿಲುಕಿ ಶ್ರೀ ಮಠದ ಬಗೆಗೆ ಜನತೆಗೆ ಇರುವ ಭಕ್ತಿ ಶ್ರದ್ಧೆ ಗೌರವ ಎಲ್ಲವನ್ನೂ ಕಳೆದುಕೊಂಡುಬಿಡುತ್ತಾರೇನೋ ಎಂದು ಭಯ ಭೀತಿಯನ್ನು ವ್ಯಕ್ತಪಡಿಸಿದ್ದರು.

ಆದರೆ ಶ್ರೀ ಶ್ರೀಗಳವರನ್ನು ಅರಿತಿದ್ದ ಜನ ಇಂತಹ ಯಾವ ಭೀತಿಯನ್ನು ಹೊಂದಿರಲಿಲ್ಲ. ಹಿಂದಿನ ಎಲ್ಲ ಗುರುಗಳಂತೆಯೇ ಶ್ರೀ ವಿದ್ಯಾತೀರ್ಥರೂ ಸಹ ದೇಶದಲ್ಲೆಲ್ಲ ಸಂಚರಿಸಿ ಜನಗಳಲ್ಲಿ ಧರ್ಮ ಶ್ರದ್ಧೆಯನ್ನು ಮೂಡಿಸಿ ಜಯಪ್ರದರಾಗಿ ಹಿಂದಿರುಗತ್ತಾರೆಂಬ ಭರವಸೆಯನ್ನು ಹೊಂದಿದ್ದರು. ಶ್ರೀ ಶ್ರೀಗಳವರ ಸಂಚಾರಕ್ಕೆ ಮೂಲಪ್ರೇರಣೆ ಅವರ ಗುರುಗಳವರಿಂದಲೇ ಬಂದಿತ್ತು, ಎಂಬುದನ್ನು ಅರಿತಿದ್ದವರು ಯಾತ್ರೆಯ ಜಯದ ಬಗೆಗೆ ನಂಬಿಕೆಯನ್ನು ತಾಳಿದ್ದರು. ಅದನ್ನು ಅರಿಯದ ಹಲವರು ತಮ್ಮೆದೆಗಳಲ್ಲಿ ನಿರಾಶೆಯನ್ನು ಪೋಷಿಸುತ್ತಿದ್ದರು.

ಅವರಿವರೊಡನೆ ಯಾತ್ರೆ ವಿಫಲವಾಗುವ ಮಾತನ್ನೇ ಆಡುತ್ತಿದ್ದರು. ಶ್ರೀ ಶ್ರೀಗಳವರಿಗೆ ಈ ಎಲ್ಲವೂ ಚೆನ್ನಾಗಿ ತಿಳಿದಿತ್ತು. ಅವರು ಸ್ಥಿರಮನಸ್ಕರೂ, ಸಿದ್ಧಸಂಕಲ್ಪರೂ ಆಗಿ ಗುರುದೈವ ಪ್ರೇರಣೆಯಂತೆ ಜೈತ್ರಯಾತ್ರೆಯನ್ನು ಆರಂಭಿಸಿಬಿಟ್ಟಿದ್ದರು.

ಹೀಗೆ ಸಂಶಯ, ಸಂದೇಹ, ಆತಂಕ, ಅನುಮಾನಪಟ್ಟಿದ್ದ ನಿರಾಶಾವಾದಿಗಳೆಲ್ಲರೂ ಶ್ರೀ ಶ್ರೀ ಜಗದ್ಗುರುಗಳವರು ಪ್ರಥಮ ದಿಗ್ವಿಜಯದಿಂದ ಜಯಪ್ರದರಾಗಿ ಹಿಂದಿರುಗಿದಾಗ ಆಶ್ಚರ್ಯ ಸಂತೋಷಗಳನ್ನು ವ್ಯಕ್ತಪಡಿಸಿದ್ದರು. ಶ್ರೀ ಶ್ರೀಗಳವರು ಸಾಕ್ಷಾತ್ ಶ್ರೀ ಶಂಕರಭಗವತ್ಪಾದರ ಭವ್ಯ ಪರಂಪರೆಯ ಜಗದ್ಗುರುಗಳಾಗಿದ್ದರೂ ಅದನ್ನು ಅರ್ಥ ಮಾಡಿಕೊಳ್ಳದೆ ಈ ಗುರುಗಳ ಮಹತಿಯ ಬಗೆಗೆ ಅನುಮಾನ ಪಟ್ಟೆವೆಲ್ಲಾ ಎಂದು ತುಂಬಾ ಪಶ್ಚಾತ್ತಾಪಪಟ್ಟರು. ಶ್ರೀ ಶ್ರೀಗಳವರ ವಿಜಯದ ಬಗೆಗೆ ವಿಶ್ವಾಸ ಹೊಂದಿದ್ದವರು ಅವರ ಗುರುಗಳಾಗಿದ್ದ ಶ್ರೀ ಚಂದ್ರಶೇಖರಭಾರತೀಯವರು ಹೇಳುತ್ತಿದ್ದ "ಶ್ರೀ ವಿದ್ಯಾತೀರ್ಥರು ನಮ್ಮ ಗುರುಗಳಾದ ಶ್ರೀ ಶಿವಾಭಿನವ ನರಸಿಂಹಭಾರತೀಗಳಂತೆಯೇ ಲೋಕಪ್ರಖ್ಯಾತರೂ ಪ್ರಸಿದ್ಧರೂ ಆಗುತ್ತಾರೆ" ಎಂಬ ನುಡಿಗಳನ್ನು ಸ್ಮರಿಸಿಕೊಂಡು ಸಂತೋಷಪಟ್ಟಿದ್ದರು.

ಒಂದು ದಿನ ಆಗ ತಾನೇ ಸಂಚಾರ ಮುಗಿಸಿಕೊಂಡು ಶೃಂಗೇರಿಗೆ ಹಿಂದಿರುಗಿದ್ದ ತರುಣದಲ್ಲಿ, ಶ್ರೀ ಶ್ರೀಗಳವರು ಶ್ರೀ ಶಾರದಾಂಬಾ ದರ್ಶನಕ್ಕೆ ಆಗಮಿಸಿ ಆಲಯದ ಗರ್ಭಗೃಹವನ್ನು ಪ್ರವೇಶಿಸಿದರು. ಶ್ರೀ ಶ್ರೀಗಳವರು ನಮಸ್ಕರಿಸಲು ಅನುವಾಗುವಂತೆ, ತೆರೆ ಹಾಕಲ್ಪಟ್ಟಿತು. ಆಗ ಅವರ ದಿಗ್ವಿಜಯದ ವಿಚಾರದಲ್ಲಿ ಅನುಮಾನ ವ್ಯಕ್ತಪಡಿಸಿದ್ದ ವೃದ್ಧರೊಬ್ಬರು ಆಲಯದ ಮುಖಮಂಟಪದಲ್ಲಿ ನಿಂತು ದೇವಿಯ ದರ್ಶನ ಮಾಡುತ್ತಿದ್ದರು. ಶ್ರೀ ಶ್ರೀಗಳವರು ಆಲಯಕ್ಕೆ ಬಂದಾಗ ಆ ಹಿರಿಯರನ್ನು ನೋಡಿ ಹಸನ್ಮುಖದಿಂದ ಅವರ ಪ್ರಣಾಮವನ್ನು ಸ್ವೀಕರಿಸಿ ಒಳಕ್ಕೆ ದಯಮಾಡಿಸಿದ್ದರು. ಆ ವೃದ್ಧರಿಗೆ ತಾವು ಶ್ರೀ ಶ್ರೀಗಳವರ ಬಗೆಗೆ ತಳೆದಿದ್ದ ಔದಾಸೀನ್ಯ ಭಾವ, ಅವರ ದಿಗ್ವಿಜಯದ ಬಗೆಗೆ ಹೊಂದಿದ್ದ ಅನುಮಾನ ಅವರ ಪ್ರಭಾವದ ಬಗೆಗೆ ತಾಳಿದ್ದ ಸಂದೇಹ ಇವೆಲ್ಲವೂ ಮನಸ್ಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಲ್ಲಿ ಚಿತ್ರಪಟದಂತೆ ಸುಳಿಯಲಾರಂಭಿಸಿದವು. “ ಇಂತಹ ಪೂಜ್ಯರ ಬಗೆಗೆ ನಾನು ತಪ್ಪು ತಿಳಿದಿದ್ದೆನಲ್ಲಾ ” ಎಂದು ಅವರಿಗೆ ತುಂಬಾ ಪಶ್ಚಾತ್ತಾಪವಾಯಿತು.

ಅವರು ಆಗ ಮಾರ್ದವ ಹೃದಯದಿಂದ “ ತಾಯೇ ನಾನು ಈ ಜಗದ್ಗುರುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇವರ ಮಹತ್ವವನ್ನು ತಿಳಿಯಲು ಪ್ರಯತ್ನಿಸದೆ ಸಾಮಾನ್ಯ ಸನ್ಯಾಸಿಯೆಂದು ಭಾವಿಸಿ, ಇವರು ದಿಗ್ವಿಜಯಕ್ಕಾಗಿ ಹೊರಟಾಗ ಇವರ ಗೆಲುವಿನ ಬಗೆಗೆ ಸಂಶಯವನ್ನು, ಅನುಮಾನವನ್ನು ವ್ಯಕ್ತಪಡಿಸಿದ್ದೆ. ಶ್ರೀ ಶ್ರೀಗಳವರ ವಿಚಾರದಲ್ಲಿ ನನ್ನ ಅಪರಾಧ ತೀವ್ರವಾದುದು. ತಾಯೇ ನನ್ನನ್ನು ಕ್ಷಮಿಸು ಇನ್ನೆಂದಿಗೂ ಇಂತಹ ಅಪಚಾರವನ್ನು ಮಾಡೆನು ” ಎಂದು ತಮ್ಮ ಮನಸ್ಸಿನಲ್ಲಿಯೇ ಶ್ರೀ ಶಾರದಾಂಬೆಯನ್ನು ಪ್ರಾರ್ಥಿಸಿಕೊಳ್ಳುತ್ತಾ ಇದ್ದರು. ಅದೇ ಸಮಯದಲ್ಲಿ ಪೂಜೆಯನ್ನು ಮುಗಿಸಿ ಹೊರಕ್ಕೆ ಆಗಮಿಸಿದ ಶ್ರೀ ಶ್ರೀಗಳವರು ವೃದ್ಧರ ಹತ್ತಿರಕ್ಕೆ ಬಂದು ಹಸನ್ಮುಖರಾಗಿ, ಮೆಲುನುಡಿಯಲ್ಲಿ “ ಅದೆಲ್ಲಾ ಇರಲಿ ಶಾಸ್ತ್ರಿಗಳೇ. ಈಗ ಹೊಳೆಯ ಆಚೆ ನಮ್ಮ ಗುರುಗಳ ಅಧಿಷ್ಠಾನದ ಹತ್ತಿರಕ್ಕೆ ಬನ್ನಿ ”ಎಂದು ನುಡಿದರು. ಆ ವೃದ್ಧರು ಬಳಿಯೇ ನಿಂತಿದ್ದ ಅವರ ಮಗನನ್ನು ಕರೆದು “ ನಿಮ್ಮ ತಂದೆಯವರನ್ನು ಕರೆದುಕೊಂಡು ಹೊಳೆಯಾಚೆ ಬಾ” ಎಂದಷ್ಟೇ ಹೇಳಿ ಹೊರಕ್ಕೆ ದಯಮಾಡಿಸಿದರು. ವೃದ್ಧರಿಗೂ ಅವರ ಮಗನಿಗೂ ಆಶ್ಚರ್ಯವಾಯಿತು, ಶ್ರೀ ಶ್ರೀಗಳವರ ಈ ಅನಿರೀಕ್ಷಿತವಾದ ಕರೆಯಿಂದ.

ಆ ವೃದ್ಧರನ್ನು ಕರೆದುಕೊಂಡು ಆ ಯುವಕನು ಶ್ರೀ ಚಂದ್ರಶೇಖರಭಾರತೀಯವರ ಸಮಾಧಿಯ ಸಮೀಪಕ್ಕೆ ಬಂದನು. ಶ್ರೀ ಗುರುಗಳವರು ಸಮಾಧಿಮಂದಿರದ ಒಳಗಿನಿಂದ ಹೊರಕ್ಕೆ ದಯಮಾಡಿಸುತ್ತ, ಆ ವೃದ್ಧರನ್ನು ಕುರಿತು “ ಶಾಸ್ತ್ರಿಗಳೇ, ನೀವು ನನ್ನ ಯಾತ್ರೆಯ ಯಶಸ್ಸಿನ ಬಗೆಗೆ ತಾಳಿದ್ದ ಸಂಶಯ, ಸಂದೇಹಗಳೆಲ್ಲವೂ ಸರಿಯೇ, ಅವುಗಳಲ್ಲಿ ತಪ್ಪೇನೂ ಇಲ್ಲ. ಈ ಯಾತ್ರೆಯ ದಿಗ್ವಿಜಯಕ್ಕೆ ಇವರೇ - ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಬೃಂದಾವನದತ್ತ ಕೈತೋರುತ್ತಾ - ಕಾರಣರು, ನಾನು ನಿಮಿತ್ತ ಮಾತ್ರ. ಈ ನಮ್ಮ ಗುರುಗಳು ಪರ್ವತದಷ್ಟು ರಾಶಿ ರಾಶಿ ತಪಸ್ಸುಮಾಡಿ, ಅದರ ಫಲವನ್ನೆಲ್ಲಾ ನನಗಾಗಿ ಬಿಟ್ಟು ಹೋಗಿದ್ದಾರೆ. ನಾನು ಅದರಲ್ಲಿ ಎಲ್ಲೋ ಒಂದು ಹಿಡಿಯಷ್ಟು ಮಾತ್ರ ಖರ್ಚುಮಾಡಿದ್ದೇನೆ. ಈ ಎಲ್ಲ ಯಶಸ್ಸೂ ಈ ಗುರುಗಳದೇ ! ” ಎಂದು ನುಡಿದರು. ಆ ವೃದ್ಧರಿಗೆ ತುಂಬಾ ಪಶ್ಚಾತ್ತಾಪವಾಯಿತು, ಮುಖಪೆಚ್ಚಾಯಿತು, ಧ್ವನಿ ಗದ್ಗದವಾಯಿತು, ತುಟಿ ಅದುರಿತು, ದೇಹ ಒತ್ತರಿಸಿ, ತಮ್ಮ ಅಪರಾಧಕ್ಕಾಗಿ ತೀವ್ರ ಪಶ್ಚಾತ್ತಾಪನಿಂದ ಆ ವೃದ್ಧರು ಶ್ರೀ ಶ್ರೀಗಳವರ ಚರಣಕಮಲದಲ್ಲಿ ಮಲಗಿದರು. ಶ್ರೀ ಗುರುವಿನಲ್ಲಿ ತೋರಿದ ಅಸಭ್ಯತೆಗಾಗಿ ಅನಾದರಕ್ಕಾಗಿ ಪರಿಪರಿಯಾಗಿ ಪಶ್ಚಾತ್ತಾಪಪಟ್ಟರು. ತಾವು ಮನಸ್ಸಿನಲ್ಲಿ ಆಲೋಚಿಸಿದ್ದನ್ನೆಲ್ಲಾ ಶ್ರೀ ಶ್ರೀಗಳವರಿಗೆ ಶ್ರುತವಾಗಿ ಅವರು ತಮ್ಮನ್ನು ತಿದ್ದಿದುದಕ್ಕೆ ಕೃತಜ್ಞವಾಗಿ ವಂದಿಸಿದರು.

ತಮ್ಮನ್ನು ಪರೋಕ್ಷವಾಗಿ ದೂಷಿಸುತ್ತಿದ್ದವರನ್ನೂ, ಟೀಕಿಸುತ್ತಿದ್ದವರನ್ನೂ, ಆಕ್ಷೇಪಿಸುತ್ತಿದ್ದವರನ್ನೂ ಶ್ರೀ ಶ್ರೀಗಳವರು, ಅವರು ಯಾವಾಗಲಾದರೂ ತಮ್ಮ ಬಳಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದಾಗ, ತಮ್ಮ ಶಿಶುಸಹಜ ಹೂನಗೆಯಿಂದ ಬರಮಾಡಿಕೊಂಡು, ನಿಷ್ಕಾಪಟ್ಯದಿಂದ ತಮ್ಮಿಂದ ಆಗಬೇಕಾದ ಸಹಾಯವನ್ನು ಮಾಡುವ ಮೂಲಕ, ಅವರ ಹೃದಯವನ್ನು ಮಾರ್ಪಡಿಸಿದ್ದಾರೆ. ಯಾರ ಬಗೆಗೂ ಅಸಮಾಧಾನ ತೋರದೆ, ಅವರ ಮಾತುಗಳಿಗೆ, ಟೀಕೆಗಳಿಗೆ ಕೋಪಗೊಳ್ಳದೆ, ಅವರಿಗೆ ಆಗಬಹುದಾದ ಕಷ್ಟ, ತೊಂದರೆಗಳ ಪರಿಹಾರಕ್ಕೆ, ಸೂಕ್ತರೀತಿಯ ನೆರವನ್ನಿತ್ತು, ಅನುಗ್ರಹಿಸಿದ್ದಾರೆ, ಮಾತೃಸಹಜ ವಾತ್ಸಲ್ಯದಿಂದ. ಟೀಕಿಸುವವರಲ್ಲಿಯೂ, ಮೆಚ್ಚಿ ಹೊಗಳುವವರಲ್ಲಿಯೂ ಶ್ರೀ ಶ್ರೀಗಳವರು ಏಕರೀತಿಯಾಗಿ ಸಮಬುದ್ಧಿ ಹೊಂದಿದವರಾಗಿದ್ದಾರೆ. "ಟೀಕಿಸುವವರೂ ನಮ್ಮವರೇ ಅಲ್ಲವೆ ?" ಎಂದೆನ್ನುವ ಶ್ರೀ ಶ್ರೀಗಳವರು ಅಂತಹವರ ಬಗ್ಗೆ ದುಷ್ಟಮಕ್ಕಳ ವಿಷಯದಲ್ಲಿ ತಾಯಿ ಇರುವಂತೆ ಇರುತ್ತಾರೆ.

ಶ್ರೀ ಶ್ರೀಜಗದ್ಗುರುಗಳವರು ಶೃಂಗೇರಿಗೆ ಹಿಂದಿರುಗಿದ ನಂತರ ಅವರ ದರ್ಶನಕ್ಕಾಗಿ ಬರುವ ಭಕ್ತರ ಸಂಖ್ಯೆ ಅಧಿಕವಾಯಿತು. ಅದಕ್ಕೆ ಅನುಗುಣವಾಗಿ ಶೃಂಗೇರಿಯಲ್ಲಿ ಉಳಿದುಕೊಳ್ಳಲು ವಸತಿ ಸೌಕರ್ಯ ಸಾಲದಾಗಿದ್ದು ಶ್ರೀ ಶ್ರೀಗಳವರು "ಶಂಕರಕೃಪಾ" ಎಂಬ ಅತಿಥಿ ಭವನವನ್ನು ನಿರ್ಮಾಣ ಮಾಡಿಸುತ್ತಿದ್ದರು. ಅದೇ ವೇಳೆಗೆ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳ ಸಮಾಧಿಮಂದಿರದ ಕಾರ್ಯವೂ ಪೂರ್ಣವಾಗಿತ್ತು.

ಶ್ರೀ ಶ್ರೀಗಳವರು ಶ್ರೀ ಚಂದ್ರಶೇಖರಭಾರತೀಯವರ ಬೃಂದಾವನದಲ್ಲಿ ಶ್ರೀ ಶಿವಲಿಂಗ ಮತ್ತು ಅಮೃತಶಿಲಾಮೂರ್ತಿ ಪ್ರತಿಷ್ಠೆಯನ್ನೂ ಮತ್ತು ನೂತನ ಆಲಯಕ್ಕೆ ಕುಂಭಾಭಿಷೇಕವನ್ನೂ ನೆರವೇರಿಸಲು ಸಂಕಲ್ಪಗೈದರು. ಅದಕ್ಕಾಗಿ ಕಾರ್ಯಕ್ರಮವೂ ರೂಪಿತವಾಯಿತು. ಜಗದ್ಗುರು ಶ್ರೀ ಚಂದ್ರಶೇಖರಭಾರತೀಯವರ ಶಿಷ್ಯರವಾತ್ಸಲ್ಯ ಅಪಾರವಾಗಿತ್ತಷ್ಟೆ. ಅವರ ಪವಿತ್ರ ಸಮಾಧಿಯ ಮೇಲೆ ಪ್ರತಿಷ್ಠಿಸಲ್ಪಡಬೇಕಾದ ಶಿವಲಿಂಗವು ವಾರಣಾಸೀ ಕ್ಷೇತ್ರದಿಂದ ಬರುವುದಾಗಿ ಶ್ರೀ ವಿದ್ಯಾತೀರ್ಥರಿಗೆ ತಮ್ಮ ಗುರುಗಳವರಿಂದಲೇ ಸ್ಪಷ್ಟವಾದ ಸೂಚನೆಯು ದೊರಕಿತ್ತು. ಅದರ ವಿವರಣವು ಸ್ಮರಣಾರ್ಹವಾಗಿದೆ.

ಶ್ರೀ ಯಡವಳ್ಳಿಯ ರಾಮರಾಯರೆಂಬ ಗುರುಭಕ್ತರು ಶ್ರೀ ವಿದ್ಯಾತೀರ್ಥಸ್ವಾಮಿಗಳ ದರ್ಶನಮಾಡಿ, ಶ್ರೀ ಪರಮ ಗುರುಗಳ ಸಮಾಧಿಯಲ್ಲಿ ಪ್ರತಿಷ್ಠಿಸಲ್ಪಡಬೇಕಾದ ಶ್ರೀ ಈಶ್ವರ ಲಿಂಗವನ್ನು "ನಾನು ತರುತ್ತೇನೆ. ಅದಕ್ಕೆ ಅವಕಾಶಕೊಟ್ಟು, ಅಪ್ಪಣೆಮಾಡಿ ಆಶೀರ್ವದಿಸಬೇಕು" ಎಂದು ಪ್ರಾರ್ಥಿಸಿಕೊಂಡರು. ಶ್ರೀ ಶ್ರೀಗಳವರು ತಮ್ಮ ಗುರುದೇವರ ಅಂತರ್ಯವನ್ನು ಮೊದಲೇ ಅರಿತಿದ್ದುದರಿಂದ ಒಪ್ಪಿಗೆಯನ್ನಿತ್ತು, ರಾಮರಾಯರನ್ನು ಆಶೀರ್ವದಿಸಿ ಫಲಮಂತ್ರಾಕ್ಷತೆಯನ್ನು ಅನುಗ್ರಹಿಸಿದರು.

ರಾಮರಾಯರು ಉತ್ತರಭಾರತದ ಯಾತ್ರೆ ಹೊರಟು ಅತ್ಯಪೂರ್ವವಾದ ನರ್ಮದಾ ಬಾಣ ಲಿಂಗವನ್ನು ಸಂಪಾದಿಸಿ ಅದಕ್ಕೆ ತಾವೇ ಪೂಜಾದಿಗಳನ್ನು ಭಕ್ತಿ ಸಂತೋಷಗಳಿಂದ ಸಲ್ಲಿಸಿದರು. ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರ ಪರಮಾಪ್ತ ಶಿಷ್ಯರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಬ್ಬರಾಗಿದ್ದ ಶ್ರೀ ಕಾಶೀ ಸಚ್ಚಿದಾನಂದ ಸರಸ್ವತಿ ಸ್ವಾಮಿಗಳವರಲ್ಲಿ-ಈ ಸ್ವಾಮಿಗಳವರು ಶ್ರೀ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರ ಅಪ್ಪಣೆಯಂತೆ ಕಾಶಿಯಲ್ಲಿಯೇ ಇದ್ದು ಧರ್ಮ ಪ್ರಸಾರ ಮಾಡುತ್ತಿದ್ದರು—ಒಂದು ಸೋಮವಾರ ಸಂಜೆ ಪ್ರದೋಷ ಕಾಲದಲ್ಲಿ ಆ ಲಿಂಗವನ್ನು ತೆಗೆದುಕೊಂಡು ಬಂದರು. ಶ್ರೀ ಸಚ್ಚಿದಾನಂದ ಸರಸ್ವತಿಯವರಿಗೆ ಆ ಲಿಂಗವನ್ನು ದರ್ಶನಮಾಡಿದಾಗ ಆದ ಹರ್ಷಾನಂದಕ್ಕೆ ಪಾರವೇ ಇರಲಿಲ್ಲ. ಅದನ್ನು "ಸರ್ವತೋಭದ್ರ" ವೆಂದು ಕೊಂಡಾಡಿದ ಸ್ವಾಮಿಗಳು ಆ ಶಿವಲಿಂಗವನ್ನು ತಮ್ಮ ಆಶ್ರಮದಲ್ಲಿಯೇ ಪೂಜೆಗಾಗಿ ಇಟ್ಟುಕೊಂಡರು.

ಪ್ರತಿದಿನವೂ ಬ್ರಾಹ್ಮೀಮುಹೂರ್ತದಲ್ಲಿ ಗಂಗಾಜಲ, ವಿಭೂತಿ, ಬಿಲ್ವಪತ್ರ, ರುದ್ರಾಕ್ಷಿಮಾಲೆ, ಕಾಷಾಯವಸ್ತ್ರ ಮೊದಲಾದ ಪೂಜಾ ದ್ರವ್ಯಗಳಿಂದ ಮುಂದೆ "ಶ್ರೀ ಚಂದ್ರಶೇಖರ ಭಾರತೀಶ್ವರ" ಎಂದು ಪ್ರಸಿದ್ಧವಾಗುವ ಆ ಲಿಂಗವನ್ನು ಮನದಣಿಯ ಪೂಜಿಸಿ ಅರ್ಚಿಸಿ ಆನಂದಿಸಿದರು. ಅನಂತರ ಶ್ರೀ ಜಗದ್ಗುರು ವಿದ್ಯಾತೀರ್ಥಸ್ವಾಮಿಗಳ ಸನ್ನಿಧಿಗೆ ವಿಜ್ಞಾಪನಾಪತ್ರವನ್ನು ಬರೆದು "ನೆನ್ನೆ ಸೋಮವಾರ ಮಹಾ ಪ್ರದೋಷ ಕಾಲದಲ್ಲಿ ಗುರುಸೇವಾ ಧುರೀಣರಾದ ಶ್ರೀ ಯಡವಳ್ಳಿ ರಾಮರಾಯರು ಸಮಾಧಿ ಸ್ಥಳದಲ್ಲಿ ಪ್ರತಿಷ್ಠೆ ಮಾಡಲ್ಪಡಬೇಕಾದ ನರ್ಮದಾ ಲಿಂಗವನ್ನು ನನ್ನ ಕುಟೀರಕ್ಕೆ ತಂದಿದ್ದಾರೆ. ಅದು ಸರ್ವಲಕ್ಷಣ ಸಂಪನ್ನವಾಗಿಯೂ, ಸುಂದರವಾಗಿಯೂ ಇದೆ. ಇನ್ನು ಮುಂದೆ ಆಚಂದ್ರಾರ್ಕವಾಗಿ ಪೂಜಿಸಲ್ಪಡುವ ಆ ಲಿಂಗದ ಮೊದಲ ಪೂಜೆಯನ್ನು ನಾನು ಈದಿನ ಬೆಳಗಿನ ಜಾವ ನಡೆಸಿದೆನು" ಎಂದು ಬಿನ್ನವಿಸಿದರು.

ಶ್ರೀ ವಿದ್ಯಾತೀರ್ಥರು ಶ್ರೀ ಸ್ವಾಮಿಗಳ ಪತ್ರವನ್ನು ನೋಡಿ ಅತ್ಯಂತ ಹರ್ಷಪಟ್ಟು, ತಮ್ಮ ಗುರುದೇವರ ಪ್ರೇರಣೆಯಂತೆ ಲಿಂಗವನ್ನು ಸಮಾಧಿಯ ಮೇಲೆ ಪ್ರತಿಷ್ಠಿಸಲು ನಿರ್ಧರಿಸಿದರು. ಕೃಷ್ಣ ಶಿಲೆಯಲ್ಲಿ ಸಮಾಧಿ ಮಂದಿರವು ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳ ಆಲಯಕ್ಕೆ ಹೊಂದಿಕೊಂಡಂತೆಯೇ ನಿರ್ಮಿತವಾಗಿತ್ತು. ಎರಡೂ ಆಲಯಗಳ ಮುಂಭಾಗದಲ್ಲಿ ವಿಶಾಲವಾದ ಶಿಲಾ ಮಂಟಪವೂ ನಿರ್ಮಿತವಾಗಿತ್ತು.

ಅದೇ ಸಮಯದಲ್ಲಿ ಶ್ರೀ ಶ್ರೀಗಳವರು ಲೋಕಕಲ್ಯಾಣಕ್ಕಾಗಿ ಸಹಸ್ರ ಚಂಡೀ ಯಾಗವನ್ನು ಮಾಡಲು ನಿಶ್ಚಯಿಸಿದರು. ತಮ್ಮ ಶಿಷ್ಯರಿಗೆಲ್ಲಾ ಶ್ರೀಮುಖವನ್ನು ಕಳುಹಿಸಿದರು. ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ಸಮಾಧಿಯಲ್ಲಿ ಈಶ್ವರಲಿಂಗ ಪ್ರತಿಷ್ಠೆ ಮತ್ತು ಮೂರ್ತಿ ಸ್ಥಾಪನೆ, ಸಹಸ್ರ ಕುಂಭಾಭಿಷೇಕ, ಶ್ರೀ ಸಹಸ್ರ ಚಂಡೀ ಯಾಗ, ಶ್ರೀ ಶಾರದಾ ದೇವಾಲಯದ ನೂತನ ಗೋಪುರದ ಕುಂಭಾಭಿಷೇಕ, ಶ್ರೀಬೆಟ್ಟದಲ್ಲಿ ಮಲ್ಲಿಕಾರ್ಜುನ ದೇವಾಲಯದ ಅಷ್ಟಬಂಧ ಮಹೋತ್ಸವ, ಶ್ರೀ ಶಂಕರಚಾರ್ಯ ದೇವಾಲಯದ ಕುಂಭಾಭಿಷೇಕ ಇವೆಲ್ಲವೂ ಶಾಸ್ತ್ರೋಕ್ತವಾಗಿ ಶ್ರೀ ಜಗದ್ಗುರುಗಳವರ ದಿವ್ಯ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿದುವು. ಇದೇ ಸಮಯದಲ್ಲಿ ವೇದವಿದ್ವಾಂಸರುಗಳು ಸಾಂಗವಾಗಿ ಋಗ್ಯಜುಸ್ಸಾಮವೇದಗಳ ಪಾರಾಯಣವನ್ನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದರು. ಈ ವೇದ ಪಾರಾಯಣ ಮತ್ತು ಇತರ ಕಾರ್ಯಗಳಲ್ಲಿ ನಿರ್ವಹಿಸಲು ಬಂದಿದ್ದ ವಿದ್ವಾಂಸರುಗಳ ಸಂಖ್ಯೆ ಇನ್ನೂರರಷ್ಟಿತ್ತು. ಈ ಸಂದರ್ಭದಲ್ಲಿ ಶ್ರೀ ಜಗದ್ಗುರುಗಳವರ ಆಜ್ಞೆಯಂತೆ ಶೃಂಗೇರಿ ವಿದ್ಯಾರಣ್ಯಪುರ ಅಗ್ರಹಾರದ ಬ್ರಹ್ಮಶ್ರೀ ನಾರಾಯಣ ದೀಕ್ಷಿತರು ಚಾತುರ್ಮಾಸ್ಯ ಯಜ್ಞವನ್ನೂ ಇಪತ್ತೇಳು ದಿನಗಳಕಾಲ ನಕ್ಷತ್ರೇಷ್ಟಿಯನ್ನೂ ನಡೆಸಿದರು.

ಕರ್ಣಾಟಕ, ಕೇರಳ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳಿಂದ ಅತ್ಯಧಿಕ ಸಂಖ್ಯೆಯಲ್ಲಿ ಶಿಷ್ಯರೂ, ಭಕ್ತರೂ, ಈ ಉತ್ಸವದಲ್ಲಿ ಭಾಗವಹಿಸಿದ್ದರು. ಮೈಸೂರಿನ ಶ್ರೀ ಜಯಚಾಮರಾಜರೂ ಈ ಉತ್ಸವಗಳಲ್ಲಿ ಪಾತ್ರವಹಿಸಿದ್ದರು. ಈ ದಿವ್ಯಮಹೋತ್ಸವದ ವೈಭವವನ್ನು ಶ್ರೀ ಶ್ರೀಗಳವರ ಮಹಾತ್ಮ್ಯವನ್ನು ಉತ್ಸವ ಸಮಿಯ ಕಾರ್ಯಕ್ಷಮತೆಯನ್ನು ಪ್ರಶಂಸಿಸುತ್ತ ಗುರುದೇವತಾ ದರ್ಶನ ಮಾಡಿದ ಭಕ್ತರು ಪ್ರಸಾದದೊಡನೆ ಫಲಮಂತ್ರಾಕ್ಷತೆಯೊಡನೆ ತಮ್ಮ ತಮ್ಮ ಊರುಗಳಿಗೆ ಸವಿನೆನಪುಗಳನ್ನು ಹೊತ್ತು ಧನ್ಯತೆಯ ಭಾವದಿಂದ ಹಿಂದಿರುಗಿದರು.

೨೧. ಮಹಾಪರಿವ್ರಾಜ್ಯ

ಶ್ರೀ ಶ್ರೀಗಳವರು ತಮ್ಮ ಪ್ರಥಮ ಸಂಚಾರವನ್ನು ಮುಗಿಸಿಕೊಂಡು ಶೃಂಗೇರಿಗೆ ಆಗಮಿಸಿದ ತರುವಾಯ ಚಾತುರ್ಮಾಸ್ಯ, ನವರಾತ್ರಿ ಉತ್ಸವಗಳನ್ನು ಶೃಂಗೇರಿಯಲ್ಲಿಯೇ ನಡೆಸಿದರಷ್ಟೆ. ಶ್ರೀ ಜಗದ್ಗುರುಗಳವರಿಗೆ ಗೋಕರ್ಣದ ಮಹಾಬಲೇಶ್ವರ ಸ್ವಾಮಿಯ ದರ್ಶನ ಮಾಡಲು ಪ್ರಬಲ ಅಪೇಕ್ಷೆಯಿತ್ತು. ಅದಕ್ಕೆ ಸರಿಯಾಗಿ ಉತ್ತರ ಕರ್ಣಾಟಕದ ಭಕ್ತರಿಂದಲೂ, ಗೋವಾಪ್ರಾಂತ್ಯದ ಭಕ್ತರಿಂದಲೂ ಪ್ರಾರ್ಥನೆಗಳು ಬಂದುವು. ಶ್ರೀ ಜಗದ್ಗುರು ಮಠದ ಸಂಪ್ರದಾಯದಂತೆ ಶಿಷ್ಯರ ಪ್ರಾರ್ಥನೆಯನ್ನು ನೆರವೇರಿಸುವುದಕ್ಕಾಗಿ ಶ್ರೀ ಶ್ರೀಗಳವರು ಗೋಕರ್ಣಕ್ಕೆ ಮತ್ತು ಸುತ್ತಮುತ್ತಲ ಹಲವಾರು ಊರುಗಳಿಗೆ ಸಂದರ್ಶನವಿತ್ತು. ಶಿಷ್ಯರನ್ನು ಆಶೀರ್ವದಿಸಿದರು. ಗೋಕರ್ಣದಲ್ಲಿ ಶ್ರೀ ಮಹಾಬಲೇಶ್ವರನನ್ನು ಯಥೇಚ್ಛವಾಗಿ ಪೂಜಿಸಿದರು. ಗೋವೆಯ ಲೆಫ್ಟಿನೆಂಟ್ ಗವರ್ನರ್ ಶ್ರೀ ಶಿವಶಂಕರ್ ಮತ್ತು ಬಹುಜನ ಶಿಷ್ಯರ ಪ್ರಾರ್ಥನೆಯಂತೆ ಗೋವಾ ಪ್ರಾತ್ಯದಲ್ಲಿಯೂ ಸಂಚರಿಸಿ ಅಲ್ಲಿನ ಶಿಷ್ಯರನ್ನು ಅನುಗ್ರಹಿಸಿದರು. ಶ್ರೀ ಶ್ರೀಗಳವರು ಗೋವಾಪ್ರಾಂತ್ಯಕ್ಕೆ ದಯಮಾಡಿಸಿದ ಸಮಯದಲ್ಲಿ ಗೋವಾ ವಿಮೋಚನೆಯ ಪ್ರಥಮ ವಾರ್ಷಿಕೋತ್ಸವವು ಆಚರಿಸಲ್ಪಡುತ್ತಿದ್ದು ಶ್ರೀ ಶ್ರೀಗಳವರ ಆಗಮನವು ಅದಕ್ಕೆ ವಿಶೇಷ ಮೆರುಗನ್ನು ಕೊಟ್ಟಿತು.

ಶ್ರೀ ಚಂದ್ರಶೇಖರ ಭಾರತೀಗಳವರ ಮೂರ್ತಿ ಪ್ರತಿಷ್ಠೆ ಮತ್ತು ಕುಂಭಾಭಿಷೇಕವಾದ ನಂತರ ಶ್ರೀ ಶ್ರೀಗುರುಗಳವರಿಗೆ ಮತ್ತೆ ಮತ್ತೆ ಆಹ್ವಾನ ಪತ್ರಗಳೂ ಬರಲಾರಂಭಿಸಿದುವು. ಶಿಷ್ಯರ ಕೋರಿಕೆಯನ್ನು ನೆರವೇರಿಸುವುದಕ್ಕಾಗಿ ಬೆಂಗಳೂರಿಗೆ ದಯಮಾಡಿಸಿ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಸ್ಮಾರಕ ಮಂದಿರವನ್ನು ಉದ್ಘಾಟಿಸಿ. ಗೀರ್ವಾಣ ಪ್ರೌಢ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾಭಿವರ್ಧಿನೀ ಪಾಠಶಾಲೆಯ ಸುವರ್ಣ ಮಹೋತ್ಸವವನ್ನೂ ನೆರವೇರಿಸಿದರು. ಅನಂತರ ಶೃಂಗೇರಿಗೆ ಹಿಂದಿರುಗಿ ಸ್ವಲ್ಪಕಾಲ ಅನುಷ್ಠಾನ ಮಗ್ನರಾಗಿದ್ದರು. ಆ ವರ್ಷದ ಚಾತುರ್ಮಾಸ್ಯ(೧೯೬೩) ಮತ್ತು ನವರಾತ್ರಿ ಉತ್ಸವಗಳು ಶೃಂಗೇರಿಯಲ್ಲಿಯೇ ನಡೆದುವು.

ಶ್ರೀ ಶ್ರೀಗಳವರ ದ್ವಿತೀಯ ವಿಜಯಯಾತ್ರೆಯು ೧೯೬೪ರ ಚೈತ್ರಮಾಸದಲ್ಲಿ ಪ್ರಾರಂಭವಾಯಿತು. ಶೃಂಗೇರಿಯಿಂದ ಹೊರಟ ಶ್ರೀ ಶ್ರೀಗಳವರು ಶಿವಮೊಗ್ಗೆಗೆ ದಯಮಾಡಿಸಿ ಶ್ರೀ ಶಂಕರಮಠದ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿ ಆಶೀರ್ವಾದ ಪೂರ್ವಕವಾಗಿ ಮಂತ್ರಾಕ್ಷತೆಯನ್ನು ದಯಪಾಲಿಸಿದರು. ಅನಂತರ ಶಿವಮೊಗ್ಗೆಯಿಂದ ಪ್ರಯಾಣ ಹೊರಟು ಬೆಂಗಳೂರು ನಗರಕ್ಕೆ ದಯಮಾಡಿಸಿದರು.

ಶ್ರೀ ಶಂಕರಾಚಾರ್ಯರವರಿಂದ ಸ್ಥಾಪಿತವಾದ ಚತುರಾಮ್ನಾಯ ಪೀಠಗಳ ಆಚಾರ್ಯರು ಪ್ರಪ್ರಥಮವಾಗಿ ಒಬ್ಬರನ್ನೊಬ್ಬರು ಭೇಟಿಮಾಡಿದ್ದುದು ಶ್ರೀ ಭಗವತ್ಪಾದರ ಕಾಲದಲ್ಲಿ ಮಾತ್ರ. ಅನಂತರ ಸಾವಿರಾರು ವರ್ಷಗಳಲ್ಲಿ ಈ ಆಚಾರ್ಯರು ಪರಸ್ಪರ ಭೇಟಿಮಾಡಿದ್ದರೋ ಇಲ್ಲವೋ ಎಂಬ ಅಂಶ ನಮಗೆ ತಿಳಿದುಬರದು.* ಚತುರಾಮ್ನಾಯ ಪೀಠಗಳ ಧ್ಯೇಯ, ಸಾಧನಾ ಮಾರ್ಗ ಒಂದೇ ಆಗಿದ್ದು ನಾಲ್ವರು ಆಚಾರ್ಯರೂ ಧರ್ಮದ ರಕ್ಷಣೆಗೆ ಜನತೆಯ ನೈತಿಕ ಉನ್ನತಿಗೆ ತಮ್ಮದೇ ಆದ ರೀತಿಯಲ್ಲಿ ಶ್ರಮಿಸುತ್ತಿದ್ದರು. ಇಂತಹ ಆಚಾರ್ಯರು ಪರಸ್ಪರ ಭೇಟಿಮಾಡಿ ದೇಶದ ಧಾರ್ಮಿಕ ಅಭ್ಯುದಯಕ್ಕೆ ಕಾರ್ಯಕ್ರಮವನ್ನು ರೂಪಿಸಿ ಆ ದಿಸೆಯಲ್ಲಿ ಕೆಲಸ ಮಾಡಲು ತಮ್ಮ ಶಿಷ್ಯರಿಗೆ ಮಾರ್ಗ ತೋರುವುದು ಅತ್ಯಂತ ಅಗತ್ಯವಾಗಿತ್ತು. ಅಂತಹ ಜಗದ್ಗುರು ಸಮ್ಮೇಳನವೊಂದು ಬೆಂಗಳೂರು ಶಂಕರಮಠದಲ್ಲಿ ಪ್ರಪ್ರಥಮವಾಗಿ ನಡೆಯಿತು. ದಕ್ಷಿಣಾಮ್ನಾಯ ಪೀಠಾಧೀಶ್ವರರಾದ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರೂ ಪಶ್ಚಿಮಾಮ್ನಾಯ ಪೀಠಾಧೀಶ್ವರರಾದ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಮಹಾಸ್ವಾಮಿಗಳವರೂ ಬೆಂಗಳೂರು ಶಂಕರಮಠದಲ್ಲಿ ಕಲೆತು ಧಾರ್ಮಿಕವಾದ ಅನೇಕ ವಿಚಾರಗಳ ಮಾತುಕತೆಯನ್ನು ನಡೆಸಿದರು. ಈ ಆಚಾರ್ಯದ್ವಯರ ಸಮ್ಮೇಳನವು, ಶಿಷ್ಯವರ್ಗಕ್ಕೆ ಅತ್ಯಂತ ಸ್ಫೂರ್ತಿದಾಯಕವೂ ಹರ್ಷದಾಯಕವೂ ಆದ ಘಟನೆಯಾಗಿತ್ತು. ಜಗದ್ಗುರುದ್ವಯರನ್ನು ಒಟ್ಟಿಗೆ ದರ್ಶನ ಮಾಡುವ ಭಾಗ್ಯ ಶಿಷ್ಯಕೋಟಿಗೆ ಏಕಕಾಲದಲ್ಲಿ ದೊರೆತಿತ್ತು. ಅದೇ ಸಂದರ್ಭದಲ್ಲಿ ಶ್ರೀ ಆರ್. ಕೃಷ್ಣಸ್ವಾಮಿ ಅಯ್ಯರ್ ವಿರಚಿತ ಆಂಗ್ಲ ಪುಸ್ತಕ "ಮಹಾಸಮೀಕರಣ"ವೂ (The Great Equation) ಶ್ರೀ ಕಂಬಾರ್ತಿ ಲಕ್ಷ್ಮೀನಾರಾಯಣ ಉಪಾಧ್ಯಾಯ ವಿರಚಿತ "ಗೀತಾ ವಿಜ್ಞಾನ" ಎಂಬಪುಸ್ತಕವೂ ಪ್ರಕಾಶನಗೊಳಿಸಲ್ಪಟ್ಟವು.

---

* ದೇಶದಲ್ಲೆಲ್ಲಾ ಮೂಡಿದ್ದ ರಾಜಕೀಯ ಅಸ್ಥಿರತೆ, ಶತ್ರುಕಾಟ ಯುದ್ಧ ಕದನಗಳ ದೆಸೆಯಿಂದ ಧರ್ಮಯಾತ್ರೆಗಳು ಆ ಕಾಲದಲ್ಲಿ ಕಷ್ಟಸಾಧ್ಯವಾಗಿದ್ದವು. ಸಂಪರ್ಕಸಾಧನಗಳ ಕೊರತೆಯೂ ಇದ್ದುದರಿಂದ ಚತುರಾಮ್ನಾಯಪೀಠಾಚಾರ್ಯರುಗಳು ಪರಸ್ಪರ ಕಲೆಯುವುದು ಆ ಕಾಲದಲ್ಲಿ ಅಸಾಧ್ಯವೇ ಆಗಿತ್ತು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಶ್ರೀ ದ್ವಾರಕಾ ಜಗದ್ಗುರುಗಳವರು ಉಪದೇಶ ಭಾಷಣ ಮಾಡುತ್ತಾ, ಭರತಖಂಡದ ಉತ್ತರ ಭಾಗದಲ್ಲಿ ಪ್ರಾಪ್ತವಾಗಿದ್ದ ಶತ್ರುಭೀತಿ, ಕಷ್ಟವಿಪತ್ತಿನ ಪರಿಸ್ಥಿತಿಯನ್ನು ವಿವರಿಸಿ, ರಾಷ್ಟ್ರಕ್ಕೆ ಬಂದೊದಗಿದ ಆಪತ್ತಿನ ನಿವಾರಣೆಗೆ ಧರ್ಮಮಾರ್ಗದಲ್ಲಿ ಶ್ರದ್ಧೆಯೂ ಆ ಮಾರ್ಗದಲ್ಲಿ ನಡೆಯಲು ಆತ್ಮಶಕ್ತಿಯೂ ಅತ್ಯಗತ್ಯ ಎಂದು ಸ್ಪಷ್ಟಪಡಿಸಿದರು. ಅದೃಷ್ಟವಶಾತ್ ಮಾನವರಾಗಿ ಜನ್ಮಪಡೆದು ವಿಚಾರ ಮಾಡುವಂತಹ ಬುದ್ಧಿ ಕೌಶಲವನ್ನು ಹೊಂದಿದ ಮಾನವನು ಯಾವುದು ಶಾಶ್ವತ ಯಾವುದು ಅಶಾಶ್ವತ ಎಂಬುದನ್ನು ಅರ್ಥ ಮಾಡಿಕೊಂಡು ಅವಿನಾಶಕರವಾದ "ಆತ್ಮತತ್ವವನ್ನು" ಅರಿಯಬೇಕೆಂದು ಅಪ್ಪಣೆ ಕೊಡಿಸಿದರು.

ಅನಂತರ ಶ್ರೀ ಶೃಂಗೇರಿ ಜಗದ್ಗುರುಗಳವರು ಅನುಗ್ರಹ ಭಾಷಣ ಮಾಡುತ್ತಾ "ಧರ್ಮದ ಕೊನೆಯ ಗುರಿ ಆತ್ಮಸಾಧನೆ, ಅದಕ್ಕೆ ಪ್ರಪ್ರಥಮವಾಗಿ ಮಾನವನು ಮಾಡಬೇಕಾದ ಪ್ರಯತ್ನ ಚಂಚಲವಾದ ಮನಸ್ಸನ್ನು ಹಿಡಿತದಲ್ಲಿ ತಂದು ಏಕಾಗ್ರತೆಗೆ ಗಮನ ಕೊಡಬೇಕಾದುದು ಇದು ಅತ್ಯಾವಶ್ಯಕ. ಹಲವರು ಕಣ್ಮುಚ್ಚಿ ಸ್ವಲ್ಪಕಾಲ ದೈವ ಚಿಂತನೆಯನ್ನು ಮಾಡಿದರೆ ಸಾಕು ಎಂದು ಭಾವಿಸುತ್ತಾರೆ. ಹಾಗೆ ಮಾಡಿದಾಗಲೂ, ಮನಸ್ಸು ಸ್ವಲ್ಪ ಹೊತ್ತಾದರೂ ಅತ್ತಿತ್ತ ಚಲಿಸವೆ, ತಮ್ಮ ಧ್ಯಾನಮೂರ್ತಿಯಲ್ಲಿಯೇ ನಿಲ್ಲುತ್ತದೆಯೇ ಎಂದು ಯೋಚಿಸಿದರೆ, ಮನಸ್ಸು ಆ ಕೆಲವು ಕ್ಷಣಗಳಲ್ಲಿಯೂ ಬಿರುಗಾಳಿಯಂತೆ ಸುಯ್ಯನೆ ಸುತ್ತಮುತ್ತ ಚಲಿಸುತ್ತಿರುತ್ತದೆಂಬುದು ವೇದ್ಯವಾಗುತ್ತದೆ. ಈ ಮನಸ್ಸನ್ನು ಹತೋಟಿಗೆ ತರುವುದಕ್ಕಾಗಿಯೇ, ಶಾಸ್ತ್ರದಲ್ಲಿ ಅನೇಕ ನಿಯಮಗಳು ಸಾರಲ್ಪಟ್ಟಿವೆ. ಮನಸ್ಸು ನಿಶ್ಚಲವಾದರೆ ಆಧ್ಯಾತ್ಮಿಕ ಸಾಧನೆ ಸುಲಭವಾಗಿ, "ಆತ್ಮತತ್ವ"ವನ್ನು ಅರಿಯಲು ಸಾಧ್ಯವಾಗುತ್ತದೆ" ಎಂದು ಅಪ್ಪಣೆ ಕೊಡಿಸಿದರು.

ಬೆಂಗಳೂರಿನ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಶ್ರೀ ಜಗದ್ಗುರುಗಳವರು ಸೇಲಂ ನಗರಕ್ಕೆ ಆಗಮಿಸಿ ಅಲ್ಲಿ ಪೌರರ ಮತ್ತು ಪೌರಸಭೆಯ ಬಿನ್ನವತ್ತಳೆಗಳನ್ನು ಸ್ವೀಕರಿಸಿ ಆಶೀರ್ವದಿಸಿದರು. ಪೌರಸಭೆಯ ಬಿನ್ನವತ್ತಳೆಗೆ ಅನುಗ್ರಹ ಭಾಷಣ ಮಾಡುತ್ತಾ "ಜನಗಳಲ್ಲಿ ಧರ್ಮಾಭಿಮಾನವು ನಶಿಸಿ ಆಸ್ತಿಕತೆಯು ಮಾಯವಾಗುತ್ತಿದೆ, ಎಂದು ಎದೆಗುಂದಿ ಕುಳಿತುಕೊಳ್ಳುವಂತಹ ಸನ್ನಿವೇಶವೇನೂ ಒದಗಿಲ್ಲ. ಹಿಂದೂ ಧರ್ಮವು ಯಾವಾಗಲೂ ಐಕ್ಯತೆಯ ಮಹಚ್ಛಕ್ತಿಯಾಗಿದೆ. ಉತ್ತರದಿಂದ ದಕ್ಷಿಣಕ್ಕೂ, ದಕ್ಷಿಣದಿಂದ ಉತ್ತರಕ್ಕೂ ಹಿಮಾಲಯ, ಕನ್ಯಾಕುಮಾರಿಯರ ಮಧ್ಯದಲ್ಲಿ ಇಂದಿಗೂ ಸಹಸ್ರಾರು ಜನ ಭಕ್ತರು ಯಾತ್ರೆ ಮಾಡುತ್ತಿರುವುದು ಜನಗಳಲ್ಲಿ ಧರ್ಮಾಭಿಮಾನ, ಆಸ್ತಿಕತೆ ಇವು ರೂಢಮೂಲವಾಗಿವೆ ಎಂಬುದಕ್ಕೆ ನಿದರ್ಶನವಾಗಿದೆ. ಇದನ್ನು ನಾವು ಬೆಳಸಿಕೊಳ್ಳಬೇಕು" ಎಂದು ಅಪ್ಪಣೆ ಕೊಡಿಸಿದರು.

ಸೇಲಂ ನಗರದಿಂದ ಪಾಲ್‌ಘಾಟ್ ಮೂಲಕ ಕಾಲಟಿಕ್ಷೇತ್ರಕ್ಕೆ ದಯಮಾಡಿಸಿದರು. ಕಾಲಟಿಯಲ್ಲಿ ಅನೇಕ ಜನ ವಟುಗಳಿಗೆ ಧರ್ಮೋಪನಯನ ಮಾಡಿಸಿದರು. ಶ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಂಕರಾಲಯಕ್ಕೆ ಹೊಂದಿಕೊಂಡಂತೆ ವಿಶಾಲವಾದ ಪ್ರವಚನ ಮಂದಿರಕ್ಕೆ ಅಸ್ತಿಭಾರವನ್ನು ಹಾಕಿದರು. ಕಾಲಟಿಯಲ್ಲಿಯೇ ಶ್ರೀ ಶಂಕರಜಯಂತೀ ಉತ್ಸವವನ್ನು ನೆರವೇರಿಸಿ ಬಹು ಜನ ವಿದ್ವಾಂಸರನ್ನು ಸನ್ಮಾನಿಸಿದರು. ಕಾಲಟಿಯಿಂದ ಹೊರಟು ಕೇರಳ ರಾಜ್ಯದಲ್ಲಿ ಒಂದು ತಿಂಗಳಕಾಲ ಸಂಚರಿಸಿ ಕೊಯಮ್ಮುತ್ತೂರು, ಮಧುರೈ, ತಿರುನಲ್ವೇಲಿ ಜಿಲ್ಲೆಗಳ ಹಲವಾರು ಸ್ಥಳಗಳನ್ನು ಸಂದರ್ಶಿಸಿ ಸುಪ್ರಸಿದ್ಧ ಆರೋಗ್ಯಧಾಮವಾದ ಕುತ್ತಾಲಂ ನಗರಕ್ಕೆ ದಯಮಾಡಿಸಿದರು. ಆ ವರ್ಷದ ಚಾತುರ್ಮಾಸ್ಯವು (೧೯೬೪) ಕುತ್ತಾಲಂ ನಗರದಲ್ಲಿಯೇ ನಡೆಯಿತು. ಗಣಪತಿ ವಿದ್ವತ್ಸಭೆಯೂ ಅಲ್ಲಿಯೇ ನಡೆದು ಸಭೆಯ ಕೊನೆಯ ದಿನ ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ ವಿರಚಿತ "ಮಹಾತಪಸ್ವಿ ಶ್ರೀ ಚಂದ್ರಶೇಖರ ಭಾರತೀ" ಕನ್ನಡ ಪುಸ್ತಕವನ್ನು ಶ್ರೀ ಶ್ರೀಗಳವರು ಪ್ರಕಾಶಗೊಳಿಸಿದರು.

ಕಲ್ಲಿಡೈಕುರಿಚಿಯಲ್ಲಿ ಶ್ರೀ ಜಗದ್ಗುರುಗಳವರು ನವರಾತ್ರಿಉತ್ಸವವನ್ನು ವಿಜೃಂಭಣೆಯಿಂದ ನಡೆಸಿ ತಿರುನಲ್ವೇಲಿ, ಕನ್ಯಾಕುಮಾರಿ ಜಿಲ್ಲೆಗಳಲ್ಲಿ ಶಿಷ್ಯರನ್ನು ಅನುಗ್ರಹಿಸಿ ತ್ರಿವೇಂದ್ರಂನಗರಕ್ಕೆ ದಯಮಾಡಿಸಿದರು. ತಿರುವಾಂಕೂರು ಮಹಾರಾಜರು ಶ್ರೀ ಮಹಾಸ್ವಾಮಿಗಳವರನ್ನು ಕುತ್ತಾಲಂ ಕ್ಷೇತ್ರದಲ್ಲಿಯೇ ದರ್ಶನಮಾಡಿ ತಮ್ಮ ರಾಜಧಾನಿಗೆ ಆಗಮಿಸಿ ಚಂಡೀಮಹಾಯಾಗವನ್ನು ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸಿದ್ದರು. ಅವರ ಸಾತ್ವಿಕಾಭಿಲಾಷೆಯನ್ನು ಪೂರೈಸಲು ಶ್ರೀ ಶ್ರೀಪಾದರು ತ್ರಿವೇಂದ್ರಂಗೆ ಆಗಮಿಸಿ ಚಂಡೀಮಹಾಯಾಗವನ್ನು ತಿರುವಾಂಕೂರಿನ ಪ್ರಾಚೀನ ಅರಮನೆಯಲ್ಲಿ ನಡೆಸಿಕೊಟ್ಟರು. ಭಕ್ತರ ಕೋರಿಕೆಯಂತೆ ಶ್ರೀ ಶಂಕರಮಠಕ್ಕೆ ಅಸ್ತಿಭಾರವನ್ನು ಹಾಕಿ ಕಟ್ಟಡವನ್ನು ಶೀಘ್ರವಾಗಿ ಪೂರೈಸುವಂತೆ ಸಲಹೆಯಿತ್ತು ರಾಮೇಶ್ವರ ಕ್ಷೇತ್ರಕ್ಕೆ ದಯಮಾಡಿಸಿದರು.

ಶ್ರೀ ಜಗದ್ಗುರುಗಳವರು ವಿಶೇಷವಾದ ದೋಣಿಯಲ್ಲಿ ಮಂಡಪಂನಿಂದ ಪಾಂಬನ್ ಜಲಸಂಧಿಗೆ ದಯಮಾಡಿಸಿದರು. ಶೃಂಗೇರಿಯ ಶ್ರೀ ಪೀಠಾಧಿಪರನ್ನು ಮಂಡಪಂನಿಂದ ಪಾಂಬನ್ ಜಲಸಂಧಿಗೆ ಬಿಜಯಮಾಡಿಸುವ ಪುಣ್ಯಕೈಂಕರ್ಯದ ಹಕ್ಕು ಪ್ರಾಚೀನಕಾಲದಿಂದಲೂ ಮುಸಲ್ಮಾನ್ ಕುಟುಂಬವೊಂದಕ್ಕಿದೆ. ಶ್ರೀ ಶ್ರೀಗಳವರು ಆ ಕುಟುಂಬದವರನ್ನು ಆಶೀರ್ವದಿಸಿ ರಾಮೇಶ್ವರಕ್ಕೆ ದಯಮಾಡಿಸಿದರು. ಪವಿತ್ರವಾದ ಸರ್ವತೀರ್ಥದಲ್ಲಿ ಸ್ನಾನಗೈದು ಶೃಂಗೇರಿ ಮಠದಲ್ಲಿ ಪೂಜಾದಿಗಳನ್ನು ನೆರವೇರಿಸಿ ಶ್ರೀ ಗುರುಗಳವರು ಶ್ರೀರಾಮನಾಥಸ್ವಾಮಿಯವರ ಸನ್ನಿಧಿಗೆ ದಯಮಾಡಿಸಿದರು. ಶ್ರೀ ಸ್ವಾಮಿಯನ್ನು ಶ್ರೀ ದೇವಿಯನ್ನು ಸ್ವತಃ ಪೂಜಾಭಿಷೇಕಗಳಿಂದ ಸೇವೆಮಾಡಿ ಶ್ರೀ ಶ್ರೀಗಳವರು ಸೇತುಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿ ರತ್ನಾಕರ ಮತ್ತು ಮಹೋದಧಿ ಸಮುದ್ರಗಳು ಕೂಡುವ ಸ್ಥಳವನ್ನು ನಿಷ್ಕರ್ಷಿಸಿ ತಾವು ಪವಿತ್ರಸ್ನಾನ ಮಾಡಿ ಭಕ್ತರಿಗೆ ಮಾರ್ಗದರ್ಶನ ಮಾಡಿದರು.

ರಾಮೇಶ್ವರದಿಂದ ಹೊರಟು ಪಳನಿಕ್ಷೇತ್ರಕ್ಕೆ ದಯಮಾಡಿಸಿ ದಂಡಾಯುಧಪಾಣಿ ಶ್ರೀ ಸುಬ್ರಹ್ಮಣ್ಯಸ್ವಾಮಿಯನ್ನು ಪೂಜಿಸಿದ ಜಗದ್ಗುರುಗಳವರು ಯಾತ್ರಾರ್ಥಿಗಳಿಗಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ರಾಮಸ್ವಾಮಿ ಅಯ್ಯರ್‌ರವರಿಂದ ನಿರ್ಮಿಸಲ್ಪಟ್ಟಿದ್ದ ಧರ್ಮಶಾಲೆಯನ್ನು ಉದ್ಘಾಟಿಸಿದರು. ಅನಂತರ ಮಧುರೈ ನಗರಕ್ಕೆ ದಯಮಾಡಿಸಿದರು.

ಅಪಾರ ಶಿಷ್ಯವರ್ಗದಿಂದಲೂ ಭಕ್ತವರ್ಗದಿಂದಲೂ ಸ್ವಾಗತಿಸಲ್ಪಟ್ಟ ಶ್ರೀ ಗುರುವರ್ಯರು ಶ್ರೀ ಮೀನಾಕ್ಷಿ ಅಮ್ಮನವರ ಕಲ್ಯಾಣಿ ಮಂಟಪದಲ್ಲಿಯೇ ಬಿಡಾರ ಮಾಡಿದರು. ಅದೇ ಸಮಯದಲ್ಲಿ ಶ್ರೀ ಪೂರೀ ಪೂರ್ವಾಮ್ನಾಯ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ನಿರಂಜನತೀರ್ಥಸ್ವಾಮಿಗಳವರೂ ಮಧುರೈ ಕ್ಷೇತ್ರಕ್ಕೆ ದಯಮಾಡಿಸಿ ಸ್ವಲ್ಪದಿನಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಜಗದ್ಗುರು ಸಮ್ಮೇಳನದಂತೆ ಮಧುರೆಯಲ್ಲೂ ಪೂರ್ವಾಮ್ನಾಯ ದಕ್ಷಿಣಾಮ್ನಾಯ ಪೀಠಾಧಿಪತಿಗಳ ಸಮ್ಮೇಳನವೇರ್ಪಟ್ಟಿತ್ತು. ಜಗದ್ಗುರುದ್ವಯರ ದರ್ಶನ ಪ್ರವಚನಗಳಲ್ಲಿ ಪಾಲ್ಗೊಳ್ಳುವ ಭಾಗ್ಯ ಸಾವಿರಾರು ಜನ ಶಿಷ್ಯರಿಗೆ ದೊರೆತಿತ್ತು. ಪೂರಿ ಜಗದ್ಗುರುಗಳವರ ಸಂಸ್ಕೃತದ ಉಪನ್ಯಾಸವನ್ನು ತಮಿಳಿಗೆ ಅನುವಾದಿಸುವ ಕಾರ್ಯವನ್ನು ಹೊತ್ತಿದ್ದ ಉಭಯ ಭಾಷಾ ಪಂಡಿತರೊಬ್ಬರು ಶ್ರೀ ಪೂರೀ ಜಗದ್ಗುರುಗಳ ಭಾಷಣವನ್ನು ಅನುವಾದಿಸುವುದರಲ್ಲಿ ಆಗಾಗ ಮುಗ್ಗರಿಸುತ್ತಿದ್ದರು. ಆಗ ಶೃಂಗೇರಿಯ ಜಗದ್ಗುರು ಮಹಾಸ್ವಾಮಿಗಳವರೇ ಆ ಪಂಡಿತರ ಕಷ್ಟವನ್ನು ಕಂಡು ಮರುಗಿ ತಾವೇ ಸ್ವತಃ ಆ ಸಂಸ್ಕೃತ ಭಾಷಣವನ್ನು ತಮಿಳಿನಲ್ಲಿ ನಿರರ್ಗಳವಾಗಿ ಅನುವಾದಿಸಿಬಿಟ್ಟರು. ಸಭೆಯಲ್ಲಿ ನೆರೆದಿದ್ದ ಸಾವಿರಾರು ಜನ ಭಕ್ತರು ಶ್ರೀ ಜಗದ್ಗುರುಗಳವರ ಸರಳ ಅಸ್ಖಲಿತ ಅನುವಾದ ಭಾಷಣವನ್ನು ಕೇಳಿ ಮುಗಿಲುಮುಟ್ಟುವಂತೆ ಜಯಘೋಷ ಮಾಡಿದರು. ಶಿಷ್ಯರ ಕೋರಿಕೆಯಂತೆ ಶ್ರೀ ಜಗದ್ಗುರುಗಳವರು ಸಹಸ್ರ ಚಂಡೀ ಮಹಾಯಾಗವನ್ನು ಮಧುರೆ ನಗರದಲ್ಲಿ ನೆರವೇರಿಸಿ ಕಾಲಟೀ ಕ್ಷೇತ್ರಕ್ಕೆ ದಯಮಾಡಿಸಿದರು.

ಆ ವರ್ಷದ ಶ್ರೀ ಶಂಕರಜಯಂತೀ ಸಮಾರಂಭವು (೧೯೬೫) ಅತ್ಯಂತ ಮಹತ್ವದ ಉತ್ಸವವಾಗಿತ್ತು. ಅದರಲ್ಲಿ ಶೃಂಗೇರಿ ದ್ವಾರಕಾ ಮತ್ತು ಪೂರೀ ಶಂಕರಾಚಾರ್ಯರು ಪಾಲ್ಗೊಂಡಿದ್ದರು. ಈ ಮಹಾ ಸಮ್ಮೇಳನವನ್ನು ದರ್ಶಿಸಲು ದಕ್ಷಿಣ ಭಾರತದ ಅನೇಕ ಕಡೆಗಳಿಂದ ಸಾವಿರಾರು ಜನರು ಕಾಲಟೀ ಕ್ಷೇತ್ರಕ್ಕೆ ದಯಮಾಡಿಸಿದ್ದರು. ಹಿಂದೂ ಧರ್ಮದ ಪುನರುತ್ಥಾನಕ್ಕೆ ಮೂವರು ಜಗದ್ಗುರುಗಳೂ ವಿಶೇಷ ಸಂದೇಶವನ್ನಿತ್ತು ಧರ್ಮದ ರಕ್ಷಣೆಗೆ ಸೂಕ್ತಮಾರ್ಗವನ್ನೂ ಸೂಚಿಸಿದರು.

ಶ್ರೀ ದ್ವಾರಕಾ ಜಗದ್ಗುರುಗಳವರು ಉಪನ್ಯಾಸ ಮಾಡುತ್ತಾ “ ಶ್ರೀ ಶಂಕರ ಭಗವತ್ಪಾದರು ಕೇವಲ ಮೂವತ್ತೆರಡು ವರ್ಷಗಳ ಭವ್ಯ ಜೀವಿತದಲ್ಲಿ ಮಾಡಿದಂತಹ ಮಹತ್ಕಾರ್ಯಗಳು ಚಿರಸ್ಮರಣೀಯವಾದವು. ಭಗವತ್ಪಾದರು ಭರತಖಂಡವನ್ನೆಲ್ಲಾ ಸಂಚರಿಸಿ ವೇದ ವಿರುದ್ಧವಾದ ಮಾರ್ಗಗಳನ್ನು ಖಂಡಿಸಿ ಅನೈತಿಕ ಆಚಾರಗಳನ್ನು ನಿವಾರಿಸಿ ಹಿಂದೂಧರ್ಮದ ಪಾವಿತ್ರ್ಯವನ್ನು ಕಾಪಾಡಿದರು. ಅನೇಕ ಗ್ರಂಥಗಳನ್ನು ರಚಿಸಿದರು. ತಮ್ಮ ಧರ್ಮಪ್ರಸಾರ ಕಾರ್ಯ ಮುಂದುವರೆಯುವಂತೆ ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿದರು. ಅವರನ್ನು ಸ್ಮರಿಸುವುದರಿಂದಲೂ ಅವರ ಗ್ರಂಥಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗಾಗ ಓದುವುದರಿಂದಲೂ ನಮಗೆಲ್ಲರಿಗೂ ಅತ್ಯಂತ ಪ್ರಯೋಜನವುಂಟು. ಸಂಸ್ಕೃ ಭಾಷೆ ಬರದವರು ಸಂಸ್ಕೃತವನ್ನು ಕಲಿತು ಶ್ರೀ ಭಗವತ್ಪಾದರ ಗ್ರಂಥಗಳನ್ನು ಮೂ ದಲ್ಲಿಯೇ ಅಧ್ಯಯನ ಮಾಡುವ ಯತ್ನ ಮಾಡಬೇಕು. ಶಂಕರ ಸೇವಾ ಸಮಿತಿಯು ಎಲ್ಲಾ ಭಾಷೆಗಳಲ್ಲಿಯೂ ಶ್ರೀ ಶಂಕರರ ಉಪದೇಶವಾಣಿಯನ್ನು ಮುದ್ರಿಸಿ ಉಚಿತವಾ ಹಂಚಬೇಕೆಂದು" ಅಪ್ಪಣೆ ಕೊಡಿಸಿದರು.

ಅನಂತರ ಶ್ರೀಪುರೀ ಜಗದ್ಗುರುಗಳರು ಉಪನ್ಯಾಸವನ್ನು ಅನುಗ್ರಹಿಸುತ್ತಾ "ಶ್ರೀ ಶಂಕರ ಭಗವತ್ಪಾದರು ಉಪದೇಶಿಸಿದ್ದ ಅನ್ಯಮತ ಸಹಿಷ್ಣುತೆ ಮತ್ತು ವೈದಿಕ ಪೂಜಾ ವಿಧಾನವು ಸರ್ವಶ್ರೇಷ್ಠವಾಗಿದ್ದು ಶ್ರೀ ಭಗವತ್ಪಾದರು ಒಬ್ಬನೇ ದೇವನ ವಿವಿಧ ನಾಮ ರೂಪಗಳನ್ನು ಕುರಿತು ಹೃದಯಾನಂದಕರವಾದ ಸ್ತೋತ್ರಗಳನ್ನು ರಚಿಸಿ ಭಾರತೀಯರಿ ಮಹದುಪಕಾರವನ್ನು ಮಾಡಿರುವರು. ಧರ್ಮವನ್ನು ನಾವು ರಕ್ಷಿಸದಿದ್ದರೂ ಅದು ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಸಮರ್ಥವಾ .ದೆ. ಆದರೆ ಧರ್ಮವನ್ನು ಅನುಸರಿಸದವರು ದುಃ ವಿಪತ್ತುಗಳಿಗೆ ಸಿಕ್ಕುವುದು ಖಂಡಿತ. ಆದ್ದರಿಂದ ಎಂತಹ ಕಷ್ಟದ ಪರಿಸ್ಥಿತಿಯಲ್ಲೂ ಧರ್ಮವನ್ನು ಕೈಬಿಡದಿದ್ದರೆ ಅದು ನಮ್ಮನ್ನು ರಕ್ಷಿಸುತ್ತದೆ." ಎಂದು ಅಪ್ಪಣೆ ಕೊಡಿ ದರು. ಶ್ರೀ ಗುರುಗಳವರು ಶ್ರೀ ಶಂಕರ ಕೃಪಾ ಪತ್ರಿಕೆಯ ಸಂಸ್ಕೃತ ಸಂಚಿಕೆಯು ಬೇಗ ಹೊರಬೀಳಲೆಂದು ಆಶಿಸಿದರು.

ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರು ಸಮಾರೋಪ ಭಾಷಣ ಮಾಡುತ್ತಾ, ಶಂಕರ ವಿಶ್ವವಿಶಾಲ ಮನೋಭಾವ, ಸಮ್ಯಗ್ ದೃಷ್ಟಿ, ಪ್ರಚಂಡ ಸಂಚಾಲನಶಕ್ತಿ ಇವುಗಳನ್ನು ಹೃದಯಂಗಮವಾಗಿ ಬಣ್ಣಿಸಿದರು. "ಶ್ರೀ ಶಂಕರ ಭಗ ವತ್ಪಾದರು ನಂಬೂದರಿ ಬ್ರಾಹ್ಮಣ ಕುಲದಲ್ಲಿ ಕೇರಳದಲ್ಲಿ ಅವತಾರ ಮಾಡಿದರೂ ತಮ್ಮ ಸ್ವಂತ ಕ್ಷೇತ್ರದಲ್ಲಿಯೇ ಮಠವನ್ನು ಸ್ಥಾಪಿಸಲಿಲ್ಲ. ನಂಬೂದರೀ ಬ್ರಾಹ್ಮಣರನ್ನು ಮಠಾಧಿ ಪತಿಗಳನ್ನಾಗಿ ಮಾಡಲಿಲ್ಲ. ಅವರದು ಅತ್ಯಂತ ವಿಶಾಲವಾದ ದೃಷ್ಟಿ. ಭರತಖಂಡದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದರು. ಆ ಪೀಠಾಧಿಪತಿ ಗಳಾದರೋ ಬೇರೆ ಬೇರೆ ಪ್ರಾಂತ್ಯದ ಬೇರೆ ಬೇರೆ ಭಾಷೆಗಳನ್ನಾಡುವ ಮನೆತನಗಳಿಗೆ ಸೇರಿದ ವರಾಗಿದ್ದರು. ಶ್ರೀ ಭಗವತ್ಪಾದರು ತಮ್ಮ ಮಾತೃಭಾಷೆಯಾಗಿದ್ದ ಮಲೆಯಾಳದಲ್ಲಿ ಗ್ರಂಥರಚನೆಮಾಡಲಿಲ್ಲ. ಅಂದಿನ ರಾಷ್ಟ್ರಭಾಷೆಯಾಗಿದ್ದ ಸಂಸ್ಕೃತದಲ್ಲಿ ಗ್ರಂಥ ರಚನೆ ಮಾಡಿದರು. ಇಂದಿನ ವಿಜ್ಞಾನ ಮತ್ತು ಧರ್ಮಗಳ ಘರ್ಷಣೆಗೆ ಮುನ್ನವೇ ಶ್ರೀ ಭಗವತ್ಪಾ ದರು ನಾಸ್ತಿಕತೆಯ ಸವಾಲನ್ನು ಅತ್ಯಂತ ಸಮರ್ಥವಾಗಿ ಎದುರಿಸಿ ಧರ್ಮವನ್ನು ಭದ್ರ ವಾದ ಬುನಾದಿಯ ಮೇಲೆ ನಿಲ್ಲಿಸಿದ್ದರು. ಅಭ್ಯುದಯವಿಲ್ಲದೆಯೇ ನಿಶ್ರೇಯವಿರದು, ಇಂದು ವಿಜ್ಞಾನಮತ್ತು ತತ್ವಶಾಸ್ತ್ರಗಳಲ್ಲಿ ಸಾಮರಸ್ಯವೇರ್ಪಡುತ್ತಿದ್ದು ಅವು ಸಮೀಪಕ್ಕೆ ಬರುತ್ತಿವೆ. ಇದನ್ನು ಭಗವತ್ಪಾದರು ಬಹು ಹಿಂದೆಯೇ ಕಂಡುಕೊಂಡಿದ್ದರು. ಶಂಕರ ಸೇವಾ ಸಮಿತಿಯು ಭರತ ಖಂಡದಲ್ಲಿ ಶಂಕರರ ಉಪದೇಶಗಳ ಪ್ರಚಾರ ಪ್ರಸಾರಕ್ಕಾಗಿ ಒಂದು ಮಹಾ ಆಂದೋಳನವನ್ನೇ ನಡೆಸಿ ಜಾಗೃತಿಯನ್ನು ಉಂಟುಮಾಡಲಿ" ಎಂದು ಹಾರೈಸುತ್ತಾ ಉಪದೇಶ ಭಾಷಣವನ್ನು ಮುಕ್ತಾಯಗೊಳಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

೨೨. ರಾಷ್ಟ್ರಹಿತಕ್ಕಾಗಿ ಅನುಷ್ಠಾನಗಳು

ಕಾಲಟಿಯ ಕಾರ್ಯಕ್ರಮಗಳನಂತರ ಶ್ರೀ ಮಹಾಸ್ವಾಮಿಗಳವರು ಕೊಯಮುತ್ತೂರು, ತಿರುಚಿರಾಪಳ್ಳಿ, ಮಧುರೆ ಜಿಲ್ಲೆಗಳಲ್ಲಿ ಸಂಚರಿಸಿ ಶ್ರೀ ಸದಾಶಿವ ಬ್ರಹ್ಮೇಂದ್ರರ ಮುಕ್ತಿಕ್ಷೇತ್ರವೆಂದು ಪ್ರಸಿದ್ಧವಾದ ನೆರೂರು ಕ್ಷೇತ್ರಕ್ಕೆ ದಯಮಾಡಿಸಿದರು. ಶ್ರೀ ಸದಾಶಿವ ಬ್ರಹ್ಮೇಂದ್ರರ ಸಮಾಧಿಯಲ್ಲಿ ನಿರ್ಮಿತವಾದ ನೂತನ ದೇವಾಲಯದಲ್ಲಿ ಶ್ರೀ ಸದಾಶಿವ ಬ್ರಹ್ಮೇಂದ್ರರ ಬಹು ಹಿಂದಿನ ಅಪೇಕ್ಷೆಯಂತೆ ಕಾಶಿಯಿಂದ ತರಲ್ಪಟ್ಟಿದ್ದ ಬಾಣಲಿಂಗವು ಪ್ರತಿಷ್ಠಿಸಲ್ಪಟ್ಟಿತ್ತು. ಶ್ರೀ ಶ್ರೀಗಳವರು ಆ ದೇವಾಲಯದ ಕುಂಭಾಭಿಷೇಕವನ್ನು ನಡೆಸಿ ಕೊಟ್ಟು ಅಲ್ಲಿಂದ ಪ್ರಯಾಣ ಬೆಳೆಸಿ ಸೇಲಂ ನಗರಕ್ಕೆ ದಯಮಾಡಿಸಿದರು.

ಆ ವರ್ಷದ ಚಾತುರ್ಮಾಸ್ಯವ್ರತವು (೧೯೬೫) ಸೇಲಂ ನಗರದಲ್ಲಿಯೇ ನಡೆದು ಗಣಪತಿ ವಿದ್ವತ್ಸಭೆಯೂ ಅಲ್ಲಿಯೇ ನಡೆಯಿತು. ಶ್ರೀ ಶ್ರೀಗಳವರು ದಕ್ಷಿಣೋತ್ತರ ಭಾರತಗಳಿಂದ ಆಗಮಿಸಿದ್ದ ಪಂಡಿತೋತ್ತಮರನ್ನು ವಿಶೇಷವಾಗಿ ಸನ್ಮಾನಿಸಿದರು.

ಮದರಾಸ್ ನಗರದ ಪೌರರ ಪ್ರಾರ್ಥನೆಯಂತೆ ಮಹಾಸ್ವಾಮಿಗಳವರು ಸೇಲಂನಿಂದ ಹೊರಟು ರಾಣೀಪೇಟೆಯ ಮುಖಾಂತರ ಮದ್ರಾಸ್ ನಗರಕ್ಕೆ ದಯಮಾಡಿಸಿದರು. ಅಲ್ಲಿ ರಾಜಾ ಅಣ್ಣಾಮಲೈ ನಗರದ ಶಿವಸುಜಾ ಎಂಬ ಪ್ರಾಸಾದದಲ್ಲಿ ಬಿಡಾರಮಾಡಿದರು.

ಆಗ ದೇಶದಲ್ಲಿ ಅತ್ಯಂತ ದುರ್ಭರಸ್ಥಿತಿ ಒದಗಿತ್ತು. ಪಾಕಿಸ್ತಾನವು ಭರತಖಂಡಕ್ಕೆ ಮೊದಲಿಂದಲೂ ತೋರುತ್ತಿದ್ದ ದ್ವೇಷ ವೈಷಮ್ಯಗಳು, ಆಗ ಅತ್ಯಂತ ತೀವ್ರವಾಗಿ ಮುಗಿಲುಮುಟ್ಟಿದ್ದು ಯುದ್ಧ ಪ್ರಾಪ್ತವಾಗಿ ದೇಶದಲ್ಲೆಲ್ಲಾ ಶತ್ರು ಪರಾಜಯಕ್ಕಾಗಿ ವಿಶೇಷ ಪ್ರಯತ್ನಗಳೂ ನಡೆಯುತ್ತಿದ್ದವು. ಶತ್ರುಗಳ ದಮನಕ್ಕೆ ಪೂರ್ವ ಕಾಲದಿಂದಲೂ ನಮ್ಮ ದೇಶದಲ್ಲಿ ಇಬ್ಬಗೆಯ ಕಾರ್ಯಕ್ರಮಗಳು ಜರುಗಿತ್ತಿದ್ದವು. ಮೊದಲನೆಯದು ಸೈನ್ಯದ ಸಜ್ಜು, ಸೈನ್ಯಕ್ಕೆ ಅಗತ್ಯವಾದ ಆಹಾರ ಮದ್ದು ಗುಂಡುಗಳು ಔಷಧ ಸಾಮಗ್ರಿಗಳು, ಬಟ್ಟೆಬರೆಗಳ ಪೂರೈಕೆ ಎಲ್ಲಾ ಜನಾಂಗದ ಐಕ್ಯ ಪ್ರಯತ್ನ ಇದು ಒಂದು ಕಡೆ ನಡೆಯುತ್ತಿದ್ದರೆ, ಮತ್ತೊಂದು ಕಡೆ ದೇಶಕ್ಕೆ ಬಂದೊದಗಿದ ವಿಪತ್ತಿನ ನಿವಾರಣೆಗಾಗಿ ವಿಶೇಷಪೂಜಾ ಪ್ರಾರ್ಥನೆಗಳು ಸಲ್ಲಿಸಲ್ಪಡುತ್ತಿದ್ದವು. ಇಂತಹ ಪೂಜಾ ಹೋಮಗಳಲ್ಲಿ ವಿಶೇಷ ಫಲದಾಯಕವಾದುದು ಶ್ರೀ ಚಂಡೀ ಮತ್ತು ಶ್ರೀ ರುದ್ರಪಾರಾಯಣ ಯಾಗಾದಿಗಳು. ಇವುಗಳ ಫಲ ಅದೃಷ್ಟವಾದುದರಿಂದ ಜನ ಸಾಮಾನ್ಯರೂ ಸದಾ ಲೌಕಿಕ ವಿಚಾರಗಳಲ್ಲಿಯೇ ನಿರತರಾದ ಆಧುನಿಕ ವಿದ್ಯಾವಂತರೂ, ಪಾಶ್ಚಾತ್ಯ ರಾಜಕೀಯ ಬುದ್ಧಿಯನ್ನೇ ಬೆಳೆಸಿಕೊಂಡ ನಾಯಕವರ್ಗದವರೂ ಹೋಮಹವನಾದಿಗಳೆಲ್ಲವೂ ವ್ಯರ್ಥವೆಂದೂ ಅಮೂಲ್ಯವಾದ ತುಪ್ಪ ಮತ್ತು ಇತರ ಪದಾರ್ಥಗಳನ್ನು ಬೆಂಕಿಗೆ ಹಾಕುವುದು ದಂಡವೆಂದೂ ಪ್ರಚಾರಮಾಡುವುದುಂಟು. ಆದರೆ ಭಗವಂತನನ್ನು ಧ್ಯಾನಿಸಿ ಮಾಡಿದ ಯಾವ ಒಳ್ಳೆಯ ಕೆಲಸವೂ ವ್ಯರ್ಥವಾಗದು, ತಕ್ಷಣವೇ ಫಲವು ಕಾಣದುದರಿಂದ ಇಂತಹ ಕಾರ್ಯಗಳನ್ನು ಅಪ್ರಯೋಜಕವೆಂದು ತಿರಸ್ಕರಿಸಲಾಗದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮದರಾಸಿನ ಪೌರರೂ, ನಾಗರೀಕರೂ ಶ್ರೀ ಜಗದ್ಗುರುಗಳವರ ದರ್ಶನವ ದೇಶಕ್ಕೆ ಬಂದಿರುವ ವಿಪನ್ನಿವಾರಣೆಗೆ ಸಹಸ್ರಚಂಡೀ ಮಹಾಯಾಗವನ್ನು ಅತಿರು ಸ್ವಾಹಾಕಾರ ಮಹಾಯಜ್ಞವನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸಿ ಶ್ರೀ ಜಗದ್ಗುರುಗಳ ರಿಂದ ಅನುಮತಿಯನ್ನು ಪಡೆದಿದ್ದರು.

ಮದರಾಸ್ ನಗರಕ್ಕೆ ಆಗಮಿಸಿದ ಶ್ರೀ ಜಗದ್ಗುರುವರ್ಯರು ತ್ಯಾಗರಾಜನಗ ಶೃಂಗೇರಿ ಮಠದಲ್ಲಿ ಎರಡುದಿನ ಬಿಡಾರಮಾಡಿ, ಅನಂತರ ಪಶ್ಚಿಮ ಅಣ್ಣಾಮಲೈ ವಿಸ್ತರಣದಲ್ಲಿ ಶ್ರೀ ಗಣಪತಿಯನ್ನೂ, ಮೈಲಾಪುರದಲ್ಲಿ ಶ್ರೀ ಕಪಿಲೇಶ್ವರ ಸ್ವಾಮಿಯನ್ನ ಅರ್ಚನೆಮಾಡಿ ಪಾದಚಾರಿಗಳಾಗಿ ರಾಜಾ ಅಣ್ಣಾಮಲೈಪುರದ ಶ್ರೀ ವೈದ್ಯಸುಬ್ರಹ್ಮ ಅಯ್ಯರ್‌ರವರ ನವಸುಜಾ ಭವನಕ್ಕೆ ದಯಮಾಡಿಸಿದರು. ಶ್ರೀ ಚಂದ್ರಶೇಖರಭಾರ ಮಹಾಸ್ವಾಮಿಗಳವರ ಆರಾಧನೆಯನ್ನು ನೆರವೇರಿಸಿ ಅನಂತರ ನವರಾತ್ರಿ ಉತ್ಸವವನ್ ಪ್ರಾರಂಭಿಸಿದರು. ನವರಾತ್ರಿಯ ಒಂಭತ್ತು ದಿನಗಳ ಕಾಲವೂ ಮಧ್ಯಾಹ್ನ ಜಗದ್ಗುರುಗಳವರೇ ಶ್ರೀ ದೇವಿನವಾವರಣ ಪೂಜೆಯನ್ನೂ, ಶ್ರೀ ಶಾರದಾಪೂಜೆಯನ್ ನೆರವೇರಿಸುತ್ತಿದ್ದರು. ರಾತ್ರಿಯಕಾಲದಲ್ಲಿ ಪ್ರಾಚೀನ ಸಂಪ್ರದಾಯದಂತೆ ಕಿರೀಟ ಗಳನ್ನು ಧರಿಸಿ ವ್ಯಾಖ್ಯಾನಸಿಂಹಾಸನದಲ್ಲಿ ಮಂಡಿಸುತ್ತಿದ್ದರು. ರಾತ್ರಿಕಾಲದಲ್ಲಿಯ ಸಹ ಗುರುಗಳವರೇ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ನಡೆಸುತ್ತಿದ್ದರು. ಸುವಾಸಿ ಮತ್ತು ಕನ್ನಿಕಾ ಪೂಜೆಯನಂತರ ವಿಜಯದಶಮಿಯದಿನ ಶ್ರೀ ಶಾರದಾಂಬಾರ ಉತ್ಸವದೊಡನೆ ನವರಾತ್ರಿ ಸಮಾರಂಭಗಳು ಮುಕ್ತಾಯವಾದುವು.

ಅನಂತರ ಸಹಸ್ರ ಚಂಡೀಯಜ್ಞದ ಕಾರ್ಯಕ್ರಮಗಳು ಆರಂಭವಾದವು. ಶ್ರೀ ಶೃಂಗೇರಿಯ ಜಗದ್ಗುರುಗಳವರಿಗೂ ಸಹಸ್ರಚಂಡೀ ಮತ್ತು ರುದ್ರಯಾಗಗಳಿಗೂ ವಿಶೇ ವಾದ ದೈವಿಕ ಸಂಬಂಧವುಂಟು. ಹಿಂದೆ ಟಿಪ್ಪುವು ಬ್ರಿಟಿಷರೊಡನೆ ಯುದ್ಧ ಮಾಡು ತ್ತಿದ್ದಾಗ ಶ್ರೀ ಸಹಸ್ರಚಂಡೀಯಾಗವನ್ನು ನೆರವೇರಿಸಲು ಶೃಂಗೇರೀ ಜಗದ್ಗುರುಗಳ ರನ್ನು ಪ್ರಾರ್ಥಿಸಿ, ಅದಕ್ಕೆ ಅಗತ್ಯವಾದ ಪದಾರ್ಥಗಳನ್ನು ಸರಬರಾಜು ಮಾಡಿಸಿದ್ದನ ತತ್ಫಲವಾಗಿ ತನಗೆ ದೊರಕಿದ ಜಯದಿಂದ ಸಂತೋಷಿಸಿ ಶ್ರೀ ಶ್ರೀಗಳವರಿಗೆ ಬಿನ್ನಹಪತ್ರ ವನ್ನು ಬರೆದು ಕೃತಜ್ಞತೆಯನ್ನು ಅರ್ಪಿಸಿದ್ದನು.

ಎಲ್ಲ ಹಿಂದಿನ ಆಚಾರ್ಯರಂತೆಯೇ ಮತ್ತು ಇನ್ನೂ ವಿಶೇಷವಾಗಿ ಶ್ರೀ ವಿದ್ ತೀರ್ಥಸ್ವಾಮಿಗಳವರು ಮಹಾರುದ್ರ ಅತಿರುದ್ರಗಳನ್ನೂ ಶತಚಂಡೀ ಸಹಸ್ರಚಂಡಿ ಹೋಮಗಳನ್ನು ತಾವು ಪದಾರ್ಪಣಮಾಡಿದ ಅನೇಕ ಸ್ಥಳಗಳಲ್ಲಿ ನೆರವೇರಿಸಿ ಲೋಕ ಕಲ್ಯಾಣವನ್ನು ಉಂಟುಮಾಡುತ್ತಿದ್ದಾರೆ. ಸಹಸ್ರಚಂಡೀ ಕ್ರತುವಿಗೆ ಶ್ರೀ ದೇವಿ ಸಪ್ತಶತಿಯ ಏಳನೂರು ಮಂತ್ರಗಳನ್ನು ಒಂದು ಸಹಸ್ರಾವರ್ತಿ ಪಾರಾಯಣಮಾ ಅದರ ದಶಾಂಶದಷ್ಟು ಮಂತ್ರಗಳಿಂದ ಕ್ಷೀರಾನ್ನವನ್ನು ಯಜ್ಞೇಶ್ವರನಲ್ಲಿ ಹೋಮ ಮಾ ಬೇಕು. ಮದರಾಸಿನ ಆಸ್ತಿಕರು ಪ್ರಪ್ರಥಮವಾಗಿ ತಮ್ಮ ನಗರದಲ್ಲಿ ಜರುಗುತ್ತಿ ಈ ಮಹೋತ್ಸವಕ್ಕೆ ವಿಶೇಷವಾದ ಸಿದ್ಧತೆಗಳನ್ನು ಮಾಡಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಗಶಾಲೆಯ ಪ್ರವೇಶಕ್ಕೆ ನಾಲ್ಕು ಮಹಾದ್ವಾರಗಳಿದ್ದು ಪ್ರತಿಯೊಂದು ಮಹಾದ್ವಾರಕ್ಕೂ ಆಯಾ ದಿಗ್ಭಾಗವನ್ನು ಅನುಸರಿಸಿ ಶೃಂಗೇರಿ, ದ್ವಾರಕಾ, ಬದರಿ ಮತ್ತು ಪುರೀ ಮಹಾದ್ವಾರಗಳೆಂದು ಹೆಸರುಗಳು ಕೊಡಲ್ಪಟ್ಟಿದ್ದುವು. ಆಯಾ ಮಹಾದ್ವಾರದ ಮೇಲೆ ಆಯಾ ಆಮ್ನಾಯ ಪೀಠದ ಮಹಾವಾಕ್ಯಗಳನ್ನು ಬರೆಸಿದ್ದರು. ಯಾಗಶಾಲೆಯೊಳಗಡೆ ಎತ್ತರವಾದ ಪೀಠದಮೇಲೆ ಹತ್ತು ಹೋಮಕುಂಡಗಳು ನಿರ್ಮಿತವಾಗಿದ್ದವು. ಮಹಾಚಂಡಿಯ ಎರಡು ವರ್ಣಚಿತ್ರಗಳೂ ಆಕೆಯ ದಿವ್ಯ ಸನ್ನಿಧಿಯನ್ನು ಸಾರುವ ಸಂಕೇತವಾಗಿದ್ದುವು. ಶ್ರೀ ಜಗದ್ಗುರುಗಳವರು ಶ್ರೀ ರಾಜರಾಜೇಶ್ವರಿ ರಜತ ವಿಗ್ರಹದೊಡನೆ ಯಾಗಶಾಲೆಯನ್ನು ಪ್ರವೇಶಿಸಿ ಋತ್ವಿಜರಿಗೆ ಯಾಗದ ಪ್ರಾಮುಖ್ಯವನ್ನು ವಿವರಿಸಿ ಋತ್ವಿಜರೆಲ್ಲರೂ ಭಕ್ತಿ ಶ್ರದ್ಧೆಯಿಂದ ಪಾರಾಯಣ, ಪೂಜೆ ಹೋಮಗಳಲ್ಲಿ ನಿರತರಾಗಬೇಕೆಂದು ಅಪ್ಪಣೆ ಮಾಡಿದರು. ಮಹಾ ಸಂಕಲ್ಪದನಂತರ ನಾಲ್ಕು ದಿನಗಳ ಕಾಲ ಏಕೋತ್ತರ ವೃದ್ಧಿಕ್ರಮದಲ್ಲಿ ಸಪ್ತಶತೀ ಪಾರಾಯಣ ನಡೆದು ಐದನೆಯದಿನ ಜಗನ್ಮಾತೆಯಾದ ಶ್ರೀ ಚಂಡಿಕೆಯ ಪ್ರೀತ್ಯರ್ಥವಾಗಿ ಹೋಮ ನಡೆಯಿತು. ಆ ಮಂತ್ರಘೋಷವೂ ಹೋಮಧೂಮವೂ ಸಾವಿರಾರು ವರ್ಷಗಳ ಹಿಂದಿನ ದೇವಋಷಿಗಳ ಲೋಕವನ್ನು ಸ್ಮರಣೆಗೆ ತರುತ್ತಿತ್ತು. ಪೂರ್ಣಾಹುತಿಯದಿನ ಆಗಮಿಸಿದ್ದ ಭಕ್ತರ ಸಂಖ್ಯೆಯಂತೂ ಮೂವತ್ತು ಸಹಸ್ರಕ್ಕೂ ಮೀರಿತ್ತು. ಆ ಸಂದರ್ಭದಲ್ಲಿ ಶ್ರೀ ಜಗದ್ಗುರುಗಳವರ ಸಂದೇಶವನ್ನು ಆಕಾಶವಾಣಿಯ ಮದ್ರಾಸ್ ನಿಲಯವು ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿ ಪ್ರಸಾರ ಮಾಡಿತು.

ಮದ್ರಾಸ್ ನಗರದ ಭಾವುಕರಿಗೆ ಶ್ರೀ ಜಗದ್ಗುರುಗಳವರ ದಿವ್ಯ ಸನ್ನಿಧಿಯಲ್ಲಿ ಮತ್ತೊಂದು ಮಹಾಯಾಗವನ್ನು ಮಾಡುವ ಸದವಕಾಶವೂ ದೊರಕಿತ್ತು. ಶತ್ರುಭೀತಿ ನಿವಾರಣೆಗಾಗಿ ಚಂಡೀಹೋಮ ನಡೆದಂತೆಯೇ ದೇಶದ ಸುಖಶಾಂತಿಗಾಗಿ ಈಶ್ವರ ಪ್ರೀತ್ಯರ್ಥವಾಗಿ ಅತಿರುದ್ರ ಸ್ವಾಹಾಕಾರ ಮಹಾಯಾಗವೂ ನಡೆಯಲು ಏರ್ಪಾಡಾಯಿತು. ಯಜುರ್ವೇದದ ರುದ್ರಮಹಾಮಂತ್ರವನ್ನು ೧೪೬೪೧ ಆವರ್ತಿ ಪಾರಾಯಣ ಮಾಡಿ ಅನಂತರ ಅದರ ದಶಾಂಶದಷ್ಟು ಮಂತ್ರಗಳಿಂದ ಹೋಮಮಾಡಿ ಚಮಕ ಮಂತ್ರದ ಘೋಷದೊಡನೆ ಪೂರ್ಣಾಹುತಿಯನ್ನು ಸಮರ್ಪಿಸುವುದು ಒಂದು ವಿಶೇಷ ವೈದಿಕ ಕ್ರಮ. ಶ್ರೀ ಜಗದ್ಗುರುಗಳವರ ಅಪ್ಪಣೆಯಂತೆ ಈ ಕಾರ್ಯವೂ ನೆರವೇರಿಸಲ್ಪಟ್ಟಿತು.

ಯಾಗಾರಂಭದ ದಿನ ಶ್ರೀ ಉಮಾಮಹೇಶ್ವರ ಮೂರ್ತಿಯ ರಜತ ವಿಗ್ರಹವನ್ನು ಉತ್ಸವದಲ್ಲಿ ಯಾಗಶಾಲೆಗೆ ಬಿಜಯಮಾಡಿಸಿ ಜಗದ್ಗುರುಗಳವರು ಮಹಾಸಂಕಲ್ಪವನ್ನು ಮಾಡಿಸಿದರು. ಋತ್ವಿಜರಿಗೆಲ್ಲಾ ಉಪದೇಶವನ್ನು ಕೊಟ್ಟು ಇಂತಹ ಮಹಾಯಾಗಗಳು ನಡೆಯಲು ಶ್ರದ್ಧಾಭಕ್ತಿಗಳೂ, ಶರೀರ ಮತ್ತು ಆತ್ಮಶುದ್ಧಿಯೂ ಅತ್ಯವಶ್ಯಕವೆಂದು ನುಡಿದು ಪ್ರತಿಋತ್ವಿಜರೂ ಭಗವತ್ಸಾನ್ನಿಧ್ಯವನ್ನು ಅನುಭವಿಸುತ್ತಾ ಕ್ರಮಶೀಲರಾಗಬೇಕೆಂದು ಅಪ್ಪಣೆಮಾಡಿದರು. ಯಾಗಪೂರ್ಣಾಹುತಿಯು ಆ ವರ್ಷದ ದೀಪಾವಳಿಯ ದಿನ ನಡೆದು ಅತ್ಯಧಿಕ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀಗಳವರ ನಲ್ವೊತ್ತೊಂಬತ್ತನೆಯ ವರ್ಧಂತಿ ಉತ್ಸವವು ಆಗ ಮದ್ರಾಸ್ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್‌ರವರ ನೇತೃತ್ವದಲ್ಲಿ ನಡೆಯಿತು ಸಾವಿರಾರು ಜನ ಆ ದಿನ ಗುರುಸನ್ನಿಧಿಯಲ್ಲಿ ಸೇರಿ ಗುರುಗಳಿಗೆ ತಮ್ಮ ಭಕ್ತಿ ಶ್ರದ್ಧೆಯ ಕಾಣಿಕೆಯನ್ನರ್ಪಿಸಿ ಆಶೀರ್ವಾದ ಪಡೆದರು. ಶ್ರೀ ಶಾರದಾಂಬಾರವರಿಗೆ ಕನಕಾಭಿಷೇ ನಡೆಸಿದ್ದ ಚಿನ್ನದ ನಾಣ್ಯಗಳನ್ನೂ ಐದು ಸಹಸ್ರ ರೂಪಾಯಿಗಳನ್ನೂ ಶ್ರೀ ಜಗದ್ಗುರುಗ ವರು ರಾಷ್ಟ್ರೀಯ ರಕ್ಷಣಾ ನಿಧಿಗಾಗಿ ತಮಿಳುನಾಡಿನ ಮುಖ್ಯಮಂತ್ರಿ ಶ್ರೀ ಭಕ್ತವತ್ಸಲ ಅನುಗ್ರಹಿಸಿದರು. ಮದರಾಸಿನಲ್ಲಿ ಶ್ರೀ ಜಗದ್ಗುರುಗಳವರು ಯಜ್ಞಗಳನ್ನು ನಡೆಸಿ ಪವಿತ್ರ ಭೂಮಿಯನ್ನು ಅದರ ಒಡೆಯರು ಶ್ರೀ ಜಗದ್ಗುರುಗಳವರಿಗೇ ಕಾಣಿಕೆಯಾ ಅರ್ಪಿಸಿದರು. ಶ್ರೀ ಮಹಾಸ್ವಾಮಿಗಳವರು ಅಲ್ಲಿ ಪ್ರವಚನ ಮಂದಿರ ಒಂದಕ್ಕೆ ಶಂಕು ಸ್ಥಾಪನೆಯನ್ನು ಮಾಡಿದರು.

ಮದರಾಸ್ ಕೋಡಂಬಾಕ್‌ಂನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿ ಯರಿಂಗ್ ಮತ್ತು ಟೆಕ್ನಾಲಜಿಯ ಆವರಣದಲ್ಲಿ ಶ್ರೀ ಶಾರದಾ ದೇವಾಲಯಕ್ಕೆ ಅಸ್ತಿ ಭಾರವನ್ನು ಹಾಕಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಆವರಣದಲ್ಲಿದ್ದ ಶ್ರೀ ಜಲಕಂಠೇಶ್ವರ ಸ್ವಾಮಿಯ ಆಲಯದಲ್ಲಿ ಉತ್ಸವಮೂರ್ತಿಗಳ ಚರಪ್ರತಿಷ್ಠೆಯನ್ನು ಮಾಡಿದರು. ಅನಂತರ ಅಂಕಪುತ್ತೂರಿನ ಶ್ರೀ ಭವಾನೀ ಶಂಕರಾಲಯದ ಕುಂಭಾಭಿಷೇಕ ವನ್ನು ನೆರವೇರಿಸಿದರು. ಮದ್ರಾಸ್ ನಗರದ ಶಿಷ್ಯರ ಕೋರಿಕೆಯಂತೆ ಒಂದು ವಿಸ್ತರಣ ದಿಂದ ಮತ್ತೊಂದು ವಿಸ್ತರಣಕ್ಕೆ ಆಗಮಿಸುತ್ತ, ಶಿಷ್ಯರನ್ನು ಆಶೀರ್ವದಿಸಿ ಅನುಗ್ರಹಿಸಿ ದರು. ಗುರುಗಳವರ ಆರೋಗ್ಯ ಕುಂಠಿತವಾಗಿ ಅವರು ವಿಶ್ರಾಂತಿ ಪಡೆಯುವುದು ಅವಶ್ಯ ವೆಂದು ಸೂಚನೆ ಬಂದಾಗ, ಗುರುಗಳವರು ನಕ್ಕುಬಿಟ್ಟು "ಈ ಶಿಷ್ಯರೇ ನನ್ನ ಸಂಸಾರ. ಅವರನ್ನು ಬಿಟ್ಟು ನಾನೆಲ್ಲಿ ಹೋಗಲು ಸಾಧ್ಯ. ಅವರ ಅಪೇಕ್ಷೆಯಂತೆ ಅವರ ಮಧ್ಯ ದಲ್ಲಿ ಇರುವುದೇ ನನಗೂ ಸಂತೋಷ" ಎಂದು ನುಡಿದಿದ್ದರು.

ಮದ್ರಾಸ್ ನಗರದಿಂದ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಕಾಂಚೀಪುರಕ್ಕೆ ದಯಮಾಡಿಸಿದರು. ಶ್ರೀ ವರದರಾಜ, ಶ್ರೀ ಏಕಾಂಬರೇಶ್ವರ ದೇವಾಲಯಗಳಲ್ಲಿ ಗೌರವ ದಿಂದ ಸ್ವಾಗತಿಸಲ್ಪಟ್ಟ ಜಗದ್ಗುರುಗಳವರು ಶ್ರೀ ಕಾಮಾಕ್ಷೀ ದೇವಾಲಯದಲ್ಲಿ ಧರ್ಮ ದರ್ಶಿಗಳ ಪ್ರತಿನಿಧಿಯಿಂದ ಪೂರ್ಣಕುಂಭ ಮತ್ತು ದೇವಾಲಯದ ಗೌರವಪೂರ್ವಕವಾದ ಸ್ವಾಗತವನ್ನು ಸ್ವೀಕರಿಸಿದರು. ಪ್ರಾಚೀನ ಕಾಮಾಕ್ಷೀ ದೇವಾಲಯಕ್ಕೂ* ಸಂದರ್ಶನ ವಿತ್ತು ಅರ್ಚನಾದಿಗಳನ್ನು ನೆರವೇರಿಸಿದರು. ಕಾಂಚಿಯಲ್ಲಿಯೇ ಮೂರುದಿನಗಳಕಾಲ ಬಿಡಾರ ಮಾಡಿದರು. ಕಾಂಚಿಯ ಪ್ರಾಚೀನ ಶೃಂಗೇರಿ ಶಂಕರಮಠದಲ್ಲಿ ಶ್ರೀ ಗುರು

* ಶ್ರೀ ಆದಿಪೀಠೇಶ್ವರಿ ಆಲಯ. ಇಲ್ಲಿಯೇ ಶಂಕರಭಗವತ್ಪಾದರು ಶ್ರೀಚಕ್ರವನ್ನು ಪ್ರತಿಷ್ಠೆ ಮಾಡಿದ್ದುದು. ಈ ಆಲಯವು ಈಗ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಪ್ರಾಚೀನಕಾಲದ ಮುತ್ತೈದೆಯಂತೆ ಸಾಮಾನ್ಯ ರೀತಿಯಲ್ಲಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳವರು ನಡೆಸುತ್ತಿದ್ದ ಶ್ರೀ ಚಂದ್ರಮೌಳೀಶ್ವರ ಪೂಜಾಭಿಷೇಕಗಳು ಸಹಸ್ರಾರು ಜನ ಭಕ್ತರನ್ನು ಆಕರ್ಷಿಸುತ್ತಿದ್ದವು. ಕಾಂಚೀಪುರದಲ್ಲಿ ಸಾರ್ವಜನಿಕರಿಂದ ಒಪ್ಪಿಸಲ್ಪಟ್ಟ ಬಿನ್ನವತ್ತಳೆಯನ್ನು ಸ್ವೀಕರಿಸಿ ಪೌರರನ್ನು ಆಶೀರ್ವದಿಸಿದ ಗುರುಗಳು ಮುಂದಕ್ಕೆ ಪ್ರಯಾಣ ಬೆಳಸಿದರು.

ತಮಿಳುನಾಡಿದ ಪ್ರವಾಸ ಮುಗಿಸಿ ಆಂಧ್ರದೇಶದತ್ತ ಹೊರಟು ಅರಕೋಣಂ, ಪುಷ್ಪಗಿರಿ, ಕಡಪ, ಪ್ರೊದತ್ತೂರು, ಅಲಗುಡ್ಡಗಳ ಮುಖಾಂತರ ಶ್ರೀ ಗುರುವರ್ಯರು ಅಹೋಬಲಕ್ಷೇತ್ರಕ್ಕೆ ದಯಮಾಡಿಸಿ ಅಹೋಬಲ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯನ್ನು ಪೂಜಿಸಿದರು. ಬೆಟ್ಟದ ಮೇಲ್ಗಡೆ ಶ್ರೀ ನರಸಿಂಹ ಸ್ವಾಮಿಯು ಪ್ರತ್ಯಕ್ಷನಾದ ಶಿಲಾಸ್ತಂಭವನ್ನೂ ಪ್ರಹ್ಲಾದನು ತಪಸ್ಸುಮಾಡುತ್ತಿದ್ದ ಗುಹೆಯನ್ನೂ ಸಂದರ್ಶಿಸಿ ನಂದ್ಯಾಲ್‌ನಗರಕ್ಕೆ ದಯಮಾಡಿಸಿದರು. ನಂದ್ಯಾಲ್ ಪೌರರು ಸಮರ್ಪಿಸಿದ ಬಿನ್ನವತ್ತಳೆಯನ್ನು ಅಂಗೀಕರಿಸಿ ಭೀಮೇಶ್ವರ ದೇವಾಲಯದಲ್ಲಿಯೇ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ನೆರವೇರಿಸಿದರು.

ಮಹಾನಂದಿಯಲ್ಲಿ ಶ್ರೀ ಮಹಾನಂದೀಶ್ವರನನ್ನೂ ಪೂಜಿಸಿ ಕರ್ನೂಲ್, ಆದೋನಿ ಮುಖಾಂತರ ಹೈದರಾಬಾದ್ ನಗರಕ್ಕೆ ಆಗಮಿಸಿದರು. ಶ್ರೀ ಗುರುಗಳವರಿಗೆ ಆದೋನಿಯಲ್ಲಿ ಭಕ್ತರು ಅತ್ಯಂತ ಆತ್ಮೀಯತೆಯ ಸ್ವಾಗತವನ್ನು ಕೋರಿ ಬಿನ್ನವತ್ತಳೆಯನ್ನು ಅರ್ಪಿಸಿದರು. ಹೈದರಾಬಾದ್ ನಗರಕ್ಕೆ ಆಗಮಿಸುವ ಮುನ್ನ ತುಂಗಭದ್ರಾತೀರದ ಪ್ರಸಿದ್ಧ ಶಕ್ತಿಪೀಠವಾದ ಆಲಂಪುರಕ್ಕೆ ದಯಮಾಡಿಸಿ ಶ್ರೀ ಬ್ರಹ್ಮೇಶ್ವರ ಮತ್ತು ಶ್ರೀ ಯೋಗಾಂಬಾ ದೇವಿಯನ್ನು ಅರ್ಚನೆಮಾಡಿದರು.

ಹೈದರಾಬಾದ್ ನಗರದಲ್ಲಿ ಶ್ರೀ ಗುರುಗಳವರಿಗೆ ಶಿಷ್ಯವರ್ಗ ಅತ್ಯುತ್ಸಾಹ ಸಂಭ್ರಮಗಳಿಂದ ಸ್ವಾಗತವಿತ್ತಿತು, ತೆಲುಗು, ಸಂಸ್ಕೃತ, ಇಂಗ್ಲೀಷ್ ಭಾಷೆಗಳಲ್ಲಿ ಬಿನ್ನವತ್ತಳೆಗಳು ಅರ್ಪಿಸಲ್ಪಟ್ಟವು. ಜಗದ್ಗುರುಗಳವರ ದರ್ಶನಕ್ಕಾಗಿ ಅದೇ ಸಮಯದಲ್ಲಿ ಹೃಷಿಕೇಶದ ಶ್ರೀಶಿವಾನಂದಾಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ಚಿದಾನಂದರೂ ಆಗಮಿಸಿದ್ದರು. ಜಗದ್ಗುರುಗಳವರು ರಾಜ್ಯಪಾಲರಾದಿಯಾಗಿ ಹೈದರಬಾದಿನ ಅನೇಕ ಪ್ರಮುಖರಿಗೆ ಸಂದರ್ಶನವಿತ್ತು ಸಿಕಂದರಾಬಾದ್ ನಗರಕ್ಕೂ ಸಂದರ್ಶನವಿತ್ತು ಶ್ರೀಶೈಲಕ್ಕೆ ಆಗಮಿಸಿದರು.

ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಪ್ರಸಿದ್ಧವಾದ ಶ್ರೀಮಲ್ಲಿಕಾರ್ಜುನ ಲಿಂಗವಿರುವುದು ಶ್ರೀಶೈಲದಲ್ಲಿಯೇ. ಅಷ್ಟಾದಶ ಮಹಾಶಕ್ತಿಯರಲ್ಲಿ ಪ್ರಸಿದ್ಧವಾದ ಶ್ರೀ ಭ್ರಮರಾಂಬಾ ದೇವಿಯ ಸನ್ನಿಧಿ ಇರುವುದೂ ಶ್ರೀಶೈಲದಲ್ಲಿಯೇ. ಶ್ರೀ ಜಗದ್ಗುರುಗಳವರು ಈ ಎರಡು ಆಲಯಗಳಲ್ಲಿಯೂ ಸ್ವತಃ ಪೂಜಾಭಿಷೇಕಗಳನ್ನು ನೆರವೇರಿಸಿ ಶ್ರೀ ಕೃಷ್ಣದೇವರಾಯ ಗೋಪುರಕ್ಕೆ ಕುಂಭಾಭಿಷೇಕವನ್ನೂ ನೆರವೇರಿಸಿದರು. ಶ್ರೀ ಜಗದ್ಗುರುಗಳವರು ಶಿಷ್ಯಾದಿಗಳು ತಮಗೆ ತಂದೊಪ್ಪಿಸಿದ ಕಾಣಿಕೆಯನ್ನು ಶ್ರೀ ಶೈಲದಲ್ಲಿಯೇ ಶ್ರೀ ಶಂಕರಮಠ ಸ್ಥಾಪನೆಗಾಗಿ ಅನುಗ್ರಹಪೂರ್ವಕವಾಗಿ ಕೊಟ್ಟು ಬಿಟ್ಟರು. ಅನಂತರ ತ್ರಿಪುರಾಂತಕಂ ನರಸರಾವ್ ಪೇಟೆಗಳ ಮುಖಾಂತರ ಗುಂಟೂರಿಗೆ ದಯಮಾಡಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಂಟೂರಿನಲ್ಲಿ ಶಂಕರ ಮಠದಲ್ಲಿಯೇ ಬಿಡಾರ ಮಾಡಿದ ಶ್ರೀ ಶ್ರೀಗಳವರು ಲೋಕ ಕಲ್ಯಾಣಾರ್ಥವಾಗಿ ಶತಚಂಡೀ ಮತ್ತು ಮಹಾ ರುದ್ರಯಾಗಗಳನ್ನು ನೆರವೇರಿಸಿದರು. ಶ್ರೀ ಸೀತಾರಾಮಾಂಜನೇಯಲುಬರಸರು ನಿರ್ಮಿಸಿದ್ದ ನೂತನ ದೇವಾಲಯದಲ್ಲಿ ಶ್ರೀ ಜಗದ್ಗುರುಗಳವರು ಶ್ರೀ ಶಾರದಾಂಬಾರವರ ಪ್ರತಿಷ್ಠೆ ಮಾಡಿ ದೇವಿಗೆ ಲಕ್ಷಾರ್ಚನೆಯನ್ನು ನಡೆಸಿದರು. ಗುಂಟೂರಿನಲ್ಲಿಯೇ ನೂತನ ಶಾರದಾ ದೇವಾಲಯ ಮತ್ತು ಹಿಂದಿನ ಶಂಕರ ದೇವಾಲಯಗಳ ನಡುವೆ ವಿಸ್ತಾರವಾದ ಪ್ರವಚನ ಮಂದಿರವೊಂದಕ್ಕೆ ಶಂಕುಸ್ಥಾಪನೆ ನೆರವೇರಿತು. ಇದೇ ಸಮಯದಲ್ಲಿ ವಿದ್ವತ್ಸಭೆಯೂ ನಡೆದು ಅದರಲ್ಲಿ ಶ್ರೀ ಸಿದ್ಧೇಶ್ವರೀ ಪೀಠಾಧಿಪತಿಗಳೂ ಶ್ರೀ ಗಾಯಿತ್ರೀ ಪೀಠಾಧಿಪತಿಗಳೂ ಉಪಸ್ಥಿತರಾಗಿದ್ದರು. ಅದೇ ಸಮಯದಲ್ಲಿ ಶ್ರೀ ಕೆ. ಆರ್. ವೆಂಕರಾಮನ್ ಸಂಪಾದಿತ "ಕಾಲಟಿ" ಮತ್ತು ಶ್ರೀ ಕೆ. ಆರ್ ಶಾಸ್ತ್ರಿ* ವಿರಚಿತ "ಶೃಂಗೇರಿಯಜಗದ್ಗುರುಗಳೂ ಮತ್ತು ಕರ್ನಾಟಕ ಸಂಸ್ಥಾನ" ಎಂಬ ಪುಸ್ತಕಗಳೂ ಪ್ರಕಟಣಗೊಳಿಸಟ್ಟವು. ಶ್ರೀ ಜಗದ್ಗುರುಗಳವರು ಗುಂಟೂರಿನಲ್ಲಿಯೇ ಶಿವರಾತ್ರಿಯ ಮಹಾಪೂಜೆಯನ್ನು ನೆರವೇರಿಸಿದರು. ಗುಂಟೂರಿನ ಪೌರಸಭೆಯಿತ್ತ ಬಿನ್ನವತ್ತಳೆಯನ್ನು ಸ್ವೀಕರಿಸಿ ಅಲ್ಲಿಂದ ಮುಂದಕ್ಕೆ ಪ್ರಯಾಣ ಬೆಳೆಸಿದರು.

ಆಂಧ್ರ ಸರ್ಕಾರದ ಕೋರಿಕೆಯಂತೆ ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಸಮರ್ಪಕ ಪೂಜಾ ವ್ಯವಸ್ಥೆಗಳಿಗಾಗಿ ಶ್ರೀ ಜಗದ್ಗುರುಗಳವರು ಕೃಷ್ಣಾ, ಖಮ್ಮಂ, ವಾರಂಗಲ್, ಕರೀಂನಗರ್, ನೈಜಾಮಾಬಾದ್ ಮುಂತಾದ ಜಿಲ್ಲೆಗಳ ಅನೇಕ ಸ್ಥಳಗಳನ್ನು ಸಂದರ್ಶಿಸಿ ಧಾರ್ಮಿಕ ಜಾಗೃತಿಯನ್ನು ಮೂಡಿಸಿದರು. ದೊರೆ ವಿಕ್ರಮಾದಿತ್ಯನು ನಿರ್ಮಿಸಿದ್ದ ಶ್ರೀ ರಾಜರಾಜೇಶ್ವರೀ ದೇವಾಲಯವಿರುವ ವೇಮುಲವಾಡಕ್ಕೆ ದಯಮಾಡಿಸಿದ್ದ ಗುರುಗಳು ಶ್ರೀ ದೇವಿಯನ್ನು ಸ್ವತಃ ಪೂಜಿಸಿ ವೇಮುಲವಾಡದಲ್ಲಿಯೇ ಶ್ರೀ ಶಂಕರ ಜಯಂತೀ ಉತ್ಸವವನ್ನು ನೆರವೇರಿಸಿದರು.

ಎಲ್ಲಾರೆಡ್ಡಿ ಪೇಟೆಯ ಸಮೀಪದ ಈಶ್ವರ ದೇವಾಲಯದ ಕುಂಭಾಭಿಷೇಕ ನೆರವೇರಿಸಿ ಮುಂದಕ್ಕೆ ಸಂಚಾರವನ್ನು ಕೈಗೊಂಡು ಬಸಾರ್, ಭಿಂಸಾ, ಗಣಪುರಂ, ವಿಕ್ಷಿತ್ರಿ ಪೇಟೆ, ಮನಚೇರಿಯಲ್, ಪೆಲಂಪೆಳ್ಳಿ, ಸಿರ್ಪೂರ್ ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಅಲ್ಲಿನ ದೇವಾಲಯಗಳಲ್ಲಿ ಪೂಜಾದಿಗಳನ್ನು ನೆರವೇರಿಸಿದರು. ಬಸಾರ್ ಗ್ರಾಮದ ಸರಸ್ವತೀ ದೇವಾಲಯದಲ್ಲಿ ಶ್ರೀ ದೇವಿಯನ್ನು ಅಷ್ಟೋತ್ತರ ರಜತ ಪುಷ್ಪಗಳಿಂದ ಪೂಜಿಸಿದರು. ಮನಚೇರಿಯಲ್ ಗ್ರಾಮದಲ್ಲಿ ಶ್ರೀ ಕನ್ಯಕಾ ಪರಮೇಶ್ವರೀ ದೇವಿಯನ್ನು, ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಅರ್ಚಿಸಿ ಆಂಧ್ರಪ್ರದೇಶದ ಅಧಿಕಾರಿಗಳಿಂದ ಬೀಳ್ಕೊಡಲ್ಪಟ್ಟು ಮಹಾರಾಷ್ಟ್ರ ಪ್ರಾಂತ್ಯಕ್ಕೆ ದಯಮಾಡಿಸಿದರು.

---

* ಇವರು ಅನಂತರ ಸಂನ್ಯಾಸಾಶ್ರಮ ಸ್ವೀಕರಿಸಿ, ಶ್ರೀ ರಾಮಾನಂದ ಸರಸ್ವತೀ ಎಂಬ ಅಭಿಧಾನದಿಂದ ಪ್ರಸಿದ್ಧರಾಗಿದ್ದು ಇತ್ತೀಚೆಗೆ ಮುಕ್ತಿ ಹೊಂದಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

೨೩. ಉತ್ತರಭಾರತ ಯಾತ್ರೆ

ನಾಗಪುರಕ್ಕೆ ದಯಮಾಡಿಸಿದ ಶ್ರೀ ಜಗದ್ಗುರುಗಳವರನ್ನು ನಾಗರಿಕರು ಅಮಿತೋತ್ಸಾಹದಿಂದ ಸ್ವಾಗತಿಸಿ ಉತ್ಸವದಲ್ಲಿ ಬಿಜಯಮಾಡಿಸಿದರು. ಹತ್ತುದಿನಗಳ ಕಾಲ ಶ್ರೇಷ್ಠ ಸಾಂಸ್ಕೃತಿಕ ಪರಂಪರೆಯುಳ್ಳ ಆ ನಗರದಲ್ಲಿ ಬಿಡಾರ ಮಾಡಿದ್ದ ಶ್ರೀ ಶ್ರೀಗಳವರ ಕಾರ್ಯಕ್ರಮವು ಅತ್ಯಂತ ಆಕರ್ಷಕವಾಗಿತ್ತು, ಅನೇಕ ಜನ ಪ್ರಮುಖರು ಗುರುಗಳ ದರ್ಶನಕ್ಕಾಗಿ ಬರುತ್ತಿದ್ದರು. ಅನೇಕ ಸಂಘಸಂಸ್ಥೆಗಳವರು ಗುರುಗಳವರನ್ನು ತಮ್ಮ ತಮ್ಮಲ್ಲಿಗೆ ಬರಮಾಡಿಕೊಂಡು ಗೌರವಿಸಿದರು. ಕರ್ನಾಟಕ ಸಂಘ, ಗುಜರಾತೀ ಸಂಘ ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಶ್ರೀ ಭಾರತೀ ಕೃಷ್ಣಾಶ್ರಮ, ಭೌನ್ಸ್ಲೆ ಸಂಸ್ಕೃತ ವಿದ್ಯಾಪೀಠ ಮುಂತಾದ ಅನೇಕ ಸಂಘಸಂಸ್ಥೆಗಳವರು ಜಗದ್ಗುರುಗಳವರಿಗೆ ಬಿನ್ನವತ್ತಳೆಗಳನ್ನರ್ಪಿಸಿದರು. ತಮ್ಮ ಸರಳ ಸೌಜನ್ಯ, ಅವ್ಯಾಜವಾದ ಕಾರುಣ್ಯದಿಂದ ಗುರುಗಳು ಎಲ್ಲರಿಗೂ ಬಲುಬೇಗ ಆತ್ಮೀಯರಾಗಿಬಿಟ್ಟರು. ಉತ್ತರ ಭಾರತದಲ್ಲಿನ ಸಂಚಾರವಾರಂಭವಾದಾಗಿನಿಂದ ಶ್ರೀ ಶ್ರೀಗಳವರು ವಿದ್ವನ್ಮಂಡಲಿಯ ಸಭೆಗಳನ್ನುಳಿದು ಉಳಿದ ಕಡೆಗಳಲ್ಲೆಲ್ಲಾ ಹಿಂದೀ ಭಾಷೆಯಲ್ಲಿಯೇ ಉಪದೇಶ ಸಂಭಾಷಣೆಗಳನ್ನು ನಡೆಸುತ್ತಿದ್ದುದು ಉತ್ತರಭಾರತದ ಶಿಷ್ಯವರ್ಗಕ್ಕೆ ಅತ್ಯಂತ ಆನಂದವನ್ನುಂಟುಮಾಡುತ್ತಿತ್ತು.

ನಾಗಪುರದಿಂದ ಹೊರಟು ತಪತೀ ನದಿಯು ಜನ್ಮ ಪಡೆಯುವ ಪಾಂಡುರ್ನ ಎಂಬಲ್ಲಿಗೆ ಬಂದು ತಪತೀ ಮೂಲವನ್ನು ಸಂದರ್ಶಿಸಿ ಬೀತುಲ್ ನಗರಕ್ಕೆ ಆಗಮಿಸಿದರು. ಅಲ್ಲಿ ಪೌರಸಭೆಯವರಿತ್ತ ಬಿನ್ನವತ್ತಳೆಯನ್ನು ಸ್ವೀಕರಿಸಿ ಹೊಷಂಗಾಬಾದ್, ಒಬೇದುಲ್ಲಾಗಂಜ್‌ಗಳ ಮೂಲಕ ಭೂಪಾಲ್ ನಗರಕ್ಕೆ ಆಗಮಿಸಿದರು.

ಭೂಪಾಲ್ ನಗರದ ಪುರದ್ವಾರದಲ್ಲಿಯೇ ಶ್ರೀ ಜಗದ್ಗುರುಗಳವರಿಗೆ ಅದ್ಭುತ ಸ್ವಾಗತ ದೊರಕಿತು. ಮಧ್ಯಪ್ರದೇಶದ ರಾಜ್ಯಪಾಲ ಶ್ರೀ ಚಂಗಲರಾಯರೆಡ್ಡಿಯವರ ನೇತೃತ್ವದಲ್ಲಿ ಪುರಪ್ರಜೆಗಳು ಜಗದ್ಗುರುಗಳವರನ್ನು ಭಕ್ತಿಪೂರ್ವಕವಾಗಿ ಬರಮಾಡಿಕೊಂಡು ಸ್ವರ್ಣಪಾಲಕಿಯಲ್ಲಿ ಬಿಡಾರಕ್ಕೆ ಬಿಜಯಮಾಡಿಸಿದರು. ಹತ್ತು ದಿನಗಳ ಕಾಲ ಭೂಪಾಲಿನಲ್ಲಿ ಬಿಡಾರ ಮಾಡಿದ್ದ ಶ್ರೀ ಶ್ರೀಗಳವರು ಭೂಪಾಲಿನ ಲಕ್ಷ್ಮೀನಾರಾಯಣ ದೇವಾಲಯ, ಲಾಲ್‌ಗಡಿಯ ಶಿವದೇವಾಲಯದಲ್ಲಿ ಅರ್ಚನೆ ನಡೆಸಿದರು. ತಮ್ಮ ಸಹೃದಯತೆ, ಸರಳತೆ, ಸೌಜನ್ಯತೆ, ಸೌಲಭ್ಯದಿಂದ ಶಿಷ್ಯರಹೃದಯಗಳನ್ನು ಸೂರೆಗೊಂಡ ಜಗದ್ಗುರುಗಳವರು ಪಿಪ್ಲಾನಿ, ಅಷ್ಟ, ದೀವಾಸ್, ಇಂದೂರು ನಗರಗಳ ಮೂಲಕ ಉಜ್ಜಯಿನಿಗೆ ದಯಮಾಡಿಸಿದರು.

ಉಜ್ಜಯಿನಿಯು ಪುರಾಣ ಮತ್ತು ಇತಿಹಾಸ ಪ್ರಸಿದ್ಧವಾದ ಪಟ್ಟಣ. ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಹಾಕಾಳೇಶ್ವರ ಲಿಂಗವಿಲ್ಲಿದೆ. ಹಾಗೆಯೇ ಐವತ್ತೊಂದು ಶಕ್ತಿಪೀಠಗಳಲ್ಲಿ ಒಂದಾದ ಮಹಾಕಾಳಿಯ ಪೀಠವೂ ಇಲ್ಲಿದೆ. ಮಹಾಕವಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳೀದಾಸ, ಭರ್ತೃಹರಿ, ವಿಕ್ರಮಾದಿತ್ಯರು ಅಲ್ಲಿಯವರು. ಪರಮೇಶ್ವರನು ತ್ರಿಪುರಗಳನ್ನು ಜಯಸಿದ ಪರಮ ಪವಿತ್ರವಾದ ಸ್ಥಳ ಉಜ್ಜಯಿನಿ. ಕ್ಷಿಪ್ರಾನದಿಯ ತೀರದಲ್ಲಿರುವ ಈ ಕ್ಷೇತ್ರವು ಅತ್ಯಂತ ಪವಿತ್ರ ಕ್ಷೇತ್ರಗಳಲ್ಲೊಂದಾಗಿದೆ. ಶ್ರೀ ಜಗದ್ಗುರುಗಳವರನ್ನು ಉಜ್ಜಯಿನಿಗೆ ಭಕ್ತಿಪೂರ್ವಕವಾಗಿ ಆಹ್ವಾನಿಸಿ ಸ್ವಾಗತಿಸಿದ ಗ್ವಾಲಿಯರ್ ಮಹಾರಾಜರು ಗುರುಗಳವರನ್ನು ಕಾಳಿದೇ ಅರಮನೆಯಲ್ಲಿ ಬಿಡಾರ ಮಾಡಿಸಿದರು. ಈ ಅರಮನೆಯು ಉಜ್ಜಯಿನಿಯಿಂದ ಏಳುಮೈಲಿ ದೂರದಲ್ಲಿದ್ದು ಕ್ಷಿಪ್ರಾನದಿಯ ದ್ವೀಪ ಪ್ರದೇಶದಲ್ಲಿದೆ.

ಪ್ರಶಾಂತವೂ ಸುಂದರವೂ ಆದ ಈ ಸ್ಥಳದಲ್ಲಿಯೇ ಜಗದ್ಗುರುಗಳವರು ತಮ್ಮ ಚಾತುರ್ಮಾಸ್ಯ ವ್ರತದ (೧೯೬೬) ವ್ಯಾಸಪೂಜೆಯನ್ನು ನೆರವೇರಿಸಿದರು. ಪ್ರಾತಃಕಾಲದಲ್ಲಿ ಪೂಜಾದಿಗಳ ನಂತರ ಅನೇಕ ಜನ ಸನ್ಯಾಸಿಗಳಿಗೆ ಉಪನಿಷತ್ತು ಮತ್ತು ಬ್ರಹ್ಮಸೂತ್ರಗಳ ಪ್ರವಚನ ಮಾಡುತ್ತಿದ್ದರು. ಸಂಜೆಯ ವೇಳೆ ವಿವಿಕ್ತವಾದ ಸ್ಥಳದಲ್ಲಿ ಧ್ಯಾನಮಗ್ನರಾಗುತ್ತಿದ್ದರು. ಶೃಂಗೇರಿಯಲ್ಲಿ, ಕುತ್ತಾಲಂ ಆರೋಗ್ಯಧಾಮದಲ್ಲಿ, ಕಾಲಟಿಯಲ್ಲಿ ಇದ್ದಂತಹ ದಿವ್ಯ ವಾತಾವರಣವೇ ಇಲ್ಲಿಯೂ ಇತ್ತು. ಗುರುಗಳವರು ವಾರಕ್ಕೊಂದು ದಿನ ಅರಮನೆಯ ಮುಂಭಾಗದ ವಿಶಾಲವಾದ ಹಸಿರು ತೋಟದಲ್ಲಿ ಸಾರ್ವಜನಿಕರಿಗೆ ಉಪನ್ಯಾಸಗಳನ್ನು ನೀಡುತ್ತಿದ್ದರು.

ಆ ವರ್ಷದ ವಿದ್ವತ್ಸದಸ್ಸು ವಿಶೇಷ ಮಹತ್ವವುಳ್ಳದ್ದಾಗಿತ್ತು. ದಕ್ಷಿಣ ಮತ್ತು ಉತ್ತರದೇಶಗಳ ಅನೇಕ ಜನ ಪಂಡಿತರುಗಳು ಈ ವರ್ಷದ ಗಣಪತಿ ವಿದ್ವತ್ಸಭೆಯಲ್ಲಿ ಭಾಗವಹಿಸಿದ್ದರು. ತರ್ಕ, ಮೀಮಾಂಸ, ಅಲಂಕಾರ, ವ್ಯಾಕರಣ, ವೇದಾಂತ, ನ್ಯಾಯ ಮುಂತಾದ ಅನೇಕ ಶಾಸ್ತ್ರಗಳಲ್ಲಿ ಪರಿಣತರಾಗಿದ್ದ ಪಂಡಿತರು ವಿದ್ವತ್ಸಭೆಯಲ್ಲಿ ವಾಕ್ಯಾರ್ಥ ನಡೆಸಿದ್ದರು. ಆಂಧ್ರ, ಮಹಾರಾಷ್ಟ್ರ, ಕರ್ನಾಟಕ, ಮಧ್ಯಪ್ರದೇಶ, ಉತ್ತರಪ್ರದೇಶ, ಕೇರಳ, ತಮಿಳುನಾಡು ಮತ್ತು ಬಂಗಾಳದಿಂದ ವಿದ್ವಾಂಸರುಗಳು ಆಗಮಿಸಿದ್ದು ಶ್ರೀ ಗುರುಗಳವರಿಂದ ಪುರಸ್ಕರಿಸಲ್ಪಟ್ಟರು. ಚಾತುರ್ಮಾಸ್ಯಾನಂತರ ಉಜ್ಜಯಿನಿಯಿಂದ ಪ್ರಯಾಣ ಹೊರಟ ಜಗದ್ಗುರುಗಳವರು "ಉಜ್ಜಯಿನಿಯು ನಮ್ಮ ರಾಷ್ಟ್ರದ ಇತಿಹಾಸದ ಸ್ವರ್ಣಯುಗದ ಸಂಕೇತ. ಭಾರತೀಯ ಸಂಸ್ಕೃತಿಯ ಪುನರುಜ್ಜೀವನ ಕಾರ್ಯಕ್ಕೆ ಉಜ್ಜಯಿನಿಯ ಕಾಣಿಕೆ ಅತ್ಯಪೂರ್ವವಾದುದು. ಸಂಸ್ಕೃತಭಾಷೆಯ ಪೋಷಣೆ ಅಭಿವೃದ್ಧಿಗಳಿಗೆ ಈ ನಗರ ಬಲುಮಟ್ಟಿಗೆ ಕಾರಣವಾಗಿದೆ.

"ಇಂದೂ ಸಹ ಸಂಸ್ಕೃತಭಾಷೆಯ ಪ್ರಸಾರ ಪ್ರಚಾರಗಳಿಗೆ ಜನವೂ, ಜನತೆಯ ಸರ್ಕಾರವೂ ಕಾರ್ಯಕ್ರಮ ರೂಪಿಸುವುದು ಅಗತ್ಯ, ಅದರಿಂದ ನಮ್ಮ ಸಂಸ್ಕೃತಿಯ ಬೆಳವಣಿಗೆಯಾಗಿ ದೇಶವು ಅಭ್ಯುದಯದತ್ತ ಮುನ್ನಡೆಯುತ್ತಿದೆ. ಉಜ್ಜಯಿನಿಯ ಖಗೋಳ ವೀಕ್ಷಣಾಗಾರವು ಅಭಿವೃದ್ಧಿಗೊಳಿಸಲ್ಪಟ್ಟು ರಾಷ್ಟ್ರೀಯ ವೀಕ್ಷಣಾಗಾರವಾಗಿ ಯೋಜಿತವಾಗಬೇಕು. ಈಗ ಗ್ರೀನ್‌ವಿಚ್‌ನಿಂದ ಗುರುತಿಸುವ ಕಾಲಮಾನವನ್ನು ಬದಲಾಯಿಸಿ ಉಜ್ಜಯಿನಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ಎಲ್ಲಾ ಭೂಪಟಗಳನ್ನು ಸರಿಯಾಗಿ ಬರೆಸಬೇಕು. ಭಾರತೀಯ ಪಂಚಾಂಗ ಕರ್ತರೆಲ್ಲರೂ ಇಂದಿಗೂ ಸಹ ಕಾಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾನವನ್ನು ನಿರ್ಧರಿಸುವುದು ಉಜ್ಜಯಿನಿಯನ್ನು ಕೇಂದ್ರಬಿಂದುವಾಗಿ ಇಟ್ಟುಕೊಂಡು. ನಮ್ಮ ರಾಷ್ಟ್ರನಾಯಕರು ಇದನ್ನು ಗಮನಿಸಿ ಇನ್ನಾದರೂ ಸ್ವಾಭಾವಿಕವಾದ ಪ್ರಾಚೀನ ಪದ್ಧತಿಗೆ ಹಿಂದಿರುಗಲು ಸಹಕಾರ ನೀಡಬೇಕು " ಎಂದು ಅಪ್ಪಣೆ ಕೊಡಿಸಿದರು.

ಆ ವರ್ಷದ ಶರನ್ನವರಾತ್ರೀ ಉತ್ಸವವು ಗ್ವಾಲಿಯರ್ ಮಹಾ ನಗರದಲ್ಲಿಯೇ ನಡೆಯಿತು. ಉಜ್ಜಯಿನಿಯಿಂದ ಹೊರಟು ಶ್ರೀ ಶ್ರೀಗಳವರು ನರ್ಮದಾ ತೀರದಲ್ಲಿ ಶ್ರೀ ಗೋವಿಂದ ಭಗವತ್ಪಾದರು ಶಂಕರಭಗವತ್ಪಾದರಿಗೆ ದರ್ಶನವಿತ್ತ ಓಂಕಾರೇಶ್ವರಕ್ಕೆ ಬಂದು ಅಲ್ಲಿ ತೀರ್ಥಸ್ನಾನ ಪೂಜಾದಿಗಳನ್ನು ನೆರವೇರಿಸಿ ಭಕ್ತರಿಗೆ ತೀರ್ಥಪ್ರಸಾದಗಳನ್ನು ಅನುಗ್ರಹಿಸಿದರು. ರತ್ಲಂ ನಗರದಲ್ಲಿ ಗುರುಗಳವರು ವಿಶೇಷವಾದ ಸ್ವಾಗತವನ್ನು ಸ್ವೀಕರಿಸಿ ಪೌರ ಸಭೆಯಿತ್ತ ಬಿನ್ನವತ್ತಳೆಯನ್ನೂ ಒಪ್ಪಿಸಿಕೊಂಡರು. ತ್ರಿವೇಣಿಯ ದೇವಸ್ಥಾನಕ್ಕೂ ಸಾಧು ಸಮಾಜಕ್ಕೂ ಭೇಟಿಯಿತ್ತ ಮಹಾಸ್ವಾಮಿಗಳವರಿಗೆ ರತ್ಲಮಿನ ರೈಲ್ವೆನೌಕರರೂ ಬಿನ್ನವತ್ತಳೆಯನ್ನು ಸಮರ್ಪಿಸಿದರು. ಅನಂತರ ಜಲವರ್ ನಗರಕ್ಕೆ ಆಗಮಿಸಿದ ಗುರುಗಳವರನ್ನು ಸ್ತ್ರೀಪುರುಷರಾದಿಯಾಗಿ ಸ್ವಾಗತಿಸಿ ಎಲ್ಲರೂ ಭಕ್ತಿಸಮರ್ಪಣ ಮಾಡಿದರು. ಗುರುಗಳವರು ಅಲ್ಲಿಯ ಜನಗಳಿಗೆ ಸರಳವಾದ ಭಾಷೆಯಲ್ಲಿ ಧಾರ್ಮಿಕಜೀವನದ ಪ್ರಾಮುಖ್ಯವನ್ನು ವಿವರಿಸಿ ಎಲ್ಲರೂ ಧರ್ಮಜೀವನವನ್ನು ಅನುಷ್ಠಾನಮಾಡುವುದರಿಂದ ಸಮಗ್ರ ದೇಶವೇ ಧಾರ್ಮಿಕವಾಗುತ್ತದೆ ಎಂದು, ಅಪ್ಪಣೆ ಕೊಡಿಸಿದರು.

ನವರಾತ್ರಿಗೆ ಗ್ವಾಲಿಯರ್ ನಗರಕ್ಕೆ ಆಗಮಿಸಿದ ಜಗದ್ಗುರುಗಳವರನ್ನು ಸಮಸ್ತ ರಾಜಮರ್ಯಾದೆಗಳೊಡನೆ ಗ್ವಾಲಿಯರ್ ಮಹಾರಾಜರು ಮತ್ತು ಅವರ ಮಾತೆಯವರೂ ಸ್ವಾಗತಿಸಿದರು. ಶ್ರೀ ಶ್ರೀಗಳವರನ್ನು ವೇದವಿದ್ಯಾಪಾರಂಗತರೂ, ರಾಜ್ಯದ ಅಧಿಕಾರಿವರ್ಗದವರೂ ಸಾವಿರಾರು ಪ್ರಜೆಗಳೂ ಸುತ್ತುಗಟ್ಟಿ ಆನಂದ ಭಾಷ್ಪ ಸುರಿಸುತ್ತ ಸ್ವಾಗತಿಸಿದರು. ಸನಾತನ ಮಂದಿರಕ್ಕೆ ಆಗಮಿಸಿದ ಶ್ರೀ ಜಗದ್ಗುರು ಮಹಾರಾಜರನ್ನು ರಜತ ಪಾಲಕಿಯಲ್ಲಿ ನಾಗಸ್ವರ ಮತ್ತು ಶಹನಾಯಿ ವಾದ್ಯ ಮಂಗಳವಾದ್ಯ, ಭಜನಗೋಷ್ಠಿ, ಅಲಂಕೃತವಾದ ಗಜಗಳು, ಅಶ್ವಗಳು, ಪೂರ್ಣಕುಂಭಗಳನ್ನು ಧರಿಸಿದ ಸುವಾಸಿನಿಯರು ಉತ್ಸವದಲ್ಲಿ ಗೋರ್ಖಿ ಅರಮನೆಗೆ ಬಿಜಮಾಡಿಸಿದರು. ಜನಗಳ ಸಂಭ್ರಮ ಸಂತೋಷ ಅವರ್ಣನೀಯವಾಗಿತ್ತು. ಧೂಳಿಪಾದ ಪೂಜೆಯಾದ ನಂತರ ಗುರುಗಳ ಅನುಗ್ರಹ ಭಾಷಣವನ್ನು ಆಲೈಸಲು ಸೇರಿದ್ದ ಜನ ನಲವತ್ತು ಸಾವಿರ ಜನಕ್ಕೂ ಮಿಕ್ಕಿದ್ದರು.

ನವರಾತ್ರಿಯ ಉತ್ಸವಕ್ಕೂ ಶೃಂಗೇರಿಯ ಪೀಠಕ್ಕೂ ವಿಶೇಷವಾದ ಸಂಬಂಧವುಂಟು. ಶೃಂಗೇರಿಯ ಅದ್ವೈತ ಪೀಠವು ಸಗುಣೋಪಾಸಕರಿಗೆ ಮಾರ್ಗದರ್ಶನ ನೀಡಲು ಹಲವಾರು ಪೂಜಾವ್ರತಗಳನ್ನು ಕೈಗೊಳ್ಳುತ್ತದೆ. ಅವುಗಳಲ್ಲಿ ನವರಾತ್ರಿಯ ವ್ರತ ಮಹತ್ವವುಳ್ಳದ್ದು. ಈ ನವರಾತ್ರಿ ಉತ್ಸವದ ಪ್ರಾರಂಭವನ್ನು ವಿಜಯನಗರ ಸಾಮ್ರಾಜ್ಯ ಉದಯದ ಕಾಲಕ್ಕೆ ಒಯ್ಯಬಹುದು. ಹಂಪೆಯಲ್ಲಿ ಚಕ್ರವರ್ತಿಗಳೇ ನಡೆಸುತ್ತಿದ್ದ ಸಮಾರಂಭ ಹೆಚ್ಚು ಲೌಕಿಕ ಸಮಾರಂಭವಾಗಿದ್ದರೆ, ಶೃಂಗೇರಿಯ ಸಮಾರಂಭವು ಹೆಚ್ಚು

Sri Vidyabharathi Book Centre, Sringeri

CC-O. In Public Domain. Digitized by eGangotri

ಧಾರ್ಮಿಕ ಸಮಾರಂಭವಾಗಿರುತ್ತಿತ್ತು. ವಿಜಯನಗರದ ಅವನತಿಯ ನಂತರ ನವ ರಾತ್ರಿಯ ಉತ್ಸವಾಚರಣೆಯು ಮೈಸೂರು ರಾಜಮನೆತನದಲ್ಲಿ ಮುಂದುವರೆಯಿತು. ಕರ್ಣಾಟಕಸಿಂಹಾಸನ ಪ್ರತಿಷ್ಠಾಪನಾಚಾರ್ಯರೆಂದು ಹೆಸರು ಪಡೆದ ಶೃಂಗೇರಿಯ ಪೀಠಾಧಿಪರು ಈ ಒಂಬತ್ತು ದಿನಗಳ ಉತ್ಸವದಲ್ಲಿ ಕಿರೀಟಧಾರಣೆಮಾಡಿ ಸಿಂಹಾಸನಾ ರೋಹಣ ಮಾಡುತ್ತಾರೆ. ಈ ಕಿರೀಟಾದಿ ರಾಜಸಂಕೇತಗಳು ಶ್ರೀ ವಿದ್ಯಾರಣ್ಯರಿಗೆ ವಿಜಯನಗರದ ಚಕ್ರವರ್ತಿಗಳಿಂದ ಒಪ್ಪಿಸಲ್ಪಟ್ಟಿದ್ದವು. ಅದೇ ಸಂಪ್ರದಾಯವನ್ನು ಇಂದಿಗೂ ಶೃಂಗೇರಿಯ ಮಠದಲ್ಲಿ ಪಾಲಿಸಿಕೊಂಡು ಬರಲಾಗುತ್ತಿದೆ.

ಜಗದ್ಗುರುಗಳವರ ಗ್ವಾಲಿಯರ್ ವಾಸ್ತವ್ಯದಲ್ಲಿ ನವರಾತ್ರಿ ಉತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಒಂಬತ್ತು ದಿನಗಳ ಧಾರ್ಮಿಕ ಕಾರ್ಯಕ್ರಮ ಗಳಲ್ಲಿ ಅನೇಕರು ಉತ್ಸಾಹದಿಂದ ಭಾಗವಹಿಸಿದ್ದರು. ಗುರುಗಳವರು ಮಧ್ಯಾಹ್ನ ಕಾಲದಲ್ಲಿ ನಡೆಸುತ್ತಿದ್ದ ಶ್ರೀಚಕ್ರನವಾವರಣ ಪೂಜೆ, ಶ್ರೀ ಶಾರದಾಪೂಜೆ, ರಾತ್ರಿಯ ಕಾಲದಲ್ಲಿ ನಡೆಸುತ್ತಿದ್ದ ಚಂದ್ರಮೌಳೀಶ್ವರ ಪೂಜೆ, ಇವು ಭಕ್ತರಿಗೆ ನೇತ್ರಾನಂದಕರ ವಾಗಿದ್ದುವು. ಶತಚಂಡೀ ಪಾರಾಯಣ ಮತ್ತು ಹೋಮ, ವಿಜಯದಶಮಿಯ ದಿನ ನಡೆದ ಶ್ರೀಮದ್ರಾಮಾಯಣ ಪಟ್ಟಾಭಿಷೇಕದ ಸರ್ಗದ ವಾಚನ ಇವುಗಳಿಂದ ನವರಾತ್ರಿ ಉತ್ಸವವು ಸಮಾರೋಪವಾಯಿತು.

ಶ್ರೀ ಶ್ರೀಗಳವರು ಭಕ್ತರಿಗೆ ನವರಾತ್ರಿ ಸಂದೇಶವನ್ನಿತ್ತು "ಮಣ್ಣಿನ ಗಡಿಗೆ ಮಾಡ ಬೇಕೆಂದು ಅಪೇಕ್ಷಿಸುವವನು ಮೊದಲು ಎಂತಹ ಗಡಿಗೆಯನ್ನು ಮಾಡಬೇಕೆಂದು ಆಲೋ ಚಿಸಿ, ಅನಂತರ ಆ ಕಾರ್ಯದಲ್ಲಿ ಪ್ರವರ್ತನಾಗುತ್ತಾನೆ. ಇದರಿಂದ ವ್ಯಕ್ತವಾಗುವ ಅಂಶ ವೆಂದರೆ, ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳ ಹಿನ್ನೆಲೆಯಾಗಿ ಇಚ್ಛಾಶಕ್ತಿಯೂ ಕ್ರಿಯಾಶಕ್ತಿಯೂ ಇರುತ್ತವೆ. ಈ ಸೃಷ್ಟಿಗೆ ಕಾರಣ ಜಗಜ್ಜನನಿಯಾದ ಮಹಾದೇವಿ. ಆಕೆಯನ್ನು ಜ್ಞಾನದ ಮೂರ್ತಿಯೆಂದು ಭಾವಿಸಿಕೊಂಡಾಗ ಜ್ಞಾನಶಕ್ತಿಯೆಂದೂ, ಇಚ್ಛೆ ಅಪೇಕ್ಷೆ ಇತ್ಯಾದಿಗಳ ಪ್ರತೀಕವಾಗಿ ಭಾವಿಸಿಕೊಂಡಾಗ ಇಚ್ಛಾಶಕ್ತಿಯೆಂದೂ ಸರ್ವಕಾರ್ಯ ಸ್ವರೂಪಿಣಿ ಎಂದು ಭಾವಿಸಿಕೊಂಡಾಗ ಕ್ರಿಯಾಶಕ್ತಿಯೆಂದೂ ವಿವಿಧ ನಾಮಗಳಿಂದ ಕರೆಯಲ್ಪಡುತ್ತಾಳೆ. ನವರಾತ್ರಿಯ ಮೊದಲ ಮೂರುದಿನಗಳು ಜ್ಞಾನಶಕ್ತಿಯ, ಅನಂ ತರದ ಮೂರು ದಿನಗಳು ಇಚ್ಛಾಶಕ್ತಿಯ, ಕೊನೆಯ ಮೂರು ದಿನಗಳು ಕ್ರಿಯಾಶಕ್ತಿಯ ಆರಾಧನೆಯ ದಿನಗಳು. ನಿರ್ಗುಣ ಪರಬ್ರಹ್ಮ ಸ್ವರೂಪಿಣಿಯಾದ ಆಕೆ ಭಕ್ತಾನುಗ್ರಹ ಕ್ಕೋಸ್ಕರವಾಗಿ ಈ ಸಗುಣ ಸ್ವರೂಪದಲ್ಲಿ ಗೋಚರಿಸುತ್ತಾಳೆ. ಈ ನವರಾತ್ರಿಯ ಒಂಬತ್ತು ದಿನಗಳು ಜಗನ್ಮಾತೆಯನ್ನು ಮಹಾಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ ಎಂಬ ಭಾವನೆಯಿಂದ ಪೂಜಿಸಿ ಭಜಿಸಿದಲ್ಲಿ ಪ್ರಾಪಂಚಿಕ ಕಷ್ಟಗಳೆಲ್ಲವೂ ನಾಶವಾಗಿ ಶತ್ರುಗಳು ಸೋತು ಹಿಮ್ಮೆಟ್ಟುತ್ತಾರೆ. ಲೌಕಿಕ ಜೀವನದಲ್ಲಿ ಐಶ್ವರ್ಯ ತೃಪ್ತಿಗಳನ್ನೂ ಆಧ್ಯಾತ್ಮಿಕ ಜೀವನದಲ್ಲಿ ಮೋಕ್ಷವನ್ನೂ ಅನುಗ್ರಹಿಸುತ್ತಾಳೆ" ಎಂದು ಅನುಗ್ರಹಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀಗಳವರ ವರ್ಧಂತೀ ಉತ್ಸವವು ಗ್ವಾಲಿಯರ್ ನಗರದಲ್ಲಿಯೇ ನಡೆದು ಗುರುಗಳವರು ದೀಪಾವಳಿಯ ಸಂದೇಶವನ್ನು ಅನುಗ್ರಹಿಸಿದರು.

ಗ್ವಾಲಿಯರ್ ನಗರದಿಂದ ಭಕ್ತಿಪೂರ್ವಕವಾಗಿ ಬೀಳ್ಕೊಡಲ್ಪಟ್ಟ ಜಗದ್ಗುರು ವರ್ಯರು ಆಗ್ರ ನಗರಕ್ಕೆ ದಯಮಾಡಿಸಿದರು. ತಮ್ಮನ್ನು ಸ್ವಾಗತಿಸಲು ಸನಾತನ ಧರ್ಮ ಸಭೆಯಲ್ಲಿ ಸೇರಿದ್ದ ಸಾವಿರಾರು ಜನರನ್ನುದ್ದೇಶಿಸಿ ಉಪನ್ಯಾಸ ಮಾಡುತ್ತಾ "ಸಮಾಜ ಸೇವೆ ಮಾಡಬೇಕೆಂಬ ಹಂಬಲವುಳ್ಳ ಪ್ರತಿಯೊಬ್ಬ ರಾಷ್ಟ್ರಪ್ರೇಮಿಯೂ ಮೊದಲು ಕೀರ್ತಿ ಮತ್ತು ಒಳ್ಳೆಯಹೆಸರು ಬರಬೇಕೆಂಬ ಆಸೆಯನ್ನು ತ್ಯಜಿಸಬೇಕು. ತಾನುಮಾಡುವ ಕೆಲಸ ದಿಂದ ಬರಬಹುದಾದ ಆರ್ಥಿಕ ಲಾಭ ಅಥವಾ ಪ್ರತಿಫಲಕ್ಕಾಗಿ ಅಪೇಕ್ಷಿಸಬಾರದು. ದೇಶ ಸೇವೆಯನ್ನು ಬಹು ವಿಧಗಳಲ್ಲಿ ನಡೆಸಬಹುದು. ಕೀರ್ತಿಗಾಗಿ ಕೆಲಸ ಮಾಡುವ ಸಮಾಜ ಕಾರ್ಯಕರ್ತರಿಗೆ ಅತ್ಯಂತ ಬಿಕ್ಕಟ್ಟಿನ ಸಮಯದಲ್ಲಿ ಕಷ್ಟ ಬರಬಹುದು. ಅವರ ಕಾರ್ಯ ನಿಷ್ಫಲವೂ ಆಗಬಲ್ಲುದು. ಆದ್ದರಿಂದ ಸ್ವಾರ್ಥದ ಬಯಕೆಯಾಗಲೀ ಕೀರ್ತಿಯ ಲಾಲಸೆ ಯಾಗಲೀ ಅಂತರ್ಯದಲ್ಲಿ ಹುದುಗಿದ್ದರೆ ಎಂತೆಂತಹ ಒಳ್ಳೆಯ ಕೆಲಸಗಳೂ ನಿಷ್ಪ್ರಯೋಜಕ ವಾಗಿಬಿಡುತ್ತವೆ" ಎಂದು ಅಪ್ಪಣೆ ಕೊಡಿಸಿದರು.

ಮತ್ತೊಂದು ಕಡೆ ಉಪನ್ಯಾಸ ಮಾಡುತ್ತಾ "ಇತರರಿಗಾಗಿ ಅಥವಾ ಸಮಾಜಕ್ಕಾಗಿ ನಾವು ಮಾಡುವ ಕಾರ್ಯಗಳನ್ನು ದೇವಸಮರ್ಪಿತ ಎಂದು ಮಾಡಿದಲ್ಲಿ ಜಯದಿಂದ ಹಿಗ್ಗು ವುದು, ಸೋಲಿನಿಂದ ಕುಗ್ಗುವುದು ತಪ್ಪಿ ಅವುಗೆ ಸಮದೃಷ್ಟಿ ಬರುತ್ತವೆ. ಸಮಾಜದ ಯಾವ ಕಾರ್ಯವನ್ನೇ ಆಗಲಿ ಮಾಡಲು ಆರಂಭಿಸುವ ಮುನ್ನ ಭಗವಂತನನ್ನು ಪ್ರಾರ್ಥಿಸಿ ಹೃದಯ ಶುದ್ಧಿಯೂ, ಮನೋನೈರ್ಮಲ್ಯವೂ ಲಭಿಸುವಂತೆ ಕೇಳಿಕೊಳ್ಳಬೇಕು" ಎಂದು ಬೋಧಿಸಿದರು. ಆಗ್ರಾದಲ್ಲಿ ಕೇವಲ ಎರಡು ದಿನಗಳ ಮಟ್ಟಿಗಿದ್ದ ಜಗದ್ಗುರುಗಳವರನ್ನು ಜನ ಅತ್ಯಂತ ಪ್ರೇಮಾದರಗಳಿಂದ ಸೇವಿಸಿದರು.

ಶ್ರೀ ಕೃಷ್ಣ ಪರಮಾತ್ಮನ ಲೀಲಾವಿಲಾಸಸ್ಥಾನವಾದ ಬೃಂದಾವನಕ್ಕೆ ಮಹಾಸ್ವಾಮಿ ಗಳವರು ಆಗಮಿಸಿದಾಗ ನಗರ ದ್ವಾರದಲ್ಲಿ ಪೌರಸಭೆಯು ಸ್ವಾಗತಿಸಿತು. ಸಾವಿರಾರು ಜನ ಸಾಧುಗಳೂ, ಸಂನ್ಯಾಸಿಗಳೂ ಪುರದ್ವಾರಕ್ಕೆ ಆಗಮಿಸಿದ್ದು ಜಯಘೋಷದಿಂದ ಸ್ವಾಗತಬಯಸಿದರು. ಗ್ವಾಲಿಯರ್ ಭವನದಲ್ಲಿ ಬಿಡಾರಮಾಡಿ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ನೆರವೇರಿಸಿದ ಗುರುಗಳವರು ಭಾವುಕರಾದ ಭಕ್ತಮಂಡಲಿಗೆ ಉಪದೇಶ ವಿತ್ತರು. ಮಾರನೆಯ ದಿನ ಶ್ರೀ ಜಗದ್ಗುರುಗಳವರು ಮಥುರಾ ಗೋಕುಲಗಳನ್ನು ಸಂದರ್ಶಿಸಿ ಗೀತಾಚಾರ್ಯನಾದ ಭಗವಂತ ಶ್ರೀ ಕೃಷ್ಣನ ಸ್ಮರಣೆಯಿಂದ ಪುಳಕಿತರಾದರು. ಯಮುನಾ ನದಿಯಲ್ಲಿ ತೀರ್ಥಸ್ನಾನಗೈದು ಗೋವರ್ಧನಗಿರಿಯನ್ನು ದರ್ಶಿಸಿ ತಮ್ಮ ಬಿಡಾರಕ್ಕೆ ಆಗಮಿಸಿದ ಗುರುಗಳನ್ನು ಸಾವಿರಾರುಜನ ಜಯಘೋಷದಿಂದ ಎದು ರ್ಗೊಂಡರು. ಭಕ್ತರನ್ನುದ್ದೇಶಿಸಿ ಪುಟ್ಟ ಭಾಷಣ ಮಾಡಿದ ಶ್ರೀ ಶ್ರೀಗಳವರು "ಸುಖ ಕ್ಕಾಗಿ ಹಾತೊರೆಯುವುದು, ದುಃಖವೆಂದರೆ ಭಯಪಡುವುದು ಮಾನವನಿಗೆ ಅತ್ಯಂತ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಾಭಾವಿಕ. ಕೇವಲ ಇಂದ್ರಿಯ ಸುಖವನ್ನೇ ನಿಜವಾದ ಸುಖವೆಂದು ಭಾವಿಸುವುದು ಮನಸ್ಸಿನ ಭ್ರಮೆ. ಇಂದ್ರಿಯ ಸುಖಪಟ್ಟಷ್ಟೂ ಅದರ ದಾಹ ಹೆಚ್ಚುತ್ತಾ ಹೋಗುತ್ತದೆ. ಈ ಇಂದ್ರಿಯ ಸುಖಕ್ಕಾಗಿ ಹಾತೊರೆಯುವುದು ಎಂದಿಗೂ ಕೊನೆಮುಟ್ಟದು. ಮನಸ್ಸಿನಲ್ಲಿ ಏಳುವ ವಿಚಾರ ತರಂಗಗಳನ್ನು ಹಾಗೆಯೇ ಮೌನವಾಗಿ ಅವಲೋಕಿಸುತ್ತಾ ಒಂದೊಂದನ್ನಾಗಿ ವಿಶ್ಲೇಷಣೆ ಮಾಡುತ್ತಾ ಬಂದಲ್ಲಿ ಹಳೆಯ ವಾಸನೆಗಳೂ ಅನ್ಯ ವಿಚಾರಗಳೂ ಒಂದೊಂದಾಗಿ ಕಳಚಿ ಬೀಳುತ್ತವೆ. ಇಂತಹ ವಾಸನಾಕ್ಷಯದಿಂದ ಮನೋನಾಶ ಉಂಟಾಗಿ ಭಗವತ್ಕೃಪೆಯಿಂದ ಜ್ಞಾನೋದಯವಾಗುತ್ತದೆ" ಎಂದು ಅಪ್ಪಣೆ ಕೊಡಿಸಿದರು. ಬೃಂದಾವನದಲ್ಲಿ ಶ್ರೀ ಶ್ರೀಗಳವರು ಶ್ರೀ ರಾಮಕೃಷ್ಣಾಶ್ರಮಕ್ಕೂ ಸಂದರ್ಶನವಿತ್ತು ಭಗವಂತ ಮತ್ತು ಭಗವಂತನ ಕರುಣೆ ಎಂಬ ವಿಚಾರ ಕುರಿತು ಉಪನ್ಯಾಸವಿತ್ತರು. ಆಶ್ರಮದ ಅಧ್ಯಕ್ಷರು ಶ್ರೀ ಜಗದ್ಗುರುಗಳವರನ್ನು ಅತ್ಯಂತ ಸಂಭ್ರಮ ಸಂತೋಷದಿಂದ ಬರಮಾಡಿಕೊಂಡು ತಮ್ಮ ಕಾರ್ಯಕ್ರಮಗಳೆಲ್ಲವನ್ನೂ ವಿವರಿಸಿದರು.

೨೪. ರಾಷ್ಟ್ರದ ರಾಜಧಾನಿಯಲ್ಲಿ

ರಾಷ್ಟ್ರದ ರಾಜಧಾನಿಯಾದ ದೆಹಲಿ ನಗರಕ್ಕೆ ಶ್ರೀ ಜಗದ್ಗುರುಗಳವರು ಆಗಮಿಸಿದಾಗ ಅವರಿಗೆ ಅಭೂತಪೂರ್ವವಾದ ಸ್ವಾಗತವು ನೀಡಲ್ಪಟ್ಟಿತು. ಉತ್ಸವದಲ್ಲಿ ಪಾದಚಾರಿಯಾಗಿಯೇ ನಗರ ಪ್ರವೇಶ ಮಾಡಿದ ಜಗದ್ಗುರುಗಳ ಪಾದಸ್ಪರ್ಶಮಾಡಿ ವಂದಿಸಲು ಜನ ನಾಮುಂದು ತಾಮುಂದು ಎಂದು ನುಗ್ಗುತ್ತಿದ್ದರು. ಜನಜಂಗುಳಿ ಗುರುಗಳವರು ಮುಂದಕ್ಕೆ ಹೆಜ್ಜೆಯಿಡುವುದಕ್ಕೂ ಆಗದಷ್ಟು ಅಪರಿಮಿತ ಸಂಖ್ಯೆಯಲ್ಲಿ ಸೇರಿತ್ತು. ಗುರುಗಳ ಸ್ವಾಗತಕ್ಕಾಗಿಯೇ ನಿರ್ಮಿತವಾಗಿದ್ದ ವಿಶೇಷ ಹಸಿರುವಾಣಿ ಚಪ್ಪರದಲ್ಲಿ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅಮರನಾಥ್ ಝಾರವರು ಸಂಸ್ಕೃತದಲ್ಲಿ ಭಾಷಣ ಮಾಡಿ ಗುರುಗಳವರನ್ನು ಸ್ವಾಗತಿಸಿದರು. ದೆಹಲಿ ನಗರದ ಮೇಯರ್ ಉರ್ದುವಿನಲ್ಲಿ ಉಪನ್ಯಾಸ ಮಾಡಿ ಸ್ವಾಗತಿಸಿದರು. ಸರ್ದಾರ್ ಸಂತೋಷ್‌ಸಿಂಗ್, ಸಿ. ಆರ್. ಪಟ್ಟಾಭಿರಾಮನ್, ಪನ್ನಂಪಲ್ಲಿ ಗೋವಿಂದ ಮೆನನ್, ಕೆ. ಎಲ್. ರಾವ್, ಎಸ್. ವಿ. ಕೃಷ್ಣಮೂರ್ತಿರಾವ್, ಜಿ. ಎಲ್. ಗೋಸ್ವಾಮಿ, ಜಯಸುಖಲಾಲ್‌ಹಾಥಿ ಮೊದಲಾದವರು ತಮ್ಮ ತಮ್ಮ ಮಾತೃಭಾಷೆಯಲ್ಲಿಯೇ ಗುರುಗಳನ್ನು ಸ್ವಾಗತಿಸಿದರು. ಗುರುಗಳನ್ನು ನಗರಕ್ಕೆ ಸ್ವಾಗತಿಸಿ ರಾಷ್ಟ್ರಾಧ್ಯಕ್ಷರೂ, ಉಪರಾಷ್ಟ್ರಪತಿ ಮತ್ತು ಪ್ರಧಾನಿಯವರೂ ಕಳುಹಿಸಿದ್ದ ಸಂದೇಶಗಳನ್ನು ಡಾ|| ಪಿ. ಎಸ್ ಲೋಕನಾಥರವರು ಓದಿದರು. ಜಗದ್ಗುರುಗಳವರು ಪುಟ್ಟ ಭಾಷಣ ಮಾಡಿ " ಇಂದು ಅಲ್ಲಲ್ಲಿ ಕಾಣುತ್ತಿರುವ ಪ್ರತ್ಯೇಕತಾ ಭಾವನೆ ನಾಶವಾಗಬೇಕು. ಧಾರ್ಮಿಕ ನೈತಿಕ ವಿಚಾರಗಳಲ್ಲಿರತಕ್ಕ ಅಸಡ್ಡೆ, ಅನಾದರ ಹೋಗಬೇಕು. ಪ್ರತಿ ಭಾರತೀಯನೂ ತನ್ನ ಅಂತರಂಗವನ್ನು ತಾನೇ ನೋಡಿಕೊಂಡು ರಾಷ್ಟ್ರಕ್ಕಾಗಿ ತಾನು ಮಾಡಬಹುದಾದ ಕಾರ್ಯವೇನೆಂಬುದನ್ನು ಅರಿತು ಶ್ರದ್ಧೆಯಿಂದ ಕೆಲಸ ಮಾಡಬೇಕು, ಇದು ಸಮಗ್ರ ರಾಷ್ಟ್ರದ ಹಿತವನ್ನು ಸಾಧಿಸುವ ಮಾರ್ಗ" ಎಂದಪ್ಪಣೆಕೊಡಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರಿಯ ಶ್ರೀ ಜಗದ್ಗುರು ಶಂಕರಚಾರ್ಯ ಪರಂಪರೆಯಲ್ಲಿ ದೆಹಲಿಗೆ ಸಂದರ್ಶನ ನೀಡಿದವರಲ್ಲಿ ಶ್ರೀಮದಭಿನವ ವಿದ್ಯಾತೀರ್ಥ ಸ್ವಾಮಿಗಳವರೇ ಮೊದಲಿಗರು. ವಿವಿಧ ರಾಜಕೀಯ ಬಣಗಳ ಪೈಪೋಟಿ, ದ್ವೇಷ,ವೈಷಮ್ಯಗಳ, ಗೊಂದಲಗಳ, ಉತ್ತರದಕ್ಷಿಣ ಪೂರ್ವ ಪಶ್ಚಿಮ ಎಂಬ ಭೇದಭಾವನೆಗಳು ಮೂಡುತ್ತಿದ್ದ ಆ ನಗರದಲ್ಲಿ ಗುರುಗಳವರು ಐಕ್ಯತಾ ಭಾವನೆಯನ್ನು ಪದೇ ಪದೇ ಉಪದೇಶಿಸುತ್ತಿದ್ದರು. ದೆಹಲಿಯಲ್ಲಿ ಜಗದ್ಗುರ ಗಳವರಿತ್ತ ಉಪದೇಶಗಳ ಬಹುಟ್ಟಿನ ಸೂತ್ರವು ಐಕ್ಯತೆ, ಪರಸ್ಪರ ಅರಿವು ಇವುಗಳನ್ನು ಕುರಿತಿರುತ್ತಿತ್ತು. ಭಾರತದ ಭವ್ಯ ಪರಂಪರೆಯನ್ನು ಪದೇ ಪದೇ ಸ್ಫುರಣೆಗೆ ತರುತ್ತ, ವಿದ್ಯಾವಂತ ಭಾರತೀಯರೇ ಭರತಖಂಡದಲ್ಲಿ ಪರಕೀಯರಂತೆ ಸಾಮಾನ್ಯರಿಂದ ದೂರವಾಗಿ ಬಾಳುತ್ತಿರುವುದು ಅಭಿಮಾನದ ಸಂಗತಿಯಲ್ಲವೆಂದ ಗುರುಗಳವರು. ಯುವಕ ಪೀಳಿಗೆಗೆ ತಮ್ಮ ಆದರ್ಶವು ಭರತಖಂಡದ ಭವ್ಯ ಪರಂಪರೆಯಲ್ಲಿಯೇ ಇರುವುದೆಂದು ವಿವರಿಸಿ, ಅದನ್ನು ಶ್ರದ್ಧೆಯಿಂದ ಅನುಸರಿಸಿ ಅಭ್ಯುದಯ ಹೊಂದಬೇಕೆಂದು ಬೋಧಿಸುತ್ತಿದ್ದರು.

ಲೋಕಕಲ್ಯಾಣಕ್ಕಾಗಿ ದೆಹಲಿ ಪಟ್ಟಣದಲ್ಲಿ ಜಗದ್ಗುರುಗಳವರು ಮಹಾರುದ್ರಯಾಗ ವನ್ನು ಏರ್ಪಡಿಸಿದರು. ಮೂರು ದಿನಗಳ ಕಾಲ ನಡೆದ ಮಹಾರುದ್ರ ಹೋಮದ ಪೂರ್ಣಾಹುತಿಯು ಜಗದ್ಗುರುಗಳವರ ಜಂನೆಯ ವರ್ಧಂತಿಯಂದು ನಡೆಯಿತು. ಜಗ ದ್ಗುರುಗಳವರನ್ನು ಅಭಿವಂದಿಸಲು ರಾಷ್ಟ್ರಾಧ್ಯಕ್ಷರಾದ ರಾಧಾಕೃಷ್ಣರವರೂ, ಪ್ರಧಾನ ಮಂತ್ರಿ ಇಂದಿರಾಗಾಂಧಿಯವರೂ ಅವರ ಬಿಡಾರಕ್ಕೆ ಆಗಮಿಸಿದ್ದರು. ಸಂಜೆ ನಡೆದ ವಿಶೇಷ ಸಭೆಯಲ್ಲಿ ರಾಷ್ಟ್ರಾಧ್ಯಕ್ಷರು ಉಪನ್ಯಾಸ ಮಾಡಿ "ರಾಷ್ಟ್ರವು ಅತ್ಯಂತ ಕಷ್ಟಪರಿಸ್ಥಿತಿ ಯನ್ನು ಎದುರಿಸುತ್ತಿದೆ. ಜನತೆಯೂ ಸಹನೆಯನ್ನು ಅಭ್ಯಸಿಸಬೇಕು. ಆಗ ದೇಶವನ್ನು ಎದುರಿಸುತ್ತಿರುವ ಸಮಸ್ಯೆಗಳನ್ನು ಶಾಂತವಾಗಿ ಬಿಡಿಸಬಹುದು. ವೈಯುಕ್ತಿಕ ಅಥವಾ ಸೈದ್ಧಾಂತಿಕ ದೃಷ್ಟಿಯಿಂದ ಸಮಸ್ಯಗಳತ್ತ ನೋಡದೆ ರಾಷ್ಟ್ರೀಯ ದೃಷ್ಟಿಯಿಂದ ಸಮಸ್ಯೆ ಗಳಿಗೆ ಗಮನಕೊಟ್ಟು ಪರಿಹಾರ ಹುಡುಕಬೇಕೆಂದು" ತಿಳಿಸಿದರು. ಜಗದ್ಗುರುಗಳವರನ್ನು ಅಭಿವಂದಿಸಿ "ಶ್ರೀ ಶಂಕರರ ಐಕ್ಯತಾ ಮಂತ್ರವನ್ನು ಉಪದೇಶಿಸುತ್ತ ಭಾರತ ಯಾತ್ರೆ ಯನ್ನು ಕೈಗೊಂಡಿರುವ ಶ್ರೀ ಸ್ವಾಮಿಗಳವರ ಮಾರ್ಗದರ್ಶನವನ್ನು ಎಲ್ಲರೂ ಪಡೆಯ ಬೇಕೆಂದು" ಆಶಿಸಿದರು. ಇಂದಿರಾಗಾಂಧಿಯವರು ಉಪನ್ಯಾಸ ಮಾಡಿ ದೇಶಕ್ಕೆ ಒದಗು ತ್ತಿರುವ ಅನೇಕ ಕಷ್ಟದ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ ಬರುವಂತೆ ಆಶೀರ್ವದಿಸ ಬೇಕೆಂದು ಕೇಳಿಕೊಂಡರು. ಶ್ರೀ ಶಂಕರಾಚಾರ್ಯರು ಬೋಧಿಸಿದ ಅಖಂಡ ಭಾರತದ ಏಕ ತೆಯ ಪಥವನ್ನೇ ದೇಶವು ಅನುಸರಿಸುತ್ತದೆಯೆಂಬುದನ್ನು ಪ್ರಧಾನಿಯವರು ವಿವರಿಸಿದರು. ಜಗದ್ಗುರುಗಳವರು ಅನುಗ್ರಹ ಭಾಷಣ ಮಾಡಿ "ನಮ್ಮ ರಾಷ್ಟ್ರದಲ್ಲಿ ವೈಯಕ್ತಿಕವಾದ ದುಷ್ಟ ಅಭ್ಯಾಸಗಳು ಹೆಚ್ಚುತ್ತಿವೆ. ಅನಾಚಾರ, ದುರಾಚಾರಗಳು ಹೆಚ್ಚುತ್ತಿವೆ. ಆಹಾರ ಧಾನ್ಯಗಳನ್ನು ಬಚ್ಚಿಡುವುದು, ಕಪ್ಪುಸಂತೆಯಲ್ಲಿ ಅವುಗಳನ್ನು ವಿಕ್ರಯಿಸುವುದು, ಲಂಚ ಕೋರತನ, ಕೆಲಸ ಕಾರ್ಯಗಳಲ್ಲಿ ಅಸಡ್ಡೆ, ಅನಾದರ, ವಂಚನೆ ಮುಂತಾದವು ಅಧಿಕವಾಗಿ ನೈತಿಕ ಜೀವನವು ಕಲುಷಿತವಾಗುತ್ತಿವೆ. ಇಡೀ ರಾಷ್ಟ್ರವನ್ನು ಉದ್ಧರಿಸುವ ಯೋಜನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಿಂತ ಮೊದಲು ಪ್ರತಿವ್ಯಕ್ತಿಯೂ ತನ್ನನ್ನು ತಾನು ತಿದ್ದಿಕೊಂಡು ದುರಾಚಾರ ಅನಾಚಾರಗಳನ್ನು ವರ್ಜಿಸಿ ಸನ್ಮಾರ್ಗದಲ್ಲಿ ನಡೆದರೆ ಇಡೀ ರಾಷ್ಟ್ರವೇ ಕ್ಷೇಮಾಭ್ಯುದಯ ಹೊಂದುವುದು" ಎಂದು ಅಪ್ಪಣೆ ಕೊಡಿಸಿದರು.

ಗುರುಗಳವರ ದೆಹಲಿಯ ಭೇಟಿಯ ಸಮಯದಲ್ಲಿ ಅವರನ್ನು ಬಹುಜನ ಸಂದರ್ಶಿಸಿ ತಮ್ಮ ಅನೇಕ ಸಮಸ್ಯೆಗಳನ್ನು ವಿವರಿಸಿ ಪರಿಹಾರ ದೊರಕಿಸಿಕೊಂಡರು. ಗುರುಗಳವರು ಗ್ರೀಸ್ ರಾಜಮಾತೆಗೂ, ರಾಜಕುಮಾರಿಗೂ ಸಂದರ್ಶನವಿತ್ತಿದ್ದರು. ಗ್ರೀಸ್ ರಾಜಮಾತೆಯು ಗುರುಗಳವರನ್ನು ಹಲವಾರು ಸಲ ದರ್ಶನಮಾಡಿ ಅವರಿಂದ ಆಧ್ಯಾತ್ಮಿಕ ಮಾರ್ಗದರ್ಶನ ಪಡೆದರು. ಗುರುಗಳವರ ಅಧ್ಯಕ್ಷತೆಯಲ್ಲಿ ಡಾ|| ರಾಧಾಕೃಷ್ಣನ್‌ರವರು ಶ್ರೀ ಶಂಕರ ಅದ್ವೈತ ಆಶ್ರಮಕ್ಕೆ ಅಸ್ತಿಭಾರವನ್ನು ಹಾಕಿದರು. ಶ್ರೀ ಜಗದ್ಗುರುಗಳವರು ವಿದ್ವತ್ಸಭೆಯೊಂದನ್ನು ನಡೆಸಿ ಮೂರು ದಿನಗಳ ಕಾಲ ಪಂಡಿತರಿಂದ ವಾಕ್ಯಾರ್ಥಗಳನ್ನು ಏರ್ಪಡಿಸಿದ್ದರು. ಕೊನೆಯ ದಿನ ಪಂಡಿತೋತ್ತಮರನ್ನೆಲ್ಲ ವಿಶೇಷವಾಗಿ ಸನ್ಮಾನಿಸಿದರು. ಗುರುಗಳು ದೆಹಲಿಯಲ್ಲಿದ್ದಾಗಲೇ ಕುರುಕ್ಷೇತ್ರಕ್ಕೆ ಭೇಟಿ ನೀಡಿ ಸೂರ್ಯಕುಂಡದಲ್ಲಿ ಪವಿತ್ರ ಸ್ನಾನ ಮಾಡಿ ಅಲ್ಲಿನ ಎಲ್ಲ ದೇವಾಲಗಳಲ್ಲಿಯೂ ಪೂಜೆ ಸಲ್ಲಿಸಿದರು. ಕುರುಕ್ಷೇತ್ರ ವಿಶ್ವವಿದ್ಯಾಲಯಕ್ಕೆ ಸ್ವಾಗತಿಲ್ಪಟ್ಟ ಜಗದ್ಗುರುಗಳವರು ಅಲ್ಲಿಯ ಉಪಾಧ್ಯಾಯ ಮತ್ತು ವಿದ್ಯಾರ್ಥಿವೃಂದಕ್ಕೂ ಅನುಗ್ರಹ ಭಾಷಣವನ್ನೂ ಮಾಡಿದರು.

ದೆಹಲಿಯಿಂದ ಸಂಚಾರವಾರಂಭಿಸಿದ ಜಗದ್ಗುರುಗಳವರು ಮೋದಿನಗರಕ್ಕೆ ದಯಮಾಡಿಸಿ ರಾಜಬಹದ್ದೂರ್ ಮೋದಿಯವರಿಂದ ನಿರ್ಮಿತವಾದ ಘೋರಾರ್ ದೇವಾಲಯವನ್ನು ಸಂದರ್ಶಿಸಿದರು. ಅನಂತರ ಮೀರತ್, ಮುಸಾಫಿರ್ ನಗರಗಳ ಮೂಲಕ ಹರಿದ್ವಾರಕ್ಕೆ ಬಂದು ಗಂಗಾಸ್ನಾನ ಮಾಡಿದರು. ಅಲ್ಲಿಯ ಆಲಯಗಳಲ್ಲಿ ಪೂಜಾದಿಗಳನ್ನು ನೆರವೇರಿಸಿ ಗುರುಮುಕ್ತೇಶ್ವರಕ್ಕೆ ಆಗಮಿಸಿ ಪೂಜಾನುಷ್ಠಾನಗಳನ್ನು ನೆರವೇರಿಸಿದರು. ಗುರುಮುಕ್ತೇಶ್ವರದಿಂದ ಮೊರಾದಾಬಾದ್, ರಾಮಪುರ, ಬರೈಲಿ ಮುಂತಾದ ನಗರಗಳ ಮೂಲಕ ಷಹಜಾನ್‌ಪುರಕ್ಕೆ ದಯಮಾಡಿಸಿ ಅಲ್ಲಿಯ ಪೌರರನ್ನೂ ಗೋರಕ್ಷ ಮಹಾಭಿಯಾನ ಸಮಿತಿಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಷಹಜಾನ್‌ಪುರದಿಂದ ಸೀತಾಪುರಕ್ಕೆ ಆಗಮಿಸಿದ ಜಗದ್ಗುರುಗಳವರು ಅಲ್ಲಿಂದ ಇಪ್ಪತ್ತು ಮೈಲಿಗಳ ಅಂತರದಲ್ಲಿದ್ದ ನೈಮಿಷಾರಣ್ಯಕ್ಕೆ ದಯಮಾಡಿಸಿದರು. ಶ್ರೀ ನಾರದಾನಂದಜೀ ಮತ್ತು ಅನೇಕ ಸಾಧು ಸನ್ಯಾಸಿಗಳಿಂದ ಸ್ವಾಗತಿಸಲ್ಪಟ್ಟ ಗುರುಗಳವರು ನೈಮಿಷಾರಣ್ಯದಲ್ಲಿ ತಮ್ಮ ಪೂಜಾನುಷ್ಠಾನಗಳನ್ನು ನೆರವೇರಿಸಿಕೊಂಡು ಲಕ್ನೋನಗರಕ್ಕೆ ಆಗಮಿಸಿದರು. ರಾಜ್ಯಪಾಲ ಶ್ರೀ ವಿಶ್ವನಾಥದಾಸರು ಜಗದ್ಗುರುಗಳನ್ನು ಸಂದರ್ಶಿಸಿ ಸಂಭಾಷಣೆ ನಡೆಸಿದರು. ಲಕ್ನೋನಗರದಲ್ಲಿ ಎರಡು ದಿನಗಳ ಕಾಲವಿದ್ದು ಜನಗಳಲ್ಲಿ ಧರ್ಮಶ್ರದ್ಧೆಯನ್ನು ಆಸ್ತಿಕ್ಯವನ್ನೂ ಮೂಡಿಸಿದ ಗುರುಗಳು ಕಾನ್ಪುರಕ್ಕೆ ಬಂದು ರಾಧಾಕೃಷ್ಣ ಮಂದಿರದಲ್ಲಿ ಬಿಡಾರ ಮಾಡಿದರು. ಹಲವಾರು ಸಂಘ ಸಂಸ್ಥೆಗಳಲ್ಲಿ ಉಪನ್ಯಾಸಮಾಡಿದ ಗುರುಗಳು ವಾಲ್ಮೀಕಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹರ್ಷಿಗಳು ತಪಸ್ಸುಮಾಡಿದ ಸ್ಥಳವಾದ ಬ್ರಹ್ಮಾವರ್ತ ಕ್ಷೇತ್ರಕ್ಕೆ ದಯಮಾಡಿಸಿದರು. ಅಯೋಧ್ಯೆಗೆ ಜಗದ್ಗುರುಗಳು ಆಗಮಿಸಿದಾಗ ಅಲ್ಲಿಯ ಮಹಂತರಾದ ಶ್ರೀಸೀತಾರಾಮಜಿಯವರು ಗುರುಗಳನ್ನು ಸ್ವಾಗತಿಸಿ ಅವರ ಬಿಡಾರಕ್ಕೆ ಭವ್ಯ ವ್ಯವಸ್ಥೆಯನ್ನು ಮಾಡಿದ್ದರು. ಸರಯೂನದಿಯಲ್ಲಿ ತೀರ್ಥಸ್ನಾನ ಮಾಡಿ ಶ್ರೀರಾಮ ಜನನವಾದ ಪುಣ್ಯ ಸ್ಥಳವನ್ನು ಸಂದರ್ಶಿಸಿದ ಗುರುಗಳವರು ಬಸ್ತಿ ನಗರಕ್ಕೆ ಪ್ರಯಾಣ ಬೆಳೆಸಿದರು.

ಬಸ್ತಿಯಲ್ಲಿ ಕ್ಷಯರೋಗದ ಆಸ್ಪತ್ರೆಯನಿರ್ಮಾಣಕ್ಕೆ ಅಸ್ತಿಭಾರವನ್ನು ಹಾಕಿದ ಜಗದ್ಗುರುಗಳವರು ಅಲ್ಲಿಂದ ಮೆಹೆಂದವಾಲಿಗೆ ಆಗಮಿಸಿ ಶ್ರೀ ಸತ್ಯದೇವ ಬ್ರಹ್ಮಚಾರಿಯವರಿಂದ ಸ್ವಾಗತಿಸಲ್ಪಟ್ಟರು. ಅಲ್ಲಿಯ ಜಗದ್ಗುರು ಶಂಕರಾಚಾರ್ಯ ಪ್ರೌಢಶಾಲೆಯಲ್ಲಿ ಬಿಡಾರ ಮಾಡಿ ಶ್ರೀ ಚಂದ್ರಮೌಳೀಶ್ವರರನ್ನು ಪೂಜಿಸಿದ ಗುರುಗಳವರು ಅನಂತರ ಗೋರಖ್‌ಪುರಕ್ಕೆ ದಯಮಾಡಿಸಿದರು. ಸುಪ್ರಸಿದ್ಧ ಧರ್ಮಕಾರ್ಯನಿರತರಾದ ಶ್ರೀ ಹನುಮಾನ್ ಪ್ರಸಾದ್ ಪೋದ್ದಾರ್‌ರವರೂ ಅವರ ಸಂಗಡಿಗರೂ ಜಗದ್ಗುರುಗಳವರನ್ನು ಪೂರ್ಣಕುಂಭದೊಡನೆ ಸ್ವಾಗತಿಸಿ ಗೀತಾಮಂದಿರದ ಅತಿಥಿಶಾಲೆಗೆ ಜಯಘೋಷದೊಡನೆ ಬಿಜಯ ಮಾಡಿಸಿದರು. ಅಲ್ಲಿಯೇ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ನೆರವೇರಿಸಿದ ಗುರುಗಳವರು ಭಕ್ತರಿಗೆ ತೀರ್ಥಪ್ರಸಾದಗಳನ್ನು ಅನುಗ್ರಹಿಸಿದರು. ತಮ್ಮ ದರ್ಶನಕ್ಕಾಗಿ ಬಂದಿದ್ದ ಸಾವಿರಾರು ಜನವನ್ನು ಕುರಿತು ಉಪನ್ಯಾಸಮಾಡುತ್ತಾ ಶ್ರೀ ಜಗದ್ಗುರುಗಳವರು "ತಮ್ಮ ಆಶೋತ್ತರಗಳ ಈಡೇರುವಿಕೆಗೆ ಮಾನವನು ಭಗವಂತನನ್ನೇ ಅವಲಂಬಿಸಬೇಕು. ಯಾವುದು ತನಗೆ ಸಂತೋಷವನ್ನಿತ್ತು ಉದ್ದೇಶಿತ ಗುರಿಯತ್ತ ತನ್ನನ್ನು ಕೊಂಡೊಯ್ಯುವುದೋ ಅದರಮೇಲೆ ಮಾನವನು ಪೂರ್ಣವಾಗಿ ಭರವಸೆಯಿಡುತ್ತಾನೆ. ಇಂತಹ ಅಭೀಷ್ಟವು ಈಡೇರಲು ಭಗವಂತನಿಗಿಂತ ಬೇರೆ ಆಧಾರ ಇರದು. ಭಗವಂತನ ಸಾಕ್ಷಾತ್ಕಾರವು ದೊರಕಲು ನಮಗೆ ಗುರುವಿನ ಆವಶ್ಯಕತೆ ಅತ್ಯಗತ್ಯ. ಮೊದಲು ಗುರುವಿನಿಂದ ಭಗವಂತನ ಮಹಾತ್ಮ್ಯವನ್ನು ಕೇಳಿ ತಿಳಿದುಕೊಳ್ಳಬೇಕು. ಇದೇ ಶ್ರವಣ ಅನಂತರ ತಾನು ಗುರುವಿನಿಂದ ಕೇಳಿದುದನ್ನು ಮನಸ್ಸಿನಲ್ಲಿಯೇ ಪುನಃಪುನಃ ಅವಲೋಕನ ಮಾಡಬೇಕು. ಇದೇ ಮನನ. ಮೂರನೆಯಬಾರಿ ಗುರುವಿನಿಂದ ಕೇಳಿ ತಿಳಿದುಕೊಂಡ, ತನ್ನ ಮನಸ್ಸಿನಲ್ಲಿಯೇ ಆಲೋಚಿಸುತ್ತಿದ್ದ ಭಗವನ್ಮಹಿಮೆಯನ್ನು ಕುರಿತು ಏಕಾಗ್ರಮನಸ್ಸಿನಿಂದ ಧ್ಯಾನಮಾಡಬೇಕು. ಇದೇ ನಿಧಿಧ್ಯಾಸನ. ಭಗವತ್ ಸಾಕ್ಷಾತ್ಕಾರದ ಉಳಿದ ಮಜಲುಗಳನ್ನು ಈ ಮೂರು ಮಜಲುಗಳ ನಂತರ ಸುಲಭವಾಗಿ ಏರಿ ಸಾಧಕನು ಸಚ್ಚಿದಾನಂದ ಸ್ವರೂಪವಾದ ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ" ಎಂದು ಅಪ್ಪಣೆ ಕೊಡಿಸಿದರು. ಮಾರನೆಯ ದಿನ ಗೋರಖ್‌ಪುರದ ವಿಶ್ವವಿದ್ಯಾನಿಲಯದ ಸ್ವಾಗತವನ್ನು ಸ್ವೀಕರಿಸಿ ಗುರುಶಿಷ್ಯರಿಬ್ಬರನ್ನೂ ಉದ್ದೇಶಿಸಿ ಅನುಗ್ರಹ ಭಾಷಣಮಾಡಿದರು.

ಶ್ರೀ ಗುರುಗಳು ಗೋರಖ್‌ಪುರದಿಂದ ದೇವಾರಿಯ, ಮಿರ್ಗಂಜ್, ಸಿವಾನ್ ಸೋನೆಪುರ್‌ಗಳ ಮುಖಾಂತರ ಪಾಟ್ನಾನಗರಕ್ಕೆ ದಯಮಾಡಿಸಿದರು. ಪಾಟ್ನಾನಗರದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ವಾಂಸರಿಂದಲೂ, ಪೌರರಿಂದಲೂ ಸತ್ಕರಿಸಲ್ಪಟ್ಟು ಗುರುಗಳು ಪಂಡಿತರನ್ನು ಸೂಕ್ತವಾಗಿ ಸನ್ಮಾನಿಸಿದರು. ಅಲ್ಲಿಂದ ಬಕ್ಸಾರ್, ಗಾಜೀಪುರ, ಅರಾ ಮುಂತಾದೆಡೆಗಳಲ್ಲಿ ಸಂಚರಿಸಿ ಶಾಲಾ ಕಾಲೇಜುಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಧರ್ಮೋಪದೇಶವಿತ್ತರು. ಗಾಜೀಪುರಕ್ಕೆ ಗುರುಗಳು ದಯಮಾಡಿಸಿದಾಗ ಅವರನ್ನು ಪೂರ್ಣಕುಂಭದಿಂದ ಸ್ವಾಗತಿಸಿದ ನಾಗರಿಕರು ಮೆರವಣಿಗೆಯಲ್ಲಿ ವೇದ ಮಂಗಳವಾದ್ಯ ಘೋಷದೊಡನೆ ಸಾವಿರಾರು ಜನ ಉತ್ಸವ ಮಾಡಿಕೊಂಡು ಬಿಡಾರಕ್ಕೆ ಬಿಜಯಮಾಡಿಸಿದರು. ಗುರುಗಳವರು ನಗರದ ಪ್ರೌಢಶಾಲೆಯ ಆವರಣದಲ್ಲಿ ಸರಸ್ವತೀ ಭಂಡಾರಕ್ಕೆ ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸಿ ಅರಾನಗರಕ್ಕೆ ಆಗಮಿಸಿ ಅಲ್ಲಿಯ ಕೃಷಿಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಉಪಾಧ್ಯಾಯರನ್ನು ಕುರಿತು ಉಪನ್ಯಾಸ ಮಾಡಿದರು. ಆರಾದಿಂದ ಪಾಟ್ನಾಕ್ಕೆ ಹಿಂದಿರುಗಿ ಮೊಖಾಮೆಹ್ ಮುಖಾಂತರ ಮುಸಾಫಿರ್‌ಪುರಕ್ಕೆ ದಯಮಾಡಿಸಿದರು. ಮುಸಾಫಿರ್‌ಪುರದಲ್ಲಿ ಅನೇಕ ಸಂಘ ಸಂಸ್ಥೆಗಳ ಸ್ವಾಗತವನ್ನು ಸ್ವೀಕರಿಸಿ ಮೋತೀಹಾರಿಗೆ ಬಂದು ಲಾಯೋರಿಯಾ ಪಟ್ಟಣಕ್ಕೆ ದಯಮಾಡಿಸಿದರು. ಶ್ರೀ ಶ್ರೀಗಳವರು ಹೋದ ಸ್ಥಳಗಳಲ್ಲೆಲ್ಲಾ ಜನಗಳ ಭಕ್ತಿವಾತ್ಸಲ್ಯಗಳನ್ನು ಸೂರೆಗೊಂಡು ಎಲ್ಲರನ್ನೂ ಹೃತ್ಪೂರ್ವಕವಾಗಿ ಆಶೀರ್ವದಿಸುತ್ತಾ ಎಲ್ಲೆಡೆಗಳಲ್ಲಿಯೂ ಪದೇ ಪದೇ ಧಾರ್ಮಿಕ ಏಕತೆಯನ್ನು ಸಾರುತ್ತಿದ್ದರು.

೨೫. ನೇಪಾಳಕ್ಕೆ ದಿಗ್ವಿಜಯ

ಪ್ರಪಂಚದ ಏಕೈಕ ಹಿಂದೂ ರಾಷ್ಟ್ರವಾದ ನೇಪಾಳಕ್ಕೂ ಶೃಂಗೇರಿಯ ಶಾರದಾ ಪೀಠಕ್ಕೂ ಬಹಳ ಪ್ರಾಚೀನವಾದ ಸಂಬಂಧವುಂಟು. ಶ್ರೀ ಶಂಕರಭಗವತ್ಪಾದರು ತಮ್ಮ ಜೀವಿತೋದ್ದೇಶಗಳೆಲ್ಲಾ ನೆರವೇರಿದನಂತರ ನೇಪಾಳಕ್ಕೆ ದಯಮಾಡಿಸಿ ಶ್ರೀ ಸಿದ್ಧೇಶ್ವರಿಯನ್ನು ಅರ್ಚನೆಮಾಡಿ ಅನಂತರ ಶ್ರೀ ದತ್ತಾತ್ರೇಯರ ದರ್ಶನಮಾಡಿ ಅವರೊಡನೆಯೇ ಹಿಮವತ್ಪರ್ವತದಲ್ಲಿ ಗುಹಾಪ್ರವೇಶ ಮಾಡಿದರು. ಶ್ರೀ ಪಶುಪತಿನಾಥನ ದೇವಾಲಯದಲ್ಲಿ ನಡೆಯುತ್ತಿರುವ ಪೂಜಾಭಿಷೇಕಗಳು ಇಂದಿಗೂ ಶೃಂಗೇರಿಯ ಸಂಪ್ರದಾಯದಂತೆಯೇ ನಡೆಯುತ್ತಿರುವುದು ಶೃಂಗೇರಿಗೂ ನೇಪಾಳಕ್ಕೂ ಇರುವ ಧಾರ್ಮಿಕ ಮತ್ತು ಸಾಂಸ್ಕೃತಿಕ ಬಾಂಧವ್ಯಕ್ಕೆ ಸಾಕ್ಷಿಯಾಗಿದೆ. ಶ್ರೀ ಶಂಕರಭಗವತ್ಪಾದರನಂತರ ಶೃಂಗೇರಿಯ ಪೀಠಾಚಾರ್ಯರಲ್ಲಿ ಯಾರಾದರೂ ನೇಪಾಳಕ್ಕೆ ಭೇಟಿಕೊಟ್ಟಿದ್ದರೆ ? ಎಂಬುದು ಸರಿಯಾಗಿ ತಿಳಿದುಬರುವುದಿಲ್ಲ. ರಾಜಾ ತ್ರಿಭುವನರ ಕಾಲದಲ್ಲಿ ನೇಪಾಳದ ಆಡಳಿತವೆಲ್ಲಾ ರಾಣಾ ವಂಶದವರ ಕೈಯ್ಯಲ್ಲಿದ್ದು ರಾಜರು ಕೇವಲ ಮಂತ್ರಿಯ ಕೈಗೊಂಬೆಯಾಗಿದ್ದರು. ರಾಜರ ಪದಚ್ಯುತಿಯಾಗುವ ಸಮಯದಲ್ಲಿ ತ್ರಿಭುವನರು ಭಾರತದ ರಾಯಭಾರಿಯ ಸಹಾಯದಿಂದ ಭಾರತಕ್ಕೆ ತಪ್ಪಿಸಿಕೊಂಡು ಬಂದಿದ್ದರು. ಆ ಸಮಯದಲ್ಲಿ (ಡಿಸೆಂಬರ್, ೧೯೫೦) ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರು ರಾಜಾ ತ್ರಿಭುವನರಿಗೆ ಆಶೀರ್ವಾದ ಪತ್ರವೊಂದನ್ನು ಬರೆಸಿ ಮಹಾರಾಜರ ಕಷ್ಟಗಳೆಲ್ಲವೂ ಮೂರುವಾರಗಳಲ್ಲಿ ಶ್ರೀ ಪಶುಪತಿನಾಥ ಮತ್ತು ಶ್ರೀ ಶಾರದಾಂಬಾರವರ ಕೃಪಾಕಟಾಕ್ಷದಿಂದ ಸೂರ್ಯೋದಯದ ಮಂಜಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಂತೆ ಕಳೆಗಿ ಹೋಗುವುದೆಂದೂ ರಾಜರು ತಮ್ಮ ರಾಜ್ಯವನ್ನು ಪುನಃ ಪಡೆಯುತ್ತಾರೆಂದೂ ತಿಳಿಸಿದ್ದರು. ಶ್ರೀ ಜಗದ್ಗುರುಗಳವರ ಆಶೀರ್ವಾದದಂತೆ ರಾಜಾತ್ರಿಭುವನರು ತಮ್ಮ ರಾಜ್ಯವನ್ನು ಮರಳಿ ಪಡೆದರು. ಶ್ರೀ ತ್ರಿಭುವನರು ಶ್ರೀ ಗುರುಗಳಿಗೆ ಬಿನ್ನಹ ಪತ್ರವನ್ನು ಬರೆಯಿಸಿ ಕೃತಜ್ಞತೆಯನ್ನು ಸೂಚಿಸಿ ನೇಪಾಳಕ್ಕೆ ಯಾತ್ರೆಯನ್ನು ಕೈಗೊಳ್ಳುವಂತೆ ಪ್ರಾರ್ಥಿಸಿದರು.

ಶ್ರೀ ಮಹೇಂದ್ರರು ಪಟ್ಟಕ್ಕೆ ಬಂದ ನಂತರ ಶೃಂಗೇರಿಯ ಜಗದ್ಗುರುಗಳವರಿಗೆ ಪತ್ರವೊಂದನ್ನು ಕಳುಹಿಸಿ ಜಗದ್ಗುರುಗಳವರು ನೇಪಾಳಕ್ಕೆ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದರು. ಬಹಳ ವರ್ಷಗಳ ಹಿಂದಿನ ಅಪೇಕ್ಷೆಯನ್ನು ಪೂರೈಸಲು, ಶ್ರೀ ಪಶುಪತಿನಾಥನ ದರ್ಶನ ಮಾಡಲು ಜಗದ್ಗುರು ಶ್ರೀ ವಿದ್ಯಾತೀರ್ಥರು ನಿರ್ಧರಿಸಿದರು. ಹಿತೌಡ ಎಂಬಲ್ಲಿಗೆ ಹೊರಟ ಶ್ರೀ ಶ್ರೀಗುರುಗಳವರನ್ನು ರಾಕ್ಸಾಲ್‌ನಲ್ಲಿ ಭಾರತೀಯ ಸರ್ಕಾರದ ಪ್ರತಿನಿಧಿಗಳು ಬೀಳ್ಕೊಟ್ಟರು. ನೇಪಾಳದ ಮಹಾದ್ವಾರವಾದ ಗೂಟಿ ಸಂಸ್ಥಾನ ಎಂಬಲ್ಲಿ ಪ್ರಧಾನ ಆಡಳಿತಾಧಿಕಾರಿಯು ಶ್ರೀ ಜಗದ್ಗುರುಗಳವರನ್ನು ಅತ್ಯಂತ ಗೌರವದಿಂದ ಸ್ವಾಗತಿಸಿದರು. ಬೀರ್‌ಗಂಜಿನ "ತ್ರಿಜುಧಾ ಬಹುಊರ್ವಶೀಯ ವಿದ್ಯಾಲಯ" ಎಂಬಲ್ಲಿ ವಿಶೇಷವಾಗಿ ನಿರ್ಮಿಸಲಾಗಿದ್ದ ತಳಿರುತೋರಣಗಳ ಚಪ್ಪರದಲ್ಲಿ ಸ್ವಾಗತಪತ್ರವನ್ನು ಒಪ್ಪಿಸಲಾಯಿತು. ಸ್ವಾಗತ ಪತ್ರಕ್ಕೆ ಸೂಕ್ತ ಉತ್ತರವನ್ನಿತ್ತ ಜಗದ್ಗುರುಗಳವರು ಹಿತೌಡ ಎಂಬ ಸ್ಥಳಕ್ಕೆ ಬಂದು, ಆ ರಾತ್ರಿ ಅಲ್ಲಿಯೇ ಶ್ರೀ ಚಂದ್ರ ಮೌಳೀಶ್ವರ ಪೂಜೆಯನ್ನೂ ಅನುಷ್ಠಾನವನ್ನೂ ನೆರವೇರಿಸಿದರು.

ಮಾರನೆಯ ದಿನ ಖಟ್ಮಂಡುವಿಗೆ ಪ್ರಯಾಣವಾರಂಭಿಸಿದ ಶ್ರೀ ಶ್ರೀಜಗದ್ಗುರುಗಳವರಿಗೆ ಕಾಲಂಕಿಯಲ್ಲಿ ಗೂಟಿ ಟ್ರಸ್ಟಿನ ಅಧ್ಯಕ್ಷರೂ, ಪುರಜನರೂ ಭವ್ಯ ಸ್ವಾಗತವನ್ನಿತ್ತರು. ಮುರಾರಿ ಭವನಕ್ಕೆ ಉತ್ಸವದಲ್ಲಿ ಬಿಜಯಮಾಡಿಸಿದ ಜಗದ್ಗುರುಗಳವರನ್ನು ರಾಜಪುರೋಹಿದರಾದ ಶ್ರೀ ಬಡಾಗುರೂಜಿಯವರು ಸ್ವಾಗತಿಸಿ ಅವರು ಧರಿಸಿದ್ದ ಪಾದುಕೆಗಳಿಗೆ ನೇಪಾಳದ ಸಂಪ್ರದಾಯದಂತೆ ವೇದೋಕ್ತ ಪೂಜೆಯನ್ನು ಸಲ್ಲಿಸಿದರು. ಶ್ರೀ ಜಗದ್ಗುರುಗಳವರು ನೇಪಾಳ ರಾಜ್ಯದಲ್ಲಿ ಸಂಸ್ಕೃತ ಭಾಷೆ ಜನಸಾಮಾನ್ಯವಾದ ಭಾಷೆಯಾಗಿದ್ದುದನ್ನು ಕಂಡು ಅತ್ಯಂತ ಆನಂದಪಟ್ಟರು. ಶ್ರೀ ಶ್ರೀಗಳವರು ಖಟ್ಮಂಡುವಿಗೆ ಆಗಮಿಸಿದ ಸಂಜೆ ಶ್ರೀ ಪಶುಪತಿನಾಥನ ದರ್ಶನಮಾಡಿದರು. ಮಾರನೆಯ ದಿನ ಪಶುಪತಿನಾಥ ಸ್ವಾಮಿಯನ್ನು ವಿಶೇಷವಾಗಿ ಪೂಜಿಸಿ ಶ್ರೀ ಜಗದ್ಗುರುಗಳವರು ಸಮಸ್ತ ಜನರ ಕಲ್ಯಾಣಕ್ಕಾಗಿ ಮಹಾ ರುದ್ರಯಾಗವನ್ನು ಆರಂಭಿಸಿದರು.

ಮಹಾಶಿವರಾತ್ರಿ ಪೂಜೆಗಾಗಿ ನೇಪಾಳಕ್ಕೆ ಆಗಮಿಸಿದ ಜಗದ್ಗುರುಗಳವರು ಖಟಮಂಡುವಿನ ಸುತ್ತಮುತ್ತ ಇದ್ದ ದೇವಾಲಯಗಳಿಗೆ ಸಂದರ್ಶನವಿತ್ತರು. ಭಕ್ತಪುರದ ದತ್ತಾತ್ರೇಯ ದೇವಾಲಯ, ಗುಹ್ಯೇಶ್ವರೀ ಅಥವಾ ಸಿದ್ಧೇಶ್ವರೀ ದೇವಾಲಯ, ತುಳಜಾಜಿ ಮಂದಿರ, ನೀಲಕಂಠ ದೇವಾಲಯ ಮತ್ತು ಬಾಲಾಜಿ ಮಂದಿರಗಳಲ್ಲಿ ಅರ್ಚನೆ ಪೂಜಾದಿ

Sri Vidyabharathi Book Centre, Sringeri

CC-O. [illegible] Public Domain. Digitized by eGangotri

ಗಳನ್ನು ನೆರವೇರಿಸಿದರು. ಮುರಾರಿ ಭವನದಲ್ಲಿ ಶ್ರೀ ಜಗದ್ಗುರುಗಳನ್ನು ಸಂದರ್ಶಿಸಲು ಜನ ತಂಡೋಪತಂಡವಾಗಿ ಬರುತ್ತಲೇ ಇದ್ದರು. ಭಾರತೀಯ ರಾಯಭಾರಿ ಶ್ರೀಮನ್ನಾರಯಣ್ ಮತ್ತು ನೇಪಾಳದ ರಾಜಪುರೋಹಿತರಾದ ಶ್ರೀ ಬಡಾಗುರೂಜಿ ಇವರು ಗುರುಗಳನ್ನು ಸಂದರ್ಶಿಸಿದ ಪ್ರಮುಖರು. ಶ್ರೀ ಜಗದ್ಗುರುಗಳವರನ್ನು ಭಾರತೀಯ ರಾಯಭಾರಿಯವರು ಕಛೇರಿಗೆ ಸ್ವಾಗತಿಸಿ ಸತ್ಕರಿಸಿದರು. ತ್ರಿಭುವನ ವಿಶ್ವವಿದ್ಯಾನಿಲಯದಲ್ಲಿ ಗುರುಗಳಿಗೆ ಬಿನ್ನವತ್ತಳೆಯನ್ನು ಒಪ್ಪಿಸಲಾಯಿತು. ೮-೧೦ ವರ್ಷದ ಪುಟ್ಟ ಪುಟ್ಟ ಬಾಲಕರೂ ಸಹ ವೇದ ಪಾರಾಯಣವನ್ನು ಮಾಡುತ್ತಿದ್ದ ದೃಶ್ಯವನ್ನು ಕಂಡು ಜಗದ್ಗುರುಗಳು ಅತ್ಯಾನಂದಪಟ್ಟು ವಿಶ್ವವಿದ್ಯಾನಿಲಯದ ಉಪಾಧ್ಯಾಯವರ್ಗಕ್ಕೂ ವಿದ್ಯಾರ್ಥಿಗಳಿಗೂ ವಿಶೇಷ ಸನ್ಮಾನಮಾಡಿದರು. ಭಾಗವತ ಭವನಕ್ಕೆ ದಯಮಾಡಿಸಿದ ಗುರುಗಳಿಗೆ ಅಲ್ಲಿಯ ಮುಖ್ಯಸ್ಥರು ಎಂಟು ಶಿವಲಿಂಗಗಳನ್ನೂ ಗೌರಿಶಂಕರರಿರುವ ರುದ್ರಾಕ್ಷಿಮಾಲೆಯನ್ನೂ ಅರ್ಪಿಸಿದರು.

ಮಹಾಶಿವರಾತ್ರಿಯ ದಿನ ಶ್ರೀ ಜಗದ್ಗುರುಗಳವರು ಪಾದಚಾರಿಯಾಗಿ ಸಹಸ್ರಾರು ಜನ ಭಕ್ತರೊಡಗೂಡಿ ವೇದಘೋಷದೊಡನೆ ಶ್ರೀ ಪಶುಪತಿನಾಥನ ಗುಡಿಗೆ ಹೊರಟರು. ಪೂಜಾನಂತರ ತಮ್ಮ ಬಿಡಾರದಲ್ಲಿ ಮಹಾರಾಜ ಮತ್ತು ಮಹಾರಾಣಿಯವರಿಗೆ ಸಂದರ್ಶನವಿತ್ತು ರಾತ್ರಿ ನಾಲ್ಕು ಯಾಮಗಳೂ ಶ್ರೀ ಚಂದ್ರಮೌಳೀಶ್ವರನಿಗೆ ಪೂಜಾಭಿಷೇಕಗಳನ್ನು ನೆರವೇರಿಸಿ ಸಮಸ್ತ ಭಾರತದಿಂದ ಬಂದಿದ್ದ ಭಕ್ತರ ಹೃನ್ಮನಗಳನ್ನು ತಣಿಸಿದರು. ಶಿವರಾತ್ರಿಯ ಮಾರನೆಯ ದಿನ ಮಹಾರುದ್ರ ಹೋಮದ ಪೂರ್ಣಾಹುತಿಯು ಸಮರ್ಪಿಸಲ್ಪಟ್ಟಿತು. ನೇಪಾಳದ ರಾಜದಂಪತಿಗಳೂ ಭಾರತದ ರಾಯಭಾರಿಯೂ ಉಪಸ್ಥಿತರಾಗಿದ್ದರು. ಆ ಮಹಾರುದ್ರ ಹೋಮದ ಸಂಪೂರ್ಣ ವೆಚ್ಚವನ್ನು ಮಹಾರಾಜರೇ ವಹಿಸಿದ್ದರು. ಮಹಾರಾಜರು ಭಕ್ತಿಪುರಸ್ಸರವಾಗಿ ರಜತ ಕರಂಡವನ್ನೂ ಬೆಳ್ಳಿಯಲ್ಲಿ ಮಾಡಿದ್ದ ಪಶುಪತಿನಾಥನ ಮಂದಿರವನ್ನೂ ದೊಡ್ಡ ಕಂಚಿನ ಗಂಟೆಯೊಂದನ್ನು ಜಗದ್ಗುರುಗಳವರಿಗೆ ಸಮರ್ಪಿಸಿದರು. ಜಗದ್ಗುರುಗಳವರು ನೇಪಾಳದ ರಾಜದಂಪತಿಗಳನ್ನು ಆಶೀರ್ವದಿಸಿ ಭಾರತೀಯ ರಾಯಭಾರಿಯನ್ನೂ ಅಲ್ಲಿಯ ಕಛೇರಿಯ ನೌಕರರನ್ನೂ ಆಶೀರ್ವದಿಸಿ ಮರುಪ್ರಯಾಣವನ್ನು ಆರಂಭಿಸಿದರು. ಶ್ರೀ ಶ್ರೀ ಜಗದ್ಗುರುಗಳವರು ನೇಪಾಳದ ಪಂಡಿತರನ್ನೆಲ್ಲಾ ವಿಶೇಷವಾಗಿ ಸನ್ಮಾನಿಸಿದರು. ಶ್ರೀ ಶ್ರೀಗಳವರ ನೇಪಾಳದ ಸಂದರ್ಶನ ಸವಿನೆನಪಿಗಾಗಿ ನೇಪಾಳದ ಸರ್ಕಾರವು ಪಶುಪತಿನಾಥನ ದೇವಾಲಯದ ಶಿಲಾಶಾಸನವೊಂದನ್ನು ಸ್ಥಾಪಿಸಿತು.

ಹಿತೌದ, ಮೋತೀಹಾರಿ, ಬೀರ್‌ಗಂಜ್, ರಾಕ್ಸಾಲ್, ಮುಸಾಫಿರ್‌ಪುರಗಳ ಮೂಲಕ ದರ್ಭಾಂಗಾಕ್ಕೆ ಆಗಮಿಸಿದ ಜಗದ್ಗುರುಗಳವರನ್ನು ದರ್ಭಾಂಗಾದ ಮಹಾರಾಜರು ಸ್ವಾಗತಿಸಿ ಸತ್ಕರಿಸಿದರು. ದರ್ಭಾಂಗಾದಲ್ಲಿ ಅನೇಕ ಸಂಘಸಂಸ್ಥೆಗಳವರ ಸತ್ಕಾರವನ್ನು ಒಪ್ಪಿಸಿಕೊಂಡು ಶ್ರೀ ಶ್ರೀಗಳವರು ಸಮಷ್ಟಿಪುರಕ್ಕೆ ಬಂದರು. ಅಲ್ಲಿ ಗೋಯಂಕಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮಶಾಲೆಯಲ್ಲಿ ಬಿಡಾರವಮಾಡಿ ಶ್ರೀ ಚಂದ್ರಮೌಳೀಶ್ವರನ ಪೂಜೆಯನ್ನು ನೆರವೇರಿಸಿದರು ಮಾರನೆಯ ದಿನ ಭಕ್ತರ ಕೋರಿಕೆಯಂತೆ ಅನುಗ್ರಹ ಭಾಷಣ ಮಾಡಿ, ಮಾಂಘೀರ್‌ಗೆ ದಯಮಾಡಿಸಿದರು. ಮಾಂಘೀರಿನ ಬಿಹಾರ್ ಸ್ಕೂಲ್ ಆಫ್ ಯೋಗ ಎಂಬಲ್ಲಿ ಬಿಡಾರ ಮಾಡಿ ಪೂಜಾದಿಗಳನ್ನು ನೆರವೇರಿಸಿದರು. ಶ್ರೀ ಜಗದ್ಗುರುಗಳವರು ಮಾಂಘೀರ್‌ನಲ್ಲಿ ಉಪನ್ಯಾಸ ಮಾಡುತ್ತಾ " ಶ್ರೀ ಶಂಕರ ಭಗವತ್ಪಾದರು ಎಲ್ಲ ಧರ್ಮಗಳೂ ಒಂದೇ ಎಂಬ ಐಕ್ಯಭಾವನೆಯನ್ನು ಸಾರಿದ್ದಾರೆ. ನಾವು ಯಾವುದೇ ಧರ್ಮವನ್ನು ಅನುಸರಿಸಲಿಲ್ಲ, ಎಲ್ಲಾ ಧರ್ಮಗಳ ಗುರಿಯೊಂದೇ ಎಂಬುದನ್ನು ಮರೆಯಬಾರದು. ಪ್ರತಿಯೊಂದು ಮತ-ಧರ್ಮದ ಮೂಲ ತತ್ವಗಳನ್ನು ನೋಡಿದಾಗ ಒಂದಕ್ಕೊಂದಕ್ಕೆ ವ್ಯತ್ಯಾಸ ಕಾಣಬರದು. ಎಲ್ಲಾ ಅಧ್ಯಾತ್ಮಿಕ ಮಾರ್ಗಗಳೂ ಕಟ್ಟಕಡೆಗೆ ಒಂದೇ ಗುರಿಯತ್ತ ಕೊಂಡೊಯ್ಯುತ್ತವೆ. ಅದ್ವೈತ ತತ್ವದ ದರ್ಶನವೆಂದರೆ ಎಲ್ಲಿಲ್ಲಿಯೂ ಏಕಮೇವಾದ್ವಿತೀಯದ ದರ್ಶನವೇ ಆಗಿದೆ" ಎಂದು ನುಡಿದರು.

ಮಾಂಘೀರ್‌ನಿಂದ ಹೊರಟ ಗುರುಗಳವರು ದೇವಘಡಕ್ಕೆ ದಯಮಾಡಿಸಿ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಪ್ರಸಿದ್ಧ ಶ್ರೀ ವೈದ್ಯನಾಥಲಿಂಗೇಶ್ವರನನ್ನು ದರ್ಶನಗೈದರು. ಬಾಲಾಜಿ ಮಂದಿರದಲ್ಲಿ ಶ್ರೀ ಜಗದ್ಗುರುಗಳವರ ಸಮ್ಮುಖದಲ್ಲಿ ಪುರುಷಸೂಕ್ತ ಮತ್ತು ಶ್ರೀಸೂಕ್ತ ಹೋಮಗಳು ನಡೆದವು. ಶ್ರೀ ಗುರುಗಳವರು ಅನಂತರ ಚಿತ್ತರಂಜನ್, ಸಿಂಧ್ರಿ, ದಾಮೋದರ ಅಣೆಕಟ್ಟು, ಮುಂತಾದವುಗಳನ್ನು ಸಂದರ್ಶಿಸಿ ದುರ್ಗಾಪುರದ ಮೂಲಕ ತಾರಕೇಶ್ವರಕ್ಕೆ ದಯಮಾಡಿಸಿದರು. ತಾರಕೇಶ್ವರದಲ್ಲಿ ಶ್ರೀ ಜಗದ್ಗುರುಗಳವ ರನ್ನು ನೂರಾರು ಜನ ಬ್ರಹ್ಮಚಾರಿಗಳೂ, ಸಂನ್ಯಾಸಿಗಳೂ, ಪಂಡಿತೋತ್ತಮರೂ ಶ್ರೀ ತಾರಕೇಶ್ವರ ಪೀಠಾಧೀಶ್ವರರ ನೇತೃತ್ವದಲ್ಲಿ ಸ್ವಾಗತಿಸಿದರು. ಶ್ರೀ ಜಗದ್ಗುರುಗಳವರಿಗೆ ಸಂಸ್ಕೃತ, ಬಂಗಾಳಿ, ಹಿಂದಿ ಭಾಷೆಗಳಲ್ಲಿ ಬಿನ್ನವತ್ತಳೆಗಳು ಅರ್ಪಿಸಲ್ಪಟ್ಟವು. ಕಲ್ಕತ್ತೆಯ ಸಂಸ್ಕೃತ ಮಹಾಪಾಠಶಾಲೆಯ ಪ್ರಿನ್ಸಿಪಾಲ್ ಶ್ರೀ ಗೌರೀನಾಥ ಶಾಸ್ತ್ರಿಗಳೂ ತಾರಕೇಶ್ವರಕ್ಕೆ ಆಗಮಿಸಿದ್ದು ಸ್ವಾಗತ ಪದ್ಯಮಾಲಿಕೆಯನ್ನು ಅರ್ಪಿಸಿದರು. ಶ್ರೀ ತಾರಕೇಶ್ವರ ಮಠಾಧಿಪತಿಗಳು ಜಗದ್ಗುರುಗಳವರಿಗೆ ರಜತ ತ್ರಿಶೂಲವನ್ನು ಅರ್ಪಿಸಿದರು.

ಶ್ರೀ ಜಗದ್ಗುರುಗಳವರು ತಾರಕೇಶ್ವರದಲ್ಲಿದ್ದಾಗಲೇ ನೂರಾರು ಕಾರುಗಳಲ್ಲಿ ಕಲ್ಕತ್ತೆಯ ಭಕ್ತರು ಬಂದು ಶ್ರೀ ಶ್ರೀಗಳ ದರ್ಶನ ಮಾಡಿದರು. ಅವರೆಲ್ಲರೂ ಜಗದ್ಗುರು ಗಳೊಡನೆಯೇ ಕಲ್ಕತ್ತೆಗೆ ಆಗಮಿಸಿದರು. ಕಲ್ಕತ್ತೆಯ ಅಮೃತ ಬಜಾರ್ ಪತ್ರಿಕೆಯು ವಿಶೇಷ ಸಂಚಿಕೆಯೊಂದನ್ನು ಪ್ರಕಟಿಸಿ ಶೃಂಗೇರಿಯನ್ನೂ ಶೃಂಗೇರಿ ಗುರುಗಳನ್ನೂ ಕುರಿತು ಅನೇಕ ಲೇಖನಗಳನ್ನು ಪ್ರಕಟಿಸಿತ್ತು.

೨೬. ಕಲ್ಕತ್ತೆಯಿಂದ ಹೃಷೀಕೇಶಕ್ಕೆ

ಶ್ರೀ ಶ್ರೀಗಳವರು ಕಲ್ಕತ್ತೆಗೆ ತಮ್ಮ ಅಪಾರ ಶಿಷ್ಯರೊಡನೆ ಆಗಮಿಸಿದಾಗ ಅತ್ಯಂತ ಭವ್ಯ ಸ್ವಾಗತವನ್ನು ನೀಡಲಾಯಿತು. ಬಾಲಿಬ್ರಿಡ್ಜ್ ಎಂಬಲ್ಲಿಗೆ ಅವರು ದಯಮಾಡಿಸಿ

Sri Vidyabharathi Book Centre, Sringeri

CC-0. In Public Domain. Digitized by eGangotri

ದಾಗ ಅನೇಕ ಸಹಸ್ರಜನ ಅಲ್ಲಿ ಕಾದಿದ್ದು ಜಯಘೋಷ ಮಾಡಿದರು. ಶ್ರೀ ಜಗದ್ಗುರುಗಳವರನ್ನು ರಜತಪಾಲಕಿಯಲ್ಲಿ ಅವರ ಬಿಡಾರವಾದ ಶಂಕರ ಇನ್‌ಸ್ಟಿಟ್ಯೂಟ್ ಆಫ್ ಫಿಲಾಸಫಿ ಎಂಬಲ್ಲಿಗೆ ನಾದಸ್ವರ, ವೇದಘೋಷ, ಭಜನೆಗಳೊಡನೆ ಕರೆತರಲಾಯಿತು. ಬಂಗಾಳಿ, ಹಿಂದಿ, ಸಂಸ್ಕೃತ, ಮಲೆಯಾಳ, ತಮಿಳು, ಕನ್ನಡ ಮತ್ತು ತೆಲಗು ಭಾಷೆಗಳಲ್ಲಿ ಬಿನ್ನವತ್ತಳೆಗಳನ್ನು ಅರ್ಪಿಸಲಾಯಿತು. ಶ್ರೀ ಜಗದ್ಗುರುಗಳವರು ಆ ರಾತ್ರಿ ನಡೆಸಿದ ಶ್ರೀ ಚಂದ್ರಮೌಳೀಶ್ವರ ಪೂಜೆ ಕಲ್ಕತ್ತೆಯ ನಾಗರಿಕರಿಗೆ ಅತ್ಯಂತ ಹರ್ಷಾನಂದವನ್ನುಂಟುಮಾಡಿತು.

ಶ್ರೀ ಜಗದ್ಗುರುಗಳವರನ್ನು ದರ್ಶಿಸಲು ಬಹು ಜನ ಬಂಗಾಳೀ ಪಂಡಿತರೂ, ವಿದ್ವಾಂಸರೂ, ಅಧಿಕಾರಿಗಳೂ ತಂಡೋಪತಂಡವಾಗಿ ಆಗಮಿಸುತ್ತಿದ್ದರು. ಪ್ರತಿನಿತ್ಯವೂ ಗುರುಗಳ ಸನ್ನಿಧಿಯಲ್ಲಿ ಪಂಡಿತೋತ್ತಮರು ಹಿಂದೂಧರ್ಮ, ಸಂಸ್ಕೃತಿ, ಆಧ್ಯಾತ್ಮ ವಿಚಾರಗಳನ್ನು ಕುರಿತು ಉಪನ್ಯಾಸ ಮಾಡುತ್ತಿದ್ದರು. ಶ್ರೀ ಜಗದ್ಗುರುಗಳವರು ಇಂತಹ ಒಂದು ಸಂದರ್ಭದಲ್ಲಿ ಉಪನ್ಯಾಸ ಮಾಡುತ್ತಾ "ಹಿಂದೂ ಧರ್ಮವು ಇತರ ಮತೀಯರು ಪೂಜಿಸುವ ದೇವರನ್ನು, ಇತರರ ಧರ್ಮವನ್ನು ತಿರಸ್ಕರಿಸುವುದಿಲ್ಲ. ಈ ವೈಶಿಷ್ಟ್ಯಪೂರ್ಣವಾದ ಲಕ್ಷಣವು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ. ಶ್ರದ್ಧೆಯಿಂದ ಮಾಡುವ ಯಾವ ದೇವರ ಪೂಜೆಯೇ ಆಗಲಿ ಅದು ಏಕಮೇವಾದ್ವಿತೀಯನಾದ ಆ ಒಬ್ಬ ಪರಮಾತ್ಮನಿಗೇ ಸಲ್ಲುತ್ತದೆ. ಆಕಾಶದಿಂದ ಬಿದ್ದ ಮಳೆಯ ನೀರು ಹಳ್ಳಕೊಳ್ಳಗಳಲ್ಲಿ ಹರಿದರೂ ಅಂತಿಮವಾಗಿ ಸಮುದ್ರವನ್ನು ಸೇರುವಂತೆ ಎಲ್ಲ ದೇವತೆಗಳಿಗೂ ಮಾಡುವ ಪೂಜೆಯು ಪರಮಾತ್ಮನಿಗೇ ಸಲ್ಲುತ್ತದೆ. ಹಿಂದೂ ಧರ್ಮವು ಕೇವಲ ಒಂದು ಮತವಲ್ಲ. ಅದು ಮತಕ್ಕಿಂತ ತುಂಬಾ ಮಹತ್ವವುಳ್ಳದ್ದು. ಅದು ಜೀವನದ ಅನುಷ್ಠಾನ ತತ್ವ. ಜಗತ್ತಿನಲ್ಲಿ ಯಾವ ಮೂಲೆಯಲ್ಲಿಯೇ ವಾಸಿಸಲಿ ಎಂತಹ ಸ್ವಭಾವದವನೇ ಆಗಿರಲಿ ಪ್ರತಿಯೊಬ್ಬನಿಗೂ ಅವನವನ ಮಾನಸಿಕ ಮಟ್ಟಕ್ಕೆ ತಕ್ಕಂತೆ ಅವನವನ ಭಾವುಕತೆಗೆ ಹೊಂದಿಕೊಳ್ಳುವಂತೆ ಹಿಂದೂ ಧರ್ಮದಲ್ಲಿ ಪ್ರತ್ಯೇಕ ಪ್ರತ್ಯೇಕ ಮಾರ್ಗವಿದ್ದು ಅಂತಿಮದಲ್ಲಿ ಈ ವಿವಿಧ ಮಾರ್ಗಗಳು ಭಗವತ್ಸನ್ನಿಧಿಯಲ್ಲಿ ಮಿಳಿತವಾಗುತ್ತವೆ" ಎಂದು ಅಪ್ಪಣೆ ಕೊಡಿಸಿದರು.

ಶ್ರೀ ಜಗದ್ಗುರುಗಳವರು ಅನೇಕ ಸಂಘ ಸಂಸ್ಥೆಗಳಿಗೆ ಸಂದರ್ಶನವಿತ್ತರು. ಸರ್ಕಾರದ ಸಂಸ್ಕೃತ ಕಾಲೇಜು, ಶಂಕರ ಇನ್‌ಸ್ಟಿಟ್ಯೂಟ್ ಆಫ್ ಫಿಲಾಸಫಿ, ಶ್ರೀ ರಾಮಕೃಷ್ಣ ಮಿಷನ್ ಸ್ಕೂಲ್ ಇವು ಶ್ರೀ ಜಗದ್ಗುರುಗಳವರು ಭೇಟಿನೀಡಿದ ಅತ್ಯಂತ ಮುಖ್ಯ ಸ್ಥಳಗಳು. ಶ್ರೀ ಜಗದ್ಗುರುಗಳವರು ಲೋಕ ಕಲ್ಯಾಣಕ್ಕಾಗಿ ಚಂಡೀಹೋಮವನ್ನು ನಡೆಸಿದರು. ಬಂಗಾಳದ ವಿದ್ವಾಂಸರನ್ನು ಸನ್ಮಾನಿಸುವ ಅಪೇಕ್ಷೆಯಿಂದ ಎರಡುದಿನ ವಿದ್ವತ್ಸಭೆಗಳನ್ನು ಏರ್ಪಡಿಸಿದ್ದರು. ಚಂಡೀಯೋಮದ ಪೂರ್ಣಾಹುತಿಯ ದಿನ ಅನೇಕ ಸಹಸ್ರ ಜನ ಗುರುದೇವರ ದರ್ಶನ ಉಪದೇಶ ಪಡೆದು ಧನ್ಯರಾದರು. ಕಲ್ಕತ್ತೆಯ ವಿದ್ವಾಂಸ

Sri Vidyabharathi Book Centre, Sringeri

CC-O. In Public Domain. Digitized by eGangotri

ರನ್ನೆಲ್ಲ ಸನ್ಮಾನಿಸಿ ಉಪದೇಶಭಾಷಣ ಮಾಡುತ್ತಾ "ಈ ಜಗತ್ತಿನಲ್ಲಿ ಒಳ್ಳೆಯದು ಕೆಟ್ಟದು, ಸುಖ ದುಃಖ ಯೋಗ್ಯ ನೀಚ ಎಂಬ ದ್ವಂದ್ವಗಳನ್ನು ನಾವು ಕಾಣುತ್ತಿರುತ್ತೇವೆ. ಈ ದ್ವಂದ್ವಗಳನ್ನು ದಾಟಿದಾಗ ಸ್ಥಿರವೂ ಶಾಶ್ವತವೂ ಆದ ಚಿರಸತ್ಯ ನಮಗೆ ಗೋಚರವಾಗುತ್ತದೆ. ಎಲ್ಲದರಲ್ಲಿಯೂ ಒಳ್ಳೆಯದು ಕೆಟ್ಟದು ಎಂಬ ಈ ಎರಡನ್ನೂ ನಾವು ಅತಿಕ್ರಮಿಸಿ ನಿಂತಾಗ ದ್ವಂದ್ವಾತೀತವಾದ ಸತ್ಯ ದೃಗ್ಗೋಚರವಾಗುತ್ತದೆ. ಮಾನವನು ತನ್ನ ಸ್ವಭಾವದಲ್ಲಿನ ಸ್ವಾರ್ಥತೆ, ಸಂಕುಚಿತಭಾವ, ಅಲ್ಪತನ ಇವುಗಳನ್ನು ಮತ್ತು ಇವುಗಳು ಪ್ರಚೋದಿಸುವ ಕಾರ್ಯಗಳನ್ನೂ ತಡೆಗಟ್ಟಬಲ್ಲವನಾದರೆ ಈ ಭೂಲೋಕವೇ ಸ್ವರ್ಗವಾಗುತ್ತದೆ" ಎಂದು ಅಪ್ಪಣೆ ಕೊಡಿಸಿದರು. ಕಲ್ಕತ್ತೆಯ ನಾಗರಿಕರಿಂದಲೂ ಶಿಷ್ಯರಿಂದಲೂ ಬೀಳ್ಕೊಡಲ್ಪಟ್ಟ ಗುರುಗಳು ಕಲ್ಕತ್ತೆಯಿಂದ ದೆಹಲಿಯ ಮಾರ್ಗವಾಗಿ ಪ್ರಯಾಣ ಬೆಳೆಸಿದರು.

ಕಲ್ಕತ್ತೆಯಿಂದ ಹೊರಟ ಗುರುಗಳು ಕೊಯಿಲಾ ಸೇತುವೆಯ ಸಮೀಪಕ್ಕೆ ಬಂದಾಗ ಪ್ರವಾಹವು ವಿಪರೀತವಾಗಿ ಸೇತುವೆಯು ಮುಚ್ಚಿಹೋಗಿತ್ತು. ಅಲ್ಲಿಂದ ಕೋಲಾಘಾಟ್ ಎಂಬಲ್ಲಿಗೆ ಬಂದಾಗ ಪ್ರವಾಹದ ದೆಸೆಯಿಂದ ಮುಂದಿನ ಪ್ರಯಾಣ ಅಸಾಧ್ಯವಾಗಿತ್ತು. ಬಳಿಯಲ್ಲಿಯೇ ಇದ್ದ ರೂಪನಾರಾಯಣ ನದಿಗೆ ಸೇತುವೆಯ ನಿರ್ಮಾಣ ಆರಂಭವಾಗಿ ಎರಡು ಸಲ ಕೆಲಸ ಕೆಟ್ಟುಹೋಗಿತ್ತು. ಇಂಜಿನಿಯರ್‌ಗಳೂ, ಕಾರ್ಮಿಕರೂ ಈ ವಿಘ್ನ ವೈಪರಿತ್ಯಗಳಿಂದ ಧೃತಿಗುಂದಿದ್ದರು. ಅದೇ ಸಮಯಕ್ಕೆ ಶ್ರೀ ಗುರುಗಳು ಅಕಸ್ಮಾತ್ತಾಗಿ ಅಲ್ಲಿಗೆ ಆಗಮಿಸಿದ್ದರು. ಆ ಸೇತುವೆಯ ಕಾರಾಗಾರದ ಬಳಿ ಒಂದು ಗುಡಿಸಿಲಿನಲ್ಲಿ ಕೆಲಸಗಾರರು ಶ್ರೀ ಮಾರುತಿ, ಈಶ್ವರ ಮತ್ತು ಗುರುನಾನಕರ ಭಾವಚಿತ್ರಗಳನ್ನಿಟ್ಟು ಆಗಾಗ ಭಜನೆಮಾಡಿ ಉದ್ಯಮಕ್ಕೆ ಯಶಸ್ಸನ್ನು ಪ್ರಾರ್ಥಿಸುತ್ತಿದ್ದರು. ಶ್ರೀಜಗದ್ಗುರುಗಳವರು ಆಸ್ಥಳಕ್ಕೆ ಆಗಮಿಸಿದಾಗ ಅಲ್ಲಿಯ ಇಂಜಿನಿಯರುಗಳೂ ಕೆಲಸಗಾರರೂ ಗುರುಗಳವರನ್ನು ಪ್ರಾರ್ಥಿಸಿಕೊಂಡು ತಮಗಾಗುತ್ತಿದ್ದ ತೊಂದರೆಗಳನ್ನು ನಿವೇದಿಸಿಕೊಂಡರು. ಈಶ್ವರ ಕೃಪೆಯಿಂದ ವಿಘ್ನಗಳೆಲ್ಲವೂ ಪರಿಹಾರವಾಗುವುದೆಂದು ಭರವಸೆ ನೀಡಿದ ಶ್ರೀ ಶ್ರೀಗಳವರು ಆ ರಾತ್ರಿ ತಮ್ಮ ಮುಂದಿನ ಪ್ರಯಾಣವನ್ನು ನಿಲ್ಲಿಸಿ ಆ ಗುಡಿಸಲಿನಲ್ಲಿಯೇ ಶ್ರೀ ಶಾರದಾ ಚಂದ್ರಮೌಳೀಶ್ವರರಿಗೆ ವಿಶೇಷ ಪೂಜೆನಡೆಸಿದರು. ಅವರ ಕೆಲಸ ನಿರ್ವಿಘ್ನವಾಗಿ ನಡೆಯಲೆಂದು ಆಶೀರ್ವದಿಸಿದರು. ಹರ್ಷಚಿತ್ತರಾದ ಕೆಲಸಗಾರರು ಕೆಲಸವನ್ನು ಪುನಃ ಉತ್ಸಾಹದಿಂದ ಆರಂಭಿಸಿ ಜಯಶೀಲರಾದರು. ಸೇತುವೆಯ ಕಾರ್ಯದಲ್ಲಿ ಮುಂದೆ ಯಾವ ವಿಘ್ನವೂ ಬರಲಿಲ್ಲ.

ಕೋಲಾಘಾಟಿನಿಂದ ಜಯ ಜಯಕಾರದೊಡನೆ ಬೀಳ್ಕೊಡಲ್ಪಟ್ಟ ಗುರುದೇವರು ಬರ್ದ್ವಾನ್ ನಗರಕ್ಕೆ ದಯಮಾಡಿಸಿದರು. ಡಾ|| ಶೈಲೇಂದ್ರನಾಥ ಬ್ಯಾನರ್ಜಿಯವರ ಧರ್ಮಪತ್ನಿಯವರು ಮಾನಸ ಸರೋವರದಿಂದ ತಂದಿದ್ದ ಪವಿತ್ರ ಜಲವನ್ನು ಶ್ರೀ ಚಂದ್ರಮೌಳೀಶ್ವರ ದೇವರಿಗೆ ಅಭಿಷೇಕ ಮಾಡಿದರು. ಬರ್ದ್ವಾನಿನಿಂದ ಜೀಯಲ್‌ಗೋರಾ ಮುಖಾಂತರ ರಾಂಚಿಗೆ ದಯಮಾಡಿಸಿದರು. ರಾಂಚಿಯಲ್ಲಿ ಭಕ್ತರು ಅರ್ಪಿಸಿದ ಬಿನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಪತ್ರಿಕೆಯನ್ನು ಸ್ವೀಕರಿಸಿ ಅಲ್ಲಿನ ಕಾರ್ಖಾನೆಗಳಿಗೆಲ್ಲಾ ಭೇಟಿಕೊಟ್ಟು ಕೆಲಸಗಾರರನ್ನು ಆಶೀರ್ವದಿಸಿ ಅಲ್ಲಿಂದ ಗಯಾಕ್ಷೇತ್ರಕ್ಕೆ ದಯಮಾಡಿಸಿದರು. ಗಯಾಕ್ಷೇತ್ರದಲ್ಲಿ ಜಗದ್ಗುರುಗಳನ್ನು ಸ್ವಾಗತಿಸಲು ಬಿಹಾರದ ಮುಖ್ಯಮಂತ್ರಿ ಶ್ರೀ ಮಹಾಮಾಯಾಪ್ರಸಾದಸಿನ್ಹರವರು ಇತರ ಮಹಜನರೂ ಆಗಮಿಸಿದ್ದರು. ಜಗದ್ಗುರುಗಳವರ ಉಪನ್ಯಾಸವನ್ನು ಕೇಳಲು ವಿಶಾಲವಾದ ಮೈದಾನದಲ್ಲಿ ಸೇರಿದ್ದ ಜನಗಳ ಸಂಖ್ಯೆ ಎರಡು ಲಕ್ಷಕ್ಕೂ ಮಿಕ್ಕಿತ್ತು. ಗಯೆಯಲ್ಲಿ ವಿಷ್ಣು ಪಾದ ಮತ್ತು ಗಯೇಶ್ವರಿಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರವಾಹ ಭೀತಿ, ಕ್ಷಾಮ ಪೀಡೆಯಿಂದ ನೊಂದಿದ್ದ ಬಿಹಾರಿನ ಪ್ರಜೆಗಳಿಗೆ ಅಭಯ ನೀಡಿ ಹರಸಿದರು. ಬುದ್ಧ ಗಯೆಗೆ ದಯಮಾಡಿಸಿದ ಶ್ರೀ ಶ್ರೀಗಳವರನ್ನು ಅಲ್ಲಿಯ ಮಹಂತರಾದ ಶ್ರೀ ಸದಾನಂದ ಗುರು ಅವರು ಸ್ವಾಗತಿಸಿ ಸತ್ಕರಿಸಿದರು.

ಗಯಾಕ್ಷೇತ್ರದಲ್ಲಿ ಪುರೋಹಿತರಿಗೂ ಪಂಡಿತರಿಗೂ ಸೂಕ್ತ ಸಂಭಾನೆಗಳನ್ನಿತ್ತ ಗುರುಗಳವರು ಡಾಲ್ಮಿಯಾ ನಗರಕ್ಕೆ ದಯಮಾಡಿಸಿ ಶಾಂತಿ ಪ್ರಸಾದ್ ಜೈನರ ಅತಿಥ್ಯ ಸ್ವೀಕರಿಸಿದರು. ಡಾಲ್ಮಿಯಾ ಕಾರ್ಖಾನೆಗೂ, ರ್‍ಹೋತಾ ಇನ್‌ಡಸ್ಟ್ರೀಸ್ ಕಾರ್ಖಾನೆಗೂ ಭೇಟಿಯಿತ್ತು ಅಲ್ಲಿಯ ಕೆಲಸಗಾರರನ್ನೆಲ್ಲಾ ಆಶೀರ್ವಸಿದ ಗುರುಗಳವರು ವಿಂಧ್ಯಾಚಲಕ್ಕೆ ದಯಮಾಡಿಸಿದರು. ವಿಂಧ್ಯಾಚಲವು ಶಕ್ತಿ ಪೀಠವೆಂದು ಪ್ರಸಿದ್ಧವಾಗಿದೆ. ಶ್ರೀ ವಿಂಧ್ಯಾಚಲನಿವಾಸಿನಿ ರಾಕ್ಷಸರ ಸಂಹಾರಕ್ಕಾಗಿ ಹೊರಟಿದ್ದು ಈ ವಿಂಧ್ಯಾಚಲದಿಂದಲೇ ಎಂದು ದೇವಿ ಮಹಾತ್ಮ್ಯದಲ್ಲಿ ಬರುತ್ತದೆ. ಶ್ರೀ ಜಗದ್ಗುರುಗಳವರು ಶ್ರೀ ವಿಂಧ್ಯಾಚಲನಿವಾಸಿನಿ ಆಲಯದಲ್ಲಿ ವಿಶೇಷ ಪೂಜಾದಿಗಳನ್ನುನಡೆಸಿ ಲೋಕಕ್ಷೇಮಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು. ಕಾಳಿಕಾಂಬ ದುರ್ಗಾಂಬಾ ಮತ್ತು ಮಹೇಶ್ವರ ಆಲಯಕ್ಕೂ ಭೇಟಿಯಿತ್ತ ಗುರುಗಳವರು ಮುಂದಿನ ಪ್ರಯಾಣಕ್ಕೆ ಸನ್ನದ್ಧರಾದರು.

ಶ್ರೀ ಜಗದ್ಗುರುಗಳವರ ಯೋಜಿತ ಕಾರ್ಯಕ್ರಮದಂತೆ ಅವರು ವಿಂಧ್ಯಾಚಲದಿಂದ ವಾರಣಾಸಿ ಕ್ಷೇತ್ರಕ್ಕೆ ದಯಮಾಡಿಸಬೇಕಾಗಿತ್ತು. ಆದರೆ ಆ ಕ್ಷೇತ್ರದಲ್ಲಿ ಮತೀಯ ಗಲಭೆಗಳು ಉಂಟಾಗಿ ಅಶಾಂತ ಪರಿಸ್ಥಿತಿ ಒದಗಿದ್ದುದರಿಂದ ಶ್ರೀ ಶ್ರೀಗಳವರ ಕಾಶಿಯ ಪ್ರಯಾಣ ಮುಂದೆ ಹಾಕಲ್ಪಟ್ಟಿತ್ತು. ದೇವಿ ಶ್ರೀ ವಿಂಧ್ಯಾಚಲ ನಿವಾಸಿನಿಯ ಅರ್ಚನೆಯನ್ನು ಮಾಡುತ್ತಾ ಜಗದ್ಗುರುಗಳವರು ತಮ್ಮ ಗುರುದೇವರನ್ನು ಸ್ಮರಿಸುತ್ತಾ, ಶ್ರೀ ಅನ್ನಪೂರ್ಣೇಶ್ವರೀ, ಶ್ರೀ ವಿಶ್ವೇಶ್ವರ ದರ್ಶನವನ್ನು ದೊರಕಿಸುವಂತೆ ಪ್ರಾರ್ಥಿಸಿದ್ದರು. ವಿಂಧ್ಯಾಚಲನಿವಾಸಿನಿಯ ಆಲಯದಿಂದ ಗುರುಗಳವರು ಹೊರಗೆ ಬರುತ್ತಿದ್ದಂತೆಯೇ ವಾರಣಾಸಿಯ ಹಲವು ಜನ ಪ್ರಮುಖರು ಅವರ ದರ್ಶನಕ್ಕಾಗಿ ವಿಂಧ್ಯಾಚಲವಾಸಿನಿಯ ಆಲಯಕ್ಕೆ ಬಂದುಬಿಟ್ಟಿದ್ದರು. ಶ್ರೀ ಜಗದ್ಗುರುಗಳವರು ತಮ್ಮ ಕಾಶಿಯಾತ್ರೆಯನ್ನು ಮುಂದೆ ಹಾಕಬಾರದೆಂದೂ, ಪೂರ್ವಯೋಜಿತವಾದ್ದಂತೆ ಕಾಶಿಗೆ ಹೊರಡಬೇಕೆಂದೂ ಪ್ರಾರ್ಥಿಸಿಕೊಂಡರು. ಆ ಶಿಷ್ಯರ ಪ್ರಾರ್ಥನೆಯನ್ನಂಗೀಕರಿಸಿ ಜಗದ್ಗುರುಗಳವರು ಕಾಶಿಗೆ ಹೊರಡುವ ನಿರ್ಧಾರವನ್ನು ಕೈಗೊಂಡರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪವಿತ್ರವಾದ ಕಾಶೀಕ್ಷೇತ್ರಕ್ಕೆ ಶ್ರೀ ಜಗದ್ಗುರುಗಳವರು ಆಗಮಿಸುತ್ತಿದ್ದಂತೆಯೇ ಸಾವಿರಾರು ಜನರು ಜಯಘೋಷದೊಡನೆ ಅವರನ್ನು ಸ್ವಾಗತಿಸಿದರು. ಕೇದಾರಘಾಟಿನಲ್ಲಿರುವ ಶಂಕರ ಮಠಕ್ಕೆ ದಯಮಾಡಿಸಿ ಶಿಷ್ಯರನೇಕರಿಗೆ ಸಂದರ್ಶನವಿತ್ತು ಮಠದಲ್ಲಿ ಶ್ರೀ ಶಾರದಾಂಬಾರವರ ಪ್ರತಿಷ್ಠೆಗೆ ಸೂಕ್ತ ನಿರ್ದೇಶನವಿತ್ತರು. ಅಲ್ಲಿಂದ ಅನ್ನಪೂರ್ಣ ಮಿಲ್ಸ್ ಅತಿಥಿಶಾಲೆಗೆ ದಯಮಾಡಿಸಿ ಬಿಡಾರ ಮಾಡಿದರು. ಮಾನೆಯದಿನ ಪ್ರಾತಃಕಾಲದ ಮುಂಜೆಯೇ ಶ್ರೀ ಜಗದ್ಗುರುಗಳವರು ಗಂಗಾಸ್ನಾನವನ್ನು ನೆರವೇರಿಸಿ ಮೂರು ಘಂಟೆಗಳಿಗೂ ಹೆಚ್ಚು ಕಾಲ ಧ್ಯಾನಮಗ್ನರಾಗಿ ಮೈಮರೆತಿದ್ದರು. ಅನಂತರ ಶಂಕರ ಮಠಕ್ಕೆ ಬಂದು ಶಿಷ್ಯರಿಂದ ಪಾದಪೂಜಾದಿಗನನ್ನು ಒಪ್ಪಿಸಿಕೊಂಡು ಕ್ಷೇಮೇಶ್ವರ್ ಮತ್ತು ಹನುಮಾರ್ಘಾಟ್‌ಗಳ ಮುಖಾಂತರ ಬರ್ದ್ವಾನ್ ಮಹಾರಾಜರ ಅರಮನೆಗೆ ದಯಮಾಡಿಸಿದರು ಅವರ ಭಕ್ತಿ ಶ್ರದ್ಧೆಯ ಸತ್ಕಾರವನ್ನು ಒಪ್ಪಿಸಿಕೊಂಡು ಶ್ರೀ ಶ್ರೀಗಳವರು ಕ್ಷೇಮೇಶ್ವರ ಘಾಟಿನಲ್ಲಿ ನಡೆಯಲೇರ್ಪಾಡಾಗಿದ್ದ ವಿದ್ವತ್ಸಭೆಗೆ ದಯಮಾಡಿಸಿದರು. ಪಂಡಿತ ಶ್ರೀ ರಾಜೇಶ್ವರ ಶಾಸ್ತ್ರಿಗಳವರ ನೇತೃತ್ವದಲ್ಲಿ ವಿದ್ವಾಂಸರು ಜಗದ್ಗುರುಗಳವರನ್ನು ಭಕ್ತಿ ಶ್ರದ್ಧೆಯಿಂದ ಸ್ವಾಗತಿಸಿ ಜಯಕಾರ ಮಾಡಿದರು. ಎರಡು ದಿನಗಳ ಕಾಲ ವಿದ್ವತ್ಸಭೆಯನ್ನು ನಡೆಸಿ ನೂರಅರವತ್ತಕ್ಕೂ ಮಿಕ್ಕಿದ ವಿದ್ವಾಂಸರಿಗೆ ಶ್ರೀ ಶ್ರೀಗಳವರು ಯಥೇಚ್ಛವಾಗಿ ಸಂಭಾವನೆಗಳನ್ನಿತ್ತರು. ಕಾಶಿಯ ಪಂಡಿತ ಮಂಡಲಿಯಂತೂ ಶ್ರೀ ಗುರುವರ್ಯರ ಪಾಂಡಿತ್ಯವನ್ನೂ ಔದಾರ್ಯವನ್ನೂ ಮುಕ್ತಕಂಠದಿಂದ ಪ್ರಶಂಸೆ ಮಾಡಿತು.

ಮಾರನೆಯ ದಿನ ದಶಾಶ್ವಮೇಧ ಘಾಟಿಗೆ ಭೇಟಿಯಿತ್ತು ಗಂಗಾಸ್ನಾನ ಮಾಡಿ ಶ್ರೀ ವಿಶ್ವೇಶ್ವರನನ್ನು ಸುವರ್ಣನಾಣ್ಯಗಳಿಂದ ಪೂಜಿಸಿದರು. ಅನ್ನಪೂರ್ಣೇಶ್ವರೀ ಧುಂಡಿವಿನಾಯಕ ಮುಂತಾದ ದೇವಾಲಯಗಳಲ್ಲಿ ಪೂಜಾದಿಗಳನ್ನು ನೆರವೇರಿಸಿ, ಅನ್ನಪೂರ್ಣ ಮಿಲ್ಸ್ ಸಭಾಂಗಣದಲ್ಲಿ ಏರ್ಪಾಡಾಗಿದ್ದ ವಿದ್ವತ್ಸಭೆಗೆ ದಯಮಾಡಿಸಿದರು. ಅನಂತರ ಸಾರ್ವಜನಿಕ ಮಹಾಸಭೆಯು ಒಪ್ಪಿಸಲಿದ್ದ ಬಿನ್ನವತ್ತಳೆಯನ್ನು ಸ್ವೀಕರಿಸುವುದಕ್ಕಾಗಿ ದಯಮಾಡಿಸಿದರು. ಕಾಶಿಯ ಪೌರಸಭೆಯೂ ಸೇರಿದಂತೆ ಇಪ್ಪತ್ತೈದು ಸಂಘಸಂಸ್ಥೆಗಳವರು ಶ್ರೀ ಜಗದ್ಗುರುಗಳವರಿಗೆ ಬಿನ್ನವತ್ತಳೆಗಳನ್ನು ಸಮರ್ಪಿಸಿದರು.

ಅನಂತರ ವಾರಣಾಸಿಯ ಸಂಸ್ಕೃತ ವಿಶ್ವವಿದ್ಯಾನಿಲಯ, ಸಾಂಗವೇದ ವಿದ್ಯಾಲಯ ಕಾಶೀ ವಿಶ್ವವಿದ್ಯಾನಿಲಯಗಳಿಗೆ ಜಗದ್ಗುರುಗಳವರು ಸಂದರ್ಶನವನ್ನಿತ್ತರು. ಕಾಶೀ ವಿಶ್ವವಿದ್ಯಾಲಯದಲ್ಲಿ ಒಪ್ಪಿಸಿದ ಬಿನ್ನವತ್ತಳೆಗೆ, ಪ್ರತ್ಯುತ್ತರ ನೀಡುತ್ತಾ "ಕಾಶಿಯ ವಿಶ್ವವಿದ್ಯಾನಿಲಯಕ್ಕೂ, ಶೃಂಗೇರಿ ಮಠಕ್ಕೂ ಗಾಢವಾದ ಸಂಬಂಧವಿದೆ. ಪಂಡಿತ ಮದನಮೋಹನ ಮಾಳವೀಯರು ತಮ್ಮ ಪ್ರತಿನಿಧಿಯೊಬ್ಬರನ್ನು ನಮ್ಮ ಪರಮಾಚಾರ್ಯರಾಗಿದ್ದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರ ಸನ್ನಿಧಿಗೆ ಕಳುಹಿಸಿ, ಆಚಾರ್ಯರನ್ನು ವಿಶ್ವವಿದ್ಯಾಲಯದ ಅಸ್ತಿಭಾರದ ಶಂಕುಸ್ಥಾಪನೆಗಾಗಿ ಪ್ರಾರ್ಥಿಸಿದ್ದರು. ನಮ್ಮ ಪರಮ ಗುರುಗಳವರು "ಇಷ್ಟು ಅತ್ಯಲ್ಪಕಾಲದಲ್ಲಿ ಕಾಶೀ ಕ್ಷೇತ್ರಕ್ಕೆ ಬರುವುದಕ್ಕೆ ಸಾಧ್ಯವಾಗದು. ಆದ್ದರಿಂದ ನಮ್ಮ ಗುರುಗಳವರ ಶ್ರೀ ಪಾದುಕೆಗಳನ್ನು ತೆಗೆದುಕೊಂಡು

Sri Vidyabharathi Book Centre, Shringeri

CC-O. In Public Domain. Digitized by eGangotri

ಹೋಗಿ ನಿಮ್ಮ ಕಾರ್ಯಾಂರಂಭ ಮಾಡಿರಿ, ಯಶಸ್ಸು ದೊರಕುತ್ತದೆ " ಎಂದು ನುಡಿದು ಆಶೀರ್ವಾದ ಮಾಡಿದ್ದರು. ಅದರಂತೆಯೇ ಆ ಪಾದುಕೆಗಳು ಇಲ್ಲಿ ಪೂಜೆಗೊಂಡು ಈ ಆದರ್ಶ ವಿಶ್ವವಿದ್ಯಾನಿಲಯವು ಅಭ್ಯುದಯಹೊಂದಿತು. ಒಂದು ಸಹಸ್ರ ಜನ ವಿದ್ಯಾರ್ಥಿಗಳನ್ನು ಹೊಂದಿರುವ ಆಚಾರ್ಯರಿಗೆ ಕುಲಪತಿ ಎಂಬ ಅಭಿಧಾನವುಂಟು. ಈ ವಿಶ್ವವಿದ್ಯಾಲಯವಾದರೋ ಹತ್ತು ಸಹಸ್ರಕ್ಕೂ ಹೆಚ್ಚಾದ ವಿದ್ಯಾರ್ಥಿಗಳನ್ನು ಹೊಂದಿ ತಾನೇ ಕುಲಪತಿಯಾಗಿದೆ " ಎಂದಪ್ಪಣೆಕೊಡಿಸಿದರು.

ಅನಂತರ ಕಾಶಿಯ ಮಹಾರಾಜರ ಕೋರಿಕೆಯಂತೆ ಅವರ ಅರಮನೆಗೆ ದಯಮಾಡಿಸಿ ಅವರಿಂದ ಪಾದಪೂಜಾದಿಗಳನ್ನು ಸ್ವೀಕರಿಸಿ ಅಲಹಾಬಾದ್ ನಗರಕ್ಕೆ ದಯಮಾಡಿಸಿದರು. ತ್ರಿವೇಣೀ ಸಂಗಮದಲ್ಲಿ ಸ್ನಾನಾದಿಗಳನ್ನುನೆರವೇರಿಸಿ ಪೂಜಾದಿಗಳನ್ನು ನಡೆಸಿದರು. ವಟವೃಕ್ಷದಲ್ಲಿ ಸನ್ನಿಹಿತಳಾಗಿರುವ ದೇವಿ ಸರಸ್ವತಿಯನ್ನು ಪೂಜಿಸಿ ಅರ್ಚಕರಿಗೂ ಪಂಡಿತರಿಗೂ ಸಂಭಾವನೆಯನ್ನಿತ್ತರು. ತ್ರಿವೇಣಿ ಸಂಗಮದಲ್ಲಿ ಹಲವಾರು ಸಲ ತೀರ್ಥಸ್ನಾನ ಗೈದ ಶ್ರೀ ವಿದ್ಯಾತೀರ್ಥರು ಆನಂದದಿಂದ ಮೈಮರೆಯುತ್ತಿದ್ದರು. ಅಲಹಾಬಾದ್ ವಿಶ್ವವಿದ್ಯಾಲಯದ ಉಪಕುಲಪತಿ, ಶ್ರೇಷ್ಠನ್ಯಾಯಾಸ್ಥಾನದ ಜಡ್ಜರುಗಳು, ಪ್ರಾಧ್ಯಾಪಕರಿಗೆ ಸಂದರ್ಶನವನ್ನಿತ್ತು ಸಂಭಾಷಣೆ ನಡೆಸಿದರು.

ಅಲಹಾಬಾದ್ ನಗರದಿಂದ ಹೊರಟು ಕಾನ್ಪುರ, ಕನೂಜ್, ಅಲಿಘರ್‌ಗಳ ಮೂಲಕ ಮತ್ತೆ ದೆಹಲಿಗೆ ದಯಮಾಡಿಸಿದರು. ದೆಹಲಿಯಲ್ಲಿ ಭಕ್ತರುಗಳು ಜಗದ್ಗುರುಗಳವರನ್ನು ಅತ್ಯಂತ ಸಂಭ್ರಮ ಸಂತೋಷಗಳಿಂದ ಸ್ವಾಗತಿಸಿದರು. ಪಂಡಿತ ಹೃದಯನಾಥ ಕುಂಜ್ರು, ಹಂಸರಾಜಗುಪ್ತ, ಕೆ. ಎಲ್. ರಾವ್, ಡಾ|| ಪಿ. ಎಸ್. ಲೋಕನಾಥನ್, ಹಳೆ ಮತ್ತು ಹೊಸದೆಹಲಿಗಳ ಮೇಯರುಗಳು ಮುಂತಾದವರು ಜಗದ್ಗುರುಗಳವರನ್ನು ಸ್ವಾಗತಿಸಿದರು. ದೆಹಲಿಯಲ್ಲಿ ಗುರುಗಳವರು ಶ್ರೀ ಶಂಕರ ಜಯಂತೀ ಉತ್ಸವವನ್ನು ಅತ್ಯಂತ ಸಂಭ್ರಮದಿಂದ ನೆರವೇರಿಸಿದರು. ವಿದ್ವತ್‌ಸಭೆಗೆ ಉತ್ತರಪ್ರದೇಶ ಬಂಗಾಳ, ಕರ್ಣಾಟಕ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳಿಂದ ಅನೇಕ ಜನ ಪಂಡಿತರುಗಳು ಆಗಮಿಸಿದ್ದು, ವ್ಯಾಕ್ಯಾರ್ಥದಲ್ಲಿ ಭಾಗವಹಿಸಿದ್ದರು. ಆಗ ತಾನೇ ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗಿದ್ದ ಡಾ|| ಜಕೀರ್ ಹುಸೇನ್‌ರವರು ಗುರುಗಳವರ ದರ್ಶನ ಆಶೀರ್ವಾದಗಳನ್ನು ಪಡೆದರು. ಸದಾ ರಾಜಕೀಯದ ಸುಳಿಗಾಳಿಯಲ್ಲಿ ಸಿಲುಕಿದ್ದ ದೆಹಲಿ ನಗರದಲ್ಲಿ ಶ್ರೀ ಜಗದ್ಗುರುಗಳ ವಾಸ್ತವ್ಯವು ಧಾರ್ಮಿಕ ಚಟುವಟಿಕೆಗಳನ್ನು ಮಾಡಿಸಿದ್ದು ವಿವಿಧ ರಾಜಕೀಯ ಗುಂಪುಗಳ ನಾಯಕರೂ ಶ್ರೀ ಗುರುಗಳ ದರ್ಶನಕ್ಕಾಗಿ ಬರುತ್ತಿದ್ದರು.

ದೆಹಲಿಯಿಂದ ಹರಿದ್ವಾರಕ್ಕೆ ದಯಮಾಡಿಸಿದ ಗುರುಗಳು ಶ್ರೀ ಶಂಕರ ಮಠದಲ್ಲಿ ಬಿಡಾರಮಾಡಿದರು. ಅಲ್ಲಿಯ ಭಕ್ತರಿಂದ ವಂದನೆ ಗೌರವಗಳನ್ನು ಸ್ವೀಕರಿಸಿ ತೀರ್ಥಸ್ನಾನ ಮಾಡಿದ ನಂತರ ... ಹೃಷೀಕೇಶಕ್ಕೆ ಬಿಜಯ್ಗೈದರು. ಅಲ್ಲಿ ಆಂಧ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರಮದಲ್ಲಿ ಬಿಡಾರ ಮಾಡಿ, ಶ್ರೀ ಶಿವಾನಂದಾಶ್ರಮ, ಗೀತಾಭವನ, ಪರಮಾರ್ಥನಿಕೇತನ ಸ್ವರ್ಗಾಶ್ರಮಗಳನ್ನು ಸಂದರ್ಶಿಸಿದರು. ಹೃಷೀಕೇಶದಲ್ಲಿಯೇ ಶ್ರೀ ನೃಸಿಂಹ ಜಯಂತಿಯನ್ನು ವಿಶೇಷ ರೀತಿಯಲ್ಲಿ ವೈಭವದಿಂದ ಆಚರಿಸಿದರು.

೨೭. ಹೃಷೀಕೇಶದಿಂದ ಹಿಮಾದ್ರಿಯೆತ್ತ

ಶ್ರೀ ಶ್ರೀಗಳವರ ಹಿಮಾಲಯಯಾತ್ರೆಯು ಹೃಷೀಕೇಶದಿಂದ ಪ್ರಾರಂಭವಾಯಿತು. ರುದ್ರಪ್ರಯಾಗದಲ್ಲಿ ಪ್ರಯಾಗದಷ್ಟೇ ಪವಿತ್ರವಾದ ಅಲಕಾನಂದಾ ಮಂದಾಕಿನೀ ಮತ್ತು ಗುಪ್ತಸರಸ್ವತಿಯವರ ಸಂಗಮದಲ್ಲಿ ಜಗದ್ಗುರುಗಳವರು ತೀರ್ಥಸ್ನಾನಮಾಡಿದರು. ರಾತ್ರಿ ಚಂದ್ರಮೌಳೀಶ್ವರ ಪೂಜೆಯನ್ನು ರುದ್ರಪ್ರಯಾಗದಲ್ಲಿಯೇ ನಡೆಸಿ ಮಾರನೆಯ ದಿನ ಗುಪ್ತಕಾಶಿಗೆ ಆಗಮಿಸಿದರು. ಗುಪ್ತಕಾಶಿಯಲ್ಲಿ ತೀರ್ಥಸ್ನಾನ ಮಾಡಿ ರಾತ್ರಿಯ ಪೂಜಾ ದಿನಗಳನ್ನು ನೆರವೇರಿಸಿದ ಗುರುಗಳವರು ಅಲ್ಲಿಯ ವಿಶ್ವನಾಥ ಮಂದಿರಕ್ಕೆ ಭೇಟಿಯಿತ್ತರು. ಈ ಆಲಯದ ಅರ್ಚಕರು ಕರ್ಣಾಟಕದಿಂದ ಬಂದ ವೀರಶೈವರಾಗಿದ್ದು ಅವರು ಜಗದ್ಗುರುಗಳನ್ನು ಅತ್ಯಂತ ಭಕ್ತಿಶ್ರದ್ಧೆಯಿಂದ ಸ್ವಾಗತಿಸಿದರು. ಗುರುಗಳವರು ಶ್ರೀ ವಿಶ್ವನಾಥನನ್ನೂ ಸಮೀಪದಲ್ಲಿಯೇ ಇರುವ ಇತರ ಆಲಯಗಳನ್ನು ಸಂದರ್ಶಿಸಿ ಕೇದಾರನಾಥಕ್ಕೆ ಪ್ರಯಾಣ ಕೈಗೊಂಡರು.

ಗುಪ್ತಕಾಶಿಯಿಂದ ಕೇದಾರನಾಥಕ್ಕೆ ಹಿಮಾಲಯ ಪರ್ವತಪಂಕ್ತಿಯನ್ನು ಹತ್ತಿ ಹೋಗಬೇಕು. ಶ್ರೀ ಜಗದ್ಗುರುಗಳವರೂ ಹಲವರು ಅನುಚರರೂ ಕೇದಾರನಾಥಕ್ಕೆ ಪಾದಯಾತ್ರೆ ಆರಂಭಿಸಿದರು. ಉಳಿದ ಬಹುಮಂದಿ ಡೋಲಿಗಳಲ್ಲಿ ಹೊರಟರು. ಗುಪ್ತಕಾಶಿಯಿಂದ ಹದಿನಾಲ್ಕು ಮೈಲಿ ದೂರದಲ್ಲಿದ್ದ ರಾಮಪುರಕ್ಕೆ ಗುರುಗಳು ದಯಮಾಡಿಸಿದಾಗ ಸಂಜೆ ನಾಲ್ಕು ಗಂಟೆಯಾಗಿತ್ತು. ಅಲ್ಲಿ ಸ್ನಾನ ಪೂಜಾಹ್ನಿಕಗಳನ್ನು ಭಿಕ್ಷೆಯನ್ನೂ ಸ್ವೀಕರಿಸಿ ಗುರುಗಳವರು, ಪರ್ವತಾರೋಹಣವನ್ನು ಪುನಃ ಆರಂಭಿಸಿದರು. ಗುಪ್ತಕಾಶಿಯಿಂದ ಇಪ್ಪತ್ತು ಮೈಲಿ ದೂರದಲ್ಲಿದ್ದಾಗ ಗೌರಿಕುಂಡಕ್ಕೆ ಬಂದಾಗ ರಾತ್ರಿ ಒಂಬತ್ತು ಗಂಟೆಯಾಗಿತ್ತು. ಆ ವೇಳೆಗೆ ವಿಪರೀತ ಮಳೆ, ಛಳಿ, ಗಾಳಿಗಳ ಅವಾಂತರ ಹೆಚ್ಚಾಗಿ ಸಂಚಾರ ಅಸಾಧ್ಯವಾಯಿತು. ಶ್ರೀ ಗುರುಗಳು ಅಲ್ಲಿಗೆ ಆಗಮಿಸಿದೊಡನೆಯೇ ಅಂತಹ ಪ್ರತಿಕೂಲ ವಾತಾವರಣದಲ್ಲಿಯೂ ಸ್ಥಳೀಯ ಭಕ್ತರುಗಳು ಅಧಿಕ ಸಂಖ್ಯೆಯಲ್ಲಿ ಬಂದು ಅವರ ದರ್ಶನ ಪಡೆದುಕೊಂಡರು. ಗುರುಗಳವರು ತಪ್ತಕುಂಡದಲ್ಲಿ ಸ್ನಾನಮಾಡಿ ಮಧ್ಯರಾತ್ರಿಯವರೆಗೂ ಶ್ರೀ ಚಂದ್ರಮೌಳೀಶ್ವರನ ಪೂಜೆಯಲ್ಲಿ ಮಗ್ನರಾಗಿದ್ದರು.

ಮಾರನೆಯದಿನ ಮಧ್ಯಾಹ್ನ ಮರುಪ್ರಯಾಣವಾರಂಭಿಸಿದರು. ಗೌರಿಕುಂಡದಿಂದ ಕೇದಾರನಾಥಕ್ಕಿದ್ದ ದೂರ ಕೇವಲ ಒಂಭತ್ತೇ ಮೈಲಿಗಳಾದರೂ, ಪರ್ವತವು ತೀರ ಕಡಿದಾಗಿದ್ದುದರಿಂದ ನಿಧಾನವಾಗಿಯೇ ಆರೋಹಣಮಾಡಬೇಕಾಗಿತ್ತು. ಶ್ರೀ ಶ್ರೀಗಳವರು ಕೇದಾರನಾಥಕ್ಕೆ ಬಂದಾಗ ಬಹುಜನ ಅನುಚರರು ಹಿಂದೆಯೇ ಉಳಿದುಬಿಟ್ಟಿದ್ದರು.

Sri Vidyabharathi Book Centre, Sringeri

ಶ್ರೀ ಶ್ರೀಗಳವರಿಗೂ ದಾರಿತಪ್ಪಿಹೋಗಿತ್ತು. ಅಗೋಚರ ಶಕ್ತಿಯೊಂದು ಅವರಿಗೆ ದಾರಿ ತೋರಿ ಶ್ರೀಶ್ರೀಗಳವರನ್ನು ಕೇದಾರನಾಥಕ್ಕೆ ಕರೆತಂದು ಬಿಟ್ಟಿತ್ತು. ಶ್ರೀಶಂಕರಭಗವತ್ಪಾದರು ತಮ್ಮ ಉಜ್ವಲಜೀವನದ ಕಟ್ಟಕಡೆಯಲ್ಲಿ ಕಣ್ಮರೆಯಾದ ಪವಿತ್ರ ಸ್ಥಳಕ್ಕೆ ಬಂದಾಗ ಜಗದ್ಗುರುಗಳವರು ಅನಿರ್ವಚನೀಯ ಆನಂದದಿಂದ ಮೈಮರೆತರು. ಬಹುಜನಗಳಿಂದ ಗೌರವಪೂರ್ವಕವಾಗಿ ಸ್ವಾಗತಿಸಲ್ಪಟ್ಟ ಗುರುಗಳು ಶ್ರೀ ಕೇದಾರೇಶ್ವರನನ್ನು ರಜತ ನಾಣ್ಯಗಳಿಂದ ವಿಶೇಷವಾಗಿ ಪೂಜಿಸಿ ಲೋಕಕಲ್ಯಾಣಕ್ಕಾಗಿ ಪ್ರಾರ್ಥಿಸಿದರು. ಕೇದಾರನಾಥದಲ್ಲಿ ಪೂಜೆಮಾಡುವ ಅರ್ಚಕರು ವೀರಶೈವರಾಗಿದ್ದು ಕರ್ನಾಟಕದಿಂದ ಬಂದವರಾಗಿರುತ್ತಾರೆ.

ಶ್ರೀ ಜಗದ್ಗುರುಗಳವರು ಕೇದಾರನಾಥದಿಂದ ಮರುಪ್ರಯಾಣ ಆರಂಭಿಸಿ ಗೌರಿಕುಂಡ, ರಾಮಪುರ, ಪಟಣ್‌ಚೆಟ್ಟಿಗಳ ಮುಖಾಂತರ ಗುಪ್ತಕಾಶಿಗೆ ಆಗಮಿಸಿದರು.

ಗುಪ್ತಕಾಶಿಯಲ್ಲಿ ಗಂಗಾ ಯಮುನಾ ಧಾರೆಗಳಲ್ಲಿ ತೀರ್ಥಸ್ನಾನವನ್ನು ಮುಗಿಸಿ, ಶ್ರೀ ವಿಶ್ವನಾಥನನ್ನು ಪೂಜಿಸಿದರು. ಅನಂತರ ಗುಪ್ತಕಾಶಿಯಿಂದ ಹೊರಟು ರುದ್ರಪ್ರಯಾಗದ ಮೂಲಕ ಜೋಷಿಮಠವನ್ನು ತಲಪುವಾಗ ರಾತ್ರಿಯಾಗಿತ್ತು. ಶ್ರೀ ಶಂಕರಾಚಾರ್ಯ ಸ್ಥಾಪಿತ ಚತುರಾಮ್ನಾಯ ಪೀಠಗಳಲ್ಲಿ ಉತ್ತರಾಮ್ನಾಯ ಪೀಠ ಇರುವುದು ಈ ಜೋಷಿಮಠದಲ್ಲಿಯೇ. ಜಗದ್ಗುರುಗಳವರು ಅಲ್ಲಿಗೆ ಬರುತ್ತಿದ್ದಂತೆಯೇ ಉತ್ತರಾಮ್ನಾಯ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶಾಂತಾನಂದ ಸ್ವಾಮಿಗಳು ಶ್ರೀ ಗುರುವರ್ಯರನ್ನು ಎದುರ್ಗೊಂಡರು, ಜೋಷಿಮಠದಲ್ಲಿ ಶ್ರೀ ಶಂಕರಾಚಾರ್ಯರವರು ತಪಸ್ಸುಮಾಡಿದ್ದ ಗುಹೆಯು ಮಠಕ್ಕೆ ಹೊಂದಿಕೊಂಡಂತೆಯೇ ಇದ್ದು ಅಲ್ಲೊಂದು ಪವಿತ್ರವಾದ ಜ್ಯೋತಿರ್ಲಿಂಗವಿದೆ. ಅಲಕಾನಂದಾ ನದಿಯ ತೀರ್ಥದಲ್ಲಿ ಶ್ರೀಮದಾದಿ ಶಂಕರರು ಪೂಜಿಸಿದ ಶ್ರೀ ನರಸಿಂಹ ದೇವಾಲಯವಿದೆ.

ಶ್ರೀ ಜಗದ್ಗುರುಗಳವರು ಜೋಷಿಮಠದಲ್ಲಿಯೇ ಬಿಡಾರಮಾಡಿ ರಾತ್ರಿಯ ಚಂದ್ರಮೌಳೀಶ್ವರ ಪೂಜೆಯನ್ನು ಆನಂದಾತಿಶಯತಿಂದ ನೆರವೇರಿಸಿದರು. ಮಾರನೆಯ ದಿನ ಪವಿತ್ರ ತೀರ್ಥಸ್ನಾನಮಾಡಿ ಎಲ್ಲ ದೇವಾಲಯಗಳಲ್ಲಿಯೂ ಪೂಜಾದಿಗಳನ್ನು ನೆರವೇರಿಸಿದರು. ಜೋಷಿಮಠಕ್ಕೆ ಆಗಮಿಸಿದ್ದ ಶ್ರೀ ಗುಲ್ಜಾರಿಲಾಲ್ ನಂದಾರವರು ಜಗದ್ಗುರುಗಳ ದರ್ಶನ ಆಶೀರ್ವಾದ ಪಡೆದರು. ಜಗದ್ಗುರು ಶ್ರೀ ಶಾಂತಾನಂದಸ್ವಾಮಿಗಳವರೊಡನೆ ಧಾರ್ಮಿಕ ವಿಚಾರವಾಗಿ ಮಾತುಕತೆ ನಡೆಸಿ ಅನಂತರ ಜೋಷಿಮಠದಿಂದ ಬದರೀನಾಥ ಕ್ಷೇತ್ರಕ್ಕೆ ದಯಮಾಡಿಸಿದರು.

ಶ್ರೀ ಜಗದ್ಗುರುಗಳವರನ್ನು ಬದರೀ ದೇವಾಲಯದ ಮುಖ್ಯ ಆಡಳಿತಾಧಿಕಾರಿಯಾದ ಅಗ್ನಿಹೋತ್ರಿ ದೇವೀಪ್ರಸಾದ್ ತ್ರಿಪಾಠಿಯವರು ದೇವಾಲಯದ ಸಮಸ್ತ ಮರ್ಯಾದೆಗಳೊಡನೆ ಭಕ್ತಿಯಿಂದ ಸ್ವಾಗತಿಸಿದರು. ದೇವಾಲಯಕ್ಕೆ ಬರುತ್ತಿದ್ದಂತೆಯೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಜಗದ್ಗುರುಗಳವರು ಭಾವಾವಿಷ್ಟರಾಗಿ ಶ್ರೀ ಬದರೀನಾರಾಯಣ ದರ್ಶನಕ್ಕಾಗಿ ಗರ್ಭ ಗುಡಿಯೊಳಕ್ಕೆ ಪ್ರವೇಶಿಸಿ ಸ್ವಲ್ಪಕಾಲ ಧ್ಯಾನಮಗ್ನರಾಗಿದ್ದರು.

ಶ್ರೀ ಬದರೀನಾಥ ದೇವಾಲಯವು ಅಲಕನಂದಾ ನದಿಯ ಬಲದಂಡೆಯಲ್ಲಿ ನಿರ್ಮಿತ ವಾದ ಪುರಾತನ ದೇವಾಲಯ. ಭರತಖಂಡದ ತೀರ್ಥಕ್ಷೇತ್ರಗಳಲ್ಲಿ ಬದರೀನಾಥವು ಶಿಖರಪ್ರಾಯವಾದುದು. ಶ್ರೀ ಶಂಕರ ಭಗವತ್ಪಾದರು ತಮ್ಮ ಅಮೂಲ್ಯವಾದ ಪ್ರಸ್ಥಾನ ತ್ರಯ ಭಾಷ್ಯಗಳನ್ನು ಪೂರ್ಣಮಾಡಿದುದು ಈ ಪವಿತ್ರ ಸ್ಥಳದಲ್ಲಿಯೇ. ಶ್ರೀಮದಾ ಚಾರ್ಯರಿಗೆ ಶ್ರೀ ಭಗವಾನ್ ವೇದವ್ಯಾಸರು ದರ್ಶನವಿತ್ತುದೂ ಇಲ್ಲಿಯೇ.

ಶ್ರೀ ಶಂಕರ ಭಗವತ್ಪಾದರು ತಮ್ಮ ನಾಲ್ಕನೆಯ ಆಮ್ನಾಯ ಪೀಠವನ್ನು ಸ್ಥಾಪಿಸಿ ದುದೂ ಬದರಿಯಲ್ಲಿಯೇ. ಶ್ರೀ ಬದರೀ ನಾರಾಯಣನ ದೇವಾಲಯದ ಆಡಳಿತವೆಲ್ಲವೂ ಈ ಪೀಠದ ಶಂಕರಾಚಾರ್ಯರಿಗೇ ಸೇರಿತ್ತು. ದೇವಸ್ಥಾನದಲ್ಲಿ ಪರಿಚರ್ಯೆಗೂ ಮತ್ತು ಶ್ರೀ ಶ್ರೀಗಳವರ ಸೇವಾದಿಕಾರ್ಯಗಳಿಗೂ ಶ್ರೀ ಶಂಕರಭಗವತ್ಪಾದರನ್ನು ಅನುಸರಿಸಿಕೊಂಡು ದೇಶಾದ್ಯಂತವೂ ಅವರೊಡನೆ ಸಂಚರಿಸುತ್ತ, ಅವರ ಸೇವೆಯನ್ನು ಮಾಡುತ್ತಿದ್ದ ನಂಬೂದರೀ ಬ್ರಾಹ್ಮಣರು ನೇಮಕವಾಗಿದ್ದರು. ಹೀಗೆ ಬದರೀನಾಥ ದೇವಾಲಯಕ್ಕೂ ನಂಬೂದರೀ ಬ್ರಾಹ್ಮಣರಿಗೂ ಸಾವಿರಾರು ವರ್ಷಗಳಿಂದ ಬಾಂಧವ್ಯ ಏರ್ಪಟ್ಟಿದೆ.

ಬದರೀನಾಥದಲ್ಲಿ ಚಳಿಗಾಲದಲ್ಲಿ ವಿಪರೀತ ಹಿಮದ ಮಳೆಗರೆಯುವುದರಿಂದ (ಅಕ್ಟೋ ಬರ್‌ನಿಂದ ಏಪ್ರಿಲ್‌ವರೆಗೆ) ದೇವಾಲಯದ ಬಾಗಿಲನ್ನು ಮುಚ್ಚಿ ಬಿಡುತ್ತಾರೆ. ದೇವಾ ಲಯದ ಚರಮೂರ್ತಿಗಳನ್ನು ಜೋಷೀ ಮಠಕ್ಕೆ ತರುತ್ತಾರೆ. ಶ್ರೀ ಶಂಕರಭಗವತ್ಪಾದರವರ ನಂತರ ಶ್ರೀ ತ್ರೋಟಕಾಚಾರ್ಯರು ಈ ಬದರೀನಾಥನನ್ನು ಪೂಜಿಸುತ್ತಿದ್ದು, ಅವರ ಪರಂಪರೆಯವರೇ ಅನೇಕ ಶತಮಾನಗಳ ಕಾಲ ಅಲ್ಲಿಯ ಆಡಳಿತ ನಡೆಸುತ್ತಿದ್ದರು. ಬದರೀನಾಥ ಪರಂಪರೆಯ ಶ್ರೀ ರಾಮ ಕೃಷ್ಣ ಸ್ವಾಮಿಗಳ ನಂತರ ದೇವರಪೂಜೆಯು ಯತಿಗಳ ಕೈತಪ್ಪಿ ರಾವಲ್ ಎಂಬುವರ ವಶಕ್ಕೆ ಹೋಯಿತು.

ಶ್ರೀ ರಾಮಕೃಷ್ಣ ಸ್ವಾಮಿಗಳ ನಂತರ ದೇವಪೂಜೆಯು ನಿಂತು ಹೋಗಿದ್ದುದರಿಂದ ಗದ್ವಾಲಿನ ಮಹಾರಾಜ ಶ್ರೀ ಪ್ರತಾಪಷಾರವರು ದೇವಾಲಯದಲ್ಲಿ ದೇವರಿಗೆ ನಿತ್ಯವೂ ನಿವೇದನವನ್ನು ಸಿದ್ಧಪಡಿಸುತ್ತಿದ್ದ 'ಗೋಪಾಲ' ಎಂಬ ನಂಬೂದರೀ ಬ್ರಾಹ್ಮಣನಿಗೆ ಪೂಜಾದಿಗಳನ್ನು ಒಪ್ಪಿಸಿದ್ದರು. ಅದು ಇಂದಿಗೂ ಹಾಗೆಯೇ ನಡೆದುಕೊಂಡು ಬರು ತ್ತಿದೆ. ಈ ನಂಬೂದರೀ ಅರ್ಚಕರಿಗೆ 'ರಾವಲ್' ಎಂಬ ಹೆಸರುಂಟು. ಶ್ರೀ ಗೋಪಾಲ ರಾವಲ್‌ನಿಂದ ಆರಂಭಿಸಿ ಇಲ್ಲಿಯವರೆಗೆ ಹನ್ನೆರಡು ಜನ ರಾವಲರು ಆಡಳಿತ ನಡೆಸಿದ್ದಾರೆ. ಶ್ರೀ ಶೃಂಗೇರಿ ಜಗದ್ಗುರುಗಳವರು ಬದರೀನಾಥಕ್ಕೆ ಬಂದ ಸಂದರ್ಭದಲ್ಲಿ ಶ್ರೀ ವಾಸುದೇವ ರಾವಲರು ಮುಖ್ಯ ಅರ್ಚಕರಾಗಿದ್ದು ಶ್ರೀ ಗುರುಗಳವರಿಗೆ ಅತ್ಯಂತ ಭಕ್ತಿಶ್ರದ್ಧೆಯ ಸ್ವಾಗತವನ್ನು ಇತ್ತರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಮಾಲಯದ ಕಟಪ್ರದೇಶದಲ್ಲಿ ಇರುವ ಶ್ರೀ ಬದರೀನಾಥ ದೇವಾಲಯವು ಪುರಾತನ ದೇವಾಲಯ. ಬದರೀ ನಾರಾಯಣ ವಿಗ್ರಹವು ಸಾಲಿಗ್ರಾಮದ ಶಿಲೆಯಾಗಿದ್ದು ಶ್ರೀ ಭಗವಂತನು ಯೋಗಾಸನದಲ್ಲಿ ಕುಳಿತ ಭಂಗಿಯಲ್ಲಿದೆ. ಆರನೇ ಶತಮಾನದಲ್ಲಿ ದೇವಾಲಯವನ್ನು ನಾಶಪಡಿಸಲೆತ್ನಿಸಿದ ಹಲವು ಜನ ದರೋಡೆಗಾರರು ವಿಗ್ರಹವನ್ನು ಅಲಕನಂದಾ ನದಿಯಲ್ಲಿ ಎಸೆದಿದ್ದರು. ಶ್ರೀ ಆದಿಶಂಕರರು ಬದರಿಗೆ ಬಂದಾಗ ಶಿಥಿಲವಾದ ದೇವಾಲಯದಲ್ಲಿ ಮೂರ್ತಿ ಇಲ್ಲದುದು ಗೋಚರವಾಯಿತು. ವಿಗ್ರಹವು ನಾರದಕುಂಡದಲ್ಲಿ ಜಲಾಧಿವಾಸ ಮಾಡುತ್ತಿರುವುದು ಭಗವತ್ಪಾದರ ಅಂತರ್ದೃಷ್ಟಿಗೆ ಗೋಚರವಾಯಿತು. ಅವರು ಅದನ್ನು ತೆಗೆಸಿ ಗರುಡ ಶಿಲೆಯ ಬಳಿ ಪುನಃ ಪ್ರತಿಷ್ಠೆ ಮಾಡಿದರು.

ಶ್ರೀ ಜಗದ್ಗುರುಗಳವರು ಬದರೀನಾಥ ದೇವಾಲಯಕ್ಕೂ ದಯಮಾಡಿಸಿ ಪೂಜಾದಿಗಳನ್ನು ಸ್ವತಃ ನೆರವೇರಿಸಿ ಲೋಕಕಲ್ಯಾಣಕ್ಕಾಗಿ ಭಗವಂತನನ್ನು ಪ್ರಾರ್ಥಿಸಿದರು. ದೇವಾಲಯದ ಬಲಗಡೆಯಲ್ಲಿಯೇ ಇರುವ ಶ್ರೀ ಮಹಾಲಕ್ಷ್ಮಿ ಆಲಯಕ್ಕೂ ಸಂದರ್ಶನವಿತ್ತು ಪೂಜಾದಿಗಳನ್ನು ನೆರವೇರಿಸಿದರು. ಶ್ರೀ ಜಗದ್ಗುರುಗಳವರು ತಪ್ತ ಕುಂಡದಲ್ಲಿ ತೀರ್ಥಸ್ನಾನ ಮಾಡುವ ಮೊದಲು ನಾರದಶಿಲೆ, ಗರುಡಶಿಲೆ, ಮಾರ್ಕಂಡೇಯಶಿಲೆ, ವರಾಹಶಿಲೆ ಮುಂತಾದವುಗಳನ್ನು ದರ್ಶನಮಾಡಿ ತಪ್ತ ಕುಂಡದಲ್ಲಿ ಸ್ನಾನಮಾಡಿ ನಾರದಕುಂಡ, ಋಷಿಗಂಗಾ. ಪ್ರಹ್ಲಾದಧಾರಾ ಮತ್ತು ಪೂರ್ವಧಾರೆಗಳಲ್ಲಿಯೂ ತೀರ್ಥಸ್ನಾನ ಮಾಡಿದರು. ಬದರೀ ನಾರಾಯಣದ ಎಲ್ಲ ಪವಿತ್ರ ಸ್ಥಳಗಳನ್ನು ಸಂದರ್ಶಿಸಿದ ತರುವಾಯ ಶ್ರೀ ಜಗದ್ಗುರುಗಳವರು ಬ್ರಹ್ಮಕಪಾಲಕ್ಕೆ ದಯಮಾಡಿಸಿದರು.

ಬ್ರಹ್ಮಕಪಾಲವು ದೊಡ್ಡ ಕಲ್ಲುಬಂಡೆಯಾಗಿದ್ದು ತೆರೆದ ಅಂಗೈಯಂತೆ ಕಾಣಿಸುತ್ತದೆ. ಇದರ ಬುಡವನ್ನು ಅಲಕಾನಂದಾ ನದಿಯು ಯಾವಾಗಲೂ ತೊಳೆಯುತ್ತಿರುತ್ತದೆ. ಈ ಬ್ರಹ್ಮಕಪಾಲವು ಮಹೇಶ್ವರನ ಅಂಗೈಯೆಂದೇ ನಂಬಿಕೆ. ಇದು ಬ್ರಹ್ಮನ ಐದನೆಯ ಶಿರಸ್ಸನ್ನು ಛೇದಿಸಿದ ಹಸ್ತ. ಈ ಸ್ಥಳದಲ್ಲಿ ಭಗವಾನ್ ನಾರಾಯಣನು ಪ್ರತ್ಯಕ್ಷನಾಗಿ "ಬ್ರಹ್ಮಕಪಾಲದಲ್ಲಿ ಸಲ್ಲಿಸುವ ಪಿಂಡ ಮತ್ತು ತರ್ಪಣಗಳು ಪಿತೃಗಳನ್ನು ವೈಕುಂಠಕ್ಕೆ ಒಯ್ಯುತ್ತವೆ' ಎಂಬುದಾಗಿ ವರವನ್ನು ಅನುಗ್ರಹಿಸಿದನು. ಶ್ರೀ ಶ್ರೀಗಳವರು ಬ್ರಹ್ಮಕಪಾಲದಿಂದ ಮಾತಾಮೂರ್ತಿ ಎಂಬಲ್ಲಿಗೆ ಬಂದು ನರನಾರಾಯಣರ ತಾಯಿಯಾದ ಮಾತಾಮೂರ್ತಿಯನ್ನು ಪೂಜಿಸಿ ಬದರೀನಾಥನ ಪಶ್ಚಿಮಕ್ಕೆ ನೀಲಕಂಠ ಪರ್ವತದ ಬುಡದಲ್ಲಿರುವ ಚರಣ ಪಾದುಕೆಯನ್ನು ಸಂದರ್ಶಿಸಿದರು. ಶ್ರೀ ಶ್ರೀಗಳವರಿಗೆ ಬದರಿಕಾಶ್ರಮದಲ್ಲಿಯೇ ಸ್ವಲ್ಪದಿನಗಳಕಾಲ ವಿವಿಕ್ತವಾಗಿ ಏಕಾಂತ ವಾಸದಲ್ಲಿ ಇರಬೇಕೆಂಬ ಅಪೇಕ್ಷೆಯಿತ್ತು. ಆದರೆ ಅವರ ಪೀಠದ ಕರ್ತವ್ಯನಿರ್ವಹಣೆಯ ಹೊರೆಯು ಅವರ ತಪೋನುಷ್ಠಾನಗಳಿಗೆ ಅವಕಾಶ ಕೊಡುತ್ತಿರಲಿಲ್ಲ. ಅವರು ಬದರಿನಾಥದಲ್ಲಿ ಆತ್ಮಾರಾಮರಾಗಿ ಸ್ವಲ್ಪ ಕಾಲವಾದರೂ ಇರಬಹುದೆಂದು ಅಪೇಕ್ಷಿಸಿದ್ದರು. ಆದರೆ ಅದು ಹಾಗಾಗಲಿಲ್ಲ. ತಮ್ಮ ಶಿಷ್ಯರಿಗಾಗಿ ಭಕ್ತರಿಗಾಗಿ ಸದಾ ತೆರೆದ ಹೃದಯರಾದ ಶ್ರೀ ಜಗದ್ಗುರುಗಳವರು ತಮಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಗತ್ಯವಾದ ಅಲ್ಪ ಸ್ವಲ್ಪ ಶಾರೀರಿಕ ವಿರಾಮವನ್ನು ವಿಶ್ರಾಂತಿಯನ್ನು ಶಿಷ್ಯರಿಗಾಗಿ ಧಾರೆಯೆರೆದುಬಿಡುತ್ತಿದ್ದರು.

೨೮. ಬದರಿಕಾಶ್ರಮದಿಂದ ಮತ್ತೆ ರಾಜಧಾನಿಗೆ

ಶ್ರೀ ಬದರಿಕಾಶ್ರಮದಿಂದ ಮರುಪ್ರಯಾಣವಾರಂಭಿಸಿದ ಜಗದ್ಗುರುಗಳವರು ದೇವಪ್ರಯಾಗದ ಮೂಲಕ ಹೃಷೀಕೇಶಕ್ಕೆ ಬಂದರು. ಅಲ್ಲಿ ಆಂಧ್ರಾಶ್ರಮದಲ್ಲಿ ಬಿಡಾರ ಮಾಡಿ ಶ್ರೀ ಶಿವಾನಂದಾಶ್ರಮಕ್ಕೆ ಭೇಟಿಕೊಟ್ಟರು. ಅನಂತರ ಹರಿದ್ವಾರಕ್ಕೆ ದಯ ಮಾಡಿಸಿದರು. ಹರಿದ್ವಾರದಲ್ಲಿ ನೂತನವಾಗಿ ಕಟ್ಟಲ್ಪಡುತ್ತಿದ್ದ ಮೂರಂತಸ್ತಿನ ಶೃಂಗೇರಿ ಶಂಕರಮಠದ ಕೆಲಸಕಾರ್ಯಗಳನ್ನು ವೀಕ್ಷಿಸಿ ಹಲವಾರು ಸಲಹೆಗಳನ್ನಿತ್ತು, ಡೆಹರಾ ಡೂನಿಗೆ ದಯಮಾಡಿಸಿದರು.

ಡೆಹರಾಡೂನ್ ನಗರದಲ್ಲಿ ಶ್ರೀ ಓಂಪ್ರಕಾಶ್ ಗೋಯಲ್‌ರವರ ನೇತೃತ್ವದಲ್ಲಿ ನಾಗರಿಕರು ಭಕ್ತಿ ಗೌರವದ ಸ್ವಾಗತವನ್ನು ನೀಡಿ ಗುರುಗಳವರನ್ನು ಉತ್ಸವದಲ್ಲಿ ಬಿಜ ಮಾಡಿಸಿದರು. ಅಲ್ಲಿ ತಮಗೆ ಒಪ್ಪಿಸಲ್ಪಟ್ಟ ಬಿನ್ನವತ್ತಳೆಗೆ ಪ್ರತ್ಯುತ್ತರ ಕೊಡುತ್ತಾ ಹಿಂದೂ ಸಮಾಜದ ಇಂದಿನ ಅವನತಿಯ ಕಾರಣಗಳನ್ನು ವಿಶ್ಲೇಷಿಸಿ "ಸಮಾಜವು ಉದ್ಧಾರವಾಗಬೇಕಾದರೆ ಸನಾತನ ಧರ್ಮದ ಶ್ರೇಷ್ಠ ನಿಯಮಗಳನ್ನು ಪಾಲಿಸುವುದರಿಂದ ಮಾತ್ರ ಸಾಧ್ಯ. ಮಾನವನು ಅಭಿವೃದ್ಧಿ ಹೊಂದಬೇಕಾದರೆ ಅವನಿಗೆ ಭಗವಂತನಲ್ಲಿ ನಿಶ್ಚಲವಾದ ಭಕ್ತಿಯಿರಬೇಕು. ಇಂದು ಪ್ರಪಂಚವು ಅತ್ಯಂತ ವಿಪ್ಲವ ಸನ್ನಿವೇಶದಲ್ಲಿರ ಬೇಕಾದರೆ ಅದಕ್ಕೆ ಕಾರಣ ಮಾನವನು ಜೀವನದ ನಿಜವಾದ ಗುರಿಯನ್ನು ಮರೆತಿರುವುದು ಮತ್ತು ನಾಸ್ತಿಕತೆಯು ಸಮಾಜದ ಎಲ್ಲಾ ಭಾಗಗಳನ್ನೂ ವ್ಯಾಪಿಸಿರುವುದೇ ಆಗಿದೆ. ಇದು ಸರಿಹೋಗುವುದು ಆತ್ಮಶೋಧನೆ ಮಾಡಿಕೊಂಡು ಸನಾತನ ಧರ್ಮದ ತತ್ವಗಳನ್ನು ಪಾಲಿಸುವುದರಿಂದ ಮಾತ್ರ ಸಾಧ್ಯ" ಎಂದಪ್ಪಣೆ ಕೊಡಿಸಿದರು,

ಅನಂತರ ಸಹಸ್ರಧಾರೆಯಲ್ಲಿ ಪುಣ್ಯಸ್ನಾನ ಮಾಡಿ, ಅಂಬಾಲ ನಗರಕ್ಕೆ ದಯ ಮಾಡಿಸಿದರು. ಅಲ್ಲಿ ಶ್ರೀ ಲಕ್ಷ್ಮೀನಾರಾಯಣ ಮಂದಿರದಲ್ಲಿ ಬಿಡಾರಮಾಡಿ ಚಂದ್ರ ಮೌಳೀಶ್ವರ ಪೂಜೆ ನೆರವೇರಿಸಿದರು. ಮಾರನೆಯ ದಿನ ಅಂಧರ ಪಾಠಶಾಲೆಗೆ ಭೇಟಿ ನೀಡಿ ಅವರೆಲ್ಲರಿಗೂ ಸಾಂತ್ವನವನ್ನು ನೀಡಿ ಶಾಲೆಗಾಗಿ ಸೂಕ್ತ ಧನಸಹಾಯವನ್ನು ಆಶೀರ್ವಾದ ಪೂರ್ವಕವಾಗಿ ನೀಡಿದರು. ಅನಂತರ ಜಲಂಧರ ನಗರಕ್ಕೆ ದಯಮಾಡಿಸಿದ ಗುರುಗಳವರನ್ನು ಸನಾತನ ಧರ್ಮಸಭಾದವರು ಉತ್ಸಾಹದಿಂದ ಸ್ವಾಗತಿಸಿದರು. ಜಲಂಧರ ದಲ್ಲಿ ಹಲವಾರು ಉಪನ್ಯಾಸಗಳನ್ನಿತ್ತು ಹಿಂದೂ ಧರ್ಮದ ಅಗ್ಗಳಿಕೆಯನ್ನೂ ಧರ್ಮಾ ಚರಣೆಯ ಆವಶ್ಯಕತೆಯನ್ನೂ ಪುನಃ ಪುನಃ ಸ್ಪಷ್ಟಪಡಿಸಿದರು. ಮಾರನೆಯದಿನ ರಾತ್ರಿ ಜಮ್ಮೂನಗರಕ್ಕೆ ದಯಮಾಡಿಸಿದರು. ಸರ್ಕಾರಿ ಅಧಿಕಾರಿಗಳೂ ಮಿಲಿಟರಿ ಅಧಿಕಾರಿ ಗಳೂ, ಕಾಶ್ಮೀರೀ ಬ್ರಾಹ್ಮಣರೂ ಅಲ್ಲದೆ ವಿದೇಶದ ಪ್ರವಾಸಿಗಳೂ ಜಗದ್ಗುರುಗಳವರನ್ನು ಸಂದರ್ಶಿಸಿ ಧಾರ್ಮಿಕ ವಿಚಾರಗಳಲ್ಲಿ ಮಾತುಕತೆ ನಡೆಸಿದರು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಮಾರನೆ ದಿನ ರಾಮುಬಾಗ್ ಎಂಬಲ್ಲಿಗೆ ದಯಮಾಡಿ ಶ್ರೀ ರಾಮದೇವರ ಆಲಯ ದಲ್ಲಿ ಪೂಜಾದಿಗಳನ್ನು ನೆರವೇರಿಸಿದರು. ಅಲ್ಲಿಯ ಪ್ರೌಢಶಾಲೆಯೊಂದರಲ್ಲಿ ಸಾರ್ವಜನಿಕ ರಿಗಾಗಿ ಉಪದೇಶ ಭಾಷಣವನ್ನು ಅನುಗ್ರಹಿಸಿದರು. ತಮ್ಮ ಪರಮೇಷ್ಠಿ ಗುರುಗಳಾಗಿದ್ದ ಶ್ರೀ ಉಗ್ರನರಸಿಂಹ ಭಾರತೀಗಳ ಆರಾಧನೆಯನ್ನು ರಾಮುಬಾಣದಲ್ಲಿಯೇ ನಡೆಸಿ ಅನಂತರ ಶ್ರೀನಗರಕ್ಕೆ ಪ್ರಯಾಣ ಬೆಳೆಸಿದರು.

ಶ್ರೀ ಶ್ರೀಗಳವರು ಶ್ರೀನಗರದಲ್ಲಿ ಕಾಶ್ಮೀರ ಸರ್ಕಾರದ ವಿದ್ಯಾ ಇಲಾಖೆಯು ನಡೆ ಸುತ್ತಿರುವ ಯುವಜನ ಹಾಸ್ಟೆಲಿನಲ್ಲಿ ಬಿಡಾರ ಮಾಡಿದರು. ಶ್ರೀ ಜಗದ್ಗುರುಗಳವರಿಗೆ ಭಾರತದ ನಾನಾಭಾಗಗಳಿಂದ ತರಬೇತಿಗಾಗಿ ಬಂದಿದ್ದ ಅನೇಕ ಜನ ವಿದ್ಯಾರ್ಥಿನಿಯರು ಸಾಲಾಗಿ ನಿಂತು ಗೌರವರಕ್ಷೆಯನ್ನು (Guard of Honour) ಅರ್ಪಿಸಿದರು.

ಮಾರನೆಯ ದಿನ ಪ್ರಾತಃಕಾಲ ಶ್ರೀ ಜಗದ್ಗುರುಗಳವರು ಶ್ರೀನಗರದ ಬಳಿಯೇ ಇರುವ ಶ್ರೀ ಶಂಕರಾಚಾರ್ಯ ಬೆಟ್ಟಕ್ಕೆ ದಯಮಾಡಿಸಿದರು. ಬೆಟ್ಟದ ಮೇಲೆ ಶ್ರೀಮದಾ ಚಾರ್ಯರ ದೇವಾಲಯದಲ್ಲಿ ಆಚಾರ್ಯರ ಮೂರ್ತಿಯೂ ದೊಡ್ಡ ಬಾಣಲಿಂಗವೂ ಪ್ರತಿ ಷ್ಠಿತವಾಗಿವೆ. ಶ್ರೀ ಶ್ರೀಗಳವರು ದೇವಾಲಯದಲ್ಲಿ ಪೂಜಾದಿಗಳನ್ನು ಸಮರ್ಪಿಸಿದರು. ಅನಂತರ ಮಧ್ಯಾಹ್ನದಲ್ಲಿ ಶ್ರೀ ಸೂರ್ಯನಿಗಾಗಿಯೇ ಮೀಸಲಾಗಿರುವ ಮಾರ್ತಾಂಡ ದೇವಸ್ಥಾನಕ್ಕೆ ಸಂದರ್ಶನವನ್ನಿತ್ತರು. ದಕ್ಷಿಣಭಾರತದ ಸುಪ್ರಸಿದ್ಧವಾದ ಶ್ರೀ ರಾಮೇ ಶ್ವರ ದೇವಸ್ಥಾನಕ್ಕೆ ಪ್ರಧಾನ ಅರ್ಚಕರಾಗಿ ನೇಮಿತರಾಗಿದ್ದ ದೀಕ್ಷಿತರವರು ಶ್ರೀ ಜಗ ದ್ಗುರುಗಳವರಿಂದ ದೀಕ್ಷಾ ಉಪದೇಶ ಪಡೆಯುವುದಕ್ಕಾಗಿ ಶ್ರೀನಗರಕ್ಕೆ ಬಂದಿದ್ದರು. ಪ್ರಾಚೀನಕಾಲದಿಂದಲೂ ನಡೆದು ಬಂದ ಪದ್ಧತಿಯಂತೆ ಆ ಪ್ರಧಾನ ಅರ್ಚಕರು ಶ್ರೀ ಶ್ರೀಗಳವರಿಂದ ಉಪದೇಶಾದಿಗಳನ್ನು ಪಡೆದು ಆಶೀರ್ವಾದ ಅನುಗ್ರಹದೊಡನೆ ಹಿಂದಿರುಗಿದರು.

ಶ್ರೀನಗರದಿಂದ ೪೦ ಮೈಲಿ ದೂರದಲ್ಲಿದ್ದ ಕ್ಷೀರಭವಾನಿ ದೇವಾಲಯಕ್ಕೂ ಸಂದರ್ಶನವಿತ್ತ ಗುರುಗಳು ಶ್ರೀನಗರದಿಂದ ಹೊರಟು ಬಟೋಟಿ ಎಂಬಲ್ಲಿಗೆ ದಯಮಾಡಿಸಿ ದರು. ಅಲ್ಲಿ ಹಾರ್ದಿಕ ಸ್ವಾಗತವನ್ನಿತ್ತ ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳನ್ನೂ ಸಾರ್ವ ಜನಿಕರನ್ನೂ ಕುರಿತು ಸಂದೇಶಭಾಷಣ ನೀಡುತ್ತ “ ಹುಡುಗುಬುದ್ಧಿಯುಳ್ಳವರು ಮತ್ತು ಅಜ್ಞಾನಿಗಳಾದರು ದುರಾಸೆಗಳ ಬೆನ್ನುಹತ್ತಿ ಕಷ್ಟಕ್ಕೆ ಈಡಾಗುತ್ತಾರೆ. ಬುದ್ಧಿವಂತರೂ, ಜ್ಞಾನಿಗಳೂ ಆದವರು ಈ ಜಗತ್ತಿನ ಮತ್ತು ಇಂದ್ರಿಯಗಳಿಗೆ ಅತೀತವಾದ ದೃಷ್ಟಿಯುಳ್ಳ ವರಾಗಿರುತ್ತಾರೆ. ಈ ಪ್ರಪಂಚವು ಸ್ಥಿರವೂ ಶಾಶ್ವತವೂ ಆದಂತಹ ಅವಿನಾಶಿಯಾದ ತತ್ವದ ಒಂದು ನೆರಳಿದ್ದಂತೆ. ನಾವು ಅನ್ವೇಷಣೆ ಮಾಡಬೇಕಾದುದು ಆ ಸ್ಥಿರ ತತ್ವವನ್ನೇ ವಿನಾ ಬರೀ ನೆರಳನ್ನಲ್ಲ. ನಾವು ಜೀವನದಲ್ಲಿ ಕೆಲವು ಕ್ಷಣಗಳಾದರೂ ಸಂತೋಷವಾಗಿ ಇರಬೇಕಾದರೆ ನಾವು 'ನಾನು', 'ನನ್ನದು' ಎಂಬ ಸ್ವಾರ್ಥವನ್ನು ಬಿಡಬೇಕು. ನಮ್ಮಲ್ಲಿ ಅಹಂಕಾರ ಮಮಕಾರ ಹೋಗಬೇಕು. ಆಗ ನಾವು ನಮ್ಮ ಒಳಗೂ ಹೊರಗೂ ವ್ಯಾಪಿಸಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ರುವ ಆ ದಿವ್ಯ ತತ್ವವನ್ನು ಅರಿಯಲು ಸಮರ್ಥರಾಗುತ್ತೇವೆ. ಮನಸ್ಸಿನಲ್ಲಿ ತುಂಬಿರುವ ಆಸೆಗಳೆಲ್ಲವೂ ನಾಶವಾದಾಗ ನಮ್ಮಲ್ಲಿಯೇ ಇರುವ ಪರಮಾತ್ಮನ ಸಾನ್ನಿಧ್ಯವು ನಮ್ಮ ಅನುಭವಕ್ಕೆ ಬರುತ್ತದೆ" ಎಂದಪ್ಪಣೆ ಕೊಡಿಸಿದರು.

ಜಗದ್ಗುರುಗಳವರು ಅನಂತರ ಜಮ್ಮು ನಗರಕ್ಕೆ ದಯಮಾಡಿಸಿ ಡೋಗ್ರ ಬ್ರಾಹ್ಮಣ ಸಭಾ ಎಂಬಲ್ಲಿ ಬಿಡಾರಮಾಡಿ ಪೂಜಾದಿಗಳನ್ನು ನೆರವೇರಿಸಿದರು. ಅಲ್ಲಿ ಅವರ ದರ್ಶನ ಮಾಡಲು ಬಂದಿದ್ದ ಸಾವಿರಾರು ಜನರು ಉಪದೇಶವಾಣಿಯನ್ನು ಕೇಳಲು ಅಪೇಕ್ಷಿಸಿದಾಗ "ನಾವು ನಮ್ಮ ಮನಸ್ಸನ್ನು ಗೆದ್ದರೆ ಪ್ರಪಂಚವನ್ನೇ ಗೆದ್ದಂತೆ. ಈ ನಮ್ಮ ಶರೀರವು ಸೂಕ್ಷ್ಮವಾದ ನಮ್ಮ ಹೊರಹೊದಿಕೆ. ಆ ಮನಸ್ಸೇ ಶರೀರವಾಗಿಯೂ ಪರಿಣಮಿಸಿದೆ. ಶರೀರವು ಕಾಲ ದೇಶಗಳ ಮಿತಿಯುಳ್ಳದ್ದು ಮತ್ತು ಬೆಳೆದ ನಂತರ ಬೆಳವಣಿಗೆ ನಿಂತು ಮುಂದಕ್ಕೆ ಜೀರ್ಣವಾಗುವಂತಹುದು. ಮನಸ್ಸು ಅಮಿತವಾದ ಶಕ್ತಿಯನ್ನು ಗಳಿಸುವ ಸಾಮರ್ಥ್ಯ ಹೊಂದಿದೆ. ಅದು ಆಧ್ಯಾತ್ಮಿಕ ಸಾಧನೆಯಿಂದ ಮಾತ್ರ ಸಾಧ್ಯವಾಗುತ್ತದೆ. ಆಧ್ಯಾತ್ಮಿಕ ಸ್ತರದಲ್ಲಿ ನಮ್ಮ ಮನಸ್ಸು ಮೇಲೆ ಮೇಲೆ ಏರಿದಂತೆ ಅದರ ಸಾಮರ್ಥ್ಯವೂ ಹೆಚ್ಚುತ್ತಾ ಹೋಗುತ್ತದೆ. ಇದನ್ನು ನಾವು ಅನೇಕ ಜನ ಮಹಾಪುರುಷರಲ್ಲಿ ಕಂಡಿದ್ದೇವೆ. ಮಡಕೆ ಮಾಡಿದ ಮಣ್ಣನ್ನು ಪರೀಕ್ಷಿಸಿದರೆ ಯಾವ ಮಡಕೆ ಯಾವ ಮಣ್ಣಿನಿಂದ ತಯಾರಾದುದು ಎಂಬುದನ್ನು ಹೇಳಿಬಿಡಬಹುದು. ಹಾಗೆಯೇ ಭಗವಂತನನ್ನು ಅರಿತುಕೊಂಡರೆ ಆತನ ವಿಶಾಲ ಸೃಷ್ಟಿಯ ಒಳಹೊರಗೂ ನಮಗೆ ಕರಗತವಾಗುತ್ತದೆ. ಅದಕ್ಕೆ ಮನಸ್ಸನ್ನು ಅಧೀನಕ್ಕೆ ತಂದುಕೊಂಡು ಸತತವಾಗಿ ಸಾಧನೆಮಾಡಬೇಕು" ಎಂಬುದಾಗಿ ಅಪ್ಪಣೆ ಕೊಡಿಸಿದರು. ವಾರಣಾಸಿಯ ಶ್ರೀ ಸತ್ಯೇಂದ್ರತೀರ್ಥ ಸರಸ್ವತಿಯವರು ಗುರುಗಳ ದರ್ಶನಕ್ಕಾಗಿ ಬಂದಿದ್ದು ಶ್ರೀ ಶಂಕರ ಭಗವತ್ಪಾದರ ಸೂತ್ರಭಾಷ್ಯಕ್ಕೆ ತಾವು ಬರೆದಿದ್ದ ಹಿಂದಿ ವ್ಯಾಖ್ಯಾನವನ್ನು ತೋರಿಸಿದರು. ಶ್ರೀ ಶ್ರೀಗಳವರು ಆ ಭಾಷ್ಯವನ್ನು ಪರಿಶೀಲಿಸಿ ಸಂತೋಷಪಟ್ಟು ಆ ಸ್ವಾಮಿಗಳವರಿಗೆ ಶ್ರೀಮುಖವನ್ನು ದಯಪಾಲಿಸಿದರು.

ಶ್ರೀ ಗುರುಗಳು ಜಮ್ಮುವಿನಿಂದ ಪ್ರಯಾಣವಾರಂಭಿಸಿ ಪಠಾಣ್ ಕೋಟೆಯ ಮುಖಾಂತರ ಅಮೃತಸರಕ್ಕೆ ದಯಮಾಡಿಸಿದರು. ದುರ್ಗಿಯಾನಾ ಛತ್ರದಲ್ಲಿ ಬಿಡಾರ ಮಾಡಿ ಶ್ರೀ ಚಂದ್ರಮೌಳೀಶ್ವರನ ಪೂಜೆ ನೆರವೇರಿಸಿದರು. ತಮ್ಮ ದರ್ಶನಕ್ಕೆ ಬಂದಿದ್ದ ಅಸಂಖ್ಯಾತ ಜನರನ್ನುದ್ದೇಶಿಸಿ ಉಪದೇಶಭಾಷಣಮಾಡಿ ಅಲ್ಲಿಂದ ಲೂಧಿಯಾನನಗರಕ್ಕೆ ದಯಮಾಡಿಸಿದರು. ಅಲ್ಲಿ, ದಂಡೀಸ್ವಾಮಿಗಳ ತಪೋವನಕ್ಕೆ ಗುರುಗಳು ಆಗಮಿಸಿದಾಗ ಶ್ರೀ ಶ್ರೀಗಳವರನ್ನು ಶ್ರೀ ದಂಡೀಸ್ವಾಮಿಗಳೇ ಸ್ವಾಗತಿಸಿದರು. ಸುಮಾರು ನಾಲ್ಕು ಸಹಸ್ರ ಜನ ಭಕ್ತರು ಗುರುದೇವರ ದರ್ಶನಕ್ಕಾಗಿ ಸೇರಿದ್ದು ಏಕಾದಶಿ ದಿನ ಸಂಜೆ ಭಜನೆ ಮಾಡಿ ಶ್ರೀ ಚಂದ್ರಮೌಳೀಶ್ವರನ ಸೇವೆಯನ್ನು ಸಲ್ಲಿಸಿದರು. ಮಾರನೆದಿನ ಅಲ್ಲಿಯೂ ಉಪದೇಶ ಭಾಷಣವಿತ್ತು ಕರ್ನಾಲ್ ನಗರಕ್ಕೆ ದಯಮಾಡಿಸಿದರು. ರಾಧಾಕೃಷ್ಣ ಮಂದಿರ, ಸನಾತನ ಧರ್ಮಸಭಾ ಮುಂತಾದ ಸ್ಥಳಗಳಲ್ಲಿ ಉಪದೇಶ ಭಾಷಣವಿತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಸನಾತನ ಧರ್ಮಸಭೆಯವರು ನಡೆಸುತ್ತಿರುವ ಕಣ್ಣಾಸ್ಪತ್ರೆ ಮತ್ತು ಜನರಲ್ ಆಸ್ಪತ್ರೆಗಳಿಗೆ ಭೇಟಿಯಿತ್ತು, ರೋಗಿಗಳನ್ನು ಪ್ರಿಯವಾದ ಮಾತುಗಳಿಂದ ಆಶೀರ್ವದಿಸಿದರು. ಕರ್ನಾಲ್‌ನಿಂದ ಪ್ರಯಾಣ ಹೊರಟು, ಮೂರನೇ ಬಾರಿಗೆ ದೆಹಲಿನಗರಕ್ಕೆ ದಯಮಾಡಿಸಿದರು.

ದೆಹಲಿಗೆ ಆಗಮಿಸಿದ ಶ್ರೀ ಶ್ರೀಗಳವರಿಗೆ ಅಭೂತಪೂರ್ವವಾದ ಸ್ವಾಗತ ದೊರಿಯಿತು. ನಾಗರೀಕರೂ ಭಕ್ತರೂ ಅಧಿಕ ಸಂಖ್ಯೆಯಲ್ಲಿ ಸೇರಿ ಶ್ರೀ ಸ್ವಾಮಿಗಳವರನ್ನು ಬರಮಾಡಿಕೊಂಡರು. ಶ್ರೀ ಶ್ರೀಗಳವರು ಶ್ರೀ ಶಂಕರವಿದ್ಯಾಕೇಂದ್ರದಲ್ಲಿ ಶ್ರೀಶಾರದಾಂಬಾ ಶ್ರೀ ಶಂಕರಾಚಾರ್ಯ ಮೂರ್ತಿಗಳ ಪ್ರತಿಷ್ಠೆಯನ್ನು ನೆರವೇರಿದರು. ಶ್ರೀ ಶ್ರೀಗಳವರು ತಮ್ಮ ಉಪದೇಶಕ್ಕಾಗಿ ಬಂದಿದ್ದ ಭಕ್ತರನ್ನು ಕುರಿತು ನುಡಿಯುತ್ತಾ "ಸಮುದ್ರದ ತರಂಗಗಳತ್ತ ದೃಷ್ಟಿಹಾಯಿಸಿ. ಯಾವವೊಂದು ಅಲೆಯೂ ಸಾಗರದಿಂದ ಪ್ರತ್ಯೇಕವಲ್ಲ, ಅಲ್ಲವೆ ? ಆದರೆ ಅಲೆಯನ್ನು ಸಮುದ್ರದಿಂದ ಪ್ರತ್ಯೇಕಿಸುವುದು ಯಾವುದು ? ಕೇವಲ ನಾಮ ಮತ್ತು ರೂಪ. ಅಖಂಡವೂ ಅಪೂರ್ವವೂ ಆದ ಸಮುದ್ರದಿಂದ ಸ್ವಲ್ಪ ನೀರು ಮೇಲಕ್ಕೆದ್ದಾಗ ಅದರ ರೂಪ ಸಮುದ್ರಕ್ಕಿಂತ ಭಿನ್ನ. ಅದನ್ನು ಅಲೆಯೆಂದು ಹೇಳುತ್ತೇವೆ. ಈ ನಾಮರೂಪಗಳನ್ನು ಕಳಚಿಹಾಕಿದರೆ ಆಗ ನಮಗೆ ಅಲ್ಲಿ ಕಾಣುವುದು ಸಮುದ್ರವೇ ತಾನೇ ? ಹಾಗೆಯೇ ಪ್ರಪಂಚದಲ್ಲೆಲ್ಲಾ ವ್ಯಾಪಿಸಿರುವುದು ಒಂದೇ ತತ್ವ. ಅದೇ ನಾನಾ ವಿಧವಾಗಿ ಕಾಣುತ್ತಿದ್ದು ರೂಪ ಮತ್ತು ನಾಮದ ಮೂಲಕ ವ್ಯತ್ಯಾಸ ತೋರುತ್ತವೆ. ಸಾವಿರಾರು ನೀರಿನ ಗುಳ್ಳೆಗಳ ಮೇಲೆ ಸೂರ್ಯಬಿಂಬವು ಪ್ರತಿಬಿಂಬಿತವಾದಾಗ ಆ ನೀರಿನ ಗುಳ್ಳೆಗಳಲ್ಲಿ ನೂರಾರು ಸೂರ್ಯರು ಕಾಣುತ್ತಾರೆ. ಆದರೆ ವಾಸ್ತವವಾಗಿ ಇರುವವನು ಒಬ್ಬನೇ ಸೂರ್ಯ ತಾನೇ ? ಪ್ರಪಂಚದಲ್ಲೆಲ್ಲಾ 'ನಾಮರೂಪ' ಗಳು ವ್ಯತ್ಯಾಸಕ್ಕೆ ಕಾರಣವಾಗಿವೆ. 'ನಾನು' 'ನೀನು' ಎಂಬ ದ್ವೈತಭಾವನೆಯು ಅಜ್ಞಾನ ಜನ್ಯವಾದುದು. ಈ ಅಜ್ಞಾನ ನಾಶವಾದರೆ ನಮಗೆ ಸತ್ಯವು ಗೋಚರವಾಗುತ್ತದೆ " ಎಂದು ಅಪ್ಪಣೆ ಕೊಡಿಸಿದರು.

ಶ್ರೀ ಶ್ರೀಗಳವರು ದೆಹಲಿಯಿಂದ ಹರಿದ್ವಾರಕ್ಕೆ ದಯಮಾಡಿಸಿ, ನೂತನ ಶಂಕರ ಮಠವನ್ನು ಉದ್ಘಾಟಿಸಿದರು. ಅನಂತರ ದೆಹಲಿಗೆ ಹಿಂದಿರುಗಿದರು. ಶ್ರೀ ಪುರೀ ಪೂರ್ವಾಮ್ನಾಯ ಪೀಠದ ಶಂಕರಚಾರ್ಯ ಜಗದ್ಗುರು ಶ್ರೀ ನಿರಂಜನದೇವತೀರ್ಥ ಸ್ವಾಮಿಗಳವರು ಶ್ರೀ ಜಗದ್ಗುರುಗಳ ಭೇಟಿ ಮಾಡಿ ಗುರುದ್ವಯರೂ ಧಾರ್ಮಿಕ ವಿಚಾರವಾಗಿ ಬಹುಕಾಲ ಮಾತುಕತೆ ನಡೆಸಿದರು. ಅನಂತರ ಶೃಂಗೇರಿ ಜಗದ್ಗುರುಗಳವರು ದೆಹಲಿಯಿಂದ ಮುಂದಕ್ಕೆ ಪ್ರಯಾಣ ಬೆಳೆಸಿದರು.

೨೯. ದೆಹಲಿಯಿಂದ ಮುಂಬಯಿಗೆ

ದೆಹಲಿಯಿಂದ ಪ್ರಯಾಣ ಬೆಳೆಸಿ ಹೋಡಾಲ್ ಮೂಲಕ ಆಲ್ವಾರ್ ನಗರಕ್ಕೆ ದಯಮಾಡಿಸಿದರು. ಅಲ್ಲಿ ... ಛತ್ರದಲ್ಲಿ ಬಿಡಾರ ಮಾಡಿ ತಮ್ಮ ಉಪದೇಶ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಅಪೇಕ್ಷಿಸಿ ಬಂದಿದ್ದ ಭಕ್ತ ಜನಕ್ಕೆ ಸನಾತನ ಧರ್ಮದ ವೈಶಿಷ್ಟ್ಯವನ್ನು ವಿವರಿಸಿ ಪ್ರತಿಯೊಬ್ಬ ಹಿಂದುವೂ ತಗತನಗೆ ಉಪದಿಷ್ಟವಾದ ಉಪಾಸನೆಯನ್ನು ಭಗವಂತನಲ್ಲಿ ಶ್ರದ್ಧೆಯಿಟ್ಟು ನಡೆಸಬೇಕೆಂದು ತಿಳಿಸಿದರು. ಸದಾ ಭಗವನ್ನಾಮ ಸಂಕೀರ್ತನೆ ಮಾಡು ವುದು ಕಲಿಯುಗದಲ್ಲಿ ಅತ್ಯಂತ ಸುಲಭವೂ ಶ್ರೇಷ್ಠವೂ ಆದ ಸಾಧನ ಮಾರ್ಗವೆಂದು ಅಪ್ಪಣೆಕೊಡಿಸಿದರು. ಆಳ್ವಾರ್ ನಗರದಿಂದ ಜಯಪುರಕ್ಕೆ ದಯಮಾಡಿಸಿದ ಶ್ರೀ ಶ್ರೀಗಳವ ರನ್ನು ಸಾರ್ವಜನಿಕರು ಆಯುರ್ವೇದ ಪಾಠಶಾಲೆಯ ಆವರಣದಲ್ಲಿ ಸ್ವಾಗತಿಸಿ ಗುಜರಾತ್ ಶಾಲೆಗೆ ಬಿಜಯಮಾಡಿಸಿದರು. ಶ್ರೀ ಶ್ರೀಗಳವರ ಚಂದ್ರಮೌಳೀಶ್ವರ ಪೂಜೆಯು ಕಾಶೀ ಭಾಯ್‌ಭವೇರಿ ವಿದ್ಯಾಮಂದಿರದಲ್ಲಿ ನಡೆಯಿತು. ಪೂಜೆಯನ್ನು ವೀಕ್ಷಿಸಲು ಅಸಂಖ್ಯಾತ ಜನ ಸೇರಿದ್ದರು. ಶ್ರೀ ಶ್ರೀಗಳವರ ಉಪದೇಶ ಭಾಷಣವು ವಿಶಾಲವಾದ ಮೈದಾನದಲ್ಲಿ ಏರ್ಪಟ್ಟಿತ್ತು.

ಜಯಪುರದಿಂದ ಅಜ್ಮೀರಕ್ಕೆ ದಯಮಾಡಿಸಿ, ಪುಷ್ಕರದಲ್ಲಿ ಶಂಕರಾಚಾರ್ಯ ಬ್ರಾಹ್ಮಣ ಸರಸ್ವತಿ ಆಶ್ರಮ ಎಂಬಲ್ಲಿ ಬಿಡಾರ ಮಾಡಿದರು. ರಾತ್ರಿಯ ಪೂಜೆ ಅಲ್ಲಿಯೇ ನೆರವೇರಿತು. ಮಾರನೆಯ ದಿನ ಪುಷ್ಕರ ಕ್ಷೇತ್ರಕ್ಕೆ ದಯಮಾಡಿಸಿ ಬ್ರಹ್ಮ ಪುಷ್ಕರಣಿಯಲ್ಲಿ ತೀರ್ಥಸ್ನಾನ ಮಾಡಿದರು. ಪ್ರಾಚೀನವಾದ ಬ್ರಹ್ಮ ದೇವಾಲಯವನ್ನು ಸಂದರ್ಶಿಸಿ ಪೂಜಾದಿಗಳನ್ನು ನೆರವೇರಿಸಿದರು. ಪುಷ್ಕರದಲ್ಲಿ ಶ್ರೀ ಋಷ್ಯಶೃಂಗರಿಗಾಗಿ ನಿರ್ಮಿಸಲ್ಪಟ್ಟ ದೇವಾಲಯ ಒಂದಿದ್ದು ಅದರಲ್ಲಿ ಕೃಷ್ಣಶಿಲೆಯ ಶ್ರೀ ಋಷ್ಯಶೃಂಗ ಮೂರ್ತಿ ಇದೆ. ಆ ದೇವಾಲಯಕ್ಕೆ ಹಿಂದೆ ಶ್ರೀ ಉಗ್ರನರಸಿಂಹ ಭಾರತೀ ಸ್ವಾಮಿಗಳವರು (ಪರಮೇಷ್ಠಿ ಗುರುಗಳು) ಸಂದ ರ್ಶನವಿತ್ತಿದ್ದರು. ಶ್ರೀ ಶ್ರೀಗಳವರು ಆ ಆಲಯಕ್ಕೆ ದಯಮಾಡಿಸಿದಾಗ ಭಕ್ತಿಪೂರ್ವಕ ವಾಗಿ ಸ್ವಾಗತಿಸಿದ ಅರ್ಚಕರು ಹಿಂದೆ ಶೃಂಗೇರಿ ಪರಂಪರೆಯ ಗುರುಗಳವರು ಆಗಮಿಸಿದ್ದ ವಿಚಾರವನ್ನು ಅರುಹಿ ಸಂಬಂಧಿಸಿದ ದಾಖಲೆಗಳನ್ನು ತೋರಿದರು. ಶ್ರೀ ಶ್ರೀಗಳವರು ಅತನಿಗೆ ಸೂಕ್ತ ಸಂಭಾವನೆಯನ್ನಿತ್ತು ಮುಂದಕ್ಕೆ ಪ್ರಯಾಣ ಬೆಳೆಸಿದರು.

ಅಜ್ಮೀರದಿಂದ ಜೋಧ್‌ಪುರಕ್ಕೆ ದಯಮಾಡಿಸಿದ ಶ್ರೀ ಶ್ರೀಗಳವರಿಗೆ ಅತ್ಯದ್ಭುತವಾದ ಸ್ವಾಗತ ದೊರಕಿತು. ಉತ್ಸವದಲ್ಲಿ ಜಗದ್ಗುರುಗಳವರವನ್ನು ಸತ್ಸಂಗ ಭವನಕ್ಕೆ ಕರೆದೊ ಯ್ಯಲಾಯಿತು. ಉತ್ಸವದಲ್ಲಿ ಅನೇಕ ಭಜನೆಯ ತಂಡಗಳೂ, ಮಂಗಳ ವಾದ್ಯಗಳೂ, ಜಲಕುಂಭವನ್ನು ಧರಿಸಿದ ಸುಮಂಗಲಿಯರೂ ಭಾಗವಹಿಸಿದ್ದರು. ಶ್ರೀ ಶ್ರೀಗಳವರು ನಡೆಸಿದ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ಸಾವಿರಾರು ಜನ ಭಾವಾವಿಷ್ಟರಾಗಿ ವೀಕ್ಷಿಸಿದರು. ತಮ್ಮ ದರ್ಶನಕ್ಕಾಗಿ ಆಗಮಿಸಿದ್ದ ಸಾವಿರಾರು ಜನ ಶಿಷ್ಯರನ್ನು ಕುರಿತು ಶ್ರೀ ಶ್ರೀಗಳವರು ಉಪನ್ಯಾಸ ಮಾಡುತ್ತಾ "ಮಾನವನು ತನ್ನ ಇಷ್ಟದೇವತೆಯನ್ನು ಸದಾ ಸ್ಮರಿಸುತ್ತ ಭಗವನ್ನಾಮವನ್ನು ವಾಚಕವಾಗಿಯಾಗಲೀ, ಮಾನಸಿಕವಾಗಿಯೇ ಆಗಲೀ ಸದಾ ಸಂಕೀರ್ತನೆ ಮಾಡುತ್ತಿರಬೇಕು. ನಮ್ಮ ಅಗತ್ಯಗಳನ್ನು ಅತ್ಯಂತ ಕನಿಷ್ಠ ಮಿತಿಗೆ ಇಳಿಸಿ ಕೊಂಡರೆ ಅದು ಸುಖಕ್ಕೆ ದಾರಿಯಾಗುತ್ತದೆ. ನಮ್ಮ ಅಗತ್ಯಗಳನ್ನು ಹೆಚ್ಚಿಸಿಕೊಂಡಷ್ಟೂ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಅಶಾಂತರಾಗಿ ದುಃಖಭಾಜನರಾಗುತ್ತೇವೆ. ಹಿಂದೂ ಧರ್ಮಾಚರಣೆಯಲ್ಲಿ ಬಡತನಕ್ಕೆ ತುಂಬಾ ಶ್ರೇಷ್ಠ ಸ್ಥಾನ ಇದೆ. ಸಾಧಕನು ತನ್ನೆಲ್ಲವನ್ನೂ ತ್ಯಾಗಮಾಡಿ ಅಂಕಿಚನನಾಗಿ ಅತ್ಯಂತ ಸರಳ ಜೀವನವನ್ನು ನಡೆಸಬೇಕಾದುದು ಅಗತ್ಯ. ಆಧ್ಯಾತ್ಮಿಕ ಸಾಧನೆಗೆ ಬಡತನ ಒಂದು ಏಣಿಯಿದ್ದಂತೆ. ಆಸೆಯೆಂಬುದು ಮಾನವನಿಗೆ ದೊಡ್ಡ ಅಡ್ಡವಿದ್ದಂತೆ. ಆ ಆಸೆಯನ್ನು ನಾವು ತೃಪ್ತಿಪಡಿಸಲು ಪ್ರಾರಂಭಿಸಿದರೆ ಅದಕ್ಕೆ ಕೊನೆ ಮೊದಲೇ ಇರುವುದಿಲ್ಲ. ಆ ಆಸೆಯೆಂಬ ಅಡ್ಡವನ್ನು ನಾವು ಗೆದ್ದಾಗ ನಮಗೆ ಸುಖ ಲಭಿಸುತ್ತದೆ. ಅದನ್ನು ಗೆಲ್ಲುವುದೆಂದರೆ ಆಶಾತ್ಯಾಗ ಮತ್ತು ತಪಸ್ಸು". ಶ್ರೀ ಶ್ರೀಗಳವರ ಉಪನ್ಯಾಸದ ನಂತರ ಹಲವಾರು ಜನ ಸಾಧಕರು ತಮ್ಮ ತಮ್ಮ ಅನುಮಾನಗಳನ್ನು ಅವರ ಮುಂದೆ ವಿಜ್ಞಾಪಿಸಿ ಪರಿಹಾರವಮಾಡಿಕೊಂಡರು.

ಶ್ರೀ ಶ್ರೀಗಳವರು ಜೋಧ್‌ಪುರದಿಂದ ಹೊರಟು ಬಿಲ್ವಾರದ ಮೂಲಕ ಚಿತ್ತೂರು ಘಡಕ್ಕೆ ದಯಮಾಡಿಸಿದರು. ಪವಿತ್ರ ಪುಷ್ಕರಣಿಯಲ್ಲಿ ಸ್ನಾನಮಾಡಿ ಮಹೇಶ್ವರ ಮತ್ತು ದುರ್ಗಾಲಯಗಳಿಗೆ ದಯಮಾಡಿಸಿ ಅರ್ಚನೆ ಮಾಡಿದರು. ಪದ್ಮಿನಿಯ ಅರಮನೆಯ ಸಮೀಪದಲ್ಲಿರುವ ಕಾಳಿಯ ಆಲಯಕ್ಕೂ ದಯಮಾಡಿಸಿ, ಅಲ್ಲಿ ಸೇರಿದ್ದ ಸಾವಿರಾರು ಜನಕ್ಕೆ ಭಕ್ತಿ ಎಂಬ ವಿಷಯವಾಗಿ ಉಪದೇಶವಿತ್ತರು. ಮನಸ್ಸನ್ನು ಹತೋಟಿಗೆ ತರಬೇಕಾದರೆ, ಸದಾ ಹೊರಗಡೆ ಸಂಚರಿಸುತ್ತಿರುವ ಇಂದ್ರಿಯಗಳನ್ನು ಅಂತರ್ಮುಖ ಮಾಡಬೇಕು. ಅದು ಸುಲಭವಾಗಿಯೂ, ಪರಿಣಾಮಕಾರಿಯೂ ಆಗುವಂತೆ ಮಾಡುವ ಸಾಧನ ಭಕ್ತಿ ಅಥವಾ ಪ್ರೀತಿ. ಈ ಪ್ರೇಮ ಮಾರ್ಗದಲ್ಲಿ ಇಂದ್ರಿಯಗಳೆಲ್ಲವೂ ಸಹಜವಾಗಿ ಪರಮಾತ್ಮನತ್ತ ತಿರುಗುತ್ತವೆ. ಅದಕ್ಕೆ ಬೇಕಾದ ಒಂದು ಸಾಧನದೆಂದರೆ, ಮಾರ್ದವವಾದ ಹೃದಯವಂತಿಕೆ. ಇಂದ್ರಿಯಗಳು ಸಾಮಾನ್ಯವಾಗಿ ಸದಾ ಭೌತಿಕ ಚಟುವಟಿಕೆಗಳಲ್ಲಿಯೇ ಮಗ್ನವಾಗಿರುತ್ತವೆ. ಪರಮಾತ್ಮನನ್ನು ಜೀವನದ ಗುರಿಯಾಗಿ ಹೊಂದಿದಾಗ, ಭಗವಂತನ ಹೆಸರಿನಲ್ಲಿ ಆತನ ಪ್ರೀತ್ಯರ್ಥವಾಗಿ ಇಂದ್ರಿಯಗಳು ಕೆಲಸ ಮಾಡಲು ಆರಂಭಿಸಬೇಕು. ಅತ್ಯಂತ ಸಾಧಾರಣವಾದ ದೈನಂದಿನ ಚಟುವಟಿಕೆಗಳಾದ ಊಟ ಮಾಡುವುದು, ನೀರುಕುಡಿಯುವುದು, ಬಟ್ಟೆ ಹಾಕಿಕೊಳ್ಳುವುದು ಮುಂತಾದ ಪ್ರತಿಯೊಂದು ಕೆಲಸವನ್ನು ನಮಗಾಗಿ ಎಂದುಕೊಳ್ಳದೆ, ಪರಮಾತ್ಮನ ಪ್ರೀತಿಗಾಗಿ ಎಂದು ಮಾಡಿಕೊಳ್ಳಬೇಕು. ಇದರಿಂದ ಇಂದ್ರಿಯಗಳು ಒಳಮುಖವಾಗುತ್ತವೆ, ಅಷ್ಟೇ ಅಲ್ಲದೆ, ವಿಚಾರ ಮಾಡಲು ಮನಸ್ಸು ಆರಂಭಿಸುತ್ತದೆ. ಸದಾ ಭಗವಂತನ ವಿಚಾರದಲ್ಲಿಯೇ ಮಗ್ನವಾಗಿರುವವನಿಗೆ ಧನವಂತಿಕೆಯಾಗಲೀ, ಬಡತನವಾಗಲೀ ಬಾಧಿಸುವುದಿಲ್ಲ. ಭಕ್ತನಾದವನು ಪ್ರಾಪಂಚಿಕ ವಿಷಯಗಳಿಂದ ಪೂರ್ಣ ವಿರಾಗಿಯಾಗಿ, ಭಗವಂತನಲ್ಲಿಯೇ ತಲ್ಲೀನನಾಗಬೇಕು. ತನ್ನ ಹೃದಯವನ್ನೇ ಭಗವಂತನ ಪೀಠವನ್ನಾಗಿ ಮಾಡಬೇಕು" ಎಂದು ಅಪ್ಪಣೆ ಕೊಡಿಸಿದರು.

ಜೋಧ್‌ಪುರದಿಂದ ಶ್ರೀ ಶ್ರೀಗಳವರು ಉದಯಪುರಕ್ಕೆ ದಯಮಾಡಿಸಿದಾಗ ಅಲ್ಲಿ ಗುರುಗಳವರನ್ನು ಪೂರ್ಣಕುಂಭದಿಂದ ಸ್ವಾಗತಿಸಲಾಯಿತು. ವಿಶೇಷವಾದ ರಥದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀಗಳವರನ್ನು ಕುಳ್ಳಿರಿಸಿ ಕುದುರೆಗಳು, ಆನೆಗಳು ಮತ್ತು ಒಂಟೆಗಳ ಸವಾರರಿದ್ದ ಉತ್ಸವದಲ್ಲಿ ಸಾವಿರಾರು ಜನ ಪಾಲ್ಗೊಂಡು ಜಯಘೋಷ, ವೇದಘೋಷ, ಮಂಗಳ ವಾದ್ಯಗಳಲ್ಲಿ ಶ್ರೀ ಶ್ರೀಗಳವರನ್ನು ಕಾರ್ಪೊರೇಷನ್ ಸಭಾಂಗಣಕ್ಕೆ ಬಿಜಯ ಮಾಡಿಸಿದರು. ಅಲ್ಲಿಯೂ ಸ್ವಾಗತವನ್ನು ಸ್ವೀಕರಿಸಿ ಶ್ರೀ ಶ್ರೀಗಳವರು 'ಆನಂದಭವನ' ಎಂಬಲ್ಲಿ ಬಿಡಾರ ಮಾಡಿ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ನೆರವೇರಿಸಿದರು. ಉದಯಪುರದ ಪ್ರಸಿದ್ಧ ವಾದ ಏಕಲಿಂಗೇಶ್ವರ ದೇವಾಲಯಕ್ಕೆ ದಯಮಾಡಿಸಿ ಶ್ರೀ ಪರಮೇಶ್ವರನಿಗೆ ಅಭಿಷೇಕ ಅರ್ಚನೆಗಳನ್ನು ಸ್ವತಃ ನೆರವೇರಿಸಿದರು. ಶ್ರೀ ಶ್ರೀಗಳವರ ದರ್ಶನಕ್ಕಾಗಿ ರಾಜಾಸ್ಥಾನದ ಮುಖ್ಯಮಂತ್ರಿ ಶ್ರೀ ಮೋಹನಲಾಲ್ ಸುಖಾಡಿಯಾರವರೂ ಮತ್ತಿತರ ಅಧಿಕಾರಿಗಳೂ ಆಗಮಿಸಿದ್ದರು.

ಉದಯಪುರದಿಂದ ಅತ್ಯಂತ ಭಕ್ತಿ ಶ್ರದ್ಧೆಯಿಂದ ಬೀಳ್ಕೊಡಲ್ಪಟ್ಟ ಗುರುವರ್ಯರು ಡೋಂಗರಪುರದ ಮೂಲಕ ಹಿಮ್ಮತ್ ನಗರಕ್ಕೆ ದಯಮಾಡಿಸಿದರು. ಸಾರ್ವಜನಿಕ ಗುಜರಾತ್ ಧರ್ಮಶಾಲೆಯಲ್ಲಿ ಬಿಡಾರ ಮಾಡಿ ಆಹ್ನಿಕ ಅನುಷ್ಠಾನಗಳನ್ನು ನೆರವೇರಿಸಿದ ಶ್ರೀ ಶ್ರೀಗಳವರು ತಮ್ಮ ದರ್ಶನಕ್ಕಾಗಿ ಬಂದಿದ್ದ ಸಾವಿರಾರು ಜನರನ್ನು ಉದ್ದೇಶಿಸಿ ಉಪನ್ಯಾಸ ಮಾಡುತ್ತಾ "ನಮ್ಮ ದೇವಾಲಯಗಳು ಲಕ್ಷಣವಾಗಿ ಕಾಣಬೇಕು. ಚೊಕ್ಕಟ ವಾಗಿರಬೇಕು ವಾತಾವರಣ ಪವಿತ್ರವಾಗಿ, ಶುದ್ಧವಾಗಿದ್ದು, ಸದ್ದುಗದ್ದಲವಿರದೆ ಶಾಂತ ವಾಗಿರಬೇಕು. ದೇವರ ದರ್ಶನಕ್ಕಾಗಿ ಬಂದ ಭಕ್ತನು ಆಲಯದಿಂದ ಹಿಂದಿರುಗುವಾಗ, ಶುದ್ಧಮನಸ್ಕನಾಗಿ, ಸ್ಥಿರವಾದ ಏಕಾಗ್ರಚಿತ್ತವುಳ್ಳವನಾಗಿ ದೈವೀಭಾವನೆಗಳು ತುಂಬಿರು ವಂತೆ, ಆಲಯವು ಧಾರ್ಮಿಕ ಸ್ಫೂರ್ತಿ ಕೇಂದ್ರವಾಗಬೇಕು. ಅಶುದ್ಧ ಮನಸ್ಸಿನಿಂದ ಒಳಹೊಕ್ಕವನು ಶುದ್ಧಮನಸ್ಕನಾಗಿ ಹಿಂದಿರುಗುವಂತಹ ಪವಿತ್ರವಾತಾವರಣ ದೇವಾಲಯ ದಲ್ಲಿ ಇರಬೇಕು. ಕಠಿಣ ಹೃದಯನಾದವನು ದಯಾವಂತನಾಗುವಂತೆ, ಆಸೆ ಆಕಾಂಕ್ಷೆ ಗಳನ್ನು ಹೊತ್ತುಬಂದವನು, ತೃಪ್ತಮನಸ್ಕನಾಗುವಂತೆ, ಮಾನಸಿಕ ಅಶಾಂತಿಯಿಂದ ತೊಳಲುತ್ತಿರುವವನು, ಶಾಂತಿಯನ್ನು ಪಡೆಯುವಂತೆ, ದುಷ್ಟಭಾವನೆಗಳಿಂದ ಒಳಹೊಕ್ಕ ವನು ಸದ್ಭಾವನೆಗಳಿಂದ ಹಿಂದಿರುಗುವಂತೆ ದೇವಾಲಯವು ಮಾನವನನ್ನು ಮಾರ್ಪಾಟು ಮಾಡುವಂತಹ ದಿವ್ಯಸ್ಥಾನವಾಗಬೇಕು. ಹಾಗಾಗದಿದ್ದಲ್ಲಿ ದೇವಸ್ಥಾನಗಳನ್ನು ಹಿಂದಿ ನವರು ಸ್ಥಾಪಿಸಿದ ಉದ್ದೇಶ ವ್ಯರ್ಥ.

"ಆಧ್ಯಾತ್ಮಿಕ ಸಾಧನೆಗೆ ಇತರ ಮಾರ್ಗಗಳಿಗಿಂತ ಸುಲಭವಾದರೂ ಭಕ್ತಿಯೆಂಬುದು ಸಹ ಕಠಿಣವಾದ ಸಾಧನೆ, ಅದು ಕೊರಸಿಯ ಅಲಗಿನ ಮೇಲೆ ನಡೆದಂತೆ. ಪ್ರಪಂಚದ ನೂರಾರು ಆಕರ್ಷಣೆಗಳ ಮಧ್ಯದಲ್ಲಿ ಇದ್ದೂ ಅವುಗಳಿಗೆ ಅಂಟಿಕೊಳ್ಳದಂತೆ ಇರಬೇಕೆನ್ನು ವುದು ಬಹಳ ಕಷ್ಟಸಾಧ್ಯ. ಅದಕ್ಕೆ ಪ್ರಾಪಂಚಿಕ ವಸ್ತುಗಳ ಅನಿತ್ಯತೆಯ ತಿಳಿವು, ಪ್ರಾಪಂಚಿಕ ವಸ್ತುಗಳಲ್ಲಿ ಅನಾಸಕ್ತಿ, ವೈರಾಗ್ಯ ಮತ್ತು ದೈವೀಕೃಪೆ ಇವು ಬೇಕು. ಎಲ್ಲಕ್ಕಿಂತ ಮುಖ್ಯವಾದುದು ಭಗವತ್ಕೃಪೆ. ಅದರಲ್ಲಿ ಪೂರ್ಣ ಭರವಸೆಯಿಟ್ಟು ಮಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ವನು ಪ್ರತಿಕ್ಷಣದಲ್ಲಿಯೂ ಭಗವಂತನ ಕಾರುಣ್ಯಕ್ಕಾಗಿ ಹಂಬಲಿಸುತ್ತಿರಬೇಕು" ಎಂದು ಹೃದಯಂಗಮವಾಗಿ ಬೋಧಿಸಿದರು.

ಹಿಮ್ಮತ್ ನಗರದಿಂದ ಶ್ರೀ ಶ್ರೀಗಳವರು ಹಾಜೀಪುರದ ಮುಖಾಂತರ ಅಹಮದಾಬಾದಿಗೆ ದಯಮಾಡಿಸಿದರು. ಶ್ರೀ ಶ್ರೀಗಳವರು ಎಂದಿನಂತೆ ಚಂದ್ರಮೌಳೀಶ್ವರ ಪೂಜಾದಿಗಳನ್ನು ನೆರವೇರಿಸಿ ಭಾರತೀಯ ವಿದ್ಯಾಭವನದ ಕಾಲೇಜು, ರಾಧಾಕೃಷ್ಣ ಮಂದಿರ, ಶ್ರೀ ಮಾಲೀ ಸೊಸೈಟಿ, ಹೆಚ್. ಕೆ. ಆರ್ಟ್ಸ್ ಕಾಲೇಜ್ ಮುಂತಾದವುಗಳಿಗೆ ಸಂದರ್ಶನವಿತ್ತರು. ಹೆಚ್. ಕೆ. ಆರ್ಟ್ಸ್ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಕುರಿತು ಉಪನ್ಯಾಸ ಮಾಡುತ್ತಾ "ನಿಜವಾದ ವಿದ್ಯಾಭ್ಯಾಸವು ವಿದ್ಯಾರ್ಥಿಯಲ್ಲಿ ಅಂತರ್ಗತವಾದ ಶಕ್ತಿಯನ್ನು ಪ್ರಕಾಶಪಡಿಸಬೇಕು. ನಾವು ಪಾಶ್ಚಾತ್ಯರ ಸಿದ್ಧಾಂತಗಳನ್ನು ಸ್ವೀಕರಿಸಿ ಅವರಿಟ್ಟ ಹೆಜ್ಜೆಯನ್ನೇ ನಾವೂ ಇಡುತ್ತಾ, ಪೂರ್ಣವಾಗಿ ಅವರನ್ನು ಅನುಕರಿಸಿದರೆ, ಅತ್ಯಂತ ಕಷ್ಟದಿಂದ ಸಂಪಾದಿಸಿದ ನಮ್ಮ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವಾಗುತ್ತದೆ. ಇಂದಿನ ಸನ್ನಿವೇಶದಲ್ಲಿ ನಾವು ನಮ್ಮ ಭವ್ಯ ಪರಂಪರೆಯನ್ನು ನೆನೆದುಕೊಂಡು ಅದನ್ನೇ ಮತ್ತೆ ಸೃಷ್ಟಿಮಾಡಬೇಕು. ನಮ್ಮ ವಿದ್ಯಾರ್ಥಿಗಳು ನಮ್ಮ ಅಮೂಲ್ಯವಾದ ಪ್ರಾಚೀನ ಸಂಸ್ಕೃತಿಗೆ ಅನುಗುಣವಾಗಿ ತಯಾರಾಗಬೇಕು" ಎಂದು ಅಪ್ಪಣೆ ಕೊಡಿಸಿದರು. ಶ್ರೀ ಶ್ರೀಗಳವರಿಗೆ ಬೃಹತ್ ಗುಜರಾತ್ ಸಂಸ್ಕೃತ ಪರಿಷತ್‌ನವರು ರಾಜ್ಯಪಾಲ ಶ್ರೀ ನಿತ್ಯಾನಂದ ಕನುಂಗೋರವರ ಅಧ್ಯಕ್ಷತೆಯಲ್ಲಿ ಬಿನ್ನವತ್ತಳೆಯನ್ನೊಪ್ಪಿಸಿದರು.

ಅಹಮದಾಬಾದಿನಿಂದ ಡಾಲ್‌ಪೂರಿಗೆ ದಯಮಾಡಿಸಿ ಶ್ರೀ ಕೃಷ್ಣದೇವಾಲಯದಲ್ಲಿ ಅರ್ಚನೆ ನಡೆಸಿ ಬರೋಡಾ ನಗರಕ್ಕೆ ದಯಮಾಡಿಸಿದರು. ಅಲ್ಲಿ ನಗರದ ಮೇಯರ್‌ರವರಿಂದ ಸ್ವಾಗತಿಸಲ್ಪಟ್ಟು ಗಾಯಕವಾಡರ ಅರಮನೆಯಲ್ಲಿ ಬಿಡಾರ ಮಾಡಿದರು. ಬರೋಡಾ ವಿಶ್ವವಿದ್ಯಾನಿಲಯವು ಶ್ರೀ ಶ್ರೀಗಳವರನ್ನು ಸ್ವಾಗತಿಸಿ ಸನ್ಮಾನಿಸಿತು. ಶ್ರೀ ಗುರುಗಳವರು ಅಲ್ಲಿ ಅನುಗ್ರಹ ಭಾಷಣ ಮಾಡುತ್ತಾ "ಪೂರ್ಣ ಪ್ರಪಂಚವಾದಿಗೆ ಸುಖ ಎಂಬುದು ಗಡಿಯಾರದ ಲೋಲಕವಿದ್ದಂತೆ. ಒಮ್ಮೆ ದುಃಖದ ಕಡೆಗೆ, ಒಮ್ಮೆ ಸುಖದ ಕಡೆಗೆ ಅದು ಸದಾ ಚಲಿಸುತ್ತಲೇ ಇರುತ್ತದೆ. ಅವನ ಕಲ್ಪನೆಯ ಸುಖ ಅವನಿಗೆ ಎಂದಿಗೂ ಸಿಗದು. ಆದರೆ ಆಧ್ಯಾತ್ಮಿಕ ದೃಷ್ಟಿಯುಳ್ಳ ಆಸ್ತಿಕನಿಗೆ ಈ ದ್ವಂದ್ವಗಳ ಆಚೆ ಇರುವ ನಿತ್ಯ ಸುಖದ ಅನ್ವೇಷಣೆ ಒಂದು ಸಂತೋಷದ ಸಾಧನೆಯಾಗಿರುತ್ತದೆ. ಪ್ರಪಂಚದಲ್ಲಿ ಯಾವ ದೋಷವೂ ಇಲ್ಲ. ಅದು ಸರಿಯಾಗಿಯೇ ಇದೆ. ಆದರೆ ತಪ್ಪುತ್ತಿರುವವರು ನಾವು. ಪ್ರಪಂಚವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ತೊಳಲಾಡುತ್ತಿದ್ದೇವೆ. ಆದ್ದರಿಂದ ಮಾನವನು ಮಾಡಬೇಕಾದ ಪ್ರಯತ್ನವೆಂದರೆ ಮೂಲಭೂತವಾದ ತಪ್ಪು ಎಲ್ಲಾಯಿತು, ಎಂದು ಹುಡುಕಿಕೊಂಡು ಅದನ್ನು ಸರಿಪಡಿಸಿಕೊಳ್ಳಬೇಕು. ಅದನ್ನು ಮಾಡದೆ ಅತ್ತಿತ್ತ ಚಲಿಸುತ್ತಾ ಒಂದರನಂತರ ಮತ್ತೊಂದನ್ನು ಹುಡುಕಿಕೊಂಡು ಸುಖಕ್ಕಾಗಿ ಅನ್ವೇಷಣೆ ಮಾಡುವುದು ವ್ಯರ್ಥ. ... ಇಂತಹ ವ್ಯರ್ಥ ಅನ್ವೇಷಣೆಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪದೇ ಪದೇ ಸೋಲನ್ನು ಅನುಭವಿಸುತ್ತಿದ್ದರೂ ಮಾನವನು ಪುನಃ ಪುನಃ ಅಂತಹ ಅನ್ವೇಷಣೆಯಲ್ಲಿಯೇ ತೊಡಗುತ್ತಾನೆ. ಆದರೆ ಅನುಭವ ಉಂಟಾದಂತೆ ಅವನಲ್ಲಿ ವಿಚಾರೋದಯವಾಗಿ ತಾನು ನಡೆಸುತ್ತಿರುವ ಅನ್ವೇಷಣೆಯ ಗುರಿ ನಿಜವಾದ ಸುಖವೆಂದೂ, ಆ ಸುಖ ಕೇವಲ ಪ್ರಾಪಂಚಿಕ ವಸ್ತುಗಳಿಂದ ಬರುವುದಿಲ್ಲವೆಂದೂ ಅರಿತು ಅವನ ಮನಸ್ಸು ನಿಜವಾದ ಸುಖವನ್ನು ಪಡೆಯುವ ಪ್ರಾಮಾಣಿಕ ಪ್ರಯತ್ನಕ್ಕೆ ಸಿದ್ಧವಾಗುತ್ತದೆ" ಎಂಬುದಾಗಿ ಅಪ್ಪಣೆ ಕೊಡಿಸಿದರು.

ಶ್ರೀ ಶ್ರೀಗಳವರು ಸಾವಿರಾರು ಜನ ಶಿಷ್ಯರನ್ನೂ, ಬರೋಡಾ ರಾಜಮಾತೆಯನ್ನೂ ಅನುಗ್ರಹಿಸಿ, ಬರೋಡದಿಂದ ಬ್ರೋಚ್ ನಗರಕ್ಕೆ ದಯಮಾಡಿಸಿ ಅಶೋಕಾಶ್ರಮದಲ್ಲಿ ಬಿಡಾರ ಮಾಡಿದರು. ಪವಿತ್ರವಾದ ನರ್ಮದಾ ನದಿಯಲ್ಲಿ ಸ್ನಾನಾನುಷ್ಠಾನಗಳನ್ನು ನೆರವೇರಿಸಿ ಅಲ್ಲಿಂದ ಸೂರತ್ ನಗರಕ್ಕೆ ದಯಮಾಡಿಸಿದರು. ಸೂರತ್ ನಗರದಲ್ಲಿ ರಾಮದ್ವಾರ ಮಂದಿರ ಮತ್ತು ಸತ್ಯನಾರಾಯಣ ಮಂದಿರಗಳಲ್ಲಿ ತಮ್ಮನ್ನು ದರ್ಶನ ಮಾಡಲು ಕಾದಿದ್ದ ಅನೇಕ ಜನ ಭಕ್ತರಿಗೆ ಅನುಗ್ರಹ ಭಾಷಣ ಮಾಡಿ ಅಲ್ಲಿಂದ ದಾದ್ರಾನಗರಕ್ಕೆ ದಯಮಾಡಿಸಿದರು. ದಾದ್ರಾ ಪುಟ್ಟ ಗ್ರಾಮವಾದರೂ ಶ್ರೀ ಶ್ರೀಗಳವರ ದರ್ಶನಕ್ಕಾಗಿ ಇಡೀ ಗ್ರಾಮವೇ ಸೇರಿದ್ದು ಅವರನ್ನು ಪ್ರಾಚೀನ ರೀತಿಯಲ್ಲಿ ಸ್ವಾಗತಿಸಿ ಭಕ್ತಿಯಿಂದ ಪೂಜಿಸಿದರು. ದಾದ್ರಾದಿಂದ ಹೊರಟ ಶ್ರೀ ಶ್ರೀಗಳವರು ಸುಪ್ರಸಿದ್ಧ ಕ್ಷೇತ್ರವಾದ ನಾಸಿಕಕ್ಕೆ ದಯಮಾಡಿಸಿ ಪಂಚವಟಿಯಲ್ಲಿರುವ ಶೃಂಗೇರಿ ಶಂಕರಮಠದಲ್ಲಿ ಬಿಡಾರ ಮಾಡಿದರು.

ಶ್ರೀ ಶೃಂಗೇರಿ ಜಗದ್ಗುರು ಪರಂಪರೆಯ ಇಪ್ಪತ್ತೆಂಟನೆಯ ಜಗದ್ಗುರುಗಳವರಾದ ಶ್ರೀ ಮದಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳವರ ಮತ್ತು ಏಳನೆಯ ಶ್ರೀ ನರಸಿಂಹ ಭಾರತೀ ಸ್ವಾಮಿಗಳವರ ಬೃಂದಾವನಗಳು ನಾಸಿಕ ಕ್ಷೇತ್ರದಲ್ಲಿಯೇ ಇವೆ. ಇಬ್ಬರು ಗುರುಗಳೂ ಸಂಚಾರದಲ್ಲಿಯೇ ಇದ್ದು ಮೊದಲನೆಯ ಗುರುಗಳವರು ಶೃಂಗೇರಿಗೆ ಹಿಂದಿರುಗುವ ದಾರಿಯಲ್ಲಿ ಪುಣೆಯಿಂದ ನಾಸಿಕಕ್ಕೆ ದಯಮಾಡಿಸಿ ಅಲ್ಲಿಯೇ ವಿದೇಹಮುಕ್ತಿ ಹೊಂದಿದರು. ಇಪ್ಪತ್ತೊಂಭತ್ತನೆಯ ಜಗದ್ಗುರುಗಳವರು ನಾಸಿಕದಲ್ಲಿಯೇ ತಮ್ಮ ಗುರುಗಳವರೊಡನೆ ಇದ್ದು, ಶೃಂಗೇರಿಗೆ ದಯಮಾಡಿಸಲಾಗಲಿಲ್ಲ. ಆಗ ಎಂದರೆ ಈ ಜಗದ್ಗುರುಗಳವರು ಪೀಠಾಧಿಪತ್ಯವನ್ನು ಮುಕ್ತರಾದ ತಮ್ಮ ಗುರುಗಳವರಿಂದ ವಹಿಸಿಕೊಂಡಾಗ, ಪುಣೆಯ ಪೇಶ್ವೆ ಮಾಧವರಾವ್ ಮತ್ತು ನೈಜಾಮ್ ಆಲಿ ಅವರುಗಳು ಮೈಸೂರಿನ ಹೈದರಾಲಿಯೊಡನೆ ಯುದ್ಧಮಾಡುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಏಳನೆಯ ನರಸಿಂಹಭಾರತೀ ಸ್ವಾಮಿಗಳವರು ಶೃಂಗೇರಿಗೆ ಆಗಮಿಸಲು ಸಾಧ್ಯವಾಗದೆ ನಾಸಿಕ ಕ್ಷೇತ್ರದಲ್ಲಿಯೇ ವಿದೇಹಮುಕ್ತಿ ಹೊಂದಿದರು. ಆ ಬೃಂದಾವನಗಳನ್ನು ಒಳಗೊಂಡು, ಒಂದು ಮಂದಿರವು ನಿರ್ಮಾಣವಾಗಿತ್ತು. ಶಂಕರಮಠವೂ ಸ್ಥಾಪಿತವಾಗಿತ್ತು.

ಶ್ರೀ ವೃದ್ಧ ಉಗ್ರ ನರಸಿಂಹಭಾರತೀಗಳವರ ನಂತರ ನಾಸಿಕಕ್ಕೆ ಯಾರೂ ಭೇಟಿ ಕೊಟ್ಟಿರಲಿಲ್ಲ. ಸುಮಾರು ಶತಮಾನದ ನಂತರ ದಯಮಾಡಿಸುತ್ತಿದ್ದ ಶ್ರೀ ಶ್ರೀಗಳವರನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಾಗತಿಸಲು ಅಸಂಖ್ಯಾತ ಜನಸ್ತೋಮವು ಸೇರಿದ್ದು ಅವರನ್ನು ಭವ್ಯವಾದ ಮೆರವಣಿಗೆಯಲ್ಲಿ ಬಿಜಯಮಾಡಿಸುವ ವ್ಯವಸ್ಥೆ ನಾಸಿಕದಲ್ಲಿ ನಡೆದಿತ್ತು. ಆದರೆ ಗುರುಗಳವರು ಬೇರೊಂದು ಮಾರ್ಗದಿಂದ ಕ್ಷೇತ್ರಕ್ಕೆ ಆಗಮಿಸಿಬಿಟ್ಟಿದ್ದರು. ನಾಸಿಕದ ಭದ್ರಕಾಳಿ ಮಂದಿರ, ದಕ್ಷಿಣ ಭಾರತೀಯ ಸಾಂಸ್ಕೃತಿಕ ಸಂಘ, ನಗರ ಗ್ರಂಥಾಲಯ ಮುಂತಾದವುಗಳಿಗೆ ಶ್ರೀ ಶ್ರೀಗಳವರು ಭೇಟಿಯಿತ್ತರು. ಗುರುಗಳವರ ಸಂದರ್ಶನದ ನೆನಪಿಗಾಗಿ ನಗರ ಗ್ರಂಥಾಲಯದಲ್ಲಿ ಅವರ ಪವಿತ್ರ ನಾಮವನ್ನು ಅಮೃತ ಶಿಲೆಯಲ್ಲಿ ಕೆತ್ತಿಸಿ ಸ್ಥಾಪಿಸಲಾಯಿತು. ಸಂಸ್ಕೃತ, ಹಿಂದೀ ಭಾಷೆಗಳಲ್ಲಿ ಬಿನ್ನವತ್ತಳೆಯನ್ನು ಒಪ್ಪಿಸಲಾಯಿತು. ಶ್ರೀ ಶ್ರೀಗಳವರು ನಾಸಿಕದ ಎಲ್ಲಾ ದೇವಾಲಯಗಳಲ್ಲೂ ಪೂಜಾದಿಗಳನ್ನು ನೆರವೇರಿಸಿ, ತ್ರ್ಯಯಂಬಕೇಶ್ವರಕ್ಕೆ ದಯಮಾಡಿಸಿ ಕುಶಾವರ್ತ ತೀರ್ಥದಲ್ಲಿ ಸ್ನಾನಮಾಡಿದರು. ಶ್ರೀ ತ್ರ್ಯಯಂಬಕೇಶ್ವರನನ್ನು ಅಷ್ಟೋತ್ತರಶತ ರಜತ ಪುಷ್ಪಗಳಿಂದ ಪೂಜಿಸಿದರು. ಅಲ್ಲಿಯೂ ಸಂಸ್ಕೃತದಲ್ಲಿ ಬಿನ್ನವತ್ತಳೆಯನ್ನು ಒಪ್ಪಿಸಲಾಯಿತು. ಅನಂತರ ನಾಸಿಕಕ್ಕೆ ಹಿಂದಿರುಗಿದ ಶ್ರೀ ಶ್ರೀಗಳವರನ್ನು ನಾಗರಿಕರು ದರ್ಶನಮಾಡಿ ಕಪಿಲೇಶ್ವರ ದೇವಸ್ಥಾನಕ್ಕೆ ದಯಮಾಡಿಸಬೇಕೆಂದೂ, ತಾವು ಉತ್ಸವದಲ್ಲಿ ಶ್ರೀ ಶ್ರೀಗಳವರ ದರ್ಶನಮಾಡಲು ಉತ್ಸುಕರಾಗಿರುವುದಾಗಿಯೂ ಪ್ರಾರ್ಥಿಸಿಕೊಂಡರು. ಗುರುಗಳು ಅವರ ಅಪೇಕ್ಷೆಯನ್ನು ನೆರವೇರಿಸಿ ಶ್ರೀ ಶಂಕರಮಠದಿಂದ ಭವ್ಯವಾದಮೆರವಣಿಗೆಯಲ್ಲಿ ಕಪಿಲೇಶ್ವರ ದೇವಸ್ಥಾನಕ್ಕೆ ಆಗಮಿಸಿ ಶ್ರೀ ಸ್ವಾಮಿಯನ್ನು ಪೂಜಿಸಿದರು. ಅನಂತರ ಉತ್ಸವದಲ್ಲಿಯೇ ಬಿಡಾರಕ್ಕೆ ದಯಮಾಡಿಸಿದರು. ಆ ಉತ್ಸವದಲ್ಲಿ ಹತ್ತು ಸಹಸ್ರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾವುಕರೂ ಪಾಲ್ಗೊಂಡಿದ್ದರು. ಶ್ರೀ ಶ್ರೀಗಳವರು ನಾಸಿಕದಿಂದ ಹೊರಟು ಕಲ್ಯಾಣದ ಮೂಲಕ ಬೊಂಬಾಯಿ ಮಹಾನಗರಕ್ಕೆ ದಯಮಾಡಿಸಿದರು.

೩೦. ಮರಳಿ ಶೃಂಗಾದ್ರಿಗೆ

ಬೊಂಬಾಯಿ ಮಹಾನಗರದಲ್ಲಿ ಶ್ರೀ ಶ್ರೀಗಳವರ ಸ್ವಾಗತಕ್ಕೆ ವಿಶೇಷವಾದ ಏರ್ಪಾಡು ನಡೆದಿತ್ತು. ಡಾ|| ಕೆ. ಎಂ. ಮುನ್ಷಿಯವರ ಅಧ್ಯಕ್ಷತೆಯಲ್ಲಿ ಪ್ರಭಾವಶಾಲಿಯಾಗಿದ್ದ ಸ್ವಾಗತಸಮಿತಿಯು ಏರ್ಪಾಡಾಗಿತ್ತು. ಮಹಾರಾಷ್ಟ್ರ ವಿಧಾನ ಮಂಡಲ ಮತ್ತು ವಿಧಾನ ಸಭೆಯ ಅಧ್ಯಕ್ಷರುಗಳೂ ವಿಶ್ವವಿದ್ಯಾನಿಲಯದ ಉಪಕುಲಪತಿಯೂ, ರಾಜ್ಯದ ಸಂಗೀತ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆ ಸಮಿತಿಯಲ್ಲಿದ್ದು ಸೇವೆಸಲ್ಲಿಸಿದರು. ಶ್ರೀ ಶ್ರೀಗಳವರನ್ನು ಸ್ವಾಗತಿಸಲು ಅನೇಕ ಜನ ಮಹಾವಿದ್ವಾಂಸರೂ ಜನನಾಯಕರೂ ಸುತ್ತ ಮುತ್ತಣ ಸ್ಥಳಗಳಿಂದ ಆಗಮಿಸಿದ್ದರು. ವಿದರ್ಭದ ಮಹಾನಾಯಕ ಡಾ|| ಎಮ್. ಎಸ್. ಆಣೆಯವರೂ ಗುರುಗಳನ್ನು ಸ್ವಾಗತಿಸುವುದಕ್ಕಾಗಿಯೇ ನಾಗಪುರದಿಂದ ಆಗಮಿಸಿ ಸ್ವಾಗತ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀಗಳವರು ಘಟಕೋಪರ್ ಹಿಂದೂಸಭೆಯ ಸಮೀಪಕ್ಕೆ ಬರುತ್ತಿದ್ದಂತೆಯೇ ಅಸಂಖ್ಯಾತ ಜನ ' ಸದ್ಗುರು ಮಹಾರಾಜಕೀ ಜೈ ', ' ಶಂಕರ ಗುರೂಜಿಕೀ ಜೈ 'ಎಂಬ ಜಯಘೋಷಗಳನ್ನು ಮಾಡುತ್ತಾ ಆನಂದೋದ್ಗಾರಗಳಿಂದ ಸ್ವಾಗತಿಸಿದರು. ಶ್ರೀ ಶ್ರೀಗಳವರನ್ನು ಷಣ್ಮುಖಾನಂದ ಸಭೆಯ ವಿಶಾಲವಾದ ಉಪನ್ಯಾಸ ಮಂದಿರಕ್ಕೆ ಬಿಜಯ ಮಾಡಿಸಲಾಯಿತು. ಅಲ್ಲಿ ಅವರಿಗೆ ಅತ್ಯಂತ ಭಕ್ತಿಶ್ರದ್ಧೆಯಿಂದ ಬಿನ್ನಹ ಪತ್ರವನ್ನು ಒಪ್ಪಿಸಿ ಚಾತುರ್ಮಾಸ್ಯ ವ್ರತವನ್ನೂ ನವರಾತ್ರಿ ಉತ್ಸವವನ್ನೂ ಬೊಂಬಾಯಿಯಲ್ಲಿಯೇ ನಡೆಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು. ಶ್ರೀ ಶ್ರೀಗಳವರು ಪ್ರತ್ಯುತ್ತರಕೊಡುತ್ತಾ " ಶ್ರೀ ಶಂಕರ ಭಗವತ್ಪಾದರ ಏಕೈಕ ಧ್ಯೇಯವೆಂದರೆ ಮಾನವ ಜೀವನಕ್ಕೆ ಒಂದುನಿಶ್ಚಿತ ಗುರಿಯನ್ನು ತೋರಿಸುವುದೇ ಆಗಿತ್ತು. ಆ ಗುರಿಯನ್ನು ಮುಟ್ಟುವ ಮಾರ್ಗವನ್ನೂ ಶ್ರೀ ಭಗವತ್ಪಾದರು ತೋರಿಸಿಕೊಟ್ಟರು. ಆ ಗುರಿಯನ್ನು ತಲುಪಿದಾಗ ಸುಖ ಮತ್ತು ಶಾಂತಿಗಳೆರಡೂ ಲಭ್ಯವಾಗುತ್ತವೆ ; ಎಂಬುದನ್ನು ಆಚಾರ್ಯರು ಸಾರಿ ಸಾರಿ ಘೋಷಿಸಿದರು. ಅದಕ್ಕೆ ಮಾನವರಿಗೆ ಇರಬೇಕಾದ ಅರ್ಹತೆಯೆಂದರೆ ಅಜ್ಞಾನ ದುರಾಸೆ ಮತ್ತು ಅಸೂಯೆಗಳನ್ನು ತ್ಯಾಗಮಾಡುವುದು. ಹದಿಮೂರು ಶತಮಾನಗಳ ಹಿಂದೆ ಶ್ರೀ ಭಗವತ್ಪಾದರು ಧರ್ಮಕ್ಕೆ ಬಂದಿದ್ದ ವಿಪತ್ತನ್ನೆಲ್ಲಾ ನಿವಾರಿಸಿ ಸನಾತನ ಧರ್ಮವನ್ನು ಬಲವಾದ ಅಡಿಪಾಯದ ಮೇಲೆ ನಿಲ್ಲಿಸಿ ಷಣ್ಮತಗಳನ್ನು ಸ್ಥಾಪನೆಮಾಡಿ ಭವ್ಯವಾದ ಏಕೈಕ ಭಾರತದ ಭಾವೈಕ್ಯತೆಯನ್ನು ಸಾಧಿಸಿದರು. ದೇಶದ ಯಾವ ಭಾಗದಲ್ಲಿಯೇ ಇರಲಿ, ಯಾವ ನಗರದಲ್ಲಿಯೇ ಇರಲಿ, ಪ್ರತಿ ಭಾರತೀಯನೂ ' ಇದು ನನ್ನ ರಾಷ್ಟ್ರ ನಾವೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು ' ಎಂಬ ಭಾವನೆಯನ್ನು ಬೆಳೆಸಿಕೊಳ್ಳಲು ಆಚಾರ್ಯಪಾದರು ಉಪದೇಶಿಸಿದರು. ಆ ಭಾವನೆಯನ್ನೇ ಇಂದು ನಾವೂ ಬೆಳೆಸಿಕೊಳ್ಳಬೇಕು " ಎಂಬುದಾಗಿ ಶ್ರೀ ಶ್ರೀಗಳವರು ಉಪದೇಶಿಸಿದರು.

ಆ ವರ್ಷದ ಚಾತುರ್ಮಾಸ್ಯ ವ್ರತವು ಬೊಂಬಾಯಿ ನಗರದಲ್ಲಿಯೇ ನೆರವೇರಿತು. (೧೯೬೭) ಗಣಪತಿ ವಿದ್ವತ್ಸಭೆಯಲ್ಲಿ ಪ್ರಖ್ಯಾತರಾದ ಪಂಡಿತರು ವಾಕ್ಯಾರ್ಥವನ್ನು ನಡೆಸಿ ಗುರುದೇವರಿಂದ ಸನ್ಮಾನವನ್ನೂ ಆಶೀರ್ವಾದ ಅನುಗ್ರಹಗಳನ್ನೂ ಪಡೆದರು. ನವರಾತ್ರಿ ಉತ್ಸವಗಳೂ ಬೊಂಬಾಯಿ ಮಹಾನಗರದಲ್ಲಿಯೇ ನಡೆದವು. ಶ್ರೀ ಶ್ರೀಗಳವರ ಐವತ್ತೊಂದನೆಯ ವರ್ಧಂತೀ ಉತ್ಸವವೂ ಅತ್ಯಂತ ವಿಜೃಂಭಣೆಯಿಂದ ಬೊಂಬಾಯಿಯಲ್ಲಿಯೇ ನೆರವೇರಿತು. ಬೊಂಬಾಯಿನ ಅಸಂಖ್ಯಾತ ಭಕ್ತರ ಕೋರಿಕೆಯಂತೆ ಶ್ರೀ ಶ್ರೀಗಳವರ ವರ್ಧಂತಿಯ ಸಮಯದಲ್ಲಿ ಮಹಾರುದ್ರ ಹೋಮವೂ, ನವಗ್ರಹ ಹೋಮವೂ, ಆಯುಷ್ಯಹೋಮವೂ ನೆರವೇರಿಸಲ್ಪಟ್ಟವು. ಶ್ರೀ ಶ್ರೀಗಳವರು ಬೊಂಬಾಯಿಯ ಎಲ್ಲ ವಿಸ್ತರಣಗಳಿಗೂ ಸಂದರ್ಶನವಿತ್ತರು. ಬೊಂಬಾಯಿ ನಾಗರಿಕರು ಶ್ರೀ ಶ್ರೀಗಳವರಿಗೆ ಐವತ್ತು ಸಹಸ್ರ ರೂಪಾಯಿಗಳ ಕಾಣಿಕೆಯನ್ನು ಸಮರ್ಪಿಸಿದರು.

ಬೊಂಬಾಯಿಯಿಂದ ಪ್ರಯಾಣ ಬೆಳಸಿ ಲೋನವಾಲಾಕ್ಕೆ ಬಂದು ಅಲ್ಲಿ ರಾತ್ರಿ ಪೂಜಾದಿಗಳನ್ನು ನೆರವೇರಿಸಿ ಇಂದೂರಿನ ಮುಖಾಂತರ ಪೂನಾ ನಗರಕ್ಕೆ ದಯಮಾಡಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದರು. ಶ್ರೀ ಶ್ರೀಗಳವರು ಶನಿವಾರವಾಡೆ ಎಂಬಲ್ಲಿಗೆ ಬರುವ ವೇಳೆಗೆ ಜನಸಂದಣಿ ಅತ್ಯಧಿಕವಾಗಿ ಗುರುಗಳವರು ಕಾರಿನಿಂದ ಇಳಿಯುವುದೇ ಪ್ರಯಾಸವಾಯಿತು. ಜಯಘೋಷ ಮುಗಿಲನ್ನು ಮುಟ್ಟುತ್ತಿರಲು ಪುಣೆಯ ಮೇಯರ್ ಶ್ರೀ ಘೋರೆಯವರು ಪ್ರಣಾಮ ಪೂರ್ವಕವಾಗಿ ಗುರುಗಳನ್ನು ಸ್ವಾಗತಿಸಿದರು. ಭಜನೆಯ ತಂಡ, ವೇದ ಘೋಷ, ಮಂಗಳವಾದ್ಯಗಳೊಡನೆ ಅಲಂಕೃತವಾದ ಗಜರಾಜ ಮೆರವಣಿಗೆಯ ಮುಂದುಗಡೆ ಹೊರಟಿತ್ತು. ಶ್ರೀ ಶ್ರೀಗಳವರು ಶನಿವಾರಪೇಟೆಗೆ ದಯಮಾಡಿಸಿದರು. ಶ್ರೀ ಶ್ರೀಗಳವರ ಗೌರವಾರ್ಥವಾಗಿ ಶಾರದಾ ಸಂಸ್ಕೃತ ಪತ್ರಿಕೆಯ ವಿಶೇಷ ಸಂಚಿಕೆಯು ಪ್ರಕಟವಾಗಿತ್ತು. ಶ್ರೀ ಶ್ರೀಗಳವರನ್ನು ಸ್ವಾಗತಿಸಲು ೪೫ ಸಂಘಸಂಸ್ಥೆಗಳು ಅತ್ಯದ್ಭುತವಾದ ಸಿದ್ಧತೆಗಳನ್ನು ಮಾಡಿದ್ದವು. ಶ್ರೀ ಶ್ರೀಗಳವರ ಚಂದ್ರಮೌಳೀಶ್ವರ ಪೂಜೆ, ಅವರು ನಡೆಸುತ್ತಿದ್ದ ಉಪನ್ಯಾಸ ಇವುಗಳಿಗೆ ಜನ ಕಿಕ್ಕಿರಿದು ಸೇರುತ್ತಿದ್ದರು. ಪುಣೆಯಲ್ಲಿ ಸಂಸ್ಕೃತ ಭಾಷೆಗೆ ಇರುವ ಪ್ರೋತ್ಸಾಹ, ಜನಗಳಿಗೆ ಆ ಭಾಷೆಯ ಬಗ್ಗೆ ಇರುವ ಗೌರವಾದರ ಇವುಗಳನ್ನು ಕಂಡ ಗುರುಗಳು ಅತ್ಯಾನಂದ ಪಟ್ಟರು. ಪೂನಾ ನಗರದ ಪಂಡಿತ ಮಂಡಲಿಯನ್ನು ಸನ್ಮಾನಿಸಿ ಶ್ರೀ ಶ್ರೀಗಳವರು ಪುಣೆಯಿಂದ ಮುಂದಕ್ಕೆ ಪ್ರಯಾಣವನ್ನು ಮುಂದುವರೆಸಿದರು.

ಕುರ್ದವಾಡಿ, ಶೋಲಾಪುರ, ಉಮರ್ಗಿ, ಹುಮನಾಬಾದ್, ಬೀದರ್‌ಗಳಲ್ಲಿ ಒಂದೊಂದು ದಿನವಿದ್ದು ಅಲ್ಲಿಯ ಭಕ್ತರನ್ನು ಆಶೀರ್ವದಿಸಿ ಶ್ರೀ ಶ್ರೀಗಳವರು ಹೈದರಾಬಾದಿನ ವಿಸ್ತರಣ ನಲಗುಂಡಕ್ಕೆ ದಯಮಾಡಿಸಿದರು. ನಲಗುಂಡದಲ್ಲಿ ಶೃಂಗೇರಿ ಶಂಕರ ಮಠದಲ್ಲಿಯೇ ಬಿಡಾರಮಾಡಿದ ಶ್ರೀ ಶ್ರೀಗಳವರಿಗೆ ಆಂಧ್ರಪ್ರದೇಶದ ಜನರು ಆತ್ಮೀಯ ಸ್ವಾಗತ ನೀಡಿದರು. ತೆಲುಗು, ಸಂಸ್ಕೃತ, ಆಂಗ್ಲ ಭಾಷೆಗಳಲ್ಲಿ ಬಿನ್ನವತ್ತಳೆಗಳನ್ನು ಒಪ್ಪಿಸಿದರು. ಹೈದರಾಬಾದಿನಲ್ಲಿ ಭಕ್ತಿ ಮತ್ತು ಕರ್ಮ ಎಂಬ ವಿಚಾರವಾಗಿ ಹಲವಾರು ಉಪನ್ಯಾಸಗಳನ್ನಿತ್ತರು. ಶ್ರೀ ಶ್ರೀಗಳವರನ್ನು ಬೀಳ್ಕೊಡುವ ಸಮಾರಂಭಕ್ಕೆ ಅಧ್ಯಕ್ಷತೆ ವಹಿಸಿದ್ದ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಶ್ರೀ ಬ್ರಹ್ಮಾನಂದರೆಡ್ಡಿಯವರು ಭಕ್ತಿ ಪೂರ್ವಕವಾಗಿ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು. ಮಂತ್ರಿಗಳಾದ ಶ್ರೀ ರಾಮಲಿಂಗ ರಾಜುರವರು ತಮ್ಮ ಕೃತಜ್ಞತೆಯ ವಂದನೆಗಳನ್ನು ಅರ್ಪಿಸುತ್ತಾ, ಶ್ರೀ ಶ್ರೀಗಳವರು ಆಂಧ್ರಪ್ರದೇಶಕ್ಕೆ ಪದಾರ್ಪಣ ಮಾಡಿದ ನಂತರ ದೇಶದಲ್ಲಿ ಯಥೇಚ್ಛವಾಗಿ ಮಳೆಗರೆದು ಒಳ್ಳೆಯ ಬೆಳೆ ಬಂದು ಸುಭಿಕ್ಷವಾಗಿರುವುದೆಲ್ಲಾ ಇದೆಲ್ಲಾ ಶ್ರೀ ಶ್ರೀಗಳವರ ಅನುಗ್ರಹವೆಂದೇ ತಿಳಿಸಿದರು.

ಶ್ರೀ ಶ್ರೀಗಳವರನ್ನು ರಜಪುಟಾಣಾ ರೈಫಲ್ಸ್‌ನವರು ಆಹ್ವಾನಿಸಿ ಭಕ್ತಿಪೂರ್ವಕವಾಗಿ ಸ್ವಾಗತಿಸಿದರು. ಕರ್ನಲ್ ಹರ್ಬಾನ್ಸ್‌ಸಿಂಗ್‌ರವರು ಪಾದಪೂಜೆಯನ್ನು ನೆರವೇರಿಸಿದರು. ಸೈನ್ಯದ ಎಲ್ಲ ವರ್ಗದ ನೌಕರರೂ ಜಗದ್ಗುರುಗಳವರಿಂದ ಆಶೀರ್ವಾದವನ್ನು ಕೋರಿದರು. ಶ್ರೀ ಶ್ರೀಗಳವರು ... ಒಬ್ಬ ಸಾಮಾನ್ಯ ಗೃಹಸ್ಥನು

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವನವನ್ನು ತ್ಯಾಗಮಾಡಿ ಜ್ಞಾನಾರ್ಜನೆಗಾಗಿ ತಪಸ್ಸುಮಾಡುವಂತೆ ಸೈನಿಕರೂ ಸಹ ತಮ್ಮ ವೈಯಕ್ತಿಕ ಸುಖಸಂತೋಷಗಳನ್ನು ಬದಿಗೊತ್ತಿ ರಾಷ್ಟ್ರಕ್ಕಾಗಿ ತಮ್ಮ ಜೀವನವನ್ನೇ ವಿಾಸಲಿಡುತ್ತಾರೆ. ಇದು ಅತ್ಯಂತ ಶ್ರೇಷ್ಠವಾದ ಕಾಯಕ " ಎಂದು ಅಪ್ಪಣೆ ಕೊಡಿಸಿದರು. ಅನಂತರ ಹಿಮಾಯತ್ ನಗರಕ್ಕೆ ಭೇಟಿಕೊಟ್ಟು ರಾಜಮಹೇಂದ್ರಿ ಮೂಲಕ ಅಂತರ್ವೇದಿಗೆ ದಯಮಾಡಿಸಿದರು. ಅಲ್ಲಿ ಗೀತಾಮಂದಿರಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅನ್ನಾವರಂ ಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿ ಶ್ರೀ ಸತ್ಯನಾರಾಯಣ ಸ್ವಾಮಿಯನ್ನು ಪೂಜಿಸಿ, ವಿಶಾಖಪಟ್ಟಣಕ್ಕೆ ದಯಮಾಡಿಸಿ ಕಾಕಿನಾಡ, ಪಲಾಕೊಲ್ ನುಜುವೀಡ್, ವಿಜಯವಾಡ, ಗುಂಟೂರು, ಕುಂಜಾವರಂ, ತೆನಾಲಿ, ಶ್ರೀಶೈಲಗಳನ್ನು ಸಂದರ್ಶಿಸಿದರು.

ಗುಂಟೂರಿನಲ್ಲಿ ಕಲ್ಯಾಣಮಂಟಪವನ್ನೂ, ಶ್ರೀ ರಾಮನಾಥ ದೇವಾಲಯವನ್ನೂ ಉದ್ಘಾಟಿಸಿದರು. ಶ್ರೀಶೈಲದಲ್ಲಿ ಶ್ರೀ ಮಲ್ಲಿಕಾರ್ಜುನ ಭ್ರಮರಾಂಬಿಕೆಯರನ್ನು ಪೂಜಿಸಿ ಶಂಕರಮಠದಲ್ಲಿ ಶ್ರೀ ಶಂಕರಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಿಸಿದರು. ಅನಂತರ ಉಮಾಮಹೇಶ್ವರಂ ಮೆಹಬೂಬ್ ನಗರಗಳಲ್ಲಿ ಸಂಚರಿಸಿದರು. ಉಮಾಮಹೇಶ್ವರ ದೇವಾಲಯದಲ್ಲಿ ನೂತನ ಧ್ವಜಸ್ತಂಭವನ್ನು ಸ್ಥಾಪಿಸಿ ಮಹಾಲಿಂಗವನ್ನು ಪ್ರತಿಷ್ಠೆ ಮಾಡಿದರು. ಅನಂತರ ಬಿಜಾಪುರ, ಧಾರವಾಡಗಳ ಮೂಲಕ ಶಿವಮೊಗ್ಗಕ್ಕೆ ದಯ ಮಾಡಿಸಿದರು.

ಶಿವಮೊಗ್ಗೆಯಲ್ಲಿ ಶ್ರೀ ಶಂಕರ ಮಠಕ್ಕೆ ಆಸ್ತಿಭಾರವನ್ನು ಹಾಕಿ ಕಡೂರು, ಅರಸೀಕೆರೆ, ತಿಪಟೂರು, ತುಮಕೂರು, ಶಿವಗಂಗೆ, ಯಶವಂತಪುರಗಳ ಮೂಲಕ ಬೆಂಗಳೂರು ನಗರಕ್ಕೆ ದಯಮಾಡಿಸಿದರು. ಭರತಖಂಡವನ್ನೆಲ್ಲಾ ಸಂಚರಿಸಿ ದಿಗ್ವಿಜಯ ಮಾಡಿಕೊಂಡು ಧಾರ್ಮಿಕ ದಿವ್ಯತೆಯನ್ನೂ, ಸಾಂಸ್ಕೃತಿಕ ಐಕ್ಯತೆಯನ್ನೂ, ಭಾರತದ ಭೌಗೋಳಿಕ ಸಮಗ್ರತೆಯನ್ನೂ ಮತ್ತೊಮ್ಮೆ ಶ್ರೀ ಶಂಕರ ಭಗವತ್ಪಾದರಂತೆ ಘೋಷಿಸಿ ದರ್ಶನ ಮಾಡಿಸಿದ ಜಗದ್ಗುರುಗಳನ್ನು ಕರ್ನಾಟಕದ ರಾಜಧಾನಿಯಲ್ಲಿ ನಾಗರಿಕರು ಅತ್ಯಂತ ಉತ್ಸಾಹ, ಸಂಭ್ರಮ, ಭಕ್ತಿ, ವಿಶ್ವಾಸ, ಗೌರವ, ಹೆಮ್ಮೆ, ಆದರಗಳಿಂದ ಸ್ವಾಗತಿಸಿದರು.

ಬೆಂಗಳೂರು ನಗರದಲ್ಲಿ ಶ್ರೀ ಶ್ರೀಗಳವರ ದರ್ಶನಕ್ಕಾಗಿ ಬರುತ್ತಿದ್ದ ಜನಗಳ ಸಂಖ್ಯೆ ಅಪಾರವಾಗಿತ್ತು. ಜನಗಳ ಹರ್ಷ ಸಂತೋಷ ಹೇಳತೀರದಾಗಿತ್ತು. ಗುರುಗಳವರು ಕುಮಾರಾಪಾರ್ಕಿನಲ್ಲಿ ನಿರ್ಮಿತವಾದ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಕುಂಭಾಭಿಷೇಕವನ್ನು ನೆರವೇರಿಸಿದರು. ಶಂಕರಮಠದ ಶ್ರೀ ಶಾರದಾ ಶ್ರೀ ಶಂಕರಾಲಯಗಳಿಗೆ ಗುರುಭಕ್ತರಾಗಿದ್ದ ಶ್ರೀ ಶಿವಸ್ವಾಮಿಯವರು ನೂತನವಾದ ಸುಂದರ ಗೋಪುರಗಳನ್ನು ಮಾಡಿಸಿದ್ದರು. ಶ್ರೀ ಶ್ರೀಗಳವರು ಆ ಗೋಪುರಗಳಿಗೆ ಸುವರ್ಣ ಕಲಶ ಪ್ರತಿಷ್ಠೆಮಾಡಿ ಅನಂತರ ಹಲವಾರು ಗ್ರಾಮ ನಗರಗಳ ಮುಖಾಂತರ ಸ್ವಕ್ಷೇತ್ರವಾದ ಶೃಂಗೇರಿಗೆ ಶ್ರೀ ಶಾರದಾ ಗುರು ಸನ್ನಿಧಿಗೆ ಹಿಂದಿರುಗಿದರು. ಶೃಂಗೇರಿಗೆ ಹಿಂದಿರುಗಿದ ಶ್ರೀ ಶ್ರೀಗಳವರ

Sri Vidyabharathi Book Centre, Sringeri

CC-O. In Public Domain. Digitized by eGangotri

ದರ್ಶನಕ್ಕಾಗಿ ಸುತ್ತಮುತ್ತಣ ತಾಲ್ಲೂಕುಗಳಿಂದ ಸಾವಿರಾರು ಜನ ಆಗಮಿಸಿ ಗುರುವರ್ಯರ ದರ್ಶನ ಪಡೆದರು. ಶೃಂಗೇರಿ ಆಚಾರ್ಯರಲ್ಲಿ ಶ್ರೀ ಶಂಕರಭಗವತ್ಪಾದರ ನಂತರ ಇಷ್ಟೊಂದು ವಿಸ್ತಾರವಾದ ಪರಿವ್ರಾಜ್ಯವನ್ನು ಕೈಗೊಂಡು ಧರ್ಮಪ್ರಸಾರವನ್ನು ನಡೆಸಿದ ಆಚಾರ್ಯ ರೆಂದರೆ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳೊಬ್ಬರೇ. ಶ್ರೀ ಶ್ರೀ ಚಂದ್ರ ಶೇಖರ ಭಾರತೀ ಮಹಾಸ್ವಾಮಿಗಳವರು ಆಗಾಗ ನುಡಿಯುತ್ತಿದ್ದಂತೆ ಶ್ರೀ ವಿದ್ಯಾತೀರ್ಥ ಸ್ವಾಮಿಗಳವರ ನಡೆನುಡಿ, ಶಿಷ್ಯರ ಕಷ್ಟ ದುಃಖಗಳಲ್ಲಿ ಅವರಿಗಿರುವ ಅನುಕಂಪ, ಆರ್ತ ರನ್ನು ರಕ್ಷಿಸುವುದರಲ್ಲಿ ಅವರಿಗಿರುವ ಕಾತರ ಇವೆಲ್ಲವೂ ಶ್ರೀ ಶಿವಾಭಿನವ ನರಸಿಂಹ ಭಾರತೀ ಗಳವರೇ ಪುನಃ ಅವತರಿಸಿರುವರೆಂಬ ನಂಬುಗೆಗೆ ಇಂಬುಗೊಡುತ್ತಿದ್ದವು.

೩೧. ವಾತ್ಸಲ್ಯಮೂರ್ತಿ

ಶ್ರೀ ಶ್ರೀಗಳವರ ದಿವ್ಯ ಸನ್ನಿಧಿಗೆ ಬಂದವರು ತಮ್ಮ ದುಃಖ ಕಷ್ಟ, ಅನಾರೋಗ್ಯ, ಮಾನಸಿಕವಾದ ಒಳತೋಟಿ, ಆರ್ಥಿಕ ತೊಂದರೆಗಳು, ಸಾಂಸಾರಿಕ ಕ್ಲೇಶಗಳು ಪ್ರತಿ ಯೊಂದನ್ನೂ ಬಿನ್ನವಿಸಿಕೊಳ್ಳುತ್ತಾರೆ. ಕೇವಲ ಲೌಕಿಕ ತಾಪತ್ರಯಗಳನ್ನೇ ಶ್ರೀ ಗುರು ಗಳಲ್ಲಿ ಹೇಳಿಕೊಂಡು ಪರಿಹಾರಕ್ಕಾಗಿ ಪ್ರಾರ್ಥಿಸುವ ಬಹಳ ಜನರನ್ನು ಕಂಡು ಹಲವಾರು ಸಾಧಕರು ಬೇಸರಿಸುವುದುಂಟು. ತಮ್ಮ ತಮ್ಮ ತಾಪತ್ರಯವನ್ನೆಲ್ಲಾ ಈ ಜನ ಗುರು ಗಳಲ್ಲಿ ಹೇಳಿಕೊಂಡು ಪರಿಹಾರ ಬೇಡುತ್ತಾರಲ್ಲಾ ಇವರಿಗೆ ಬುದ್ಧಿಯಿಲ್ಲವೇ ? ಧಾರ್ಮಿಕ, ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಸ್ಥಾಪಿತವಾದ ಈ ಪೀಠದ ಆಚಾರ್ಯರಲ್ಲಿ ಸಾಮಾಜಿಕ ಸಮಸ್ಯೆಗಳನ್ನೂ, ಸಾಂಸಾರಿಕ ಕ್ಲೇಶಗಳನ್ನೂ ಈ ಜನ ಹೇಳಿಕೊಳ್ಳುತ್ತಾರಲ್ಲಾ ; ಎಂದು ಹಲವರಿಗೆ ಅಸಮಾಧಾನವಾಗುವುದೂ ಉಂಟು. ಲೌಕಿಕ ಕಷ್ಟ ಪರಿಹಾರವಾಗಿ, ಮನಸ್ಸು ಸಮಾಧಾನಗೊಂಡಾಗ ತಾನೇ ಆಧ್ಯಾತ್ಮಿಕ ಚಿಂತನೆ ಸಾಧನೆಯಲ್ಲಿ ತೊಡಗಲು ಸಾಧ್ಯ ? ಶ್ರೀ ಶ್ರೀಗಳವರು ಎಲ್ಲರಿಗೂ ಮಾತೃಸದೃಶರು. ಪ್ರತಿಯೊಬ್ಬರ ಮನವಿಯನ್ನೂ ಕೇಳುತ್ತಾರೆ. ಪ್ರತಿಯೊಬ್ಬರಿಗೂ ಅವರವರ ಅರ್ಹತೆ ಶಕ್ತಿಗೆ ತಕ್ಕಂತೆ ಪರಿಹಾರ ಸೂಚಿ ಸುತ್ತಾರೆ.

ಆರ್ತರಿಗೆ ಯಂತ್ರವನ್ನೋ ಪ್ರಸಾದವನ್ನೋ ಮಂತ್ರವನ್ನೋ ಅನುಗ್ರಹಿಸುವು ದಲ್ಲದೆ ಅವರೇ ಸುಲಭವಾಗಿ ಮಾಡಬಹುದಾದ ಪೂಜೆ, ಜಪ, ಪಾರಾಯಣ, ಪ್ರಾರ್ಥನೆ ಮುಂತಾದುವನ್ನೂ ಹೇಳಿಕೊಡುತ್ತಾರೆ. ಶ್ರೀ ಗುರುಗಳ ವಚನದಲ್ಲಿ ನಂಬಿಕೆಯಿಟ್ಟು ಅವರು ತೋರಿದ ಮಾರ್ಗದಲ್ಲಿ ನಡೆದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಕೆಲವರಿಗೆ ಬೇಗ ಪ್ರಯೋಜನ ಸಿಕ್ಕಬಹುದು. ಹಲವರಿಗೆ ನಿಧಾನವಾಗಿ ಸಿಕ್ಕಬಹುದು. ಸಂಶಯ ಗ್ರಸ್ತರಿಗೂ, ಅಪನಂಬಿಕೆಯುಳ್ಳವರಿಗೂ, ಕುತರ್ಕಿಗಳಿಗೂ ಯಾವ ಪ್ರಯೋಜನವು ಸಿಕ್ಕುವುದೂ ದುರ್ಲಭ.

ಶ್ರೀ ಶ್ರೀಗಳಗರು ದಕ್ಷಿಣದೇಶದಲ್ಲಿ ಸಂಚಾರ ಮಾಡುತ್ತಿದ್ದರು. ಒಂದು ನಗರದಲ್ಲಿ ಬಿಡಾರ ಮಾಡಿದ್ದಾಗ ಅವರ ದರ್ಶನಕ್ಕಾಗಿ ಕುಟುಂಬವೊಂದು ಬಂದಿತು. ಆ ಕುಟುಂಬದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿರಿಯರು ದೈವಶ್ರದ್ಧೆಯುಳ್ಳವರು, ಸಾತ್ವಿಕರು. ಅವರ ಮೊಮ್ಮಗು ಬಹಳದಿನಗಳಿಂದ ವ್ಯಾಧಿಯಿಂದ ನರಳುತ್ತಿತ್ತು. ಅವರು ತುಂಬಾ ಜಾಗರೂಕರಾಗಿ ಮಗುವನ್ನು ವೈದ್ಯರಸಲಹೆಯಂತೆ ಔಷಧಿ ಪಥ್ಯಗಳಿಂದ ನೋಡಿಕೊಳ್ಳುತ್ತಿದ್ದರು. ಆದರೂ ದಿನೇ ದಿನೇ ಮಗುವಿನ ಆರೋಗ್ಯ ಕ್ಷೀಣಿಸುತ್ತಿತ್ತು. ತಜ್ಞ ವೈದ್ಯರುಗಳಿಗೆಲ್ಲಾ ತೋರಿಸಿ ಅವರು ಹೇಳಿದ ಚಿಕಿತ್ಸೆಗಳನ್ನೆಲ್ಲಾ ಮಾಡಿಸಿಯಾಗಿತ್ತು. ಮಗುವಿನ ಸ್ಥಿತಿ ಚಿಂತಾಜನಕವಾಗಿತ್ತು. ಅದೇ ಸಮಯದಲ್ಲಿ ಶ್ರೀ ಗುರುಗಳವರು ಆ ಊರಿಗೆ ದಯಮಾಡಿಸಿದ್ದರು. ಗುರುಭಕ್ತರಾದ ಆ ಮಗುವಿನ ತಾತ, ಶ್ರೀ ಶ್ರೀಗಳವರ ಸನ್ನಿಧಾನಕ್ಕೆ ಬಂದು ತಮ್ಮ ಮೊಮ್ಮಗುವಿನ ಚಿಂತಾಜನಕ ಸ್ಥಿತಿಯನ್ನು ಬಿನ್ನವಿಸಿದರು. ಶ್ರೀ ಶ್ರೀಗಳವರು ಮಗುವನ್ನು ಹರಿಸಿ, ಉಳಿಸಿ, ಕಾಪಾಡಬೇಕೆಂದು ಪ್ರಾರ್ಥಿಸಿದರು. ಶ್ರೀ ಶ್ರೀಗಳವರು ಶ್ರೀ ಚಂದ್ರಮೌಳೀಶ್ವರ ಪ್ರಸಾದವನ್ನು ಅನುಗ್ರಹಿಸಿ, ಮಗುವಿನ ಪೀಡಾಪರಿಹಾರಕ್ಕಾಗಿ, ಸೂಕ್ತವಾದ ಜಪವೊಂದನ್ನು ಸೂಚಿಸಿ ಅದನ್ನು ಭಕ್ತಿಶ್ರದ್ಧೆಯಿಂದ ನಡೆಸುವಂತೆ ಅಪ್ಪಣೆ ಮಾಡಿದರು. ಅವರ ಆಶೀರ್ವಾದದಿಂದ ಮಗು ಗುಣಹೊಂದಿ, ಆರೋಗ್ಯ ಪೂರ್ಣವಾಗಿ ಬೆಳೆಯಿತು.

ಬಹಳ ಸಾತ್ವಿಕರೂ ಋಜುಸ್ವಭಾವದವರೂ ಆದ ಮೈಸೂರಿನ ಶಿಷ್ಯರೊಬ್ಬರಿಗೆ ಅವರಿಂದ ತುಂಬಾ ಉಪಕಾರ ಹೊಂದಿದ್ದ ಹತ್ತಿರದ ಬಂಧುವೊಬ್ಬರು ಶತ್ರುವಾಗಿ ಪರಿಣಮಿಸಿ ಬಿಟ್ಟಿದ್ದರು. ವಾಮಾಚಾರದ ಮಂತ್ರ-ತಂತ್ರಗಳಿಂದ ಅಭಿಚಾರ ಪ್ರಯೋಗಗಳನ್ನು ಮಾಡಿಸಿ ಅವರಿಗೆ ತುಂಬಾ ಕಿರುಕುಳವನ್ನು ಕೊಡುತ್ತಿದ್ದರು. ಆದರಿಂದ ಆ ವೃದ್ಧರಿಗೂ ಅವರ ಪತ್ನಿಗೂ ಆಗಾಗ ಶಾರೀರಿಕ ಬಾಧೆಗಳುಂಟಾಗುತ್ತಿದ್ದವು. ಅವರಿಬ್ಬರೂ ಅನಾರೋಗ್ಯಪೀಡಿತರಾಗುತ್ತಿದ್ದರು. ಔಷಧಿಪಥ್ಯಗಳಿಂದ ಪ್ರಯೋಜನ ಕಾಣುತ್ತಿರಲಿಲ್ಲ. ಸಾಧುಸ್ವಭಾವದ ಆ ವೃದ್ಧರು, ಅವನಿಗೆ ಪ್ರತಿಯಾಗಿ ತೊಂದರೆಯುಂಟು ಮಾಡದೆ ಧ್ಯಾನ ಜಪಪೂಜಾದಿಗಳಿಂದ ಅಪಾಯಗಳನ್ನು ತಡೆಗಟ್ಟಲು ಯತ್ನಿಸುತ್ತಿದ್ದರು.

ಅವರು ಹುದ್ದೆಯಿಂದ ನಿವೃತ್ತರಾಗಿ ಹಲವಾರು ವರ್ಷಗಳು ಕಳೆದಿದ್ದರೂ, ವಿಶ್ರಾಂತಿವೇತನ ನಿಷ್ಕರ್ಷೆಯಾಗದೆ ಆರ್ಥಿಕ ಮುಗ್ಗಟ್ಟಿನಿಂದಲೂ ಕಷ್ಟಪಡುತ್ತಿದ್ದರು. ಅವರು ರಚಿಸಿದ್ದ ಪಠ್ಯಪುಸ್ತಕವನ್ನು ಪ್ರಕಟಿಸಿದ್ದ, ಪ್ರಕಾಶಕನು ಅವರಿಗೆ ಗ್ರಂಥ ಸಂಭಾವನೆಯನ್ನು ಕೊಡದೆ ತಕರಾರು ಮಾಡುತ್ತಿದ್ದನು. ಈ ಎಲ್ಲಾ ಕಷ್ಟಗಳಿಂದಲೂ ಅವರು ಖಿನ್ನರಾಗಿದ್ದರೂ, ಅವರು ಇವೆಲ್ಲವನ್ನೂ ಧೈರ್ಯದಿಂದ ಎದುರಿಸುತ್ತಲೂ, ಇದ್ದರು. ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ವಿಶೇಷ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದ ಅವರು, ತಮ್ಮ ಕಷ್ಟ ತೊಂದರೆಗಳನ್ನೆಲ್ಲಾ ವಿವರಿಸಿ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥಸ್ವಾಮಿಗಳವರ ಸನ್ನಿಧಿಗೆ ಮನವಿಪತ್ರವನ್ನು ಸಲ್ಲಿಸಿ, ತಮಗೆ ದಾರಿ ತೋರುವಂತೆ ಪ್ರಾರ್ಥಿಸಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀಗಳವರು ಆ ಸಮಯದಲ್ಲಿ ಶೃಂಗೇರಿಯಲ್ಲಿಯೇ ಇದ್ದು ಈ ಶಿಷ್ಯರ ಪತ್ರ ವನ್ನು ಅವಲೋಕನಮಾಡಿದರು. ಅವರ ಕಷ್ಟ ಪರಿಹಾರಕ್ಕಾಗಿ ಶ್ರೀ ಶಾರದಾ ಪ್ರಸಾದ ವನ್ನು ಕಳುಹಿಸಿ, ದೇವೀಸಪ್ತಶತಿಯಲ್ಲಿ ಇರುವ ದಿವ್ಯ ಸ್ತೋತ್ರವೊಂದನ್ನು ಸೂಚಿಸಿ ಅದನ್ನು ನಿತ್ಯವೂ ಪಾರಾಯಣಮಾಡುವಂತೆ ಆದೇಶವಿತ್ತರು. ಆ ವೃದ್ಧರು ಶ್ರೀ ಶ್ರೀ ಗಳವರ ಆಶೀರ್ವಾದ ಪತ್ರ ಪ್ರಸಾದಗಳಿಂದ ಸಂತೋಷಭರಿತರಾದರು. ಅವರಿಗೆ ಧೈರ್ಯವೂ ಮೂಡಿತು. ಪತ್ರವನ್ನೂ ಪ್ರಸಾದವನ್ನೂ ದೇವರ ಮುಂದೆ ಇಟ್ಟು ಸ್ವೀಕರಿಸಿ ಮಾರನೆಯ ದಿನದಿಂದಲೇ ಶ್ರೀ ಶ್ರೀಗಳವರು ಪತ್ರಮುಖೇನ ಉಪದೇಶಿಸಿದ್ದ ಸ್ತೋತ್ರಜಪವನ್ನು ಭಕ್ತಿ ಶ್ರದ್ಧೆಯಿಂದ ಆರಂಭಿಸಿದರು.

ಸ್ವಲ್ಪ ದಿನಗಳಿಗೆಲ್ಲಾ ಅವರ ಸಮಸ್ಯೆಗಳೆಲ್ಲವೂ ಒಂದೊಂದಾಗಿ ಪರಿಹಾರವಾದವು. ಬರಬೇಕಾದ ಹಣವು ಬಂದಿತು. ಅವರ ಆರೋಗ್ಯ ಸುಧಾರಿಸಿತು. ಅವರ ಪತ್ನಿಯ ಆರೋಗ್ಯವೂ ಸುಧಾರಿಸಿತು. ಶ್ರೀ ಶ್ರೀಗಳವರ ಕೃಪೆ, ಶಿಷ್ಯ ವಾತ್ಸಲ್ಯಗಳನ್ನು ಆಗಾಗ ಸ್ಮರಿಸುತ್ತ ಅವರು ತಮ್ಮ ಅನುಭವವನ್ನು ಸ್ನೇಹಿತರಲ್ಲಿ ಹೇಳುತ್ತಿರುತ್ತಾರೆ.

ಶ್ರೀ ಶ್ರೀಗಳವರು ತಮ್ಮ ಉತ್ತರಭಾರತದ ಯಾತ್ರೆಯನ್ನು ಮುಗಿಸಿಕೊಂಡು ಬೆಂಗಳೂರಿಗೆ ದಯಮಾಡಿಸಿದ್ದರು. ಅವರನ್ನು ದರ್ಶನಮಾಡಿ ಅನೇಕ ಜನ ತಮ್ಮ ಶಾರೀರಿಕ, ಮಾನಸಿಕ ಕ್ಲೇಶಗಳನ್ನು ಹೇಳಿಕೊಳ್ಳುತ್ತಿದ್ದರು. ಪ್ರತಿಯೊಬ್ಬರನ್ನೂ ಸಹಾನುಭೂತಿ ಅನುಕಂಪದಿಂದ ಮಾತನಾಡಿಸಿ ಅವರವರಿಗೆ ಸೂಕ್ತವಾದ ಪರಿಹಾರ ಮಾರ್ಗವನ್ನು ಸೂಚಿಸುತ್ತಿದ್ದರು.

ಒಂದು ಸಂಜೆ ಯುವಕನೊಬ್ಬನು ಶ್ರೀ ಶ್ರೀಗಳವರ ದರ್ಶನಕ್ಕೆ ಬಂದನು. ಆತನು ದರ್ಶನಕ್ಕಾಗಿ ಬಹಳ ಹೊತ್ತು ಕಾದಿದ್ದಂತೆ ಅವನನ್ನು ಕಂಡಾಗ ಭಾಸವಾಗು ತ್ತಿತ್ತು. ಗುರುಗಳು ಶಂಕರಮಠದ ಉಪ್ಪರಿಗೆಯಲ್ಲಿ ಕುಳಿತು ಹಲವಾರು ಜನ ಶಿಷ್ಯ ರೊಂದಿಗೆ ಸಂಭಾಷಿಸುತ್ತಿದ್ದರು. ಈ ಯುವಕನು ಗುರುಗಳ ಬಳಿಗೆ ಬಂದು ಕೈಮುಗಿದು ಕುಳಿತನು. ಹತ್ತಿರದಲ್ಲಿಯೇ ಇದ್ದ ಮಠದ ಪುರೋಹಿತರು ಆತನಿಗೆ ಮೈಮೇಲಿದ್ದ ಅಂಗಿ ಯನ್ನೂ, ಒಳಅಂಗಿಯನ್ನೂ ತೆಗೆದು, ಉತ್ತರೀಯವನ್ನು ಹೊದೆದು, ಸಾಷ್ಟಾಂಗ ಪ್ರಣಾಮಮಾಡಬೇಕೆಂದು ಮೊದಲೇ ಪಾಠವನ್ನು ಹೇಳಿಕೊಟ್ಟಿದ್ದರೂ ಅದು ಪ್ರಯೋಜ ನವಾಗಲಿಲ್ಲ. ಆತ ಸೂಚನೆಗಳನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದಂತೆ ಕಾಣಲಿಲ್ಲ. ತೀರಾ ಗುರುಗಳ ಸಮೀಪಕ್ಕೆ ಬಂದಾಗ, ಆ ಹಿರಿಯರು ಆ ಯುವಕನಿಗೆ ಷರಟು ತೆಗೆಯುವಂತೆ ಸಂಜ್ಞೆ ಮಾಡಿದರು. ಅವರ ದೃಷ್ಟಿ ಅತ್ತ ಬೀಳಲೇ ಇಲ್ಲ. ಗುರುದೇವರ ದೃಷ್ಟಿ ಅತ್ತಬಿದ್ದು ಅವರು "ಇರಲಿ ಬಿಡಿ, ಹೊರವೇಷ ಮುಖ್ಯವಲ್ಲ. ಅಂತರಂಗ ನಿಷ್ಕಲ್ಮಷ ವಾಗಿರಬೇಕು" ಎಂದರು. ಆ ಯುವಕನತ್ತ ವಿಶ್ವಾಸ ದೃಷ್ಟಿ ಬೀರಿದರು. ಅವನ ಮುಖದಲ್ಲಿ ಆತನಿಗೇನೋ ಆಂತರಿಕವಾದ ತೊಂದರೆಯಿದೆ ಎನ್ನುವುದು ಸ್ಪಷ್ಟವಾಗು ತ್ತಿತ್ತು. ಗುರುಗಳು ಅದನ್ನೂ ಗುರುತಿಸಿದ್ದರು. ಮೃದುವಾಣಿಯಲ್ಲಿ ಕೇಳಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

"ನಿನ್ನ ಹೆಸರೇನಪ್ಪಾ ?"

ಆತ ಉತ್ತರಿಸಿದ "ಬುದ್ಧ"

ಆ ಹೆಸರು ಕೇಳಿ ಗುರುಗಳಿಗೆ ಆಶ್ಚರ್ಯವಾಯಿತು.

"ಬುದ್ಧ ! ನೀನು ಬೌದ್ಧಮತಕ್ಕೆ ಸೇರಿದವನೇನು ? ಎಂದು ಪ್ರಶ್ನಿಸಿದರು.

"ಅಲ್ಲ ನಾವು ಶ್ರೀವೈಷ್ಣವ ಮತಕ್ಕೆ ಸೇರಿದವರು" ಎಂದು ಆತ ಉತ್ತರಿಸಿದ.

ಗುರುಗಳ ಆಶ್ಚರ್ಯದ, ಮೃದುವಾಣಿಯಿಂದ, "ಶ್ರೀವೈಷ್ಣವರಲ್ಲಿ ಈ ಹೆಸರನ್ನು ಯಾರೂ ಇಡುವುದಿಲ್ಲವಲ್ಲಯ್ಯಾ" ಎಂದರು.

ಆತ ಜಗ್ಗಲಿಲ್ಲ, ತನ್ನ ಹೆಸರು ಬುದ್ಧನೆಂದೇ ವಾದಿಸಿದ.

ಆಗ ಗುರುದೇವರು "ಆದಿರಲಿ, ನಿನ್ನ ಅಜ್ಜಿ ನಿನ್ನನ್ನು ಏನೆಂದು ಕರೆಯುತ್ತಾರೆ?" ಎಂದು ಪ್ರಶ್ನಿಸಿದರು.

ಆತನೆಂದ "ನನ್ನ ಅಜ್ಜಿಯೇನೋ ನನ್ನನ್ನು ಕಣ್ಣಾ ಎಂದು ಕರೆಯುತ್ತಾರೆ."

ಗುರುದೇವರು "ನಿನ್ನನಿಜವಾದ ಹೆಸರು ಕಣ್ಣ ಎಂದು. ಕಣ್ಣ ಎಂದರೆ ಕೃಷ್ಣ ಎಂದರ್ಥ. ಪ್ರಿತಿಗಾಗಿ ಬುದ್ಧ ಎಂದು ಕರೆಯುತ್ತಾರೆ, ಅಲ್ಲವೇ ?" ಎಂದರು.

ಆತ ಹೌದೆಂದು ತಲೆದೂಗಿದ.

ಅನಂತರ ಗುರುದೇವರು ಆತನಿಗಿರುವ ತೊಂದರೆಯೇನೆಂದು ವಿಚಾರಿಸಿದರು. ತಾನು ಬಿ. ಎ., ಎಲ್‌ಎಲ್‌ಬಿ ತೇರ್ಗಡೆಹೊಂದಿ ಪ್ರಸಿದ್ಧ ವಕೀಲರೊಬ್ಬರ ಬಳಿ ಸಹಾಯಕನಾಗಿ ಕೆಲಸಮಾಡುತ್ತಿರುವುದಾಗಿಯೂ, ತನಗೆ ಆಗಾಗ ನಿಷ್ಕಾರಣವಾಗಿ ಮಾನಸಿಕ ಭೀತಿ ಯುಂಟಾಗಿ, ಆರೋಗ್ಯ ಕೆಡುವುದೆಂದೂ, ಮಾನಸಿಕ ತಜ್ಞರಿಂದ ಚಿಕಿತ್ಸೆಪಡೆಯು ತ್ತಿದ್ದರೂ ಪ್ರಯೋಜನವಾಗುತ್ತಿಲ್ಲವೆಂದೂ ಹೇಳಿದನು. ತನ್ನ ಹಿರಿಯ ವಕೀಲರೇ ತನ್ನನ್ನು ಶ್ರೀ ಶ್ರೀಗಳವರ ಬಳಿಗೆ ಹೋಗುವ ಸಲಹೆ ಮಾಡಿದರೆಂದೂ ಬಿನ್ನವಿಸಿದನು,

ಶ್ರೀ ಗುರುಗಳವರು ಆತನ ಸ್ಥಿತಿಯನ್ನು ಕೇಳಿ ಮರುಕಗೊಂಡರು. "ಅಪ್ಪಾ ನಿನಗೆ ಉಪನಯನವಾಗಿದೆಯೇ ?" ಎಂದು ಕೇಳಿದರು.

"ಆತ ಹೌದು ಸ್ವಾಮಿ ನನಗೆ ಉಪನಯನವಾಗಿದೆ" ಎಂದುತ್ತರಿಸಿದ.

"ನೀನು ತಪ್ಪದೆ ಸಂಧ್ಯಾವಂದನೆಯನ್ನು ಮಾಡುತ್ತಿದ್ದೀಯಾ ?" ಎಂದು ಕೇಳಿದರು.

"ಇಲ್ಲ ಯಾವಾಗಾದರೂ ಒಂದೊಂದು ಸಲ ಮಾಡುತ್ತೇನೆ. ಸರಿಯಾಗಿ ಮಾಡುತ್ತಿಲ್ಲವೆಂದು ನನಗೇ ಎನ್ನಿಸುತ್ತಿದೆ." ಎಂದ ಆ ಯುವಕ.

ಆತನ ಪ್ರಾಮಾಣಿಕವಾದ ಉತ್ತರದಿಂದ ಗುರುಗಳಿಗೆ ಸಂತೋಷವಾಯಿತು. ಶ್ರೀ ಶ್ರೀಗಳವರು "ಸಂಧ್ಯಾವಂದನೆಯನ್ನು ತಪ್ಪದೇ ಆಚರಿಸಬೇಕು. ಇದು ಪ್ರತಿಯೊಬ್ಬ ಬ್ರಾಹ್ಮಣನ ಕರ್ತವ್ಯ. ಇದು ಶ್ರೇಯಸ್ಕರವಾದುದು. ಸಂಧ್ಯಾವಂದನೆಯ ಮಂತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಲ್ಲಿ ಮಹೋನ್ನತವಾದ ಶಕ್ತಿಯಡಗಿದೆ. ದೈಹಿಕ, ಮಾನಸಿಕ ಮತ್ತು ಬೌದ್ಧಿಕ ವಿಕಾಸಕ್ಕೆ ಸಂಧ್ಯಾವಂದನೆ ಮಾಡುವುದು ಅತ್ಯಂತ ಅಗತ್ಯವಾದುದು. ಅದರಿಂದ ಶಾಂತಿ ಸಮಾಧಾನವೂ ದೊರಕುತ್ತದೆ. ಆಧ್ಯಾತ್ಮಿಕ ಸಾಧನೆಯ ಮಾರ್ಗವನ್ನೂ ಸುಗಮಗೊಳಿಸುತ್ತದೆ.

" ನೀನು ತಪ್ಪದೆ ಸಂಧ್ಯಾವಂದನೆಯನ್ನು ಮಾಡಬೇಕು. ಆ ಮಂತ್ರಗಳ ಅರ್ಥವನ್ನು ತಿಳಿದು ಸಂಧ್ಯಾವಂದನೆಯನ್ನು ಮಾಡುತ್ತಾ ಬಂದರೆ ನಿನ್ನ ಮಾನಸಿಕ ಭಯ ಭೀತಿಗಳೆಲ್ಲವೂ ನಾಶವಾಗಿ ಮನಸ್ಸಿನಲ್ಲಿ ಧೈರ್ಯ ಉತ್ಸಾಹಗಳು ಮೂಡುತ್ತವೆ. ಶರೀರದ ಆರೋಗ್ಯವೂ ವರ್ಧಿಸುತ್ತದೆ. ನಿನ್ನ ಕೆಲಸಕಾರ್ಯಗಳಲ್ಲಿ ಏಕಾಗ್ರತೆ ನಿಷ್ಠೆಗಳು ಉಂಟಾಗಿ ನೀನು ಅಭಿವೃದ್ಧಿ ಹೊಂದುತ್ತೀಯೆ " ಎಂದು ವಿವರವಾಗಿ ಉಪದೇಶಿಸಿದರು.

ಗುರುವಾಣಿಯಿಂದ ಆತ ಧೈರ್ಯಗೊಂಡು, "ಗುರುಗಳೇ ನನಗೆ ಸಂಧ್ಯಾವಂದನೆಯನ್ನು ಸರಿಯಾಗಿ ಹೇಳಿಕೊಡುವವರು ಯಾರೂ ಇಲ್ಲವಲ್ಲಾ. ನಾನೇನು ಮಾಡಲಿ ?" ಎಂದು ಪ್ರಶ್ನಿಸಿದ.

ಶ್ರೀ ಶ್ರೀಗಳವರು ಆತನನ್ನು ಮಾರನೆಯ ದಿನ ಪ್ರಾತಃಕಾಲ ಸ್ನಾನಾದಿಗಳನ್ನು ಮುಗಿಸಿ, ಶುಚಿಯಾಗಿ ಬರುವಂತೆ ಅಪ್ಪಣೆ ಮಾಡಿದರು. ಮರುದಿನ ಆತನು ಬಂದಾಗ ಸಂಧ್ಯಾವಂದನೆಯ ಕ್ರಮವನ್ನು ಪುರೋಹಿತರ ಮೂಲಕ ತಿಳಿಸಿ ಕೊಟ್ಟು, ಮಂತ್ರಗಳನ್ನು ಆತನಿಂದ ಹೇಳಿಸಿ, ತಪ್ಪುಗಳನ್ನು ತಿದ್ದಿ ಸರಿಪಡಿಸಿದರು. ಇಂತಹ ನಿದರ್ಶನಗಳು ಹೇರಳವಾಗಿವೆ.

ಶ್ರೀ ಶ್ರೀಗಳವರು ಶಿವಮೊಗ್ಗೆಗೆ ಹಲವಾರು ಸಲ ದಯಮಾಡಿಸಿದ್ದಾರಷ್ಟೆ. ಅಲ್ಲಿನ ಶಿಷ್ಯವೃಂದ ಬಹಳ ವಿಸ್ತಾರವಾದುದು. ಬಹಳವಾದುದು ಒಬ್ಬ ಶಿಷ್ಯರು ಅವರ ದರ್ಶನ ಪಡೆಯುತ್ತಿದ್ದರು. ತಮ್ಮ ಧಾರ್ಮಿಕ ಸಮಸ್ಯೆಗಳನ್ನು ಶ್ರೀ ಶ್ರೀಗಳವರ ಮುಂದಿಟ್ಟು ಪರಿಹಾರ ಪಡೆಯುತ್ತಿದ್ದರು. ಆದರೆ ಒಂದರ ಹಿಂದೊಂದರಂತೆ ಎರಡು ಬಾರಿ ಅವರಿಗೆ ಶ್ರೀ ಶ್ರೀಗಳವರಿಂದ ಫಲಮಂತ್ರಾಕ್ಷತೆಯನ್ನು ಪಡೆದುಕೊಳ್ಳಲು ಅವಕಾಶ ಆಗಲಿಲ್ಲ, ಆಫೀಸಿಗೆ ಹೋಗುವ ಆತುರವೂ, ಜನಗಳ ಗದ್ದಲವೂ ಅಡ್ಡ ಬಂದುದರಿಂದ, ಅವರು ಹಾಗೆಯೇ ಹಿಂದಿರುಗಿದ್ದರು.

ಸ್ವಲ್ಪ ದಿನಗಳನಂತರ ಗೃಹಸ್ಥರಿಗೆ ಮೈಯ್ಯಲ್ಲಿ ಆಲಸ್ಯವಾಯಿತು. ಕಛೇರಿಗೆ ಹೋಗಲಾಗಲಿಲ್ಲ. ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದರು. ಅವರ ಮನಸ್ಸಿನಲ್ಲಿ ಎರಡು ಸಲವೂ ಫಲಮಂತ್ರಾಕ್ಷತೆ ಪಡೆಯಲಿಲ್ಲವಲ್ಲಾ ಎಂಬ ಚಿಂತೆ ಕೊರೆಯುತ್ತಲೇ ಇತ್ತು. ಶೃಂಗೇರಿಗೆ ಹೋಗಿಬರೋಣ ಎಂದು ಆಲೋಚಿಸುತ್ತಲೂ ಇದ್ದರು. ಹೀಗೆ ಅನಾರೋಗ್ಯದಿಂದ ಇರುವಾಗಲೇ ಅವರಿಗೆ ಸ್ವಪ್ನದಲ್ಲಿ ಶ್ರೀ ಶ್ರೀಗಳವರ ದರ್ಶನವಾಯಿತು. ಅವರ ತೇಜೋಮಯವಾದ ಮುಖಮಂಡಲವನ್ನು ದರ್ಶಿಸಿದ ಗೃಹಸ್ಥರಿಗೆ ಆನಂದವಾಯಿತು. ಸ್ವಪ್ನದಿಂದ ಎಚ್ಚರವಾದನಂತರವೂ ಅವರು ಗುರುಗಳ ದಿವ್ಯರೂಪವನ್ನೇ ಸ್ಮರಿಸಿಕೊಂಡು ಸಂತೋಷಿಸುತ್ತಿದ್ದರು. ಅವರ ಆರೋಗ್ಯವೂ ಸುಧಾರಿಸಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದಾದ ಸ್ವಲ್ಪ ದಿನಗಳ ನಂತರ ಮತ್ತೊಂದು ಸ್ವಪ್ನ. ಅದೂ ಬೆಳಗಿನ ಜಾವದಲ್ಲಿಯೇ ಕಂಡಿತ್ತು. ಗುರುಗಳವರು ಪ್ರತ್ಯಕ್ಷವಾಗಿ "ಗೃಹಸ್ಥರಿಗೆ ದಿವ್ಯ ಮಂತ್ರವೊಂದನ್ನು ಉಪದೇಶಿಸಿ "ಇದನ್ನು ತಪ್ಪದೆ ಜಪ ಮಾಡುತ್ತಿರು" ಎಂದು ಅಪ್ಪಣೆಮಾಡಿ ಅಂತರ್ಧಾನರಾಗಿದ್ದರು. ಎಚ್ಚರಗೊಂಡಾಗ ಅವರಿಗೆ ಆ ಮಂತ್ರ ಸ್ಪಷ್ಟವಾಗಿ ಸ್ಮರಣೆಗೆ ಬಂದಿತು. ಅವರು ಅಂದಿನಿಂದಲೇ ಇಮಂತ್ರ ಜಪಮಾಡಲು ಪ್ರಾರಂಭಿಸಿದರು.

ಆದರೆ ಅವರಿಗೆ ಒಂದು ಅನುಮಾನ ಮೂಡಿತು. ಆ ಮಂತ್ರದ ಋಷಿ, ಛಂದಸ್ಸು, ನ್ಯಾಸಾದಿಗಳು, ಧ್ಯಾನಶ್ಲೋಕ ಯಾವುದೂ ಉಪದೇಶವಾಗಿರಲಿಲ್ಲ. ಇವನ್ನೆಲ್ಲಾ ತಿಳಿಯುವುದಕ್ಕಾಗಿ ಶೃಂಗೇರಿಗೆ ಹೊರಡಲು ನಿರ್ಧರಿಸಿದರು. ಅದೇ ಸಮಯದಲ್ಲಿ ಅವರಿಗೆ ಒಂದು ಅಪೂರ್ವವಾದ ಗ್ರಂಥ ಸಿಕ್ಕಿತು. ಅದರಲ್ಲಿ ಅವರಿಗೆ ಉಪದೇಶಿಸಲ್ಪಟ್ಟಿದ್ದ ಮಂತ್ರವೂ ಇತ್ತು. ಅದಕ್ಕೆ ಸಂಬಂಧಪಟ್ಟ ಋಷಿ, ಛಂದ ಮುಂತಾದುವೆಲ್ಲವೂ ವಿವರವಾಗಿದ್ದವು. ಎಲ್ಲವನ್ನೂ ಬರೆದಿಟ್ಟುಕೊಂಡರು. ಮೊದಲು ಇವೆಲ್ಲವನ್ನೂ ಶ್ರೀ ಶ್ರೀಗಳವರಲ್ಲಿ ಬಿನ್ನವಿಸಿ ಅನಂತರ ಆಚರಣೆಗೆ ತರಬೇಕೆಂದು ನಿರ್ಧರಿಸಿದರು. ಆ ವೇಳೆಗೆ ಸರಿಯಾಗಿ ಮೈಸೂರಿನಿಂದ ಬಂದಿದ್ದ ಸೆಂಟರೊಡನೆ ಶೃಂಗೇರಿಗೆ ಹೊರಟರು.

ಶ್ರೀ ಶ್ರೀಗಳವರ ದರ್ಶನವಾದನಂತರ ತಾವು ಶೃಂಗೇರಿಗೆ ಬಂದ ಕಾರಣವನ್ನು ಬಿನ್ನವಿಸಿದರು. ಶ್ರೀ ಶ್ರೀಗಳವರು ಮಂದಹಾಸದಿಂದ ಸ್ವಪ್ನದಲ್ಲಿ ಉಪದಿಷ್ಟವಾಗಿದ್ದ ಮಂತ್ರವನ್ನು ಹಾಗೆಯೇ ಜಪಮಾಡಿದರೆ ಸಾಕೆಂದೂ, ಉಳಿದುದಾವುದೂ ಅಗತ್ಯವಿಲ್ಲವೆಂದೂ ಅಪ್ಪಣೆ ಮಾಡಿದರು. "ನೀವು ಯಾವುದಾದರೂ ಕಾಮನೆಗಳನ್ನು ಇಟ್ಟುಕೊಂಡು ಜಪಮಾಡುವಾಗ ಋಷಿ, ದೇವತೆ, ಛಂದಸ್ಸು ಮುಂತಾದುವೆಲ್ಲವನ್ನೂ ಕಟ್ಟುನಿಟ್ಟಾಗಿ ಪಾಲಿಸಬೇಕು. ಅದಿಲ್ಲದೆ ಪರಮಾತ್ಮನ ಪ್ರೀತಿಗಾಗಿ ಜಪಮಾಡುವಾಗ, ಇವಾವುದೂ ಅಗತ್ಯವಿಲ್ಲ" ಎಂದು ಅಪ್ಪಣೆ ಮಾಡಿದರು.

೩೨. ಕಾರುಣ್ಯವಿಗ್ರಹ

ಶ್ರೀ ಶ್ರೀಗಳವರ ಕೃಪೆ, ಅನುಕಂಪೆ ಇವು ಅಪಾರ. ಇವು ಯಾವ ಸಮಯದಲ್ಲಿ ಹೇಗೆ ಶಿಷ್ಯರನ್ನು ಕಾಪಾಡುತ್ತವೆಂಬುದನ್ನು ಹೇಳಲಾಗುವುದಿಲ್ಲ.

ಶೃಂಗೇರಿಯ ಶ್ರೀ ಸುಂದರಘನಪಾಠಿಗಳು ಶ್ರೀ ಶ್ರೀಗಳವರ ಸೇವೆಯಲ್ಲಿಯೇ ಸದಾ ಮಗ್ನರಾಗಿದ್ದವರು. ಶ್ರೀ ಗುರ್ವಾಜ್ಞೆಯನ್ನು ಪಾಲಿಸುವುದರಲ್ಲಿ ಅವರ ಶ್ರದ್ಧಾ ಭಕ್ತಿಗಳು ಇತರರಿಗೆ ಮಾರ್ಗದರ್ಶಿ, ಆದರ್ಶ.

ಒಮ್ಮೆ ಘನಪಾಠಿಗಳು ಮಠದಕೆಲಸದ ಮೇಲೆ ತಿರುಚಿರಾಪಳ್ಳಿಗೆ ಹೋಗಿದ್ದರು, ತಮ್ಮ ಕೆಲಸವಾದ ನಂತರ ಶೃಂಗೇರಿಗೆ ಹಿಂದಿರುಗುವುದಕ್ಕಾಗಿ ಬಸ್‌ನಿಲ್ದಾಣಕ್ಕೆ ಬಂದರು. ಟಿಕೆಟ್‌ಕೊಳ್ಳಲು ಕಿಟಕಿಯ ಬಳಿ ಹೋದಾಗ ಅವರಿಗೆ ಒಂದು ವಿಚಿತ್ರವಾದ ಅನುಭವವಾಯ್ತು. "ಘನಪಾಠಿ ಹೊರಡಬೇಡ" ಎಂದು ಯಾರೋ ಹೇಳಿದಂತಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಮಿಳರ ಈ ಊರಿನಲ್ಲಿ ಕನ್ನಡದ ಮಾತೇ ? ಎಂದು ಆಶ್ಚರ್ಯದಿಂದ, ಹಿಂದಿರುಗಿ ನೋಡಿದರು. ಪರಿಚಯದವರು ಯಾರೂ ಕಾಣಲಿಲ್ಲ. 'ಏನೋ ಭ್ರಮೆ' ಎಂದುಕೊಂಡರು. ಟಿಕೆಟ್ಟನ್ನು ಕೊಂಡು, ಬಸ್ಸಿನ ಸಮೀಪಕ್ಕೆ ಬಂದರು. ಇನ್ನೇನು ಬಸ್ಸನ್ನು ಹತ್ತಬೇಕು, ಪುನಃ ಅದೇ ಪರಿಚಯದ ಧ್ವನಿ ಕೇಳಿಸಿತು, 'ಬೇಡ ಘನಪಾಠಿ ಹೊರಡಬೇಡ' ಎಂಬ ಆದೇಶವಾಣಿ. ಅವರು ಮತ್ತಷ್ಟು ಆಶ್ಚರ್ಯದಿಂದ ಸುತ್ತಲೂ ನೋಡಿದರು. ಗುರುತಿನವರು ಯಾರೂ ಕಾಣಲಿಲ್ಲ. ಬಸ್ಸನ್ನು ಹತ್ತಿ ಕುಳಿತರು. ಪುನಃ ಅದೇ ಮಾತುಗಳು ಕೇಳಿ ಬಂದವು, "ಯಾರಿಗೋ ಹೇಳೋದು ? ಇಳಿ ಕೆಳಕ್ಕೆ ಈಗ ಹೊರಡಬೇಡ" ಎಂಬ ಆಜ್ಞಾವಾಣಿ, ಉಗ್ರವಾದ ಧ್ವನಿ. ಇದನ್ನು ಕೇಳಿದ ಘನಪಾಠಿಗಳ ಮೈ ಭಯದಿಂದ ಬೆವರಿತು. ಅವರಿಗೆ ಅತ್ಯಂತ ವಿಸ್ಮಯವೂ ಆಯಿತು. ಈಗ ಕೇಳಿದ ಧ್ವನಿ ಶ್ರೀ ಶ್ರೀಗಳವರದ್ದೇ ಆಗಿದ್ದು, ಅವರು ತುಂಬಾ ಕೋಪಗೊಂಡಾಗಿನ ಧ್ವನಿಯಾಗಿತ್ತು.

ಘನಪಾಠಿಗಳು ತಕ್ಷಣ ಶ್ರೀ ಗುರುವಾಜ್ಞೆಯೆಂದು ಎದ್ದು, ಬಸ್ಸಿನಿಂದ ಇಳಿದರು. ತಮಗಾದ ಅನುಭವವನ್ನು ಮನಸ್ಸಿನಲ್ಲಿಯೇ ಮೆಲಕು ಹಾಕುತ್ತ ಅಲ್ಲಿಯೇ ಅಡ್ಡಾಡಿದರು. ಅರ್ಧ ಘಂಟೆಯಲ್ಲಿ ಇನ್ನೊಂದು ಬಸ್ ಹೊರಡಲಿತ್ತು. ಅದನ್ನು ಹತ್ತಿ ಕುಳಿತರು. ಈಗ ಯಾವ ವಾಣಿಯೂ ಕೇಳಿ ಬರಲಿಲ್ಲ. ಹೀಗೇಕಾಯಿತೆಂದು ಮನಸ್ಸಿನಲ್ಲಿಯೇ ಇನ್ನೂ ಆಲೋಚಿಸುತ್ತಿದ್ದರು. ಎರಡನೆಯ ಬಸ್ಸು ಹಲವಾರು ಮೈಲಿಗಳಷ್ಟು ದೂರ ಬಂದ ನಂತರ ಇದ್ದಕ್ಕಿದ್ದಂತೆಯೇ ನಿಂತಿತು. ಮೊದಲು ಹೊರಟಿದ್ದ ಬಸ್ಸು ಅಪಘಾತಕ್ಕೆ ಈಡಾಗಿದ್ದುದು ಕಂಡುಬಂದು, ಪ್ರಯಾಣಿಕರೆಲ್ಲರೂ ಚಕಿತರಾಗಿದ್ದರು. ಘನಪಾಠಿಗಳಿಗಂತೂ ಹೇಳಲಾಗದಷ್ಟು ಆಶ್ಚರ್ಯವಾಯಿತು. ಶ್ರೀ ಶ್ರೀಗಳವರ ಪರೋಕ್ಷಜ್ಞಾನವನ್ನೂ, ಶಿಷ್ಯರ ಯೋಗಕ್ಷೇಮದಲ್ಲಿ ಅವರಿಗಿರುವ ನಿರತಿಶಯವಾದ ವಾತ್ಸಲ್ಯವನ್ನೂ ನೆನೆದು ಬಾಷ್ಪಲೋಚನರಾಗಿ, ಶ್ರೀ ಶ್ರೀಗಳವರನ್ನು ಮನಸಾ ಸಾಷ್ಟಾಂಗಪೂರ್ವಕವಾಗಿ ವಂದಿಸಿದರು.

ಇಬ್ಬರು ಭಕ್ತರು ಶ್ರೀ ಶ್ರೀಗಳವರ ದರ್ಶನಮಾಡಲೆಂದು ಶೃಂಗೇರಿಗೆ ಹೋಗಿದ್ದರು. ಹಲವು ದಿನಗಳು ಅಲ್ಲಿಯೇ ಉಳಿದು ಶ್ರೀ ಶ್ರೀಗಳವರ ಸನ್ನಿಧಿಯಲ್ಲಿಯೇ ಇದ್ದರು. ಹೊರಡುವಾಗ ಅಲ್ಲಿಂದ ನೇರವಾಗಿ ತಮ್ಮ ಸ್ವಂತ ಊರಿಗೆ ಹಿಂತಿರುಗುವುದರ ಬದಲು, ಬೆಂಗಳೂರಿಗೆ ಹೋಗುವ ನಿರ್ಧಾರಮಾಡಿ, ಶಿವಮೊಗ್ಗೆಗೆ ಬಂದರು. ರಾತ್ರಿ ೧೨ ಘಂಟೆಯ ಬಸ್ಸನ್ನು ಹತ್ತಿ ಬೆಂಗಳೂರಿನತ್ತ ಹೊರಟರು. ಎಲ್ಲೂ ನಿಲುಗಡೆಯಿಲ್ಲದ ಆ ಬಸ್ಸು ವೇಗವಾಗಿ ಸಾಗುತ್ತಿತ್ತು. ಮಿತ್ರರಿಬ್ಬರೂ ತೂಕಡಿಸುತ್ತಾ, ಎಚ್ಚರವಾದಾಗ ಶೃಂಗೇರಿಯ ಅನುಭವಗಳನ್ನು ಮಾತನಾಡಿಕೊಳ್ಳುತ್ತಾ ಸಾಗಿದ್ದರು. ಬಸ್ಸು ತಿಪಟೂರನ್ನು ದಾಟಿತ್ತು. ಇದ್ದಕ್ಕಿದ್ದಂತೆ ದೊಡ್ಡಶಬ್ದ ಮಾಡುತ್ತಾ ಬಸ್ಸು ತಕ್ಷಣ ಎಡಕ್ಕೆ ಹೋಗಿ ಒಂದು ಮರಕ್ಕೆದುರಾಗಿ ನಿಂತಿತು ! ಎಲ್ಲರೂ ಗಾಬರಿಯಿಂದ ಕೆಳಕ್ಕೆ ಇಳಿದರು. ಬಸ್ಸಿನ ಮುಂಭಾಗದ ಬಲಗಡೆಯ ಟೈರು ಒಡೆದಿತ್ತು. ಎಲ್ಲರಿಗೂ ಆಶ್ಚರ್ಯ !

Sri Vidyabharathi Book Centre, Sringeri

 CC-O. In Public Domain. Digitized by eGangotri

ಯಾವ ಅಪಾಯವೂ ಆಗದೆ ಬಸ್ಸು ನಿಂತಿತಲ್ಲಾ ಎಂದು ! ಡ್ರೈವರಂತೂ ಆಶ್ಚರ್ಯದಿಂದ "ಮುಂದಿನ ಟೈರು ಬರ್ಸ್ಟ್ ಆದರೆ ಗಾಡಿ ಸಿಕ್ಕಿದತ್ತ ತಿರುಗಿ ಆಕ್ಸಿಡೆಂಟ್ ಆಗಬಬೇಕು. ಯಾರೋ ಪುಣ್ಯಾತ್ಮರು ಬಸ್ಸಿನಲ್ಲಿದ್ದು ಎಲ್ಲಾ ಅಪಾಯದಿಂದ ಪಾರಾದೆವು" ಎಂದು ಹೇಳುತ್ತಿದ್ದ. ಶ್ರೀ ಶ್ರೀಗಳವರ ಕೃಪೆಯನ್ನೂ ಆಶೀರ್ವಾದವನ್ನೂ ಪಡೆದಿದ್ದ ಆ ಭಕ್ತರು, ಶ್ರೀ ಗುರುಕೃಪೆಯೇ ಎಲ್ಲರನ್ನೂ ಪಾರುಮಾಡಿತೆಂದು ಶ್ರೀ ಗುರುಗಳನ್ನು ಮನಸಾ ವಂದಿಸಿದರು.

ಕನ್ನಡದ ಲೇಖಕರೊಬ್ಬರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಜೀವನ ಚರಿತ್ರೆಯನ್ನು ರಚಿಸಿದ್ದರು. ಹಸ್ತಪ್ರತಿಯನ್ನು ಶ್ರೀ ಶ್ರೀಗಳವರೇ ಪರಾಂಬರಿಸಿ, ಪುಸ್ತಕವನ್ನು ತುಂಬಾ ಮೆಚ್ಚಿಕೊಂಡು, ಲೇಖಕರನ್ನು ಆಶೀರ್ವದಿಸಿ, ಅನುಗ್ರಹಿಸಿದ್ದರು. ಶ್ರೀ ಶ್ರೀಗಳವರನ್ನು ತಮ್ಮ ಭಾಗದ ದೇವರೆಂದೇ ನಂಬಿದ್ದ ಲೇಖಕರು ಸಮಯ ಸಿಕ್ಕಾಗಲ್ಲೆಲ್ಲಾ ಅವರ ದರ್ಶನಮಾಡಿ ಆಶೀರ್ವಾದ ಪಡೆಯುತ್ತಿದ್ದರು.

ಶ್ರೀ ಗುರುವರ್ಯರು ಒಮ್ಮೆ ಮೈಸೂರು ನಗರಕ್ಕೆ ದಯಮಾಡಿಸಿದ್ದರು. ಅವರ ದರ್ಶನಕ್ಕಾಗಿ ಜನ ಪ್ರತಿನಿತ್ಯವೂ ಸಾಲ್ಗಟ್ಟಿ ಸಾವಿರ ಸಂಖ್ಯೆಯಲ್ಲಿ ಬರುತ್ತಿದ್ದರು. ಶ್ರೀ ಶ್ರೀಗಳವರು ಭರತಖಂಡದ ಬಹುಭಾಗವನ್ನು ಸುತ್ತಿ ಬಂದಿದ್ದ ಸಮಯವದು. ಜನಕ್ಕೆ ಅವರನ್ನು ದರ್ಶನಮಾಡುವ ಉತ್ಸಾಹವಂತೂ ಹೇಳ ತೀರದು. ಶ್ರೀಶಂಕರ ಭಗವತ್ಪಾದರು, ಶ್ರೀ ವಿದ್ಯಾರಣ್ಯರು ಮತ್ತು ಶ್ರೀ ವೃದ್ಧನರಸಿಂಹ ಭಾರತೀ ಸ್ವಾಮಿಗಳವರ ಅನಂತರ ಇಂತಹ ಮಹಾಪರಿವ್ರಾಜ್ಯವನ್ನು ಕೈಗೊಂಡು, ಜನಗಳಲ್ಲಿ ಆಸ್ತಿಕ್ಯವನ್ನೂ, ಧರ್ಮಾಭಿಮಾನವನ್ನೂ ಮೂಡಿಸಿದ್ದ ಈ ಮಹಾನುಭಾವರನ್ನು ಕಾಣಲು, ಇವರ ಉಪದೇಶ ವಾಣಿಯನ್ನು ಕೇಳಲು, ಇವರು ನಡೆಸುವ ಪೂಜಾದಿಗಳನ್ನೂ ನೋಡಲು, ಜನ ತಂಡ ತಂಡವಾಗಿ ಬರುತ್ತಲೇ ಇದ್ದರು. ಒಮ್ಮೆ ಬಂದವರು ಪುನಃ ಪುನಃ ಬರುತ್ತಲೇ ಇದ್ದರು. ದಿನ ದಿನವೂ ಜನಪ್ರವಾಹ ಹೆಚ್ಚುತ್ತಲೇ ಇತ್ತು.

ಈ ಲೇಖಕರು ಈ ಸಲ ಮಾತ್ರ ಶ್ರೀ ಶ್ರೀಗಳವರ ಸನ್ನಿಧಿಗೆ ಹೋಗಲು ಹಿಂಜರಿದರು. ಅವರ ಬಲಗಾಲಲ್ಲಿ ಇಸಬು ಕಾಣಿಸಿಕೊಂಡಿದ್ದು, ಅದು ಇಡೀಪಾದವನ್ನೆಲ್ಲಾ ವ್ಯಾಪಿಸಿತ್ತು. ಅಷ್ಟು ಜನರ ಮಧ್ಯದಲ್ಲಿ ಹೋಗಲು ಅವರಿಗೆ ಸಂಕೋಚವಾಗಿತ್ತು. ಜೊತೆಗೆ ಶ್ರೀ ಶ್ರೀಗಳವರನ್ನು ಜನ ಯಾವಾಗಲೂ ಮುತ್ತಿರುತ್ತಿದ್ದರು. ಸ್ವಲ್ಪವೂ ಬಿಡುವೇ ಕೊಡುತ್ತಿರಲಿಲ್ಲ. ಶ್ರೀ ಶ್ರೀಗಳವರಿಗೆ ತಮಗಾಗಿ ಇದ್ದ ಸಮಯವೆಂದರೆ. ಆಹ್ನಿಕ, ಅನುಷ್ಠಾನ, ಪೂಜೆ, ಭಿಕ್ಷೆ ಇವಿಷ್ಟು ಸಮಯಗಳಲ್ಲಿ ಮಾತ್ರ. ಬೆಳಗಿನ ಜಾವದಲ್ಲಿ ಎದ್ದವರಿಗೆ–ಇಷ್ಟು ಕಾಲ ವಿನಾ–ಉಳಿದೆಲ್ಲ ಕಾಲದಲ್ಲಿಯೂ ರಾತ್ರಿ ಹನ್ನೆರಡು ಗಂಟೆಯಾದರೂ, ಜನ ತಮ್ಮ ತಮ್ಮ ತೊಂದರೆ ತಾಪತ್ರಯಗಳನ್ನು ಹೇಳಿಕೊಳ್ಳುತ್ತಾ ಮುತ್ತಿಕೊಂಡಿರುತ್ತಿದ್ದರು. ಈ ಗುರುಗಳದ್ದು ವಿಶ್ವ ಕುಟುಂಬ, ನಮಗಾದರೆ ನಮ್ಮ ನಮ್ಮ ಸಂಸಾರದ ತಾಪತ್ರಯ ಮಾತ್ರ, ಶ್ರೀ ಗುರುಗಳಿಗೆ ಎಲ್ಲ ಶಿಷ್ಯರ ತಾಪ

Sri Vidyabharathi Book Centre, Sringeri

ತ್ರಯದ ಗಂಟುಗಳನ್ನು ಬಿಚ್ಚುವ ಹೊಣೆಯುಂಟು, ಹೀಗೆಂದು ಕೊಂಡು ಲೇಖಕರು ಶ್ರೀ ಶ್ರೀಗಳವರ ಬಳಿಗೆ ಹೋಗಲೇ ಇಲ್ಲ. ಅವರ ದರ್ಶನ ಪಡೆಯಲೇ ಇಲ್ಲ. ದೂರ ದಿಂದಲೇ ನಮಸ್ಕರಿಸಿ, ಅಷ್ಟರಲ್ಲೇ ತೃಪ್ತರಾಗಬೇಕಾಯಿತು.

ಶ್ರೀ ಶ್ರೀಗಳವರು ಮೈಸೂರಿನಲ್ಲಿ ಇದ್ದಷ್ಟುಕಾಲವೂ ಇವರು ಸಂಜೆಯಲ್ಲಿ ಶಂಕರ ಮಠಕ್ಕೆ ಹೋಗಿ ಅವರ ದರ್ಶನಮಾಡಿ ಮನಸ್ಸಿನಲ್ಲಿಯೇ ವಂದನೆ ಸಮರ್ಪಿಸಿ ಬರುತ್ತಿದ್ದರು

ಶ್ರೀ ಶ್ರೀಗಳವರು ಮೈಸೂರಿನಿಂದ ಪ್ರಯಾಣ ಬೆಳೆಸಿದರು. ನಿತ್ಯವೂ ಅವರ ದರ್ಶನ ಮಾಡುತ್ತಿದ್ದ ಲೇಖಕರು, ಎಂದಿನಂತೆ ಶಂಕರಮಠಕ್ಕೆ ಹೋದರು. ಅವರ ಮನಸ್ಸು ಖಿನ್ನವಾಯಿತು. ಶ್ರೀ ಶ್ರೀಗಳವರನ್ನು ಸಮೀಪದಲ್ಲಿ ದರ್ಶನಮಾಡಲಿಲ್ಲವಲ್ಲಾ ಎಂಬ ಕೊರಗು ಮೂಡಿತು. ಅದು ದಿನೇ ದಿನೇ ಅವರನ್ನು ಕಾಡಿತು. ಮನೆಯಲ್ಲಿ ಆರ್ಥಿಕಮುಗ್ಗಟ್ಟು—ಇದು ಲೇಖಕರೆಲ್ಲರಿಗೂ ಇದ್ದದ್ದೇ - ಶಾರೀರಕಬಾಧೆಗಳು, ಕೆಲಸ ಮಾಡುತ್ತಿದ್ದ ಕಚೇರಿಯಲ್ಲಿಯೂ ಕಿರುಕುಳ, ಎಲ್ಲವೂ ಹೆಚ್ಚಾದವು. ಲೇಖಕರ ಹೆಂಡತಿ, "ನೀವು ನಮ್ಮ ಊರಿಗೆ ಬಂದಿದ್ದ ಶ್ರೀ ಸ್ವಾಮಿಗಳವರನ್ನು ದರ್ಶನ ಮಾಡಲಿಲ್ಲ. ಬೇರೆ ಬೇರೆ ಊರಿನಿಂದ ಜನ ಬಂದು ಅವರದರ್ಶನ ಮಾಡುತ್ತಾರೆ. ನಿಮಗೆ ಮಾತ್ರ ಏನೋ ಸಬೂಬು" ಎಂದು ಆಗಾಗ ಹೇಳುತ್ತಲೇ ಇದ್ದರು.

ಒಂದು ಬೆಳಗಿನ ಜಾವ. ಲೇಖಕರಿಗೆ ಸ್ವಪ್ನ. ಶ್ರೀ ಶ್ರೀಗಳವರು ಮೈಸೂರಿಗೆ ದಯಮಾಡಿಸಿದ್ದಾರೆ. ಶಂಕರಮಠದಲ್ಲಿಯೇ ಬಿಡಾರಮಾಡಿದ್ದಾರೆ. ಎಂದಿನಂತೆ ದೂರದ ದರ್ಶನಕ್ಕೆ ಲೇಖಕರೂ ಹೋಗಿದ್ದಾರೆ. ಲೇಖಕರು ಪಂಚೆಯನ್ನುಟ್ಟು ಅರೆತೋಳಂಗಿ ಯನ್ನುಹಾಕಿ, ಕೈಯಲ್ಲಿ ಛತ್ರಿಯನ್ನು ತೂಗುಹಾಕಿಕೊಂಡು ನಿಂದಿದ್ದಾರೆ. ಇದ್ದಕ್ಕಿದ್ದಂತೆ ಯೇ ಶ್ರೀ ಶ್ರೀಗಳವರು ಬಂದು ಎದುರಲ್ಲಿ ನಿಲ್ಲುತ್ತಾರೆ. ತನ್ನ ಎದುರೇ ಬಂದು ನಿಂತ ಗುರು ಗಳಿಗೆ ನಮಸ್ಕಾರಮಾಡಬೇಕೆನ್ನುವುದೂ ತೋಚದೆ ಲೇಖಕರು ಸಾಮಾನ್ಯವಾಗಿ ಸ್ನೇಹಿತ ರನ್ನು ವಂದಿಸುವಂತೆ, ಕೈಮುಗಿಯುತ್ತಾರೆ. ಶ್ರೀ ಶ್ರೀಗಳವರು ಪಕ್ಕದಲ್ಲಿಯೇ ಇದ್ದ ತಮ್ಮ ಆಪ್ತರಿಗೆ "ನಮ್ಮ- - - - - - ರವರು ಇತ್ತೀಚೆಗೆ ಬಹಳ ನಾಗರಿಕರಾಗಿಬಿಟ್ಟಿದ್ದಾರೆ" ಎಂದಷ್ಟೇ ನುಡಿದು ಹಸನ್ಮುಖದಿಂದ ಲೇಖಕರತ್ತ ಒಮ್ಮೆನೋಡಿ, ಮುಂದಕ್ಕೆ ಹೊರಟು ಬಿಡುತ್ತಾರೆ. ಅಲ್ಲಿಗೆ ಲೇಖಕರ ಕನಸೂ ಕೊನೆಗೊಂಡಿತು. ಅವರು ಜಾಗ್ರದವಸ್ಥೆಗೆ ಹಿಂದಿರುಗಿದಾಗ, ಈ ಕನಸಿನ ಬಗೆಗೆ ವಿಚಾರಮಾಡಿದರು. ಅವರ ಮನಸ್ಸಿನಲ್ಲಿ ಬಹಳ ದಿನಗಳಿಂದ ಕೊರೆಯುತ್ತಿದ್ದ ವಿಚಾರವೇ ಕನಸಿನಲ್ಲಿ ಚಿತ್ರದಂತೆ ಕಾಣಿಸಿಕೊಂಡಿತು ಅಷ್ಟೆ, ಎಂದು ಅವರು ಸಮಾಧಾನಪಟ್ಟುಕೊಂಡರು. ಆದರೂ ಸ್ವಲ್ಪ ಅಳುಕು ಇದ್ದೇ ಇತ್ತು.

ಕಷ್ಟಗಳು ತಪ್ಪಲಿಲ್ಲ. ಒಂದರ ಮೇಲೊಂದರಂತೆ ಬರುತ್ತಲೇ ಇದ್ದವು. ಶೃಂಗೇರಿಗೆ ಹೋಗಿ ಶ್ರೀ ಶ್ರೀಗಳವರ ದರ್ಶನಮಾಡಿ ಬರಬೇಕೆಂದು ಮನೆಯಾಕೆಯ ಒತ್ತಾ ಯವೂ ಹೆಚ್ಚಿತು. ಲೇಖಕರ ಮನಸ್ಸಿಗೂ ಅದು ನಾಟಿತು. ಹೊರಡುವ ನಿರ್ಧಾರ ಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ವಾರ ರಜ ಪಡೆದು, ಪುತ್ತೂರು, ಸುಬ್ರಹ್ಮಣ್ಯ, ಧರ್ಮಸ್ಥಳಗಳ ಮಾರ್ಗ ವಾಗಿ ಶೃಂಗೇರಿಗೆ ಹೊರಟರು. ಪುತ್ತೂರಿನಲ್ಲಿಯೇ ಮೂರು ದಿನ ಹೆಚ್ಚಾಗಿ ನಿಲ್ಲ ಬೇಕಾಯಿತು. ಹಾಗಾಗಿ ಅವರು ಶೃಂಗೇರಿಗೆ ತಲುಪಿದಾಗ ಅವರಿಗೆ ಉಳಿದಿದ್ದು ಎರಡೇ ದಿನ. ಮೂರನೆಯ ದಿನ ಅಲ್ಲಿಂದ ಹೊರಟುಬಿಡಬೇಕಾಗಿತ್ತು. ನಾಲ್ಕನೆಯ ದಿನ ತಮ್ಮ ಕೆಲಸಕ್ಕೆ ಹಾಜರಾಗಬೇಕಾಗಿತ್ತು.

ಲೇಖಕರು ಶ್ರೀ ಶ್ರೀಗಳವರ ದರ್ಶನಕ್ಕೆ ಹೋದಾಗ ಶ್ರೀ ಶ್ರೀಗಳವರು ಅದೇ ತಾನೇ ಆಹ್ನೀಕಾದಿಗಳನ್ನು ಮುಗಿಸಿ ಹೊರಕ್ಕೆ ದಯಮಾಡಿಸಿದ್ದರು. ಅವರ ದರ್ಶನದಿಂದ ಪುಲಕಿತರಾದ ಲೇಖಕರು, ಸಾಷ್ಟಾಂಗ ಪ್ರಣಾಮ ಮಾಡಿ, ತಮ್ಮ ಅಪರಾಧವನ್ನೆಲ್ಲಾ ಮನ್ನಿಸಬೇಕೆಂದು ಮನಸ್ಸಿನಲ್ಲಿಯೇ ಬೇಡಿಕೊಂಡರು. ಶ್ರೀ ಶ್ರೀಗಳವರು ಹಸನ್ಮುಖ ದಿಂದ ಲೇಖಕರನ್ನು ಮಾತನಾಡಿಸಿ ಯೋಗಕ್ಷೇಮವನ್ನು ವಿಚಾರಿಸಿದರು. ಅವರ ಪ್ರಸನ್ನವಾದ ನಾಲ್ಕು ಮಾತುಗಳನ್ನು ಕೇಳಿ ಲೇಖಕರ ಮನಸ್ಸಿನಲ್ಲಿ ಮನೆಮಾಡಿದ್ದ ಕ್ಲೇಶ ದುಗುಡ, ಭಯಗಳೆಲ್ಲವೂ ಓಡಿಹೋದವು. ನೆಮ್ಮದಿಯ ಭಾವ ಮೂಡಿ, ಸಂತೋಷ ವಾಯಿತು. ಲೇಖಕರೊಡನೆ ಅವರ ತರುಣಮಿತ್ರರೂ ಆತನ ಪತ್ನಿಯೂ ಬಂದಿದ್ದು ಶ್ರೀ ಶ್ರೀಗಳವರು ಅವರನ್ನೂ ಮಾತನಾಡಿಸಿದರು. ಆ ನವದಂಪತಿಗಳ ಸಂತೋಷ ಕ್ಕಂತೂ ಪಾರವೇ ಇರಲಿಲ್ಲ. ಅವರಿಬ್ಬರೂ ಅಂದೇ ಹೊರಡಲಿದ್ದುದರಿಂದ ಅವರಿಗೆ ಶ್ರೀ ಶ್ರೀಗಳವರು ಫಲಮಂತ್ರಾಕ್ಷತೆಯನ್ನು ಕೊಟ್ಟು ಆಶೀರ್ವದಿಸಿದರು. ಲೇಖಕರು ತಾವು ಬಂದ ಕೆಲಸವಾಯಿತಲ್ಲ-ಶ್ರೀ ಶ್ರೀಗಳವರ ದರ್ಶನವಷ್ಟೇ ಅವರಿಗೆ ಬೇಕಾಗಿದ್ದುದು ! -ತಮಗೂ ಫಲಮಂತ್ರಾಕ್ಷತೆ ಕೊಡುತ್ತಾರೆಂದು ಭಾವಿಸಿದ್ದರು.

ಆದರೆ ಶ್ರೀ ಶ್ರೀಗಳವರು "ಏನು ನೀವು ಇನ್ನೂ ಎರಡು ಮೂರುದಿನಇರುತ್ತೀರಲ್ಲ? " ಎಂದು ಕೇಳಿದರು.

ಲೇಖಕರು ಬೇರೇನನ್ನೂ ಹೇಳದೆ " ಅಪ್ಪಣೆ " ಎಂದು ನುಡಿದರು !

" ಹಾಗಾದರೆ ಸಂಜೆ ನಾಲ್ಕು ಗಂಟೆಗೆ ಬನ್ನಿ " ಎಂದು ಅಪ್ಪಣೆ ಮಾಡಿದರು.

ಲೇಖಕರು ಮರುಮಾತಾಡದೆ, ಶ್ರೀ ಗುರುಸನ್ನಿಧಿಯಿಂದ ಹೊರಟು, ಅಂಚೆ ಕಛೇರಿಗೆ ಹೋಗಿ, ತಮಗೆ ಇನ್ನೂ ಮೂರು ದಿನ ರಜೆ ಬೇಕೆಂದು ಅರ್ಜಿ ಬರೆದು, ಪೋಸ್ಟ್‌ಮಾಡಿದರು

ಶ್ರೀ ಶ್ರೀಗಳವರ ಸನ್ನಿಧಿಯಲ್ಲಿ ಎರಡು ದಿನಗಳು ಬಲು ಬೇಗ ಕಳೆದುಹೋದವು. ಲೇಖಕರು ರಚಿಸುತ್ತಿದ್ದ ಪುಸ್ತಕಗಳ ಬಗೆಗೆ ಶ್ರೀ ಶ್ರೀಗಳವರು ವಿಚಾರಿಸಿದರು. ಬರೆದಿದ್ದ ಪುಸ್ತಕಗಳನ್ನು ಕುರಿತು ಮೆಚ್ಚುಗೆ ಸೂಚಿಸಿದರು. ಹತ್ತಿರವಿದ್ದವರ ಬಳಿ ಲೇಖಕರ ಬಗ್ಗೆ ಪ್ರಶಂಸೆಯ ಮಾತುಗಳನ್ನು ನುಡಿದರು. ಲೇಖಕರು ನಮ್ರರಾಗಿ ತಲೆಬಾಗಿದರು, ಬರೆ ಯುವ ಶಕ್ತಿ ಕೊಡುವವರೇ ಶ್ರೀ ಶಾರದಾಗುರುಗಳಲ್ಲವೆ ?

ಶೃಂಗೇರಿಗೆ ಬಂದ ಮೂರನೆಯದಿನ ಶ್ರೀ ಶ್ರೀಗಳವರು "ನಿಮಗೆ ಫಲಮಂತ್ರಾಕ್ಷತೆ ಯನ್ನು ಇಂದು ಸಂಜೆಕೊಡುತ್ತೇನೆ " ಎಂದು ನುಡಿದು, ಸಂಜೆಯ ದರ್ಶನಕ್ಕೆ ಹೋದಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಫಲಮಂತ್ರಾಕ್ಷತೆಯನ್ನು ಕೊಟ್ಟು ಆಶೀರ್ವದಿಸಿದರು. ಲೇಖಕರು ಕೃತಜ್ಞತೆಯಿಂದ ತಲೆಬಾಗಿಸಿದರು.

ಲೇಖಕರಿಗೆ, ಇನ್ನೂ ಎರಡು ದಿನ ರಜೆ ಇತ್ತು ಒಂದು ಭಾನುವಾರವೂ ಇತ್ತು. ಮಾರನೆಯ ದಿನ ಕರ್ಕಾಟಕ ಸಂಕ್ರಾಂತಿ, ಪರ್ವದಿನ. ದೇವರ ಪೂಜೆಗಳನ್ನು ಮಾಡಿಸಿ ಲೇಖಕರು, ಅಂದೇ ಮಧ್ಯಾಹ್ನ ಹೊರಟು ಮಾರನೆಯ ಬೆಳಗ್ಗೆ ಬೆಂಗಳೂರಿಗೆ ತಲುಪಿದರು.

ಅಂದು ಬೆಳಗ್ಗೆ ಸ್ನಾನ ಮುಗಿಸಿ ಹೊರಕ್ಕೆ ಬರುತ್ತಿದ್ದಂತೆಯೇ ಲೇಖಕರ ಭಾವ "ಏನು ನೀವು ಒಂದು ಅಪಾಯದಿಂದ ಪಾರಾಗಿಬಿಟ್ಟಿದ್ದೀರಿ" ಎಂದರು. ಲೇಖಕರಿಗೆ ಆಶ್ಚರ್ಯವಾಯಿತು. ಅದೇನೆಂದು ಕೇಳಿದರು. ಅವರ ಭಾವ ಅಂದಿನ ಪತ್ರಿಕೆಯನ್ನು ಕೈಗಿತ್ತರು. ಲೇಖಕರು ಕ್ಯಾಷಿಯರ್ ಆಗಿ ಕೆಲಸಮಾಡುತ್ತಿದ್ದ ಕಛೇರಿಯಲ್ಲಿ, ಒಬ್ಬ ಕೆಳನೌಕರನು ಬಟವಾಡೆಗಾಗಿ ಕೊಟ್ಟಿದ್ದ ಹಣವನ್ನು ಧಸಾವಣೆಮಾಡಿ ಓಡಿಹೋಗಿದ್ದ. ಯಾವ ದಿನವೆಂದು ನೋಡಿದರೆ ಲೇಖಕರು ಕೆಲಸಕ್ಕೆ ಮೊದಲು ಹಾಜರಾಗಬೇಕಾಗಿದ್ದ ದಿನವೇ! ಶ್ರೀ ಶ್ರೀಗಳವರ ಭವ್ಯಚಿತ್ರ ಲೇಖಕರ ಮನಃ ಪಟದಲ್ಲಿ ಮೂಡಿತು. ಎಂತಹ ಕರುಣಾಶಾಲಿಗಳು! ನೌಕರನು ಮಾಡಿದ್ದ ಧಸಾವಣೆಗೆ ಲೇಖಕರು ಹೊಣೆಯಾಗ ಬೇಕಿತ್ತು. ಅವರಿಗಿದ್ದ ಕಷ್ಟಗಳಲ್ಲಿ ತೊಂದರೆಗಳಲ್ಲಿ, ಈ ಕಷ್ಟವೂ ಬಂದು ಸೇರಿದ್ದರೆ ಲೇಖಕರ ಸ್ಥಿತಿ ತೀರಾ ಕೆಡುತ್ತಿತ್ತು. ಶ್ರೀ ಶ್ರೀಗಳವರು ವಾತ್ಸಲ್ಯದಿಂದ ಲೇಖಕರಲ್ಲಿ ದಯೆದೋರಿ ಮೂರು ದಿನಗಳ ಕಾಲ ಶೃಂಗೇರಿಯಲ್ಲಿ ಅವರನ್ನು ನಿಲ್ಲಿಸಿಕೊಳ್ಳುವ ವ್ಯಾಜದಿಂದ, ಮುಂಬರುವ ಅಪಾಯದಿಂದ ಅವರನ್ನು ರಕ್ಷಿಸಿದ್ದರು.

ಶ್ರೀ ವಿದ್ಯಾಸ್ವರೂಪಿಣಿಯಾದ ಶ್ರೀ ಲಲಿತಾಂಬಿಕೆಯ ಸಹಸ್ರನಾಮಗಳಲ್ಲಿ "ಕಾರುಣ್ಯವಿಗ್ರಹಾ" ಎಂಬುದೂ ಒಂದು. ಶ್ರೀವಿದ್ಯಾ ಉಪಾಸಕರಾದ ಶ್ರೀ ಶ್ರೀಗಳವರು-ಅವರು ಶ್ರೀ ವಿದ್ಯಾತೀರ್ಥರೇ ಅಲ್ಲವೇ-ಬಹುಜನ ಭಕ್ತರ ಪಾಲಿಗೆ ಕಾರುಣ್ಯ ವಿಗ್ರಹವೇ, ವಾತ್ಸಲ್ಯಮೂರ್ತಿಯೇ, ಶ್ರೀಮಾತೆಯೇ ಆಗಿದ್ದಾರೆ.

ಶ್ರೀ ಶ್ರೀಗಳವರು ಆಂಧ್ರಪ್ರದೇಶದ ಕೊನಸೀಮೆಯ ಮುಕ್ಕಾಮಲದಲ್ಲಿ ಹಲವಾರು ದಿನಗಳು ಇದ್ದರು. ಅಲ್ಲಿನ ಗಣ್ಯರಾದ ಶ್ರೀ ಬಂಡಾರ್ಲಂಕ ಪೇರಿ ಶರ್ಮರವರ ಮನೆಯಲ್ಲಿ ಪಾದಪೂಜೆ, ಭಿಕ್ಷಾದಿಗಳು ನಡೆದುವು. ಮಧ್ಯಾಹ್ನ ಶ್ರೀ ಶ್ರೀಗಳವರ ಭಿಕ್ಷೆಯಾಯಿತು. ಭಕ್ತಸಮೂಹಕ್ಕೆ ಸಂತರ್ಪಣೆಯೂ ಆಯಿತು. ಶ್ರೀ ಶ್ರೀಗಳವರು ತಮ್ಮ ಭಿಕ್ಷಾನಂತರ ಪಂಡಿತ ಮಂಡಲಿಯಲ್ಲಿ ಸಂಭಾಷಿಸುತ್ತಾ, ಕುಳಿತಿದ್ದರು. ಅವರು ಇದ್ದಕ್ಕಿದ್ದಂತೆಯೇ, ಶ್ರೀ ಶರ್ಮರವರ ಕಡೆಗೆ ತಿರುಗಿ "ಶರ್ಮ, ನೀವು ಈ ವರ್ಷ ಭಾದ್ರಪದಮಾಸ ಕಳೆಯುವವರೆಗೂ, ಕೊನಸೀಮೆ ಬಿಟ್ಟು ಎಲ್ಲಿಗೂ ಹೋಗಬೇಡಿ" ಎಂದು ನುಡಿದರು. ಶ್ರೀ ಗುರುಗಳು ಹಾಗೇಕೆ ಹೇಳಿದರೆಂದು ಯಾರಿಗೂ ಅರ್ಥವಾಗಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಂಧ್ರುದೇಶೀಯ ಅಷ್ಟೋತ್ತರ, ಶತವೇದಪುರುಷರ ವೇದಪಾರಾಯಣವು ಭಾದ್ರಪದ ಮಾಸದಲ್ಲಿ ಕಾಶಿಯಲ್ಲಿ ನಡೆಯಲು ಏರ್ಪಾಡಾಗಿತ್ತು. ಇದಕ್ಕೆ ಪೇರಿ ಶರ್ಮರೂ, ಆಹ್ವಾನಿಸಲ್ಪಟ್ಟರು. ಅವರಿಗೆ ಶ್ರೀ ಶ್ರೀಗಳವರು ಹೇಳಿದ ಮಾತು ಮರೆತುಹೋಗಿತ್ತು, ಸ್ನೇಹಿತರ ಜತೆಯಲ್ಲಿ ಕಾಶಿಗೆ ಹೊರಟರು.

ಕಾಶಿಯಲ್ಲಿ ವೇದಪಾರಾಯಣ ಪರಿಷತ್ತಿನಲ್ಲಿ ಕುಳಿತು ಆನಂದದಿಂದ ಎಂಟು ದಿನ ಗಳ ಕಾಲ ವೇದ ಪಾರಾಯಣವನ್ನು ಕೇಳಿದರು. ವೇದ ಪಂಡಿತರಿಗೆಲ್ಲಾ ಆತಿಥ್ಯವನ್ನು ನೀಡಿದರು. ಯಥಾಶಕ್ತಿ ದಕ್ಷಿಣಾದಿಗಳನ್ನು ಕೊಟ್ಟು ಸತ್ಕರಿಸಿದರು. ನೂರುಜನ ಸಂನ್ಯಾಸಿಗಳಿಗೆ ಭಿಕ್ಷೆಯನ್ನು ಮಾಡಿಸಿದರು. ಗಂಗಾಸ್ನಾನ, ಶ್ರೀ ವಿಶ್ವೇಶ್ವರ, ಶ್ರೀ ಅನ್ನಪೂರ್ಣಾ ದರ್ಶನಾದಿಗಳನ್ನೆಲ್ಲಾ ಮುಗಿಸಿ ಊರಿಗೆ ಹಿಂದಿರುಗಲು ರೈಲುನಿಲ್ದಾಣಕ್ಕೆ ಹೊರಟವರು, ದಾರಿಯಲ್ಲಿ ಇದ್ದಕ್ಕಿದ್ದಂತೆಯೇ ಕುಸಿದು ಹೃದಯ ಸ್ತಂಭನದಿಂದ ನಿಧನ ರಾದರು. ಈ ಬಗ್ಗೆ ಮುನ್ನೆಚ್ಚರಿಕೆಯನ್ನು ಶ್ರೀ ಗುರುಗಳು ಆಷಾಢಮಾಸದಲ್ಲಿಯೇ ನೀಡಿದ್ದರು. ಆದರೆ ಶರ್ಮರು ಅದನ್ನು ಮರೆತು ಅಪಘಾತಕ್ಕೆ ಈಡಾದರು.

೩೩. “ ಜ್ಯೋತಿಃ ಪರಂ ಮ್ಮನ್ವತೇ ”

ಶ್ರೀ ಶ್ರೀಗಳವರು ಮೈಸೂರಿಗೆ ದಯಮಾಡಿಸಿದ್ದರು. ಎಂದಿನಂತೆ ರಾತ್ರಿಯಲ್ಲಿ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ಅವರೇ ಮಾಡುತ್ತಿದ್ದರು. ಸಾವಿರಾರು ಜನ ತದೇಕಚಿತ್ತರಾಗಿ ಶ್ರೀಗುರುಗಳವರು ನಡೆಸುವ ಪೂಜೆಯನ್ನು ನೋಡುತ್ತಿದ್ದರು. ಗುರು ಗಳು ನಡೆಸುವ ಪೂಜೆ ಕಣ್ಣಿಗೂ, ಕಿವಿಗೂ, ಮನಸ್ಸಿಗೂ ಒಂದು ದೊಡ್ಡ ಹಬ್ಬ.

ಅದೇ ಸಂದರ್ಭದಲ್ಲಿ ತಲಕಾಡಿನ ಸಮೀಪವಿರುವ ಮುಡುಕುತೊರೆಯ ನಿವಾಸಿ ಯಾದ ಸಂತರೊಬ್ಬರು ಮೈಸೂರಿಗೆ ಬಂದಿದ್ದರು. ಸರಳಜೀವಿಯೂ ನಿರಾಡಂಬರ ಸ್ವಭಾವದವರೂ ಆದ ಆ ಸಂತರು ತುಂಬಾ ನಿಷ್ಠಾವಂತರು, ಹಲವಾರು ಕಠಿಣ ನಿಯಮ ಗಳನ್ನು ತಮಗೆ ತಾವೇ ಹಾಕಿಕೊಂಡು ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ, ಶ್ರೇಷ್ಠ ಸಾಧಕರು.

ಈ ಸಂತರು ಕಾವೇರಿನದಿಯ ನೀರಿನ ಹೊರತು ಬೇರೆ ಯಾವ ನೀರನ್ನೂ ಮುಟ್ಟು ತ್ತಿರಲಿಲ್ಲ. ಸ್ನಾನಪಾನಕ್ಕೆ ಕಾವೇರಿಯ ಜಲವೇ ಆಗಬೇಕು. ಕಾವೇರಿಯ ನದಿ ಹರಿಯದಿದ್ದ ಅನೇಕ ಊರುಗಳಿಗೆ ಹೋಗಬೇಕಾದಲ್ಲಿ ಈ ಸಂತರು ಅಷ್ಟು ದಿನಗಳ ಕಾಲವೂ ಸ್ನಾನಮಾಡದೆ ಊಟಮಾಡದೆ ಇದ್ದುಬಿಡುತ್ತಿದ್ದರು. ಒಮ್ಮೊಮ್ಮೆ ಏಳೆಂಟು ದಿನಗಳ ಕಾಲ ಉಪವಾಸವಿರಬೇಕಾದ ಪ್ರಸಂಗ ಒದಗುತ್ತಿತ್ತು. ಮೈಸೂರಿಗೆ ಬಂದಾಗ ಅಲ್ಲಿ ಇರುವಷ್ಟು ದಿನವೂ ಪಶ್ಚಿಮವಾಹಿನಿಗೆ ಹೋಗಿ ಅಲ್ಲಿ ಸ್ನಾನಾದಿಗಳನ್ನು ನೆರವೇರಿಸಿ, ಕುಂಭದಲ್ಲಿ ನೀರು ತರುವರು. ಎಲ್ಲರ ಮನೆಯಲ್ಲಿಯೂ ಊಟಮಾಡುವು ದಿಲ್ಲ. ಅವರೆಂತಹ ನಿಷ್ಠಾವಂತ ಬ್ರಾಹ್ಮಣರ ಮನೆಯವರೇ ಆಗಲಿ, ಅವರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸಂತರಿಗೆ ತಮ್ಮ ನಿಯಮಗಳಿಗೆ ಭಂಗ ಬಾರದೆಂಬ ನಂಬಿಕೆ ಉಂಟಾಗಬೇಕು. ತಮಗೆ ಊಟಹಾಕುವವರು ದೈವಭಕ್ತರಾಗಿರಬೇಕು. ಬಾಹ್ಯಾಭ್ಯಂತರದಲ್ಲಿ ಶುಚಿತ್ವವನ್ನು ಪಾಲಿಸಬೇಕು. ಮನೆಯಲ್ಲಿ ಹಸುವನ್ನು ಪೋಷಿಸುತ್ತಿರಬೇಕು. ಅದು ಕರುವನ್ನು ಹೊಂದಿದ್ದ ಹಸುವಾಗಿರಬೇಕು. ಬಾವಿಯ ನೀರಿನಲ್ಲಿ ಅಡಿಗೆ ಮಾಡಬೇಕು. ಧೂಮಪಾನ ಮಾಡಬಾರದು. ನಸ್ಯ ತಂಬಾಕು ಮುಂತಾದುವನ್ನೂ ಉಪಯೋಗಿಸಬಾರದು. ಅವರು ಬ್ರಾಹ್ಮಣೇತರರಾಗಿದ್ದಲ್ಲಿ, ಮಾಂಸಾಹಾರಿಗಳಾಗಬಾರದು. ಇಂತಹುದೇ ಹಲವಾರು ನಿಯಮಗಳನ್ನು ಪಾಲಿಸುವವರ ಮನೆಯಲ್ಲಿ ಈ ಸಂತರಿಗೆ ಊಟ. ಅದೂ ಒಂದು ಹೊತ್ತು ಮಾತ್ರ. ಅಂತಹ ಮನೆಗಳು ಮೈಸೂರು ನಗರದಲ್ಲಿ ಎರಡು ಮೂರು ಮಾತ್ರ ಅವರಿಗೆ ಒಪ್ಪಿತವಾಗಿದ್ದುವು. ಕಾವೇರಿಯಿಂದ ತಂದ ಜಲವನ್ನು ರಂಗೋಲಿಯ ಮಂಡಲದಲ್ಲಿಟ್ಟು, ದೀಪವನ್ನು ಹಚ್ಚಿ, ಜಲ ಕುಂಭಕ್ಕೂ, ದೀಪಕ್ಕೂ, ಪೂಜಿಸುವರು. ಜಲಕುಂಭದಲ್ಲಿ ಪರಾಶಕ್ತಿಯಾದ ಜಗನ್ಮಾತೆಯನ್ನು ಆವಾಹಿಸುವರು. ದೀಪದಲ್ಲಿ ಪರಂಜ್ಯೋತಿ ಸ್ವರೂಪಿಯಾದ ಸೂರ್ಯನಾರಾಯಣನನ್ನು ಆವಾಹಿಸುವರು. ಪೂಜೆ ಆದ ನಂತರ ಅವರ ಊಟ. ಸೂರ್ಯಾಸ್ತಕ್ಕೆ ಮುನ್ನ ಅವರೂಟ. ಸೂರ್ಯಾಸ್ತವಾಯಿತೆಂದರೆ ಯಾವ ಆಹಾರವೂ ಇಲ್ಲ. ದೇವರಿಗೆ ನೈವೇದ್ಯವಾಗದ ಆಹಾರವನ್ನು ಮುಟ್ಟುವುದಿಲ್ಲ. ಒಮ್ಮೊಮ್ಮೆ ಮೋಡ ಕವಿದು ವಾರಗಟ್ಟಲೆ ಸೂರ್ಯ ದರ್ಶನವಾಗದಿದ್ದರೆ ಅಷ್ಟುದಿನಗಳೂ ಉಪವಾಸ. ಊರಿನಿಂದ ದೂರ ಹೋಗಬೇಕಾದಾಗ ಕಾವೇರಿಯ ತೀರಕ್ಕೆ ತಲುಪುವವರೆಗೆ ಸ್ನಾನವೂ ಇಲ್ಲ, ಊಟವೂ ಇಲ್ಲ.

ಈ ಕಠಿಣ ಸಾಧನೆ ಮಾಡುವ ಸಂತರ ಹೆಸರು ಶ್ರೀ ಅವಿನಾಶಿಯಪ್ಪ. ಅವರ ಉಡುಪು ಅತ್ಯಂತ ಸರಳ. ಖಾದಿಯ ದಟ್ಟಿ ಪಂಚೆ, ಮೇಲೊಂದು ವಸ್ತ್ರ. ಹೊಲಿದ ಬಟ್ಟೆಗಳನ್ನು ಧರಿಸರು, ಪಾದರಕ್ಷೆಯನ್ನು ಉಪಯೋಗಿಸರು. ಹಣೆಯಲ್ಲಿ ಅಗಲವಾದ ಗಂಧದ ಬೊಟ್ಟು, ಭಸ್ಮ, ಸ್ವಲ್ಪಕುಂಕುಮ. ವೃತ್ತಿಯಲ್ಲಿ ವಣಿಕರು. ಅಂಗಡಿಯಲ್ಲಿ ಕುಳಿತು ಲಾಭಕ್ಕಾಗಿ ವ್ಯಾಪಾರ ಮಾಡಿದವರಲ್ಲ. ಹೆಸರು ಚೆಟ್ಟಿಯಾರ್ ಆದರೂ ತಮ್ಮ ಆಚಾರ ವಿಚಾರದಿಂದ ಇವರು ಅತ್ಯುನ್ನತ ಮಟ್ಟದ ಸಾಧಕರು. ದಿನಕ್ಕೆ ಮೂರು ನಾಲ್ಕು ಗಂಟೆಗಳ ಕಾಲವಷ್ಟೇ ನಿದ್ರೆ. ಉಳಿದ ಕಾಲವೆಲ್ಲವೂ ಪರಮಾತ್ಮನಚಿಂತನೆಯಲ್ಲಿ ತೊಡಗುವರು. ನೋಡಿದವರಿಗೆ ಹುಚ್ಚರಂತೆ ಕಾಣುವ ಈ ಮಹಾನುಭಾವ ದೇವಿಯ ಮತ್ತು ಸೂರ್ಯನ ಶ್ರೇಷ್ಠ ಆರಾಧಕರು. ಯಾವ ದೇವಸ್ಥಾನಕ್ಕೆ ಹೋದರೂ ದೇವರ ದರ್ಶನ ಮಾಡುತ್ತಾರೆಯೇ ವಿನಾ, ತೀರ್ಥಪ್ರಸಾದ ಸ್ವೀಕರಿಸರು. ಎಲ್ಲೋ ಒಬ್ಬಿಬ್ಬರು ದೇವಾಲಯದ ಅರ್ಚಕರು ಅವಿನಾಶಿಯಪ್ಪನವರ ನಿರೀಕ್ಷೆಯ ಮಟ್ಟಕ್ಕೆ ಮುಟ್ಟಿದವರು ಮಾತ್ರ ಅವರಿಗೆ ತೀರ್ಥಪ್ರಸಾದ ಕೊಡಬಹುದು. ಪರಮತ್ಯಾಗಿಯೂ, ವೈರಾಗ್ಯಶೀಲರೂ, ಆಧ್ಯಾತ್ಮಿಕ ಸಾಧನೆಯಲ್ಲಿ ಸದಾ ನಿರತರೂ ಆದ ಈ ಮಹನೀಯರು ಶ್ರೀ ಜಗದ್ಗುರುಗಳು ಮೈಸೂರಿಗೆ ದಯಮಾಡಿಸಿದ್ದ ಸಂದರ್ಭದಲ್ಲಿಯೇ ತಾವೂ ಮೈಸೂರಿಗೆ ಆಗಮಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಜೆ ಅವಿನಾಶಿಯವರು ತಮ್ಮ ಪರಿಚಯದವರಾದ ಭಾರದ್ವಾಜರ ಮನೆಗೆ ಹೋದರು. ಭಾರದ್ವಾಜರು ಮನೆಯಲ್ಲಿ ಇರಲಿಲ್ಲ. ಮನೆಯವರನ್ನು ವಿಚಾರಿಸಲು "ನಮ್ಮ ಗುರುಗಳಾದ ಶೃಂಗೇರೀ ಶಂಕರಾಚಾರ್ಯರು ಈಗ ಮೈಸೂರಿಗೆ ಬಂದಿದ್ದಾರೆ. ಅವರ ದರ್ಶನಕ್ಕಾಗಿ ಯಜಮಾನರು ಶಂಕರಮಠಕ್ಕೆ ಹೋಗಿದ್ದಾರೆ" ಎಂದು ತಿಳಿಯಿತು. ಅವಿನಾಶಿ ತಾವೂ ಶಂಕರಮಠಕ್ಕೆ ಬಂದರು. ಆಗ ಶ್ರೀ ಶ್ರೀಗಳವರ ಚಂದ್ರಮೌಳೀಶ್ವರ ಪೂಜೆಗೆ ಸಿದ್ಧತೆ ನಡೆಯುತ್ತಿತ್ತು. ಸಾವಿರಾರು ಜನ ಭಕ್ತರು ಚಪ್ಪರದಲ್ಲಿ ಕುಳಿತಿದ್ದರು. ವೈಣಿಕ ಶ್ರೇಷ್ಠರೊಬ್ಬರು ವೀಣಾವಾದನ ಮಾಡುತ್ತಿದ್ದರು. ಅವಿನಾಶಿ ತಮ್ಮ ಮಿತ್ರರಾದ ಭಾರದ್ವಾಜರನ್ನು ಕಾಣಲು ಚಪ್ಪರದಲ್ಲಿ ಸುತ್ತಾಡಿದರು. ಭಾರಧ್ವಾಜರು ವೇದಿಕೆಯ ಸಮಿಾಪದಲ್ಲಿ ವೇದವಿದರಗೋಷ್ಠಿಯ ಸಮೀಪದಲ್ಲಿ ಕುಳಿತಿದ್ದರು.

ಆ ವೇಳೆಗೆ ಶ್ರಿ ಶ್ರಿಗಳವರು ದಯಮಾಡಿಸಲು ಜನವೆಲ್ಲಾ ಎದ್ದು ನಿಂತು ನಮಸ್ಕರಿಸಿದರು. ಅವಿನಾಶಿಯವರೂ ಶ್ರೀ ಗುರುಗಳವರನ್ನು ನೋಡಿದರು. ಆದರೆ ನಮಸ್ಕಾರಮಾಡಲಿಲ್ಲ. ಶ್ರೀ ಗುರುಗಳು ಪೂಜೆಗೆ ಕುಳಿತರು, ವೇದ ಮಂತ್ರಗಳ ಸುಶ್ರಾವ್ಯವಾದ ಪಠಣ ಪ್ರಾರಂಭವಾಯಿತು. ವೇದಘೋಷವನ್ನು ಕೇಳುತ್ತಿದ್ದಂತೆ ಅವಿನಾಶಿಯವರಿಗೆ ಆನಂದವಾಯಿತು. ತದೇಕಚಿತ್ತರಾಗಿ ಪೂಜೆಯಲ್ಲಿ ಮಗ್ನರಾಗಿದ್ದ ಗುರುವರ್ಯರನ್ನು ನೋಡಿ ಸಂತೋಷವಾಯಿತು. ಈ ವಾತಾವರಣದಲ್ಲಿ ದೇವತೆಗಳೇ ಬಂದು ಸೇರಿರಬೇಕೆಂದು ಅವರಿಗನ್ನಿಸಿತು. ಆದರೆ ಇಷ್ಟೊಂದು ಸಾವಿರಾರು ಜನರ ಮಧ್ಯೆ ಕುಳಿತು ಸ್ವಾಮಿಗಳು ಪೂಜೆಮಾಡುವುದೇಕೆ? ತಮ್ಮಷ್ಟಕ್ಕೆ ತಾವು ಏಕಾಂತ ದಲ್ಲಿ ಪೂಜೆಮಾಡಬಾರದೆ? ಕಣ್ಣು ಕೋರೈಸುವ ಈ ವಿದ್ಯುತ್ ದೀಪಗಳ ಪಂಕ್ತಿ ಯೇಕೆ? ತಂಪನ್ನೀಯುವ ಬರೀ ತೈಲ ದೀಪವಿದ್ದರೆ ಸಾಲದೆ? ಇವೆಲ್ಲಾ ಒಂದು ರೀತಿಯ ಪ್ರದರ್ಶನವಲ್ಲವೆ? ಎಂದು ಅವಿನಾಶಿ ಯೋಚನೆ ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ದೀಪಗಳೆಲ್ಲಾ ಆರಿಹೋದವು. ಬಹಳ ಕಾಲ ಬರಲೇ ಇಲ್ಲ.! ಆದರೂ ಪೂಜೆ ನಿಲ್ಲಲಿಲ್ಲ. ಗುರುಗಳ ದೃಷ್ಟಿ ಅತ್ತಿತ್ತ ಚಲಿಸಲಿಲ್ಲ. ಪೂಜೆಯಲ್ಲಿ ಅವರು ತಲ್ಲೀನ ರಾಗಿದ್ದರು. ಅಭಿಷೇಕ ಸೂಕ್ತಗಳ ಘೋಷ ಕತ್ತಲು ಕವಿದ ವಾತಾವರಣದಲ್ಲಿ ಇನ್ನೂ ಸುಶ್ರಾವ್ಯವಾಗಿ ಕೇಳಿಸುತ್ತಿತ್ತು. ಅವಿನಾಶಿಯವರಿಗೆ ಇದೇನು ಸೋಜಿಗ ಎನ್ನಿಸಿತು.

ಪೂಜೆಯೆಲ್ಲಾ ಬೆಳೆದು ದೀಪಾರಾಧನೆಯೂ ಆಯಿತು. ಶ್ರೀ ಶ್ರೀಗಳವರು ನಮಸ್ಕಾರಮಾಡಲು ಅನುವಾಗುವಂತೆ ತೆರೆಯು ಹಾಕಲ್ಪಟ್ಟಿತು. ಅನಂತರ ಪುನಃ ಪೂಜೆಯನ್ನು ಮುಗಿಸಿ ಶ್ರೀ ಶ್ರೀಗಳವರು ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳವರ ಆಲಯದತ್ತ ನಿಧಾನವಾಗಿ ಹೊರಟರು. ಆ ವೇಳೆಗೆ ಪೂಜಾಮಂದಿರ ವಿದ್ದ ಎಡೆಯಲ್ಲಿ ದೀಪಗಳು ಬಂದಿದ್ದು ಅಭಿನವ ಶಂಕರಾಲಯದಲ್ಲಿ ಇನ್ನೂ ದೀಪಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದಿರಲಿಲ್ಲ. ಶ್ರೀ ಶ್ರೀಗಳವರು ಅತ್ತ ಕಡೆ ಹೊರಡುತ್ತಿದ್ದಂತೆಯೇ ಅವಿನಾಶಿಯವರೂ ಅವರ ಹಿಂದೆ ಹೊರಟರು. ನೂರಾರು ಜನರು ಅವರ ಹಿಂದೆ ಅನುಸರಿಸುತ್ತಿದ್ದರು. ಶ್ರೀ ಗುರುಗಳು ದೇವಾಲಯದ ಮೆಟ್ಟಲುಗಳನ್ನೇರಿ ಒಮ್ಮೆ ಪೂರ್ವಾಭಿಮುಖವಾಗಿ ತಿರುಗಿ ನಿಂತರು. ಆ ಕತ್ತಲಲ್ಲಿ ಅವಿನಾಶಿಯವರು ಶ್ರೀ ಶ್ರೀಗಳವರನ್ನು ನೋಡುತ್ತಿದ್ದಂತೆಯೇ ಗುರುವರ್ಯರ ಕಣ್ಣುಗಳಲ್ಲಿ ಅತ್ಯಂತ ಪ್ರಕಾಶಮಾನವಾದ ಜ್ಯೋತಿ ಬೆಳಗಿತು. ಅವಿನಾಶಿ ಮೈಮರೆತರು. ಶ್ರೀ ಗುರುದೇವರು ದೇವಾಲಯದ ಒಳಕ್ಕೆ ದಯಮಾಡಿಸಿದರು.

ಶ್ರೀ ಅವಿನಾಶಿಯವರ ಆರಾಧ್ಯಮೂರ್ತಿ ಶ್ರೀ ಸೂರ್ಯ ಭಗವಾನ್, ಜ್ಯೋತಿಯನ್ನು ಹಚ್ಚಿಟ್ಟು ಅದರಲ್ಲಿ ರವಿದೇವನನ್ನು ಆಹ್ವಾನಿಸಿ ಪೂಜಿಸುತ್ತಾರೆ. ಹಾಗೆಯೇ ಪೂರ್ಣಕುಂಭದಲ್ಲಿ ಶ್ರೀ ದೇವಿಯನ್ನು ಆಹ್ವಾನಿಸಿ ಪೂಜಿಸುತ್ತಾರೆ. ಅಂದು ಶ್ರೀ ಶ್ರೀಗಳವರ ನೇತ್ರಗಳಲ್ಲಿ ತಮ್ಮ ಆರಾಧ್ಯದೈವವಾದ ಸೂರ್ಯನನ್ನು ದರ್ಶನ ಮಾಡಿದ ಅವಿನಾಶಿಯವರ ಆನಂದ ಹೇಳತೀರದು. ಅವಿನಾಶಿಯವರ ಅಂದಿನ ಅನುಭವವನ್ನು ಅವರ ಮಾತಿನಲ್ಲೇ ಆಲಿಸೋಣ. ಅವರು ರಾತ್ರಿ ಎಷ್ಟೋ ಹೊತ್ತಿನನಂತರ ಸ್ನೇಹಿತರಾದ ಭಾರದ್ವಾಜರ ಮನೆಗೆ ಬಂದರು. ಬಹಳ ಹೊತ್ತು ಅವರೊಡನೆ ಮಾತನಾಡುತ್ತಾ "ನಾನು ಶಂಕರಾಚಾರ್ಯರ ವೈಭವ, ಅವರು ಧರಿಸಿದ್ದ ವಸ್ತ್ರಗಳು, ಆ ವಿದ್ಯುತ್‌ದೀಪಗಳ ಸಾಲು, ಅವರ ಹಿಂಬದಿಗೆ ಗಾಳಿ ಬೀಸುತ್ತಿದ್ದ ಫ್ಯಾನು ಇವನ್ನೆಲ್ಲಾ ಕಂಡು, ಈ ಗುರುಗಳು ಏಕೆ ಇಷ್ಟು ವೈಭವದಲ್ಲಿದ್ದಾರೆ ? ಈ ಪ್ರದರ್ಶನವೇಕೆ ? ವಿದ್ಯುತ್‌ದೀಪದ ಬೆಳಕೇಕೆ ? ತಮ್ಮಷ್ಟಕ್ಕೆ ತಾವು ಏಕಾಂತದಲ್ಲಿ ಪೂಜಿಸಬಾರದೆ ? ತಾವು ನಡೆಸುವ ಪೂಜಾಭಿಷೇಕಗಳು ಜನಕ್ಕೇಕೆ ಕಾಣಬೇಕು ? ಎಂದೆಲ್ಲಾ ಮನಸ್ಸಿನಲ್ಲಿಯೇ ಟೀಕೆ ಮಾಡಿಕೊಳ್ಳುತ್ತಿದ್ದೆ. ಇದ್ದಕ್ಕಿದ್ದಂತೆ ದೀಪಗಳೆಲ್ಲಾ ಆರಿಹೋದವು. ಪೂಜೆ ನಿರಾತಂಕವಾಗಿ ಸಾಗುತ್ತಿತ್ತು. ಬ್ರಾಹ್ಮಣರು ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸೇರಿ ಭಕ್ತಿಯಿಂದ ಮಂತ್ರಹೇಳುತ್ತಿದ್ದುದನ್ನು ಕೇಳಿ ಮುಗ್ಧನಾಗಿ ಹೋದೆ. ಈ ಶಂಕರಾಚಾರ್ಯರಿಗೆ ಆಕರ್ಷಣ ಶಕ್ತಿ ಇರದಿದ್ದಲ್ಲಿ ಇಷ್ಟೊಂದು ಜನ ವೇದವಿದರು ಮಂತ್ರ ಘೋಷ ಮಾಡಲು ಇಲ್ಲಿ ಸೇರಲು ಸಾಧ್ಯವೆ ? ಎನ್ನಿಸಿತು. ಸಹಸ್ರ ಸಹಸ್ರ ಜನ ಸೇರಿ ನಿಶ್ಶಬ್ದದಿಂದ ಕುಳಿತುಕೊಳ್ಳುವುದು ಸಾಧ್ಯವೆ ? ಎನ್ನಿಸಿತು. ಅನಂತರ ದೇವಾಲಯಕ್ಕೆ ಶಂಕರಾಚಾರ್ಯರ ಹಿಂದೆಯೇ ನಾನೂ ಅನುಸರಿಸಿ ಹೋದೆ. ಅವರು ಶಂಕರಾಲಯದ ಮೆಟ್ಟಲನ್ನೆಲ್ಲಾ ಹತ್ತಿ ಪೂರ್ವಕ್ಕೆ ನೋಡುತ್ತಾ ಕ್ಷಣಕಾಲ ನಿಂತರು. ನನಗೆ ದಿವ್ಯ ಜ್ಯೋತಿಯ ದರ್ಶನ ಅವರ ನೇತ್ರಗಳಲ್ಲಿ ಕಂಡಿತು. ಪ್ರಕಾಶಮಾನವಾದ ತೇಜಸ್ಸಿನ ಗೋಲವೊಂದು ಸುದರ್ಶನ ಚಕ್ರದಂತೆ ಪರಿಭ್ರಮಣ ಮಾಡುತ್ತಾ ಬಂದು ಅವರ ನೇತ್ರಗಳಲ್ಲಿ ಐಕ್ಯವಾಗಿ ಬಿಟ್ಟಿತು. ನಾನು ಮೈಮರೆತೆ " ಎಂದು ತಮ್ಮ ದಿವ್ಯಾನುಭವವನ್ನು ಹೇಳಿದರು, ಮಹಾನುಭಾವರಾದ ಅವಿನಾಶಿಯಪ್ಪ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಶ್ರೀ ಶ್ರೀಗಳವರು ಪಳನೀಕ್ಷೇತ್ರಕ್ಕೆ ದಯಮಾಡಿಸಿದ್ದರು. ಸ್ವತಃ ಶ್ರೀ ದಂಡಾಯುಧಪಾಣಿಯಾದ ಬಾಲಸುಬ್ರಹ್ಮಣ್ಯಮೂರ್ತಿಗೆ ಅಭಿಷೇಕ ಪೂಜಾದಿಗಳನ್ನು ನಡೆಸಿ ಭಕ್ತರನ್ನು ಆನಂದತುಂದಿಲರನ್ನಾಗಿ ಮಾಡಿದರು. ಬೆಟ್ಟವನ್ನು ಒಂದೊಂದೇ ಮೆಟ್ಟಲಿನಂತೆ ಇಳಿದು ಬರುತ್ತಿದ್ದಂತೆ ಶ್ರೀ ಶ್ರೀಗಳವರನ್ನುದರ್ಶಿಸಿದ ಭಕ್ತವೃಂದಕ್ಕೆ ಅಪೂರ್ವವಾದ ಅನುಭವ ಉಂಟಾಯಿತು. ಕೆಲವರಿಗೆ ಶ್ರೀ ಶ್ರೀಶಿವಾಭಿನವನೃಸಿಂಹ ಭಾರತೀಯವರಂತೆ ಕಾಣಬಂದರು. ಕೆಲವರಿಗೆ ಶ್ರೀ ಶ್ರೀ ಚಂದ್ರಶೇಖರ ಭಾರತೀಯವರಂತೆ ಕಂಡುಬಂದರು. ಕೆಲವರಿಗೆ ದಂಡಾಯುಧಪಾಣಿ ಶ್ರೀ ಸುಬ್ರಹ್ಮಣ್ಯಸ್ವಾಮಿಯಂತೆ ಕಂಡರು. ಬೆಂಗಳೂರಿನ ಶಂಕರಮಠದಲ್ಲಿ ಶ್ರೀ ಶಾರದಾ ಶಂಕರಾಲಯಗಳ ನವಗೋಪುರಗಳಿಗೆ ಶ್ರೀ ಶ್ರೀಗಳವರು ಕಳಶ ಸ್ಥಾಪನೆಮಾಡಿ ಕುಂಭಾಭಿಷೇಕವನ್ನು ನೆರವೇರಿಸಿದಾಗ ಶ್ರೀ ಶ್ರೀಗಳವನ್ನು ದರ್ಶಿಸಿದ ಮೈಸೂರಿನ ಭಕ್ತರೊಬ್ಬರು ಭಾವಾವಿಷ್ಟರಾದರು. ಅವರು ಆಗ ದರ್ಶನಮಾಡಿದ್ದು, ಶ್ರೀ ವಿದಾತೀರ್ಥರನ್ನಲ್ಲ, ಶ್ರೀ ಚಂದ್ರಶೇಖರಭಾರತೀಸ್ವಾಮಿಗಳವರನ್ನು.

ಮೈಸೂರಿನ ಮತ್ತೊಬ್ಬ ಭಕ್ತರು ತಮ್ಮ ಸಂಸಾರದೊಡನೆ ಶೃಂಗೇರಿಗೆ ಹೋಗಿದ್ದರು. ರಾತ್ರಿ ಶ್ರೀಶ್ರೀಗಳವರು ಚಂದ್ರಮೌಳೀಶ್ವರ ಪೂಜೆ ಮಾಡುತ್ತಿದ್ದಾಗ, ಈ ಭಕ್ತರಿಗೆ ಶ್ರೀ ಗುರುಗಳು ಶ್ರೀ ಚಂದ್ರಶೇಖರಭಾರತೀಯರಂತೆ ಕ್ಷಣಕಾಲ ಗೋಚರಿಸಿದರು. ಭಕ್ತರಿಗೆ ಸಂತೋಷದಿಂದ ಪುಲಕಉಂಟಾಯಿತು. ಅವರು ಬೆಂಗಳೂರಿನ ಪ್ರೊ. ಸುಬ್ಬರಾಮಯ್ಯನವರೊಡನೆ ಈ ವಿಚಾರ ತಿಳಿಸುತ್ತಾ "ನೆನ್ನೆ ರಾತ್ರಿ ಶ್ರೀ ಶ್ರೀಗಳವರು ನನಗೆ ಪರಮಗುರುಗಳಂತೆ ಕಂಡರು." ಎಂದು ನುಡಿದರು. ಅದಕ್ಕೆ ಆ ಪ್ರೊಫೆಸರ್‌ರರು " ನನಗೂ ಹಲವು ಸಲ ಹಾಗೆ ಅನುಭವವಾಯಿತು. ನಾನು ಶ್ರೀ ಶ್ರೀಗಳವರೊಡನಯೇ ಒಮ್ಮೆ ಕೇಳಿಬಿಟ್ಟೆ. ಅವರು ಮಾತನಾಡದೆ ನಕ್ಕು ಬಿಟ್ಟರು. ಅನಂತರ ಒಳಕ್ಕೆ ಹೋಗಿ ಹಲವಾರು ಭಾವಚಿತ್ರಗಳನ್ನು ತಂದು ತೋರಿಸಿದರು. ಆ ಚಿತ್ರಗಳನ್ನು ಕಂಡಾಗ ಕೆಲವು ಶ್ರೀ ಶ್ರೀ ಶಿವಾಭಿನವ ನರಸಿಂಹಭಾರತೀಸ್ವಾಮೀಗಳವರಂತೆಯೂ, ಕೆಲವು ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರಂತೆಯೂ ಇದ್ದವು. ಆದರೆ ಅವೆಲ್ಲವೂ ನಮ್ಮ ಗುರುಗಳ ಇತ್ತೀಚಿನ ಭಾವಚಿತ್ರಗಳು " ಎಂದರು. ಶ್ರೀ ಶಂಕರ ಭಗವತ್ಪಾದರಿಂದ ಆರಂಭವಾದ ಶ್ರೀ ಗುರುತತ್ವ ಏಕಪ್ರಕಾರವಾಗಿ ಶೃಂಗೇರಿ ಪೀಠದಲ್ಲಿ ಬೆಳಗುತ್ತಾ ಬಂದಿದೆಯೆಂಬುದು ಇದರಿಂದ ಮನವರಿಕೆ ಆಗುತ್ತದೆಯಲ್ಲವೆ ?

೩೪. ದರ್ಶನದ ಸಾಕಾರಮೂರ್ತಿ

ಹೆರ್ ಮಾಕ್ಸಿಮಿಲಿಯನ್ ವಾನ್ ರೋಚೆಸ್ಟರ್ ಎಂಬ ಜರ್ಮನ್ ಪ್ರವಾಸಿ ಭಾರತಕ್ಕೆ ಬಂದಿದ್ದರು. ಅವರು ಬಂದಿದ್ದುದು ಭಾರತದ-ನೈಜ ಭಾರತದ ಸಂದರ್ಶನಕ್ಕೆ ರೋಚೆಸ್ಟರ್‌ರವರು ವಿದ್ವಾಂಸರಾಗಿದ್ದು ಭಾರತೀಯ ಮೌಲ್ಯಗಳ ಬಗೆಗೆ ತುಂಬಾ ಗೌರವವುಳ್ಳವರಾಗಿದ್ದರು. ಯೋಗ ತತ್ವಶಾಸ್ತ್ರಗಳ ಬಗೆಗೆ ಸಾಕಷ್ಟು ಅಧ್ಯಯನ ಮಾಡಿದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಪ್ರವಾಸಿಗೆ ಇಲ್ಲಿಯ ಜನ ತೋರಿಸಲು ಮುಂದಾದುದು ಆಧುನಿಕವಾಗಿ ಬದಲಾಗುತ್ತಿದ್ದ ಭಾರತದ ಚಿತ್ರವನ್ನು. ಆದರೆ ಆತ ಕೈಗಾರಿಕಾ ಮತ್ತು ವೈಜ್ಞಾನಿಕ ಯೂರೋಪಿನಲ್ಲಿಯೇ ಜನಿಸಿದವರಾಗಿದ್ದು, ಅವರಿಗೆ ಇವುಗಳ ಅವಶ್ಯಕತೆ ಸ್ವಲ್ಪವೂ ಇರಲಿಲ್ಲ. ನೈಜವಾದ ಧಾರ್ಮಿಕ ಚಿತ್ರವನ್ನು ನೋಡಲೆಂದು ಆವರು ಬಂದಿದ್ದುದು. ಅವರು ಅನೇಕ ಜನ ವಿದ್ವಾಂಸರನ್ನೂ, ದಾರ್ಶನಿಕರನ್ನೂ ಸಾಧು ಸನ್ಯಾಸಿಗಳನ್ನು ಭೇಟಿಮಾಡಿದ್ದರು.

ರೋಚೆಸ್ಟರ್‌ರವರ ಶೃಂಗೇರಿಯ ಪ್ರವಾಸ ಮತ್ತು ಶ್ರೀ ಶ್ರೀಗಳವರ ದರ್ಶನ ಇವು ಅವರ ಭಾರತ ಯಾತ್ರೆಯ ಅತ್ಯಪೂರ್ವವಾದ ಘಟನೆಯಾಗಿದೆ. ಆಧ್ಯಾತ್ಮಿಕ ದೃಷ್ಟಿಯಿಂದ ಒಂದು ಅತ್ಯಂತ ಸ್ಮರಣೀಯ ಶ್ರೇಷ್ಠ ಅನುಭವವಾಗಿದೆ. ಅವರಿಗೆ ದೊರಕಿದ ಮಹತ್ವದ ಸಂದರ್ಶನ ಹಲವಾರು ಅಲೌಕಿಕ ಘಟನಾವಳಿಗಳಿಗೆ ಕಳಸವಿಟ್ಟಂತೆ ಇದೆ.

ಜ್ಯೋತಿಷ್ಯಶಾಸ್ತ್ರದಲ್ಲಿ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ಶ್ರೀ ಬಿ. ವಿ. ರಾಮನ್‌ರವರೊಂದಿಗೆ ರೋಚೆಸ್ಟರ್‌ರವರಿದ್ದಾಗ, ರಾಮನ್ ಶೃಂಗೇರಿಗೆ ಪತ್ರ ಬರೆದು, ವಿದೇಶಿಯ ಪ್ರವಾಸಿ ಶ್ರೀ ರೋಚೆಸ್ಟರ್‌ರವರಿಗೆ ಶೃಂಗೇರಿಯಲ್ಲಿ ಶ್ರೀ ಶ್ರೀಗಳವರೊಡನೆ ಸಂದರ್ಶನಕ್ಕೆ ಏರ್ಪಾಟುಮಾಡಲು ಕೋರಿದ್ದರು. ಮರು ಟಪಾಲಿಗೇ ಶೃಂಗೇರಿಯಿಂದ ಉತ್ತರ ಬಂದಿತ್ತು. ರೋಚೆಸ್ಟರ್‌ರವರನ್ನು ಶೃಂಗೇರಿಗೆ ಸ್ವಾಗತಿಸಿ, ಶ್ರೀ ಶ್ರೀಗಳವರೊಡನೆ ಸಂದರ್ಶನಕ್ಕೂ ಏರ್ಪಾಟನ್ನು ಮಾಡಿರುವುದಾಗಿ ಪತ್ರ ಬಂದಿತ್ತು.

ರೋಚೆಸ್ಟರ್‌ರವರಿಗೆ ಇದೊಂದು ಶುಭಸೂಚನೆಯಾಗಿತ್ತು. ಅವರು ಇಳಿದುಕೊಂಡಿದ್ದ ಹೋಟೆಲ್ಲಿನಲ್ಲಿ ಶೃಂಗೇರಿಯ ಪ್ರಯಾಣ ಕುರಿತು ವಿಚಾರಿಸಿದರು. ಆ ಹೋಟೆಲಿನವರಿಗೆ ಶೃಂಗೇರಿಯ ವಿಚಾರವಾಗಿ ಏನೂ ತಿಳಿದಿರಲಿಲ್ಲ. ಟೂರಿಸ್ಟ್ ಗೈಡ್ ಪುಸ್ತಕವನ್ನು ನೋಡಲು ಹೇಳಿದರು. ಅದರಲ್ಲಿ ಶೃಂಗೇರಿಯು ಎಲ್ಲಿದೆ, ಅಲ್ಲಿಗೆ ಹೋಗುವುದು ಹೇಗೆ ಎಂಬ ವಿಚಾರವೇ ಇರಲಿಲ್ಲ. ಇದರಿಂದ ಅವರಿಗೆ ಉತ್ಸಾಹ ಕುಗ್ಗಿತು. ಆದರೆ ಶೃಂಗೇರಿಗೆ ಹೊರಡುವ ಅವರ ಅಪೇಕ್ಷೆಯೇನೂ ಕುಂದಿರಲಿಲ್ಲ. ಚಿಂತೆಯಿಂದ ಅವರು ಹೋಟೆಲ್ಲಿನ ಹಾಲಿನಲ್ಲಿ ಕುಳಿತಿದ್ದಾಗ, ಮತ್ತೊಬ್ಬ ಪಾಶ್ಚಾತ್ಯ ವ್ಯಕ್ತಿ ಅಲ್ಲಿಗೆ ಬಂದರು. ಅವರ ಹೆಸರನ್ನು ಮೇಯೋ ಎಂದು ಹೋಟೆಲಿನ ಆಳು ಉಚ್ಚರಿಸುತ್ತಿದ್ದಂತೆಯೇ, ಅದು ತನಗೂ ಪರಿಚಯದ್ದೆನ್ನಿಸಿತು.

ಮೇಯೋ ಎಂಬ ಆ ಹೊಸ ವ್ಯಕ್ತಿಯ ತಾಯಿಯೂ ತಮ್ಮ ತಾಯಿಯೂ ಲಂಡನ್ನಿನಲ್ಲಿ ಭೇಟಿಯಾಗಿದ್ದನ್ನು ರೋಚೆಸ್ಟರ್ ಸ್ಮರಿಸಿಕೊಂಡರು. ಪರಸ್ಪರ ಯೋಗ ಕ್ಷೇಮವನ್ನು ವಿಚಾರಿಸಿಕೊಂಡರು. ರೋಚೆಸ್ಟರ್ ತಾವು ಶೃಂಗೇರಿಗೆ ಹೋಗಬೇಕೆಂಬ ತಮ್ಮ ಆಶಯವನ್ನು ಮೇಯೋರವರಿಗೆ ತಿಳಿಸಿದರು. "ಶೃಂಗೇರಿ ?" ಹರ್ಷ ಪುಲಕಿತರಾಗಿ ಕೇಳಿದರು, "ಒಳ್ಳೆಯದು, ಅಲ್ಲಿಂದಲೇ ನಾನು ಬರುತ್ತಿರುವುದು" ಎಂದು ನುಡಿದರು ಮೇಯೋ.

Sri Vidyabharathi Book Centre, Sringeri

 CC-O. In Public Domain. Digitized by eGangotri

"ಸರಿ, ಅಲ್ಲಿಗೆ ಹೋಗುವುದು ಹೇಗೆ?" ರೋಚೆಸ್ಟರ್ ತುಂಬಿದ ಉತ್ಸಾಹದಿಂದ ಪ್ರಶ್ನಿಸಿದರು.

"ಅದು ಸುಲಭ. ನಾನು ರೈಲು, ಬಸ್ಸು ಮತ್ತು ಕಾರಿನಲ್ಲಿ ಪ್ರಯಾಣ ಮಾಡಿದೆ" ಎಂದು ಮೇಯೋ ಹೇಳಿ, ರೋಚೆಸ್ಟರ್‌ಗೆ ಪ್ರಯಾಣಮಾಡಲು ಅಗತ್ಯವಾದ ವಿವರಗಳನ್ನೆಲ್ಲಾ ತಿಳಿಸಿದರು.

ಎರಡು ದಿನಗಳ ನಂತರ ಅವರು ಬೆಂಗಳೂರಿನಲ್ಲಿ ರೈಲು ಹತ್ತಿ ಶೃಂಗೇರಿಯತ್ತ ಹೊರಟರು. ಪೂರ್ವಸೂಚನೆಯಂತೆ ತರೀಕೆರೆಯಲ್ಲಿ ಅವರನ್ನು ರೈಲ್ವೆಗಾರ್ಡ್ ಎಬ್ಬಿಸಿದರು. ಅವರು ಸುಖನಿದ್ರೆಯಿಂದ ಎದ್ದು ಕೆಳಕ್ಕೆ ಇಳಿಯುವವರೆಗೂ ರೈಲು ಕಾದಿತ್ತು. ಬೆಳಗ್ಗೆ ಎಂಟು ಗಂಟೆಗೆ ಬಸ್ಸಿನಲ್ಲಿ ತರೀಕೆರೆಯಿಂದ ಹೊರಟ ರೋಚೆಸ್ಟರ್, ಕೊಪ್ಪದಲ್ಲಿ ಇಳಿದು ತಮಗಾಗಿ ಕಾಯುತ್ತಿದ್ದ ಮೇಯೋರವರ ಕಾರನ್ನು ಹತ್ತಿದರು. ಕಾರು ಅವರನ್ನು ಶೃಂಗೇರಿಗೆ, ಮಠದ ಸಮೀಪಕ್ಕೇ ತಂದುಬಿಟ್ಟಿತು.

ಅವರು ಕಾರಿನಿಂದ ಇಳಿದಕೂಡಲೇ ಒಬ್ಬ ವಟುವು ಇದಿರ್ಗೊಂಡು, ಅವರಿಗಾಗಿ ಸೀಮಿತವಾಗಿದ್ದ ಕೊಠಡಿಗೆ ಕರೆದು ತಂದನು. ಅವರ ಉಪಾಹಾರಕ್ಕಾಗಿ ಬಾಳೆಹಣ್ಣು, ಕಿತ್ತಲೆಹಣ್ಣುಗಳನ್ನೂ, ನೀರನ್ನೂ ತಂದುಕೊಟ್ಟನು.

ಶ್ರೀ ಜಗದ್ಗುರುಗಳವರ ಆದೇಶದಂತೆ ಇನ್ನೊಬ್ಬ ಬ್ರಹ್ಮಚಾರಿಯು ಬಂದು ರೋಚೆಸ್ಟರ್‌ರವರ ಯೋಗಕ್ಷೇಮದ ಬಗೆಗೆ ಶ್ರೀ ಶ್ರೀಗಳವರು ವಿಚಾರಿಸಿದ್ದಾರೆಂದೂ ತಿಳಿಸಿ, ಅವರನ್ನು ಮಠದ ಆವರಣದಲ್ಲಿದ್ದ ದೇವಾಲಯಗಳನ್ನೆಲ್ಲಾ ತೋರಿಸಲು ಕರೆದೊಯ್ದನು. ಸಂಜೆ ಆರು ಗಂಟೆಗೆ ಶ್ರೀ ಶ್ರೀಗಳವರೊಡನೆ ಭೇಟಿ ಗೊತ್ತಾಗಿತ್ತು. ಅವರ ಜತೆಯಲ್ಲಿದ್ದ ಬ್ರಹ್ಮಚಾರಿಯಿಂದ ರೋಚೆಸ್ಟರ್, ಸ್ವಾಮಿಗಳವರ ಸಾಧನೆ, ಅನುಷ್ಠಾನ, ಅವರು ಬಹಳಕಾಲ ಧ್ಯಾನಾಸಕ್ತರಾಗಿರುತ್ತಿದ್ದ ಕೆಲವು ಸಂದರ್ಭಗಳು ಅವರ ಗುರು ಪರಮಗುರುಗಳ ವಿಚಾರಗಳೆಲ್ಲವನ್ನೂ ತಿಳಿದುಕೊಂಡರು.

ಬ್ರಹ್ಮಚಾರಿಯು ಶ್ರೀ ಶ್ರೀಗಳವರನ್ನು ನಮಸ್ಕರಿಸಬೇಕಾದ ಕ್ರಮವನ್ನು-ಸಾಷ್ಟಾಂಗ ಪ್ರಣಾಮವನ್ನು ಹಾಕುವ ವಿಧಾನವನ್ನು - ವಿವರಿಸಿ, ತಾನು ಮಾಡಿ ಅವರಿಗೆ ತೋರಿದನು. ಅನಂತರ ರೋಚೆಸ್ಟರ್‌ರವರಿಂದಲೂ ಅದನ್ನು ಮಾಡಿಸಿ, ತೃಪ್ತಿಪಟ್ಟನು. ಆ ಬಳಿಕ ಅವರನ್ನು ಆತನು ಶ್ರೀ ಶ್ರೀಗಳವರ ಬಳಿಗೆ ಕರೆದೊಯ್ದನು.

ಶ್ರೀ ಶ್ರೀಗಳವರ ದರ್ಶನಕ್ಕೆ ಬಂದ ರೋಚೆಸ್ಟರ್ ಮೊಟ್ಟಮೊದಲ ನೋಟದಲ್ಲಿಯೇ ಪರವಶರಾದರು! "ಮೊಟ್ಟಮೊದಲು ನೋಟದಿಂದಲೇ ಸ್ವಾಮಿಗಳವರು ನನ್ನ ಮೇಲೆ ದಿವ್ಯ ಪ್ರಭಾವವನ್ನು ಬೀರಿದರು. ಅವರ ಗಂಭೀರವಾದ, ಸತ್ವಪೂರ್ಣವಾದ ಮುಖ ಮಂಡಲ ನನ್ನನ್ನು ಆಕರ್ಷಿಸಿತು. ಆ ಮುಖವು, ಶ್ರದ್ಧಾಪೂರ್ಣಭಾವದಿಂದ ನಗುವಿನ ಮುಗ್ಧಮುಖ ಭಾವಕ್ಕೆ, ಸಹಜ ಸರಳವಾಗಿ ಪರಿವರ್ತನೆಯಾಗುತ್ತಿದ್ದುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ವಿಶೇಷ." ರೋಚೆಸ್ಟರ್ ತುಂಬಿದ ಹೃದಯದಿಂದ ತಮ್ಮ ಕೈಯ್ಯಲ್ಲಿದ್ದ ಫಲವನ್ನು ಸಮರ್ಪಿಸಿ, ಬ್ರಹ್ಮಚಾರಿಯಿಂದ ಕಲಿತಿದ್ದ ಸಾಷ್ಟಾಂಗ ಪ್ರಣಾಮವನ್ನು ಮಾಡಲು ಉಪಕ್ರಮಿಸಿದರು. ವಿದೇಶಿಯರಿಗೆ ಪರಿಪಾಟಿಲ್ಲದ ನಮಸ್ಕಾರವನ್ನು ಮಾಡುವ ಅವಶ್ಯಕತೆಯಿಲ್ಲವೆಂದು ಶ್ರೀ ಶ್ರೀಗಳವರು ಸ್ಪಷ್ಟಪಡಿಸಿ, ಕುಳಿತುಕೊಳ್ಳುವಂತೆ ತಿಳಿಸಿದರು. ರೋಚೆಸ್ಟರ್ ಗುರುಗಳಿಗೆ ವಂದಿಸಿ ನೆಲದ ಮೇಲೆ ಪದ್ಮಾಸನಹಾಕಿ ಕುಳಿತರು.

ಪಾಶ್ಚಾತ್ಯರೊಬ್ಬರು ಹೇಳಿದಲ್ಲಿ ನಮಗೆ ವಿಸ್ಮಯವಾಗುವ ಕೆಲವು ಮಾತುಗಳನ್ನು ರೋಚೆಸ್ಟರ್ ನುಡಿದರು. "ನೀರವತೆ ತುಂಬಿತ್ತು. . . . . . ನಾನು ಆ ಮೌನಿ ಗುರುವಿನಲ್ಲಿ ಅವರ ಪ್ರಭಾವದ ಪ್ರಭೆಯಲ್ಲಿ ಕರಗಿಹೋದೆನು." ಈ ತುಂಬಿದ ಅನುಭವದಲ್ಲಿ ರೋಚೆಸ್ಟರ್ ಮುಳುಗಿದ್ದರು.

ಶ್ರೀ ಶ್ರೀಗಳವರು ಹತ್ತಿರವಿದ್ದ ಸ್ಲೇಟನ್ನು ತೆಗೆದುಕೊಂಡು ಅದರಲ್ಲಿ ಏನನ್ನೋ ಬರೆದು ಕಾರ್ಯದರ್ಶಿಗೆ ಕೊಟ್ಟರು. ರೋಚೆಸ್ಟರ್‌ರವರಿಗೆ ಅದು ಇಷ್ಟವಾಗಲಿಲ್ಲ, ಏಕೆಂದರೆ ಗುರುಗಳವರ ಮೌನದಿಂದ ಅವರ ಹೃದಯ ತುಂಬಿ ಬಂದು, ತಮ್ಮ ಮನಃಸ್ಥಿತಿಯನ್ನು ಕದಲಿಸಲು ಅವರು ಸಿದ್ಧವಿರಲಿಲ್ಲ. ಭಾರತಕ್ಕೆ ಬಂದಂದಿನಿಂದ ಅನುಭವಿಸದಿದ್ದಂತಹ ಸ್ಪಂದನದಿಂದ ಇಲ್ಲಿ "ಪ್ರಾಚೀನ ಭಾರತೀಯ ದರ್ಶನದ ಸಾಕಾರಮೂರ್ತಿಯ" ಸನ್ನಿಧಿಯಲ್ಲಿ ಅನುಭವಿಸುತ್ತಿದ್ದರು.

ಶ್ರೀ ಸ್ವಾಮಿಗಳವರಿಗೆ ಅನೇಕ ಭಾರತೀಯ ಭಾಷೆಗಳು ಬರುತ್ತವೆಯೆಂದೂ ಇಂಗ್ಲೀಷಾಗಲೀ ಮಾತ್ತಾವ ಐರೋಪ್ಯ ಭಾಷೆಯಾಗಲೀ ಬರುವುದಿಲ್ಲವೆಂದೂ ಕಾರ್ಯದರ್ಶಿ ನುಡಿದಾಗ ರೋಚೆಸ್ಟರ್‌ರವರಿಗೆ ಅದು ಸಹಜವೆನ್ನಿಸಿತು. ಆದರೆ ಅವರೇಕೆ ಯಾವ ಪಾಶ್ಚಾತ್ಯ ಭಾಷೆಯನ್ನೂ ಕಲಿತಿಲ್ಲ ಎಂದು ರೋಚೆಸ್ಟರ್ ಕೇಳಿದಾಗ ಸ್ಲೇಟಿನ ಮೇಲೆ ಮೂಡಿದ ಉತ್ತರ, ಅವರಿಗೆ ಅದರ ಆವಶ್ಯಕತೆಯಿಲ್ಲ, ಕಲಿಯುವುದರಿಂದ ಅವರ ಮನಸ್ಸು ಗಲಿಬಿಲಿಹೊಂದುತ್ತದೆ ಎಂದು ಸ್ಪಷ್ಟೀಕರಿಸಿತು.

ಶ್ರೀ ಶ್ರೀಗಳವರ ಪ್ರಭಾ ಪರಿವಲಯದಲ್ಲಿ ಆನಂದದಿಂದ ಮೈಮರೆತಿದ್ದ ರೋಚೆಸ್ಟರ್ ಬೇರೆ ಯಾವ ಮಾತನ್ನೂ ಆಡಲು ಇಚ್ಛಿಸಲಿಲ್ಲ. ಆದರೆ ಗುರುಗಳವರೇ ಮಾತನಾಡಲು ಪ್ರಚೋದಿಸಿದ್ದರಿಂದ ಸಂಭಾಷಣೆ ಹಲವು ಗಂಟೆಗಳವರೆಗೆ ಮುಂದುವರಿಯಿತು. "ಪ್ರಶ್ನೋತ್ತರಗಳು ಹೆಚ್ಚು ಹೆಚ್ಚು ತ್ವರಿತವಾದವು. ಆಶ್ಚರ್ಯಚಕಿತರಾದ ಕಾರ್ಯದರ್ಶಿಯು ಈ ಸಂಭಾಷಣೆಯ ತ್ವರಿತಗತಿಯನ್ನು ಅನುಸರಿಸಲಾರದೆ ತುಂಬಾ ಕಷ್ಟಪಡುತ್ತಿದ್ದರು. ಸ್ವಾಮಿಗಳವರಿಗೆ ಇದೆಲ್ಲವೂ ಒಂದು ದೊಡ್ಡ ವಿನೋದದಂತೆ ಇತ್ತು. ಅವಸರದಲ್ಲಿ ಕಾರ್ಯದರ್ಶಿಯು ಹಲವು ತಪ್ಪುಗಳನ್ನು ಮಾಡಿಬಿಡುತ್ತಿದ್ದರು. ಸ್ವಾಮಿಗಳವರೂ ನಾನೂ ಇದನ್ನು ಗುರ್ತಿಸಿ ಇಬ್ಬರೂ ಸಹ ಕೈಕೆದುರುಗಳೆಬ್ಬಿಸುತ್ತಿದ್ದೆವು."

Sri Vidyabharathi Book Centre, Sringeri

CC-O. In Public Domain. Digitized by eGangotri

ರೋಚೆಸ್ಟರ್‌ರವರ ಅನುಭವದ ನುಡಿಗಳು ಹೀಗಿವೆ. "ನಾನು ಹೆಚ್ಚು ಹೆಚ್ಚು ಜನ ಯೋಗಿಗಳ ದರ್ಶನವನ್ನು ಪಡೆದಂತೆಲ್ಲಾ, ಅವರಲ್ಲಿರುವ ಪ್ರದರ್ಶನವು ತೋರಿಕೆಯ ಚಿತ್ತೈಕಾಗ್ರತೆಯಿಂದ ಬಂದುದೆಂದೂ ಹೆಚ್ಚು ಹೆಚ್ಚು ಪ್ರಬಲವಾಗಿ ಗ್ರಹಿಸಿದೆ. "ಆದರೆ ಪ್ರಸ್ತುತ ದರ್ಶನ ಮಾಡಿದ ಸ್ವಾಮಿಗಳವರು ಇಂತಹ ಯೋಗಿಗಳಿಗಿಂತ ತೀರಾ ಭಿನ್ನರಾಗಿದ್ದರು. ವಿಶೇಷ ಬದಲಾವಣೆಯ ಅವಶ್ಯಕತೆಯಿಲ್ಲದೆ, ಸೋಗಿನಗಂಭೀರತೆಯಿಲ್ಲದೆ, ಸ್ವಾಮಿಗಳು ಸಹಜವಾಗಿ ಗಾಢಧ್ಯಾನದಲ್ಲಿ ತಲ್ಲೀನರಾಗುತ್ತಿದ್ದರು. ನಾನು ಅವರ ಸಮ್ಮುಖದಲ್ಲಿ ಕುಳಿತಿದ್ದೆ ಮತ್ತೆ ಮೌನದಾಳದಿಂದ ರಸಾಸ್ವಾದ ಮಾಡುತ್ತಿದ್ದೆ."

ಸಂಭಾಷಣೆಯ ಅನಂತರದಲ್ಲಿ ಮೌನದಿಂದ ಇದ್ದಂತಹ ಶ್ರೀ ಸ್ವಾಮಿಗಳವರು ಎದ್ದು ರೋಚೆಸ್ಟರ್‌ರವರಿಗೆ ಹಲವು ಹಣ್ಣುಗಳನ್ನು ಇತ್ತು "ಮತ್ತೆ ಬನ್ನಿ. ಇಚ್ಛೆಯುಂಟಾದಾಗಲೆಲ್ಲಾ ಬನ್ನಿ" ಎಂದು ಬೀಳ್ಕೊಳ್ಳುವ ಮುನ್ನ ಮುಗ್ಧನಾಗಿ ಹೋಗಿದ್ದ ಅಥಿತಿಗೆ ಕರೆಯಿತ್ತರು.

ಈ ವೇಳೆಗೆ ಕತ್ತಲಾಗಿತ್ತು. ಬ್ರಹ್ಮಚಾರಿಯೊಬ್ಬರು ಪುನಃ ರೋಚೆಸ್ಟರ್ ರವರನ್ನು ಅವರ ಕೊಠಡಿಗೆ ಕರೆದುಕೊಂಡು ಬಂದರು. ಎದುರಿಗೆ ಮೇಜಿನಮೇಲೆ ಹಣ್ಣುಗಳಿಂದ ತುಂಬಿದ ಬೋಗುಣಿಯೊಂದಿತ್ತು. ಅವರು ಸ್ವಲ್ಪ ಹಣ್ಣುಗಳನ್ನು ತಿಂದರು. ಅವರಿಗೆ ಹಸಿವೆಯಾಗಲೀ ಆಯಾಸವಾಗಲೀ ಆಗಿರಲಿಲ್ಲ. "ನಾನು ಅನುಭವಿಸುತ್ತಿರುವ ಸಂತುಷ್ಟತೆ, ಸಮಾಧಾನಗಳು ಸ್ವಾಮಿಗಳವರ ಪ್ರಭಾವವೇ ಅಥವಾ ಈ ಕೊಠಡಿಯಿರುವ ಶಾಂತ ಪರಿಸರವೇ" ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಂಡರು.

ರೋಚೆಸ್ಟರ್ ರಾತ್ರಿಯ ನೀರವತೆಯಲ್ಲಿ ಮಲಗಿದ್ದರು. ಹೊರಗಿದ್ದ ಮಾವಿನ ಮರದ ಮೇಲಿನಿಂದ ಚಂದ್ರೋದಯವಾಗುತ್ತಿದ್ದುದು ಕಿಟಕಿಯಿಂದ ಕಾಣುತ್ತಿತ್ತು. ಮರದೆಲೆಗಳೂ ಕೊಂಬೆಗಳೂ ಬೆಳ್ಳಿಯ ಬೆಳಕಿನಲ್ಲಿ ಮಿನುಗುತ್ತಿದ್ದುವು. ರಾತ್ರಿಯಿಡೀ ಅವರು ಭಾರತೀಯ ಸಂಸ್ಕೃತಿಯ ಬಗೆಗೆ ಆಳವಾಗಿ ಆಲೋಚಿಸುತ್ತಿದ್ದರು. ಅದರ ಮೂಲವೇನು? ಕರ್ಮವೆ? ಪುನರ್ಜನ್ಮವೆ? ಇವೆಲ್ಲವೂ ಹೌದು. ಆದರೂ ಇವಿಷ್ಟೇ ನಮಗೆ ಸಂಸ್ಕೃತಿಯ ತಿರುಳನ್ನು ಕೊಡಲಾರದು. ಹಾಗಾದರೆ ಪಾಶ್ಚಾತ್ಯ ಸಂಸ್ಕೃತಿಯಿಂದ ವಿಭಿನ್ನವಾದ ಆ ಅವ್ಯಕ್ತ ಆಧಾರಭೂತವಾದ ತತ್ವ ಯಾವುದು?

ಅವರು ಈ ರೀತಿ ಆಲೋಚಿಸುತ್ತಿರುವಾಗ, "ಸ್ವಾಮಿಗಳವರ ಪ್ರತಿಮೂರ್ತಿ ನನ್ನ ದೃಷ್ಟಿಯಿಂದ ಮರೆಯಾಗಲಿಲ್ಲ" ಎಂದು ಬರೆಯುತ್ತಾ, "ದೀರ್ಘಕಾಲ ನಾನು ದರ್ಶಿಸಿದ್ದ ಆ ಮೂರ್ತಿಯು ನನ್ನ ಕಣ್ಣಿನ ಪಾಪೆಗೆ ಅಂಟಿಕೊಂಡತೆಯೇ ಕಾಣುತ್ತಿತ್ತು. ಬೆಳ್ಳಿ ಬೆಳ್ದಿಂಗಳಲ್ಲಿ ಮಿನುಗುತ್ತಿರುವ ಮಾವಿನ ಮರದ ಎಲೆಗಳ ನಡುವೆ ಸ್ವಾಮಿಗಳವ ಆಕೃತಿ ನನ್ನ ಮುಂದೆ ಮಾಯೆಯಂತೆ ಸುಳಿದಾಡುತ್ತಿತ್ತು. ಸ್ವಾಮಿಗಳವರು ಪದ್ಮಾಸನಸ್ಥರಾಗಿ ಕುಳಿತಿದ್ದಾರೆ, ವಸ್ತ್ರದ ಸೆರಗು ತಲೆಯನ್ನು ಸುತ್ತುವರೆದಿದೆ. ಈ ಮಧ್ಯದಿಂದ್ದ ದಿವ್ಯತೇಜೋಪೂರ್ಣವಾದ, ಸತ್ವಪೂರ್ಣವಾದ, ಲೌಕಿಕ ದುಃಖಾತೀತ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಖಮಂಡಲವು ಮೂಡಿಬರುತ್ತಿತ್ತು. ನಾನು ಪ್ರತ್ಯಕ್ಷವಾಗಿ ನೋಡಿದ್ದಂತೆಯೇ ಇತ್ತು."

ಮರುಕ್ಷಣದಲ್ಲಿಯೇ ರೋಚೆಸ್ಟರ್‌ರವರ ಆಲೋಚನೆ ಪಾಶ್ಚಾತ್ಯನೊಬ್ಬನ ಕಡೆಗೆ ಸಾಗಿತು. ಮತ್ತೊಂದು ಚಿತ್ರ ಅವರ ದೃಷ್ಟಿಯ ಮುಂದೆ ಸುಳಿಯಿತು. ಅದು ರೊಡಿನ್ ಎಂಬ ಶಿಲ್ಪಿ ಕೆತ್ತಿದ್ದ "ದಾರ್ಶನಿಕ" ನ ಮೂರ್ತಿ. ದಷ್ಟಪುಷ್ಟವಾದ ಶರೀರ, ಒರಟಾದ ಕೈಗಳು, ಕಿರಿದಾದ ಆತ್ಮ ತೇಜೋಹೀನವಾದ ಮುಖ." ಆ ವಿಗ್ರಹವು ರೋಚೆಸ್ಟರ್‌ರವರಿಗೆ ರೋಮ್ ದೇಶದ ಖಡ್ಗಮಲ್ಲನನ್ನು ನೆನಪು ಮಾಡುತ್ತಿತ್ತು. ಆದೇ ಇನ್ನೊಂದು ಪ್ರತಿಮೆ ಶ್ರೀ ಶ್ರೀಗಳವರ ಚಿತ್ರವು ಅದಕ್ಕೆ ತೀರಾ 'ವ್ಯತಿರಿಕ್ತವಾಗಿ ಸಾರಭೂತ ತತ್ವದ' ಹೊಳಹನ್ನು ತಿಳಿಸುವ ಅದರ ಮಾರ್ದವತೆಯಲ್ಲಿ, ನಿರಂಜನತ್ವದಲ್ಲಿ ಸಂಸ್ಕೃತಿಯ ಮೂಲಭೂತವೂ ಸಾರಸ್ವರೂಪವೂ ಆಗಿ ಹೃದ್ಗೋಚರವಾಗುವ ಈ ಸ್ಥಿತಿಯೇ ಯೋಗ ಎಂದು ಅವರಿಗೆ ಅನುಭವವಾಗುತ್ತಿತ್ತು.

ಮಾಕ್ಸಿಮಿಲಿಯನ್ ವರ್ಾರೋಚೆಸ್ಟರ್‌ರವರಂತೆಯೇ ಬಹುಜನ ಪಾಶ್ಚಾತ್ಯರು-ಇಂಗ್ಲೀಷರು, ಜರ್ಮನರು, ಫ್ರೆಂಚರು, ಇಟಲಿಯವರು, ಸ್ವಿಟ್ಸರ್‌ಲೆಂಡಿನವರು-ಶೃಂಗೇರಿಗೆ ಬಂದು ಶ್ರೀ ಶ್ರೀಗಳವರ ದರ್ಶನವನ್ನು ಪಡೆದಿದ್ದಾರೆ. ಉಪದೇಶವನ್ನು ಪಡೆದಿದ್ದಾರೆ. ಅತೃಪ್ತವೂ ಅಶಾಂತವೂ, ಆದ ತಮ್ಮ ಮನಸ್ಸಿಗೆ ತೃಪ್ತಿ, ಶಾಂತಿಗಳನ್ನೂ, ಸುಖವನ್ನೂ ಸ್ಥಿರತೆಯನ್ನೂ ಪಡೆದುಕೊಂಡಿದ್ದಾರೆ. ತಮ್ಮ ತಮ್ಮ ಅರ್ಹತೆಗೆ ತಕ್ಕಂತೆ ಆಧ್ಯಾತ್ಮಿಕ ಸಾಧನೆಯಲ್ಲಿ ಶ್ರೀ ಶ್ರೀಗಳವರಿಂದ ಮಾರ್ಗದರ್ಶನ ಪಡೆದು ದಿವ್ಯಾನುಭವಗಳನ್ನು ಹೊಂದಿ ಜೀವನವನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ಒಮ್ಮೆ ಶ್ರೀ ಶ್ರೀಗಳವರ ಸನ್ನಿಧಿಗೆ ಕ್ರೈಸ್ತಸಾಧಕರೊಬ್ಬರು ಬಂದಿದ್ದರು. ಅವರನ್ನು ಆಗಾಗ್ಯೆ ಶೃಂಗೇರಿಗೆ ಕರೆತರುತ್ತಿದ್ದ. ಮತ್ತೊಬ್ಬಸಾಧಕರು ಆ ಕ್ರೈಸ್ತಸಾಧಕರ ದೈನಂದಿನ ಆಧ್ಯಾತ್ಮಿಕ ಸಾಧನೆಯನ್ನು ವಿವರಿಸುತ್ತಾ ಅವರು ಹೊಂದಿದ್ದ ಪ್ರಗತಿಯ ವಿವರಗಳನ್ನು ಬಿನ್ನವಿಸಿದರು. ಶ್ರೀ ಶ್ರೀಗಳವರು ಎಲ್ಲವನ್ನೂ ಕೂಲಂಕಷವಾಗಿ ವಿಚಾರಿಸಿದನಂತರ ಆ ಕ್ರೈಸ್ತಸಾಧಕರಿಗೆ, ಆತ್ಮವಿದ್ಯಾವಿಲಾಸವನ್ನು ಪಾಠಹೇಳುವಂತೆ ಅವರನ್ನು ಕರೆತಂದಿದ್ದ ಸಾಧಕರಿಗೆ ಅಪ್ಪಣೆ ಮಾಡಿದರು.

೩೮. ಮೂಕಮ್ ಕರೋತಿ ವಾಚಾಲಮ್

ಶ್ರೀ ಶ್ರೀಗಳವರ ಅನುಗ್ರಹ ಶಕ್ತಿ ಅಲೌಕಿಕವಾದುದು, ಮತ್ತು ಅಸಾಧಾರಣವಾದುದು. ಅವರನ್ನು ಸ್ಮರಿಸಿಕೊಂಡರೆ ಸಾಕು, ದಿವ್ಯಾನುಗ್ರಹ ದೇವಸಲಿಲದಂತೆ ಪ್ರವಹಿಸುತ್ತದೆ, ಭಕ್ತಿ ಶ್ರದ್ಧಾವಂತರಾಗಿರುವವರಿಗೆ.

ಹೈದರಾಬಾದಿನಲ್ಲಿ-ಶ್ರೀ ಶಂಕರಜಯಂತೀ ಸಮಾರಂಭವೇರ್ಪಟ್ಟಿತ್ತು. ಶೃಂಗೇರಿಯಿಂದ ಯಾರನ್ನಾದರೂ ಮಠದ ಪ್ರತಿನಿಧಿಯನ್ನಾಗಿ ಕಳುಹಿಸಬೇಕೆಂದು ಹೈದರಾಬಾದಿನ ಮಠದ ಭಕ್ತರು ಪತ್ರ ಬರೆದಿದ್ದರು. [illegible] ಯಂತೆ ಮಠದ ಪುರೋಹಿತರಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗಣಪತಿ ಸುಬ್ರಹ್ಮಣ್ಯಅವಧಾನಿಗಳನ್ನು ಹೈದರಾಬಾದಿಗೆ ಹೋಗುವಂತೆ ಶ್ರೀ ಶ್ರೀಗಳವರು ಅಪ್ಪಣೆ ಮಾಡಿದರು. ಅವಧಾನಿಯವರು ಶ್ರೀ ಶ್ರೀಗಳವರ ಆಜ್ಞೆಯಂತೆ ಪ್ರಯಾಣ ಹೊರಟು ಹೈದರಾಬಾದಿಗೆ ಆಗಮಿಸಿದರು.

ಅವಧಾನಿಗಳು ಹೈದರಾಬಾದಿನ ನಲ್ಲಗೊಂಡ ವಿಸ್ತರಣದಲ್ಲಿರುವ ಶಂಕರ ಮಠಕ್ಕೆ ಬಂದಾಗ ರಾತ್ರಿಯಾಗಿತ್ತು. ಪ್ರಸಿದ್ಧ ವಿದ್ವಾಂಸರೂ ಲೇಖಕರೂ ಆಗಿದ್ದ ವಕೀಲ್ ಆರ್. ಕೃಷ್ಣಸ್ವಾಮಿ ಅಯ್ಯರ್‌ರವರು ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡುತ್ತಿದ್ದರು. ಅವಧಾನಿಗಳು ಅಲ್ಲಿಗೆ ಬರುತ್ತಲೇ ಅವರಿಗೆ ಆತ್ಮೀಯ ಸ್ವಾಗತನೀಡಿ ನೇರವಾಗಿ ಅವರನ್ನು ಉಪನ್ಯಾಸ ವೇದಿಕೆಗೇ ಕರೆದೊಯ್ದರು. ಅಯ್ಯರ್‌ರವರು ತಮ್ಮ ಉಪನ್ಯಾಸವನ್ನು ಬೇಗ ಮುಗಿಸಿ “ ಶೃಂಗೇರಿಯಿಂದ ಶ್ರೀ ಅವಧಾನಿಗಳು ಆಗಮಿಸಿದ್ದಾರೆ. ಈಗ ಅವರು ಉಪನ್ಯಾಸ ಮಾಡುತ್ತಾರೆ ” ಎಂದು ಸಭಿಕರಿಗೆ ಮನವಿ ಮಾಡಿ, ಅವಧಾನಿಗಳತ್ತ ತಿರುಗಿ “ ನೀವು ಬಂದುದು ತುಂಬಾ ಸಂತೋಷ. ಶೃಂಗೇರಿಯ ವೈಶಿಷ್ಟ್ಯವನ್ನೂ ಆಚಾರ್ಯರ ಮಹಾತ್ಮ್ಯವನ್ನೂ ಕುರಿತು ನೀವು ನಾಲ್ಕು ಮಾತನ್ನಾದರೂ ಆಡಬೇಕು ” ಎಂದು ನುಡಿದರು. ಜನ ಸಂತೋಷದಿಂದ ಚಪ್ಪಾಳೆ ತಟ್ಟಿದರು. ಅವಧಾನಿಗಳಿಗೆ ಕಕ್ಕಾವಿಕ್ಕಿ ಯಾಯಿತು. ಎಂದೂ ಭಾಷಣಮಾಡದಿದ್ದವರನ್ನು ಕರೆದು, ಪರಿಚಯವಿರದ ಸಭಿಕರ ನಡುವೆ ನಿಲ್ಲಿಸಿ, ಉಪನ್ಯಾಸಮಾಡೆಂದರೆ, ಅವರ ಸ್ಥಿತಿ ಏನಾಗಬೇಕು !

ಅವಧಾನಿಗಳಿಗೆ ದಿಗಿಲಾಯಿತು. ಮೈನಡುಕವುಂಟಾಯಿತು. ಯಾವ ಸಬೂಬು ಹೇಳಿದರೂ ಜನ ಅವರನ್ನು ಬಿಡಲಿಲ್ಲ. ಭಾಷಣ ಮಾಡಲೇ ಬೇಕೆಂದು ಒತ್ತಾಯ ಮಾಡಿದರು. ಆಗ ಅವಧಾನಿಗಳು ಶ್ರೀ ಶ್ರೀಗಳವರನ್ನು ಮನಸಾ ಧ್ಯಾನಿಸಿ, ತಮಗೆ ಮಾರ್ಗ ತೋರಿಸಬೇಕೆಂದು ಮನಸಾ ಪ್ರಾರ್ಥಿಸಿ ಉಪನ್ಯಾಸಮಾಡಲು ಎದ್ದು ನಿಂತರು. ಅವರ ಎದುರಿನಲ್ಲಿ ಜನ ಕಾಣಿಸಲಿಲ್ಲ. ಶ್ರೀ ಶ್ರೀಗಳವರೇ ಕಾಣಿಸಿದರು. ಶೃಂಗೇರಿಯ ಪರಿಸರವೇ ಮೂಡಿತು. ತಿಳಿಯಾದ ತೆಲುಗು ಭಾಷೆಯಲ್ಲಿ ಉಪನ್ಯಾಸವಾರಂಭಿಸಿದರು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮಾತನಾಡಿದರು. ವಾಕ್ಪ್ರವಾಹ ನಿರರ್ಗಳ ವಾಗಿ ಪ್ರವಹಿಸಿತು. ಸಭಿಕರು ಮಂತ್ರಮುಗ್ಧರಂತೆ ಕೇಳಿ ಸಂತೋಷ ಪಟ್ಟರು.

ಉಪನ್ಯಾಸದ ನಂತರ ಅವರನ್ನು ಎಲ್ಲರೂ ಅಭಿನಂದಿಸಿದರು. ಅವಧಾನಿಗಳಿಗೆ ಆಶ್ಚರ್ಯವಾಯಿತು. ಎಂದೂ ಭಾಷಣ ಮಾಡದಿದ್ದ ತಾನು ಹೇಗೆ ಉಪನ್ಯಾಸ ಮಾಡಿದೆನೆಂದು ಅವರಿಗೇ ವಿಸ್ಮಯ ! ಮಾರನೆಯ ದಿನ ಅವರ ಭಾಷಣದ ಕೆಲವಂಶ ಗಳನ್ನು ಪತ್ರಿಕೆಗಳು ಪ್ರಕಟಿಸಿದ್ದುವು. ಅವುಗಳನ್ನು ಓದಿದ ಅವಧಾನಿಗಳು “ ಇವು ನನ್ನವಲ್ಲ ನಮ್ಮ ಗುರುಗಳವರದು ” ಎಂದು ಸ್ನೇಹಿತರೊಡನೆ ಆತ್ಮೀಯವಾಗಿ ನುಡಿದರು. “ ಎಂದೂ ಭಾಷಣಮಾಡದಿದ್ದವನಿಂದ, ಇಷ್ಟು ದೀರ್ಘಕಾಲ ಇಷ್ಟೊಂದು ಚೆನ್ನಾಗಿ ಉಪನ್ಯಾಸ ಮಾಡಿಸಿದ್ದು ಶ್ರೀ ಶ್ರೀಗಳವರ ಅನುಗ್ರಹವೇ ವಿನಾ ನನ್ನ ಪ್ರತಿಭೆಯಲ್ಲ ” ಎಂದು ಅವಧಾನಿಗಳು ಇಂದಿಗೂ ಹೇಳುತ್ತಾರೆ.

Sri Vidyabharathi Book Centre, Sringeri

ಶ್ರೀ ಭಗವದ್ಗೀತೆಯ ಧ್ಯಾನಶ್ಲೋಕಗಳಲ್ಲಿ ಭಗವಾನ್ ಶ್ರೀ ಕೃಷ್ಣನನ್ನು ಕುರಿತು ಒಂದು ಶ್ಲೋಕವಿದೆ. "ಮೂಕನನ್ನು ವಾಚಾಳಿಯನ್ನಾಗಿಯೂ, ಹೆಳವನನ್ನು ಪರ್ವತವನ್ನು ಹಾರುವಷ್ಟು ಸಮರ್ಥನನ್ನಾಗಿಯೂ ಮಾಡಬಲ್ಲ ಪರಮಾತ್ಮನ ಕೃಪೆಯನ್ನು" ಹಾಡುವ ಆ ಶ್ಲೋಕ, "ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ" ಎಂದಿದೆ. ಶ್ರೀ ಶ್ರೀಗಳವರೂ ಸಹ ಮೂಕರಿಂದ ಉಪನ್ಯಾಸ ಮಾಡಿಸಿದುದಲ್ಲದೆ, ಪಂಡಿತ ಸಭೆಯಲ್ಲಿ ವಾಕ್ಯಾರ್ಥವನ್ನೂ ಸಹ ಮಾಡಿಸಿದ ಪ್ರಸಂಗ ಸ್ಮರಣಾರ್ಹವಾದುದು.

ಆಂಧ್ರದೇಶದಲ್ಲಿ ಶ್ರೀ ಶ್ರೀಗಳವರು ಸಂಚಾರಮಾಡುತ್ತಿದ್ದರು. ಆಂಧ್ರದೇಶದ ಅನೇಕ ಸ್ಥಳಗಳು ವಿದ್ವಾಂಸರ ತವರೂರಾಗಿವೆ. ಅಲ್ಲಿ ದ್ವಿವೇದಿಗಳು, ತ್ರಿವೇದಿಗಳು, ಚತುರ್ವೇದಿಗಳೂ, ಹಲವಾರು ಶಾಸ್ತ್ರಗಳಲ್ಲಿ ಪಂಡಿತರಾದವರೂ ಹೇರಳವಾಗಿದ್ದಾರೆ. ಅಗ್ನಿಹೋತ್ರಿಗಳೂ, ಯಜ್ಞಯಾಗಾದಿಗಳನ್ನು ನಡೆಸುವ ಶ್ರೋತ್ರಿಯರೂ ತುಂಬಾ ಜನರಿದ್ದಾರೆ. ಶ್ರೀ ಶ್ರೀಗಳವರು ಪಾದವಿಟ್ಟೆಡೆಯಲ್ಲಿ, ವಿದ್ವಾಂಸರಿದ್ದರೆ ಅವರ ಸಭೆಯನ್ನು ಕರೆಯಿಸಿ, ವಾಕ್ಯಾರ್ಥಗಳನ್ನೂ ಏರ್ಪಡಿಸುತ್ತಾರೆ. ವಿದ್ವಾಂಸರನ್ನೆಲ್ಲಾ ಸನ್ಮಾನಿಸುತ್ತಾರೆ. ಶ್ರೀ ಶ್ರೀಗಳವರು ಒಂದು ಪಟ್ಟಣದಲ್ಲಿ ಬಿಡಾರಮಾಡಿದ್ದರು. ಅವರ ಸಮ್ಮುಖದಲ್ಲಿ ವಿದ್ವಾಂಸರ ಸಭೆ ಸೇರಿತ್ತು. ವಾಕ್ಯಾರ್ಥ ಜರುಗುತ್ತಿತ್ತು. ಸಭೆ ನಡೆಯುತ್ತಿದ್ದಾಗ ಆ ಸೀಮೆಯ ಪಂಡಿತರೊಬ್ಬರು ಬಂದು ಶ್ರೀ ಶ್ರೀಗಳವರಿಗೆ ಅಭಿವಾದನ ಮಾಡಿದರು. ಎದ್ದುನಿಂತು ಕೈಜೋಡಿಸಿ ತಲೆಬಾಗಿ, "ಮಹಾ ಸನ್ನಿಧಾನದಲ್ಲಿ ನನ್ನದೊಂದು ಕೋರಿಕೆಯಿದೆ". ಅದನ್ನು ಈಡೇರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಶ್ರೀಗಳವರು "ಆಯಿತು. ಏನು ಬೇಕೋ ಹೇಳಿರಿ" ಎಂದು ಅಪ್ಪಣೆ ಕೊಡಿಸಿದರು.

"ತಮ್ಮ ಆಸ್ಥಾನದ ವಿದ್ವಾಂಸರನ್ನು ವಾಕ್ಯಾರ್ಥದಲ್ಲಿ ಪ್ರಶ್ನಿಸುವ ಅವಕಾಶವನ್ನು ತಾವು ನನಗೆ ಕೊಡಬೇಕು. ಮಧ್ಯದಲ್ಲಿ ತಾವು ಅವರ ನೆರವಿಗೆ ಬರಬಾರದು" ಎಂದು ಪಂಡಿತರು ಬಿನ್ನವಿಸಿದರು.

ಶ್ರೀಗುರುಗಳವರಿಗೆ ಪಂಡಿತರ ಅಂತರ್ಯ ಅರ್ಥವಾಗಿಬಿಟ್ಟಿತು. "ಹಾಗೆಯೇ ಆಗಲಿ" ಎಂದುಬಿಟ್ಟರು.

ಪಂಡಿತರು ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸುವ ಅವಕಾಶ ಬಂತೆಂದು ಹಿಗ್ಗಿದ್ದರು. ತಮ್ಮ ವಾಕ್ಯಾರ್ಥವನ್ನು ಆರಂಭಿಸಿ ತರ್ಕಕೋಟಿಗಳನ್ನು ಏರಿಸುತ್ತಾ ಹೋದರು. ಮಹಾ ಮಹಾ ವಿದ್ವಾಂಸರಾಗಿದ್ದವರು ಅಂದು ಮಂಕು ಬಡಿದವರಂತೆ ಸುಮ್ಮನಿದ್ದುಬಿಟ್ಟರು. ಆ ಪಂಡಿತರು 'ನಾನೇ ಗೆದ್ದೆ' ಎಂದು ಹೆಮ್ಮೆಯಿಂದ ಬೀಗಬೇಕು, ಅಷ್ಟರಲ್ಲಿಯೇ ಒಂದು ವಿಸ್ಮಯ ಜರುಗಿತು.

ಶಾಸ್ತ್ರಾರ್ಥಗಳನ್ನು ನಡೆಸುವುದು ವಿಚಾರ ವಿಮರ್ಶೆ, ಅನುಮಾನ ಪರಿಚ್ಛೇದ, ಸಿದ್ಧಾಂತದ ನಿರ್ಣಯ ಇವುಗಳಿಗಾಗಿಯೇ. ವಿನಾ ಮತ್ತೊಬ್ಬರನ್ನು ಖಂಡಿಸಿ ತೇಜೋ

Sri Vidyabharathi Book Centre, Sringeri

CC-O. In Public Domain. Digitized by eGangotri

ವಧೆ ಮಾಡುವುದಕ್ಕಲ್ಲ. ಎದುರುವಾದಿಯ ಬಾಯಿ ಕಟ್ಟಿಸಿ ಹೆಮ್ಮೆ ಬೀಗುವುದಕ್ಕಲ್ಲ. ಇದನ್ನು ಆ ಪಂಡಿತರಿಗೆ ಮನವರಿಕೆ ಮಾಡಬೇಕಾಗಿತ್ತು. ಅವರ ಹಮ್ಮನ್ನು ತಗ್ಗಿಸಿ ಅವರನ್ನು ರಜೋಗುಣವಿಮುಖರನ್ನಾಗಿ ಮಾಡಬೇಕಾಗಿತ್ತು.

ಆ ಪಂಡಿತ ಸಭೆಯಲ್ಲಿ ಒಬ್ಬ ತರುಣ ವಿದ್ಯಾರ್ಥಿಯಿದ್ದರು. ಆತ ವಿದ್ವತ್ ಸಭೆಗಳಲ್ಲಿ ಕುಳಿತು ಗೋಷ್ಠಿಯ ಕಾರ್ಯಕಲಾಪಗಳಲ್ಲಿ ಆಸಕ್ತಿಯಿಂದ ಸೇರುತ್ತಿದ್ದನು. ಅಂದಿನ ಸಭೆಯಲ್ಲಿ ಮೂಡಿದ ಗಂಭೀರ ವಾತಾವರಣವನ್ನು ಕಂಡ ಆತನ ಮನಸ್ಸಿನಲ್ಲಿ ವಿಚಿತ್ರಾನುಭವವಾಯಿತು. ಎದ್ದುನಿಂತು ಶ್ರೀ ಶ್ರೀಗಳವರಿಗೆ ಅಭಿವಾದನ ಮಾಡಿದನು. ಆ ತರುಣನನ್ನು ದೃಷ್ಟಿಸಿದ ಶ್ರೀ ಶ್ರೀಗಳವರು ಆತನನ್ನು ಆಶೀರ್ವದಿಸಿದರು. ಅನಂತರ ಆ ತರುಣನು ಆ ಮಹಾ ಪಂಡಿತರೆದುರು ಕುಳಿತು ಅವರ ತರ್ಕಕೋಟಿಯನ್ನೆಲ್ಲಾ ಅಲುಗಿಸುತ್ತಾ ಬಂದನು. ಸಭೆಗೆಲ್ಲಾ ಆಶ್ಚರ್ಯವಾಯಿತು. ಆ ಮಹಾ ಪಂಡಿತರಂತೂ ಆತನ ವಾಕ್‌ಝರಿಯಿಂದ ಮೂಕರಾಗಿ ಬಿಟ್ಟಿದ್ದರು.

ಆದಾದ ಬಳಿಕ ಆ ತರುಣನು ತಾನೇ ಕೆಲವು ಪ್ರಶ್ನೆಗಳನ್ನು ಹಾಕಿ ಪಂಡಿತರನ್ನು ಉತ್ತರಿಸುವಂತೆ ಕೇಳಿದನು. ಮಹಾ ವಿದ್ವಾಂಸರಾದ ಅವರಿಗೆ ಉತ್ತರ ಸ್ಫುರಿಸಲೇ ಇಲ್ಲ. ಅವರ ಹೆಮ್ಮೆಯೆಲ್ಲಾ ಉಡುಗಿಹೋಯಿತು. ಅವರು ಶ್ರೀ ಗುರುಗಳಿಗೆ ವಂದಿಸಿ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಿ ಹೇಳುವುದಾಗಿ ಬಿನ್ನವಿಸಿ, ಸಭೆಯಿಂದ ನಿರ್ಗಮಿಸಿದರು.

ಶ್ರೀ ಶ್ರೀಗಳವರಿಂದ ಹೀಗೆ ಅನುಗ್ರಹಿಸಲ್ಪಟ್ಟ ಆ ತರುಣನು ಮುಂದೆ ಪ್ರಕಾಂಡ ಪಂಡಿತನಾಗಿ, ವಿದ್ವನ್ಮಾನ್ಯನಾದನು.

ಇಂತಹ ಪ್ರಸಂಗಳು ಹಲವಾರು ಇವೆ.

ಶ್ರೀ ಶ್ರೀಗಳವರ ದರ್ಶನಕ್ಕಾಗಿ ಬೆಂಗಳೂರಿನಿಂದ ಒಂದು ಸಂಸಾರ ಬಂದಿತ್ತು. ಒಂದು ಟ್ಯಾಕ್ಸಿಯನ್ನು ಗೊತ್ತುಮಾಡಿಕೊಂಡು ಬಂದಿದ್ದ ಆ ಸಂಸಾರ ಶೃಂಗೇರಿಯಲ್ಲಿ ಹಲವಾರು ದಿನವಿದ್ದು, ಸುತ್ತ ಮುತ್ತಲ ಮುಖ್ಯ ಕ್ಷೇತ್ರಗಳನ್ನೆಲ್ಲಾ ಸಂದರ್ಶಿಸಿದ್ದರು. ಅವರು ಹೊರಡುವ ದಿನ ಫಲ ಮಂತ್ರಾಕ್ಷತೆಗಾಗಿ ಅವರೆಲ್ಲರೂ ಶ್ರೀ ಶ್ರೀಗಳವರ ಬಿಡಾರವಾದ ಶ್ರೀ ಸಚ್ಚಿದಾನಂದ ವಿಲಾಸದಲ್ಲಿ ಸೇರಿದ್ದರು.

ಟ್ಯಾಕ್ಸಿಯ ಚಾಲಕ ಅಷ್ಟುದಿನವೂ ಅವರೆಲ್ಲರ ಚಟುವಟಿಕೆಗಳನ್ನು ಗಮನಿಸುತ್ತಿದ್ದನು. ನಿತ್ಯವೂ ಹೊಳೆಯಲ್ಲಿ ಮಿಂದು ಶ್ರೀ ಶಾರದಾಂಬಾ ದೇವಾಲಯಕ್ಕೆ ಆತನೂ ಹೋಗುತ್ತಿದ್ದನು. ದೂರದಿಂದಲೇ ಶ್ರೀ ಗುರುಗಳ ದರ್ಶನವನ್ನೂ ಮಾಡುತ್ತಿದ್ದನು. ಶ್ರೀ ಶ್ರೀಗಳವರನ್ನು ದರ್ಶನ ಮಾಡಿದಾಗಿನಿಂದಲೂ ಅವನಲ್ಲಿ ವಿಶೇಷ ಬದಲಾವಣೆ ಪ್ರಾರಂಭವಾಗಿತ್ತು. ಅನಿರ್ವಚನೀಯವಾದ ತೃಪ್ತಿ, ಸಂತೋಷ ಉಂಟಾಗಿತ್ತು. ಬೆಂಗಳೂರಿಗೆ ಹಿಂದಿರುಗುವ ದಿನ ಆತನೂ ಸ್ನಾನ ಮಾಡಿ, ಮಡಿಯನ್ನುಟ್ಟು ದೂರದಲ್ಲಿ ನಿಂತಿದ್ದನು. ಶ್ರೀ ಶ್ರೀಗಳವರು ಒಬ್ಬೊಬ್ಬರಾಗಿ ಎಲ್ಲರನ್ನು ಕುಶಲ ಪ್ರಶ್ನೆಮಾಡುತ್ತಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಫಲಮಂತ್ರಾಕ್ಷತೆಯನ್ನೀಯುತ್ತಿದ್ದರು. ಈತನು ದೂರದಲ್ಲಿ ಭಯ ಭಕ್ತಿಯಿಂದ ಕೈಮುಗಿದು ನಿಂತಿದ್ದನು. ಶ್ರೀ ಶ್ರೀಗಳವರು ಹತ್ತಿರಕ್ಕೆ ಕರೆದರು. "ಎಲ್ಲಿಂದ ಬಂದಿದ್ದೀರಿ ?" ಎಂದು ಪ್ರಶ್ನಿಸಿದರು. ಆತನ ಉದ್ಯೋಗ ಮನೆಮಠ ಎಲ್ಲವನ್ನೂ ವಿಚಾರಿಸಿದರು. ಫಲಮಂತ್ರಾಕ್ಷತೆಯನ್ನಿತ್ತು, "ಶ್ರೀ ಶಾರದಾಚಂದ್ರಮೌಳೀಶ್ವರರ ಅನುಗ್ರಹ ನಿಮ್ಮ ಮೇಲೆ ಸದಾ ಇದೆ. ಶುಭವಾಗಲಿ" ಎಂದು ಹರಸಿದರು. ಆತನ ಆನಂದಕ್ಕೆ ಪಾರವಿಲ್ಲ. ಭಕ್ತಿಯ ಉತ್ಕಟತೆಯಿಂದ ಆತ ನೆಲಕ್ಕೆ ಬಾಗಿ ಸಾಷ್ಟಾಂಗ ವಂದನೆ ಮಾಡಿದರು.

ಟ್ಯಾಕ್ಸಿಯಲ್ಲಿ ಕುಳಿತು ಬೆಂಗಳೂರಿಗೆ ಬಂದು, ಭಕ್ತರನ್ನೆಲ್ಲಾ ಅವರ ಮನೆಯಲ್ಲಿ ಇಳಿಸಿದನು. "ನಿಮ್ಮ ಔದಾರ್ಯದಿಂದ ನನಗೆ ಶ್ರೀ ಗುರುಗಳ ದರ್ಶನ ಲಭಿಸಿತು. ನಾನು ನಿಮಗೆಷ್ಟು ಕೃತಜ್ಞನಾದರೂ ಸಾಲದು. ಮುಂದೆ ಎಂದಾದರೂ ನೀವು ಶೃಂಗೇರಿಗೆ ಹೋಗುವಾಗ ನನ್ನನ್ನು ಮರೆಯಬೇಡಿ" ಎಂದು ಬಿನ್ನವಿಸಿ ತನ್ನ ಮನೆಗೆ ಹಿಂದಿರುಗಿದನು.

ತನ್ನ ಪತ್ನಿಗೆ ಮಕ್ಕಳಿಗೆ ತನ್ನನ್ನೂ ಶ್ರೀ ಗುರುಗಳು ಅನುಗ್ರಹಿಸಿದರೆಂದು ಹೇಳಿಕೊಂಡು ಪ್ರಸಾದವನ್ನು ಹಂಚಿದನು. ಗುರುಗಳು ಅನುಗ್ರಹಿಸಿದರೆ ? ಹೌದು. ಅಂದಿನಿಂದಲೇ ಆತನ ಜೀವನದಲ್ಲಿ ಸಂಪೂರ್ಣ ಪರಿವರ್ತನೆಯೇ ಆಗಿಬಿಟ್ಟಿತು. ಸಾತ್ವಿಕ ಗುಣಗಳು ಮೂಡಿದವು. ಟ್ಯಾಕ್ಸಿಯನ್ನು ಲಾಭಕ್ಕಾಗಿ ಓಡಿಸುವುದನ್ನು ನಿಲ್ಲಿಸಿದನು. ಸದಾ ಸತ್ಸಂಗದಲ್ಲಿ ಇರುತ್ತಿದ್ದ ಆತ ಕ್ರಮೇಣ ಕನ್ನಡದಲ್ಲಿ ಭಕ್ತಿಯ ಪದ್ಯಗಳನ್ನು ರಚಿಸಲು ಆರಂಭಿಸಿದನು. ಪದ್ಯಗಳು ದೇವರ ಹಾಡುಗಳಾಗಿ ಮೂಡುತ್ತಿದ್ದವು.

ಆತ ಈಗಲೂ ಬೆಂಗಳೂರಿನ ಸಮೀಪದಲ್ಲಿ ಸ್ವಲ್ಪ ಜಮೀನನ್ನು ಕೊಂಡು ಸಾಗುವಳಿ ನಡೆಸಿಕೊಂಡು, ಸಾತ್ವಿಕ ಜೀವನವನ್ನು ನಡೆಸುತ್ತ, ಶ್ರೀ ಶ್ರೀಗಳವರ ಕೃಪೆಯನ್ನು ನೆನೆಯುತ್ತಾ ಬಾಳ್ವೆ ನಡೆಸುತ್ತಿದ್ದಾನೆ.

೩೬. ವಿಶಾಲ ಹೃದಯೀ

ಮಾನವನಿಗೆ ತನ್ನ ತಾಯಿಗೆ ಸಮಾನವಾದ ಪವಿತ್ರವಾದ ವಸ್ತು ಬೇರೊಂದಿಲ್ಲ. ಅಧಿಕಾರ, ಐಶ್ವರ್ಯ, ಆಳುಕಾಳು, ವೈಭವ ಇವೆಲ್ಲವೂ ಮಾತೃವಾತ್ಸಲ್ಯದ ಮುಂದೆ ತೃಣ ಸಮಾನ. ಮಗನ ಲೋಪದೋಷಗಳನ್ನು ತಂದೆ ಒಂದು ಅಥವಾ ಎರಡು ಸಲ ಕ್ಷಮಿಸಬಹುದು. ಅನಂತರ ಮಗನಿಗೆ ಸಿಕ್ಕುವುದು ಕೋಪ ಅಸಮಾಧಾನ. ಆದರೆ ತಾಯಿ ಹಾಗಲ್ಲ. ಮಗನ ತಪ್ಪನ್ನು ಪದೇ ಪದೇ ತಿದ್ದಿ ಅವನೆಷ್ಟೇ ತಪ್ಪುಗಳನ್ನು ಮಾಡಿರಲಿ ಅವುಗಳನ್ನೆಲ್ಲಾ ಮರೆತು ತನ್ನ ವಾತ್ಸಲ್ಯದ ಹೃದಯದಲ್ಲಿ ಮಗನನ್ನು ಪೋಷಿಸುವಳು. ಶ್ರೀ ಶಂಕರ ಭಗವತ್ಪಾದರು "ಕುಪುತ್ರೋ ಜಾಯೇತ ಕುಮಾತಾ ನ ಭವತಿ" ಎಂದು ಹೇಳಿರುವುದು ಸತ್ಯಸ್ಯ ಸತ್ಯ. ಮಾತೆ ವಾತ್ಸಲ್ಯಮೂರ್ತಿ, ಕ್ಷಮಾಶೀಲೆ, ಕರುಣಾಮಯಿ, ಮಕ್ಕಳಿಗೆ ತಾಯಿಯಲ್ಲಿರುವ ಸಲಿಗೆ ಇನ್ನಾರಲ್ಲೂ ಇರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಅಭಿನವ ತೀರ್ಥರ ಸನ್ನಿಧಿಗೆ ಹೋದಾಗಲೂ ಅನೇಕರಿಗೆ ಇದೇ ಅನುಭವವಾಗುತ್ತದೆ. ತಮ್ಮ ತಾಯಿಯ ಪವಿತ್ರ ಸನ್ನಿಧಿಗೆ ಹೋದಂತೆಯೇ ಭಾಸವಾಗುತ್ತದೆ. ಪೀಠಾಧಿಪತಿಗಳು, ಜಗದ್ಗುರುಗಳು ಎಂದರೆ ಅನೇಕರಿಗೆ ಒಂದು ವಿಧವಾದ ಭಯ. ಗುರುಗಳೆಂದರೆ ಸಂಪ್ರದಾಯ ನಿಷ್ಠರು, ಮಡಿಮೈಲಿಗೆಯನ್ನು ಕಟ್ಟು ನಿಟ್ಟಾಗಿ ಪಾಲಿಸುವವರು ಎಂದೇ ಬಹುಜನದ ನಂಬಿಕೆ. ಅನೇಕರು ಈ ಕಾರಣಕ್ಕಾಗಿ ಗುರುಗಳೆಂದರೆ ಭಯಪಡುತ್ತಾರೆ. ಅವರ ಸಂಪ್ರದಾಯ ನಿಷ್ಠೆ, ಮಡಿಮೈಲಿಗೆಯ ಭಾವನೆಗಳಿಗೆ ತಾವು ಹೊರತಾಗಿದ್ದೇವೆ, ಎಂಬ ಭಾವನೆಯಿಂದ ದೂರವಾಗಿಯೇ ಇದ್ದು ಬಿಡುತ್ತಾರೆ.

ಆದರೆ ಶ್ರೀಮದಭಿನವ ವಿದ್ಯಾತೀರ್ಥರನ್ನು ಒಮ್ಮೆ ದರ್ಶನಮಾಡಿದರೆ ಸಾಕು ಅಂತಹ ಕಲ್ಪನೆಗಳೆಲ್ಲವೂ ಹಾರಿಹೋಗುತ್ತವೆ. ಮಡಿಮೈಲಿಗೆ, ಆಚಾರ ಇವು "ನನ್ನನ್ನು ಮುಟ್ಟಬೇಡ, ನನ್ನ ಹತ್ತಿರ ಬರಬಾರದು, ದೂರ ಇರು" ಎಂಬ ನಿಷೇಧಾರ್ಥಕ ನಿಯಮಗಳಲ್ಲ, ಬಹಿರಂಗದ ಶುಚಿತ್ವದಿಂದ ಅಂತರ್ಯದ ಶುದ್ಧತೆಗೆ ನೆರವಾಗುವ ನಿಯಮಗಳೆಂದು ಅರ್ಥವಾಗುತ್ತವೆ. ಶುದ್ಧವಾದ ವಸ್ತ್ರವನ್ನುಟ್ಟು ಉತ್ತರೀಯವನ್ನು ಉಪವೀತದಂತೆ ಹೊದ್ದು, ಹಣೆಗೆ ಭಸ್ಮ, ಮುದ್ರೆ, ನಾಮಗಳನ್ನು ಧರಿಸಿ, ಆಕಾರದಲ್ಲಿ ಮಡಿಯಂತೆ ಕಂಡರೂ ಅಂತರ್ಯದಲ್ಲಿ ಅಲ್ಪತನ, ಅಸೂಯೆ, ಅಹಂಕಾರಗಳಿದ್ದರೆ ಅದು ಮಡಿಯಾಗುತ್ತದೆಯೆ? ಹೊರಗೆ ಮಡಿಯಾಗಿರಬಹುದು. ಒಳಗೆ ಅದು ಮೈಲಿಗೆಯೇ ತಾನೆ? ಮಹಾತ್ಮರ ದರ್ಶನಕ್ಕೆ ಹೋಗುವವರಿಗೆ ಅಂತಃಕರಣ ಶುದ್ಧಿ ಬಲು ಅಗತ್ಯ.

ಶ್ರೀ ಶ್ರೀಗಳವರು ಸಂಚಾರಕ್ರಮದಲ್ಲಿ ಕರ್ನಾಟಕದ ಒಂದು ಪಟ್ಟಣಕ್ಕೆ ದಯಮಾಡಿಸಿದ್ದರು. ಅಲ್ಲಿದ್ದ ಸರ್ಕಾರದ ಮುಖ್ಯ ಅಧಿಕಾರಿ-ತಹಸಿಲ್ದಾರರು - ಮತ್ತು ನೌಕರರೂ ಶ್ರೀ ಗುರುಗಳವರ ಸ್ವಾಗತಕ್ಕೆ, ಬಿಡಾರಕ್ಕೆ, ಪೂಜಾದಿಗಳಿಗೆ ವ್ಯವಸ್ಥೆ ಮಾಡಲು, ಊರಿನ ನಾಗರಿಕರೊಂದಿಗೆ ಸಹಕರಿಸಿದ್ದರು. ವ್ಯವಸ್ಥೆಯೆಲ್ಲವೂ ಬಹಳ ಸಮರ್ಪಕವಾಗಿದ್ದು, ಗುರುಗಳು ಕಾರ್ಯಕರ್ತರ ದಕ್ಷತೆಯನ್ನು ತುಂಬಾ ಮೆಚ್ಚಿಕೊಂಡರು. ಆ ಊರಿನಿಂದ ಮುಂದಕ್ಕೆ ಪ್ರಯಾಣ ಹೊರಡುವ ದಿನ ಬಂದಿತು. ಶ್ರೀ ಶ್ರೀಗಳವರು ಎಲ್ಲರಿಗೂ ಫಲಮಂತ್ರಾಕ್ಷತೆಯನ್ನು ಅನುಗ್ರಹಿಸಿದರು. ಇನ್ನೂ ಒಬ್ಬಿಬ್ಬರು ಫಲಮಂತ್ರಾಕ್ಷತೆಗೆ ಬರಲಿಲ್ಲವೆಂದು ಅನ್ನಿಸಿ "ಎಲ್ಲಿ ಸರ್ಕಾರದ ಅಧಿಕಾರಿಗಳಾರೂ ಕಾಣುತ್ತಿಲ್ಲವಲ್ಲ, ಅವರನ್ನೂ ಕರೆಯಿರಿ" ಎಂದರು. ತಹಸೀಲ್ದಾರರು ದೂರದಲ್ಲಿ ಎಲ್ಲಿಯೋ ನಿಂತಿದ್ದರು, ಮುಂದೆ ಬರಲು ಸಂಕೋಚಪಟ್ಟುಕೊಂಡು. "ಎಲ್ಲಿ ಕರೆಯಿರಿ ನಿಮ್ಮ ತಹಸೀಲ್ದಾರರನ್ನು," ಎಂದು ಗುರುಗಳು ಮತ್ತೊಮ್ಮೆ ಕೇಳಿದರು. ಆಗ ಸಮೀಪದಲ್ಲಿಯೇ ಇದ್ದ ಊರಿನಗಣ್ಯರೊಬ್ಬರು "ಮಹಾಸ್ವಾಮಿ, ಅವರು ತುಂಬಾ ಸಂಕೋಚದಿಂದ ದೂರ ನಿಂತಿದಾರೆ" ಎಂದರು. ಗುರುಗಳು, "ಇಲ್ಲಿಗೆ ಬಂದಾಗಿನಿಂದಲೂ ಅವರ ಚಟುವಟಿಕೆಗಳನ್ನು ಗಮನಿಸುತ್ತಿದ್ದೇನೆ. ಅವರ ಗುರುದೈವಭಕ್ತಿ. ಶ್ರದ್ಧೆ ಇವು ಇತರರಿಗೂ ಮೇಲ್ಪಂಕ್ತಿಯಾಗಿವೆ. ಅವರೇಕೆ ಸಂಕೋಚಪಡಬೇಕು?" ಎಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ಆ ಗಣ್ಯರು "ಮಹಾಸ್ವಾಮಿ ಅವರು ಹರಿಜನರು. ಆದ್ದರಿಂದ ಹಿಂದೆಯೇ ಸರಿದಿದ್ದಾರೆ." ಎಂದರು. "ಹರಿಜನರಾದರೇನಂತೆ ? ದೈವಕಟಾಕ್ಷಕ್ಕೆ ಬೇರೆಯವರಂತೆ ಅವರೂ ಪಾತ್ರರಲ್ಲವೆ ? ಬರಲಿ, ಕರೆಯಿರಿ" ಎಂದರು. ಶ್ರೀಗುರುಗಳ ಶ್ರೀವಾಣಿಯನ್ನು ಕೇಳಿದ ತಹಸೀಲ್ದಾರರು ಕಣ್ಣೀರ್ದುಂಬಿ, ಭಕ್ತಿಯಿಂದ ಶ್ರೀಗುರುಚರಣಕ್ಕೆ ಎರಗಿ, ಅವರ ಅನುಗ್ರಹ ಆಶೀರ್ವಾದಗಳನ್ನು ಪಡೆದರು. ಅವರ ಹೃದಯ ವೈಶಾಲ್ಯಕ್ಕೂ ಶಿಷ್ಯವಾತ್ಸಲ್ಯಕ್ಕೂ ತಹಸೀಲ್ದಾರರೂ ಊರಿನ ನಾಗರಿಕರೂ ಮಾರು ಹೋದರು.

ಶ್ರೀ ಗುರುಗಳವರು ಮೈಸೂರು ನಗರಕ್ಕೆ ದಯಮಾಡಿಸಿದ್ದರು. ಶಂಕರಮಠದಲ್ಲಿ ಹಾಕಿದ್ದ ಹಸಿರುವಾಣಿ ಚಪ್ಪರದಲ್ಲಿ ಎತ್ತರವಾದ ವೇದಿಕೆಯಲ್ಲಿ ಮಂಡಿಸಿದ್ದರು. ವೇದಿಕೆಯ ಒಂದು ಪಕ್ಕದಲ್ಲಿ ವೈದಿಕಮಂಡಲಿಯೂ, ಇನ್ನೊಂದು ಪಕ್ಕದಲ್ಲಿ ಸ್ವಾಗತ ಸಮಿತಿಯ ಸದಸ್ಯರೂ ಕುಳಿತಿದ್ದರು. ಸಂಪ್ರದಾಯ ರೀತಿಯಲ್ಲಿ ಉಡುಪನ್ನು ಧರಿಸಿದ್ದವರೇ ಅಲ್ಲಿ ಕುಳಿತಿದ್ದುದು. ಸ್ವಾಗತಮಂಡಲಿಯ ಒಬ್ಬ ಸದಸ್ಯರು ಸ್ವಲ್ಪ ಹೊತ್ತಾಗಿ ಬಂದರು. ಶರಟು ಧರಿಸಿದ್ದುದರಿಂದ ಸಂಕೋಚ ಪಟ್ಟುಕೊಂಡು ದೂರದಲ್ಲಿ ನಿಂತಿದ್ದರು. ಶ್ರೀ ಶ್ರೀಗಳವರ ದೃಷ್ಟಿ ಅವರತ್ತ ಹರಿದು, ಗುರುಗಳು ಅವರನ್ನು ಹತ್ತಿರ ಬಂದು ಕುಳಿತುಕೊಳ್ಳುವಂತೆ ಕರೆದರು. ಆ ಸದಸ್ಯರಿಗೆ ಕಕ್ಕಾವಿಕ್ಕಿಯಾಯಿತು. ಕೂಡಲೇ ತಮ್ಮ ಶರಟನ್ನು ಬಿಚ್ಚಲು ಉಪಕ್ರಮಿಸಿದರು. ಅದನ್ನು ಕಂಡ ಗುರುಗಳು "ಬನ್ನಿ, ಬನ್ನಿ ಅಂಗಿಯಿದ್ದರೇನೂ ಬಾಧಕವಿಲ್ಲ. ಅಂತರಂಗ ಶುದ್ಧವಾಗಿರ ಬೇಕಾದುದು ಮುಖ್ಯ" ಎಂದಪ್ಪಣೆ ಮಾಡಿದರು. ರಾಯರು ತಮ್ಮ ಶರಟನ್ನು ಬಿಚ್ಚಿ ವಲ್ಲಿಯನ್ನು ಹೊದೆದು ಗುರುಗಳವರಸನ್ನಿಧಿಗೆ ಬಂದು ನಮ್ರರಾಗಿ ಕುಳಿತರು.

ಇನ್ನೊಂದು ಸಂದರ್ಭದಲ್ಲಿ ಶ್ರೀ ಶ್ರೀಗಳವರ ಸುತ್ತ ಮುತ್ತ ಬಹಳ ಜನ ಶಿಷ್ಯರು ಕುಳಿತಿದ್ದರು. ಅವರಲ್ಲಿದ್ದವರೆಲ್ಲಾ ಸಾಂಪ್ರದಾಯಕ ಉಡುಪಿನಲ್ಲಿಯೇ ಇದ್ದವರು. ಒಬ್ಬಬ್ಬರು ವೇಷಧಾರಿಗಳೂ ಅಲ್ಲಿದ್ದರು ತಾವೂ ಬಹಳ ಭಕ್ತರಂತೆ ಆಚಾರ ಶೀಲರಂತೆ ನಟನೆ ಮಾಡುತ್ತ. ಸಾಂಪ್ರದಾಯಿಕವಾದ ಉಡುಪನ್ನು ಧರಿಸಿದವರನ್ನು ಕಂಡರೆ ಗುರುಗಳಿಗೆ ಸಂತೋಷವಾಗುವುದಾದರೂ ಅಂತಹವರಲ್ಲಿ ಅಂತರಂಗ ಶುದ್ಧಿಯನ್ನೂ ಗುರುಗಳು ನಿರೀಕ್ಷಿಸುತ್ತಾರೆ. ಸಾತ್ವಿಕರಾದ ಶಿಷ್ಯರೊಬ್ಬರು ದೂರ ಕುಳಿದ್ದರು. ಗುರುಗಳು ಅವರತ್ತ ತಿರುಗಿ "ಬನ್ನಿ, ಹತ್ತಿರ ಬಂದು ಕುಳಿತುಕೊಳ್ಳಿ. ಸ್ವಾಮಿಗಳ ಹತ್ತಿರ ಬರಬಾರದವರು, ದೂರವಿಡಲ್ಪಡಬೇಕಾದವರೂ ಹತ್ತಿರ ಬಂದಿರುತ್ತಾರೆ. ನಿಮ್ಮಂತಹ ಸಾತ್ವಿಕರು ದೂರವಿರುವುದುಂಟೆ? ಬನ್ನಿ ಬನ್ನಿ" ಎಂದು ಅಪ್ಪಣೆ ಮಾಡಿ ಹತ್ತಿರಕ್ಕೆ ಕರೆದು ಕುಳ್ಳಿರಿಸಿಕೊಂಡರು.

ಶೃಂಗೇರಿಗೆ ಇತ್ತೀಚೆಗೆ ಪ್ರವಾಸೀ ಬಸ್ಸುಗಳು ಅಧಿಕವಾಗಿ ಬರುತ್ತಿರುತ್ತವೆ. ಬಸ್ಸಿನ ತುಂಬಾ ಬಂದ ಜನ ಆತುರಾತುರವಾಗಿ ಶ್ರೀ ಶಾರದಾಂಬಾ ದೇವಾಲಯವನ್ನು ದರ್ಶಿಸಿ ಗುರುಗಳ ದರ್ಶನಕ್ಕಾಗಿ ಬರುತ್ತಾರೆ. ಅಂತವರಲ್ಲಿ [illegible]ಮಂದಿ ಶರಟು ಪ್ಯಾಂಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಧಾರಿಗಳಾಗಿಯೇ ಇರುತ್ತಾರೆ. ಅವರಿಗೆ ಶೃಂಗೇರಿಯಲ್ಲಿ ದೊರಕುವ ಅತ್ಯಲ್ಪಕಾಲದ ಅವಕಾಶದಲ್ಲಿ ದೇವರ ಮತ್ತು ಗುರುಗಳ ದರ್ಶನ ಮಾಡುವ ಆಸೆ ಸ್ವಲ್ಪ ಜನಕ್ಕಾದರೂ ಇದ್ದೇ ಇರುತ್ತದೆ. ಅವರೆಲ್ಲರನ್ನೂ ಪಂಚೆಯುಟ್ಟೇ ಬರಬೇಕೆಂದು ವಿಧಿಸುವುದಿಲ್ಲ. ಶ್ರೀ ಶ್ರೀಗಳವರು ಎಷ್ಟೋ ಸಲ ಹೀಗೆ ಬಂದ ಜನಕ್ಕಾಗಿ ತಾವಾಗಿ ಹೊರಕ್ಕೆ ಆಗಮಿಸಿ ದರ್ಶನವೀಯುತ್ತಾರೆ. ಅವರ ಯೋಗಕ್ಷೇಮ ವಿಚಾರಿಸುತ್ತಾರೆ. ಒಮ್ಮೊಮ್ಮೆ ತೀರ್ಥ ವಿನಿಯೋಗಮಾಡಿ ಒಳಕ್ಕೆ ದಯಮಾಡಿಸಿಬಿಟ್ಟಿದ್ದರೂ, ಹೊರಗೆ ಪುನಃ ಸ್ವಲ್ಪ ಜನ ಬಂದು ಕಾದಿದ್ದಾರೆಂದರೆ, ಮತ್ತೆ ಹೊರಕ್ಕೆ ಆಗಮಿಸಿ ಅವರೆಲ್ಲರಿಗೂ ತೀರ್ಥ ವಿನಿಯೋಗ ಮಾಡಿ ಹಸನ್ಮುಖದಿಂದ ಮಾತನಾಡಿಸುತ್ತಾರೆ.

ಶ್ರೀ ಶ್ರೀಗಳವರು ಉತ್ತರಭಾರತದ ಲಕ್ನೋ ನಗರದಲ್ಲಿದ್ದಾಗ ನಡೆದ ಘಟನೆ. ಎಂದಿನಂತೆ ರಾತ್ರಿಯ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ನಡೆಸುತ್ತಿದ್ದರು. ಶ್ರೀ ಶ್ರೀಗಳವರ ಪೂಜೆಯನ್ನು ನೋಡುವುದೇ ಒಂದು ಹಬ್ಬ, ಸಂತೋಷ. ಬಹಳ ಜನ ಸೇರಿದ್ದರು. ಪೂಜೆ ಆರಂಭವಾಗಿ ಬ್ರಾಹ್ಮಣ ಸಮುದಾಯ ಶ್ರೀ ರುದ್ರಮಂತ್ರವನ್ನು ಸುಶ್ರಾವ್ಯವಾಗಿ ಪಠಿಸುತ್ತಿತ್ತು. ಜನ ತನ್ಮಯರಾಗಿ ಪೂಜೆಯನ್ನು ನೋಡುತ್ತಿದ್ದರು. ಆಗ ಇದ್ದಕ್ಕಿದ್ದಂತೆಯೇ ಆಗಂತುಕನೊಬ್ಬನು, ಅತ್ಯಾತುರದಿಂದ ಜನಗಳ ಮಧ್ಯೆ ನುಗ್ಗಿದನು. ಕೋಟು, ಶರಾಯಿ, ಪಾದರಕ್ಷೆಗಳನ್ನು ಧರಿಸಿದ್ದ ಆತನನ್ನು ಕಾವಲುಗಾರರು ತಡೆದರು. ಆತ ಅವರೆಲ್ಲರನ್ನೂ ಹಿಂದಕ್ಕೆ ತಳ್ಳಿ ಮುಂದಕ್ಕೆ ನುಗ್ಗಿದನು. ಇನ್ನೇನು ಪೂಜಾಮಂಟಪದ ಸಮೀಪಕ್ಕೆ ಧಾವಿಸುತ್ತಾನೆನ್ನುವಷ್ಟರಲ್ಲಿ, ಹಲವರು ಆತನನ್ನು ಸುತ್ತುಗಟ್ಟಿ ನಿಂತರು. ದೃಢಕಾಯನೂ, ಎತ್ತರದ ನಿಲುವಿನವನೂ ಆಗಿದ್ದ ಆತ ಅವರನ್ನೆಲ್ಲಾ ಹಿಂದಕ್ಕೆ ತಳ್ಳಿಬಿಟ್ಟು ಮುನ್ನುಗ್ಗುವ ಸಾಹಸಮಾಡುತ್ತಿದ್ದನು.

ಆಗ ಗುರುಗಳ ದೃಷ್ಟಿ ಆ ಗದ್ದಲದತ್ತ ಹರಿಯಿತು. "ಆತನನ್ನು ಬಿಡಿ" ಎಂದು ಆಜ್ಞಾಪಿಸಿದರು. ಸುತ್ತುಗಟ್ಟಿದ್ದ ಜನ ಹಿಂತಾಗಲು ಆತ ಗುರುಗಳತ್ತ ಓಡಿದನು. ಮುಖದಲ್ಲಿ ಗಾಬರಿ, ಅಚ್ಚರಿ, ಸಂತೋಷ ಮೂಡಿದ್ದ ಆತನನ್ನು ನೋಡಿ ಶ್ರೀ ಶ್ರೀಗಳವರು ಹಿಂದೀಭಾಷೆಯಲ್ಲಿ "ಕೆಳಕ್ಕೆ ಕುಳಿತುಕೋ" ಎಂದು ಆಜ್ಞಾಪಿಸಿದರು. ಆತ ಮುಗ್ಧ ಬಾಲಕನಂತೆ ಕೈಮುಗಿದು ವಜ್ರಾಸನದಲ್ಲಿ ಕುಳಿತನು.

ಪೂಜೆಯು ಮುಗಿಯಿತು. ದೀಪಾರಾಧನೆಯೂ ನಡೆಯಿತು. ಮಂತ್ರಪುಷ್ಪವೂ ಆಯಿತು. ಶ್ರೀ ಶ್ರೀಗಳವರು ನಮಸ್ಕರಿಸಲು ಅನುವಾಗುವಂತೆ ತೆರೆಯೆಳೆಯಲ್ಪಟ್ಟಿತು. ಅನಂತರ ಶ್ರೀ ಶ್ರೀಗಳವರು ಒಳಕ್ಕೆ ಹೊರಡಲು ಅನುವಾದರು. ಆತ ತನ್ಮಯನಾಗಿ ಕುಳಿತೇ ಇದ್ದನು. ಆತನನ್ನು ಕುರಿತು ಹಸನ್ಮುಖದಿಂದ "ನಾಳೆ ಬೆಳಿಗ್ಗೆ ಎಂಟು ಗಂಟೆಗೆ ಬಾ" ಎಂದು ಆಜ್ಞಾಪಿಸಿದರು. ಆತ ಅನುಮಾನಿಸುತ್ತಾ ನಿಂತಿದ್ದನು. ಸ್ವಾಮಿಗಳವರು ಕರುಣಾಮೂರ್ತಿ, ಆದರೆ ಅವರ ಹತ್ತಿರ ಇರುವ ಜನ ಧೂರ್ತರು, ಬಂದವರನ್ನು ತಡೆದು ಹಿಂದಕ್ಕೆ ಅಟ್ಟುತ್ತಾರೆ, ತುಂಬಾ ಕಠಿಣಹೃದಯರು. ನಾಳೆ ಬೆಳಿಗ್ಗೆಯೂ ಇಂದಿನಂತೆಯೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದರೇನುಗತಿ ? " ಎಂದು ಚಿಂತಿಸುತ್ತಿದ್ದನು. ಶ್ರೀ ಶ್ರೀಗಳವರು ಅವನ ಅಂತರ್ಯ ವನ್ನು ಅರಿತು, " ನಾಳೆ ಬೆಳಿಗ್ಗೆ ಸ್ನಾನಮಾಡಿ, ಧೋತಿಯನ್ನು ಉಟ್ಟು, ಉತ್ತರೀಯ ವನ್ನು ಹೊದ್ದು ಬಾ " ಎಂದು ಸಲಹೆ ಮಾಡಿದರು.

ಮಾರನೆಯ ಬೆಳಗ್ಗೆ ತಮ್ಮ ಆಹ್ನಿಕಗಳೆಲ್ಲಾ ಬೆಳೆದನಂತರ, ಶ್ರೀ ಶ್ರೀಗಳವರು ತಮ್ಮ ಸಮೀಪವರ್ತಿಗಳನ್ನು ಕರೆದು " ನೆನ್ನೆ ರಾತ್ರಿ ಬಂದಿದ್ದ ಸೇಟಜೀ ಈಗ ಬರು ತ್ತಾರೆ. ಅವರನ್ನು ನನ್ನಲ್ಲಿಗೆ ಕರೆದು ತನ್ನಿ " ಎಂದು ಅಪ್ಪಣೆಮಾಡಿದರು. ಸ್ವಲ್ಪ ಹೊತ್ತಿಗೆಲ್ಲಾ ಆ ಸೇಟಜೀ ಬಂದನು. ಆತನ ವೇಷ ಬದಲಾಗಿತ್ತು. ರೇಷ್ಮೆಯ ಧೋತ್ರ ಉಟ್ಟು, ವಸ್ತ್ರವನ್ನು ಹೊದೆದು, ಹಣೆಯಲ್ಲಿ ಗಂಧದ ಊರ್ಧ್ವಪುಂಡವನ್ನು ಧರಿಸಿ, ಕಯ್ಯಲ್ಲಿ ಜಲಯುಕ್ತವಾದ ಸ್ಥಾಲಿಯನ್ನು ಹಿಡಿದು ಬಂದ ಸೇಟರನ್ನು ಕಂಡು ಮಠದ ನೌಕರರು ವಿಸ್ಮಿತರಾದರು. ಆತನನ್ನು ಶ್ರೀ ಶ್ರೀಗಳವರಲ್ಲಿಗೆ ಕರೆತಂದರು. ಸ್ವಲ್ಪ ಹೊತ್ತಾದನಂತರ ಹೊರಕ್ಕೆ ಬಂದ. ಸೇಟಜಿಯ ಮುಖ ಹರ್ಷ, ಸಂತೋಷ ಗಳಿಂದ ಅರಳಿತ್ತು. ಶ್ರೀ ಶ್ರೀಗಳವರು ಆತನ ಕಷ್ಟಗಳನ್ನೆಲ್ಲಾ ವಿಚಾರಿಸಿ ಸಾಂತ್ವನ ನೀಡಿದ್ದರು. ಅವುಗಳ ಪರಿಹಾರಕ್ಕೆ ಆತನು ಮಾಡಬೇಕಾದ ಸುಲಭೋಪಾಯವನ್ನೂ ಸೂಚಿಸಿ, ಆತನಿಗೆ ಉಪದೇಶವನ್ನು ನೀಡಿದ್ದರು.

ಆತನು ಹೊರಬಂದಾಗ ಮಠದ ನೌಕರರಲ್ಲೊಬ್ಬರು ಆತನನ್ನು ಕುರಿತು "ನೆನ್ನೆಯ ದಿನ ನೀವು ಬಂದ ರೀತಿಯನ್ನು ನೋಡಿ ನಮ್ಮ ಜನ ನಿಮ್ಮನ್ನು ತಡೆದರು. ಈ ದಿನ ನೀವು ಶುದ್ಧ ಭಾರತೀಯ ಸಂಪ್ರದಾಯದಂತೆ ಬಂದುದನ್ನು ನೋಡಿ ನಮಗೆ ಸಂತೋಷವಾಗಿದೆ " ಎಂದು ಹಿಂದಿನ ದಿನದ ಘಟನೆಗೆ ಪಶ್ಚಾತ್ತಾಪಪೂರ್ವಕವಾಗಿ ನುಡಿದರು. ಆತ ತಾನೊಬ್ಬ ವ್ಯಾಪಾರಿಯೆಂದೂ, ವ್ಯಾಪಾರದಲ್ಲಿ ತೀರಾನಷ್ಟವನ್ನು ಅನುಭವಿಸಿ, ತುಂಬಾ ಕಷ್ಟಕ್ಕೆ ಸಿಲುಕಿದವನೆಂದೂ, ಒಂದರಹಿಂದೊಂದರಂತೆ ತನಗೆ ತೊಂದರೆಗಳು ಪ್ರಾಪ್ತವಾದುವೆಂದೂ ಹೇಳಿ, " ನನ್ನ ಕಷ್ಟ ಪರಿಹಾರಮಾರ್ಗವನ್ನು ಕೇಳಿ ಕೊಳ್ಳಲು ನಾನು ಈ ಶಂಕರಾಚಾರ್ಯರ ಹತ್ತಿರ ಬಂದೆ. ಅವರು, ಧೃತಿಗೆಡದಂತೆ ಧೈರ್ಯವನ್ನು ತುಂಬಿ, ಮಂತ್ರೋಪದೇಶಮಾಡಿದ್ದಾರೆ. ಅವರ ದರ್ಶನವಾದುದೇ ನನ್ನ ಪೂರ್ವಪುಣ್ಯವು ಇನ್ನೂ ನಶಿಸಿಲ್ಲ ಎಂಬುದನ್ನು ಸೂಚಿಸಿ, ಜೀವನದಲ್ಲಿ ಭರವಸೆ ಯನ್ನು ಮೂಡಿಸುತ್ತಿದೆ " ಎಂದು ನುಡಿದನು.

ಶ್ರೀ ಶ್ರೀಗಳವರ ಕರುಣೆ, ವಾತ್ಸಲ್ಯ, ಇವು ಅನುಪಮವಾದುವು, ಇವುಗಳಲ್ಲಿ ಮೇಲು ಕೀಳು ಎಂಬುದಿಲ್ಲ. ತಮ್ಮ ಪ್ರಪ್ರಥಮ ಸಂಚಾರವನ್ನು ಆರಂಭಿಸಿ ಶೃಂಗೇರಿ ಯಿಂದ ವಿಜಯ ಯಾತ್ರೆ ಹೊರಟ್ಟರು. ಅಲ್ಲಲ್ಲಿ ಗ್ರಾಮಗಳವರು ಶ್ರೀ ಶ್ರೀಗಳವರನ್ನು ಸ್ವಾಗತಿಸಿ ವಂದನೆಯನ್ನು ಅರ್ಪಿಸುತ್ತಿದ್ದರು. ಒಂದು ಗದ್ರುಮದಲ್ಲಿ ಗುರುಗಳಿದ್ದ ಕಾರು ಬಂದೊಡನೆ ಜನ ಜಯಘೋಷಮಾಡುತ್ತಾ ಮಂಗಳವಾದ್ಯದ ಪುನಿನಾದ ದೊಡನೆ ಅವರನ್ನು ಸ್ವಾಗತಿಸಿದರು. ಜನ ಭಕ್ತಿಶ್ರದ್ಧೆಯಿಂದ ನುಗ್ಗಿದರು. ಗುರು

Sri Vidyabharathi Book Centre, Sringeri

CC-O. In Public Domain. Digitized by eGangotri

ದರ್ಶನಕ್ಕೆ. ಗುರುಗಳು ಎಲ್ಲರನ್ನೂ ಆಶೀರ್ವದಿಸಿ ಮುಂದಕ್ಕೆ ಹೊರಟರು. ಅರ್ಧಮೈಲಿ ಅಂತರವೂ ಇಲ್ಲ. ಅದೇ ಗ್ರಾಮದ ಕೊನೆಯಲ್ಲೂ ಜನ ಸೇರಿದ್ದರು. ಹಸಿರುವಾಣಿ ಚಪ್ಪರ ಹಾಕಲ್ಪಟ್ಟಿತ್ತು. ಅಲ್ಲಿ ಶ್ರೀ ಶ್ರೀಗಳವರನ್ನು ಎದುರ್ಗೊಳುವ ಕಾರ್ಯಕ್ರಮ ಮೊದಲೇ ಏರ್ಪಾಟಾಗಿರಲಿಲ್ಲ. ಆದ್ದರಿಂದ ಮುಂದುಗಡೆ ಹೋಗುತ್ತಿದ್ದ ವಾಹನ ಗಳಾವುವೂ ಅಲ್ಲಿ ನಿಲ್ಲಲಿಲ್ಲ, ಶ್ರೀ ಶ್ರೀಗಳವರ ಗಾಡಿ ಅಲ್ಲಿ ಬರುತ್ತಿದ್ದಂತೆಯೇ ಕೊಂಬು ಕಹಳೆಯ ಧ್ವನಿ ಕೇಳಿದವು. ಕಾರನ್ನು ಅಲ್ಲಿ ನಿಲ್ಲಿಸುವ ಸೂಚನೆ ಮೊದಲೇ ಇರಲಿಲ್ಲ ವಾಗಿ, ಚಾಲಕರು ಕಾರನ್ನು ನಿಲ್ಲಿಸದೆ ಮುಂದಕ್ಕೆ ಬಿಡುವ ಸನ್ನಾಹದಲ್ಲಿದ್ದರು. ನೂರಾರು ಜನ ಅಲ್ಲಿ ಸೇರಿದ್ದುದನ್ನು ಕಂಡ ಗುರುಗಳವರು ಗಾಡಿಯನ್ನು ತಕ್ಷಣ ನಿಲ್ಲಿ ಸಲು ಹೇಳಿದರು. ಕಾರು ನಿಲ್ಲುತ್ತಿದ್ದಂತೆಯೇ ಆ ಜನದ ಸಂತೋಷ ಸಂಭ್ರಮ ಮುಗಿಲನ್ನು ಮುಟ್ಟಿ ಅವರು ಜಯಘೋಷವನ್ನು ಮಾಡಿದರು. ಗುರುಗಳವರು ಕಾರಿ ನಿಂದ ಹೊರಕ್ಕೆ ಇಳಿದು ಬಂದರು. ಜನರೆಲ್ಲಾ ರಸ್ತೆಯಲ್ಲೇ ಅಡ್ಡಬಿದ್ದು ನಮಸ್ಕರಿಸಿ ಸಿದರು. ಅವರೆಲ್ಲಾ ಸುತ್ತ ಮುತ್ತಲ ಗದ್ದೆ, ಅಡಿಕೆ ತೋಟಗಳಲ್ಲಿ ಕೆಲಸ ಮಾಡು ತ್ತಿದ್ದ ದಲಿತ ಜನ. ಬಹುಮಂದಿ ಹರಿಜನರು. ಎಲ್ಲರೂ ಮಡಿಯುಟ್ಟು, ಶುದ್ಧ ವಾದ ವಸ್ತ್ರಗಳನ್ನು ಧರಿಸಿ ತಮ್ಮ ಕಾಣಿಕೆಯನ್ನೆಲ್ಲಾ ಸಂಗ್ರಹಿಸಿ ಹರಿವಾಣದಲ್ಲಿಟ್ಟು ಅರ್ಪಿಸಿದರು. ಶ್ರೀ ಶ್ರೀಗಳವರಿಗೆ ಈ ಜನಗಳ ನಿಷ್ಕಲ್ಮಷ ಹೃದಯ, ಸರಳತೆ, ಭಕ್ತಿಶ್ರದ್ಧೆ ಇವನ್ನು ಕಂಡು ಆನಂದಬಾಷ್ಪ ಉದುರಿದವು. ಅವರಿಗೆಲ್ಲಾ ಮಂತ್ರಾಕ್ಷತೆ ಯನ್ನು ಅನುಗ್ರಹಿಸಿ, ಆಶೀರ್ವದಿಸಿ, ಅನಂತರ ನಿಧಾನವಾಗಿ ಕಾರಿನಲ್ಲಿ ಕುಳಿತರು.

ದಕ್ಷಿಣದೇಶದಲ್ಲಿ ಯಾತ್ರೆ ಮಾಡುತ್ತಿದ್ದಾಗ ನಡೆದ ಘಟನೆ. ಶ್ರೀ ಶ್ರೀಗಳವರನ್ನುದರ್ಶನಮಾಡಲು ಪ್ರತಿಯೊಂದು ಗ್ರಾಮದ, ನಗರದ ಜನರೂ ಬರುತ್ತಿ ದ್ದರು. ಎಲ್ಲರೂತಮ್ಮ ತಮ್ಮ ಸ್ಥಳಗಳಿಗೆ ಆಹ್ವಾನಿಸುತ್ತಿದ್ದರು. ಬಡವ ಬಲ್ಲಿದ ಎನ್ನದೆ ಎಲ್ಲರೂ ತಮ್ಮ ತಮ್ಮ ಸೇವೆ ಸಲ್ಲಿಸುತ್ತಿದ್ದರು. ಶ್ರೀ ಶ್ರೀಗಳವರ ಕಾರು ಒಂದು ಗ್ರಾಮವನ್ನು ದಾಟಿ ಹೋಗುತ್ತಿದ್ದಂತೆ ಹಿಂದೆ ನೂರಾರು ಜನ ಓಡೋಡಿ ಬರುತ್ತಿರುವುದು ಕಂಡಿತು. ಗುರುಗಳು ಕಾರನ್ನು ನಿಲ್ಲಿಸಿ ಹೊರಕ್ಕೆ ಇಳಿದರು. ಓಡಿ ಬಂದ ನೂರಾರು ಜನರು ಹರಿಜನರು, ಅವರೆಲ್ಲಾ ಕೈಮುಗಿದು ನಮ್ರರಾಗಿ ನಿಂತರು. ಶ್ರೀ ಶ್ರೀಗಳವರು "ಅಪ್ಪಾ ನೀವೆಲ್ಲಾ ಯಾರು ? ಏತಕ್ಕೆ ಓಡಿ ಬರುತ್ತಿದ್ದೀರಿ ? ನಿಮಗೇನಾಗಬೇಕು ?" ಎಂದು ಕೇಳಿದರು. ಅವರೆಲ್ಲಾ, "ಸ್ವಾಮಿ, ತಾವು ಶೃಂಗೇರಿ ಶಂಕರಾಚಾರ್ಯರೆಂದೂ, ತಾವು ಹೋದೆಡೆಯಲ್ಲೆಲ್ಲಾ ಮಳೆ ಬರುತ್ತ ದೆಂದೂ ಕೇಳಿದ್ದೇವೆ. ಈ ಸೀಮೆಯಲ್ಲಿ ಎರಡು ಮೂರು ವರ್ಷಗಳಿಂದ ಮಳೆಯೇ ಇಲ್ಲದೆ ನಾವೆಲ್ಲಾ ಕಂಗಾಲಾಗಿದ್ದೇವೆ. ತಾವು ಮಹಾತ್ಮರು, ನಮ್ಮ ಗ್ರಾಮಕ್ಕೂ ಮಳೆಯಾಗು ವಂತೆ ಅನುಗ್ರಹಿಸಬೇಕು" ಎಂದು ಕೇಳಿಕೊಂಡರು. ಮರುಕ ತುಂಬಿದ ಧ್ವನಿಯಿಂದ ಅವರನ್ನು ಆಶೀರ್ವದಿಸಿದ ಶ್ರೀ ಶ್ರೀಗಳವರು ಶೃಂಗೇರಿಯ ಶ್ರೀ ಮಲಹಾನಿಕೇಶ್ವರ ಸ್ವಾಮಿಗೆ ವಿಶೇಷವಾಗಿ ಅಭಿಷೇಕ ಸಲ್ಲಿಸುವಂತೆ ತಂತಿ ಕಳುಹಿಸಿದರು. ಆ ಗ್ರಾಮದ

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಮೀಪದಲ್ಲಿಯೇ ಬಿಡಾರ ಮಾಡಿದರು. ಆ ಜನಗಳ ಬವಣೆ ನೀಗುವಂತೆ ದೇವರಲ್ಲಿ ಪ್ರಾರ್ಥಿಸಿ, ಶ್ರೀ ಚಂದ್ರಮೌಳೀಶ್ವರನಿಗೆ ವಿಶೇಷ ಪೂಜಾದಿಗಳನ್ನು ನೆರವೇರಿಸಿದರು. ಆ ಹರಿಜನರನ್ನೆಲ್ಲಾ ಕರೆಸಿ ಅವರಿಗೆ ನೂತನ ವಸ್ತ್ರಗಳನ್ನೂ ಪ್ರಸಾದವನ್ನೂ ಕೊಟ್ಟು ಹರಸಿದರು. ಶ್ರೀ ಗುರುಗಳ ಹರಕೆಯಂತೆ ಕಾದ ಭೂಮಿಗೆ ಮಳೆಕರೆದು ರೈತಬಾಂಧವರು ಸಂತೋಷದಿಂದ ಶ್ರೀ ಶ್ರೀಗಳವರನ್ನು ನೆನೆಯುತ್ತಾ ವಂದನೆ ಸಲ್ಲಿಸಿದರು.

ಒಮ್ಮೆ ಶಿವಮೊಗ್ಗೆಯ ಹಲವಾರು ಜನ ಭಕ್ತರು ಶೃಂಗೇರಿಗೆ ಬಂದಿದ್ದರು. ಶ್ರೀ ಗುರುಗಳೊಡನೆ ಸಂಭಾಷಿಸುತ್ತಾ ಆ ವರ್ಷ ಮಳೆಯಿಲ್ಲದೆ ಆ ಸೀಮೆಯಲ್ಲಿ ಪೈರುಪಚ್ಚೆ ಯೆಲ್ಲಾ ಒಣಗುತ್ತಿದೆಯೆಂದೂ, ಪರಿಸ್ಥಿತಿ ಹೀಗೆಯೇ ಮುಂದುವರಿದರೆ ದನಕರುಗಳಿಗೆ ಮೇವೂ ಸಿಕ್ಕದೆ, ಕುಡಿಯುವ ನೀರಿಗೂ ಕಷ್ಟವಾಗಬಹುದೆಂದೂ ಬಿನ್ನವಿಸಿ ಶ್ರೀ ಶ್ರೀ ಗಳವರು ಯಾವುದಾದರೂ ಪರಿಹಾರಮಾರ್ಗವನ್ನು ಸೂಚಿಸಬೇಕೆಂದು ಕೇಳಿಕೊಂಡರು.

ಮಳೆಯ ಸ್ವಾಮಿಗಳೆಂದೇ ಪ್ರಸಿದ್ಧರಾದ ಶ್ರೀ ಶ್ರೀಗಳವರು "ತೀರ್ಥಹಳ್ಳಿಯ ಹತ್ತಿರದ ಅಂಬುತೀರ್ಥದಲ್ಲಿ ಶರಾವತೀ ನದಿಯ ಉಗಮಸ್ಥಾನದಲ್ಲಿ ಶ್ರೀ ರಾಮೇಶ್ವರ ದೇವಸ್ಥಾನವಿದೆ. ಅಲ್ಲಿಯ ಅರ್ಚಕರು ತುಂಬಾ ಶ್ರೋತ್ರಿಯರು, ನಿಸ್ಪೃಹರು. ನೀವು ಅಲ್ಲಿಗೆ ಹೋಗಿ ಶ್ರೀ ರಾಮೇಶ್ವರನಿಗೆ ರುದ್ರಾಭಿಷೇಕವನ್ನು ಮಾಡಿಸಿ, ಮಳೆಬರುತ್ತದೆ. ದೈವಾನುಗ್ರಹದಿಂದ ಎಲ್ಲವೂ ಸರಿಹೋಗುತ್ತದೆ" ಎಂದು ನುಡಿದರು. ಭಕ್ತವೃಂದ ದಲ್ಲಿದ್ದ ಪ್ರಮುಖರೊಬ್ಬರು, ಅದನ್ನು ನಡೆಸಲು ವ್ಯವಸ್ಥೆ ಮಾಡಿದರು

ಅಭಿಷೇಕ ನಡೆಸಲು ಗೊತ್ತಾಗಿದ್ದ ದಿನ, ಭಕ್ತರೆಲ್ಲಾ ಶಿವಮೊಗ್ಗೆಯಿಂದ ಅಂಬು ತೀರ್ಥಕ್ಕೆ ಬಂದರು. ಹಲವಾರುಜನ ವೇದವಿದರು ಶ್ರೀರುದ್ರಸೂಕ್ತವನ್ನು ಸುಶ್ರಾವ್ಯವಾಗಿ ಪಠಿಸುತ್ತಿರಲು, ಅರ್ಚಕರು ಭಕ್ತಿ ಶ್ರದ್ಧೆಯಿಂದ ಅಭಿಷೇಕ ನಡೆಸಿದರು. ಅಭಿಷೇಕ ವೆಲ್ಲಾ ಮುಗಿದು, ನಿವೇದನವಾಗಿ ಮಂಗಳಾರತಿ ಆಗುತ್ತಿದ್ದಂತೆಯೇ ಮಳೆಯ ಹನಿ ಟಪಟಪನೆ, ಶರವರ್ಷದಂತೆ ಅಟ್ಟಹಾಸದಿಂದ ಆರಂಭವಾಗಿ ಬಿಟ್ಟಿತು. ಭಕ್ತವೃಂದದ ವಿಸ್ಮಯ, ಆನಂದಕ್ಕಂತೂ ಪಾರವೇ ಇಲ್ಲ. ಶ್ರೀ ಶ್ರೀಗಳವರ ಕರುಣೆಯನ್ನೂ, ಶ್ರೀ ರಾಮೇಶ್ವರನ ಅನುಗ್ರಹವನ್ನೂ ಕೊಂಡಾಡುತ್ತಾ, ಮಳೆಯಲ್ಲಿಯೇ ಅವರೆಲ್ಲರೂ ಶೃಂಗೇರಿಗೆ ಬಂದು, ಶ್ರೀ ಶ್ರೀಗಳವರ ಆಶೀರ್ವಾದ ಕೂಡಲೇ ಫಲಿಸಿತೆಂದು ಬಿನ್ನವಿಸಿದರು..

೩೭. ರಾಮೇಶ್ವರ, ಕಾಶಿಗಳಲ್ಲಿ ಕುಂಭಾಭಿಷೇಕಗಳು

ಶ್ರೀ ಶ್ರೀಗಳವರು ತಮ್ಮ ಮಹಾ ಪರಿವ್ರಾಜ್ಯ ಕಾಲದಲ್ಲಿ ಶೈವ, ವೈಷ್ಣವ ಎಂಬ ಭೇದವಿಲ್ಲದಂತೆ ಎಲ್ಲ ಮತಗಳ ಆಲಯಗಳಿಗೂ ದಯಮಾಡಿಸಿ, ಪೂಜಾದಿಗಳನ್ನು ನೆರವೇರಿಸಿದ್ದಾರಷ್ಟೆ. ಅನೇಕ ದೇವಸ್ಥಾನಗಳ ಪೂಜಾದಿಗಳಲ್ಲಿ ಇದ್ದ ನ್ಯೂನತೆ ಲೋಪ ದೋಷಗಳನ್ನು ನಿವಾರಿಸುವುದರಲ್ಲಿಯೂ ಅಮೂಲ್ಯವಾದ ಸಲಹೆ ಸಹಾಯಗಳನ್ನಿತ್ತು ಆಯಾ ದೇವಮೂರ್ತಿಗಳಲ್ಲಿ ಭಗವತ್ಸಾನ್ನಿಧ್ಯ [illegible]ತೆ ಮಾಡಿದ್ದಾರೆ. ದಕ್ಷಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಣೋತ್ತರ ಭಾರತವನ್ನೆಲ್ಲಾ ಎಡಬಿಡದೆ, ಸಂಚರಿಸಿದ ಶ್ರೀ ಶ್ರೀಗಳವರು ಶಿಥಿಲವಾಗಿದ್ದ ದೇವಾಲಯಗಳ ಪುನರ್ನವೀಕರಣಕ್ಕೂ ಕಾರಣರಾಗಿ ಅಲ್ಲಿ ದೇವಮೂರ್ತಿಗಳನ್ನು ಪುನಃ ಪ್ರತಿಷ್ಠೆಮಾಡಿ ಕುಂಭಾಭಿಷೇಕಗಳನ್ನು ನೆರವೇರಿಸಿದ್ದಾರೆ ಮತ್ತು ಅನೇಕ ನೂತನ ದೇವಾಲಯಗಳಲ್ಲಿ ದೇವಮೂರ್ತಿಗಳ ಪ್ರತಿಷ್ಠೆ ಮತ್ತು ಕುಂಭಾಭಿಷೇಕಗಳನ್ನು ನಡೆಸಿ ಕೊಟ್ಟಿದ್ದಾರೆ.

ಇತ್ತೀಚಿನ ದಿನಗಳಲ್ಲಿ ರಾಮೇಶ್ವರ ಮತ್ತು ಕಾಶೀ ಕ್ಷೇತ್ರಗಳಲ್ಲಿ ಶ್ರೀ ಜಗದ್ಗುರು ಗಳವರು ನಡೆಸಿಕೊಟ್ಟ ಕುಂಭಾಭಿಷೇಕಗಳು ತುಂಬಾ ಪ್ರಮುಖವಾದವು, ಸ್ಮರಣಾರ್ಹ ವಾದುವು ಮತ್ತು ಅಖಿಲಭಾರತ ವ್ಯಾಪ್ತವಾದವು. ಕಾಶೀ ರಾಮೇಶ್ವರಗಳು ನಮ್ಮ ದೇಶದಲ್ಲಿ ಧಾರ್ಮಿಕ ಏಕತೆಯನ್ನು ಸಾರುತ್ತಿರುವ ಪುಣ್ಯಕ್ಷೇತ್ರಗಳು ಭರತಖಂಡದಲ್ಲೆಲ್ಲಾ ಸನಾತನಧರ್ಮದ ಏಕತೆಯನ್ನು ಸಾರುತ್ತಾ ಸಂಚರಿಸುತ್ತಿರುವ ಶ್ರೀ ಶ್ರೀಗಳವರು ಈ ಪುಣ್ಯಸ್ಥಳಗಳಲ್ಲಿ ಕುಂಭಾಭಿಷೇಕವನ್ನು ನೆರವೇರಿಸಿದುದು ಸಹಜವೂ ಸ್ವಾಭಾವಿಕವೂ ಆಗಿದೆ.

ಶೃಂಗೇರಿಯ ಪೀಠಕ್ಕೂ ರಾಮೇಶ್ವರ ಕ್ಷೇತ್ರಕ್ಕೂ ಬಹಳ ಹಿಂದಿನಿಂದಲೂ ಸಂಬಂಧವುಂಟು. ಶ್ರೀ ರಾಮನಾಥ ಸ್ವಾಮಿಯವರ ದೇವಸ್ಥಾನದ ಪ್ರಧಾನ ಅರ್ಚಕರು ಶೃಂಗೇರಿ ಆಚಾರ್ಯರಲ್ಲಿ ಬಂದು ಮಹಾಮಂತ್ರೋಪದೇಶಗಳನ್ನು ಪಡೆದ ನಂತರವೇ ದೇವಾಲಯದಲ್ಲಿ ಪೂಜೆ ನಡೆಸುವ ಅರ್ಹತೆ ಅಧಿಕಾರವನ್ನು ಪಡೆಯುತ್ತಾರೆ. ಈಗಿನ ಅರ್ಚಕರು ಶ್ರೀ ಶ್ರೀಗಳವರು ಉತ್ತರ ಭಾರತ ಸಂಚಾರದಲ್ಲಿದ್ದಾಗ ಆಚಾರ್ಯರ ದರ್ಶನ ಮಾಡಿ ಅವರಿಂದ ಮಂತ್ರೋಪದೇಶಪಡೆದರೆಂಬುದನ್ನು ಈಗಾಗಲೇ ಬಿತ್ತರಿಸಿದೆ.

ಶ್ರೀ ವೃದ್ಧನರಸಿಂಹ ಭಾರತೀ ಸ್ವಾಮಿಗಳವರು (ಉಗ್ರ) ತಮ್ಮ ದೇಶಪರ್ಯಟನ ಕಾಲದಲ್ಲಿ ರಾಮೇಶ್ವರಕ್ಕೆ ದಯಮಾಡಿಸಿದ್ದರು. ಅಲ್ಲಿರುವ ಹಲವಾರು ತೀರ್ಥಗಳಲ್ಲಿ ಸ್ನಾನಗೈದ ಶ್ರೀ ಶ್ರೀಗಳವರು ಕೋಟಿ ತೀರ್ಥಕ್ಕೆ ಬಂದಾಗ ಆ ತೀರ್ಥದ ವ್ಯವಸ್ಥಾಪಕರು ತಾವೇ ನೀರನ್ನು ತಂದು ಕೊಡುವುದಾಗಿಯೂ, ಶ್ರೀ ಗುರುಗಳವರ ಪರಿಚಾರಕರು ನೀರನ್ನು ಮುಟ್ಟಲು ಅವಕಾಶಕೊಡುವುದಿಲ್ಲವೆಂದೂ ನಿರ್ಬಂಧ ಪಡಿಸಿದರು. ಆ ವ್ಯವ ಸ್ಥಾಪಕರಿಗೆ ಹಲವಾರು ವಿಧದಲ್ಲಿ ಬುದ್ಧಿ ವಚನಗಳನ್ನು ಹೇಳಿದರೂ ಪ್ರಯೋಜನ ವಾಗಲಿಲ್ಲ. ಆಗ ಶ್ರೀ ಶ್ರೀಗಳವರು ಹತ್ತಿರದಲ್ಲಿಯೇ ಇದ್ದ ಸರ್ವ ತೀರ್ಥದಲ್ಲಿ ಸ್ನಾನ ಮಾಡಿ ಅದರಲ್ಲಿ ಸರ್ವ ಜಲಾಭಿಮಾನೀ ದೇವತೆಗಳೂ ಸನ್ನಿಹಿತರಾಗುವರಂತೆ ಪ್ರಾರ್ಥಿಸಿ ಮುಂದೆ ಯಾರೂ ಕೋಟಿ ತೀರ್ಥದಲ್ಲಿ ಸ್ನಾನಮಾಡುವ ಅವಶ್ಯಕತೆಯಿಲ್ಲವೆಂದೂ ಸರ್ವ ತೀರ್ಥದಲ್ಲಿಯೇ ಎಲ್ಲ ಜಲಾಭಿಮಾನೀ ದೇವತೆಗಳೂ ಸನ್ನಿಹಿತರಾಗಿರುವುದರಿಂದ ಅಲ್ಲಿ ಸ್ನಾನಮಾಡಿದರೆ ಸಾಕೆಂದು ಅಪ್ಪಣೆ ಕೊಡಿಸಿದರು.

ಶ್ರೀ ಶ್ರೀಗಳವರ ಆಜ್ಞೆಯನ್ನು ಶಿಷ್ಯರೆಲ್ಲಾ ಪಾಲಿಸಿದರು, ಕೋಟಿತೀರ್ಥದ ನೀರನ್ನು ಪಡೆಯಲು ಯಾರೂ ಹೋಗಲೇ ಇಲ್ಲ. ಅದೊಂದು ಶಾಪಗ್ರಸ್ತ ತೀರ್ಥದಂತೆ.

Sri Vidyabharathi Book Centre, Sringeri

ಆಗಿ ಬಿಟ್ಟಿತು. ಅನಂತರ ಎಷ್ಟೋ ವರ್ಷಗಳ ಮೇಲೆ ಶ್ರೀ ಶ್ರೀಗಳವರು ಅಲ್ಲಿಗೆ ದಯ ಮಾಡಿಸಿದಾಗ ಆ ತೀರ್ಥದ ವ್ಯವಸ್ಥಾಪಕರ ಪ್ರಾರ್ಥನೆಯಂತೆ ಕೋಟಿತೀರ್ಥಕ್ಕೆ ದಯ ಮಾಡಿಸಿ ಅದನ್ನು ಮಂತ್ರಪೂರ್ವಕವಾಗಿ ಶುದ್ಧಗೊಳಿಸಿ ಪುನಃ ತೀರ್ಥಸ್ನಾನಾದಿಗಳಿಗೆ ಅನುಕೂಲವಾಗುವಂತೆ ಅನುಗ್ರಹಿಸಿದರು.

ಶ್ರೀ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳವರು ರಾಮೇಶ್ವರಕ್ಕೆ ದಯಮಾಡಿಸಿ ದೇವಸ್ಥಾನದಲ್ಲಿಯೇ ಬಿಡಾರ ಮಾಡಿ ಶ್ರೀ ರಾಮನಾಥಸ್ವಾಮಿಯವರನ್ನು ವಿಶೇಷವಾಗಿ ಪೂಜಿಸಿದ್ದರು. ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳರು ತಮ್ಮ ಪ್ರಥಮ ಸಂಚಾರ ಕಾಲದಲ್ಲಿ ಅರ್ಧೋದಯ ಪುಣ್ಯಕಾಲಕ್ಕೆ ರಾಮೇಶ್ವರಕ್ಕೆ ದಯಮಾಡಿಸಿ ಸಮುದ್ರ ಸ್ನಾನವನ್ನೂ ಬಹುವಿಧವಾದ ದಾನಧರ್ಮಗಳನ್ನೂ ನಡೆಸಿದ್ದರು.

ರಾಮೇಶ್ವರದಲ್ಲಿರುವ ಶ್ರೀ ರಾಮನಾಥಸ್ವಾಮಿ ದೇವಸ್ಥಾನವು ಬಹಳ ಪ್ರಾಚೀನ ವಾದುದು. ಭರತಖಂಡದಲ್ಲಿ ಅತ್ಯಂತ ವಿಸ್ತಾರವಾದುದೂ ಮತ್ತು ಭವ್ಯವಾದುದು. ಸಮುದ್ರದ ಕರೆಯಲ್ಲಿರುವ ಈ ದೇವಾಲಯವು ಹಲವಾರು ರಾಜಮನೆತನಗಳಿಂದ ಪೋಷಿತ ವಾಗಿದೆ. ಇಲ್ಲಿರುವ ಶ್ರೀ ಶಿವಲಿಂಗವು ಶ್ರೀ ರಾಮಚಂದ್ರನಿಂದ ಪ್ರತಿಷ್ಠಿಸಲ್ಪಟ್ಟಿದೆಂದು ಪ್ರಖ್ಯಾತವಾಗಿದೆ. ಈ ದೇವಾಲಯವು ಬಹಳ ಶಿಥಿಲವಾಗಿದ್ದು ಅದರ ಪುನರ್ನಿರ್ಮಾಣ ಕಾರ್ಯವು ಹಲವಾರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೆಲವುವರ್ಷಗಳಿಂದ ನಡೆಯುತ್ತಿತ್ತು ಈ ದೇವಾಲಯದ ಅಷ್ಟಬಂಧ ಮಹೋತ್ಸವ ಮತ್ತು ಕುಂಭಾಭಿಷೇಕವನ್ನು ನಡೆಸಲು ಧರ್ಮದರ್ಶಿ ಮಂಡಲಿಯು ನಿರ್ಧರಿಸಿತು. ಈ ಆಲಯವು ದಕ್ಷಿಣಾಮ್ನಾಯ ಶಂಕರಪೀಠದ ವ್ಯಾಪ್ತಿಗೆ ಒಳಪಟ್ಟಿದರಿಂದ ಶೃಂಗೇರಿಯ ಶ್ರೀ ಶ್ರೀಗಳವರೇ ಅಲ್ಲಿಗೆ ದಯಮಾಡಿಸಿ ಈ ಮಹಾಕಾರ್ಯಗಳನ್ನು ನೆರವೇರಿಸಿಕೊಡಬೇಕೆಂದು ಧರ್ಮದರ್ಶಿಮಂಡಲಿಯು ವಿಜ್ಞಾಪನೆ ಮಾಡಿಕೊಂಡಿತು. ಮಂಡಲಿಯ ಅಧ್ಯಕ್ಷರಾದ ರಾಮನಾಡಿನ ರಾಜರೂ ದೇವಾಲಯಗಳ ದತ್ತಿಗಳ ಕಮಿಷನರೂ ಪ್ರಧಾನಾರ್ಚಕರೂ ಶೃಂಗೇರಿಗೆ ಬಂದು ಶ್ರೀ ಶ್ರೀಗಳವರಲ್ಲಿ ತಮ್ಮ ಬಿನ್ನವತ್ತಳೆಯನ್ನು ಅರ್ಪಿಸಿದರು. ಶ್ರೀ ಗುರುಗಳವರು ಪರ್ಯಾಲೋಚಿಸಿ ತಮ್ಮ ನಿರ್ಧಾರವನ್ನು ತಿಳಿಸುವುದಾಗಿ ಅಪ್ಪಣೆಯಿತ್ತರು.

ಈ ಮಧ್ಯೆ ಹಲವು ಜನ ಈ ಉತ್ಸವಕ್ಕೆ ಅಡ್ಡಿಯುಂಟು ಮಾಡಲು ಸಿದ್ಧತೆ ನಡೆಸಿದ್ದರು. ಮಧುರೆ ನಗರದ ನ್ಯಾಯಾಲಯದಲ್ಲಿ ಕುಂಭಾಭಿಷೇಕಕ್ಕೆ ಗೊತ್ತುಪಡಿ ಸಿರುವ ದಿನ ಶಾಸ್ತ್ರಕ್ಕನುಗುಣವಾಗಿಲ್ಲವೆಂದೂ, ಆದ್ದರಿಂದ ಕುಂಭಾಭಿಷೇಕವು ನಡೆಯ ದಂತೆ ತಡೆಯಾಜ್ಞೆ ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದರು. ದೇವಾಲಯದ ಧರ್ಮ ದರ್ಶಿಗಳಿಗೂ ನೂರಾರು ಸಾವಿರ ಜನ ಭಕ್ತವೃಂದಕ್ಕೂ ಇದು ವಿಸ್ಮಯ, ಚಿಂತೆಗಳಿಗೆ ಕಾರಣವಾಯಿತು. ನ್ಯಾಯಾಧೀಶರು ವಾದಿ ಪ್ರತಿವಾದಿಗಳ ಹೇಳಿಕೆಯನ್ನು ಪಡೆದು ಕೊಂಡು ಇಂತಹ ಶಾಸ್ತ್ರ ವಿಷಯಗಳನ್ನೆಲ್ಲಾ ನಿರ್ಧಾರ ಮಾಡಬಲ್ಲವರು ಶೃಂಗೇರಿಯ ಶ್ರೀ ಶಂಕರಾಚಾರ್ಯರೆಂದೂ ಆದ್ದರಿಂದ ಅವರ ಅಭಿಪ್ರಾಯ ಪಡೆದ ನಂತರ ತಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ತೀರ್ಮಾನಕೊಡುವುದಾಗಿಯೂ ಹೇಳಿ ಕಟ್ಟಲೆಯನ್ನು ಮುಂದಕ್ಕೆಹಾಕಿ ತಮ್ಮ ಪ್ರತಿನಿಧಿಯೊಬ್ಬಾತನನ್ನು ಶೃಂಗೇರಿಗೆ ಕಳುಹಿಸಿದರು.

ಆಗ ಶ್ರೀ ಶ್ರೀಗಳವರ ದೇಹಸ್ಥಿತಿ ಸಮರ್ಪಕವಾಗಿರಲಿಲ್ಲ. ಅವರು ಎಲ್ಲಿಗೂ ಸಂಚಾರ ಹೊರಡುವಂತಿರಲಿಲ್ಲ. ರಾಮೇಶ್ವರಕ್ಕೆ ಬರಲಾಗುವುದಿಲ್ಲವೆಂದು ತಿಳಿಸಿಯೂ ಇದ್ದರು. ಇದೇ ಸಮಯವನ್ನು ಸಾಧಿಸಿ ಹಲವರು ಶುಭಕಾರ್ಯಕ್ಕೆ ಅಡ್ಡಿಯುಂಟುಮಾಡಿದ್ದರು. ನ್ಯಾಯಾಧೀಶರ ಪ್ರತಿನಿಧಿಯು ಬಂದು ಶ್ರೀ ಶ್ರೀಗಳವರ ದರ್ಶನಮಾಡಿ ತಾನು ಬಂದಿದ್ದ ಕಾರ್ಯವನ್ನು ಬಿನ್ನವಿಸಿದರು. ಶ್ರೀ ಗುರುಗಳವರು ಆತನ ಮಾತುಗಳನ್ನೆಲ್ಲಾ ಲಾಲಿಸಿ, ಅನಂತರ ಶಾಸ್ತ್ರಗ್ರಂಥಗಳಿಂದ ವಿಪುಲವಾದ ಆಧಾರಗಳನ್ನಿತ್ತು ಈಗ ಉತ್ಸವಕ್ಕಾಗಿ ಗೊತ್ತುಪಡಿಸಿರುವ ದಿನದಂದು ಕುಂಭಾಭಿಷೇಕ ನಡೆಸುವುದರಲ್ಲಿ ಯಾವ ದೋಷವೂ ಇಲ್ಲವೆಂದೂ ಅದನ್ನು ನೆರವೇರಿಸುವುದಕ್ಕೆ ತಾವೇ ಸ್ವತಃ ರಾಮೇಶ್ವರಕ್ಕೆ ಹೊರಡುವುದಾಗಿಯೂ ತಿಳಿಸಿದರು. ಶ್ರೀ ಶ್ರೀಗಳವರ ಈ ನಿರ್ಧಾರ ಅವರ ಶಿಷ್ಯರಿಗೆಲ್ಲಾ ತುಂಬಾ ಆನಂದವನ್ನುಂಟುಮಾಡಿತು. ನ್ಯಾಯಾಲಯದಲ್ಲಿದ್ದ ಕಟ್ಲೆ ವಜಾ ಆಯಿತು.

ಮಹಾಸ್ವಾಮಿಗಳವರು ಇದ್ದಕ್ಕಿದ್ದಂತೆ ಕೈಗೊಂಡ ಈ ನಿರ್ಧಾರ ಬಹು ಕ್ಲಿಷ್ಟವಾಗಿದ್ದ ಸಮಸ್ಯೆಗೆ ಬಲು ಸೂಕ್ತವಾದ ಪರಿಹಾರವಾಗಿತ್ತು. ಶೃಂಗೇರಿಯ ಆಚಾರ್ಯರೇ ದಯಮಾಡಿಸುತ್ತಾರೆಂದಮೇಲೆ ವಿಘ್ನಮಾಡಲುದ್ದೇಶಿಸಿ ಗದ್ದಲ ಮಾಡಬೇಕೆಂದಿದ್ದವರೂ ಸುಮ್ಮನಾದರು. ಶರೀರ ಸ್ಥಿತಿ ಪ್ರಯಾಣಕ್ಕೆ ಅನುಕೂಲಕರವಾಗಿಲ್ಲದಿದ್ದರೂ ಶ್ರೀ ಶ್ರೀಗಳವರು ಶ್ರೀ ಸನ್ನಿಧಾನದೊಡನೆ ಪ್ರಯಾಣ ಬೆಳೆಸಿ ರಾಮೇಶ್ವರ ಕ್ಷೇತ್ರಕ್ಕೆ ದಯಮಾಡಿಸಿದರು. ಕುಂಭಾಭಿಷೇಕ ಮಹೋತ್ಸವವನ್ನು ಉದ್ಘಾಟಿಸಿ ತಾವೇ ಸ್ವತಃ ಶ್ರೀ ರಾಮನಾಥ ಸ್ವಾಮಿಯವರನ್ನೂ, ಪರ್ವತವರ್ಧಿನೀ ಅಮ್ಮನವರನ್ನೂ ವಿಶೇಷವಾಗಿ ಅರ್ಚಿಸಿದರು. ದೇವಾಲಯದ ಗೋಪುರವನ್ನೇರಿ ಮಂಗಳವಾದ್ಯ, ವೇದಘೋಷ, ಜಯಕಾರಗಳ ನಿನಾದಗಳು ಮೊಳಗುತ್ತಿದ್ದಂತೆ ಆನಂದ ಸಂವತ್ಸರದ ಪುಷ್ಯ ಕೃಷ್ಣ ದಶಮೀ (೫-೨-೧೯೭೫) ರಂದು ಸಾವಿರಜನ ಭಕ್ತಭಾವುಕರ ಕಣ್ಮನಗಳಿಗೆ ಆನಂದವನ್ನುಂಟು ಮಾಡಿದರು. ರಾಮೇಶ್ವರ ಸಮಾರಂಭವನ್ನು ಮುಗಿಸಿಕೊಂಡು ಅನಂತರ ಶೃಂಗೇರಿಗೆ ಹಿಂದಿರುಗಿದರು.

ಕಾಶಿಯ ಶ್ರೀ ಅನ್ನಪೂರ್ಣಾ ದೇವಾಲಯದಲ್ಲಿ ಶ್ರೀ ಶಂಕರಭಗವತ್ಪಾದರಿಂದ ಪ್ರತಿಷ್ಠಿತವಾಗಿದ್ದ ದೇವೀ ಅನ್ನಪೂರ್ಣೆಯ ವಿಗ್ರಹ ಭಿನ್ನವಾಗಿದ್ದು ನೂತನವಿಗ್ರಹದ ಪ್ರತಿಷ್ಠೆಯಾಗಬೇಕಿತ್ತು. ದೇವಾಲಯದ ಧರ್ಮದರ್ಶಿಗಳೂ, ಮಹಂತರೂ ದೇವಿಯ ವಿಗ್ರಹ ಪ್ರತಿಷ್ಠೆ ಮತ್ತು ದೇವಾಲಯದ ಕುಂಭಾಭಿಷೇಕಗಳನ್ನು ನಡೆಸುವ ಬಗ್ಗೆ ನಿರ್ಧಾರ ಕೈಗೊಂಡಿದ್ದರು. ಆ ಮಹೋತ್ಸವಗಳು ಶ್ರೀ ಶಂಕರಾಚಾರ್ಯ ಪರಂಪರೆಯ ಅತ್ಯಂತ ಹಿರಿಯ ಜಗದ್ಗುರುಗಳಿಂದಲೇ ನಡೆಯಬೇಕೆಂಬ ಒಮ್ಮತದ ಅಭಿಪ್ರಾಯವನ್ನು ಅವರೆಲ್ಲಾ ಹೊಂದಿದ್ದರು. ಕಾಶಿಯಿಂದ ಮಹಂತರ ನೇತೃತ್ವದಲ್ಲಿ ಸಭ್ಯರ ಸಮಿತಿಯೊಂದು ಶೃಂಗೇರಿಗೆ ಬಂದಿತು. ಶ್ರೀ ಶ್ರೀಗಳವರ ದರ್ಶನಮಾಡಿದ ಮಹಂತರು ತಮ್ಮ ಬಿನ್ನವತ್ತಳೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಪಿಸಿ ಶ್ರೀ ಶ್ರೀಗಳವರು ಕಾಶಿಗೆ ದಯಮಾಡಿಸಿ ಈ ಕಾರ್ಯಗಳನ್ನು ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸಿದರು. ಅವರು ಶೃಂಗೇರಿಗೆ ಬಂದಿದ್ದಾಗ ಅಲ್ಲಿ ಶ್ರೀ ಶಾರದಾ ಕೋಟ್ಯರ್ಚನೆ, ಅತಿರುದ್ರಸ್ವಾಹಾಕಾರ ಮಹಾಯಾಗ ಮತ್ತು ಸಹಸ್ರಚಂಡೀ ಹೋಮಗಳು ನಡೆಯುತ್ತಿದ್ದವು. ಆ ಸಮಾರಂಭಗಳನ್ನು ವೀಕ್ಷಿಸುತ್ತಿದ್ದ ಮಹಂತರು ಮತ್ತು ಅವರ ಸಹಚರರು ಶಾಸ್ತ್ರೀಯವಾಗಿ ನೇಮನಿಷ್ಠೆಗಳಿಂದ ನಡೆಯುತ್ತಿದ್ದ ಆ ಕ್ರತುಗಳನ್ನು ಕಂಡು ತುಂಬಾ ಸಂತೋಷಪಟ್ಟು ಕಾಶಿಯಲ್ಲಿ ನಡೆಯುವ ಮಹಾಕಾರ್ಯಕ್ಕೆ ಶ್ರೀ ಶ್ರೀಗಳವರೇ ದಯಮಾಡಿಸಬೇಕೆಂದು ಒತ್ತಾಯ ಪೂರ್ವಕವಾಗಿ ಕೋರಿಕೊಂಡರು. ಒಮ್ಮೆ ಉತ್ತರ ಭಾರತ ಯಾತ್ರೆಯನ್ನು ಮಾಡಿ ಬಂದಿದ್ದ ಗುರುಗಳವರು ಪುನಃ ಸಂಚಾರ ಹೊರಡಲು ಇದ್ದಕ್ಕಿದ್ದಂತೆ ನಿರ್ಧಾರಮಾಡುವ ಹಾಗಿರಲಿಲ್ಲ. ಆದರೆ ಆಪ್ತರಾದ ಶಿಷ್ಯರ ಕೋರಿಕೆಯನ್ನು ತಳ್ಳಿಹಾಕುವಂತೆಯೂ ಇರಲಿಲ್ಲ. ಕಟ್ಟಕಡೆಗೆ ಭಗವತ್ಪ್ರೇರಣೆ ಬರಲು ಕಾಶೀಯಾತ್ರೆ ಹೊರಡುವ ನಿರ್ಧಾರವನ್ನು ಕೈಗೊಂಡರು.

ನಳ ಸಂವತ್ಸರದ ನರಕಚತುರ್ದಶಿಯಂದು ಶ್ರೀ ಶ್ರೀಗಳವರ ಷಷ್ಟ್ಯಬ್ಧ ಉತ್ಸವಗಳು ಆರಂಭವಾದವು. ಆ ಉತ್ಸವದ ಅಂಗವಾಗಿ ಆರಂಭವಾಗಿದ್ದ ಶ್ರೀ ಶಾರದಾ ಕೋಟ್ಯರ್ಚನೆಯ ಅಂಗವಾಗಿ ಲಲಿತಾಹೋಮ ಮತ್ತು ಮಹಾರುದ್ರಹೋಮಗಳ ಪೂರ್ಣಾಹುತಿಯೊಡನೆ ಮುಕ್ತಾಯಗೊಂಡಿತು. ಅನಂತರ ಶ್ರೀ ಶ್ರೀಗಳವರು ಶ್ರೀ ಭಾರತೀತೀರ್ಥ ಸ್ವಾಮಿಗಳವರೊಡನೆ ಕಾಶೀಯಾತ್ರೆಗೆ ಹೊರಟರು.

ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಮಧ್ಯಪ್ರಾಂತ್ಯಗಳಲ್ಲಿ ಸಂಚಾರ ಬೆಳಸಿ ಶ್ರೀ ಶ್ರೀಗಳವರು ಪ್ರಯಾಗದಲ್ಲಿ ನಡೆದ (೧೯೭೭) ಮಹಾಕುಂಭ ಮೇಳದಲ್ಲಿ ಪಾಲ್ಗೊಂಡು ಪವಿತ್ರ ತ್ರಿವೇಣಿ ಸಂಗಮದಲ್ಲಿ ಹಲವಾರು ಪುಣ್ಯದಿನಗಳಲ್ಲಿ ಸ್ನಾನಗೈದು, ಅಲ್ಲಿಂದ ಅಸಂಖ್ಯಾತ ಭಕ್ತರನ್ನನುಗ್ರಹಿಸಿ ಕಾಶೀಕ್ಷೇತ್ರಕ್ಕೆ ದಯಮಾಡಿಸಿದರು.

ಶ್ರೀ ಶ್ರೀಗಳವರು ಕಾಶಿಗೆ ಆಗಮಿಸಿದಾಗ ಅಪಾರ ಶಿಷ್ಯವೃಂದವು ಭಕ್ತಿ ಶ್ರದ್ಧೆಯಿಂದ, ಸಂತೋಷ ಹರ್ಷಗಳಿಂದ, ಉತ್ಸಾಹ ಸಂಭ್ರಮಗಳಿಂದ ಸ್ವಾಗತಿಸಿದರು. ಶ್ರೀ ಶ್ರೀಗಳವರು ಪಾದಚಾರಿಗಳಾಗಿಯೇ ನಗರ ಪ್ರವೇಶಮಾಡಿದರು. ದಾರಿಯುದ್ದಕ್ಕೂ ತಳಿರು ತೋರಣಗಳು, ಮನೆಮನೆಗಳ ಮುಂಭಾಗದಲ್ಲಿ ರಂಗವಲ್ಲಿ, ಪೂರ್ಣಕುಂಭ, ಆರತಿ ಇವುಗಳಿಂದ ಭಕ್ತರು ಶ್ರೀ ಶ್ರೀಗಳವರನ್ನು ಸ್ವಾಗತಿಸಿದರು. ಆದಿನ ಕಾಶೀ ಮಹಾರಾಜರ ಅರಮನೆಯಲ್ಲಿಯೇ ಉಳಿದು ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ಮಾಡಿದ ಶ್ರೀ ಶ್ರೀಗಳವರು ಅನಂತರ ಶೃಂಗೇರೀ ಶಂಕರಮಠಕ್ಕೆ ದಯಮಾಡಿಸಿದರು. ಮಠದ ವತಿಯಿಂದ ಅಲ್ಲಿ ಅತಿರುದ್ರಸ್ವಾಹಾಕಾರ ಮಹಾಯಾಗವನ್ನು ಆರಂಭಗೊಳಿಸಿದರು. ಪ್ರತಿಷ್ಠೆಗಾಗಿ ನಿರ್ಮಿತವಾಗಿದ್ದ ಶ್ರೀ ಅನ್ನಪೂರ್ಣಾ ದೇವಿಯ ದಿವ್ಯವಿಗ್ರಹವನ್ನು ಚಿನ್ನದ ಪಾಲಕಿಯಲ್ಲಿ ಇಡಿಸಿ ಮಠದಿಂದ ಉತ್ಸವದಲ್ಲಿ ಅನ್ನಪೂರ್ಣಾ ದೇವಾಲಯಕ್ಕೆ ಬಿಜಯಮಾಡಿಸಿದರು. ಪ್ರತಿಷ್ಠಾಂಗವಾದ ಕಾರ್ಯಕಲಾಪಗಳೆಲ್ಲವೂ ಶ್ರೀ ಶ್ರೀಗಳವರ ದಿಗ್ದರ್ಶನದಲ್ಲಿ ಬಹುಶ್ರುತರಾದ ಪಂಡಿತರುಗಳಿಂದ ನಡೆಸಲ್ಪಡುತ್ತಿದ್ದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಳ ಸಂವತ್ಸರದ ಮಾಘ ಶುದ್ಧ ಪಂಚಮಿ (೨೪–೧–೭೭) ಶ್ರೀಪಂಚಮಿಯಂದು ಪರಮ ಪವಿತ್ರವಾದ ಆ ಶುಭದಿನದಂದು ಪ್ರಾತಃಕಾಲ ಜಗದ್ಗುರು ಶ್ರೀ ಶ್ರೀ ವಿದ್ಯಾತೀರ್ಥ ಸ್ವಾಮಿಗಳವರು ಶ್ರೀ ಭಾರತೀ ತೀರ್ಥ ಸ್ವಾಮಿಗಳವರೊಡನೆ ದೇವಾಲಯದ ಯಾಗ ಶಾಲೆಗೆ ದಯಮಾಡಿಸಿದರು. ಅದೇ ವೇಳೆಗೆ ಪೂರೀಪೀಠದ ಜಗದ್ಗುರುಗಳಾದ ಶ್ರೀ ಶ್ರೀ ನಿರಂಜನತೀರ್ಥ ಮಹಾಸ್ವಾಮಿಗಳವರೂ ಅಲ್ಲಿಗೆ ದಯಮಾಡಿಸಿದರು. ಸುಮುಹೂರ್ತ ದಲ್ಲಿ ಹೋಮಾದಿಗಳ ಪೂರ್ಣಾಹುತಿಗಳು ನೆರವೇರಿದವು. ಅನಂತರ ಜಗುದ್ಗರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ದೇವಾಲಯವನ್ನು ಪ್ರವೇಶಿಸಿ ಅಮ್ಮ ನವರ ಸನ್ನಿಧಿಗೆ ದಯಮಾಡಿಸಿದರು. ವೇದಮಂತ್ರಗಳ ಘೋಷ, ವಾದ್ಯಗಳ ಮಂಜುಳ ನಿನಾದ, ಭಕ್ತರ ಭಾವುಕರ ಜಯಧ್ವನಿಗಳು ಅಲೆಅಲೆಯಾಗಿ ತೇಲಿಬರುತ್ತಿರಲು ಶ್ರೀ ಶ್ರೀಗಳವರು ದೇವೀ ಶ್ರೀ ಅನ್ನಪೂರ್ಣೆಯನ್ನು ಪ್ರತಿಷ್ಠೆ ಮಾಡಿದರು. ಜಗನ್ಮಾತೆಯನ್ನು ವಿಶೇಷವಾಗಿ ಅಲಂಕರಿಸಿ ಅರ್ಚನೆ ಮಾಡಿದರು. ಅನಂತರ ಪೂರೀ ಶ್ರೀ ಶ್ರೀಗಳವರೂ ಶ್ರೀ ಮಾತೆಯನ್ನು ಅರ್ಚಿಸಿ ಆರತಿ ಬೆಳಗಿದರು.

ಆ ಬಳಿಕ ಕಲಶಗಳ ತೀರ್ಥದಿಂದ ದೇವಾಲಯಗಳ ಗೋಪುರಗಳ ಮೇಲೆಯೂ ಕುಂಭಾಭಿಷೇಕ ನಡೆಸಿದರು. ಶ್ರೀ ಶ್ರೀಗಳವರು ಅನುಗ್ರಹಭಾಷಣ ಮಾಡುವುದಕ್ಕಾಗಿ ದೇವಾಲಯದ ಉಪ್ಪರಿಗೆಯನ್ನೇರಿ ಬಂದಾಗ ಜನಸಮುದ್ರಘೋಷ ನಾಲ್ದೆಸೆಗಳಲ್ಲಿಯೂ ಪ್ರತಿಧ್ವನಿಸಿತು. ಶ್ರೀ ಗುರು ದರ್ಶನಕ್ಕಾಗಿಯೂ ಈ ಉತ್ಸವಗಳಲ್ಲಿ ಪಾಲ್ಗೊಳ್ಳುವುದ ಕ್ಕಾಗಿಯೂ ಭಾರತದ ಎಲ್ಲ ಕಡೆಗಳಿಂದಲೂ ನೂರಾರು ಸಾವಿರ ಜನ ಭಾವುಕರು ಆಗಮಿ ಸಿದ್ದರು. ಕಾಶಿಯ ಜ್ಞಾನವಾಪಿಯಲ್ಲಿ ದೇವಾಲಯದ ಧರ್ಮದರ್ಶಿಗಳೇರ್ಪಡಿಸಿದ್ದ ಮಹಾರುದ್ರ ಮತ್ತು ಶತಚಂಡೀ ಯಾಗಗಳ ಪೂರ್ಣಾಹುತಿಯನ್ನು ನೆರವೇರಿಸಿದ ಶ್ರೀ ಶ್ರೀಗಳವರು ತಾವು ಆರಂಭಿಸಿದ್ದ ಅತಿರುದ್ರ ಮಹಾಯಾಗವನ್ನು ಮುಕ್ತಾಯ ಮಾಡಿಸಿದರು. ಕಾಶಿಯ ಪಂಡಿತರನ್ನೆಲ್ಲಾ ಕರೆಸಿ ವಿದ್ವತ್ಸಭೆಗಳನ್ನೇರ್ಪಡಿಸಿ ಅವರನ್ನೆಲ್ಲ ವಿಶೇಷವಾಗಿ ಸನ್ಮಾನಿಸಿದರು. ಶ್ರೀ ವಿಶ್ವೇಶ್ವರ ಶ್ರೀ ವಿಶಾಲಾಕ್ಷಿಯರನ್ನೂ ಅರ್ಚನೆ ಮಾಡಿಕೊಂಡು ಕಾಶಿಯಿಂದ ಮುಂದಕ್ಕೆ ವಿಜಯಯಾತ್ರೆಯನ್ನು ಕೈಗೊಂಡರು.

ಈ ಯಾತ್ರಾಕಾಲದಲ್ಲಿಯೇ ಶ್ರೀ ಗುರುಗಳವರು ಜಮ್‌ಶಡ್‌ಪುರದಲ್ಲಿ ನಿರ್ಮಿತ ವಾಗಿದ್ದ ಉತ್ತರ ಶಬರಿಮಲೈ ಧರ್ಮಶಾಸ್ತಾ ದೇವಸ್ಥಾನ, ಹೊಸ ದೆಹಲಿಯಲ್ಲಿ ಶಾರದಾ ಶ್ರೀ ಭವಾನೀ ಸಮೇತ ಚಂದ್ರಶೇಖರ ಮತ್ತು ಶ್ರೀ ಆದಿಶಂಕರ ದೇವಾಲಯಗಳಲ್ಲಿ ಕುಂಭಾಭಿಷೇಕವನ್ನೂ ಶ್ರೀ ಗಣಪತಿ ಮತ್ತು ಶ್ರೀ ಆಂಜನೇಯರ ಮೂರ್ತಿ ಪ್ರತಿಷ್ಠೆ ಯನ್ನು ನೆರವೇರಿಸಿದರು. ಹೊಸದೆಹಲಿಯಲ್ಲಿ ನಡೆದ ಈ ಉತ್ಸವಗಳಿಗೆ ಜ್ಯೋತಿರ್ಮಠದ ಜಗದ್ಗುರುಗಳಾದ ಶ್ರೀ ಶ್ರೀ ಸ್ವರೂಪಾನಂದ ಸರಸ್ವತೀ ಸ್ವಾಮಿಗಳವರೂ ದಯಮಾಡಿ ಸಿದ್ದರು.

Sri Vidyabharathi.Book Centre, Sringeri

CC-O. In Public Domain. Digitized by eGangotri

೩೮. ಶ್ರೇಷ್ಠ ಆದರ್ಶ

ಸನಾತನಧರ್ಮದ ವಟವೃಕ್ಷ ಹಲವಾರು ಮತ ಪಂಥಗಳೆಂಬ ಕೊಂಬೆರೆಂಬೆಗಳನ್ನು ಚಾಚಿ ವಿಶಾಲವಾಗಿ ಹಬ್ಬಿ ಬೆಳೆದಿದೆ. ಈ ಮತ ಪಂಥಗಳ ಅನುಯಾಯಿಗಳು ಒಮ್ಮೊಮ್ಮೆ ಮೂಲವೃಕ್ಷವನ್ನೇ ಮರೆತು ತಾವೇ ಪ್ರತ್ಯೇಕವೆಂದು ಭಾವಿಸಿದುದೂ ಉಂಟು, ಆದರೆ ಇವುಗಳ ಬೇರು ಸನಾತನ ಧರ್ಮದಲ್ಲಿ, ವೇದ ಧರ್ಮದಲ್ಲಿ ದೃಢವಾಗಿ ನಿಂತಿದೆಯೆಂಬುದನ್ನು ಯಾರೂ ಮರೆಯುವಂತಿಲ್ಲ. ವಿಶ್ವದ ಎಲ್ಲ ಮತಗಳ ಮೂಲ ತತ್ವಗಳಿಗೂ ಸನಾತನ ಧರ್ಮದ 'ಸಾಧಾರಣ ಧರ್ಮದಲ್ಲಿ' ಆಧಾರವನ್ನು ಕಾಣಬಹುದು. ಶೈವ, ವೈಷ್ಣವ, ಶ್ರೀ ವೈಷ್ಣವ ಮತಗಳಷ್ಟೇ ಅಲ್ಲದೆ, ಜೈನ ಬೌದ್ಧಮತಗಳಿಗೂ, ಇಸ್ಲಾಂ, ಕ್ರೈಸ್ತಮತಗಳಿಗೂ ಸಹ ಸನಾತನ ಧರ್ಮ ಆಶ್ರಯವಾಗಿದೆ. ಹಿಂದೂಮತವೆಂದು ಕರೆಯಲ್ಪಡುವ ಸನಾತನ ವೈದಿಕ ಧರ್ಮದಲ್ಲಿರುವ ಅನ್ಯಮತ ಸಹಿಷ್ಣುತೆ ಮತ್ತು ಆಧ್ಯಾತ್ಮಿಕ ಸಾಧನೆಗೆ ತೆರೆದಿರುವ ವಿವಿಧಮಾರ್ಗಗಳು ಇದಕ್ಕೆ ಕಾರಣ. ಅನ್ಯಮತಗಳಂತಲ್ಲದೆ, ಹಿಂದೂ ಮತವು ಭಿನ್ನ ಭಿನ್ನಮಾರ್ಗಗಳನ್ನು, ಇತರ ಮತಗಳಲ್ಲಿ ಬೋಧಿಸಿರುವ ಸಾಧನ ಸೋಪಾನಗಳನ್ನು ಆಧ್ಯಾತ್ಮಿಕ ಸಾಧನೆಗೆ ಅಂಗೀಕರಿಸುತ್ತದೆ. ಈ ಪ್ರಮುಖ ಕಾರಣ - ಅವರವರ ಅರ್ಹತೆ, ಯೋಗ್ಯತೆಗೆ ತಕ್ಕಂತೆ ಸಾಧನ ಸೋಪಾನ - ಅದು ಎಲ್ಲ ಮತಗಳನ್ನೂ ಆದರಿಸಿ ಗೌರವಿಸಲು ಕಾರಣ.

ಅದರಲ್ಲಿಯೂ ಅದ್ವೈತ ಪರಂಪರೆಗೆ ಸೇರಿದ ಶೃಂಗೇರಿಯ ಆಚಾರ್ಯರು "ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ" ಎಂದು ಉದ್ಘೋಷಿಸಿತ್ತಾರೆ; ಅಷ್ಟೇ ಅಲ್ಲ ಅದನ್ನು ಹೃತ್ಪೂರ್ವಕವಾಗಿ ನಂಬಿ ನಡೆಯುತ್ತಾರೆ. ತಮ್ಮ ಶಿಷ್ಯರಿಗೂ ಅದನ್ನೇ ಉಪದೇಶಿಸುತ್ತಾರೆ. ಶೈವ, ವೈಷ್ಣವ, ಶಾಕ್ತರಲ್ಲಿ ಐಕ್ಯತೆಯನ್ನು ಮೂಡಿಸಲು ಈ ಆಚಾರ್ಯರ ಉಪದೇಶ ಬೋಧನೆಗಳು ತುಂಬಾ ಸಹಕಾರಿಯಾಗಿವೆ, ಮಾರ್ಗದರ್ಶಿಯಾಗಿವೆ. ಶ್ರೀ ಶಂಕರಭಗವತ್ಪಾದರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು-ವಿವಿಧತೆಯಲ್ಲಿ ಏಕತೆಯನ್ನು ಕಾಣುವ ವಿಶಾಲದೃಷ್ಟಿ- ಪಂಚಾಯತನ ಪೂಜಾ ಪದ್ಧತಿಯೂ ಆ ದಿಸೆಯಲ್ಲಿ ಒಂದು ಪ್ರಾಯೋಗಿಕ ಸಾಧನವಷ್ಟೆ-ಅವರ ಪರಂಪರೆಯವರು ಚಾಚೂತಪ್ಪದೆ ಅನುಸರಿಸುತ್ತ ಅದನ್ನು ಇನ್ನೂ ವ್ಯಾಪಕಗೊಳಿಸುತ್ತಿದ್ದಾರೆ. ಎಲ್ಲ ಜನಕ್ಕೂ ಅತ್ಯಗತ್ಯವಾದ ಸಮಾನ ಧರ್ಮವನ್ನೂ-ನೈತಿಕ ತತ್ವಗಳ ಆಚರಣೆ ಸಾಮೂಹಿಕವಾಗಿ ಸಮಾನವಾದುದು- ಮತ್ತು ಪ್ರತಿಯೊಬ್ಬರಿಗೂ ವಿಹಿತವಾದ ವ್ಯಕ್ತಿಧರ್ಮವನ್ನೂ ಬೋಧಿಸುತ್ತ ಜನಾಂಗದ ಐಕ್ಯತೆಯ ಮಂತ್ರವನ್ನು ಬೋಧಿಸುತ್ತಿದ್ದಾರೆ.

ಈ ದಿಸೆಯಲ್ಲಿ ಪ್ರಮುಖ ಹೆಜ್ಜೆಯನ್ನಿಟ್ಟ ಶ್ರೀ ವಿದ್ಯಾರಣ್ಯಸ್ವಾಮಿಗಳು ತಮ್ಮ ಕಾಲದಲ್ಲಿದ್ದ ಶೈವ-ವೈಷ್ಣವ-ಶಾಕ್ತಭೇದಗಳನ್ನು ಹೋಗಲಾಡಿಸಿ ಇವರಲ್ಲಿ ಐಕಮತ್ಯವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಡಿಸಲು ಶೈವರ ವಿರೂಪಾಕ್ಷನನ್ನು ವಿಜಯನಗರದ ರಾಷ್ಟ್ರೀಯ ಅಂಕಿತವನ್ನಾಗಿಯೂ, ವೈಷ್ಣವರ ವರಾಹವನ್ನು ರಾಷ್ಟ್ರಮುದ್ರಿಕೆಯ ಸಂಕೇತವನ್ನಾಗಿ, ಶಕ್ತಿದೇವತೆಯಾದ ಶ್ರೀ ಭುವನೇಶ್ವರಿಯನ್ನು ರಾಷ್ಟ್ರದ ದೇವತೆಯನ್ನಾಗಿಯೂ ಮಾಡಿದರು. ಇನ್ನೂ ಒಂದು ಹೆಜ್ಜೆಮುಂದೆಹೋಗಿ ಅವೈದಿಕರಾದ ಜೈನರೂ ವೈದಿಕರಾದ ಹಿಂದೂಗಳೂ ಮೈತ್ರಿಯಿಂದ ಇರುವಂತೆ ಏರ್ಪಡಿಸಿದ್ದರು. ಶ್ರವಣಬೆಳ್ಗೊಳದಲ್ಲಿ ಜೈನರನ್ನು ಶ್ರೀವೈಷ್ಣವರು ಹಿಂಸಿಸಿ ಅವರ ಬಸದಿಗಳಿಗೆ ನಷ್ಟವನ್ನು ಉಂಟುಮಾಡಿದಾಗ ಶ್ರೀವಿದ್ಯಾರಣ್ಯರ ಶಿಷ್ಯನಾದ ಬುಕ್ಕರಾಯನು ಜೈನರನ್ನು ವೈಷ್ಣವರನ್ನೂ ಒಟ್ಟಾಗಿ ಕರೆಸಿ ಅವರಲ್ಲಿ ಮೈತ್ರಿಯನ್ನು ಏರ್ಪಡಿಸಿದ್ದನೆಂಬುದು ಶ್ರವಣಬೆಳಗುಳದ ಪ್ರಸಿದ್ಧ ಶಾಸನವೊಂದರಿಂದ ಶ್ರುತವಾಗುತ್ತದೆ. ಶೃಂಗೇರಿ ಆಚಾರ್ಯರ ಮಾರ್ಗದರ್ಶನದಿಂದ ಈ ರೀತಿಯ ಮೈತ್ರಿ, ಸೌಹಾರ್ದ ವರ್ಧನೆ ಮುಂದುವರೆದು ವಿಜಯನಗರದ ಚಕ್ರವರ್ತಿಗಳು ಎಲ್ಲ ಮತಗಳ ಆಲಯಗಳಿಗೂ ಹೇರಳವಾದದಾನ ದತ್ತಿಗಳನ್ನು ಕೊಟ್ಟರೆಂಬುದು ಪ್ರಸಿದ್ಧವಾದ ವಿಚಾರ.

ಹಾಗೆಯೇ ಶೃಂಗೇರಿಯ ಆಚಾರ್ಯರ ಹೃದಯ ವೈಶಾಲ್ಯ, ಅನ್ಯಮತ ಸಹಿಷ್ಣುತೆ, ಗೌರವಾದರಗಳು ಅವರ ಶಿಷ್ಯರಾಗಿದ್ದ ಅನೇಕ ರಾಜಮನೆತನಗಳಿಗೆಲ್ಲಾ ಮೇಲ್ಪಂಕ್ತಿಯಾಗಿದ್ದುವು. ಕೆಳದಿಯ ಅರಸರೂ ಸಹ ವಿಜಯನಗರದ ಸಾಮ್ರಾಟರಂತೆಯೇ ಶೃಂಗೇರಿಯ ಆಚಾರ್ಯರ ಮಾರ್ಗದರ್ಶನ ಪಡೆದು ತಾವೂ ಸಹ ಅನೇಕ ಶೈವ, ವೈಷ್ಣವ, ಜೈನಮಠಗಳಿಗೂ, ದೇವಾಲಯಗಳಿಗೂ ದಾನದತ್ತಿಗಳನ್ನಿತ್ತರು. ಅಷ್ಟೇ ಅಲ್ಲದೆ ಮುಸಲ್ಮಾನರಿಗೂ ಮಸೀದಿಗಳನ್ನು ಕಟ್ಟಿಕೊಳ್ಳಲು ದತ್ತಿಯನ್ನು ಕೊಟ್ಟರೆಂಬುದು ತುಂಬಾ ಶ್ಲಾಘ್ಯವಾದ ವಿಷಯ.

ಅವರಂತೆಯೇ ಮೈಸೂರೊಡೆಯರೂ ಶೃಂಗೇರೀ ಆಚಾರ್ಯರ ಮಾರ್ಗದರ್ಶನವನ್ನು ಪಡೆದು ಸರ್ವಮತ ಸಹಿಷ್ಣುತೆ, ಗೌರವ ಆದರಗಳನ್ನು ತೋರಿ ಆದರ್ಶರಾದರು. ಹೈದರಾಲಿ ಟಿಪ್ಪೂವು ಸಹ ಈ ಮಾರ್ಗದಲ್ಲಿ ತಾವೂ ಹಿಂದೆ ಬೀಳಲಿಲ್ಲ.

ಶೃಂಗೇರಿಯ ಆಚಾರ್ಯರು ತಾವು ಶುದ್ಧ ಅದ್ವೈತಿಗಳಾದರೂ ಅನ್ಯಮತಗಳ ವಿಚಾರದಲ್ಲಿ ವಿಶಾಲಮನೋಭಾವವುಳ್ಳವರೆಂಬುದಕ್ಕೆ ಹಲವಾರು ನಿದರ್ಶನಗಳಿವೆ. ಶ್ರೀ ದ್ವಿತೀಯ ಸಚ್ಚಿದಾನಂದ ಸ್ವಾಮಿಗಳವರು ಉಡುಪಿಯ ದ್ವೈತಮಠದ ಸ್ವಾಮಿಗಳವರ ಆಹ್ವಾನವನ್ನು ಅಂಗೀಕರಿಸಿ ಉಡುಪೀಕ್ಷೇತ್ರಕ್ಕೆ ದಯಮಾಡಿಸಿದ್ದರೆಂಬುದು ಶ್ರೀ ಗುರುವಂಶ ಕಾವ್ಯದಿಂದ ವಿದಿತವಾಗುತ್ತದೆ.

ಆಧ್ಯಾತ್ಮಿಕ ಸಾಧನೆಯೆಂಬುದು ಸಾಮೂಹಿಕವಾದದ್ದಲ್ಲ. ಅದು ವೈಯಕ್ತಿಕವಾದುದು. ಸಾಧಾರಣ ಧರ್ಮವೆಂಬುದುಎಲ್ಲರಿಗೂ ಸಮಾನವಾದುದು. ಶೈವ, ವೈಷ್ಣವ, ಸ್ಮಾರ್ತ, ಜೈನ, ಶ್ರೀವೈಷ್ಣವ ಬೌದ್ಧ, ಮುಂತಾದವರೆಲ್ಲರೂ ಅನುಸರಿಸಬೇಕಾದ ನೀತಿ ನಿಯಮಗಳಾದ ಸತ್ಯವಚನ, ದಯೆ ಆನೃಶಂಸ್ಯ, ಸೌಹಾರ್ದ, ಮೈತ್ರಿ ವಿಶ್ವಾಸ, ಅನುಕಂಪ, ಸಹನೆ, ಅನಸೂಯೆ ಇವೇ ಮುಂತಾದ ಸಾಧಾರಣ ಧರ್ಮಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಚರಣೆ ಎಲ್ಲ ಮತೀಯರಿಗೂ ಅಗತ್ಯ, ಮುಖ್ಯವಾದುದು. ಈ ಸಾಮಾನ್ಯ ತತ್ವಗಳ ಅನುಷ್ಠಾನದಲ್ಲಿ ಎಲ್ಲರೂ ಭಾಗಿಗಳೇ. ಆಧ್ಯಾತ್ಮಿಕ ಸಾಧನೆಯು, ಅವರವರ ವೈಯ್ಯಕ್ತಿಕ ಅರ್ಹತೆ ಯೋಗ್ಯತೆಗೆ ತಕ್ಕಂತೆ ಭಿನ್ನಭಿನ್ನ. ಶ್ರೀ ವಿದ್ಯಾತೀರ್ಥಸ್ವಾಮಿಗಳವರು ಈ ಪ್ರಮುಖವಾದ ಅಂಶವನ್ನು ತಮ್ಮ ಬಹು ಭಾಷಣಗಳಲ್ಲಿ ಉಪದೇಶಗಳಲ್ಲಿ ಒತ್ತಿ ಒತ್ತಿ ಹೇಳುತ್ತಾ ಅನ್ಯಮತಗಳ ಬಗೆಗೆ ಗೌರವಾದರಗಳನ್ನು ತೋರುತ್ತಿದ್ದಾರೆ.

ತಮ್ಮ ಸಂಚಾರಕಾಲದಲ್ಲಿ, ತಮ್ಮನ್ನು ಆಹ್ವಾನಿಸಿದ ಅನ್ಯಮತೀಯರ ಮಠ ದೇವ ಸ್ಥಾನಗಳಿಗೂ ಸಂದರ್ಶನವಿತ್ತು, ಉಭಯಮತಗಳ ಭಕ್ತರನ್ನೂ ಸಂತೋಷಗೊಳಿಸಿದ್ದಾರೆ. ವೀರಶೈವರ ಸಿದ್ಧಗಂಗಾಮಠ, ಶ್ರವಣಬೆಳಗೊಳದ ಜೈನಮಠ, ಬುದ್ಧಗಯೆಯ ಬೌದ್ಧ ವಿಹಾರ, ತಮಿಳುನಾಡಿನ ಶೈವಸಿದ್ಧಾಂತಮಠಗಳು, ವಾಣಮಾಮಲೈ ಶ್ರೀ ವೈಷ್ಣವ ಮಠ ಮುಂತಾದ ಮಠಗಳಿಗೆ ಸಂದರ್ಶನ ನೀಡಿ ಮತೀಯ ಸಹಕಾರವೇರ್ಪಡಲು ಮಾರ್ಗ ದರ್ಶನ ಮಾಡಿದ್ದಾರೆ. ಶ್ರೀ ಶ್ರೀಗಳವರು ಎಲ್ಲ ದೇವರುಗಳನ್ನು ಪೂಜಿಸಿ, ಎಲ್ಲ ಪೂಜೆಯು ಆ ಒಂದೇ ಪರತತ್ವಕ್ಕೆ ಸಲ್ಲುತ್ತದೆ ಎಂಬುದನ್ನು ತಮ್ಮ ಸ್ವಂತ ಆಚರಣೆಯಿಂದ ಬೋಧಿ ಸುತ್ತಿದ್ದಾರೆ. ಹಾಗೆಯೇ ಜೈನ, ಶೈವ, ವೈಷ್ಣವ ಕ್ಷೇತ್ರಗಳಿಗೂ ತೀರ್ಥಗಳಿಗೂ ಸಂದರ್ಶನ ವಿತ್ತಿದ್ದಾರೆ. ಎಲ್ಲ ದೇವಾಲಯಗಳಿಗೂ ಸಂದರ್ಶನವಿತ್ತು, ದೇವಾಲಯಗಳಲ್ಲಿ ಅರ್ಚನೆ ಮಾಡಿ, ಪೂಜೆಗಳನ್ನು ನೆರವೇರಿಸಿದ್ದಾರೆ. " ಏಕಂ ಸದ್ವಿಪ್ರಾ ಬಹುಧಾ ವದಂತಿ " ಎಂಬ ನಾಣ್ಣುಡಿಯಂತೆ ಒಂದೇ ತತ್ತ್ವ, ಭಕ್ತಾನುಗ್ರಹಕ್ಕಾಗಿ ಶಿವ, ವಿಷ್ಣು, ದೇವಿ, ಗಣಪತಿ, ಸೂರ್ಯ, ಸುಬ್ರಹ್ಮಣ್ಯ ಎಂದು ನಾನಾ ರೂಪಗಳಲ್ಲಿ ಗೋಚರಿಸುತ್ತಿರುವುದಲ್ಲವೆ ?

ಶ್ರೀ ಶ್ರೀಗಳವರು ತಮಿಳುನಾಡಿನ ಊರೊಂದರಲ್ಲಿ ಬಿಡಾರ ಮಾಡಿದ್ದರು. ಅಲ್ಲಿದ್ದ ಹಲವರು ಭಕ್ತರು ರಾತ್ರಿ ಪಲ್ಲಕ್ಕಿಯ ಉತ್ಸವದಲ್ಲಿ ಶ್ರೀ ಗುರುಗಳವರು ದಯಮಾಡಿಸ ಬೇಕೆಂದು ಕೋರಿಕೊಂಡರು. ಶ್ರೀಗಳವರು ಮೊದಲು ಒಪ್ಪಲಿಲ್ಲ. ಶಿಷ್ಯರು ತುಂಬಾ ಕೋರಿಕೊಂಡ ನಂತರ ಒಪ್ಪಿಗೆ ಇತ್ತರು. ಉತ್ಸವಕ್ಕೆ ಎಲ್ಲಾ ಸಿದ್ಧವಾಗಿತ್ತು. ಶ್ರೀಗಳವರು ಒಮ್ಮೆ ಹೊರಕ್ಕೆ ಬಂದರು. ಅಲ್ಲಿ ಸೇರಿದ್ದ ಜನಗಳೊಡನೆ ಅಧಿಕ ಸಂಖ್ಯೆ ಯಲ್ಲಿ ಪೋಲೀಸರೂ ಇದ್ದುದನ್ನು ನೋಡಿ " ಇದೇನು ಇಷ್ಟೊಂದು ಜನ ಪೋಲೀಸರು?" ಎಂದು ಕೇಳಿದರು. ಹತ್ತಿರವಿದ್ದ ವ್ಯವಸ್ಥಾಪಕರು ಹೆದರುತ್ತಾ " ಸ್ವಲ್ಪ ಗಲಾಟೆಯಾಗ ಬಹುದೆಂದು ಹೆದರಿ, ಮುಂಜಾಗ್ರತೆಗಾಗಿ ಇವರನ್ನು ಕರೆಸಿದ್ದೇವೆ " ಎಂದರು. "ಗಲಾಟೆ ಯೇಕಾಗುತ್ತದೆ ?" ಶ್ರೀ ಶ್ರೀ ಗುರುಗಳು ಪ್ರಶ್ನಿಸಿದರು.

" ಇಲ್ಲಿ ಸ್ವಲ್ಪ ಜನ ಧರ್ಮ, ದೇವರು, ಉತ್ಸವ ಇವನ್ನೆಲ್ಲಾ ವಿರೋಧಿಸಿ ಪ್ರದರ್ಶನ ನಡೆಸಬೇಕೆಂದಿದ್ದಾರೆ. ಅವರಿಗೆ ಸರ್ಕಾರದಲ್ಲಿರುವ ಮುಖ್ಯಸ್ಥರ ಬೆಂಬಲವೂ ಇದ್ದಂತಿದೆ. ಆದ್ದರಿಂದ ಪೋಲೀಸು ಬಂದೋಬಸ್ತನ್ನು ಏರ್ಪಡಿಸಬೇಕಾಯಿತು " ಎಂದು ವ್ಯವಸ್ಥಾಪಕರು ಬಿನ್ನವಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಜನಗಳ ವಿರೋಧವನ್ನು ಕಟ್ಟಿಕೊಂಡಾದರೂ ಸ್ವಾಮಿಗಳ ಮೆರವಣಿಗೆ ಮಾಡ ಬೇಕೇನು? ಈ ಉತ್ಸವ ಜನಕ್ಕೆ ಸಂತೋಷವನ್ನು ಉಂಟುಮಾಡದಿದ್ದಲ್ಲಿ ಏಕೆ ನಡೆಯ ಬೇಕು? ನನಗೆ ಇದರಿಂದ ಸಂತೋಷವೂ ಇಲ್ಲ ವ್ಯಥೆಯೂ ಇಲ್ಲ ಇನ್ನೊಂದು ಗುಂಪಿ ನವರನ್ನು ವಿರೋಧಿಸಿ ಈ ಉತ್ಸವ ನಡೆಯುವುದು ಸಲ್ಲದು" ಎಂದು ಹೇಳಿ ಒಳಕ್ಕೆ ಹೊರಟು ಬಿಟ್ಟರು! ವ್ಯವಸ್ಥಾಪಕರಿಗೆ ಕಸಿವಿಸಿಯಾಯಿತು. ಊರಲ್ಲೆಲ್ಲಾ ಸುದ್ದಿ ಹಬ್ಬಿತು. ಉತ್ಸವ ನಿಂತಿತು.

ಮೂರನೆಯ ದಿನ ಹಲವರು ಶ್ರೀ ಶ್ರೀಗಳವರ ದರ್ಶನಕ್ಕೆ ಬಂದರು. ತಾವು ಶ್ರೀ ಶ್ರೀಗಳವರನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ವ್ಯವಸ್ಥಾಪಕರ ವಿರುದ್ಧವಾಗಿ ಪ್ರದರ್ಶನ ಮಾಡಲು ನಿರ್ಧರಿಸಿದ್ದಕ್ಕಾಗಿ ಪಶ್ಚಾತ್ತಾಪಪಟ್ಟರು. ಶ್ರೀಗಳವರೊಡನೆ ಧರ್ಮ ದೇವರ ಬಗ್ಗೆ ವಿಚಾರ ಮಾಡಿದರು. ತಮ್ಮ ಅನೇಕ ಸಂದೇಹ ಸಂಶಯಗಳನ್ನು ಪರಿಹರಿಸಿ ಕೊಂಡರು. ಅನಂತರ ಶ್ರೀ ಶ್ರೀಗಳವರ ಪಾಲಕಿ ಉತ್ಸವವನ್ನು ಅವರೂ ಇತರರೂ ಸೇರಿ ಸಂತೋಷ ವೈಭವಗಳಿಂದ ನಡೆಸಿದರು.

ಇತ್ತೀಚಿನ ಸಂಚಾರದಲ್ಲಿ ಶ್ರೀ ಶ್ರೀಗಳವರು, ಶ್ರೀ ಸನ್ನಿಧಾನದೊಡನೆ ಮೈಸೂರಿನ ಶ್ರೀ ಬ್ರಹ್ಮತಂತ್ರ ಪರಕಾಲಮಠಕ್ಕೆ ದಯಮಾಡಿಸಿದ್ದುದು ಮತ್ತು ಉಡುಪಿಕ್ಷೇತ್ರಕ್ಕೆ ದಯಮಾಡಿಸಿದ್ದುದು ಸ್ಮರಣೀಯ ಘಟನೆಗಳಾಗಿವೆ. ಇಂತಹ ಸಂದರ್ಭಗಳಲ್ಲಿ ಶ್ರೀ ಶ್ರೀ ಗಳವರು ತೋರಿಸುವ ಸರಳತೆ, ಸೌಜನ್ಯ, ಸೌಲಭ್ಯ ಅನ್ಯಾದೃಶವಾದುದು. ಒಮ್ಮೆ ಶ್ರೀ ಶ್ರೀಗಳವರನ್ನು ಸ್ವಾಗತಿಸಲು ಮಾಡಬೇಕಾದ ಪೂರ್ವವ್ಯವಸ್ಥೆ ಮತ್ತು ಸಿದ್ಧತೆಗಳು ಹೇಗಿರಬೇಕು, ಯಾವ ರೀತಿಯ ಗೌರವ, ಮರ್ಯಾದೆಗಳನ್ನು ತೋರಬೇಕು, ಎಂಬು ದನ್ನು ತಿಳಿಯಲು ಒಂದು ಪ್ರಮುಖ ಮಠದವರು ಶ್ರೀ ಶ್ರೀಗಳವರ ಕಾರ್ಯದರ್ಶಿಯನ್ನು ಕೇಳಿದರು. ಈ ವಿಚಾರ ಶ್ರೀ ಗುರುಗಳವರಿಗೆ ತಿಳಿದಾಗ "ನಾವು ಆ ಮಠಕ್ಕೆ ಹೋಗು ವುದು ಅಲ್ಲಿ ಪೂಜೆಗೊಳ್ಳುತ್ತಿರುವ ದೇವರ ದರ್ಶನಕ್ಕಾಗಿ, ದೇವರ ದರ್ಶನಕ್ಕೆ ಬಂದವರನ್ನು ಹೇಗೆ ಸ್ವಾಗತಿಸಬೇಕೋ, ಅಷ್ಟು ಮಾತ್ರ ಸಾಕು" ಎಂದು ಅಪ್ಪಣೆ ಕೊಡಿಸಿದ್ದರು. ಕ್ರೈಸ್ತರ ಕ್ಯಾಥೋಲಿಕ್ ಪಂಗಡದ ಗುರು ಪೋಪರು ಭಾರತಕ್ಕೆ ಬರುತ್ತಾರೆಂದಾಗ, ಸಹಜ ವಾಗಿ ಅನೇಕ ಜನ ಸನಾತನಿಗಳಲ್ಲಿ ಕಟ್ಟಾ ಹಿಂದೂಗಳಲ್ಲಿ ಅಸಂತೋಷ ಮೂಡಿತು. ಹಿಂದೂ ಜನಾಂಗವನ್ನು ಗೌರವಿಸದ ಚರ್ಚಿನ ಅತ್ಯಂತ ಹಿರಿಯ ಮುಖ್ಯಸ್ಥರನ್ನು ಸ್ವಾಗತಿಸಬಾರದೆಂದೂ, ಅವರ ವಿರೋಧದ ಸಭೆಗಳಾದವು. ಅನೇಕ ಜನ ಯುವಕರು ಪೋಪರಿಗೆ ಕಪ್ಪು ಬಾವುಟ ಪ್ರದರ್ಶನ ಮಾಡುವ ನಿರ್ಧಾರ ಕೈಗೊಂಡರು. ಆಗ ದಕ್ಷಿಣ ಭಾರತದಲ್ಲಿ ಸಂಚಾರ ಮಾಡುತ್ತಿದ್ದ ಶ್ರೀ ಶ್ರೀಜಗದ್ಗುರುಗಳವರು ತಮ್ಮ ಅಸಂಖ್ಯಾತ ಅನುಯಾಯಿಗಳಿಗೆ ಸಂದೇಶವನ್ನು ಇತ್ತು, ಭರತಖಂಡದ ಭವ್ಯಪರಂಪರೆ, ಉಜ್ವಲ ಸಂಸ್ಕೃತಿ, ಶ್ರೇಷ್ಠ ನಾಗರಿಕತೆ ಇವುಗಳನ್ನು ಅನುಸರಿಸಿ ನಮ್ಮ ಜನ ಅನ್ಯಮತಗಳ ಬಗೆಗೆ ಸಹನೆ ಹೊಂದಿರಬೇಕೆಂದೂ, ಕ್ರೈಸ್ತಮತದ ಹಿರಿಯ ಗುರುಗಳು ಬಂದಾಗ ಅವರ ಬಗ್ಗೆ

Sri Vidyabharathi Book Centre, Sringeri

ವಿರೋಧವನ್ನು ವ್ಯಕ್ತಪಡಿಸಬಾರದೆಂದೂ, ನಮ್ಮ ಶ್ರೇಷ್ಠ ಘನತೆಗೆ ತಕ್ಕಂತೆ ಗೌರವಾದರಗಳಿಂದ ಸ್ವಾಗತಿಸಬೇಕೆಂದೂ ಬೋಧಿಸಿದರು.

ಅನ್ಯಮತದ ಅನುಯಾಯಿಗಳು ತಮ್ಮಲ್ಲಿಗೆ ಬಂದಾಗ, ತಮ್ಮ ಗುರು ಶ್ರೀ ಚಂದ್ರಶೇಖರ ಭಾರತೀಯವರಂತೆಯೇ, ಆ ಜನಗಳನ್ನು ಅವರವರ ಮತ ಧರ್ಮದಲ್ಲಿ ಪ್ರವರ್ತಿಸುವಂತೆ ಸಹಾಯ ಮಾಡುತ್ತಾರೆ. ಪ್ರತಿಯೊಂದು ಮತದಲ್ಲಿಯೂ ಆತ್ಮ ಸಾಧನೆಯ ಮಾರ್ಗ ಇದ್ದೇ ಇದೆ, ಜ್ಞಾನಿಗಳೂ ಮಹಾತ್ಮರೂ ಇದ್ದಾರೆ, ಎಂಬುದನ್ನು ಮನದಟ್ಟು ಮಾಡಿಕೊಟ್ಟು ತಮ್ಮಲ್ಲಿ ಬಂದ ಪ್ರತಿಯೊಬ್ಬರಿಗೂ ತನ್ನ ತನ್ನ ಮತದಲ್ಲಿಯೇ ಶ್ರದ್ಧೆನಂಬಿಕೆಗಳನ್ನು ಮೂಡಿಸುತ್ತಾರೆ. ಅಂತಹವರಿಗೆ ಅಗತ್ಯಬಿದ್ದಲ್ಲಿ, ಸನಾತನ ಧರ್ಮದ ರೀತ್ಯಾ ಸಾಧನಕ್ರಮವನ್ನು ಬೋಧಿಸಿದ್ದರೂ, ಆ ಜನ ತಮ್ಮ ಮತದಲ್ಲಿ ಶ್ರದ್ಧೆಯನ್ನು ಮುಂದುವರಿಸುವಂತೆ ಎಚ್ಚರಿಕೆ ವಹಿಸುತ್ತಾರೆ.

ಹಿಂದೆ ಇಕ್ಕೇರಿಯ ಶಿವಪ್ಪನಾಯಕನ ಕಾಲದಲ್ಲಿ, ಕೂಡಲೀ ಮಠದಲ್ಲಿ ಸ್ವಲ್ಪ ಕಾಲ ಯಾರೂ ಪೀಠಾಧಿಪರು ಇರಲಿಲ್ಲ. ಮಠದ ಆಸ್ತಿ ಪಾಸ್ತಿಯೆಲ್ಲವೂ ಅನ್ಯಾಕ್ರಾಂತವಾಗಿದ್ದುವು. ಶಿವಪ್ಪನಾಯಕನು ಅವೆಲ್ಲವನ್ನೂ ಬಿಡಿಸಿ, ಆಗ ಶೃಂಗೇರಿಯಲ್ಲಿ ಜಗದ್ಗುರುಗಳಾಗಿದ್ದ ಶ್ರೀ ಸಚ್ಚಿದಾನಂದಭಾರತೀ ಸ್ವಾಮಿಗಳವರಿಗೆ ಒಪ್ಪಿಸಿದನು. ಶ್ರೀ ಗುರುಗಳು ಕೂಡಲಿಗೆ ಪ್ರಯಾಣ ಬೆಳೆಸಿ, ಮಠದ ಆಡಳಿತವನ್ನು ವ್ಯವಸ್ಥೆಗೊಳಿಸಿದ್ದರು. ಶ್ರೀ ಶಂಕರಭಾರತೀ ಎಂಬುವರನ್ನು, ಪೀಠಾಧಿಕಾರಿಯನ್ನಾಗಿ ನೇಮಿಸಿದ್ದರು. ಈ ವಿಚಾರ ಶಾಸನದ ಇಲಾಖೆಯ ವರದಿಯೊಂದರಿಂದ ಶ್ರುತಪಡುತ್ತದೆ.

ಕೂಡಲೀ ಶೃಂಗೇರೀ ಮಠವು ಮತ್ತೊಮ್ಮೆ ಸ್ವಲ್ಪಕಾಲ ತೆರವಾಗಿಯೇ ಇತ್ತು. ಅಲ್ಲಿಯ ಪೀಠಾಧಿಪತ್ಯಕ್ಕೆ ಯಾರನ್ನಾದರೂ ಸರಿಯಾದವರನ್ನು ಆರಿಸಬೇಕಾಗಿತ್ತು. ಮುಸುಕಾಗಿದ್ದ ಮಠದ ಕೀರ್ತಿ, ಗೌರವಗಳನ್ನು ಎತ್ತಿ ಹಿಡಿಯುವಂತಹ ಆಚಾರಶೀಲರೂ, ಅನುಷ್ಠಾನಪರರೂ ಆದವರು ಅಲ್ಲಿಯ ಪೀಠಕ್ಕೆ ಬರಬೇಕಾಗಿತ್ತು. ಸರ್ಕಾರಕ್ಕೆ ಅನೇಕ ಮನವಿಗಳೂ ಹೋದುವು, ಅನೇಕ ನಿಯೋಗಗಳೂ ಹೋದುವು, ಸರ್ಕಾರ ಈ ವಿಷಯವನ್ನು ಹೇಗೆ ತೀರ್ಮಾನಿಸುವುದೆಂದು ಚಿಂತಿಸುತ್ತಿತ್ತು. ಕಟ್ಟಕಡೆಗೆ ಶ್ರೀ ಶ್ರೀಗಳವರ ನೆರವನ್ನು ಕೋರಿದಾಗ, ಶ್ರೀ ಶ್ರೀಗಳವರು ತಮ್ಮ ಸಲಹೆಯನ್ನು ಕೊಟ್ಟರು. ಪೀಠಕ್ಕೆ ಸರ್ಕಾರದಿಂದ ಆರಿಸ್ಪಟ್ಟ ಬ್ರಹ್ಮಚಾರಿಗಳು ಮೊದಲು ಶೃಂಗೇರಿಗೆ ಹೋಗಿ ಜಗದ್ಗುರುಗಳವರ ದರ್ಶನಮಾಡಿ, ತಮ್ಮನ್ನು ಪೀಠಕ್ಕೆ ಸರ್ಕಾರ ಆರಿಸಿದೆಯೆಂದೂ, ಆಶೀರ್ವದಿಸಬೇಕೆಂದೂ ಕೋರಿಕೊಂಡರು. ದಂಡವನ್ನು ಅನುಗ್ರಹಿಸಬೇಕೆಂದೂ ಕೋರಿಕೊಂಡರು. ಅನಂತರ ಮೈಸೂರು ನಗರದ ಶಂಕರ ಮಠದಲ್ಲಿಯೇ ಅವರ ಸಂನ್ಯಾಸಾಂಗವಾದ ಪೂರ್ವಕರ್ಮಗಳೆಲ್ಲವನ್ನೂ ನಡೆಸಬಹುದೆಂದು ಶ್ರೀ ಶ್ರೀಗಳವರು ಅಪ್ಪಣೆ ಮಾಡಿ ಫಲಮಂತ್ರಾಕ್ಷತೆಯನ್ನು ಇತ್ತರು. ಕೂಡಲೀ ಪೀಠದ ನೂತನ ಸ್ವಾಮಿಗಳವರು ತಮ್ಮ ಪಟ್ಟಾಭಿಷೇಕಕ್ಕೆ ಶ್ರೀ ಶ್ರೀಗಳವರೇ ಕೂಡಲಿಗೆ ದಯಮಾಡಿಸಬೇಕೆಂದು

Sri Vidyabharathi Book Centre, Sringeri

 CC-O. In Public Domain. Digitized by eGangotri

ಅಪೇಕ್ಷಿಸಪಟ್ಟಾಗ, ಶ್ರೀ ಶ್ರೀಗಳವರು ಅವರ ಇಚ್ಛೆಯನ್ನು ನೆರವೇರಿಸಿ, ಉಭಯ ಮಠಗಳಲ್ಲಿ ಮಧುರಬಾಂಧವ್ಯ ಏರ್ಪಡಲು ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು.

೩೯. ಸಂಪ್ರದಾಯ ಪಾಲನೆ

ಅಗ್ರಣೀಃ ಶಿಷ್ಟಾಚಾರ ಪರಿಪಾಲನೇ ಭಗವಾನ್ ಭಾಷ್ಯಕಾರಃ ಎಂದಿದಾರೆ ಶ್ರೀ ಪದ್ಮಪಾದರು, ಜಗದ್ಗುರುಗಳಾದ ಶ್ರೀ ಶಂಕರ ಭಗವತ್ಪಾದರನ್ನು ಕುರಿತು. ಈ ಮಾತು ಶ್ರೀ ಅಭಿನವ ವಿದ್ಯಾತೀರ್ಥರಿಗೂ ಅನ್ವಯವಾಗುತ್ತದೆ.

ಶ್ರೀ ಶ್ರೀಗಳವರನ್ನು ಸಂದರ್ಶಿಸಲು ಹಲವು ಜನ ಭಕ್ತರು ಮೈಸೂರಿನಿಂದ ಶೃಂಗೇರಿಗೆ ಹೋಗಿದ್ದರು. ಮಹಾಸನ್ನಿಧಾನದಲ್ಲಿ ಕೆಲವು ವಿಚಾರಗಳನ್ನು ಬಿನ್ನಹ ಮಾಡುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಶ್ರೀ ಶ್ರೀಗಳವರ ದರ್ಶನವನ್ನು ಅಪೇಕ್ಷಿಸಿ ಉತ್ತರದೇಶದ ಯತಿಗಳೊಬ್ಬರು ಆಗಮಿಸಿದ್ದರು. ಶ್ರೀ ಶ್ರೀಗಳವರ ಹತ್ತಿರ ವಿದ್ದ ನೌಕರ "ಹಿಂದೀ ಸ್ವಾಮಿಗಳು ಬಂದಿದಾರೆ. ದರ್ಶನಕ್ಕಾಗಿ ಕಾದಿದಾರೆ" ಎಂದು ಬಿನ್ನವಿಸಿದ, ಶ್ರೀ ಗುರುಗಳವರು "ಒಳಕ್ಕೆ ಬರಮಾಡು" ಎಂದು ಅಪ್ಪಣೆಯಿತ್ತರು. ಕೆಲವು ನಿಮಿಷಗಳ ತರುವಾಯ ದಂಡ, ಕಮಂಡಲು ಸಹಿತರಾದ ಆ ಸ್ವಾಮಿಗಳು ಒಳಕ್ಕೆ ಪ್ರವೇಶಿಸಿದರು. ಯತಿವಂದನೆಯ ಪದ್ಧತಿಯನ್ನು ಅನುಸರಿಸಿ ಶ್ರೀ ಶ್ರೀಗಳವರನ್ನು ನಮಸ್ಕರಿಸಲು ಉದ್ಯುಕ್ತರಾದರು. ಶ್ರೀ ಗುರುಗಳು ಮೈಸೂರಿನ ಭಕ್ತರತ್ತ ನೋಡಿದರು. ಅವರು ಕುಳಿತೇ ಇದ್ದರು. "ನಾವು ಜಗದ್ಗುರುಗಳ ಸನ್ನಿಧಿಯಲ್ಲಿ ಇರುವುದರಿಂದ ಬೇರೆ ಯಾರಿಗೂ ಗೌರವ ತೋರಿಸಬೇಕಾಗಿಲ್ಲ" ಎಂಬ ಭಾವನೆಯಿಂದ ಚಲಿಸದೇ ಇದ್ದರು ಆಗ ಜಗದ್ಗುರುಗಳು ಅವರೆಲ್ಲರಿಗೂ ಎದ್ದು ನಿಲ್ಲುವಂತೆ ಸೂಚನೆಯಿತ್ತು, ಆ ಸ್ವಾಮಿಗಳು ಕುಳಿತ ನಂತರವೇ, ಭಕ್ತರಿಗೂ ಕುಳಿತುಕೊಳ್ಳಲು ಅಪ್ಪಣೆಯಿತ್ತರು.

ಬೇರೆಯ ಯತಿಗಳೊಬ್ಬರನ್ನು ಕೆಲವರು ನಾಗರಿಕರು ಭೇಟಿಮಾಡಬೇಕಾದ ಸಂದರ್ಭ ಒದಗಿತು. ಆ ನಾಗರಿಕರು ಅಷ್ಟೇನೂ ಸಂಪ್ರದಾಯನಿಷ್ಠರಲ್ಲದಿದ್ದರೂ, ಯತಿಗಳು ಸಂನ್ಯಾಸಿಗಳು ಎಂದರೆ ಗೌರವಭಾವನೆಯನ್ನು ಹೊಂದಿದ್ದರು. ಆದರೆ ತಾವು ಭೇಟಿಮಾಡಬೇಕೆಂದಿದ್ದ ಆ ಯತಿಗಳನ್ನು ಕುರಿತು ಆ ನಾಗರಿಕರಿಗೆ ಅಷ್ಟೇನು ಸದಭಿಪ್ರಾಯ ವಿರಲಿಲ್ಲ, ಗೌರವವೂ ಇರಲಿಲ್ಲ. ಅದು ಅವರ ದೃಷ್ಟಿಯಿಂದ ಸಕಾರಣವಾಗಿಯೂ ಇತ್ತು. ಅವರನ್ನು ಭೇಟಿಮಾಡಬೇಕಾಗಿಯೇ ಬಂದುದರಿಂದ ವಿಧಿಯಿಲ್ಲದೆ ಒಪ್ಪಿಕೊಂಡಿದ್ದರು. ಆ ನಾಗರಿಕರಲ್ಲಿ ಒಬ್ಬಾತ ಆ ಯತಿಗಳ ಭೇಟಿಗೆ ಹೋದರೆ ನಮಸ್ಕಾರ ಮಾಡಬೇಕಾಗುತ್ತದೆಯೆಂದು, ಭೇಟಿಮಾಡದೆಯೇ ಹಿಂದಿರುಗಿದರು. ಎಷ್ಟೋ ದಿನಗಳ ಬಳಿಕ ಅವರು ಶೃಂಗೇರಿಗೆ ಭೇಟಿಯಿತ್ತು, ತಾವು ಗೌರವಭಾವನೆ ಹೊಂದಿರದ ಸಂನ್ಯಾಸಿಗಳನ್ನು ಭೇಟಿ ಮಾಡಲೇಬೇಕಾಗಿ ಬಂದಾಗ, ನಮಸ್ಕಾರ ಮಾಡದೇ ಇರಬಹುದೋ, ಎಂಬುದಾಗಿ ಶ್ರೀ ಶ್ರೀಗಳವರನ್ನು ಕೇಳಿದರು. ತತ್‌ಕ್ಷಣ ಶ್ರೀ ಶ್ರೀಗಳವರು "ನೀವು ಸಾಮಾನ್ಯ ಜನರನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಭೇಟಿಮಾಡಿದಾಗ ನಮಸ್ಕಾರಗಳನ್ನೂ, ವಂದನೆಗಳನ್ನೂ ಹೇಳುತ್ತೀರಿ. ಇದು ಲೋಕ ಮರ್ಯಾದೆ. ಹಾಗೆಯೇ ಯಾವ ಸಂನ್ಯಾಸಿಯನ್ನೇ ಆಗಲಿ ನೀವು ಕಾಣಬೇಕಾಗಿ ಬಂದಾಗ, ಅವರಿಗೆ ನಮಸ್ಕಾರ ಮಾಡಬೇಕು. ಪ್ರಣಾಮ ಮಾಡಲೇ ಬೇಕು. ಆಶ್ರಮಗಳಲ್ಲೆಲ್ಲಾ ಸಂನ್ಯಾಸಾಶ್ರಮ ಕೊನೆಯದು, ಶ್ರೇಷ್ಠವಾದುದು. ಸಂನ್ಯಾಸಿಗಳ ಬಗೆಗೆ ನಿಮಗೆ ಎಷ್ಟೇ ಅಸಮಾಧಾನಗಳಿದ್ದರೂ ಅವರ ಆಶ್ರಮಕ್ಕೆ ಮರ್ಯಾದೆ ಸಲ್ಲಿಸಬೇಕಾದದ್ದು ನಿಮ್ಮ ಧರ್ಮ" ಎಂದು ಅಪ್ಪಣೆ ಕೊಡಿಸಿದರು.

ಸ್ವಲ್ಪಕಾಲದ ಹಿಂದೆ ಆಗ ಪ್ರಚಲಿತವಾಗಿದ್ದ ಒಂದು ವಿವಾದದ ಬಗ್ಗೆ ಶ್ರೀ ಶ್ರೀಗಳವರ ಅಭಿಪ್ರಾಯವನ್ನು ಬಯಸಿ ಹಲವರು ಅವರ ದರ್ಶನಕ್ಕಾಗಿ ಬಂದಿದ್ದರು. ಶ್ರೀ ಗುರುಗಳವರು ಆ ವಿಷಯದಲ್ಲಿ, ತಮ್ಮ ಪೀಠದ ಗೌರವ ಮರ್ಯಾದೆಗಳನ್ನು ಅನುಸರಿಸಿ, ಖಚಿತವಾದ ಅಭಿಪ್ರಾಯವನ್ನು ನೀಡಿದರು. ಅನಂತರ ಮಾತನಾಡುತ್ತಾ "ಯಾವ ವಿಚಾರದಲ್ಲಿಯೇ ಆಗಲಿ ನಾವು ಅಭಿಪ್ರಾಯವನ್ನು ಕೊಡುವಾಗ, ಇಂತಹ ಸನ್ನಿವೇಶದಲ್ಲಿ ನಮ್ಮ ಹಿಂದಿನ ಮುವತ್ತಾಲ್ಕು ಜನ ಆಚಾರ್ಯರು ಹೇಗೆ ವರ್ತಿಸುತ್ತಿದ್ದರು ಎಂದು ಆಲೋಚನೆ ಮಾಡಬೇಕು, ಅನಂತರ ನಿರ್ಧಾರಕ್ಕೆ ಬರಬೇಕು" ಎಂದು ನುಡಿದಿದ್ದರು.

ಹಲವು ಕಾಲದಿಂದ ಪ್ರಚಾರದಲ್ಲಿದ್ದ ಇಂದು ವಿವಾದದ ಬಗ್ಗೆ ಮಠದ ಭಕ್ತರೊಬ್ಬರು ಪುಸ್ತಕವೊಂದನ್ನು ಬರೆದು, ವಿವಾದವನ್ನು ಎಬ್ಬಿಸಿದ್ದವರ ವಾದದ ಜೊಳ್ಳುತನವನ್ನು ತೋರಿಸಿದ್ದರು. ಅವರು ತಮ್ಮ ಪುಸ್ತಕವನ್ನು ಮುದ್ರಣ ಮಾಡಿಸುವ ಮುನ್ನ ಶ್ರೀ ಶ್ರೀಗಳವರ ಆಶೀರ್ವಾದಕ್ಕಾಗಿ ಶೃಂಗೇರಿಗೆ ಬಂದು, ತಾವು ಮಾಡಿರುವ ಕೆಲಸವನ್ನು ಶ್ರೀ ಶ್ರೀಗಳವರಲ್ಲಿ ಬಿನ್ನವಿಸಿ ಪುಸ್ತಕವನ್ನೊಪ್ಪಿಸಿ, ತಮಗೆ ಒಂದು ಶ್ರೀಮುಖವನ್ನು ದಯಪಾಲಿಸಬೇಕೆಂದು ಕೇಳಿಕೊಂಡರು.

ಶ್ರೀ ಶ್ರೀಗಳವರು ಆ ಲೇಖಕರ ಪ್ರಯತ್ನವನ್ನು ಬಹುವಾಗಿ ಪ್ರಶಂಸಿಸಿ 'ನೀವು ಹಿಂದೊಮ್ಮೆ ಈ ಪುಸ್ತಕದ ಪ್ರತಿಯನ್ನು ತಂದು ನಮ್ಮ ಗುರುಗಳಲ್ಲಿ ಒಪ್ಪಿಸಿದ್ದಿರಲ್ಲವೆ?' ಎಂದು ಕೇಳಿದರು. ಲೇಖಕರು ಆಶ್ಚರ್ಯದಿಂದ 'ಹೌದು ಮಹಾಸ್ವಾಮಿ' ಎಂದರು.

"ನಮ್ಮ ಗುರುಗಳು ಆಗ ನಿಮಗೆ ಏನು ಅಪ್ಪಣೆಯನ್ನು ಮಾಡಿದ್ದರು?"

"ಇಂತಹ ಪುಸ್ತಕಗಳಿಂದ ಪರಸ್ಪರ ಅಸೂಯೆ, ಅಸಹನೆ, ದ್ವೇಷಗಳು ಹುಟ್ಟುತ್ತವೆ. ಇದು ಧರ್ಮವೃದ್ಧಿಯಾಗಲು ನೆರವಾಗದು. ಆದ್ದರಿಂದ ನೀನು ನಮ್ಮನ್ನು ಇದರಲ್ಲಿ ಏಕೆ ತೊಡಗಿಸಲು ಪ್ರಯತ್ನಿಸುತ್ತೀಯೆ? ನೀನು ತಾನೆ ಏಕೆ ಇಂತಹ ಕಾರ್ಯದಲ್ಲಿ ಪ್ರವೇಶಿಸುತ್ತೀಯೆ?" ಎಂದು ನುಡಿದರು.

"ನಮ್ಮ ಗುರುಗಳ ಮಾತು ಸತ್ಯ" ಎಲ್ಲ ಕಾಲಕ್ಕೂ ನಿಲ್ಲತಕ್ಕದ್ದು. ಪರಸ್ಪರ ದ್ವೇಷ, ಅಸೂಯೆಗಳನ್ನು ಬೆಳಸತಕ್ಕ ಲೇಖನ, ಪುಸ್ತಕಗಳನ್ನು ಅವರು ಸ್ವಲ್ಪವೂ ಪ್ರೋತ್ಸಾಹಿಸುತ್ತಿರಲಿಲ್ಲ. ನಾನುತಾನೇ ಹೇಗೆ ಅವರು ತೋರಿದ ಪಥದಿಂದ ಬೇರೆಯಾಗಲಿ? ಅವರು ಹೇಳಿದ ಉತ್ತರವೇ ನನ್ನ ಉತ್ತರ!" ಎಂದರು. ಲೇಖಕರು ಗುರುಗಳವರ ಮಾತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂದ, ತಾತ್ಕಾಲಿಕವಾಗಿ ನಿರಾಶರಾದರೂ, ಅವರು ಸಂಪ್ರದಾಯದಲ್ಲಿ, ತಮ್ಮ ಗುರುಗಳ ಉಪದೇಶದಲ್ಲಿ ಇಟ್ಟಿದ್ದ ಅಚಲವಾದ ಶ್ರದ್ಧೆಯನ್ನು ಮೆಚ್ಚಿಕೊಂಡರು.

ಶ್ರೀಶ್ರೀಗಳವರಲ್ಲಿ ಕಷ್ಟಪರಿಹಾರಕ್ಕಾಗಿ ಅನುಗ್ರಹಕ್ಕಾಗಿ ಬಂದವರನ್ನು ಸಾಂತ್ವನಗೊಳಿಸುತ್ತಾ "ಚಂದ್ರಮೌಳೀಶ್ವರ ಹೇಗೆ ಪ್ರೇರಣೆಮಾಡುತ್ತಾನೋ ಹಾಗೆ ನೋಡೋಣ, ಶಾರದಾಮ್ಮನವರು ಹೇಗೆ ಸೂಚಿಸುತ್ತಾರೋ ಹಾಗೆ ಮಾಡೋಣ, ನಮ್ಮಗುರುಗಳು ತೋರಿದ ಮಾರ್ಗದಲ್ಲಿ ನಡೆಯೋಣ" ಎಂದು ಹೇಳುತ್ತಿರುತ್ತಾರೆ. "ನಾನು ಹೇಳುತ್ತೇನೆ" ಎಂದು ಹೇಳುವುದಿಲ್ಲ, ಗುರುಸ್ಮರಣೆಯಂತೂ ಅವರಿಗೆ ಅತ್ಯಂತ ಪ್ರಿಯವಾದುದು. ಅನುಭಾವಿಗಳೂ, ಸಾಧಕರೂ ಬಂದಾಗ, ಅವರು ತಮ್ಮ ಆಧ್ಯಾತ್ಮಿಕ ಸಾಧನೆ, ಸಿದ್ಧಿಗಳನ್ನು ಕುರಿತು ಹೇಳಿದಾಗ "ನಮ್ಮ ಗುರುಗಳೂ ಹಾಗೆ ಹೇಳುತ್ತಿದ್ದರು" ಎಂದು ನುಡಿಯುತ್ತಾರೆ.

ಪ್ರತಿದಿನವೂ ಸೂರ್ಯೋದಯಕ್ಕೆ ಮುನ್ನ ಆರಂಭವಾಗುವ ಶ್ರೀ ಶ್ರೀಗಳವರ ದಿನಚರಿ ಪ್ರಾತಃಸ್ನಾನಾಹ್ನಿಕಗಳ ನಂತರ ಶ್ರೀ ಗುರುಪಾದುಕಾ ವಂದನದಿಂದ ಆರಂಭವಾಗುತ್ತದೆ. ಶ್ರೀಚಂದ್ರಮೌಳೀಶ್ವರನ ಸಮೀಪದಲ್ಲೇ ಇರುವ ಗುರು, ಪರಮಗುರು, ಪರಮೇಷ್ಠಿ ಗುರುಗಳ ಶ್ರೀ ಪಾದುಕೆಗಳಿಗೆ ಶ್ರೀ ಶ್ರೀಗಳವರು ಪೂಜೆಯನ್ನು ಸಲ್ಲಿಸಿ, ಅನಂತರ ಶ್ರೀ ಚಂದ್ರಮೌಳೀಶ್ವರನನ್ನು ಪೂಜಿಸುತ್ತಾರೆ. ಮತ್ತೆ ರಾತ್ರಿ ಪೂಜೆಯನ್ನು ಶ್ರೀ ಚಂದ್ರಮೌಳೀಶ್ವರನಿಗೆ ಸಲ್ಲಿಸಿದ ನಂತರ, ಶ್ರೀಚಂದ್ರಶೇಖರ ಭಾರತೀ ಮತ್ತು ಶ್ರೀ ಶಿವಾಭಿನವ ನೃಸಿಂಹ ಭಾರತೀಸ್ವಾಮಿಗಳವರ ಅಧಿಷ್ಠಾನಕ್ಕೆ ದಯಮಾಡಿಸುತ್ತಾರೆ. ಅಲ್ಲಿ ಶ್ರೀಗುರುಗಳಿಗೆ ವಂದನೆಯನ್ನು ಸಲ್ಲಿಸಿ ಅನಂತರ ಬಿಡಾರಕ್ಕೆ ಹೊರಡುತ್ತಾರೆ. ಹೀಗೆ ದೈನಂದಿನ ಕಾರ್ಯಕ್ರಮ ಗುರುವಂದನೆಯಿಂದ ಆರಂಭಿಸಲ್ಪಟ್ಟು ಗುರುವಂದನೆಯಿಂದಲೇ ಮುಕ್ತಾಯ ಹೊಂದುತ್ತದೆ. ಗುರುವೇ ಬ್ರಹ್ಮ-ವಿಷ್ಣು-ಶಿವ-ಪರಬ್ರಹ್ಮ ವಸ್ತುವಲ್ಲವೆ? ಶ್ರೀಗುರು, ಪರಮಗುರು ಪರಮೇಷ್ಠಿಗುರು ಮೊದಲಾದವರ ಆರಾಧನೆಗಳಂದು ಆಯಾ ಗುರುಗಳವರು ಧರಿಸುತ್ತಿದ್ದ ಪಾದುಕೆಗಳಿಗೆ ಅಭಿಷೇಕ ಅರ್ಚನೆಗಳನ್ನು ಶ್ರೀ ಶ್ರೀಗಳವರು ಸ್ವತಃ ನಡೆಸುತ್ತಾರೆ.

ಶ್ರೀ ಶ್ರೀಗಳವರು ದೇವತಾರಾಧನೆಯಲ್ಲಿಯೂ ಅಷ್ಟೇ ಪರಮ ಭಕ್ತಿಶ್ರದ್ಧೆಯಿಂದ ಭಾಗವಹಿಸುತ್ತಾರೆ. ವಿಶೇಷವಾದ ವ್ರತಗಳನ್ನು ಸ್ವತಃ ತಾವೇ ಆಚರಿಸುತ್ತಾರೆ. ಶ್ರೀ ಕೃಷ್ಣ ಜಯಂತಿ, ಶ್ರೀ ವಿನಾಯಕ ಚತುರ್ಥಿ, ಶ್ರೀ ವಾಮನ ಜಯಂತಿ, ಶ್ರೀ ನರಸಿಂಹ ಜಯಂತಿ, ಶ್ರೀ ಅನಂತವ್ರತ, ಶ್ರೀ ಕೇದಾರೇಶ್ವರ ವ್ರತ ಮುಂತಾದುವುಗಳನ್ನು ಲೋಕ ಸಂಗ್ರಹಕ್ಕಾಗಿ ಆಚರಿಸುತ್ತಾರೆ. ಶ್ರೀ ಶಿವರಾತ್ರಿಯ ನಾಲ್ಕುಯಾಮಗಳೂ ತಾವೇ ಅಭಿಷೇಕ ಮಾಡುತ್ತಾರೆ. ನವರಾತ್ರಿಯಲ್ಲಿ ಶ್ರೀ ಶಾರದಾಮ್ಮನವರಿಗೆ ಸ್ವತಃ ವಿಶೇಷ ಪೂಜೆ ಮಾಡುತ್ತಾರೆ. ಶ್ರೀ ಶಂಕರ ಜಯಂತಿಯ ದಿನ ಶ್ರೀ ಶಂಕರಾಚಾರ್ಯರ ಮೂಲ ವಿಗ್ರಹಕ್ಕೂ ಉತ್ಸವಮೂರ್ತಿಗೂ ತಾವೇ ಸ್ವತಃ ಅಭಿಷೇಕ ಪೂಜಾದಿಗಳನ್ನು ನಡೆಸುತ್ತಾರೆ. ದೇವರ ಉತ್ಸವಗಳಲ್ಲಿ ಭಾಗವಹಿಸುವಾಗ ಶ್ರೀ ಶ್ರೀಗಳವರು ದೇವರಮೂರ್ತಿಗೆ ಎದುರಾಗಿ ನಿಂತು, ಹಿಮ್ಮುಖವಾಗಿ ನಡೆಯುತ್ತಾ ದಯಮಾಡಿಸುತ್ತಾರೆ. ಶೃಂಗೇರಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಮಲಹಾನಿಕೇಶ್ವರ ಸ್ವಾಮಿಯ ಆಲಯಕ್ಕೆ ದಯಮಾಡಿಸುವಾಗ ಪೂರ್ವ ಸಂಪ್ರದಾಯದಂತೆ ಪಾದಚಾರಿಗಳಾಗಿಯೇ ಬರುತ್ತಾರೆ. ಪೂರ್ವಸಂಪ್ರದಾಯಗಳನ್ನು ಚಾಚೂ ತಪ್ಪದೆ ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ.

ಪರ್ವದಿನಗಳಲ್ಲಿ ಶ್ರೀ ಶ್ರೀಗಳವರು ತೀರ್ಥಸ್ನಾನಕ್ಕಾಗಿ ತುಂಗಾನದಿಗೆ ದಯಮಾಡಿಸುತ್ತಾರೆ. ಆಗ ಸಂಚಾರದಲ್ಲಿ ಇದ್ದರೆ, ಸ್ಥಳಕ್ಕೆ ಸಮೀಪವಾಗಿರುವ ನದಿ, ತಟಾಕ, ಸರೋವರಕ್ಕೆ ದಯಮಾಡಿಸಿ ವಿಧ್ಯುಕ್ತವಾಗಿ ಸ್ನಾನಮಾಡುತ್ತಾರೆ. ಅಂತಹ ಸಂದರ್ಭಗಳಲ್ಲಿ ತಮ್ಮ ಅತ್ಯುನ್ನತ ಸ್ಥಾನವನ್ನು ಹಿನ್ನೆಲೆಗೆ ತಳ್ಳಿ, ತಾವು ಅತ್ಯಂತ ಸರಳತೆಯಿಂದ ತೀರ್ಥಸ್ನಾನಕ್ಕೋ, ದೇವತಾದರ್ಶನಕ್ಕೋ ದಯಮಾಡಿಸಿ ಬಿಡುವುದು ಶ್ರೀ ಶ್ರೀಗಳವರ ಸ್ವಭಾವ. ತಾವು ಇಂತಹವರೆಂದು ಗೊತ್ತಾದರೆ, ಜನ ತಮ್ಮನ್ನು ಮುತ್ತಿಬಿಡುತ್ತಾರೆ, ಆಗ ಜಗದ್ಗುರುಸ್ಥಾನಕ್ಕೆ ತಕ್ಕರೀತಿಯಲ್ಲಿ ದೊಡ್ಡ ಪರಿವಾರ, ಬಿರುದುಬಾವಲಿ, ಉತ್ಸವದೊಡನೆ, ದೇವಾಲಯಕ್ಕೋ, ತೀರ್ಥಸ್ನಾನಕ್ಕೋ, ಹೋಗಬೇಕು. ತಾವು ಬರುವಸೂಚನೆಯನ್ನು ಮೊದಲೇ ವ್ಯವಸ್ಥಾಪಕರಿಗೆ ಕೊಡಬೇಕು. ಇದೆಲ್ಲಾ ಬೇಡವೆನಿಸಿದರೆ ಅತ್ಯಂತ ನಿರಾಡಂಬರದಿಂದ ಯಾರಿಗೂ ತಿಳಿಯದಂತೆ ಮಿತಪರಿವಾರದೊಡನೆ ಹೋಗಿ ತೀರ್ಥಸ್ನಾನಮಾಡಿ, ದೇವದರ್ಶನ ಮಾಡಿಬಿಡುವುದುಂಟು. ವಾರಣಾಸಿಕ್ಷೇತ್ರಕ್ಕೆ ದಯಮಾಡಿಸಿದ್ದಾಗ, ಶ್ರೀ ಶ್ರೀಗಳವರು ಒಂದು ದಿನ ತೀರ ಮಧ್ಯರಾತ್ರಿಯಲ್ಲಿಯೇ ಎದ್ದು, ಒಬ್ಬಿಬ್ಬರು ಅನುಚರರೊಡನೆ ಗಂಗಾಸ್ನಾನಕ್ಕೆ ಹೊರಟರು. ಸ್ನಾನಮಾಡಿ ನದಿಯ ಪಾವಟಿಗೆಯ ಮೇಲೆಯೇ ಮೂರುಗಂಟೆಗೂ ಹೆಚ್ಚುಕಾಲ ಆತ್ಮಧ್ಯಾನ ನಿರತರಾಗಿದ್ದರು. ಅನಂತರ ಇನ್ನೂ ನಸುಕು ಇರುವಾಗಲೇ ಶ್ರೀ ವಿಶ್ವೇಶ್ವರನ ದರ್ಶನಮಾಡಿ ಪೂಜಾಭಿಷೇಕಮಾಡಿದರು. ಶ್ರೀ ಶೃಂಗೇರಿಯ ಜಗದ್ಗುರುಗಳೇ ಇವರೆಂದು ಯಾರಿಗೂ ಗೊತ್ತಾಗಲೇ ಇಲ್ಲ, ಮತ್ತೆ ಅವರು ಶ್ರೀ ವಿಶ್ವೇಶ್ವರ ದರ್ಶನಕ್ಕೆ, ಪರಿವಾರದೊಡನೆ ಬಂದಾಗಲೇ ಅಲ್ಲಿಯ ಮಹಂತರಿಗೆ ಇದು ತಿಳಿದುದು !

ಮತ್ತೊಮ್ಮೆ ದಕ್ಷಿಣದೇಶದಲ್ಲಿ ಸಂಚಾರಮಾಡುತ್ತಿದ್ದಾಗ ಹೀಗೆಯೇ ನಡೆಯಿತು. ಶ್ರೀ ಶ್ರೀಗಳವರು ಅಂಬಾಸಮುದ್ರದ ಹತ್ತಿರ ಗೋಪಾಲಸಮುದ್ರದಲ್ಲಿ ವಾಸ್ತವ್ಯ ಮಾಡಿದ್ದರು. ಬೆಳಗ್ಗೆ ಹನ್ನೊಂದು ಗಂಟೆಯ ಸಮಯದಲ್ಲಿ ತೀರ್ಥ ವಿನಿಯೋಗ ಮಾಡುತ್ತಿದ್ದರು. ಜನಸಂದಣಿ ಸುಮಾರಾಗಿತ್ತು. ಜನ ಒಬ್ಬರ ಹಿಂದೊಬ್ಬರು ಶಿಸ್ತಿನಿಂದ ನಿಂತು ತೀರ್ಥ ತೆಗೆದುಕೊಳ್ಳುತ್ತಿದ್ದರು. ಹಿಂದೆ ದೂರದಲ್ಲಿದ್ದ ಒಬ್ಬಾತ ಮುಂದೆ ಬಂದು ಬೇಗ ತೀರ್ಥ ತೆಗೆದುಕೊಳ್ಳಲು ಯತ್ನಿಸುತ್ತಾ ಜನದ ಮಧ್ಯ ತೂರಿಕೊಂಡು ಬರುತ್ತಿದ್ದನು. ಮಠದ ಪುರೋಹಿತರು. "ಅಯ್ಯಾ ಇಷ್ಟೊಂದು ಜನ ಕಾದಿದ್ದಾರೆ. ಹಾಗೆಲ್ಲಾ ಮುಂದೆ ಬರಬಾರದು" ಎಂದರು." ಆತ ಸ್ವಾಮಿ ಹತ್ತಿರದ ತಿರುಪುಡೆಯೂರಿನಲ್ಲಿ ಈ ದಿನ ದೊಡ್ಡ ಉತ್ಸವವಿದೆ. ಅಲ್ಲಿ ಅರ್ಧೋದಯದ ಪುಣ್ಯದಿನದಂತೆ, ಈ ದಿನ ಪರ್ವದಿನ. ತೀರ್ಥ ಸ್ನಾನಕ್ಕಾಗಿ ಬಹಳ ಜನ ಸೇರುತ್ತಾರೆ. ಬಸ್ಸಿಗೆ ಹೊತ್ತಾಗುತ್ತದೆ. ನನಗೆ ಬೇಗ

Sri Vidyabharathi Book Centre, Sringeri

CC-O. In Public Domain. Digitized by eGangotri

ತೀರ್ಥ ಕೊಡಿಸಿ ಪುಣ್ಯಕಟ್ಟಿಕೊಳ್ಳಿ," ಎಂದನು. ಪುರೋಹಿತರು ಆತನನ್ನು ಶ್ರೀ ಶ್ರೀಗಳವರ ಬಳಿಗೆ ಕರೆದುಕೊಂಡುಹೋಗಿ, ಆತನು ಪಕ್ಕದಲ್ಲಿರುವ ಊರಿಗೆ ತೀರ್ಥಸ್ನಾನಕ್ಕಾಗಿ ಹೋಗಬೇಕಾಗಿರುವುದನ್ನು ಬಿನ್ನವಿಸಿದರು. ಶ್ರೀ ಶ್ರೀಗಳವರು ಹಸನ್ಮುಖದಿಂದ ಆತನ ಹೆಸರು, ಯೋಗಕ್ಷೇಮ ವಿಚಾರಿಸಿ, ತೀರ್ಥವನ್ನು ಕೊಟ್ಟರು. ಜನ ಸಂದಣಿಯೆಲ್ಲಾ ಕರಗಿ ಶ್ರೀ ಶ್ರೀಗಳವರು ಒಳಕ್ಕೆ ಹೊರಡುತ್ತಾ ತಮ್ಮ ಆಪ್ತ ಕಾರ್ಯದರ್ಶಿಯನ್ನು ಕರೆದು "ತಕ್ಷಣ ವಾಹನವನ್ನು ಸಿದ್ಧಮಾಡು. ಇಬ್ಬರು ಮೂವರು ಮಾತ್ರ ಸಾಕು. ಇಲ್ಲಿ ಹತ್ತಿರದಲ್ಲಿಯೇ ಒಂದು ಶೈವಕ್ಷೇತ್ರವಿದೆಯಂತೆ. ಅಲ್ಲಿ ಈ ದಿನ ಅರ್ಧೋದಯ ಪರ್ವದಿನ. ಹೋಗೋಣ" ಎಂದರು. ಶ್ರೀ ಶ್ರೀಗಳವರ ಆಜ್ಞೆಯಂತೆ ವಾಹನ ಸಿದ್ಧವಾಯಿತು. ಕೇವಲ ಮೂರು ಜನ ಅನುಚರರೊಡನೆ ಶ್ರೀ ಶ್ರೀಗಳವರು ಅಲ್ಲಿಗೆ ಹೊರಟೇ ಬಿಟ್ಟರು.

ಆ ಸ್ಥಳಕ್ಕೆ ಬಂದಾಗ ಜನಸಂದಣಿ ವಿಪರೀತವಾಗಿತ್ತು. ಕಾರನ್ನು ಪಕ್ಕಕ್ಕೆ ನಿಲ್ಲಿಸಲು ಹೇಳಿ ಶ್ರೀ ಶ್ರೀಗಳವರು ಕಾರಿನಿಂದ ಇಳಿದರು. ಅವರೇ ಅತ್ಯಂತ ಸಾಧಾರಣ ಸಂನ್ಯಾಸಿಯಂತೆ ಜನರ ಮಧ್ಯೆ ದಾರಿಮಾಡಿಕೊಂಡು ಮುಂದೆ ಹೊರಟರು. ಅವರನ್ನು ಕಂಡ ಜನ ಯಾರೋ ಬ್ರಾಹ್ಮಣ ಯತಿ ಎಂದುಕೊಂಡು ದಾರಿಬಿಟ್ಟರು. ಅವರ ಹಿಂದೆ ಉಳಿದ ಮೂವರೂ ಮಡಿ ವಸ್ತ್ರಗಳು, ಮಣೆ ಇತ್ಯಾದಿಗಳನ್ನು ಹಿಡಿದು ಹೊರಟರು. ತಟಾಕದ ಸಮೀಪಕ್ಕೆ ಬಂದರು. ಅಲ್ಲಿ ಸುತ್ತ ಮುತ್ತ ಗ್ರಾಮದ ಎಲ್ಲಾ ದೇವರಮೂರ್ತಿಗಳು ಬಂದಿದ್ದವು. ಶೈವಸಿದ್ಧಾಂತದ ಹಲವಾರು ಜನ ಸಂನ್ಯಾಸಿಗಳು ಉನ್ನತಪೀಠಗಳಲ್ಲಿ ಠೀವಿಯಿಂದ ಮಂಡಿಸಿದ್ದರು. ಶ್ರೀ ಶ್ರೀಗಳವರಾದರೋ ಮೆಟ್ಟಲಿನ ಮೇಲೆಯೇ ತಮ್ಮ ವಸ್ತ್ರವನ್ನು ಹಾಸಿಕೊಂಡು ಕುಳಿತರು. ಇವರನ್ನು ಕಂಡ ಇತರ ಸಂನ್ಯಾಸಿಗಳು ಒಬ್ಬೊಬ್ಬರು "ಯಾರೋ ದೊಡ್ಡವರು" ಎಂದುಕೊಂಡು ಕೆಳಕ್ಕೆ ಇಳಿದು ತಾವೂ ಮೆಟ್ಟಲಿನ ಮೇಲೆ ಕುಳಿತರು. ! ದೇವರಿಗೆ ಪೂಜಾದಿಗಳಾದ ಮೇಲೆ, ಆ ಸಂನ್ಯಾಸಿಗಳು ಶ್ರೀ ಶ್ರೀಗಳವರನ್ನೇ ಮೊದಲು ಸ್ನಾನಮಾಡಬೇಕೆಂದು ಕೇಳಿಕೊಂಡರು. ಶ್ರೀ ಶ್ರೀಗಳವರು ಸ್ನಾನಮಾಡಿ ಆರ್ದ್ರ ವಸ್ತ್ರಗಳಲ್ಲಿಯೇ ಆಹ್ನಿಕ ಜರುಗಿಸಿದರು. ಅನಂತರ ಉಳಿದ ಎಲ್ಲ ಸಂನ್ಯಾಸಿಗಳು ಸ್ನಾನಕ್ಕೆ ಇಳಿದರು.

ಶ್ರೀ ಶ್ರೀಗಳವರು ತಮ್ಮ ಅನುಷ್ಠಾನದ ನಂತರ, ತಮ್ಮೊಡನೆ ಬಂದಿದ್ದ ಶಿಷ್ಯರು ಮೂವರೂ ಸ್ನಾನಾನುಷ್ಠಾನ ಮಾಡುವವರೆಗೆ ಜಪ ನಿರತರಾಗಿದ್ದು, ಅನಂತರ ದೇವರ ದರ್ಶನ ಮಾಡಿ, ತಮ್ಮ ಕಾರನ್ನು ಹತ್ತಿದರು. ಈ ವೇಳೆಗೆ ಅವರ ದರ್ಶನ ಮೊದಲೇ ಮಾಡಿದ್ದ ಒಬ್ಬಿಬ್ಬರು ಆಶ್ಚರ್ಯದಿಂದ, ಆನಂದದಿಂದ "ಶೃಂಗೇರೀ ಶಂಕರಾಚಾರ್ಯರು" ಬಂದಿದ್ದಾರೆ ಎಂದು ಘೋಷಿಸಿಬಿಟ್ಟರು. ತಟಾಕದ ಕಡೆ ಹೋಗುತ್ತಿದ್ದ ಜನ ಪ್ರವಾಹ ಇತ್ತ ತಿರುಗಿತು ! ಶ್ರೀ ಶ್ರೀಗಳವರಿಗೆ ಜಯ ಜಯಕಾರ ಮಾಡಿತು. ಶ್ರೀ ಶ್ರೀಗಳವರು ಎಲ್ಲರನ್ನೂ ಕೈಯೆತ್ತಿ ಆಶೀರ್ವದಿಸಿ ಅತಿ ಶೀಘ್ರವಾಗಿ ತಮ್ಮ ಬಿಡಾರಕ್ಕೆ ಮರಳಿ ಬಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

೪೦. ಗುರುವನರಸಿಬಂದ ಶಿಷ್ಯ

ಶ್ರೀ ಶ್ರೀಗಳವರ ಅಂತರ್ಯದಲ್ಲಿ ತಮ್ಮ ಉತ್ತರಾಧಿಕಾರಿಯ ನೇಮಕದ ವಿಚಾರ ಬಹುಕಾಲದಿಂದ ಇತ್ತು. ಅವರೇ ಸ್ವತಃ ಮೂವರು ಬ್ರಹ್ಮಚಾರಿಗಳನ್ನು ತಮ್ಮ ಕಣ್ಣಳತೆಯಲ್ಲಿ ಇರಿಸಿಕೊಂಡು ಶಾಸ್ತ್ರಾಭ್ಯಾಸ ಮಾಡಿಸುತ್ತಿದ್ದರು. ಅವರಲ್ಲಿ ಒಬ್ಬರು ನಯ, ವಿನಯ, ಸೌಜನ್ಯ, ಶಾಸ್ತ್ರಗಳಲ್ಲಿ ಶ್ರೇಷ್ಠವಾದ ಪಾಂಡಿತ್ಯ, ಸದಾಚಾರ, ದೈವಭಕ್ತಿ, ಗುರುಭಕ್ತಿ ಇವುಗಳಿಂದ ಔನ್ನತ್ಯಕ್ಕೆ ಏರುತ್ತಿದ್ದರು. ಪಂಡಿತ ಮಂಡಲಿಯಲ್ಲಿ ವರ್ಚಸ್ಸನ್ನು ಬೀರಿದ್ದರು. ಆನಂದ ಸಂವತ್ಸರದ (೧೯೭೪) ಆಶ್ವಯುಜಮಾಸದ ಶುಕ್ಲ ಏಕಾದಶಿ ಶ್ರೀ ಶ್ರೀಗಳವರು ಶ್ರೀ ಶಾರದಾ ಸನ್ನಿಧಿಗೆ ಪೂಜೆ ದರ್ಶನೆಗಳಿಗಾಗಿ ದಯಮಾಡಿಸಿದರು. ಎಲ್ಲವೂ ನೆರವೇರಿದ ನಂತರ ಶ್ರೀ ಶ್ರೀಗಳವರು ಆಲಯದ ಮುಖಮಂಟಪಕ್ಕೆ ದಯಮಾಡಿಸಿ, ತಮಗೆ ಶ್ರೀ ಶಾರದಾಮಾತೆಯು ಇತ್ತ 'ಶಿಷ್ಯ ಸ್ವೀಕಾರದ' ಸೂಚನೆಯನ್ನು ಘೋಷಿಸಿದರು. ತಮ್ಮಲ್ಲಿ ಬಹುಕಾಲದಿಂದ ಶಿಷ್ಯವೃತ್ತಿ ಮಾಡಿಕೊಂಡಿರುವ ಬ್ರಹ್ಮಚಾರಿ ಶ್ರೀ ತಂಗಿರಾಲ ಸೀತಾರಾಮ ಆಂಜನೇಯಲುರವರೇ ತಮ್ಮ ಶಿಷ್ಯರಾಗತಕ್ಕವರೆಂದೂ ಇದಕ್ಕೆ ಶ್ರೀ ಶಾರದಾಂಬೆಯ ಪ್ರೇರಣೆಯಾಗಿದೆಯೆಂದೂ ಅಪ್ಪಣೆ ಕೊಡಿಸಿದರು. ಶ್ರೀ ಶ್ರೀಗಳವರ ಈ ನಿರ್ಧಾರವನ್ನು ಅಂದು ನೆರೆದಿದ್ದ ಅಸಂಖ್ಯಾತ ಶಿಷ್ಯಮಂಡಲಿ ಅತ್ಯಂತ ಆನಂದದಿಂದ ಹರ್ಷೋದ್ಗಾರಗಳೊಡನೆ ಸ್ವಾಗತಿಸಿತು. ಶ್ರೀ ಶ್ರೀಗಳವರು ತಮ್ಮ ಉತ್ತರಾಧಿಕಾರಿಯನ್ನಾಗಿ ಆರಿಸಿದ ಈ ಬ್ರಹ್ಮಚಾರಿಯು ಕೇವಲ ಬಾಲ್ಯದಿಂದಲೇ ಶ್ರೀ ಶ್ರೀಗಳವರ ಅನುಗ್ರಹಕ್ಕೆ ಪಾತ್ರನಾಗಿದ್ದನು. ತನ್ನ ಗುರುವನ್ನು ಅರಸಿಕೊಂಡು ಆತನೇ ಶ್ರೀ ಶ್ರೀ ಗುರುಗಳ ಸನ್ನಿಧಿಗೆ ಬಂದಿದ್ದನು.

ಸನ್ಯಾಸ ಸ್ವೀಕಾರ ಸಮಾರಂಭವು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಜಯಂತಿಯಂದು ನಡೆಯತಕ್ಕದ್ದೆಂದು ನಿರ್ಧರಿಸಿ ಅದಕ್ಕೆ ಸೂಕ್ತವಾದ ಸಿದ್ಧತೆಗಳನ್ನು ಮಾಡುವಂತೆ ಶ್ರೀ ಗುರುಗಳವರು ಮಠದ ಅಧಿಕಾರಿಗಳಿಗೆ ಅಪ್ಪಣೆ ಮಾಡಿದರು. ರಾಷ್ಟ್ರಾದ್ಯಂತ ಇರುವ ಭಕ್ತರಿಗೆಲ್ಲಾ ಆಹ್ವಾನ ಪತ್ರಿಕೆಗಳು ಹೊರಟವು. ಬಹಳ ಜನ ಕಾರ್ಯಕರ್ತರು ಸೇರಿ ನಾನಾ ಕಾರ್ಯಗಳ ನಿರ್ವಹಣೆಯ ಹೊರೆಯನ್ನು ಸ್ವಸಂತೋಷದಿಂದ ಹೊತ್ತರು. ಎಲ್ಲಾ ಏರ್ಪಾಟುಗಳೂ ಅತಿತ್ವರೆಯಲ್ಲಿ ನಡೆದವು.

ಆನಂದ ಸಂವತ್ಸರದ ಆಶ್ವಯುಜ ಕೃಷ್ಣ ಏಕಾದಶಿ ಬಹಳ ಪವಿತ್ರವಾದ ದಿನ (೧೧-೧೧-೧೯೭೪). ಏಕಾದಶಿಯೇ ಪುಣ್ಯಪ್ರದವಾದ ದಿನ. ಅಂದು ಮಹಾತ್ಮರೊಬ್ಬರ ಜಯಂತಿಯ ಉತ್ಸವವಾಗಿದ್ದು ಅದು ಇನ್ನೂ ಪುಣ್ಯತಮವಾದ ದಿನವಾಯಿತು. ಬ್ರಹ್ಮೀಭೂತರಾದ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರಭಾರತೀಗಳವರ ಜಯಂತಿಯ ಆ ಪುಣ್ಯದಿನದಂದು ಜಗದ್ಗುರು ಶ್ರೀ ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರು ಶ್ರೀ ಶಾಂಕರ ದಕ್ಷಿಣಾಮ್ನಾಯ ಪೀಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿ ಆ ದಿವ್ಯದಿನದ ಸ್ಮರಣೆ ಆಸ್ತಿಕರ ಹೃನ್ಮನಗಳಲ್ಲಿ ಅಚ್ಚಳಿಯದೆ ಉಳಿಯುವಂತೆ ಅನುಗ್ರಹಿಸಿದರು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಶ್ರೀ ಶೃಂಗಗಿರಿ ವ್ಯಾಖ್ಯಾನ ಸಿಂಹಾಸನಕ್ಕೆ ೩೬ ನೆಯ ಆಚಾರ್ಯರಾಗಿ ದಯ ಮಾಡಿಸಿರುವ ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿಗಳವರು ಶ್ರೇಷ್ಠ ವಿದ್ವಾಂಸರೂ, ಆಧ್ಯಾತ್ಮಿಕ ಸಾಧಕರೂ ಆಗಿ ಶ್ರೀ ಶಾರದಾ ಗುರು ಕೃಪೆಗೆ ಭಾಜನರಾಗಿದ್ದಾರೆ.

ಶ್ರೀ ಶ್ರೀಗಳವರ ಪೂರ್ವಾಶ್ರಮದ ಹೆಸರು ಶ್ರೀ ತಂಗಿರಾಲ ಸೀತಾರಾಮಾಂಜನೇಯ ಎಂಬುದಾಗಿ. ತಂದೆಯ ಹೆಸರು ವೇದಮೂರ್ತಿ ತಂಗಿರಾಲ ವೆಂಕಟೇಶ್ವರಾವಧಾನಿ, ತಾಯಿಯವರು ಸೌಭಾಗ್ಯವತಿ ಮಾತೃಶ್ರೀ ಅನಂತಲಕ್ಷ್ಮೀಅಂಬಾ ಎಂದು. ಇವರು ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಪಲನಾಡು ತಾಲ್ಲೂಕಿನ ಅಲಗುಮಲ್ಲಪಡು ಎಂಬ ಅಗ್ರಹಾರಕ್ಕೆ ಸೇರಿದವರು. ಈ ಅಗ್ರಹಾರವು ನಾಗುಲೇರಿ ಎಂಬ ಹೊಳೆಯ ತೀರದಲ್ಲಿದೆ. ಈ ಮನೆತನದವರು ವೇದಶಾಸ್ತ್ರಜ್ಞರೆಂದೂ, ಆಚಾರಶೀಲರೆಂದೂ ಪ್ರಸಿದ್ಧರಾದವರು. ಕುತ್ಸ ಗೋತ್ರಕ್ಕೆ ಸೇರಿದ ಇವರು ಯಜುಶ್ಶಾಖಾ ಅಧ್ಯಾಯಿಗಳು. ಇವರ ಮನೆತನದವರು ತಿರುಪತಿಯ ಶ್ರೀ ಶ್ರೀನಿವಾಸರ ಒಕ್ಕಲು.

ಶ್ರೀ ಅವಧಾನಿಗಳಿಗೆ ನಾಲ್ವರು ಪುತ್ರಿಯರು ಜನಿಸಿದರು. ಪುತ್ರ ಸಂತತಿಯಿಲ್ಲ ವಲ್ಲಾ ಎಂಬ ಕೊರಗು ಅವರನ್ನೂ, ಅವರ ಪತ್ನಿಯನ್ನೂ ಬಾಧಿಸುತ್ತಿತ್ತು. ಭಗ ವತ್ಕೃಪೆಗಾಗಿ ಆ ದಂಪತಿಗಳು ವಿಶೇಷ ವ್ರತ ಪೂಜಾದಿಗಳನ್ನು ನಡೆಸುತ್ತಿದ್ದರು. ತಮ್ಮ ಅಗ್ರಹಾರದಲ್ಲಿಯೇ ಇದ್ದ ಶ್ರೀ ಭವಾನೀಶಂಕರ ದೇವಾಲಯದಲ್ಲಿ ಈಶ್ವರನಿಗೆ ಮಹನ್ಯಾಸ ಪೂರ್ವಕವಾಗಿ ರುದ್ರಾಭಿಷೇಕವನ್ನು ಪ್ರತಿದಿನವೂ ತಪ್ಪದೆ ಒಂದು ವರ್ಷ ಕಾಲ ನಡೆಸಿ ದರು. ಸೌ|| ಅನಂತಲಕ್ಷ್ಮೀಅಂಬಾರವರು ಅದೇ ಗ್ರಾಮದಲ್ಲಿದ್ದ ಶ್ರೀ ಮಾರುತಿ ದೇವಾಲಯದಲ್ಲಿ ಪ್ರತಿನಿತ್ಯವೂ ಜಪ, ಧ್ಯಾನ ನಿರತರಾಗಿದ್ದು ದೇವರ ಕೈಂಕರ್ಯ ಮಾಡು ತ್ತಿದ್ದರು. ದಂಪತಿಗಳು ಭಗವದ್‌ಭಕ್ತಿಯಿಂದ ಕೂಡಿ ಕಟ್ಟುನಿಟ್ಟಾದ ವ್ರತಾಚರಣೆ ನಡೆಸುತ್ತಿದ್ದರು.

ಒಂದು ರಾತ್ರಿ ಸೌ|| ಅನಂತಲಕ್ಷ್ಮಿಯವರಿಗೆ ದಿವ್ಯ ಸ್ವಪ್ನವುಂಟಾಯಿತು. ಸ್ವಪ್ನ ದಲ್ಲಿ ಶ್ರೀರಾಮಭಕ್ತನಾದ ಆಂಜನೇಯಸ್ವಾಮಿಯು ಪ್ರತ್ಯಕ್ಷನಾಗಿ ಆಕೆಗೆ ಮೂರು ಫಲ ಗಳನ್ನು ಅನುಗ್ರಹಿಸಿದನು. ದಿವ್ಯ ಸ್ವಪ್ನದಿಂದ ಎಚ್ಚೆತ್ತ ಆ ಗೃಹಿಣಿಯು ತನ್ನ ಕನಸಿನ ವಾರ್ತೆಯನ್ನು ಸಂತೋಷದಿಂದ ತಮ್ಮ ಪತಿದೇವರಿಗೆ ಬಿನ್ನವಿಸಿದರು. ಇದು ದಯಾ ಮಯನಾದ ಭಗವಂತನ ಅನುಗ್ರಹವೆಂದು ಪತಿ ಪತ್ನಿಯರು ನಂಬಿ ಆನಂದ ತುಂಬಿದವ ರಾದರು. ಶ್ರೀ ಅವಧಾನಿಗಳು ತಾವು ಸದಾ ಪೂಜಿಸುತ್ತಿದ್ದ ಶ್ರೀರಾಮದೇವರನ್ನು ಪ್ರಾರ್ಥಿಸಿ ಈ ದಿವ್ಯ ಸ್ವಪ್ನದಿಂದ ತಮಗೆ ಪುತ್ರ ಸಂತತಿಯಾಗುವಂತೆ ಅನುಗ್ರಹಿಸಿ ಬೇಕೆಂದೂ ಆತನಿಗೆ ಶ್ರೀ ಸೀತಾರಾಮ ಆಂಜನೇಯನೆಂಬ ಹೆಸರನ್ನು ಇಡುವುದಾಗಿಯೂ ಬಿನ್ನವಿಸಿದರು. ಇದಲ್ಲದೇ ಅನೇಕ ಒಳ್ಳೆಯ ಶಕುನಗಳೂ ಗೋಚರಿಸಿ ಅವರ ನಿರೀಕ್ಷೆಗೆ ನೀರೆರೆದು ಪೋಷಿಸಿದುವು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಈ ದಿವ್ಯ ಸ್ವಪ್ನವಾದ ಹತ್ತು ತಿಂಗಳಲ್ಲಿ ಶ್ರೀ ವೆಂಕಟೇಶ್ವರ ಅವಧಾನಿ ಸೌ॥ ಅನಂತ ಲಕ್ಷ್ಮಿಯವರಿಗೆ ಖರಸಂವತ್ಸರದ ಚೈತ್ರ ಶುದ್ಧ ಪಂಚಮಿ ಬುಧವಾರದಂದು ಧನುರ್ಲಗ್ನ ದಲ್ಲಿ ಮೃಗಶಿರಾ ನಕ್ಷತ್ರದಲ್ಲಿ ಪುತ್ರ ಜನನವಾಯಿತು (೧೧-೪-೧೯೫೧). ಮಗುವಿಗೆ ಶ್ರೀ ಅವಧಾನಿಗಳು ಶಾಸ್ತ್ರೋಕ್ತವಾದ ಜಾತಕರ್ಮವನ್ನು ನಡೆಸಿ ಶ್ರೀ ಸೀತಾರಾಮ ಆಂಜನೇಯ ಎಂದು ನಾಮಕರಣ ಮಾಡಿದರು. ಈ ಉತ್ಸವದಲ್ಲಿ ಅಗ್ರಹಾರದವರೆಲ್ಲರೂ ಭಾಗವಹಿಸಿ ಸಂತೋಷಪಟ್ಟರು.

ಮಗುವು ದಿನೇ ದಿನೇ ಬೆಳೆಯುತ್ತಾ ಅಗ್ರಹಾರಸ್ಥರಿಗೆಲ್ಲಾ ಕಣ್ಮಣಿಯಾಯಿತು, ಆಗಾಗ ಈ ಮಗುವಿನ ಭವಿಷ್ಯ ಭವ್ಯವಾದುದೆಂಬ ಸೂಚನೆ ಕಂಡುಬರುತ್ತಿತ್ತು. ಒಮ್ಮೆ ನಿದ್ರಿಸುತ್ತಿದ್ದ ಮಗುವಿನ ಶಿರಸ್ಸಿನ ಸುತ್ತಲೂ ದಿವ್ಯಪ್ರಭೆಯು ಸೂರ್ಯಮಂಡಲದಂತೆ ಗೋಚರಿಸಿತು. ಇದನ್ನು ಕಂಡ ತಾಯಿ ಭಯಪಟ್ಟರು. ಯಾವ ಅರಿಷ್ಟ ಪ್ರಾಪ್ತ ವಾಗುತ್ತದೋ ಎಂದು ಹೆದರಿ ಹಿರಿಯರಲ್ಲಿ ಭೀತಿಯಿಂದ ಹೇಳಿಕೊಂಡರು. ಇದನ್ನು ಕೇಳಿದ ದೊಡ್ಡವರು ಆಶ್ಚರ್ಯಪಟ್ಟು ಇದು ಉತ್ತಮ ಲಕ್ಷಣವೆಂದೂ ಅದಕ್ಕೆ ಹೆದರುವ ಅಗತ್ಯವಿಲ್ಲವೆಂದೂ ತಿಳಿಸಿದರು.

ಮಗುವಿಗೆ ಮೂರುವರ್ಷ ತುಂಬುವಲ್ಲಿ ಮಗುವನ್ನು ಅಕ್ಕಪಕ್ಕದ ಮನೆಯವರು ಕರೆದುಕೊಂಡು ಹೋಗಿಬಿಡುತ್ತಿದ್ದರು. ಮಗು ಮನೆಯಿಂದ ಮನೆಗೆ ಸಾಗುತ್ತ ಎಲ್ಲೆಂದ ರಲ್ಲಿ ಆಡುತ್ತಾ ಇರುತ್ತಿದ್ದಿತು. ಪ್ರತಿದಿನವೂ ಸಂಜೆ ಮಗುವನ್ನು ಹುಡುಕುವುದೇ ಅನಂತಲಕ್ಷ್ಮಿಯವರಿಗೆ ದೊಡ್ಡ ಕೆಲಸವಾಗುತ್ತಿತ್ತು.

ಒಂದು ದಿನ ಮಗುವು ಇದ್ದಕ್ಕಿದ್ದಂತೆ ಅಳಲಾರಂಭಿಸಿತು. ಎಷ್ಟು ಸಮಾಧಾನ ಮಾಡಿದರೂ ಅಳುನಿಲ್ಲಲಿಲ್ಲ. ಯಾರು ಪ್ರಯತ್ನಪಟ್ಟರೂ ಅದರ ಅಳುನಿಲ್ಲಲಿಲ್ಲ. ತಾಯಿ ಮಗುವನ್ನೆತ್ತಿಕೊಂಡು ಶ್ರೀ ಭವಾನಿ ಶಂಕರಾಲಯಕ್ಕೆ ಹೋದರು. ದೇವಸ್ಥಾನದಲ್ಲಿ ದೇವರದರ್ಶನವಾದೊಡನೆ ಮಗುವು ಅಳುವನ್ನು ನಿಲ್ಲಿಸಿತು. "ಶಂಭೋ ಶಿವ ಶಿವ" "ಶಂಭೋ ಶಿವ ಶಿವ" ಎಂದು ಮುದ್ದು ಮಾತಿನಲ್ಲಿ ನುಡಿಯಲಾರಂಭಿಸಿತು. ರಾತ್ರಿ ಮನೆಗೆ ಬಂದ ನಂತರವೂ ಮಗು ಶಿವನಾಮವನ್ನು ಜಪಮಾಡುತ್ತಲೇ ಇತ್ತು.

ಮಗುವಿನಅಕ್ಕ ಚಿ॥ ಸೌ॥ ಲಕ್ಷ್ಮಿಗೆ ಎಳನೆಯ ವರ್ಷದಲ್ಲೇ ಸಂಸ್ಕೃತ ಭಾಷೆ ಒಲಿ ದಿದ್ದಿತು. ಆ ಪುಟ್ಟ ಹುಡುಗಿ ಸಂಸ್ಕೃತದಲ್ಲೇ ಮಾತನಾಡುತ್ತಿದ್ದಳು. ಈ ಪುಟ್ಟ ತಮ್ಮನಿಗೆ ಲಕ್ಷ್ಮಿ ಸಂಸ್ಕೃತವನ್ನು ಹೇಳಿಕೊಡಲು ಪ್ರಾರಂಭಿಸಿದಳು. ಬಾಲ ಸೀತಾ ರಾಮನಿಗೆ ದೇವವಾಣಿಯೊಲಿಯಿತು. ಇದನ್ನು ಕಂಡ ಅವಧಾನಿಗಳು ಸಂಸ್ಕೃತವನ್ನು ತಾವೇ ಸ್ವತಃ ಹೇಳಿಕೊಡಲು ಪ್ರಾರಂಭಿಸಿದರು. ಬಾಲಕ ಸೀತಾರಾಮನಿಗೆ ಎಳನೇ ವಯಸ್ಸಿನಲ್ಲಿಯೇ ಬ್ರಹ್ಮೋಪದೇಶವಾಯಿತು. ಅನಂತರ ವೇದಾಧ್ಯಯನವೂ ಪ್ರಾರಂಭಿ ಸಲ್ಪಟ್ಟಿತು. ಏಕಸಂಧಿಗ್ರಾಹಿಯಾದ ಸೀತಾರಾಮ ಆಂಜನೇಯ ತೀಕ್ಷ್ಣಮತಿಯೂ, ಪ್ರತಿಭಾಶಾಲಿಯೂ ಆಗಿ ಉಪಾಧ್ಯಾಯರ ಪ್ರೀತಿವಿಶ್ವಾಸಕ್ಕೆ ಪಾತ್ರನಾದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥಸ್ವಾಮಿಗಳವರು ಆಂಧ್ರ ಪ್ರದೇಶದಲ್ಲಿ ಸಂಚಾರ ಮಾಡುತ್ತಾ ೧೯೬೮ ರಲ್ಲಿ ನರಸರಾವ್‌ಪೇಟೆಗೆ ದಯಮಾಡಿಸಿದರು. ಶ್ರೀ ಅವಧಾನಿಗಳು ಸಂಸಾರ ಸಮೇತ ಶ್ರೀ ಶ್ರೀಗಳವರ ದರ್ಶನಕ್ಕಾಗಿ ನರಸರಾವ್‌ಪೇಟೆಗೆ ಬಂದರು. ಪೂಜಾಕಾಲದಲ್ಲಿ ಬ್ರಹ್ಮಚಾರಿ ಸೀತಾರಾಮನು ಅಭಿಷೇಕ ಸೂಕ್ತಗಳನ್ನು ಆನಂದ ಪರವಶನಾಗಿ ಹಾಡಿದನು. ಈ ಬಾಲಕನ ಸ್ಫುಟವಾದ ವಾಣಿ, ತನ್ಮಯತೆ ಇವು ಶ್ರೀ ಶ್ರೀಗಳವರಿಗೆ ಸಂತೋಷವನ್ನುಂಟುಮಾಡಿದವು. ಪೂಜೆಯ ನಂತರ ಶ್ರೀ ಶ್ರೀಗಳವರು ಹೊರಕ್ಕೆ ದಯಮಾಡಿದಾಗ ಒಂಬತ್ತು ವರ್ಷದ ಸೀತಾರಾಮನು ಅವರೊಡನೆ ಸಂಸ್ಕೃತದಲ್ಲಿಯೇ ಸಂಭಾಷಿಸಿದನು. ಮಹಾಸ್ವಾಮಿಗಳು ಆನಂದಪಟ್ಟು ಬಾಲಕನನ್ನು ಆಶೀರ್ವದಿಸಿದರು. ಅದರ ಮುಂದಿನ ವರ್ಷ ಶ್ರೀ ಶ್ರೀಗಳವರು ವಿಜಯವಾಡಾನಗರದಲ್ಲಿ ಬಿಡಾರ ಮಾಡಿದ್ದಾಗ ಬ್ರಹ್ಮಚಾರಿ ಸೀತಾರಾಮನು ವೇದಮೂರ್ತಿ ಕೌಥಾಸುಬ್ರಹ್ಮಣ್ಯಶಾಸ್ತ್ರಿಗಳವರೊಡನೆ ಶ್ರೀ ಶ್ರೀಗಳವರ ದರ್ಶನಕ್ಕೆ ಬಂದನು. ಈ ಬಾಲಬ್ರಹ್ಮಚಾರಿಯು ಜಗದ್ಗುರುಗಳ ಸಮ್ಮುಖದಲ್ಲಿ ವೇದಗಾನ ಮಾಡಿ ಸಂಸ್ಕೃತದಲ್ಲಿಯೇ ಸಂಭಾಷಣೆಯನ್ನೂ ನಡೆಸಿದನು. ಶ್ರೀ ಶ್ರೀಗಳವರು ಈ ಮೇಧಾವಿ ಬಾಲಕನನ್ನು ಮೆಚ್ಚಿ ಹರಸಿ ಜರತಾರಿಯ ರೇಶ್ಮೆಯ ವಸ್ತ್ರವನ್ನು ಅನುಗ್ರಹಿಸಿದರು.

ಈ ಅನುಗ್ರಹ ಆ ಬಾಲಕನಲ್ಲಿ ಆಶ್ಚರ್ಯದ ಪರಿಣಾಮವನ್ನುಂಟುಮಾಡಿತು. ಆತನಿಗೆ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರೇ ಸರ್ವಸ್ವವಾಗಿ ಸದಾ ಅವರನ್ನು ಕುರಿತ ಚಿಂತನೆ, ಮಾತು ಆರಂಭವಾಯಿತು. ವಯಸ್ಸಿಗೆ ಮೀರಿದ ವಿದ್ಯೆ, ಗಾಂಭೀರ್ಯ ಇವುಗಳಿಂದ ಕೂಡಿದ ಈ ಬಾಲಬ್ರಹ್ಮಚಾರಿಯು ಸದಾ ಜಗದ್ಗುರು ವಿದ್ಯಾತೀರ್ಥರ ಸ್ಮರಣೆ ಮಾಡುತ್ತಾ, ಅವರ ವಿಚಾರವನ್ನೇ ಎಲ್ಲರೊಡನೆಯೂ ಹೇಳುತ್ತಿದ್ದನು. ವೇದ ಶಾಸ್ತ್ರಾಭ್ಯಾಸಗಳನ್ನು ನರಸರಾವ್‌ಪೇಟೆಯಲ್ಲಿಯೇ ವೇದಮೂರ್ತಿ ಪ್ರತಾಪಗಿರಿ ಶಿವರಾಮಶಾಸ್ತ್ರಿಗಳವರ ಸನ್ನಿಧಿಯಲ್ಲಿ ನಡೆಸುತ್ತಿದ್ದನು. ಲೌಕಿಕ ವಿದ್ಯಾಭ್ಯಾಸವೂ ಜರುಗುತ್ತಿದ್ದು ಮೆಟ್ರಿಕ್ಯುಲೇಷನ್‌ವರೆಗೆ ಇಂಗ್ಲೀಷ್ ವಿದ್ಯಾಭ್ಯಾಸವೂ ನಡೆದಿತ್ತು.

ನರಸರಾವ್‌ಪೇಟೆಯಲ್ಲಿದ್ದ ಯತಿಗಳಾದ ಶ್ರೀ ವಿದ್ಯಾರಣ್ಯಸ್ವಾಮಿಗಳೆಂಬುವರು ಶೃಂಗೇರಿಯಲ್ಲಿ ಸಂನ್ಯಾಸಾಶ್ರಮವನ್ನು ಶ್ರೀ ಜಗದ್ಗುರುಗಳವರ ಸಮ್ಮುಖದಲ್ಲಿ ಸ್ವೀಕರಿಸಿದ್ದರು. ಅವರಿಗೆ ಶೃಂಗೇರಿಯ ಜಗದ್ಗುರುಗಳಲ್ಲಿ ತುಂಬಾ ಗೌರವ ಭಕ್ತಿ. ಬ್ರಹ್ಮಚಾರಿ ಸೀತಾರಾಮ ಆಂಜನೇಯನನ್ನು ಬಲ್ಲವರಾಗಿದ್ದ ಈ ಸ್ವಾಮಿಗಳು ಆತನನ್ನು ಆಗಾಗ ಆಶೀರ್ವದಿಸುತ್ತಾ ಆತನು ತುಂಬಾ ಪ್ರಸಿದ್ಧನಾಗುವನೆಂದು ಹೇಳುತ್ತಿದ್ದರು. ಮೊದಲೇ ಶೃಂಗೇರಿಯ ಗುರುಗಳೆಂದರೆ ಪ್ರೈಮರೆಯುತ್ತಿದ್ದ ಈ ಬ್ರಹ್ಮಚಾರಿಗೆ ಶ್ರೀ ವಿದ್ಯಾರಣ್ಯ ಸ್ವಾಮಿಗಳ ಪ್ರೋತ್ಸಾಹವೂ ಸಿಕ್ಕುತ್ತಿತ್ತು. ತಾನು ಶೃಂಗೇರಿಗೆ ಹೋಗಿ ಜಗದ್ಗುರುಗಳ ಪಾದಸನ್ನಿಧಿಯಲ್ಲಿ ಕುಳಿತು ಶಾಸ್ತ್ರಾಧ್ಯಯನವನ್ನು ನಡೆಸಿ ಜ್ಞಾನಾರ್ಜನೆ ಮಾಡಬೇಕೆಂಬ ಉತ್ಕಟೇಚ್ಛೆ ಬ್ರಹ್ಮಚಾರಿಗೆ ದಿನೇ ದಿನೇ ಪ್ರಬಲವಾಯಿತು. ಶ್ರೀ ವಿದ್ಯಾರಣ್ಯಸ್ವಾಮಿಗಳೂ ಅದಕ್ಕೆ ಒತ್ತಾಸೆಯಾಗಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಜಗದ್ಗುರುಗಳವರು ಉಜ್ಜಯನಿಯಲ್ಲಿ ಚಾತುರ್ಮಾಸ್ಯ ಸಂಕಲ್ಪಗೈದು ಅನುಷ್ಠಾನ ನಡೆಸುತ್ತಿದ್ದರು. ಅದೇ ಸಮಯದಲ್ಲಿ ಶ್ರೀ ವಿದ್ಯಾರಣ್ಯಸ್ವಾಮಿಗಳು ಈ ಬಾಲ ಬ್ರಹ್ಮಚಾರಿಯೊಡನೆ ಉಜ್ಜಯನಿಗೆ ಆಗಮಿಸಿದರು. ಆಗ ಬ್ರಹ್ಮಚಾರಿಗೆ ಹದಿನಾರು ವರ್ಷ ವಯಸ್ಸು. ಆತನು ತಾನು ಶ್ರೀ ಶ್ರೀಗಳವರ ಪದತಲದಲ್ಲಿ ಕುಳಿತು ಜ್ಞಾನಾರ್ಜನೆ ಮಾಡಲು ಬಂದಿರುವುದಾಗಿಯೂ ತನಗೆ ಮಾರ್ಗದರ್ಶನ ಮಾಡಬೇಕೆಂದೂ ಪ್ರಾರ್ಥಿಸಿಕೊಂಡನು. ಶ್ರೀ ಗುರುಗಳವರು ಆಗ ಯಾವ ಪ್ರತ್ಯುತ್ತರವನ್ನೂ ಕೊಡಲಿಲ್ಲ.

ಮೂರನೇ ದಿನ ಗುರುಗಳು ಬ್ರಹ್ಮಚಾರಿಯನ್ನು ಸಮೀಪಕ್ಕೆ ಕರೆದು "ನಿನಗೆ ತರ್ಕ ಸಂಗ್ರಹ ಪಾಠವಾಗಿದೆಯೇ ?" ಎಂದು ಕೇಳಿದರು. ಆತ ಇಲ್ಲವೆಂದು ನುಡಿದು, ನಮ್ರನಾಗಿ ಕೈಜೋಡಿಸಿ ನಿಂತನು. ಅಂದಿನಿಂದಲೇ ಶ್ರೀ ಶ್ರೀಗಳವರು ಆತನಿಗೆ ತರ್ಕ ಶಾಸ್ತ್ರವನ್ನು ಪಾಠಹೇಳಲು ಪ್ರಾರಂಭಿಸಿದರು. ಕೇವಲ ಮೂರು ತಿಂಗಳಲ್ಲಿಯೇ ತರ್ಕ ಸಂಗ್ರಹದ ವ್ಯಾಸಂಗ ಪೂರೈಸಿತು. ಈ ಬಾಲಕನ ಪ್ರತಿಭೆ, ಶಾಸ್ತ್ರಾಧ್ಯಯನದಲ್ಲಿ ಈತನಿಗಿರುವ ಅತ್ಯಂತ ಶ್ರದ್ಧೆ ಇವನ್ನು ಗಮನಿಸಿದ ಗುರುಗಳು ಆತನನ್ನು ತಮ್ಮ ಸನ್ನಿಧಿಯಲ್ಲಿಯೇ ಉಳಿಸಿಕೊಂಡರು. ತಾವೇ ಸ್ವತಃ ಆತನಿಗೆ ತರ್ಕ ವೇದಾಂತಗಳನ್ನು ಪಾಠ ಹೇಳಿದರು. ಆತನ ಸಹಪಾಠಿಗಳನ್ನಾಗಿ ಮತ್ತೆ ಇಬ್ಬರು ಬ್ರಹ್ಮಚಾರಿಗಳನ್ನು ಆರಿಸಿ, ಮೂವರಿಗೂ ಶ್ರೀ ಶ್ರೀಗಳವರೇ ಸ್ವತಃ ಪಾಠಪ್ರವಚನಗಳನ್ನು ನಡೆಸುತ್ತಿದ್ದರು.

ಶ್ರೀ ಸೀತಾರಾಮ ಆಂಜನೇಯರು ಗುರುಗಳ ಅಚ್ಚುಮೆಚ್ಚಿನ ಶಿಷ್ಯರಾಗಿ ಅನವರತ ಅವರ ಸನ್ನಿಧಿಯಲ್ಲಿಯೇ ಇದ್ದು ಶಾಸ್ತ್ರಾಧ್ಯಯನ, ಅನುಷ್ಠಾನಗಳಲ್ಲಿ ಮಗ್ನರಾದರು. ವರ್ಷಂಪ್ರತಿ ನಡೆಯುವ ಶ್ರೀ ಶಂಕರ ಜಯಂತಿ ಮತ್ತು ಶ್ರೀ ಗಣಪತಿ ವಿದ್ವತ್ಸಭೆಗಳಲ್ಲಿ ಈ ಬ್ರಹ್ಮಚಾರಿಯು ಭಾಗವಹಿಸಿ ವಿದ್ವಾಂಸರನೇಕರ ಮೆಚ್ಚುಗೆಗೆ ಪಾತ್ರರಾದರು. ವಾರಣಾಸಿಯಲ್ಲಿ ಶ್ರೀ ಶ್ರೀಗಳವರ ಸನ್ನಿಧಿಯಲ್ಲಿ ನಡೆದ ವಿದ್ವತ್ಸಭೆಗೆ ಬಹುಜನ ವಿದ್ವದ್ವರೇಣ್ಯರು ಆಗಮಿಸಿದ್ದರು. ಅವರಲ್ಲಿ ಆಂಧ್ರದ ಅನಂತಾವರದ ಗೊಲ್ಲಪೂಡಿ ಶ್ರೀ ಗೋಪಾಲಕೃಷ್ಣ ಮೂರ್ತಿ ಶಾಸ್ತ್ರಿಗಳು ಗುರುಗಳವರ ಕೃಪಾವಿಶೇಷಕ್ಕೆ ಪಾತ್ರರಾದರು. ಶಾಸ್ತ್ರಿಗಳು ಸುಪ್ರಸಿದ್ಧ ವಿದ್ವಾಂಸರಾದ ಪಂಡಿತರಾಜ ಪದ್ಮಭೂಷಣ ಶ್ರೀ ದ್ರಾವಿಡರಾಜೇಶ್ವರ ಶಾಸ್ತ್ರಿಗಳ ಸಾಕ್ಷಾತ್ ಶಿಷ್ಯರಾಗಿದ್ದು ನ್ಯಾಯಶಾಸ್ತ್ರದಲ್ಲಿ ಉದ್ದಾಮ ಪಂಡಿತರು. ಶಾಸ್ತ್ರಿಗಳನ್ನು ಶ್ರೀ ಶ್ರೀಗಳವರು ಶೃಂಗೇರಿಗೆ ಆಹ್ವಾನಿಸಿ ಶ್ರೀ ಸೀತಾರಾಮ ಆಂಜನೇಯರಿಗೆ ನ್ಯಾಯ ಶಾಸ್ತ್ರದ ಗುರುಗಳಾಗಿ ನೇಮಿಸಿದರು. ಬ್ರಹ್ಮಚಾರಿ ಸೀತಾರಾಮರು ವೇದ ವೇದಾಂತಗಳಲ್ಲಿಯೂ, ತರ್ಕ ನ್ಯಾಯಶಾಸ್ತ್ರಗಳಲ್ಲಿಯೂ ಪಾರಂಗತರಾಗಿ ಶ್ರೀ ಜಗದ್ಗುರುಗಳ ಮೆಚ್ಚುಗೆಗೆ ಪಾತ್ರರಾದರು.

ಆನಂದ ಸಂವತ್ಸರದ ಆಶ್ವಯುಜಮಾಸದಲ್ಲಿ ಶೃಂಗೇರಿಯ ಶ್ರೀ ಶಾರದಾ ಸನ್ನಿಧಿಯಲ್ಲಿ ಶರನ್ನವರಾತ್ರಿ ಉತ್ಸವ ಪ್ರಾರಂಭವಾಯಿತು. ಶ್ರೀ ಶ್ರೀಗಳವರು ಆ ಜಗನ್ಮಾತೆಯ ಪೂಜಾದಿ ಉತ್ಸವಗಳನ್ನು ನೆರವೇರಿಸಿ ಲೋಕಕ್ಷೇಮವನ್ನು ಪ್ರಾರ್ಥಿಸುತ್ತಿದ್ದರು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಜಗದಂಬೆಯಾದ ಶ್ರೀ ಶಾರದಾದೇವಿಯು ಶ್ರೀ ಶ್ರೀಗಳವರಿಗೆ ವ್ಯಾಖ್ಯಾನ ಸಿಂಹಾಸನಕ್ಕೆ ಉತ್ತರಾಧಿಕಾರಿಯನ್ನು ಆರಿಸುವಂತೆ ದಿವ್ಯ ಸೂಚನೆಯನ್ನು ಅನುಗ್ರಹಿಸಿದಳು. ತಾಯಿಯ ಆಜ್ಞೆಯನ್ನು ತಿಳಿದ ಜಗದ್ಗುರುಗಳವರು ಪುಲಕಿತರಾದರು. ಆ ಆಜ್ಞೆ ದೊರೆತುದು ಪವಿತ್ರವಾದ ಏಕಾದಶಿಯ ಪುಣ್ಯದಿನದಂದು. ತಾಯಿಯ ದಿವ್ಯ ಪೂಜೆಯನ್ನು ನಡೆಸಿ ಆಕೆಯ ಸನ್ನಿಧಿಯಿಂದ ಹೊರಕ್ಕೆ ದಯಮಾಡಿಸಿದ ಶ್ರೀ ಶ್ರೀಗಳವರು ಬೆಳಗಿನ ಹನ್ನೊಂದು ಗಂಟೆಯ ಸುಮುಹೂರ್ತದಲ್ಲಿ ತಾವು ಜಗನ್ಮಾತೆಯಾದ ಶ್ರೀ ಶಾರದೆಯ ಅನುಜ್ಞೆಯಿಂದ ಶಿಷ್ಯಸ್ವೀಕಾರ ಮಾಡುವುದಾಗಿಯೂ, ಬ್ರಹ್ಮಚಾರಿ ಶ್ರೀ ಸೀತಾರಾಮ ಆಂಜನೇಯರು ತಮ್ಮ ಶಿಷ್ಯರಾಗುವರೆಂದೂ, ಬ್ರಹ್ಮೀಭೂತ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಆರಾಧನೆಯ ಜಯಂತಿಯ ಸುದಿವಸದಂದು ನೂತನ ಶಿಷ್ಯಸ್ವೀಕಾರ ವಾಗುವುದೆಂದೂ ಅಪ್ಪಣೆಕೊಡಿಸಿ ನೆರೆದಿದ್ದ ಸಾವಿರಾರು ಜನ ಶಿಷ್ಯಸ್ತೋಮಕ್ಕೆ ಆನಂದ ವನ್ನುಂಟು ಮಾಡಿದರು.

ಶ್ರೀ ಶಂಕರ ಭಗವತ್ಪಾದರು ಸ್ಥಾಪಿಸಿದ ಚತುರಾಮ್ನಾಯ ಪೀಠಗಳಲ್ಲಿ ಒಂದಾದ ದಕ್ಷಿಣಾಮ್ನಾಯ ಪೀಠದ ಮುವತ್ತಾರನೆಯ ಆಚಾರ್ಯರಾಗಿ ಶ್ರೀ ಬ್ರಹ್ಮಚಾರಿ ಸೀತಾ ರಾಮ ಆಂಜನೇಯರು, ಸಂನ್ಯಾಸಾಶ್ರಮ ಸ್ವೀಕರಿಸಿ ಜಗದ್ಗುರು ಶ್ರೀ ಅಭಿನವ ವಿದ್ಯಾ ತೀರ್ಥ ಮಹಾಸ್ವಾಮಿಗಳವರ ಕರಕಮಲ ಸಂಜಾತರಾಗಿ ದಿವ್ಯ ವ್ಯಾಖ್ಯಾನ ಸಿಂಹಾಸನ ದಲ್ಲಿ ಶ್ರೀ ಭಾರತೀತೀರ್ಥ ಎಂಬ ಯೋಗ ಪಟ್ಟದಿಂದ ಅಭಿಷಿಕ್ತರಾದರು.

ಶಿಷ್ಯಸ್ವೀಕಾರದ ಅನಂತರ ಶ್ರೀ ಶ್ರೀಗಳವರು ತಮ್ಮ ಭಕ್ತರ ಬಹುದಿನಗಳ ಕೋರಿಕೆ ಯನ್ನು ಈಡೇರಿಸಲು ಶಿವಮೊಗ್ಗಾ ಮತ್ತು ಚಿಕ್ಕಮಗಳೂರು ನಗರಗಳಿಗೆ ದಯಮಾಡಿಸಿ, ಅಲ್ಲಿನ ಶ್ರೀ ಶಂಕರಮಠಗಳಲ್ಲಿ ಶ್ರೀ ಗಣಪತಿ, ಶ್ರೀ ಶಾರದಾ, ಶ್ರೀ ಶಂಕರರ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿದರು.

ಶ್ರೀ ಶ್ರೀಗಳವರು ತಮ್ಮ ಶಿಷ್ಯರೊಡನೆ ಶ್ರೀ ರಾಮೇಶ್ವರಯಾತ್ರೆಗೆ ದಯಮಾಡಿಸಿ, ಪುನರ್ನವೀಕರಿಸಲ್ಪಟ್ಟಿದ್ದ ದೇವಾಲಯದ ಕುಂಭಾಭಿಷೇಕವನ್ನು ನೆರವೇರಿಸಿದರು. ಅನಂತರ ಗೋಕರ್ಣದ ಯಾತ್ರೆಯನ್ನು ಕೈಕೊಂಡು ಅಲ್ಲಿ ಶ್ರೀ ಶಂಕರಮಠವನ್ನು ಉದ್ಘಾಟಿಸಿದರು. ಗೋವಾರಾಜ್ಯಕ್ಕೂ ದಯಮಾಡಿಸಿ ಅಲ್ಲೆಲ್ಲಾ ಸಂಚಾರಮಾಡಿ, ಜನಗಳಲ್ಲಿ ದೈವಭಕ್ತಿಯನ್ನೂ, ಧರ್ಮಾಚರಣೆಯಲ್ಲಿ ಶ್ರದ್ಧೆಯನ್ನೂ ಮೂಡಿಸಿದರು. ಅನಂತರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಉಡುಪಿ ಅಷ್ಟಮಠಗಳ ಯತಿಗಳ ಬಹುಕಾಲದ ಅಪೇಕ್ಷೆಯನ್ನು ಈಡೇರಿಸಲು ಉಡುಪೀ ಕ್ಷೇತ್ರಕ್ಕೂ ಸಂದರ್ಶನ ನೀಡಿ ಶ್ರೀ ಕೃಷ್ಣನ, ಚಂದ್ರಮೌಳೀಶ್ವರನ, ಅನಂತೇಶ್ವರನ ದರ್ಶನ ಮಾಡಿದರು. *

---

* ಸಾ|| ಸರಸ್ವತಿಬಾಯಿ ರಾಜವಾಡೆಯವರು ಕಟ್ಟಿಸಿದ್ದ ನೂತನ ದೇವಾಲಯದಲ್ಲಿ ಶ್ರೀ ಶಾರದಾದೇವಿಯ ಪ್ರತಿಷ್ಠೆ ಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರ ಕೋರಿಕೆಯಂತೆ ಧರ್ಮಕ್ಷೇತ್ರಕ್ಕೆ ದಯಮಾಡಿಸಿ ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಮಾಡಿದರು. ಧರ್ಮಸ್ಥಳದಲ್ಲಿ "ಗಾಯತ್ರೀನಗರ" ವಿಸ್ತರಣಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಅನಂತರ ರಾಮೇಶ್ವರ, ಕಾಶೀ ಯಾತ್ರೆಗಳನ್ನೂ ಶಿಷ್ಯಸಮೇತರಾಗಿ ಕೈಗೊಂಡರು.

ಶ್ರೀಜಗದ್ಗುರು ಮಹಾಸ್ವಾಮಿಗಳವರು ಶ್ರೀ ಸನ್ನಿಧಾನದವರೊಡನೆ ಆಗಾಗ ಸಣ್ಣ ಸಣ್ಣ ಸಂಚಾರಗಳನ್ನು ಕೈಗೊಳ್ಳುತ್ತಾ, ಭಕ್ತರ ಈಡೇರಿಕೆಗಳನ್ನು ನೆರವೇರಿಸಲು ಹಲವಾರು ಸ್ಥಳಗಳಿಗೆ ಸಂದರ್ಶನ ಕೊಡುತ್ತಿರುತ್ತಾರೆ.

೪೧. ಧರ್ಮ ಪ್ರಚಾರ

ಶೃಂಗೇರಿಯ ಪೀಠಾಚಾರ್ಯರಲ್ಲಿ ಭರತಖಂಡವನ್ನೆಲ್ಲಾ ಸಂಚರಿಸಿ ಧರ್ಮ ದುಂದುಭಿಯನ್ನು ಮೊಳಗಿಸಿದವರಲ್ಲಿ ಶ್ರೀ ಶಂಕರಭಗವತ್ಪಾದರು ಮತ್ತು ಶ್ರೀ ವಿದ್ಯಾರಣ್ಯರ ನಂತರ ಶ್ರೀ ಅಭಿನವ ವಿದ್ಯಾತೀರ್ಥರು ಅಗ್ರಗಣ್ಯರು. ಶ್ರೀ ಗುರುಗಳವರು ಕನ್ಯಾಕುಮಾರಿ ಯಿಂದ ಕಾಶ್ಮೀರದವರೆಗೆ ಮಾತ್ರವಲ್ಲದೆ, ನೇಪಾಳಕ್ಕೂ ಯಾತ್ರೆ ನಡೆಸಿ, ಶ್ರೀ ಶಂಕರ ಭಗವತ್ಪಾದರ ಉದ್ದೇಶವಾದ ಧರ್ಮಪ್ರಸಾರವನ್ನು ಜಯಪ್ರದವಾಗಿ ನಡೆಸಿದ್ದಾರೆ.

ಇಂದು ಪಾಶ್ಚಾತ್ಯ ನಾಗರಿಕತೆಯ ಪ್ರಭಾವ ಜೀವನದ ಎಲ್ಲ ರಂಗಗಳಮೇಲೆಯೂ ಬಿದ್ದಿದೆ. ನಾವು ಭಾರತೀಯತೆಯನ್ನೇ ಮರೆಯುತ್ತ ನಮ್ಮ ವ್ಯಕ್ತಿತ್ವವನ್ನೂ ವೈಶಿಷ್ಟ್ಯ ವನ್ನೂ ಕಳೆದುಕೊಳ್ಳುತ್ತಿದ್ದೇವೆ. ನಮಗೆ ಸ್ವಾಭಾವಿಕವಾಗಿದ್ದ ಸತ್ಯ, ಶಾಂತಿ, ತೃಪ್ತಿ, ಸಹನೆ ಮುಂತಾದ ಸದ್ಗುಣಗಳು ನಾಶವಾಗಿ ಪ್ರಲೋಭನೆಗಳ ದಾಸ್ಯ ನಮ್ಮನ್ನು ಅಧೋ ಮಾರ್ಗಕ್ಕೆ ಎಳೆಯುತ್ತಿದೆ. ನೈತಿಕ ತತ್ವಗಳನ್ನು ನಾವು ಕಡೆಗಣಿಸುತ್ತಿದ್ದೇವೆ. ಧರ್ಮ ದಲ್ಲಿ ಶ್ರದ್ಧೆ, ನಂಬಿಕೆಗಳು ಸಡಿಲವಾಗುತ್ತಾ ಬಂದು ಪಾರಮಾರ್ಥಿಕ ದೃಷ್ಟಿ ಮಸುಕಾಗು ತ್ತಿದೆ. ಇಂತಹ ಕ್ಷೋಭೆಯಿಂದ ನಮ್ಮನ್ನು ಪಾರುಮಾಡುವ ಮಹಾನುಭಾವರ ಆಗತ್ಯ ನಮಗೆ ಇಂದು ಅತ್ಯಗತ್ಯವಾಗಿದೆ. ಹಿಂದೆ ಹದಿಮೂರು ಹದಿನಾಲ್ಕನೆಯ ಶತಮಾನದಲ್ಲಿ ಇಂತಹುದೇ ಪರಿಸ್ಥಿತಿ ನಮ್ಮ ದೇಶಕ್ಕೆ ಒದಗಿದ್ದಾಗ ಮಹಾಯೋಗಿಗಳಾಗಿದ್ದ ಶ್ರೀ ವಿದ್ಯಾ ತೀರ್ಥರು ಅವತರಿಸಿ, ನಾಡಿಗೆ ದಿವ್ಯಚೇತನವಿತ್ತು, ಧರ್ಮಜಾಗೃತಿಯನ್ನು ಮೂಡಿಸಿದ್ದರು. ಆ ವಿದ್ಯಾತೀರ್ಥರೇ ಈಗ ಅಭಿನವ ವಿದ್ಯಾತೀರ್ಥರಾಗಿ ಮತ್ತೆ ಅವತರಿಸಿ ಬಂದಿದ್ದಾರೆ. ಧರ್ಮ ದುಂದುಭಿಯನ್ನು ಮೊಳಗಿಸಲು ಮಹಾ ಪರಿವ್ರಾಜ್ಯವನ್ನು ಕೈಗೊಂಡು, ಜನತೆ ಯಲ್ಲಿ ಜಾಗೃತಿಯನ್ನು ಮೂಡಿಸಿದ್ದಾರೆ.

ಶ್ರೀ ಗುರುಗಳವರು ತಮ್ಮ ವ್ಯಕ್ತಿತ್ವವನ್ನು ವೈಶಿಷ್ಟ್ಯಪೂರ್ಣಗೊಳಿಸಿದ್ದಾರೆ. ವೇದಶಾಸ್ತ್ರಗಳಲ್ಲಿ ಆಳವೂ ವಿಶಾಲವೂ ಆದ ಪಾಂಡಿತ್ಯ, ಆ ಪಾಂಡಿತ್ಯಕ್ಕೆ ಒಪ್ಪುವ ಪ್ರತಿಭೆ, ಎಂತಹವರನ್ನೂ ಆಕರ್ಷಿಸುವ ದಿವ್ಯ ತೇಜಸ್ಸು, ನಿರರ್ಗಳವಾದ ವಾಗ್ವೈಖರಿ, ಧರ್ಮಪೀಠಾಧಿಪತಿಗಳಲ್ಲಿ ಇರಬೇಕಾದ ಇತರ ಮತಗಳಲ್ಲಿ ಸಹಾನುಭೂತಿ ಮತ್ತು ಗೌರವ, ಮೇಲು ಕೀಳು ಎನ್ನದೆ ಎಲ್ಲರೂ ಭಗವತ್ಸ್ವರೂಪರೆಂಬ ಅಚಲವಾದ ನಂಬಿಕೆ, ಇವೆಲ್ಲಾ ಶ್ರೀ

Sri Vidyabharathi Book Centre, Sringeri

 CC-O. In Public Domain. Digitized by eGangotri

ಶ್ರೀಗಳವರ ಸ್ವಭಾವದಲ್ಲಿಯೇ ಹಾಸುಹೊಕ್ಕಾಗಿವೆ. ರಾಷ್ಟ್ರಪತಿ, ರಾಜ್ಯಪಾಲ, ರಾಜ ಮಹಾರಾಜರಿಂದ ಹಿಡಿದು ಸಾಮಾನ್ಯರವರೆಗೆ ಎಲ್ಲರಿಗೂ ಅವರವರಿಗೆ ತಕ್ಕಂತೆ ಮಾರ್ಗ ದರ್ಶನ ಮಾಡುತ್ತಿದ್ದಾರೆ. ಎಲ್ಲರಲ್ಲಿಯೂ ಅಂತರ್ಯಾಮಿದಲ್ಲಿರುವ ದೈವೀಶಕ್ತಿಯನ್ನು ವಿಕಾಸ ಗೊಳಿಸುತ್ತಿದ್ದಾರೆ. ತಮ್ಮ ಸರಳತೆ, ಸೌಜನ್ಯ, ಸೌಲಭ್ಯದಿಂದ ಎಲ್ಲರಿಗೂ "ನಮ್ಮ ಗುರುಗಳು" ಎನಿಸಿ ದರ್ಶನ ಮಾಡಿದವರ ಹೃದಯದಲ್ಲಿ ಸ್ಥಾನಗಳಿಸಿದ್ದಾರೆ.

ಸಂಚರಿಸಿದೆಡೆಗಳಲ್ಲೆಲ್ಲಾ ತಮ್ಮ ನಿರರ್ಗಳವೂ, ಗಂಭೀರವೂ ಹೃದ್ಯವೂ ಆದ ಶೈಲಿಯಿಂದ ಸನಾತನ ಧರ್ಮದ ತತ್ವಗಳನ್ನು ಪ್ರಸಾರ ಮಾಡುತ್ತಾ ಶ್ರದ್ಧೆ ನಂಬಿಕೆ ಗಳನ್ನು ಎಲ್ಲೆಲ್ಲಿಯೂ ಮೂಡಿಸುತ್ತಿದ್ದಾರೆ. ಸಂಸ್ಕೃತ, ಕನ್ನಡ, ತೆಲಗು, ತಮಿಳು, ಹಿಂದೀ ಮುಂತಾದ ಭಾಷೆಗಳಲ್ಲಿ ಗಂಗಾಸಲಿಲದಂತೆ ಪ್ರವಹಿಸುವ ಅವರ ಉಪದೇಶ ಲಹರಿ ಎಲ್ಲರನ್ನೂ ಆಸ್ತಿಕ್ಯದ ದೋಣಿಯಲ್ಲಿ ಕೂರಿಸಿಕೊಂಡು ಆನಂದಸಾಗರವನ್ನು ತಲುಪಿಸು ತ್ತದೆ. ಪಂಡಿತ ಪಾಮರರಿಬ್ಬರಲ್ಲಿಯೂ ಶ್ರದ್ಧೆ ಆಸಕ್ತಿಯನ್ನೂ ಧರ್ಮಾಭಿಮಾನವನ್ನೂ ಉಕ್ಕಿಸುತ್ತದೆ. ಅವರು ನಡೆಸುವ ಶ್ರೀ ಶಾರದಾಚಂದ್ರಮೌಳೀಶ್ವರ ಪೂಜೆಯು ಭಕ್ತಿ ನಮ್ರತೆಗಳನ್ನು ಚಿಮ್ಮಿಸುತ್ತದೆ.

ತಾವು ಸಂಚರಿಸಿದ ಅನೇಕ ಕಡೆಗಳಲ್ಲಿ ಶ್ರೀ ಶ್ರೀಗಳವರು ವೈದಿಕ ಧರ್ಮದ ಉನ್ನತಿ ಯನ್ನು ಪ್ರಸರಿಸಲು ಮತ್ತು ವೈದಿಕ ಕರ್ಮಗಳ ಆವಶ್ಯಕತೆ ಮತ್ತು ಪ್ರಯೋಜನಗಳನ್ನು ಸಾರಲು ಅನೇಕ ಕ್ರತುಗಳನ್ನು ನಡೆಸಿದ್ದಾರೆ. ಅವರು ನಡೆಸಿರುವ ಶ್ರೀ ರುದ್ರಹೋಮ ಗಳೂ, ಶ್ರೀ ಚಂಡೀಯಾಗಗಳೂ, ಶ್ರೀ ಲಲಿತಾ ಹೋಮಗಳೂ ಅಸಂಖ್ಯಾತ. ಇವಲ್ಲದೆ ಬಹುಜನ ಅಗ್ನಿಹೋತ್ರಿಗಳನ್ನು ಪ್ರೋತ್ಸಾಹಿಸುತ್ತಾ ಅವರಿಂದ ಅಪೂರ್ವವಾದ ಹಲವಾರು ಯಜ್ಞಯಾಗಗಳನ್ನು ಮಾಡಿಸಿದ್ದಾರೆ. ಜನಗಳಲ್ಲಿ ಭಕ್ತಿ, ಶ್ರದ್ಧೆಗಳನ್ನು ಮೂಡಿಸುವಂತಹ ಅನೇಕ ಉತ್ಸವಾದಿಗಳನ್ನು ಆಗಾಗ ನಡೆಸುತ್ತಾ ಸಮಾಜದ ಎಲ್ಲ ವರ್ಗದ ಜನರೂ ಪಾಲ್ಗೊಳ್ಳುವಂತೆ ಮಾಡಿದ್ದಾರೆ. ಶ್ರೀ ಶ್ರೀಗಳವರು ಶ್ರೀ ಶಾರದಾ ಸನ್ನಿಧಿಯಲ್ಲಿ ನಡೆಸಿರುವಷ್ಟು ಕೋಟಿ ಅರ್ಚನೆಗಳು ಹಿಂದೆ ಯಾವ ಆಚಾರ್ಯರ ಕಾಲದಲ್ಲೂ ನಡೆದಿರಲಿಲ್ಲ. "ನಮ್ಮ ರಾಷ್ಟ್ರ ಜಾತ್ಯಾತೀತ ರಾಷ್ಟ್ರವಾಗಿರಬಹುದು. ಹಾಗೆಂದ ಮಾತ್ರಕ್ಕೆ ಅಲ್ಲಿ ಧರ್ಮಾಚರಣೆ ಕೂಡದೆಂದು ಅರ್ಥವಲ್ಲ. ಸತ್ಯ, ಅಹಿಂಸೆ, ಪ್ರಾಮಾಣಿ ಕತೆ, ನಿಷ್ಕಾಪಟ್ಯ, ಸೌಹಾರ್ದತೆ ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಡೆಯು ವುದೇ ಧರ್ಮಾಚರಣೆ. ಮತ ಧರ್ಮಗಳನ್ನು ಬೋಧಿಸುವುದು ಇದನ್ನೇ. ಈ ಧರ್ಮ ತತ್ವಗಳ ಆಚರಣೆ 'ಜಾತ್ಯಾತೀತ' ರಾಷ್ಟ್ರದ ತತ್ವಕ್ಕೆ ವಿರೋಧವಲ್ಲ ಪೂರಕ" ಎಂದು ಶ್ರೀ ಶ್ರೀಗಳವರು ಆಗಾಗ ನುಡಿಯುತ್ತಿರುತ್ತಾರೆ.

ಬಹಳ ಜನಗಳನ್ನು ಒಂದು ಕಡೆ ಸೇರಿಸಿ ಪರಸ್ಪರ ಅರಿವು, ಆದರ, ಪ್ರೀತಿ, ವಿಶ್ವಾಸಗಳನ್ನು ಮೂಡಿಸಲು ಸಾಮೂಹಿಕ ಉತ್ಸವಗಳು ಸಹಕಾರಿ. ಶ್ರೀ ಶ್ರೀಗಳವರು ನಡೆಸುವ ಯಜ್ಞಯಾಗಾದಿಗಳು, ಹೋಮ ಹವನಗಳು, ಲಕ್ಷಾರ್ಚನೆ, ಕೋಟಿಅರ್ಚನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೇಕ ಜನಗಳನ್ನು ಆಕರ್ಷಿಸಿ ಅವರಲ್ಲಿ ದೈವಭಕ್ತಿ, ಧರ್ಮ ಶ್ರದ್ಧೆಯನ್ನು ಮೂಡಿಸುತ್ತಿವೆ. ಬಹುಜನ ನಾಸ್ತಿಕರೂ ದೈವ, ಧರ್ಮ ವಿರೋಧಿಗಳೂ ಸಹ ಶ್ರೀ ಶ್ರೀಗಳವರ ಉಪದೇಶ ಬೋಧನೆಗಳಿಂದ ಧರ್ಮ ಜೀವನದತ್ತ ದೃಷ್ಟಿ ಹರಿಸಿದ್ದಾರೆ. ಅವರೊಡನೆ ನಡೆಸಿದ ಸಂಭಾಷಣೆಗಳಿಂದ ತಮ್ಮ ಅನುಮಾನಗಳನ್ನು ಪರಿಹರಿಸಿಕೊಂಡಿದ್ದಾರೆ. ಹಿಂದೂಧರ್ಮದಲ್ಲಿ ನಂಬಿಕೆಯನ್ನು ಗಳಿಸಿಕೊಂಡಿದ್ದಾರೆ.

ಶ್ರೀ ಶಂಕರಭಗವತ್ಪಾದರು ಭಾರತವೆಲ್ಲವೂ ಒಂದೇ ರಾಷ್ಟ್ರವೆಂಬ ಸಂಕೇತವಾಗಿಯೇ ಅಲ್ಲವೇ ಭರತಖಂಡದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದ್ದು ? ಅವರು ಬೋಧಿಸಿದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಭದ್ರವಾದ ತಳಪಾಯದ ಮೇಲೆ ದೃಢವಾಗಿ ನಿಲ್ಲಲು ರಾಷ್ಟ್ರಕ್ಕೆ ಸಾಧ್ಯವಾಗಿದೆ. ನಮ್ಮ ದೇಶದಲ್ಲಿ ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ಮೌಲ್ಯಗಳ ಮೂಲಕ ಏಕತೆಯ ಸ್ಥಾಪನೆ ಎಂದೂ ಸಾಧ್ಯವಾಗಲಿಲ್ಲ. ಅದು ಸಾಧ್ಯವಾಗಿರುವುದು ಧಾರ್ಮಿಕ ಮೌಲ್ಯಗಳ ಮೂಲಕವಾಗಿಯೇ. ಶ್ರೀ ಶ್ರೀಗಳವರು ಆ ಏಕತೆಯ ದುಂದುಭಿಯನ್ನು ತಾವು ಪಾದವಿಟ್ಟೆಡೆಯಲ್ಲೆಲ್ಲಾ ಮೊಳಗಿಸುತ್ತಿದ್ದಾರೆ.

ಅಖಂಡ ಭಾರತಕ್ಕೆಲ್ಲಾ ಒಂದೇ ಸಂಸ್ಕೃತಿಯೆಂದೂ, ಆಂಧ್ರ, ಕರ್ನಾಟಕ, ತಮಿಳು, ಕೇರಳ, ಸಂಸ್ಕೃತಿಯೆಂದು ಭಿನ್ನಭಿನ್ನವಲ್ಲವೆಂದೂ ಅವೆಲ್ಲಾ ಒಂದೇ ಬೃಹತ್ಸಂಸ್ಕೃತಿಯ ವಿವಿಧ ಮುಖಗಳೆಂಬುದು ಶ್ರೀ ಶ್ರೀಗಳವರ ಧರ್ಮಪ್ರಸಾರದ ಪಲ್ಲವಿಯಾಗಿದೆ. ಧರ್ಮವೇ ಈ ಸಂಸ್ಕೃತಿಯ ಆಧಾರ. ಧರ್ಮ ಭಾರತೀಯರೆಲ್ಲರಿಗೂ ದಾರಿದೋರುವ ದೀವಿಗೆ. ಸಾಮಾಜಿಕ ಜೀವನದಲ್ಲಿ ಸತ್ಯ, ಅಹಿಂಸೆ, ಕರುಣೆ, ಅನುಕಂಪ ಮುಂತಾದ ಸಾಮಾನ್ಯ ಧರ್ಮಗಳನ್ನು ಪರಿಪಾಲಿಸುವುದರಿಂದ ಭಾರತದಲ್ಲಿಯೇ ಅಲ್ಲದೆ ಅಖಿಲ ವಿಶ್ವದಲ್ಲಿಯೇ ಐಕ್ಯತೆಯನ್ನು ಮೂಡಿಸಬಹುದೆಂದು ಶ್ರೀ ಗುರುಗಳು ಉಪದೇಶಿಸುತ್ತಿದ್ದಾರೆ. ರಾಷ್ಟ್ರದ ಉತ್ತರದಲ್ಲಿರುವವರು ಗೋಧಿಯನ್ನು ತಿನ್ನಬಹುದು. ದಕ್ಷಿಣದಲ್ಲಿರುವವರು ಅಕ್ಕಿಯನ್ನು ತಿನ್ನಬಹುದು. ಬಟ್ಟೆಯನ್ನು ತೊಡುವುದರಲ್ಲಿ ವ್ಯತ್ಯಾಸವಿರಬಹುದು, ಬೇರೆಬೇರೆ ಭಾಷೆಗಳನ್ನಾಡಬಹುದು, ವಿವಿಧ ವಾಯುಗುಣಗಳಿರುವ ದೂರದೂರ ಸ್ಥಳಗಳಲ್ಲಿರಬಹುದು, ಆದರೆ ಎಲ್ಲರಿಗೂ ಸ್ಫೂರ್ತಿದಾಯಿನಿಯಾದದ್ದು ಸನಾತನ ಧರ್ಮ.

ಸಾಮಾಜಿಕ ವಿಚಾರಗಳಲ್ಲಿ ಶಾಸ್ತ್ರಗಳಿಗೆ ವಿರುದ್ಧವಾಗಿ ವರ್ತಿಸುವುದು ಅಸಾಧುವೆಂದು ಶ್ರೀ ಶ್ರೀಗಳವರ ಸ್ಪಷ್ಟ ಅಭಿಮತ. ತ್ರಿಕಾಲ ಜ್ಞಾನಿಗಳಾದ ಮಹರ್ಷಿಗಳು ಶಾಸ್ತ್ರಗಳನ್ನು ರಚಿಸಿದುದು, ಜನಗಳಿಗೆ ಧಾರ್ಮಿಕ, ಸಾಮಾಜಿಕ ಮಾರ್ಗದರ್ಶನ ಮಾಡುವದಕ್ಕಾಗಿ, ಜನತೆಯ ಕ್ಷೇಮಕ್ಕಾಗಿ; ಶಾಸ್ತ್ರಗಳನ್ನು ಅಲಕ್ಷಿಸುವುದು ಯಾರಿಗೂ ಕ್ಷೇಮವಲ್ಲ. ಯಾವ ಸಾಮಾಜಿಕ ಬದಲಾವಣೆಯೇ ಆಗಲಿ, ಅದು ಅನುಷ್ಠಾನಕ್ಕೆ ಬರಬೇಕಾದರೆ, ಅದಕ್ಕೆ ಕಾರಣರಾದ ಜನಗಳ ಹೃದಯದಲ್ಲಿ ಪರಿವರ್ತನೆ ಆಗಲು ಬಲವಂತದ, ಹಿಂಸೆಯ ಮಾರ್ಗ ತ್ಯಜಿಸಿ, ಮನವೊಲಿಸುವ ತಂತ್ರವನ್ನು ಅನುಸರಿಸುವುದು, ನಿಧಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದರೂ ಒಳ್ಳೆಯದೆಂದು ಶ್ರೀ ಶ್ರೀಗಳವರು ಹೇಳುತ್ತಾರೆ. ಕಾನೂನನ್ನು ಮಾಡುವುದರಿಂದ, ಕಾನೂನಿನ ಸಹಾಯದಿಂದ ಬದಲಾವಣೆ ಸಾಧ್ಯವಿಲ್ಲವೆಂದು ಹೇಳಲಾಗದಿದ್ದರೂ, ಮಾನವ ಜನಾಂಗದ ಎಲ್ಲ ಸಮಸ್ಯೆಗಳಿಗೂ ಕಾನೂನೇ ಮದ್ದು ಆಗದು, ಪರಿಹಾರವಾಗದು. ನೈತಿಕ ತತ್ವಗಳ ಅನುಷ್ಠಾನಕ್ಕೆ ಅವಕಾಶ, ಪ್ರೋತ್ಸಾಹ ಕೊಡಬೇಕು. ಸೃಷ್ಟಿಕರ್ತನಾದ ಭಗವಂತನಲ್ಲಿ ನಂಬಿಕೆಯಿಡಬೇಕು. ಧರ್ಮ ಸತ್ಯಗಳನ್ನು ಶ್ರದ್ಧೆಯಿಂದ ಪಾಲಿಸಬೇಕು. ಇದಕ್ಕೆ ಅನುಗುಣವಾದ ವಾತಾವರಣ ನಿರ್ಮಿತವಾದರೆ, ಎಂತಹ ಸಮಸ್ಯೆಯನ್ನೂ ಸುಲಭ ವಾಗಿ ಬಗೆಹರಿಸ ಬಹುದೆಂದು ಶ್ರೀ ಶ್ರೀಗಳವರು ಬೋಧಿಸುತ್ತಾರೆ.

ಜನಗಳಲ್ಲಿ ಪರಸ್ಪರ ಭಾವೈಕ್ಯ ಮೂಡಬೇಕಾದರೆ ಧರ್ಮಭಾವನೆ ಉದ್ದೀಪನ ಗೊಳಿಸಬೇಕು. ದಕ್ಷಿಣದ ಜನ ಉತ್ತರದ ಕಾಶಿಗೂ, ಉತ್ತರದ ಜನ ದಕ್ಷಿಣದ ರಾಮೇ ಶ್ವರಕ್ಕೂ ಯಾತ್ರೆ ಗೈಯ್ಯುವುದು ಈ ಐಕ್ಯತೆಯ ದ್ಯೋತಕವಲ್ಲವೆ? ಇಂತಹ ಐಕ್ಯ ಭಾವನೆಯನ್ನು ಬಲಿಷ್ಠಗೊಳಿಸಲು ಯತ್ನ ನಡೆಯಬೇಕೆಂದು ಶ್ರೀ ಗುರುಗಳವರು ಆಶಿಸು ತ್ತಾರೆ. ರಾಷ್ಟ್ರವನ್ನು ಆಳುತ್ತಿರುವವರು, ರಾಜಕೀಯ ಮುಖಂಡರಾದವರು ದೇವರು ಧರ್ಮಗಳ ವಿಷಯದಲ್ಲಿ ಅಪನಂಬಿಕೆಯ ಮಾತುಗಳನ್ನಾಡದೆ ತಮ್ಮಷ್ಟಕ್ಕೆ ತಾವು ಇದ್ದರೆ ಸಾಕು; ದೈವಶ್ರದ್ಧೆ, ಸದಾಚಾರ ಇವುಗಳ ಪೂರ್ಣವಿಕಾಸಕ್ಕೆ ಅವಕಾಶವಿತ್ತರೆ ಸಾಕು; ಧರ್ಮವು ಜನರಲ್ಲಿ ಬೆಳೆಯುತ್ತದೆ, ಎಂದು ಶ್ರೀ ಶ್ರೀಗಳವರು ಪದೇ ಪದೇ ನುಡಿಯು ತ್ತಿರುತ್ತಾರೆ.

ಸನಾತನಧರ್ಮ, ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಒಳಗೊಂಡ ಗ್ರಂಥಗಳ ಪ್ರಕಟನೆಗೆ ಶ್ರೀ ಶ್ರೀಗಳವರು ಮುಕ್ತಹಸ್ತರಾಗಿ ನೆರವಾಗುತ್ತಾರೆ. ಆದರೆ ಈ ಗ್ರಂಥಗಳಲ್ಲಿ ದ್ವೇಷ, ಅಸೂಯೆ, ದುಷ್ಪ್ರಚಾರ, ಅನೃತ ವಿಷಯಗಳು ಮುಂತಾ ದುವು ಇದ್ದಲ್ಲಿ ಅವುಗಳನ್ನವರು ನಿರ್ದಾಕ್ಷಿಣ್ಯವಾಗಿ ನಿರಾಕರಿಸುತ್ತಾರೆ. ಧರ್ಮದ ಹೆಸರಿ ನಲ್ಲಿ ಇನ್ನೊಬ್ಬರ ನಂಬಿಕೆ, ಶ್ರದ್ಧೆಗಳನ್ನು ಕೆಡಿಸುವ ಸಾಹಿತ್ಯ ರಚನೆ ಅಪಾಯಕರವೆಂದು ಸ್ಪಷ್ಟಪಡಿಸುತ್ತಾರೆ. ಸಂಸ್ಕೃತ, ಕನ್ನಡ, ತಮಿಳು, ತೆಲಗು, ಹಿಂದೀ ಮುಂತಾದ ಭಾಷೆ ಗಳಲ್ಲಿ ಅನೇಕ ಗ್ರಂಥಗಳು ಶ್ರೀ ಶ್ರೀಗಳವರ ಕೃಪೆಯಿಂದ, ಔದಾರ್ಯದಿಂದ ಪ್ರಕಟವಾಗಿವೆ. ಶ್ರೀ ಶಂಕರಭಗವತ್ಪಾದರವರ ಸಂದೇಶವನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಪ್ರಚುರ ಪಡಿಸಲು ಶ್ರೀ ಶಂಕರಕೃಪಾ ಮಾಸಪತ್ರಿಕೆಯನ್ನು ಕನ್ನಡ, ತೆಲಗು ಮತ್ತು ತಮಿಳು ಭಾಷೆ ಗಳಲ್ಲಿ ಪ್ರಕಟಿಸಲು ಶ್ರೀ ಶ್ರೀಗಳವರು ನೆರವಾಗಿದ್ದಾರೆ. ಜನತೆಯಲ್ಲಿ ಧರ್ಮ, ಶ್ರದ್ಧೆ, ದೈವ ಭಕ್ತಿ ಮೂಡಬೇಕು, ಅದರಿಂದಲೇ ಮಾನವಜನಾಂಗದ ಹಿತಸಾಧನೆಯಾಗುವುದು, ಎಂಬುದು ಶ್ರೀ ಶ್ರೀಗಳವರ ದೃಢವಾದ ಅಭಿಪ್ರಾಯ. 'ವಿಕಾಸ' ಎಂದರೆ ಆಂತರಿಕ ವಿಕಾಸ, ನಮ್ಮಲ್ಲಿರುವ ಸದ್ಗುಣಗಳ ಬೆಳವಣಿಗೆಯೇ ವಿನಾ, ಹೊರಗಿನ ವಸ್ತುಗಳ ಸಂಗ್ರಹವಲ್ಲ, ಹೇರಳವಾದ ಆಸ್ತಿಪಾಸ್ತಿಯ ಸಂಪಾದನೆಯಿಂದ ಬರುವ ಬಾಹ್ಯ ತೃಪ್ತಿ ಯಲ್ಲ. ವಿಸ್ತರಣೆ ಅಲ್ಲ ನಮ್ಮಲ್ಲಿರುವ ನೈತಿಕ ಗುಣಗಳ ಬೆಳವಣಿಗೆಯೇ ನೈಜವಾದ ವಿಕಾಸ ಎಂದು ಶ್ರೀ ಶ್ರೀಗಳವರು ಆಗಾಗ ನುಡಿಯುತ್ತಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂತಹ ವಿಕಾಸಕ್ಕೆ ಅನುಗುಣವಾದ ಧಾರ್ಮಿಕ ವಿದ್ಯಾಭ್ಯಾಸಕ್ಕೆ ಶ್ರೀ ಗುರುಗಳು ನೆರವಾಗುತ್ತಾರೆ, ಮುಕ್ತಹಸ್ತದಿಂದ ಸಹಾಯ ಮಾಡುತ್ತಾರೆ. ಶೃಂಗೇರಿಯಲ್ಲಿ ಮಠಕ್ಕೆ ಸೇರಿದಂತೆ ಇರುವ ಪಾಠಶಾಲೆಯಲ್ಲಿ ಉಚಿತ ಅಶನ, ವಸತಿಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ವೇದಾಧ್ಯಯನ, ಸಾಹಿತ್ಯ, ವ್ಯಾಕರಣ, ತರ್ಕ, ಜ್ಯೋತಿಷ್ಯ ಶಾಸ್ತ್ರಗಳನ್ನು ಇಲ್ಲಿ ಬೋಧಿಸುವ ಏರ್ಪಾಟಿದೆ. ಬೆಂಗಳೂರು ಶಂಕರಮಠದಲ್ಲಿ ಪ್ರೌಢಪಾಠಶಾಲೆಯನ್ನು ನಡೆಸುತ್ತಿದ್ದಾರೆ. ಇಲ್ಲಿಯೂ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯವೂ, ವಿದ್ಯಾರ್ಥಿ ವೇತನಗಳೂ ಇವೆ. ಇವೆರಡಲ್ಲದೆ ಕಾಲಟಿಯಲ್ಲಿಯೂ ವೇದ ಮತ್ತು ವೇದಾಂತ ಪಾಠಶಾಲೆಯನ್ನು ನಡೆಸುತ್ತಿದ್ದಾರೆ. ಅನೇಕ ಸ್ಥಳಗಳಲ್ಲಿ ಶ್ರೀ ಶ್ರೀಗಳವರು ಸ್ಥಾಪಿಸಿರುವ ಶಂಕರ ಮಠಗಳಲ್ಲಿ ವೇದಾಂತ, ಶಾಸ್ತ್ರ ಮತ್ತು ಪುರಾಣಪ್ರವಚನಗಳಿಗೆ ಅವಕಾಶ ಕಲ್ಪಿಸಿ, ಪಂಡಿತರುಗಳನ್ನು ನೇಮಿಸಿದ್ದಾರೆ. ದೇಶಾದ್ಯಂತವೂ ಅನೇಕ ಜನ ವಿದ್ವಾಂಸರುಗಳನ್ನು ಪ್ರೋತ್ಸಾಹಿಸಿ ಧರ್ಮಪ್ರಚಾರಕ್ಕೆ ತೊಡಗಿಸುತ್ತಿದ್ದಾರೆ.

ಶ್ರೀ ಶ್ರೀಗಳವರು ಭೌತಿಕ ಜೀವನಕ್ಕೆ ಅಗತ್ಯವಾದ ವಿದ್ಯಾಭ್ಯಾಸದ ಬಗೆಗೂ ಮೃದು ಮನಸ್ಸು ಉಳ್ಳವರಾಗಿದ್ದಾರೆ. ಶೃಂಗೇರಿಯಲ್ಲಿ ಬಾಲಿಕೆಯರಿಗಾಗಿ ಒಂದು ಪ್ರೌಢಶಾಲೆಯನ್ನು ತೆರೆದಿದ್ದಾರೆ, ಕಾಲಟಿಯಲ್ಲಿ ಒಂದು ಆರ್ಟ್ಸ್ ಮತ್ತು ಸೈನ್ಸ್ ಕಾಲೇಜನ್ನು ನಡೆಸುತ್ತಿದ್ದಾರೆ. ಅನೇಕ ಜನ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಸಹಾಯಮಾಡುತ್ತಿದ್ದಾರೆ. ಅನಾಥಾಲಯಗಳು, ವಿದ್ಯಾರ್ಥಿ ನಿಲಯಗಳು ಮುಂತಾದ ಸಂಸ್ಥೆಗಳಿಗೆ ನೆರವು ನೀಡುತ್ತಿದ್ದಾರೆ.

ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಎತ್ತಿಹಿಡಿದು ಜನಾಂಗವನ್ನು ಮುನ್ನಡೆಸುವಂತಹ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವುದರಲ್ಲಿ ಶ್ರೀ ಶ್ರೀಗಳವರ ಒಲವು ಹೆಚ್ಚಾಗಿದೆ.

ಶ್ರೀ ಶ್ರೀ ಜಗದ್ಗುರುಗಳವರ ಪರಮ ಆಪ್ತ ಶಿಷ್ಯರಾಗಿದ್ದ ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರವರು ಶ್ರೀ ಶ್ರೀ ಗುರುಗಳವರನ್ನು ಕುರಿತು ತಮ್ಮ ಒಂದು ಲೇಖನದಲ್ಲಿ "ಶ್ರೀ ಶ್ರೀ ಸ್ವಾಮಿಗಳವರು ಘನ ವಿದ್ವಾಂಸರೂ, ಶ್ರೇಷ್ಠ ದೈವಭಕ್ತರೂ ಆಗಿರುವರು. ಅದ್ವೈತ ವೇದಾಂತವನ್ನು ಪ್ರಸಾರ ಮಾಡುವುದಲ್ಲದೆ, ಸಂಸ್ಕೃತ ವಿದ್ಯಾಭ್ಯಾಸ, ದೇವಾಲಯಗಳ ನಿರ್ಮಾಣ ಮತ್ತು ಉತ್ತಮ ಆದರ್ಶಗಳ ಬೆಳವಣಿಗೆಯ ಪ್ರಸಾರಕ್ಕಾಗಿ ಅವರು ತಮ್ಮ ಕಾಲವನ್ನು ಮುಡುಪಾಗಿಟ್ಟಿರುವರು.

"ದ್ವೇಷ ಮತ್ತು ಮೋಹ ನನ್ನಲಿಲ್ಲ. ದುರಾಸೆ ಮತ್ತು ಅವಿದ್ಯೆ ನನ್ನಿಂದ ದೂರವಿದೆ. ಮದ ಮತ್ತು ಮಾತ್ಸರ್ಯಗಳು ನನ್ನಲ್ಲಿ ಇಲ್ಲ. ಧರ್ಮ, ಅರ್ಥ, ಕಾಮ, ಮೋಕ್ಷಗಳಿಂದ ನಾನು ಪೀಡಿತನಾಗಿಲ್ಲ. ಏಕೆಂದರೆ ಚಿದಾನಂದ ಸ್ವರೂಪಿಯಾದ ಪರಮಾತ್ಮನೇ ನಾನಾಗಿದ್ದೇನೆ; ಎಂದು ಘೋಷಿಸುವ ನಿರ್ವಾಣ ಷಟ್ಕದ ಒಂದು ಶ್ಲೋಕವನ್ನು ನಿಶ್ಚಯವಾಗಿಯೂ ಅವರ ಜೀವನವು ವಿಶದ ಪಡಿಸುತ್ತದೆ" ಎಂದು ಬರೆದಿದ್ದಾರೆ. ಶ್ರೀ ಶ್ರೀಗಳವರ ವ್ಯಕ್ತಿತ್ವದ ಬಗ್ಗೆ ಇದಕ್ಕಿಂತ ಹೆಚ್ಚಿಗೆ ಬರೆಯಬೇಕೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

೪೨. ಉಪಸಂಹಾರ

ಭಾರತೀಯ ಸಂಸ್ಕೃತಿಯು ಅತ್ಯಂತ ಪ್ರಾಚೀನ ಕಾಲದಲ್ಲಿ ಮಧ್ಯ ಏಷ್ಯಾದ ಆಚೆಗೂ ವ್ಯಾಪಿಸಿತ್ತು. ಪೂರ್ವದಲ್ಲಿ ಚೈನಾ ದೇಶದವರೆಗೂ, ಪಶ್ಚಿಮದಲ್ಲಿ ಆಫ್ಘಾನಿಸ್ಥಾನದವರೆಗೂ ಹರಡಿತ್ತು. ಈ ದೇಶದ ವಿದ್ವಾಂಸರು ವೇದಶಾಸ್ತ್ರಗಳಲ್ಲಿ ಪಾರಂಗತರಾಗಿ ತಮ್ಮಲ್ಲಿಗೆ ಅನೇಕ ಜನ ವಿದೇಶದ ವಿದ್ಯಾರ್ಥಿಗಳನ್ನು ಸಹ ಆಕರ್ಷಿಸುತ್ತಿದ್ದರು. ಸನಾತನ ಹಿಂದೂ ಧರ್ಮವು ವಿಶ್ವ ಧರ್ಮವಾಗಿ, ಎಲ್ಲ ಮತಗಳೂ ಈ ಧರ್ಮದ ಮೂಲ ತತ್ವಗಳನ್ನೇ ಅಂಗೀಕರಿಸಿ ಆಯಾ ದೇಶ, ಕಾಲ, ಜನಗಳಿಗೆ ಅನುಸಾರವಾಗಿ ರೂಪಿತವಾಗಿದ್ದವು. ಶ್ರೀ ಶಂಕರಭಗವತ್ಪಾದರು, ಈ ಸನಾತನ ಧರ್ಮವನ್ನು ಪುನರುದ್ಧರಿಸಿ ಬಲವಾದ ತಳಪಾಯದ ಮೇಲೆ ನಿಲ್ಲಿಸಿದರು. ಆ ಕಾಲದಲ್ಲಿ ಸನಾತನ ಧರ್ಮದ ಕೇಂದ್ರಸ್ಥಳವಾಗಿದ್ದ ಶಾರದಾ ಪೀಠವೆಂದು ಹೆಸರಾಗಿದ್ದ ಕಾಶ್ಮೀರದ ಶ್ರೀ ನಗರದಲ್ಲಿ ಸರ್ವಜ್ಞ ಪೀಠ ವ್ಯಾಖ್ಯಾನ ಸಿಂಹಾಸನವಿತ್ತು. ಅಲ್ಲಿ ದೊಡ್ಡ ವಿದ್ವಾಂಸರ ಸಭೆಯೇ ಇದ್ದು, ಶ್ರೀ ಶಂಕರರು ಅವರೆಲ್ಲರನ್ನೂ ವಾದ ಪ್ರತಿವಾದಗಳಲ್ಲಿ ಗೆದ್ದರು. ವಿಂಧ್ಯಕ್ಕೆ ದಕ್ಷಿಣದಲ್ಲಿದ್ದ ದಂಡಕಾರಣ್ಯವೆಂದು ಪ್ರಸಿದ್ಧವಾಗಿದ್ದ ಭಾರತದ ಭೂಭಾಗವೂ ಸನಾತನ ಧರ್ಮದ ತವರೇ, ಎಂಬುದನ್ನು ಸ್ಥಾಪಿಸಿ, ವ್ಯಾಖ್ಯಾನ ಪೀಠಾಧೀಶ್ವರರಾದರು.

ಆಚಾರ್ಯಪಾದರು ಭಾರತೀಯರಲ್ಲಿ ರಾಜಕೀಯವಾಗಿ ಭಿನ್ನವಾಗಿ ಹೋಗಿದ್ದ ಅಂದಿನ ಭರತಖಂಡದಲ್ಲಿ, ನಾಲ್ಕು ಕಡೆಗಳಲ್ಲಿ ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿ 'ಏಕರಾಷ್ಟ್ರ' ಭಿನ್ನ ಭಿನ್ನವಾದ ರಾಜ್ಯಾಡಳಿತಗಳಲ್ಲಿ ಇದ್ದರೂ, ಧಾರ್ಮಿಕವಾಗಿ ಭಾರತ ಒಂದು ರಾಷ್ಟ್ರ ಎಂಬ ಭಾವನೆಯನ್ನು ಮೂಡಿಸಿದರು. ವಿವಿಧ ಮತಾಚಾರಗಳಲ್ಲಿ ಭಿನ್ನಭಿನ್ನವಾಗಿ ದೂರ ದೂರ ಸರಿಯುತ್ತಿದ್ದ ಜನಾಂಗವನ್ನು ಒಂದು ಗೂಡಿಸಿ ಸನಾತನ ಧರ್ಮವನ್ನು 'ರಾಷ್ಟ್ರಧರ್ಮ' ವನ್ನಾಗಿ ಉಜ್ಜೀವನ ಗೊಳಿಸಿದರು. ಅಖಿಲ ಭಾರತಕ್ಕೆಲ್ಲಾ ಸಮಾನ ಭಾಷೆಯಿರಬೇಕೆಂದು ಅಂದು ಪ್ರಚಲಿತವಾಗಿದ್ದ ಸಂಸ್ಕೃತವನ್ನೇ ತಮ್ಮ ಬೋಧನೆಗೆ ಗ್ರಂಥರಚನೆಗೆ ಮಾಧ್ಯಮವನ್ನಾಗಿ ಆರಿಸಿ ಸಂಸ್ಕೃತಕ್ಕೆ ಮತ್ತೆ 'ರಾಷ್ಟ್ರಭಾಷೆ' ಸ್ಥಾನ ಕಲ್ಪಿಸಿದರು.

ಅಂದಿನಿಂದ ಶ್ರೀ ಶಂಕರರ ಚತುರಾಮ್ನಾಯ ಪೀಠಾಧೀಶ್ವರರು ಆಚಾರ್ಯರ ಮೇಲ್ಪಂಕ್ತಿಯನ್ನು ಅನುಸರಿಸಿ ರಾಷ್ಟ್ರವೆನ್ನೆಲ್ಲಾ ಸಂಚರಿಸುತ್ತಾ, ಭರತಖಂಡದ ರಾಷ್ಟ್ರೀಯ ಏಕತೆಯನ್ನು ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ ಪುನಃ ಪುನಃ ಉದ್ಘೋಷಿಸುತ್ತಿದ್ದಾರೆ. ನಮ್ಮದು ಶೈವ, ವೈಷ್ಣವ, ಶಾಕ್ತ ಮತಗಳಲ್ಲ ಸನಾತನ ವೈದಿಕ ಧರ್ಮ ಎಂದು ಪದೇ ಪದೇ ಸ್ಪಷ್ಟಪಡಿಸುತ್ತಿದ್ದಾರೆ. ರಾಷ್ಟ್ರದ ಭಾಷೆ ದೇವಭಾಷೆ - ಸಂಸ್ಕೃತ ಎಂದು ಪ್ರಸಾರ ಮಾಡುತ್ತಿದ್ದಾರೆ. ಶ್ರೀ ಶಾರದಾ ಪೀಠವೆಂದು ಪ್ರಖ್ಯಾತವಾದ ಶೃಂಗೇರಿಯ ಪೀಠದ ಆಚಾರ್ಯರು ವಿದ್ವಾಂಸರ, ಪಂಡಿತರ ಪೋಷಕರಾಗಿ ಸದ್ದುಗದ್ದಲವಿಲ್ಲದೆ ಭಾರತೀಯ ಸಂಸ್ಕೃತಿಯ ಪ್ರಸಾರ ಕಾರ್ಯ ಮಾಡುತ್ತಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿದ್ಯಾತೀರ್ಥ ಸ್ವಾಮಿಗಳವರು ಹಿಂದಿನ ಆಚಾರ್ಯರಂತೆಯೇ ತಾವೂ ಸಹ ಪಂಡಿತರನ್ನು ಆಹ್ವಾನಿಸಿ ಅವರಿಂದ ವಾಕ್ಯಾರ್ಥ ಸಭೆಗಳನ್ನು ಏರ್ಪಡಿಸಿ, ಅವರೆಲ್ಲರಿಗೂ ಸಂಭಾವನೆಯನ್ನೂ ಜರತಾರೀ ವಸ್ತ್ರಗಳನ್ನೂ ಇತ್ತು ಪುರಸ್ಕರಿಸುತ್ತಿದ್ದಾರೆ. ಅನೇಕ ಜನ ಉದ್ದಾಮ ಪಂಡಿತರನ್ನು ಬಿರುದುಗಳಿಂದ ಗೌರವಿಸಿದ್ದಾರೆ. ಶ್ರೀ ಶ್ರೀಗಳವರಿಗೆ ವಿದ್ವಾಂಸರೆಂದರೆ ಬಹಳ ವಿಶ್ವಾಸ. ಶ್ರೀ ಶಂಕರ ಜಯಂತೀ ಶ್ರೀ ಗಣಪತಿ ಉತ್ಸವದ ಸಮಯಗಳಲ್ಲಿ ವಿದ್ವತ್ಸಭೆಗಳನ್ನು ಏರ್ಪಡಿಸುವುದಲ್ಲದೆ, ತಾವು ಭೇಟಿಯಿತ್ತ ದೊಡ್ಡ ನಗರಗಳಲ್ಲಿ, ಕ್ಷೇತ್ರಗಳಲ್ಲಿ, ಪಂಡಿತಸಭೆಗಳನ್ನು ಏರ್ಪಡಿಸಿ ವಿದ್ವಾಂಸರನ್ನು ಮನ್ನಿಸಿದ್ದಾರೆ. ವರ್ಧಂತೀ ಸಮಯದಲ್ಲಿ ವಿದ್ವಾಂಸರನ್ನು ಆಹ್ವಾನಿಸಿ ಎಲ್ಲ ಧರ್ಮಗಳಲ್ಲಿ ಪರಸ್ಪರ ಸಮ್ಮತವಾಗುವಂತಹ ತತ್ವಗಳನ್ನು ಪ್ರಸಾರಮಾಡಲು ಧರ್ಮಸಮ್ಮೇಳನವನ್ನು ನಡೆಸುತ್ತಾರೆ. ಹಾಗೆಯೇ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿ ವಿದ್ವಾಂಸರನ್ನು ಸನ್ಮಾನಿಸುತ್ತಾರೆ. ಶ್ರೀ ಶ್ರೀಗಳವರ ವಾಕ್ಯಾರ್ಥಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿಯೇ ದೂರ ದೂರದಿಂದ ಪಂಡಿತರು ಆಗಮಿಸುತ್ತಾರೆ. ಅವರೆಲ್ಲರಿಗೂ ದ್ವಿತೀಯ ದರ್ಜೆಯ ರೈಲು ಪ್ರವಾಸದ ವೆಚ್ಚವಿತ್ತು, ಅವರ ಅಶನ ವಸತಿಗಳಿಗೆ ಏರ್ಪಾಟುಮಾಡಿಸುತ್ತಾರೆ. ಪಂಡಿತರೊಡನೆ ಶಾಸ್ತ್ರವಿಚಾರ ಮಾಡುವ ಶ್ರೀ ಶ್ರೀಗಳವರಿಗೆ ಕಾಲದ ಪರಿವೆಯೇ ಇರುವುದಿಲ್ಲ.

ಸನಾತನ ಧರ್ಮಕ್ಕೆ ಪಾಶ್ಚಾತ್ಯ ನಾಗರಿಕತೆಯ ಪ್ರಭಾವದಿಂದ ಬಂದೊದಗಿದ ಅಪಾಯವನ್ನು ತಡೆಗಟ್ಟಲು ಅನೇಕ ಮಹಾನುಭಾವರು ಪ್ರಯತ್ನಿಸುತ್ತಿದ್ದರಷ್ಟೆ? ಶ್ರೀ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರು ಆದಿಸೆಯಲ್ಲಿ ಒಂದು ಪ್ರಮುಖ ಹೆಜ್ಜೆಯನ್ನಿಟ್ಟು, ಶ್ರೀಶಂಕರಭಗವತ್ಪಾದರ ತತ್ವಗಳ ಪುನಃ ಪ್ರಸಾರದಿಂದ ಮಾತ್ರ ಭರತಖಂಡದ ಧಾರ್ಮಿಕ ಐಕ್ಯತೆಯ ಪುನಃಪ್ರತಿಷ್ಠೆ ಸಾಧ್ಯ; ಎಂಬುದನ್ನು ಮನಗಂಡು ಶ್ರೀ ಶಂಕರರ ಜನ್ಮಕ್ಷೇತ್ರವನ್ನು ಉದ್ಧರಿಸಿ, ಅಲ್ಲಿ ಶ್ರೀ ಶಾರದಾ ಶಂಕರರ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿದರು. ಶ್ರೀ ಶಂಕರರ ಗ್ರಂಥಗಳೆಲ್ಲವನ್ನೂ ಸಮಗ್ರವಾಗಿ ಸಂಪಾದಿಸಿ ಒಂದೇ ಕಡೆ ದೊರಕುವಂತೆ ಪ್ರಕಟಿಸಿದರು. ಶ್ರೀ ವಿದ್ಯಾತೀರ್ಥಸ್ವಾಮಿಗಳವರೂ ಅದೇ ಮೇಲ್ಪಂಕ್ತಿಯನ್ನು ಅನುಸರಿಸಿ ತಾವು ಸಂಚರಿಸಿದ ಸ್ಥಳಗಳಲ್ಲೆಲ್ಲಾ ಅನೇಕ ಶಂಕರಮಠಗಳನ್ನು ಸ್ಥಾಪಿಸಿದ್ದಾರೆ. ಬಹು ಶಂಕರಮಠಗಳಲ್ಲಿ ಜನಕ್ಕೆ ಆದಿಜಗದ್ಗುರುಗಳ ಸ್ಮರಣೆ ನಿತ್ಯವೂ ಉಂಟಾಗುವುದಕ್ಕಾಗಿ ಶ್ರೀ ಶಂಕರ ಶ್ರೀ ಶಾರದಾಮೂರ್ತಿಗಳನ್ನು ಪ್ರತಿಷ್ಠಿಸಿದ್ದಾರೆ. ಇವಿಷ್ಟಲ್ಲದೆ ಶ್ರೀಮದಾಚಾರ್ಯರ ಎಲ್ಲಾ ಕೃತಿಗಳನ್ನೂ ಪುನಃ ಮುದ್ರಣ ಮಾಡಿಸಿ ಅವುಗಳ ಅನುವಾದವು ಆಯಾ ದೇಶಭಾಷೆಗಳಲ್ಲಿ ಆಗುವಂತೆ ಏರ್ಪಡಿಸಿದ್ದಾರೆ. ಈಗಾಗಲೇ ತಮಿಳು ಮತ್ತು ತೆಲುಗಿನಲ್ಲಿ ಆಚಾರ್ಯ ಕೃತಿಗಳೆಲ್ಲವೂ ಅನುವಾದವಾಗಿ ಹೊರಬಂದಿವೆ.

ಈ ಕೆಲಸವನ್ನು ಸುವ್ಯವಸ್ಥಿತವಾಗಿ ನಡೆಸಲು ಶ್ರೀ ಶ್ರೀಗುರುಗಳವರು ಅಖಿಲ ಭಾರತ ಶಂಕರ ಸೇವಾ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಆ ಸಂಸ್ಥೆಯ ಶಾಖಾಸಮಿತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು ತಮಿಳುನಾಡು, ಆಂಧ್ರ, ಕರ್ಣಾಟಕ, ಕೇರಳಗಳಲ್ಲಿ ಕೆಲಸ ಮಾಡುತ್ತಿವೆ. ತಮಿಳು, ತೆಲಗು, ಕನ್ನಡ ಭಾಷೆಗಳಲ್ಲಿ "ಶ್ರೀ ಶಂಕರಕೃಪಾ"ಎಂಬ ಮಾಸಪತ್ರಿಕೆಯು ಆಯಾ ಸಮಿತಿಗಳಿಂದ ಪ್ರತಿತಿಂಗಳೂ ಪ್ರಕಟವಾಗುತ್ತಿವೆ.

ಭಾರತೀಯ ಸಂಸ್ಕೃತಿಗೆ ಸಂಸ್ಕೃತ ಭಾಷೆಯೇ ಅಡಿಗಲ್ಲು. ಭಾರತದ ಆರ್ಷಗ್ರಂಥಗಳೆಲ್ಲವೂ ಇರುವುದು ಸಂಸ್ಕೃತದಲ್ಲಿಯೇ, ವೇದೋಪನಿಷತ್ತುಗಳೂ, ವೇದಾಂತ ಗ್ರಂಥಗಳೂ, ಷಡ್ದರ್ಶನಗಳೂ, ತರ್ಕ ನ್ಯಾಯ, ವ್ಯಾಕರಣಾದಿ ಶಾಸ್ತ್ರಗಳೇ ಮುಂತಾದ ಅನೇಕವಾದ ಜ್ಞಾನಸಂಪತ್ತು ಇರುವುದು ಸಂಸ್ಕೃತ ಭಾಷೆಯಲ್ಲಿ. ಒಂದು ಕಾಲದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ರಾಷ್ಟ್ರಭಾಷೆಯಾಗಿದ್ದ ಸಂಸ್ಕೃತ ಭಾಷೆಯು ಜನಸಾಮಾನ್ಯರ ಭಾಷೆಯೂ ಆಗಿತ್ತು. ಪರಕೀಯರ ಧಾಳಿಯಿಂದ ನಮ್ಮ ಎಷ್ಟೋ ದೇವಾಲಯಗಳು, ಮಠಮಂದಿರಗಳು ನಾಶವಾದಂತೆ ಗ್ರಂಥಾಲಯಗಳೂ, ಪುಸ್ತಕಾಲಯಗಳೂ ನಾಶವಾದವು. ಜನಜನಕ್ಕೆ ಸಂಪರ್ಕ ಉಂಟುಮಾಡಿದ್ದ ಸಂಸ್ಕೃತ ಭಾಷೆಗೆ ಅನ್ಯರ ಆಡಳಿತದಲ್ಲಿ ಪೆಟ್ಟು ಬಿದ್ದಿತು. ಮಾತೃಭಾಷೆಯಾಗಿದ್ದ ಸಂಸ್ಕೃತ ಭಾಷೆ ಕ್ರಮೇಣ ಮೃತ ಭಾಷೆಯ ಸ್ಥಿತಿಗೆ ಇಳಿಯಿತು. ವೈದಿಕ ಸಂಸ್ಕೃತಿಯ ಪುನರುದ್ಧಾರಕ್ಕೂ, ಭಾರತೀಯರಲ್ಲಿ ಒಗ್ಗಟ್ಟು ಮಾಡಿಸುವುದಕ್ಕೂ ಈ ಭಾಷೆಯ ಪುನರುಜ್ಜೀವನ ಅತ್ಯಗತ್ಯ ; ಎಂಬುದನ್ನು ಕಂಡುಕೊಂಡಿದ್ದ ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗವರು ಮೊಟ್ಟಮೊದಲು ಶೃಂಗೇರಿಯಲ್ಲಿಯೂ, ಅನಂತರ ಬೆಂಗಳೂರು ಕಾಲಟಿಗಳಲ್ಲಿಯೂ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿದರು.

ಶ್ರೀ ಅಭಿನವ ವಿದ್ಯಾತೀರ್ಥರೂ ಅದನ್ನು ಮುಂದುವರಿಸಿ ತಾವು ಸಂಚರಿಸಿದ ಅನೇಕ ಕಡೆಗಳಲ್ಲಿ ಸ್ಥಾಪಿತವಾದ ಮಠಗಳಲ್ಲಿ ಸಂಸ್ಕೃತ ಭಾಷೆಯ ಬೋಧನೆ ಪ್ರಸಾರಕ್ಕೆ ಯೋಜನೆ ಮಾಡಿದ್ದಾರೆ. ಸಂಸ್ಕೃತ ಭಾಷೆಯನ್ನು ಮನೆಮನೆಗೇ ಹರಡುವುದಕ್ಕಾಗಿ 'ಶ್ರೀ ಸುರಸರಸ್ವತೀ ಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ನೂರಾರು ಜನ ಸಂಸ್ಕೃತ ಪಂಡಿತರ ನೆರವಿನಿಂದ ಸಂಸ್ಕೃತ ಪರೀಕ್ಷೆಗಳನ್ನು ನಡೆಸುತ್ತಿದಾರೆ. ಶ್ರೀಗುರುಗಳವರಿಂದ ಸ್ಥಾಪಿತವಾದ ಈ ಸಭೆ ಕರ್ನಾಟಕದಲ್ಲಿ ವ್ಯಾಪಕವಾಗಿ ಕೆಲಸಮಾಡುತ್ತಿದೆ. ಎಪ್ಪತ್ತಕ್ಕೂ ಹೆಚ್ಚು ಕೇಂದ್ರಗಳನ್ನು ಹೊಂದಿದ್ದು ಪ್ರತಿವರ್ಷವೂ ಎರಡು ಸಲ ಸರಳ ಸಂಸ್ಕೃತ ಪರೀಕ್ಷೆಗಳನ್ನು ನಡೆಸುತ್ತಿದೆ. ಪ್ರತಿ ಸಲವೂ ನಾಲ್ಕು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಕುಳಿತುಕೊಳ್ಳುತ್ತಾರೆ. ಶ್ರೀ ಶ್ರೀಗಳವರು ಈ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಮುಂದಿನ ತರಗತಿಯ ಪಠ್ಯಪುಸ್ತಕವನ್ನು ಬಹುಮಾನಿಸುತ್ತಾರೆ. ಹೆಚ್ಚಿನ ಅಂಕಗಳನ್ನು ಪಡೆದವರಿಗೆ ಶ್ರೀ ಶಾರದಾ ರಜತ ಪ್ರತಿಮೆಗಳನ್ನು ಅನುಗ್ರಹಿಸುತ್ತಾರೆ. ಈ ಸಂಸ್ಥೆಯನ್ನು ಇನ್ನೂ ಬಲಪಡಿಸಿ ಸಂಸ್ಕೃತಭಾಷೆಯನ್ನು ಜನರು ಆಡುವ ಭಾಷೆಯನ್ನಾಗಿ ಮಾಡುವ ಪ್ರಬಲ ಇಚ್ಛೆ ಶ್ರೀ ಗುರುಗಳವರಿಗೆ ಇದೆ. ಅವರ ಸಂಕಲ್ಪಕ್ಕೆ ಮೂರ್ತಸ್ವರೂಪವನ್ನು ಕೊಡಲು ಪಂಡಿತರನೇಕರು ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದಶಾಸ್ತ್ರಾಭ್ಯಾಸವು ಇತ್ತೀಚೆಗೆ ಖಿಲವಾಗುತ್ತಿದ್ದು ಗುರುಕುಲಗಳಲ್ಲಿ ನಡೆಸುತ್ತಿದ್ದ ಆರ್ಷೇಯ ಪದ್ಧತಿಯ ಅಧ್ಯಯನ ಅಧ್ಯಾಪನಗಳು ಈಗ ನಿಂತು ಹೋಗಿವೆಯಷ್ಟೆ. ಎಲ್ಲೋ ಕೆಲವು ಪಾಠಶಾಲೆಗಳಲ್ಲಿ ಸ್ವಲ್ಪಮಟ್ಟಿಗೆ ಜೀವಂತವಾಗಿರುವ ಈ ಅತ್ಯುತ್ತಮ ಪದ್ಧತಿಯನ್ನು ಪುನರುದ್ಧರಿಸಲು ಸಂಕಲ್ಪತೊಟ್ಟಿರುವ ಶ್ರೀ ಶ್ರೀಗಳವರು ವೇದವಿದ್ಯಾಪರಿಷತ್ತನ್ನು ಸ್ಥಾಪಿಸಿದ್ದಾರೆ. ವೈದಿಕ ಕರ್ಮಗಳನ್ನು ಲೋಪದೋಷಗಳಿಲ್ಲದಂತೆ ನಿರ್ವಂಚನೆಯಿಂದ ನಡೆಸಿಕೊಡುವಂತಹ ನಿಸ್ವಾರ್ಥಿ ಪುರೋಹಿತರ ತಂಡವನ್ನೇ ನಿರ್ಮಿಸುವುದು ಈ ವೇದವಿದ್ಯಾಪರಿಷತ್ತಿನ ಗುರಿಯಾಗಿದೆ. ಶ್ರೀ ಶ್ರೀಗಳವರ ವರ್ಧಂತಿಯ ಸಮಯದಲ್ಲಿ ವೇದಭ್ಯಾಸ ಮಾಡುವ ವಿದ್ಯಾರ್ಥಿಗಳನ್ನು ಕರೆಸಿ, ಪರೀಕ್ಷೆಗಳನ್ನು ಏರ್ಪಡಿಸಿ ಅವರಿಗೆಲ್ಲಾ ಪುರಸ್ಕಾರಗಳನ್ನು ಕೊಡುತ್ತಾರೆ. ವೇದ ವಿದ್ವಾಂಸರನ್ನಂತೂ ಪ್ರತಿ ಸಲವೂ ಗೌರವ ಸಂಭಾವನೆಗಳಿಂದ ಆದರಿಸುತ್ತಾರೆ.

ಈಗಿನ ವೈಜ್ಞಾನಿಕ ವಿಶ್ವದಲ್ಲಿ ವಿಪತ್ಪರಂಪರೆಯ ಸುಳಿಯಲ್ಲಿ, ಭಯಭೀತಿಯ ಹಾವಳಿಯಲ್ಲಿ, ದಿನದಿನಕ್ಕೂ ಹೆಚ್ಚುತ್ತಿರುವ ಅಭದ್ರತೆ ಕಷ್ಟಕಾರ್ಪಣ್ಯಗಳಲ್ಲಿ ಮನುಷ್ಯನಿಗೆ ಭರವಸೆಯನ್ನೀಯುವುದು ಧಾರ್ಮಿಕ ಶ್ರದ್ಧೆನಂಬಿಕೆಗಳು. ಸತ್ಯವಚನ, ನಿರ್ವಂಚನೆ, ನಿಸ್ವಾರ್ಥ ಮುಂತಾದ ಸಾಮಾನ್ಯ ಧರ್ಮಗ್ಳಳನ್ನು ನಂಬಿ, ಧೈರ್ಯವಾಗಿ ಸ್ಥಿರ ಮನಸ್ಸಿನಿಂದ ಅವುಗಳನ್ನು ಪಾಲಿಸಬೇಕಾದುದು ಅಗತ್ಯ. ಈ ಸಾಮಾನ್ಯ ಧರ್ಮದಲ್ಲಿ ನಿರತನಾದವನಿಗೆ ಮೊದಮೊದಲು ವಿಘ್ನವೈಪರಿತ್ಯಗಳು ಎದುರಾಗಬಹುದು. ಆದರೆ ಅವೆಲ್ಲವನ್ನೂ ಸಾಹಸದಿಂದ ಎದುರಿಸಿದಾಗ ತೃಪ್ತಿ, ಶಾಂತಿ, ಸಮಾಧಾನಗಳು ದೊರಕುತ್ತವೆ. ಅನ್ಯರನ್ನು ದ್ವೇಷಿಸದಿರುವುದು, ಸುಳ್ಳು ಹೇಳದಿರುವುದು, ಮೋಸ ಮಾಡದಿರುವುದು, ಇತರರ ವಸ್ತುಗಳನ್ನು ಅಪಹರಿಸದಿರುವುದು, ಜಂಭವನ್ನೂ ಸೋಗನ್ನೂ ಕಳಚಿಹಾಕಿ ಪ್ರಾಮಾಣಿಕತೆಯಿಂದ ಇರುವುದು, ಇವು ಇಂದಿನ ಜನ ಜೀವನಕ್ಕೆ ಅತ್ಯಗತ್ಯವಾದ ನಿಯಮಗಳು. ಇವುಗಳನ್ನು ಜನ ಪಾಲಿಸಿದಲ್ಲಿ ಭರತ ಖಂಡದಲ್ಲಿ ಸ್ವರ್ಣಯುಗ ಪ್ರಾರಂಭವಾಗುತ್ತದೆ. ಶ್ರೀ ಶ್ರೀಗಳವರು ತಾವು ಸಂಚರಿಸಿದೆಡೆಯಲ್ಲೆಲ್ಲಾ ಇದನ್ನು ಪದೇ ಪದೇ ಬೋಧಿಸುತ್ತಾರೆ, ಪುನಃ ಪುನಃ ಉಪದೇಶಿಸುತ್ತಿರುತ್ತಾರೆ.

ಜೀವನಕ್ಕೊಂದು ಶ್ರದ್ಧೆ, ನಂಬಿಕೆ, ಧಾರ್ಮಿಕ ಆಧಾರ ಬೇಕೆಂದು ಹುಡುಕುವವರೆಲ್ಲರಿಗೂ ಶ್ರೀ ಶ್ರೀಗಳವರ ಉಪದೇಶಗಳಲ್ಲಿ ಉಪಯುಕ್ತವಾದ ಆಚರಿಸಬಹುದಾದ ಬೋಧನೆಗಳು ಎಷ್ಟೋ ಇವೆ. ಕತ್ತಲಲ್ಲಿನ ದಾರಿದೀಪಗಳಂತೆ ಮಾರ್ಗತೋರುತ್ತಿವೆ.

ಅಸತ್ತಿನಿಂದ ಸತ್ಯದೆಡೆಗೆ, ತಮಸ್ಸಿನಿಂದ ಜ್ಯೋತಿ ಪಥದೆಡೆಗೆ, ಮೃತ್ಯುವಿನಿಂದ ಅಮೃತದೆಡೆಗೆ ಕರೆದೊಯ್ಯುವ ದಿವ್ಯಹರಿಕಾರರಾಗಿದ್ದಾರೆ ಶ್ರೀ ಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು.

ಓಂ ಶಾಂತಿಃ ಶಾಂತಿಃ ಶಾಂತಿಃ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾಶ್ಚಾತ್ಯ ನಾಗರಿಕತೆಯ ಪ್ರಭಾವ ನಮ್ಮ ಜನಜೀವನದ ಮೇಲೆ ವಿಪರೀತವಾಗಿ ನಮ್ಮ ಸ್ವಾಭಾವಿಕ ಗುಣಗಳಾಗಿದ್ದ ಶಾಂತಿ, ಸಹನೆ, ತೃಪ್ತಿ, ಧರ್ಮ ಶ್ರದ್ಧೆ, ಸತ್ಯನಿಷ್ಠೆ – ಇವೆಲ್ಲಾ ಕಾಣದಾಗುತ್ತಿರುವ ಇಂದು ಸನಾತನ ಧರ್ಮಜಾಗೃತಿಯನ್ನುಂಟುಮಾಡಿದ ಮಹಾಪುರುಷರ ಜೀವನ ಚರಿತ್ರೆ, ಧಾರ್ಮಿಕ, ಆಧ್ಯಾತ್ಮಿಕ ಕೃತಿಗಳನ್ನೂ ಪ್ರಕಟಿಸಿ ತನ್ಮೂಲಕ ಭಾರತೀಯ ಸಂಸ್ಕೃತಿಯ ಪರಿಚಯವನ್ನು ಇಂದಿನ ಜನಾಂಗಕ್ಕೆ ಮಾಡಿಕೊಡುವುದೇ ನಮ್ಮ ಉದ್ದೇಶ.

ಈ ದಿಸೆಯಲ್ಲಿ ನಮ್ಮ ಪ್ರಕಟಣೆಗಳು :

ಮ. ಲಕ್ಷ್ಮೀನರಸಿಂಹ ಶಾಸ್ತ್ರೀಯವರ

1 **ಮಹಾತಪಸ್ವಿ ಶ್ರೀಚಂದ್ರಶೇಖರ ಭಾರತೀ**
ಜೀವನ ಚರಿತ್ರೆ — ರೂ. 3-75

2 **ಸಂಭಾಷಣ ತರಂಗಿಣಿ**
ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರ ಉಪದೇಶಗಳು — ರೂ. 1-00

3 **ಉಪದೇಶ ಮಂಜರಿ**
ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರ ಉಪದೇಶಗಳು — ರೂ. 1-00

4 **ಶ್ರೀ ಸಚ್ಚಿದಾನಂದಭಾರತೀ**
ಜೀವನ ಚಿತ್ರ — ರೂ. 1-00

5 **ಕಂಚಿ ಕಾಮಾಕ್ಷಿ**
ಪ್ರಬಂಧ — ರೂ. 1-00

6 **ರಾಜಯೋಗಿ ಶ್ರೀ ನರಸಿಂಹಭಾರತೀ**
ಜೀವನ ಚರಿತ್ರೆ — ರೂ. 6-00

ಗಣಪತರಾವ್ ಮೊಡಾಸಿಯವರ

7 **ಸ್ವಾಮಿ ಶ್ರೀ ಭಾರತೀಕೃಷ್ಣತೀರ್ಥ**
ಜೀವನ ಚಿತ್ರ — ರೂ. 0-50

ಕಾಶ್ಯಪರವರ

8 **ನರಸಿಂಹ**
ಸಂಶೋಧನಾತ್ಮಕ ಲೇಖನ — ರೂ. 0-60

ತ. ರಾ. ಸುಬ್ಬರಾವ್‌ರವರ

9 **ಕ್ರಿಯಾಶಕ್ತಿ ವಿದ್ಯಾರಣ್ಯ**
ವಿಮರ್ಶೆ — ರೂ 2-00

ವಿವರಗಳಿಗೆ :

ವಿದ್ಯಾಶಂಕರ ಪ್ರಕಾಶನ
30, ದೇವೀರಮ್ಮಣ್ಣೀ ಅಗ್ರಹಾರ
ಮೈಸೂರು – 570004.

Sri Vidyabharathi Book Centre, Sringeri